Regd. No. B. 5375



ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಬೆಳೆಯ ದೃಶ್ಯ.

Printed by Shri S. F. Kattimani, at Manohar Power Printing Press, Hubli. Edited and Published by Sjts. S. P. Patil, B. M. Shintri, S. R. Tatti & Smti. P. A. Bhaskar, at the Kannada Jeevan Shikshan Office, Govt. Training College for Men, Dharwar.

ಜೀವನ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ ಎಸ್. ಬಿ. ಪಾಟೀಲ

ಮಹಾನುಭಾವರಾದ ಬಸವಣ್ಣನವರು

ಪ್ರತಿ [illegible] ಆಣೆ ಏಪ್ರಿಲ್ [illegible] ವಾ. ಚಂದಾ [illegible] ರೂ.

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಜಿ. ಕೆ. ಕೊಪ್ಪಿಕರ, ಬಿ.ಎ.(ಆನರ್ಸ), ಬಿ.ಎಸ್‌ಸಿ., ಎಮ್.ಇಡಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ, ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ, ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗದ (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೩ ಏಪ್ರಿಲ್, ೧೯೫೮ ಸಂಚಿಕೆ ೧೧

— ಪರಿವಿಡಿ —

೧	ಸಂಪಾದಕೀಯ ...	....	೧
೨	ಜೀವನ ಶಿಕ್ಷಣ ಪ್ರಪಂಚ	....	೨
೩	ಜೀವನ ಶಿಕ್ಷಣವೂ ಪ್ರದರ್ಶನಗಳೂ	ಶ್ರೀಮತಿ ರುಕ್ಮಿಣಮ್ಮಾ	೪
೪	ನಮ್ಮ ಮುಂದಿನ ಶಿಕ್ಷಣದ ಧೋರಣೆ ಹೇಗಿರಬೇಕು ಎಂಬ ಬಗೆಗೆ	ಅನುವಾದಕರು : ಶ್ರೀ ತಟ್ಟಿ ಶಾಮರಾಯರು	೫
೫	ಭಾರತದಲ್ಲಿ ಎಲ್ಲಕ್ಕೂ ದೊಡ್ಡದಾದ ಶರಾವತಿ ಜಲವಿದ್ಯುತ್ ಯೋಜನೆ	ಶ್ರೀ ಶಿಂತ್ರಿ ಬಸಪ್ಪನವರು	೧೧
೬	ಮೂಲ ಶಿಕ್ಷಣದ ಬಗೆಗೆ ಗಾಂಧೀಜಿಯವರ ವಿಚಾರಗಳು	ಶ್ರೀ ಮ. ಗು. ಹಂದ್ರಾಳ	೧೩
೭	ಜೀವನ ಶಿಕ್ಷಣ (ಒಂದು ಚರ್ಚೆ)	ಪ್ರೊ. ರೋಹಿಡೇಕರ ಶಾಮರಾಯರು	೧೭
೮	ರಾಷ್ಟ್ರೀಯ ಜೀವನ ಶಿಕ್ಷಣ	ಶ್ರೀ ರಾ. ವಿ. ದೇಸಾಯಿ	೨೧
೯	ಪತ್ರಗಳು	....	೨೬

— ಸಂಪಾದಕೀಯ —

ಮಹಾನುಭಾವಿ ಬಸವಣ್ಣನವರ ಜಯಂತಿ

೮೦೦ ವರುಷಗಳ ಹಿಂದೆ ಆಗಿಹೋದ ಕಲ್ಯಾಣದ ಕಲಚೂರ್ಯ ರಾಜರ ಮಹಾಮಂತ್ರಿ ದಂಡಾಧೀಶ ಬಸವಣ್ಣನವರ ಜಯಂತ್ಯುತ್ಸವಗಳು ಶತಮಾನಗಳಿಂದ ನಡೆಯುತ್ತ ಬಂದಿವೆ. ಇಷ್ಟು ದೀರ್ಘ ಕಾಲದ ನಂತರವೂ ಅವರು ನಮ್ಮ ಹೃದಯ ಮಂದಿರದಲ್ಲಿ ಉಳಿದಿರಲು ಅವರಿಂದಾದ ಮಹಾಕ್ರಾಂತಿಯೇ ಕಾರಣವೆನ್ನಬೇಕು. ಮಾನವನ ಇತಿಹಾಸದಲ್ಲಿ ಆಗಾಗ್ಗೆ ಕ್ರಾಂತಿಗಳು ತಲೆದೋರಿ ಸಮಾಜಕ್ಕೆ ನವಸ್ಫೂರ್ತಿಯನ್ನು ಕೊಟ್ಟಿವೆ. ಹನ್ನೆರಡನೆಯ ಶತಮಾನದಲ್ಲಿ ಜಗದಣ್ಣ ಬಸವಣ್ಣನು "ದೇವಲೋಕ ಮರ್ತ್ಯಲೋಕವೆಂಬಿವು ಬೇರಿಲ್ಲ, ಕಾಣಿಭೋ ! ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ ! ಆಚಾರವೇ ಸ್ವರ್ಗ, ಅನಾಚಾರವೇ ನರಕ, ಕೂಡಲ ಸಂಗಮದೇವಾ, ನೀವೇ ಪ್ರಮಾಣು ! ಎಂದು ಸಾರಿ ಮಹಾಕ್ರಾಂತಿಯ ಕಹಳೆಯನ್ನು ಊದಿದರು. ಈ ಕೂಗಿನ ಪರಿಣಾಮವಾಗಿ ಜನತೆಯು ಅಜ್ಞಾನದ ಗಾಢ ನಿದ್ರೆಯಿಂದ ಎಚ್ಚರಗೊಂಡಿತು. ಅವರಿಗೆ ಮಾನವತ್ವದ ಘನತೆ ಹೊಳೆಯಿತು. ಅವರಲ್ಲಿ ಸುಪ್ತವಾಗಿದ್ದ ಪ್ರಜಾಶಕ್ತಿಯು ಪ್ರಬಲಗೊಂಡಿತು. ಸತ್ಯ–ಶುದ್ಧ ಕಾಯಕದಲ್ಲಿ ನಿರತರಾದವರಿಗೆ ಲಕ್ಷ್ಮಿ ಒಲಿದಳು. ಕಾಯಕದಲ್ಲಿ ಕೈಲಾಸವನ್ನೇ ಕಂಡರು. ಲಿಂಗ, ವರ್ಣ, ಜಾತಿ ಮೊದಲಾದ ಭೇದಗಳನ್ನು ಜನತೆಯು ಕಿತ್ತೊಗೆಯಿತು. ಸಮಾಜವು ಚೇತರಿಸಿ ದಿವ್ಯ ಶಕ್ತಿಯನ್ನು ಪಡೆಯಿತು. ಭೂಲೋಕದಿಂದ ಸ್ವರ್ಗಲೋಕಕ್ಕೆ ಏರುವದರ ಬದಲು, ಸ್ವರ್ಗಲೋಕವೇ ಭೂಲೋಕಕ್ಕೆ ಇಳಿದಂತಾಯಿತು. ಉಣ್ಣಲಿಕ್ಕೆ ಬೋನ, ಇರಲಿಕ್ಕೆ ಶರಣರ ಸಹವಾಸ, ಮಾಡಲಿಕ್ಕೆ ಕಾಯಕ, ಹತ್ತಿಹೋಗಲಿಕ್ಕೆ ಷಟ್‌ಸ್ಥಲ, ರಕ್ಷಣೆಗಾಗಿ ಅಷ್ಟಾವರಣ, ಆಚರಿಸಲು ಪಂಚಾಚಾರ ಇವುಗಳನ್ನೆಲ್ಲ ಕಲ್ಪಿಸಿಕೊಟ್ಟ ಬಸವಣ್ಣನವರಿಗೆ ಆಗಿನ ಜನತೆಯ ಸುಖ–ದುಃಖಗಳು ಮನದಟ್ಟಾಗಿರಬೇಕು. ಅಣ್ಣನವರು ಉಚ್ಚ ಕುಲದಲ್ಲಿ ಹುಟ್ಟಿ, ಕೂಡಲ ಸಂಗಮ ಕ್ಷೇತ್ರದಲ್ಲಿ ಬೆಳೆದು ಜ್ಞಾನಗಳಿಸಿದರು. ಕಲ್ಯಾಣದ ಬಿಜ್ಜಳನಲ್ಲಿ ಮಹಾಮಂತ್ರಿಯ ಕಾಯಕವನ್ನು ಕೈಕೊಂಡು ಮಾನವ ಕುಲವನ್ನುದ್ಧರಿಸಿ ಪ್ರಪಂಚ ಕಲ್ಯಾಣಕಾರಿಯಾದರು. ಇಂಥ ಬಸವಣ್ಣವರು ಕೇವಲ ವೀರಶೈವರಿಗೆ ಮಾತ್ರವಲ್ಲ, ಕರ್ನಾಟಕಕ್ಕೂ ಅಲ್ಲ, ಇಡೀ ಭರತಖಂಡಕ್ಕೂ ಅಲ್ಲ, ವಿಶಾಲವಾದ ವಿಶ್ವಕ್ಕೆ ಸಂಬಂಧಿಸಿದ ವಿಶ್ವಪ್ರೇಮಿಗರು. ಸಾಹಿತ್ಯ ಕ್ಷೇತ್ರದಲ್ಲಿಯೂ, ರಾಜಕಾರಣದಲ್ಲಿಯೂ, ಸಮಾಜೋದ್ಧಾರದ ಕಾರ್ಯಗಳಲ್ಲಿಯೂ ಎದುರಾಗಿ ನಿಲ್ಲುವ ಅನೇಕ ಸಮಸ್ಯೆಗಳಿಗೆ ಬಸವಣ್ಣನವರ ಮಾರ್ಗವು ದಿವ್ಯಾಪಥವಾಗಿದೆಯೆಂಬದನ್ನು ಈಗಿನವರೂ ಮುಂದಿನವರೂ ತಿಳಿಯಬೇಕು. ಅವರು ಉಸುರಿದ ತತ್ವಗಳನ್ನು ನಾವು ಚನ್ನಾಗಿ ತಿಳಿದು ಅವುಗಳನ್ನು ಆಚರಣೆಯಲ್ಲಿ ತಂದರೆ ಮಾತ್ರ ಅದುವೇ ಅಣ್ಣನವರ ಜಯಂತ್ಯುತ್ಸವಕ್ಕೆ ನಮ್ಮ ನಿಜವಾದ ಭಕ್ತಿಯ ಕಾಣಿಕೆಯಾಗುವದು.

ಸಾರ್ವತ್ರಿಕ ಶಿಕ್ಷಣ (ಕೇಂಪ್ರ ಸ. ವಿಚಾರಗಳು)

೧೪ ವಯಸ್ಸಿನೊಳಗಿನ ಎಲ್ಲ ಮಕ್ಕಳಿಗೆ ಸಾರ್ವತ್ರಿಕ ಶಿಕ್ಷಣದ ವ್ಯವಸ್ಥೆಯಾಗಲು ಇನ್ನೆಷ್ಟು ಕಾಲ ಬೇಕೋ ಏನೋ ! ಸದ್ಯದ ಮಟ್ಟಿಗೆ ೧೧ ವಯಸ್ಸಿನೊಳಗಿನವರಿಗೆಲ್ಲ ಅದನ್ನೊದಗಿಸುವದೇ ಮುಖ್ಯ ಗುರಿಯಾಗಿದ್ದು ಅದೂ ಸಹ ಮೂರನೆಯ ಪಂಚವಾರ್ಷಿಕ ಯೋಜನೆ ಪೂರ್ತಿಯಾಗುವ ವರೆಗೆ ಸಾಧಿಸಲಿಕ್ಕಿಲ್ಲ. ರಾಷ್ಟ್ರದ ಅನೇಕ ಭಾಗಗಳಲ್ಲಿಯ ಹಿಂದುಳಿದ ಕ್ಷೇತ್ರದಲ್ಲಿ ಈ ಗುರಿಯನ್ನು ಸಾಧಿಸುವದು ಬಹು ಮಟ್ಟಿಗೆ ಕಠಿಣವಾಗಿದೆ. ಅಂಥ ಮಕ್ಕಳಿಗೆ ಆಕರ್ಷಣವಾಗುವಂತೆ ಅವರಿಗೆ ಮಧ್ಯಾಹ್ನದ ಊಟವನ್ನು ಕೊಡುವ ಸೂಚನೆ ಮಾಡಿದ್ದಾರೆ. ಹಳ್ಳಿಗಳಲ್ಲಿ ಹುಡಿಗೆಯರ ಶಿಕ್ಷಣ ಪ್ರಸಾರಕ್ಕೆ ಅನುಕೂಲವಾದ ವಾತಾವರಣವಿರುವದಿಲ್ಲ. ಆದುದರಿಂದ ಶಾಲೆಯಲ್ಲಿರುವ ಮಕ್ಕಳಲ್ಲಿ ಹುಡಿಗೆಯರ ಸಂಖ್ಯೆ ೧೦೦ಕ್ಕೆ ೨೦ರಷ್ಟು ಮಾತ್ರ; ಇಜಿಪ್ತ ಮುಂತಾದ ದೇಶಗಳೊಂದಿಗೆ ಹೋಲಿಸಿ ನೋಡಿದರೂ ಈ ಪ್ರಮಾಣ ಕಡಿಮೆಯಾಗುತ್ತದೆ. ಲೋಕ ಸಭೆಯಲ್ಲಿ ಮಾತನಾಡುತ್ತ ಶಿಕ್ಷಣ ಮಂತ್ರಿಗಳಾದ ಡಾ|| ಶ್ರೀಮಾಳಿಯವರು ಮಕ್ಕಳ ಮನೆಯಿಂದ ಒಂದೆರಡು ಮೈಲುಗಳಲ್ಲಿ ಪ್ರಾಥಮಿಕ ಶಾಲೆಗಳನ್ನೂ, ಐದು ಮೈಲುಗಳೊಳಗೆ ಮಾಧ್ಯಮಿಕ ಶಾಲೆಗಳನ್ನೂ ತೆರೆಯುವದು ಸರಕಾರದ ಅಪೇಕ್ಷೆಯಾಗಿದೆಯೆಂದು ತಿಳಿಸಿದರು. ಕೇಂದ್ರ ಸರಕಾರವು ಶೈಕ್ಷಣಿಕ ಧನ ಸಹಾಯವನ್ನು ಕೊಡುವ ವಿಚಾರದಲ್ಲಿದೆಯೆಂದು ಹೇಳಿದುದನ್ನು ಶಿಕ್ಷಕರೂ ಶಿಕ್ಷಣ ಸಂಸ್ಥೆಗಳೂ ಸ್ವಾಗತಿಸುವದರಲ್ಲಿ ಸಂದೇಹವಿಲ್ಲ.

ಜೀವನ ಶಿಕ್ಷಣ ಪ್ರಪಂಚ

ಕೋಟಿಕಲ್ಲ: ದಿ. ೧೦—೩—೧೯೫೮ ರಂದು ಇಲ್ಲಿಯ ಗಂ. ಮ. ಶಾಲೆಯಲ್ಲಿ ಮೈಸೂರ ರಾಜ್ಯದ ಯೋಜನೆಯ ಪ್ರಕಾರ ಬಡ ಹಾಗೂ ಹಿಂದುಳಿದ ವಿದ್ಯಾರ್ಥಿಗಳಿಗೆ ಅಲ್ಪೋಪಹಾರವನ್ನು ಹಂಚುವ ಕಾರ್ಯಕ್ರಮವು ಶ್ರೀ ಎಸ್. ಆರ್. ಶೆಟ್ಟರ, ಮು. ಹಾ. ಗುಳೇದಗುಡ್ಡ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಅಧ್ಯಕ್ಷರು ಈ ಯೋಜನೆಯ ಬಗೆಗೆ ಬೋಧನ ಪರವಾದ ನಾಲ್ಕು ಮಾತುಗಳನ್ನು ಹೇಳಿದರು. ಸಭೆಗೆ ಊರ ಪ್ರಮುಖರು ಹಾಗೂ ಶ್ರೀಮಂತ ಪಾಡಪ್ಪ ಶಿವನಪ್ಪ ದೇಸಾಯರು, ವಡವಡಿಗಿ ಇವರು ಉಪಸ್ಥಿತರಿದ್ದರು.

ಆರೇಕುರಹಟ್ಟಿ: ಇಲ್ಲಿಯ ಜೀ. ಶಿ. ಸಾಲೆಯ ಉಪಯೋಗಕ್ಕೆ ಶ್ರೀ ಗು. ಮುಳಗುಂಡಮಠ ಇವರು ಒಂದು ನೀರಿನ ಹಿತ್ತಾಳಿಯ ಟಾಕಿ ಹಾಗೂ ಸರಸ್ವತಿ ವಾಚನಾಲಯಕ್ಕೆ ಶ್ರೀ ಹ. ರಾಯರಡ್ಡಿ ಇವರು ಒಂದು ಕಪಾಟನ್ನು ಕೊಡಿಸಿದರು. ಸದರ ಸಾಮಾನುಗಳ ಉದ್ಘಾಟನೆಯು ಶ್ರೀ ಲಿಂ. ರಾ. ಲಕ್ಕಣ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಸುಳ್ಳ: ದಿ. ೩೧—೩—೧೯೫೮ ರಂದು ಈ ಗ್ರಾಮದ ಕೆಲವು ಮಹನೀಯರು ಇಲ್ಲಿಯ ಕ. ಗಂ. ಮ. ಜೀ.ಶಿ. ಶಾಲೆಗೆ ಉದಾರ ದೇಣಿಗೆಯನ್ನು ಕೊಟ್ಟಿರುವರು. ಮಹನೀಯರ ಹೆಸರು-ಅವರು ಕೊಟ್ಟ ಸಾಮಾನುಗಳು:

೧) ಶ್ರೀ ಸಿ. ಭಿ. ತುಳಜಮ್ಮನವರ ಹಿತ್ತಾಳಿ ಟಾಕಿ ಮತ್ತು ವಾಟಿ, ೨) ಗ್ರಾಮ ಪಂಚಾಯತಿ ಕಮೀಟಿ ಹಾಗು ಊರ ಸಭ್ಯ ಗೃಹಸ್ಥರು ಹಾರ್ಮೋನಿಯಮ್, ೩) ಶ್ರೀ ಬ. ಸ. ಕಮ್ಮಾರ ತಬಲಾ, ಡಗ್ಗಾ ಮತ್ತು ತಾಮ್ರದ ಕೊಡಪಾನ, ೪) ಶ್ರೀ ವೆ. ದೊ. ಮತ್ತೀಹಳ್ಳಿ ಕ್ಯಾಮರಾ, ೫) ಶ್ರೀ ಮು. ಕ. ಆಯಟ್ಟಿ ಕನ್ನಡಿ, ೬) ಶಿಕ್ಷಕ ವೃಂದವು ಭೂಮಿತಿಯ ದೊಡ್ಡ ಉಪಕರಣಗಳ ಪೆಟ್ಟಿಗೆ, ೭) ಶ್ರೀ ಮ. ಗೋ. ನರೇಂದ್ರ ತಂಬಿಗೆಗಳು ೨, ೮) ಶ್ರೀ ಕ. ಅ. ತಡಹಾಳ ಸ್ಟೀಲಿನ ವಾಟಿಗಳು ೩).

ಸದರ ಎಲ್ಲ ಸಾಮಾನುಗಳ ಉದ್ಘಾಟನೆಯು ಶ್ರೀ ಜಿ. ಕೆ. ಕೊಪ್ಪಿಕರ, ಧಾರವಾಡ ಜಿಲ್ಲಾ ಶಿಕ್ಷಣಾಧಿಕಾರಿಗಳು ಇವರ ಅಮೃತ ಹಸ್ತದಿಂದ ಜರುಗಿತು.

ಧಾರವಾಡ: ಇಲ್ಲಿಯ ಮುನಸಿಪಾಲಟಿಯ ೨ ನೇ ನಂ. ಕಂ. ಗಂ. ಮ. ಶಾಲೆಯಲ್ಲಿ ದಿ. ೧೫—೨—೫೮ ರಂದು "ಪಾಲಕರ ದಿನಾಚರಣೆ"ಯನ್ನು ಧಾರವಾಡದ ಶ್ರೀ ಡಾ. ನಾ. ಭಿ. ಕಬ್ಬೂರ ಇವರ ಅಧ್ಯಕ್ಷತೆಯಲ್ಲಿ ಜರುಗಿಸಲಾಯಿತು. ಇದರ ಅಂಗವಾಗಿ ವಸ್ತುಕಲಾ ಪ್ರದರ್ಶನದ ಉದ್ಘಾಟನೆಯು ಧಾರವಾಡದ ಮ್ಯುನಸಿಪಾಲಿಟಿ ಅ್ಯಡ್ಮಿನಿಸ್ಟ್ರೇಟರರಾದ, ಮಾನ್ಯ ಜಿ. ಡಿ. ಚನ್ನಳ್ಳಿ ಇವರ ಅಮೃತ ಹಸ್ತದಿಂದ ಜರುಗಿತು.

ಸಿದ್ದಾಪೂರ: ಇಲ್ಲಿಯ ಹರಿಜನರ ಕೇರಿಯಲ್ಲಿ ಸ. ಶಿ. ಕಾರ್ಯಕರ್ತ ಶ್ರೀ ವೀ. ಗ. ಜಾಡಗೌಡರ ಇವರ ನೇತೃತ್ವದಲ್ಲಿ ನಡೆಯುತ್ತಿರುವ ಸಮಾಜ ಶಿಕ್ಷಣ ವರ್ಗಕ್ಕೆ ಮೆ|| ಎಸ್.ವ್ಹಿ.ಜೇವೂರ, ಡಿ.ಡಿ.ಪಿ.ಆಯ್. ಧಾರವಾಡ ವಿಭಾಗ ಇವರು ಭೆಟ್ಟಿಕೊಟ್ಟು ಹಾಜರಿದ್ದ ೩೦—೩೫ ಜನ ಪ್ರೌಢರನ್ನು ಕಂಡು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರಿಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ
ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು
ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧—೧೨—೦** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.
ಇದು ಕನ್ನಡದಲ್ಲಿಯೂ ಸಿಗುತ್ತದೆ,

ಜಿ. ವಾಯ್. ರಾಣೆ
ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.

ಗುಂಪ್ ಶಿಕ್ಷಕ-ಶಿಕ್ಷಕಿಯರ ಶೈಕ್ಷಣಿಕ ಸಮ್ಮೇಲನವು

	ಶಾಲೆಯ ಹೆಸರು	ಸಮಾರಂಭದ ದಿನಾಂಕ	ಯಾರ ಅಧ್ಯಕ್ಷತೆಯಲ್ಲಿ ಜರುಗಿತು.
೧.	ಕಬನೂರ	೧೫-೩-೫೮	ಮೆ|| ಎಸ್. ಸಿ. ನೆರ್ಲಿ, ತಹಸಿಲದಾರ, ಶಿಗ್ಗಾಂವ
೨.	ಕುಲಗೋಡ	೨೯-೩-೫೮	ಶ್ರೀ ಶಿ. ಚ. ಹಿರೇಮಠ, ಪ್ರ. ಗು.
೩.	ಹಿರೆಉಳ್ಳಿಗೇರಿ	ಮಾರ್ಚ,೫೮	ಶ್ರೀ ಸಂಗೊಳ್ಳಿ, ಸ್ಕೂ. ಕ. ಜೀ.
೪.	ತಲ್ಲೂರ	೧೬-೨-೫೮	ಶ್ರೀ ಲಿಂಗೋಜಿ, ಎ. ಡಿ. ಇ. ಆಯ್.
೫.	ಬನ್ನಿಕೊಪ್ಪ	೧೩-೩-೫೮	ಶ್ರೀ ಗಲಗಲಿ, ಎ. ಡಿ. ಇ. ಆಯ್.
೬.	ಹತ್ತಿಮತ್ತೂರ	೯-೩-೫೮	ಶ್ರೀ ಎಫ್.ಸಿ.ಉಣಕಲ್ಲ, ಕ್ರಾಪ್ಟ್ ಆರ್ಗನಾಯಿರ್ಝರ, ಧಾರವಾಡ ವಿಭಾಗ, ಧಾರವಾಡ.
೭.	ತೇವರ ಮೆಳ್ಳಿಹಳ್ಳಿ	೨೭-೩-೫೮	ಶ್ರೀ ಆರ್. ಎಚ್. ಕುಲಕರ್ಣಿ, ಎ.ಡಿ.ಇ.ಆಯ್.
೮.	ಹುಣಶೀಕಟ್ಟಿ	೧೨-೩-೫೮	ಶ್ರೀ ಗದ್ದಿಹಳ್ಳಿ ಶೆಟ್ಟರು, ಡಿ. ಎಲ್. ಬಿ. ಮೆಂಬರ
೯.	ಮಮದಾಪೂರ	೭-೪-೫೮	ಶ್ರೀ ಆರ್. ಆರ್. ಬೆಟಗೇರಿ, ಹೆ. ಮಾ.

ಫೆಬ್ರುವರಿ, ೧೯೫೮ನೆಯ ಇಸ್ವಿಯಲ್ಲಿ ಜರುಗಿದ ಹಾಯಸ್ಕೂಲ ಹಾಗೂ ಮಿಡಲ್ ಸ್ಕೂಲ ಸ್ಕಾಲರಶಿಪ್ ಪರೀಕ್ಷೆಯ ಪರಿಣಾಮ

ಮಿಡಲ್‌ಸ್ಕೂಲ ಸ್ಕಾಲರಶಿಪ್ ಪರೀಕ್ಷೆ

	ಶಾಲೆಯ ಹೆಸರು	ಒಟ್ಟು ಸಂಖ್ಯೆ	ಪಾಸಾದ ಸಂಖ್ಯೆ	ಕಲಿಸಿದ ಗುರುಗಳ ಹೆಸರು
೧.	ಜೀ. ಶಿ. ಕ. ಗಂ. ಶಾ. ಸಂ ೪ ಬಾಗಲಕೋಟೆ	೩	೩	ಶ್ರೀ ಯ. ರಾ. ನಾರಾಯಣಿ
	ಇವರಲ್ಲಿ ಕುಮಾರ ಪ್ರಕಾಶ ಪುರಾಣಿಕ ಜಿಲ್ಹೆಗೆ ೧ ನೇ ನಂಬರು.			
೨.	ಜೀ. ಶಿ. ಗಂ. ಶಾ. ನೇಸರಗಿ	ಕುಮಾರ ಶಿ. ವಿ. ವಾಲಿ		ಶ್ರೀ ಆರ್. ಎಸ್. ಕಿಚಡಿ
೨.	,, ಹೊಳೆಆಲೂರ	ಕುಮಾರ ಸೊ. ಗೂ. ಜಾಲೀಹಾಳ		ಶ್ರೀ ರು. ಶಿ. ಹಿರೇಮಠ
೩.	,, ಹುನಗುಂದ	೪	೪	—
೪.	,, ಶಿರಕೋಳ	ಕುಮಾರ ಕಲ್ಲಯ್ಯ ವೀರಯ್ಯ ಕುಲಕರ್ಣಿ		ಶ್ರೀ ಕೆ. ಪಿ. ಹೂಲಿ
೪.	,, ಹೆ.ಮ.ಶಾ. ಹುನುಗುಂದ	ಕುಮಾರಿ ಲೀಲಾವತಿ ಕಟ್ಟಿ		—

ಹಾಯಸ್ಕೂಲ ಸ್ಕಾಲರ್‌ಶಿಪ್ ಪರೀಕ್ಷೆ

	ಶಾಲೆಯ ಹೆಸರು	ಒಟ್ಟು ಸಂಖ್ಯೆ	ಪಾಸಾದ ಸಂಖ್ಯೆ	ಕಲಿಸಿದ ಗುರುಗಳ ಹೆಸರು
೫.	,, ಗಂ.ಮ.ಶಾ.ಹುನುಗುಂದ	೩	೩	—
೬.	,, ತೇರಗಾಂವ	ಕುಮಾರ ಗೋ.ನಾ.ಹೆಗಡೆಕಟ್ಟಿ		—
	ಈತನು ಜಿಲ್ಹೆಗೆ ೧ನೇ ನಂಬರ ಬಂದಿದ್ದಾನೆ			—

ಜೀವನ ಶಿಕ್ಷಣ ಪ್ರಪಂಚ

ಕೋಟಿಕಲ್ಲ: ದಿ. ೧೦—೩—೧೯೫೮ ರಂದು ಇಲ್ಲಿಯ ಗಂ. ಮ. ಶಾಲೆಯಲ್ಲಿ ಮೈಸೂರ ರಾಜ್ಯದ ಯೋಜನೆಯ ಪ್ರಕಾರ ಬಡ ಹಾಗೂ ಹಿಂದುಳಿದ ವಿದ್ಯಾರ್ಥಿಗಳಿಗೆ ಅಲ್ಪೋಪಹಾರವನ್ನು ಹಂಚುವ ಕಾರ್ಯಕ್ರಮವು ಶ್ರೀ ಎಸ್. ಆರ್. ಶೆಟ್ಟರ, ಮು. ಹಾ. ಗುಳೇದಗುಡ್ಡ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಅಧ್ಯಕ್ಷರು ಈ ಯೋಜನೆಯ ಬಗೆಗೆ ಬೋಧನ ಪರವಾದ ನಾಲ್ಕು ಮಾತುಗಳನ್ನು ಹೇಳಿದರು. ಸಭೆಗೆ ಊರ ಪ್ರಮುಖರು ಹಾಗೂ ಶ್ರೀಮಂತ ಪಾದಪ್ಪ ಶಿವನಪ್ಪ ದೇಸಾಯರು, ವಡವಡಿಗಿ ಇವರು ಉಪಸ್ಥಿತರಿದ್ದರು.

ಆರೇಕುರಹಟ್ಟಿ: ಇಲ್ಲಿಯ ಜೀ. ಶಿ. ಸಾಲೆಯ ಉಪಯೋಗಕ್ಕೆ ಶ್ರೀ ಗು. ಮುಳಗುಂದಮಠ ಇವರು ಒಂದು ನೀರಿನ ಹಿತ್ತಾಳಿಯ ಟಾಕಿ ಹಾಗೂ ಸರಸ್ವತಿ ವಾಚನಾಲಯಕ್ಕೆ ಶ್ರೀ ಹ. ರಾಯರಡ್ಡಿ ಇವರು ಒಂದು ಕಪಾಟನ್ನು ಕೊಡಿಸಿದರು. ಸದರ ಸಾಮಾನುಗಳ ಉದ್ಘಾಟನೆಯು ಶ್ರೀ ಲಿಂ. ರಾ. ಲಕ್ಕಣ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಸುಳ್ಳ: ದಿ. ೩೧—೩—೧೯೫೮ ರಂದು ಈ ಗ್ರಾಮದ ಕೆಲವು ಮಹನೀಯರು ಇಲ್ಲಿಯ ಕ. ಗಂ. ಮ. ಜೀ.ಶಿ. ಶಾಲೆಗೆ ಉದಾರ ದೇಣಿಗೆಯನ್ನು ಕೊಟ್ಟಿರುವರು.

ಮಹನೀಯರ ಹೆಸರು-ಅವರು ಕೊಟ್ಟ ಸಾಮಾನುಗಳು:

೧) ಶ್ರೀ ಸಿ. ಭಿ. ತುಳಜಮ್ಮನವರ ಹಿತ್ತಾಳಿ ಟಾಕಿ ಮತ್ತು ವಾಟಿ, ೨) ಗ್ರಾಮ ಪಂಚಾಯತಿ ಕಮೀಟಿ ಹಾಗು ಊರ ಸಭ್ಯ ಗೃಹಸ್ಥರು ಹಾರ್ಮೋನಿಯಮ್, ೩) ಶ್ರೀ ಬ. ಸ. ಕಮ್ಮಾರ ತಬಲಾ, ಡಗ್ಗಾ ಮತ್ತು ತಾಮ್ರದ ಕೊಡಪಾನ, ೪) ಶ್ರೀ ವೆ. ದೊ. ಮತ್ತೀಹಳ್ಳಿ ಕ್ಯಾಮರಾ, ೫) ಶ್ರೀ ಮು. ಕ. ಆಯಟ್ಟಿ ಕನ್ನಡಿ, ೬) ಶಿಕ್ಷಕ ವೃಂದವು ಭೂಮಿತಿಯ ದೊಡ್ಡ ಉಪಕರಣಗಳ ಪೆಟ್ಟಿಗೆ, ೭) ಶ್ರೀ ಮ. ಗೋ. ನರೇಂದ್ರ ತಂಬಿಗೆಗಳು ೨, ೮) ಶ್ರೀ ಕ. ಅ. ತಡಹಾಳ ಸ್ಟೀಲಿನ ವಾಟಿಗಳು ೩).

ಸದರ ಎಲ್ಲ ಸಾಮಾನುಗಳ ಉದ್ಘಾಟನೆಯು ಶ್ರೀ ಜಿ. ಕೆ. ಕೊಪ್ಪಿಕರ, ಧಾರವಾಡ ಜಿಲ್ಹಾ ಶಿಕ್ಷಣಾಧಿಕಾರಿಗಳು ಇವರ ಅಮೃತ ಹಸ್ತದಿಂದ ಜರುಗಿತು.

ಧಾರವಾಡ: ಇಲ್ಲಿಯ ಮುನಸಿಪಾಲಟಿಯ ೨ ನೇ ನಂ. ಕಂ. ಗಂ. ಮ. ಶಾಲೆಯಲ್ಲಿ ದಿ. ೧೫—೨—೫೮ ರಂದು "ಪಾಲಕರ ದಿನಾಚರಣೆ"ಯನ್ನು ಧಾರವಾಡದ ಶ್ರೀ ಡಾ. ನಾ. ಭಿ. ಕಬ್ಬೂರ ಇವರ ಅಧ್ಯಕ್ಷತೆಯಲ್ಲಿ ಜರುಗಿಸಲಾಯಿತು. ಇದರ ಅಂಗವಾಗಿ ವಸ್ತುಕಲಾ ಪ್ರದರ್ಶನದ ಉದ್ಘಾಟನೆಯು ಧಾರವಾಡದ ಮ್ಯುನಸಿಪಾಲಿಟಿ ಆ್ಯಡ್ಮಿನಿಸ್ಟ್ರೇಟರರಾದ, ಮಾನ್ಯ ಜಿ. ಡಿ. ಚನ್ನಳ್ಳಿ ಇವರ ಅಮೃತ ಹಸ್ತದಿಂದ ಜರುಗಿತು.

ಸಿದ್ದಾಪೂರ: ಇಲ್ಲಿಯ ಹರಿಜನರ ಕೇರಿಯಲ್ಲಿ ಸ. ಶಿ. ಕಾರ್ಯಕರ್ತ ಶ್ರೀ ವೀ. ಗ. ಜಾಡಗೌಡರ ಇವರ ನೇತೃತ್ವದಲ್ಲಿ ನಡೆಯುತ್ತಿರುವ ಸಮಾಜ ಶಿಕ್ಷಣ ವರ್ಗಕ್ಕೆ ಮೇ|| ಎಸ್.ವ್ಹಿ.ಜೇವೂರ, ಡಿ.ಡಿ.ಪಿ.ಆಯ್. ಧಾರವಾಡ ವಿಭಾಗ ಇವರು ಭೆಟ್ಟಿಕೊಟ್ಟು ಹಾಜರಿದ್ದ ೩೦—೩೫ ಜನ ಪ್ರೌಢರನ್ನು ಕಂಡು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರಿಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು
ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧—೧೨—೦** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.
ಇದು ಕನ್ನಡದಲ್ಲಿಯೂ ಸಿಗುತ್ತದೆ,

ಜಿ. ವಾಯ್. ರಾಣೆ
ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.

ಗುಂಪ್ ಶಿಕ್ಷಕ-ಶಿಕ್ಷಕಿಯರ ಶೈಕ್ಷಣಿಕ ಸಮ್ಮೇಲನವು

	ಶಾಲೆಯ ಹೆಸರು	ಸಮಾರಂಭದ ದಿನಾಂಕ	ಯಾರ ಅಧ್ಯಕ್ಷತೆಯಲ್ಲಿ ಜರುಗಿತು.
೧.	ಕಬನೂರ	೧೫-೩-೫೮	ಮೆ|| ಎಸ್. ಸಿ. ನೆರ್ಲಿ, ತಹಸಿಲದಾರ, ಶಿಗ್ಗಾಂವ
೨.	ಕುಲಗೋಡ	೨೯-೩-೫೮	ಶ್ರೀ ಶಿ. ಚ. ಹಿರೇಮಠ, ಪ್ರ. ಗು.
೩.	ಹಿರೆಉಳ್ಳಿಗೇರಿ	ಮಾರ್ಚ,೫೮	ಶ್ರೀ ಸಂಗೊಳ್ಳಿ, ಸ್ಕೂ. ಕ. ಚೇ.
೪.	ತಲ್ಲೂರ	೧೬-೨-೫೮	ಶ್ರೀ ಲಿಂಗೋಜಿ, ಎ. ಡಿ. ಇ. ಆಯ್.
೫.	ಬನ್ನಿಕೊಪ್ಪ	೧೩-೩-೫೮	ಶ್ರೀ ಗಲಗಲಿ, ಎ. ಡಿ. ಇ. ಆಯ್.
೬.	ಹತ್ತಿಮತ್ತೂರ	೯-೩-೫೮	ಶ್ರೀ ಎಫ್.ಸಿ.ಉಣಕಲ್ಲ, ಕ್ರಾಪ್ಟ ಆರ್ಗನಾಯಿಝರ, ಧಾರವಾಡ ವಿಭಾಗ, ಧಾರವಾಡ.
೭.	ತೇವರ ಮೆಳ್ಳಿಹಳ್ಳಿ	೨೭-೩-೫೮	ಶ್ರೀ ಆರ್. ಎಚ್. ಕುಲಕರ್ಣಿ, ಎ.ಡಿ.ಇ.ಆಯ್.
೮.	ಹುಣಶೀಕಟ್ಟಿ	೧೨-೩-೫೮	ಶ್ರೀ ಗದ್ದಿಹಳ್ಳಿ ಶೆಟ್ಟರು, ಡಿ. ಎಲ್. ಬಿ. ಮೆಂಬರ
೯.	ಮಮದಾಪೂರ	೭-೪-೫೮	ಶ್ರೀ ಆರ್. ಆರ್. ಬೆಟಗೇರಿ, ಹೆ. ಮಾ.

ಫೆಬ್ರುವರಿ, ೧೯೫೮ನೆಯ ಇಸ್ವಿಯಲ್ಲಿ ಜರುಗಿದ ಹಾಯಸ್ಕೂಲ ಹಾಗೂ ಮಿಡಲ್ ಸ್ಕೂಲ ಸ್ಕಾಲರಶಿಪ್ ಪರೀಕ್ಷೆಯ ಪರಿಣಾಮ

ಮಿಡಲ್‌ಸ್ಕೂಲ ಸ್ಕಾಲರಶಿಪ್ ಪರೀಕ್ಷೆ

	ಶಾಲೆಯ ಹೆಸರು	ಒಟ್ಟು ಸಂಖ್ಯೆ	ಪಾಸಾದ ಸಂಖ್ಯೆ	ಕಲಿಸಿದ ಗುರುಗಳ ಹೆಸರು
೧.	ಜೀ. ಶಿ. ಕ. ಗಂ. ಶಾ. ನಂ ೪ ಬಾಗಲಕೋಟ	೩	೩	ಶ್ರೀ ಯು. ರಾ. ನಾರಾಯಣಿ
	ಇವರಲ್ಲಿ ಕುಮಾರ ಪ್ರಕಾಶ ಪುರಾಣಿಕ ಜಿಲ್ಹೆಗೆ ೧ ನೇ ನಂಬರು.			
೨.	ಜೀ. ಶಿ. ಗಂ. ಶಾ. ನೇಸರಗಿ	ಕುಮಾರ ಶಿ. ವಿ. ವಾಲಿ		ಶ್ರೀ ಆರ್. ಎಸ್. ಕಿಚಡಿ
೨.	,, ಹೊಳೆಆಲೂರ	ಕುಮಾರ ಸೂ. ಗೂ. ಜಾಲೀಹಾಳ		ಶ್ರೀ ರು. ಶಿ. ಹಿರೇಮಠ
೩.	,, ಹುನಗುಂದ	೪	೪	—
೪.	,, ಶಿರಕೋಳ	ಕುಮಾರ ಕಲ್ಲಯ್ಯ ವೀರಯ್ಯ ಕುಲಕರ್ಣಿ		ಶ್ರೀ ಕೆ. ಪಿ. ಹೂಲಿ
೪.	,, ಹೆ.ಮು.ಶಾ. ಹುನುಗುಂದ	ಕುಮಾರಿ ಲೀಲಾವತಿ ಕಟ್ಟಿ		—

ಹಾಯಸ್ಕೂಲ ಸ್ಕಾಲರ್‌ಶಿಪ್ ಪರೀಕ್ಷೆ

	ಶಾಲೆಯ ಹೆಸರು	ಒಟ್ಟು ಸಂಖ್ಯೆ	ಪಾಸಾದ ಸಂಖ್ಯೆ	ಕಲಿಸಿದ ಗುರುಗಳ ಹೆಸರು
೫.	,, ಗಂ.ಮ.ಶಾ.ಹುನುಗುಂದ	೩	೩	—
೬.	,, ತೇರಗಾಂವ	ಕುಮಾರ ಗೋ.ನಾ.ಹೆಗಡೆಕಟ್ಟಿ		—
	ಈತನು ಜಿಲ್ಹೆಗೆ ೧ನೇ ನಂಬರ ಬಂದಿದ್ದಾನೆ			—

ಜೀವನ ಶಿಕ್ಷಣವೂ ಪ್ರದರ್ಶನಗಳೂ

ಲೇಖಕರು : **ಶ್ರೀಮತಿ ರುಕ್ಮಿಣಿಯಮ್ಮಾ,** ಹೆ. ಮ. ಸ. ಟ್ರೇ. ಕಾ. ಧಾರವಾಡ

ತನ್ನನ್ನು ಮತ್ತು ತಾನು ಮಾಡಿದ್ದನ್ನು ಬೇರೆಯವರು ನೋಡಿ ಮೆಚ್ಚಬೇಕು, ಹೊಗಳಬೇಕು ಎಂಬ ಆಶೆಯು ಪ್ರತಿಯೊಬ್ಬ ಮಾನವನಿಗೂ ಇರುತ್ತದೆ. ಸ್ವಲ್ಪ ವಯಸ್ಕರಾದ ಮೇಲೆ ಈ ಆಶೆಯು ಅನೇಕರಲ್ಲಿ ಕಡಿಮೆಯಾಗುತ್ತದೆ. ಆದರೆ ಬಾಲ್ಯದಲ್ಲಿ ಮತ್ತು ಪ್ರೌಢಾವಸ್ಥೆಯಲ್ಲಿ ತಾನು, ತನ್ನದು ಎಂಬ ಭಾವನೆ ಬಲವತ್ತರವಾಗಿರುತ್ತದೆ. ಈ ಬಲಯುತವಾದ ಪ್ರವೃತ್ತಿಯನ್ನು ಹತ್ತಿಕ್ಕಿದರೆ ದುಷ್ಪರಿಣಾಮಗಳುಂಟಾಗುತ್ತವೆ. ಈ ಪ್ರಬಲವಾದ ಪ್ರವೃತ್ತಿಯ ಉದಾತ್ತೀಕರಣ ಮಾಡುವುದರಿಂದ ಅನೇಕ ಲಾಭಗಳುಂಟಾಗುತ್ತವೆ; ಹಿಂದೆ ಆಗಿವೆ. ಮಾನಸ ಶಾಸ್ತ್ರಜ್ಞರು ಮತ್ತು ಅವರ ಅನುಭವದ ಉಪಯೋಗ ಮಾಡಿಕೊಂಡಿರುವ ಉತ್ತಮ ಶಿಕ್ಷಕರು ಈ ಪ್ರವೃತ್ತಿಯನ್ನು ಯೋಗ್ಯ ಮಾರ್ಗದಲ್ಲಿ ಹರಿಸಲು ಮಾರ್ಗದರ್ಶನ ಮಾಡಿ ಉತ್ತಮ ಫಲಗಳನ್ನು ಹೊಂದಿರುವರು. ಅನೇಕ ಮಕ್ಕಳ ಉದ್ಧಾರವಾಗಿರುವುದಲ್ಲದೆ ಅವರು ದೊಡ್ಡವರಾಗಿ ಮಾಡಿದ ಕಾರ್ಯಗಳಿಂದ ಜಗತ್ತಿನ ಸುಧಾರಣೆಯೂ ಕಲ್ಯಾಣವೂ ಆಗಿದೆ.

ಹಿಂದಿನ ಶಿಕ್ಷಣದಲ್ಲಿ ಮಗುವಿಗೆ ಮೊದಲಿನ ಸ್ಥಾನವಿರಲಿಲ್ಲ. ಆದರೆ ಇಂದಿನ ಶಿಕ್ಷಣಕ್ರಮದಲ್ಲಿ ಮಗುವಿಗಾಗಿ, ಮಗುವಿಗೇ ಮುಖ್ಯ ಸ್ಥಾನ ಕೊಟ್ಟು ಅಭ್ಯಾಸ ಕ್ರಮವನ್ನು ರಚಿಸಲಾಗಿದೆ. ಶಿಕ್ಷಕರು ಬರಿಯ ಮಾರ್ಗದರ್ಶಕರು. ವಿಷಯಗಳು ಮಗುವಿನ ಸರ್ವಾಂಗೀಣ ಉನ್ನತಿಗಾಗಿ ಸಾಧನಗಳಾಗಿವೆ. ಇಂದಿನ ಶಿಕ್ಷಣದ ಮತ್ತೊಂದು ವೈಶಿಷ್ಟ್ಯವೆಂದರೆ ಮಗುವು ಮಾಡುತ್ತಾ ಕಲಿಯಲು ಮತ್ತು ಅವನ ವಿಚಾರ ಪ್ರಚೋದನ ಮಾಡಲು ಕೆಲವು ಕೈಗಾರಿಕೆಗಳನ್ನು ಮತ್ತು ಮೂಲೋದ್ಯೋಗವನ್ನು ಅಭ್ಯಾಸ ಕ್ರಮದಲ್ಲಿ ಸೇರಿಸಿ ಇವನ್ನು ಶಿಕ್ಷಣದ ಮಾಧ್ಯಮವನ್ನಾಗಿ ಮಾಡಿಕೊಂಡಿರುವುದು. ಇಂದು ಶಿಕ್ಷಣವು ಬರಿಯ ಶಿಕ್ಷಣವಾಗಿರದೆ ಜೀವನಶಿಕ್ಷಣವಾಗಿದೆ.

ಈ ಶಿಕ್ಷಣದಲ್ಲಿ ಜೀವನಕ್ಕೆ ಸಂಬಂಧಪಟ್ಟ ಸಂಗತಿಗಳನ್ನು ಅನುಭವದಿಂದಲೇ, ಸ್ವಂತ ಕೃತಿಯಿಂದಲೇ ಮಕ್ಕಳು ಕಲಿಯುವರು. ತಾವೇ ತಮ್ಮ ಶಕ್ತಿಯನ್ನು ವ್ಯಯ ಮಾಡಿ ಅನೇಕ ತರದ ಸಾಮಾನುಗಳನ್ನು ತಯಾರು ಮಾಡುವರು. ಕೆಲವು ಮಕ್ಕಳಂತೂ ಹುಟ್ಟಿನಿಂದಲೇ ಕುಶಲ ಕಲಾಕಾರರಾಗಿರುತ್ತಾರೆ. ಇಂತಹಮಕ್ಕಳು ಸಿದ್ಧಗೊಳಿಸಿದ ವಸ್ತುಗಳು ಅತಿ ಉತ್ತಮವಾಗಿರುತ್ತವೆ. ಇಂತಹ ಮಕ್ಕಳಿಗೆ ಆಗಾಗ್ಗೆ ಉತ್ತೇಜನ ದೊರೆತರೆ ಅವು ಮತ್ತಷ್ಟು ಹುರುಪಿನಿಂದ ಕೆಲಸ ಮಾಡುತ್ತವೆ. ಈ ಉತ್ತೇಜನವನ್ನು ಶಿಕ್ಷಕರಷ್ಟೇ ಕೊಟ್ಟರೆ ಸಾಲದು. ಬೇರೆಯವರೂ ಸಹ ಅವರ ಕಾರ್ಯಕುಶಲತೆಯನ್ನು ನೋಡಿ ಪ್ರಶಂಸಿಸಿದರೆ ಅವರ ಹುರುಪು ಹುಮ್ಮಸ್ಸು ಇಮ್ಮಡಿ, ಮುಮ್ಮಡಿಯಾಗಿ ಕಾರ್ಯಕ್ಷಮತೆಯು ಇನ್ನೂ ಹೆಚ್ಚುವುದು.

(ಮುಂದುವರಿಯುವುದು)

ಪತ್ರಗಳು

(೨೮ ನೆಯ ಪುಟದಿಂದ ಬಂದದ್ದು)

ಮೆ|| ಸರಕಾರಿ ಗಂಡು ಮಕ್ಕಳ ಟ್ರೇನಿಂಗ ಕಾಲೇಜ ಶತಾಬ್ದಿ ಸಮಿತಿ ಧಾರವಾಡ ಇವರ ಸನ್ನಿಧಿಗೆ—

ಹುಬ್ಬಳ್ಳಿ ತಾಲೂಕ ಜೀ. ಶಿ. ಕ. ಗಂ. ಶಾಲಾ ಭಂಡಿವಾಡ ಗುರುಗಳಾದ ಎಲ್ಲಪ್ಪ ಫಕೀರಪ್ಪ ಮಂಟೂರ ಸಾ|| ಮಂಟೂರು, ಈತನ ವಿನಯ ವಿನಂತಿ.

ತರುವಾಯ:— ನಾನು ಪ್ರತಿ ವರ್ಷ ನಡೆಯಲಿರುವ ೪ನೆಯ ವರ್ಗದ ವಾರ್ಷಿಕ ಪರೀಕ್ಷೆಯಲ್ಲಿ ಎಲ್ಲ ವಿಷಯಗಳಲ್ಲಿ ೧ನೆಯ ಸ್ಥಾನ ಪಡೆದವರಿಗೆ ಪ್ರತಿ ವರ್ಷ ನಾನು ಹತ್ತು ರೂಪಾಯಿಗಳನ್ನು ನನ್ನ ಜೀವಮಾನ ಇರುವವರೆಗೆ ಕೊಡಲಿಕ್ಕೆ ಸಿದ್ಧನಿದ್ದೇನೆ. ಕಾರಣ ಈ ನನ್ನ ಮಾಗಣಿಯನ್ನು ಪೂರೈಸುವಿರೆಂದು ಬೇಡುವೆನು.

ಈ ವರ್ಷ ಅಂದರೆ ೧೯೫೮ನೆಯ ಇಸ್ವಿಯಲ್ಲಿ ನಡೆಯಲಿರುವ ಪರೀಕ್ಷೆಯ ಹಣವನ್ನು ಈಗ ಮುಂಚಿತವಾಗಿ ಕೊಟ್ಟಿರುವೆನು. ನನ್ನ ವಿಳಾಸ ಕಾಲ ಕಾಲಕ್ಕೆ ಬದಲಾದಂತೆ ಅದನ್ನು ಮೆ|| ಪ್ರಿನ್ಸಿಪಾಲ ಸಾಹೇಬರಿಗೆ ತಿಳಿಸುತ್ತ ಹೋಗುವೆನು. ಹಾಗೂ ಇನಾಮಿನ ಈ ಹತ್ತು ರೂಪಾಯಿಗಳನ್ನು ಪ್ರತಿವರ್ಷ ಪರೀಕ್ಷೆಯ ಪೂರ್ವದಲ್ಲಿ ೩ ತಿಂಗಳು ಮೊದಲು ಕಳಿಸುತ್ತ ಹೋಗುವೆನು. ಈ ವಿವರ ಮೆ||ರವರಿಗೆ ಅರಿಕೆಯಿರಲಿ.

ತಮ್ಮ ವಿಶ್ವಾಸಿಕ,

ತಾ. ೨೮–೧೨–೫೭ ಎ. ಫ. ಮಂಟೂರ

ನಮ್ಮ ಮುಂದಿನ ಶಿಕ್ಷಣದ ಧೋರಣೆಯು ಹೇಗಿರಬೇಕು ಎಂಬ ಬಗೆಗೆ

ಡಾ. ಝಾಕಿರ್ ಹುಸೇನ್ ಅವರ ಅಖಿಲ ಭಾರತ ಆಕಾಶವಾಣಿ ಕಾರ್ಯಕ್ರಮದಲ್ಲಿ ಭಾಷಣ (೧೯೫೩)

ಅನುವಾದಕರು: **ಶ್ರೀ ತಟ್ಟಿ ಶಾಮರಾಯರು.**

ಭಾರತದ ವಿದ್ಯಾಭ್ಯಾಸದ ಭವಿಷ್ಯವೆಂದರೆ ಭಾರತದ ಜನರ ಭವಿಷ್ಯವೆಂದೇ ಹೇಳಬಹುದು. ಭಾರತದ ಜನರು ಒಂದು ನ್ಯಾಯ ಸಮ್ಮತವಾದ ಸಂಭಾವಿತ ಸುಸಂಪನ್ನ ಸಹ ಜೀವನದ ವಿಕಾಸಕ್ಕಾಗಿ ಪರಿಶ್ರಮಿಸಿ ಆ ಜೀವನಕ್ಕೆ ಒಂದು ಮೂರ್ತ ಸ್ವರೂಪವನ್ನು ಕೊಡುವ ಆಸೆಯನ್ನು ಇಟ್ಟುಕೊಳ್ಳಬೇಕಾದರೆ, ಒಂದು ಬಡತನ ಭೀತಿಗಳಿಂದ ದೂರವಾದ ಶೋಷಣೆಯಿಂದ ರಹಿತವಾದ ವರ್ಗ ರಹಿತ, ಸಹಕಾರ ಸಂಪನ್ನ ಸಮಾಜವನ್ನು ಸ್ಥಾಪಿಸುವದಕ್ಕೆ ಸಾಹಸ ಮಾಡುವದಾದರೆ, ಪರಂಪರಾ ಪ್ರಾಪ್ತವಾದ ಶಿಕ್ಷಣ ವ್ಯವಸ್ಥೆಗಿಂತ ಅಧಿಕಾಧಿಕ ವಿಸ್ತೃತವಾದ, ಸಫಲವಾದ ವ್ಯವಸ್ಥೆಯನ್ನು ಅಸ್ತಿತ್ವದಲ್ಲಿ ತರಬೇಡವೇ ? ಸಕಲ ಸದಿಚ್ಛಾವಂತರ ಆದರ ಮೆಚ್ಚುಗೆಗಳಿಗೆ ಪಾತ್ರವಾಗುವದೆಂದು ನಾವು ಖಂಡಿತವಾಗಿ ಆಶಿಸಬಹುದಾದ ಒಂದು ಸುಸಂಸ್ಕೃತ ಸಾಮಾಜಿಕ ಜೀವನಕ್ಕೆ ಚಾಲನೆಯನ್ನು ಕೊಟ್ಟು ಅದನ್ನು ಪೋಷಿಸಿಕೊಂಡು ಬರುವ ಕಾರ್ಯದಲ್ಲಿ ಭಾರತೀಯ ವಿದ್ಯಾರ್ಜನೆಯು ಇತಿಹಾಸದಲ್ಲಿ ಮಹತ್ವದ ಪಾತ್ರವನ್ನು ವಹಿಸಬೇಕಾಗಿದೆ.

ನಮಗೆ ಪರಂಪರೆಯಿಂದ ಪ್ರಾಪ್ತವಾದ ಶಿಕ್ಷಣ ವ್ಯವಸ್ಥೆಗಿಂತ ಅಧಿಕಾಂಶದಲ್ಲಿ ವಿಸ್ತೃತವಾದ ಸಮರ್ಥವಾದ ಸಫಲವಾದ ವ್ಯವಸ್ಥೆಯೊಂದು ಬೇಕಾಗುವದೆಂದು ಈಗ ನಾನು ಹೇಳಿದೆ. ಶಿಕ್ಷಣದ ವಿಸ್ತರಣೆಯ ವಿಷಯವನ್ನು ವಿಚಾರಿಸಿದರೆ ನಾವು ಒಂದು ಅತಿಕಷ್ಟಕರವಾದ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಶಿಕ್ಷಣ ಸೌಕರ್ಯಗಳ ಕೊರತೆಯು ಬಹು ಗಂಭೀರವಾಗಿದೆ.

೬ ರಿಂದ ೧೧ ವಯಸ್ಸಿನ ೧೦೦ ಮಕ್ಕಳಲ್ಲಿ ೪೦ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮತ್ತು ೧೧ ರಿಂದ ೧೭ ವಯೋಮಾನದ ೧೦೦ ಹುಡುಗ ಹುಡಿಗೆಯರಲ್ಲಿ ೧೦ಕ್ಕಿಂತ ಕಡಿಮೆಯಾಗಿ ಈಗ ಸಾಲೆಗೆ ಹೋಗುತ್ತಿರಬೇಕೆಂದು ಕಾಣುತ್ತದೆ. ೧೭ರಿಂದ೨೩ ವಯಸ್ಸಿನ ಹುಡುಗ ಹುಡಿಗೆಯರಲ್ಲಿ ಪ್ರತಿಶತ ೧ ಕ್ಕಿಂತಲೂ ಕಡಿಮೆಯಾದವರು ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಕಲಿಯುತ್ತಿರಬೇಕು. ಇಡಿಯ ಜನ ಸಂಖ್ಯೆಯಲ್ಲಿ ಪ್ರತಿ ಶತ ೧೭ ಮಾತ್ರ ಶಿಕ್ಷಿತರು ಅಥವಾ ಸಾಕ್ಷರರಾಗಿದ್ದಾರೆ. ಈ ಅಂಕಿ ಸಂಖ್ಯೆಗಳಿಂದ ಶಿಕ್ಷಣದ ಸೌಕರ್ಯವನ್ನು ಇನ್ನೂ ಭಾರಿಯಾಗಿ ಬೆಳಿಸಬೇಕಾಗುವದೆಂದು ತಿಳಿದು ಬರುವದು.

ರಾಜ್ಯಾಂಗ ಶಾಸನದ ನಿರ್ದೇಶದ ಪ್ರಕಾರ ೧೪ ವರ್ಷ ವಯೋಮರ್ಯಾದೆಯ ಎಲ್ಲ ಮಕ್ಕಳಿಗೂ ಶಾಸನವು ಕಾರ್ಯಾಗತವಾದ ೧೦ ವರ್ಷಗಳಲ್ಲಿ ಕಡ್ಡಾಯದ ಉಚಿತ ಶಿಕ್ಷಣವು ದೊರೆಯಬೇಕೆಂಬ ನಿರ್ದೇಶವನ್ನು ಸಾಧಿಸುವದಾಗುವದಿಲ್ಲವೆಂಬ ಭೀತಿಯಿದೆ. ಅನೇಕ ವರ್ಷಗಳವರೆಗೆ ಉಪೇಕ್ಷೆ ಮಾಡಿ ಬಿಟ್ಟ ದೊಡ್ಡ ತಪ್ಪು ಉಚ್ಚ ಘೋಷಣೆಗಳ ಆಕ್ರೋಶದಿಂದಾಗಲಿ ಹೇಗೋ ಒಂದು ಸಮಾಧಾನವನ್ನು ಮಾಡಿ ಕೊಂಡಾಗಲಿ ನಿವಾರಣೆಯಾಗುವದಿಲ್ಲ.

ಅದನ್ನು ಸರಿಪಡಿಸಲಿಕ್ಕೆ ಕಷ್ಟ ಸಾಧ್ಯವಾದ ಸತತವಾದ ಸಮನ್ವಿತವಾದ ಪ್ರಯತ್ನವು ಒಳ್ಳೇ ಮಾರ್ಗದರ್ಶನದಲ್ಲಿ ನಡೆಯಬೇಕು. ಪ್ರಗತಿಯು ಬಹಳ ವಿಧಾನವಾಗಿದೆಯಷ್ಟೇ ಅಲ್ಲ. ಇಡುವ ಹೆಜ್ಜೆಗಳು ನಿರರ್ಗಳವಾಗಿರದೆ ಮೀನ-ಮೇಷ ಮಾಡುತ್ತಾ ಇಡುವವಾಗಿವೆ ಮತ್ತು ಮನಸ್ಸಿನ ನಿರ್ಧಾರದ ಅಭಾವವನ್ನು ಮಾತ್ರವಲ್ಲದೆ ಸರಿಯಾದ ಮಾರ್ಗದರ್ಶನದ ಅಭಾವವನ್ನು ಸೂಚಿಸುತ್ತವೆಂದೂ ನನಗೆ ಅನಿಸುವದು.

ಪಂಚವಾರ್ಷಿಕ ಯೋಜನೆಯಲ್ಲಿ ಹಾಕಿ ಕೊಂಡ ಗುರಿಗಳನ್ನು ಮುಟ್ಟುವದು ಕಷ್ಟವಾಗುವದೆಂದು ನನಗೆನಿಸುತ್ತದೆ. ಈ (ಮೊದಲನೇ) ಯೋಜನೆಯಲ್ಲಿಯ ಗುರಿಗಳು ನಿಮಗೆ ಗೊತ್ತಿದ್ದಂತೆ ಹೀಗಿವೆ: ೬ ರಿಂದ ೧೧ ವಯಸ್ಸಿನ ಮಕ್ಕಳಲ್ಲಿ ಕನಿಷ್ಟ ಪ್ರತಿ ಶತ ೬೦ ಮಕ್ಕಳಿಗೆ ಶಿಕ್ಷಣವನ್ನು ಕೊಡುವದು. ಈ ವಯೋಮರ್ಯಾದೆಯ ಸಾಲೆಗೆ ಹೋಗುವ ಹೆಣ್ಣುಮಕ್ಕಳ ಪ್ರಮಾಣವನ್ನು ೧೯೫೦-೫೧ರಲ್ಲಿ ೨೩.೩ ಇದ್ದುದನ್ನು ೧೯೫೫-೫೬ರಲ್ಲಿ ೪೦ಕ್ಕೆ ಏರಿಸು

ಜೀವನ ಶಿಕ್ಷಣವೂ ಪ್ರದರ್ಶನಗಳೂ

ಲೇಖಕರು : **ಶ್ರೀಮತಿ ರುಕ್ಮಿಣಮ್ಮಾ,** ಹೆ. ಮ. ಸ. ಟ್ರೇ. ಕಾ. ಧಾರವಾಡ

ತನ್ನನ್ನು ಮತ್ತು ತಾನು ಮಾಡಿದ್ದನ್ನು ಬೇರೆಯವರು ನೋಡಿ ಮೆಚ್ಚಬೇಕು, ಹೊಗಳಬೇಕು ಎಂಬ ಆಶೆಯು ಪ್ರತಿಯೊಬ್ಬ ಮಾನವನಿಗೂ ಇರುತ್ತದೆ. ಸ್ವಲ್ಪ ವಯಸ್ಕರಾದ ಮೇಲೆ ಈ ಆಶೆಯು ಅನೇಕರಲ್ಲಿ ಕಡಿಮೆಯಾಗುತ್ತದೆ. ಆದರೆ ಬಾಲ್ಯದಲ್ಲಿ ಮತ್ತು ಪ್ರೌಢಾವಸ್ಥೆಯಲ್ಲಿ ತಾನು, ತನ್ನದು ಎಂಬ ಭಾವನೆ ಬಲವತ್ತರವಾಗಿರುತ್ತದೆ. ಈ ಬಲಯುತವಾದ ಪ್ರವೃತ್ತಿಯನ್ನು ಹತ್ತಿಕ್ಕಿದರೆ ದುಷ್ಪರಿಣಾಮಗಳುಂಟಾಗುತ್ತವೆ. ಈ ಪ್ರಬಲವಾದ ಪ್ರವೃತ್ತಿಯ ಉದಾತ್ತೀಕರಣ ಮಾಡುವುದರಿಂದ ಅನೇಕ ಲಾಭಗಳುಂಟಾಗುತ್ತವೆ; ಹಿಂದೆ ಆಗಿವೆ. ಮಾನಸ ಶಾಸ್ತ್ರಜ್ಞರು ಮತ್ತು ಅವರ ಅನುಭವದ ಉಪಯೋಗ ಮಾಡಿಕೊಂಡಿರುವ ಉತ್ತಮ ಶಿಕ್ಷಕರು ಈ ಪ್ರವೃತ್ತಿಯನ್ನು ಯೋಗ್ಯ ಮಾರ್ಗದಲ್ಲಿ ಹರಿಸಲು ಮಾರ್ಗದರ್ಶನ ಮಾಡಿ ಉತ್ತಮ ಫಲಗಳನ್ನು ಹೊಂದಿರುವರು. ಅನೇಕ ಮಕ್ಕಳ ಉದ್ಧಾರವಾಗಿರುವುದಲ್ಲದೆ ಅವರು ದೊಡ್ಡವರಾಗಿ ಮಾಡಿದ ಕಾರ್ಯಗಳಿಂದ ಜಗತ್ತಿನ ಸುಧಾರಣೆಯೂ ಕಲ್ಯಾಣವೂ ಆಗಿದೆ.

ಹಿಂದಿನ ಶಿಕ್ಷಣದಲ್ಲಿ ಮಗುವಿಗೆ ಮೊದಲಿನ ಸ್ಥಾನವಿರಲಿಲ್ಲ. ಆದರೆ ಇಂದಿನ ಶಿಕ್ಷಣಕ್ರಮದಲ್ಲಿ ಮಗುವಿಗಾಗಿ, ಮಗುವಿಗೇ ಮುಖ್ಯ ಸ್ಥಾನ ಕೊಟ್ಟು ಅಭ್ಯಾಸ ಕ್ರಮವನ್ನು ರಚಿಸಲಾಗಿದೆ. ಶಿಕ್ಷಕರು ಬರಿಯ ಮಾರ್ಗದರ್ಶಕರು. ವಿಷಯಗಳು ಮಗುವಿನ ಸರ್ವಾಂಗೀಣ ಉನ್ನತಿಗಾಗಿ ಸಾಧನಗಳಾಗಿವೆ. ಇಂದಿನ ಶಿಕ್ಷಣದ ಮತ್ತೊಂದು ವೈಶಿಷ್ಟ್ಯವೆಂದರೆ ಮಗುವು ಮಾಡುತ್ತಾ ಕಲಿಯಲು ಮತ್ತು ಅವನ ವಿಚಾರ ಪ್ರಚೋದನ ಮಾಡಲು ಕೆಲವು ಕ್ರಿಯಾ ರಿಕೆಗಳನ್ನು ಮತ್ತು ಮೂಲೋದ್ಯೋಗವನ್ನು ಅಭ್ಯಾಸ ಕ್ರಮದಲ್ಲಿ ಸೇರಿಸಿ ಇವನ್ನು ಶಿಕ್ಷಣದ ಮಾಧ್ಯಮವನ್ನಾಗಿ ಮಾಡಿಕೊಂಡಿರುವುದು. ಇಂದು ಶಿಕ್ಷಣವು ಬರಿಯ ಶಿಕ್ಷಣವಾಗಿರದೆ ಜೀವನಶಿ ಕ್ಷಣವಾಗಿದೆ.

ಈ ಶಿಕ್ಷಣದಲ್ಲಿ ಜೀವನಕ್ಕೆ ಸಂಬಂಧಪಟ್ಟ ಸಂಗತಿಗಳನ್ನು ಅನುಭವದಿಂದಲೇ, ಸ್ವಂತ ಕೃತಿಯಿಂದಲೇ ಮಕ್ಕಳು ಕಲಿಯುವರು. ತಾವೇ ತಮ್ಮ ಶಕ್ತಿಯನ್ನು ವ್ಯಯ ಮಾಡಿ ಅನೇಕ ತರದ ಸಾಮಾನುಗಳನ್ನು ತಯಾರು ಮಾಡುವರು. ಕೆಲವು ಮಕ್ಕಳಂತೂ ಹುಟ್ಟಿನಿಂದಲೇ ಕುಶಲ ಕಲಾಕಾರರಾಗಿರುತ್ತಾರೆ. ಇಂತಹ ಮಕ್ಕಳು ಸಿದ್ಧಗೊಳಿಸಿದ ವಸ್ತುಗಳು ಅತಿ ಉತ್ತಮವಾಗಿರುತ್ತವೆ. ಇಂತಹ ಮಕ್ಕಳಿಗೆ ಆಗಾಗ್ಗೆ ಉತ್ತೇಜನ ದೊರೆತರೆ ಅವು ಮತ್ತಷ್ಟು ಹುರುಪಿನಿಂದ ಕೆಲಸ ಮಾಡುತ್ತವೆ. ಈ ಉತ್ತೇಜನವನ್ನು ಶಿಕ್ಷಕರಷ್ಟೇ ಕೊಟ್ಟರೆ ಸಾಲದು. ಬೇರೆಯವರೂ ಸಹ ಅವರ ಕಾರ್ಯಕುಶಲತೆಯನ್ನು ನೋಡಿ ಪ್ರಶಂಸಿಸಿದರೆ ಅವರ ಹುರುಪು ಹುಮ್ಮಸ್ಸು ಇಮ್ಮಡಿ, ಮುಮ್ಮಡಿಯಾಗಿ ಕಾರ್ಯಕ್ಷಮತೆಯು ಇನ್ನೂ ಹೆಚ್ಚುವುದು.

(ಮುಂದುವರಿಯುವುದು)

ಪತ್ರಗಳು

(೨೮ ನೆಯ ಪುಟದಿಂದ ಬಂದದ್ದು)

ಮೆ|| ಸರಕಾರಿ ಗಂಡು ಮಕ್ಕಳ ಟ್ರೇನಿಂಗ ಕಾಲೇಜ ಶತಾಬ್ದಿ ಸಮಿತಿ ಧಾರವಾಡ ಇವರ ಸನ್ನಿಧಿಗೆ—

ಹುಬ್ಬಳ್ಳಿ ತಾಲೂಕ ಜೀ. ಶಿ. ಕ. ಗಂ. ಶಾಲಾ ಭಂಡಿವಾಡ ಗುರುಗಳಾದ ಎಲ್ಲಪ್ಪ ಫಕೀರಪ್ಪ ಮಂಟೂರ ಸಾ|| ಮಂಟೂರು, ಈತನ ವಿನಯ ವಿನಂತಿ.

ತರುವಾಯ:— ನಾನು ಪ್ರತಿ ವರ್ಷ ನಡೆಯಲಿರುವ ೩ನೆಯ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ಎಲ್ಲ ವಿಷಯಗಳಲ್ಲಿ ೧ನೆಯ ಸ್ಥಾನ ಪಡೆದವರಿಗೆ ಪ್ರತಿ ವರ್ಷ ನಾನು ಹತ್ತು ರೂಪಾಯಿಗಳನ್ನು ನನ್ನ ಜೀವಮಾನ ಇರುವವರೆಗೆ ಕೊಡಲಿಕ್ಕೆ ಸಿದ್ಧನಿದ್ದೇನೆ. ಕಾರಣ ಈ ನನ್ನ ಮಾಗಣಿಯನ್ನು ಪೂರೈಸುವಿರೆಂದು ಬೇಡುವೆನು.

ಈ ವರ್ಷ ಅಂದರೆ ೧೯೫೮ನೆಯ ಇಸ್ವಿಯಲ್ಲಿ ನಡೆಯಲಿರುವ ಪರೀಕ್ಷೆಯ ಹಣವನ್ನು ಈಗ ಮುಂಚಿತವಾಗಿ ಕೊಟ್ಟಿರುವೆನು. ನನ್ನ ವಿಳಾಸ ಕಾಲ ಕಾಲಕ್ಕೆ ಬದಲಾದಂತೆ ಅದನ್ನು ಮೆ|| ಪ್ರಿನ್ಸಿಪಾಲ ಸಾಹೇಬರಿಗೆ ತಿಳಿಸುತ್ತ ಹೋಗುವೆನು. ಹಾಗೂ ಇನಾಮಿನ ಈ ಹತ್ತು ರೂಪಾಯಿಗಳನ್ನು ಪ್ರತಿವರ್ಷ ಪರೀಕ್ಷೆಯ ಪೂರ್ವದಲ್ಲಿ ೨ ತಿಂಗಳು ಮೊದಲು ಕಳಿಸುತ್ತ ಹೋಗುವೆನು. ಈ ವಿವರ ಮೆ||ರವರಿಗೆ ಅರಿಕೆಯಿರಲಿ.

ತಮ್ಮ ವಿಶ್ವಾಸಿಕ,

ತಾ. ೨೮-೧೨-೫೭

ಎ. ಫ. ಮಂಟೂರ

ನಮ್ಮ ಮುಂದಿನ ಶಿಕ್ಷಣದ ಧೋರಣೆಯು ಹೇಗಿರಬೇಕು ಎಂಬ ಬಗೆಗೆ

ಡಾ. ಝಾಕಿರ್ ಹುಸೇನ್ ಅವರ ಅಖಿಲ ಭಾರತ ಆಕಾಶವಾಣಿ ಕಾರ್ಯಕ್ರಮದಲ್ಲಿ ಭಾಷಣ (೧೯೫೩)

ಅನುವಾದಕರು: **ಶ್ರೀ ತಟ್ಟಿ ಶಾಮರಾಯರು.**

ಭಾರತದ ವಿದ್ಯಾಭ್ಯಾಸದ ಭವಿಷ್ಯವೆಂದರೆ ಭಾರತದ ಜನರ ಭವಿಷ್ಯವೆಂದೇ ಹೇಳಬಹುದು. ಭಾರತದ ಜನರು ಒಂದು ನ್ಯಾಯ ಸಮ್ಮತವಾದ ಸಂಭಾವಿತ ಸುಸಂಪನ್ನ ಸಹ ಜೀವನದ ವಿಕಾಸಕ್ಕಾಗಿ ಪರಿಶ್ರಮಿಸಿ ಆ ಜೀವನಕ್ಕೆ ಒಂದು ಮೂರ್ತ ಸ್ವರೂಪವನ್ನು ಕೊಡುವ ಆಸೆಯನ್ನು ಇಟ್ಟುಕೊಳ್ಳಬೇಕಾದರೆ, ಒಂದು ಬಡತನ ಭೀತಿಗಳಿಂದ ದೂರವಾದ ಶೋಷಣೆಯಿಂದ ರಹಿತವಾದ ವರ್ಗ ರಹಿತ, ಸಹಕಾರ ಸಂಪನ್ನ ಸಮಾಜವನ್ನು ಸ್ಥಾಪಿಸುವದಕ್ಕೆ ಸಾಹಸ ಮಾಡುವದಾದರೆ, ಪರಂಪರಾ ಪ್ರಾಪ್ತವಾದ ಶಿಕ್ಷಣ ವ್ಯವಸ್ಥೆಗಿಂತ ಅಧಿಕಾಧಿಕ ವಿಸ್ತೃತವಾದ, ಸಫಲವಾದ ವ್ಯವಸ್ಥೆಯನ್ನು ಅಸ್ತಿತ್ವದಲ್ಲಿ ತರಬೇಡವೇ ? ಸಕಲ ಸದಿಚ್ಛಾವಂತರ ಆದರ ಮೆಚ್ಚುಗೆಗಳಿಗೆ ಪಾತ್ರವಾಗುವದೆಂದು ನಾವು ಖಂಡಿತವಾಗಿ ಆಶಿಸಬಹುದಾದ ಒಂದು ಸುಸಂಸ್ಕೃತ ಸಾಮಾಜಿಕ ಜೀವನಕ್ಕೆ ಚಾಲನೆಯನ್ನು ಕೊಟ್ಟು ಅದನ್ನು ಪೋಷಿಸಿಕೊಂಡು ಬರುವ ಕಾರ್ಯದಲ್ಲಿ ಭಾರತೀಯ ವಿದ್ಯಾರ್ಜನೆಯು ಇತಿಹಾಸದಲ್ಲಿ ಮಹತ್ವದ ಪಾತ್ರವನ್ನು ವಹಿಸಬೇಕಾಗಿದೆ.

ನಮಗೆ ಪರಂಪರೆಯಿಂದ ಪ್ರಾಪ್ತವಾದ ಶಿಕ್ಷಣ ವ್ಯವಸ್ಥೆಗಿಂತ ಅಧಿಕಾಂಶದಲ್ಲಿ ವಿಸ್ತೃತವಾದ ಸಮರ್ಥವಾದ ಸಫಲವಾದ ವ್ಯವಸ್ಥೆಯೊಂದು ಬೇಕಾಗುವದೆಂದು ಈಗ ನಾನು ಹೇಳಿದೆ. ಶಿಕ್ಷಣದ ವಿಸ್ತರಣೆಯ ವಿಷಯವನ್ನು ವಿಚಾರಿಸಿದರೆ ನಾವು ಒಂದು ಅತಿಕಷ್ಟಕರವಾದ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಶಿಕ್ಷಣ ಸೌಕರ್ಯಗಳ ಕೊರತೆಯು ಬಹು ಗಂಭೀರವಾಗಿದೆ.

೬ ರಿಂದ ೧೧ ವಯಸ್ಸಿನ ೧೦೦ ಮಕ್ಕಳಲ್ಲಿ ೪೦ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮತ್ತು ೧೧ ರಿಂದ ೧೪ ವಯೋಮಾನದ ೧೦೦ ಹುಡುಗ ಹುಡಿಗೆಯರಲ್ಲಿ ೧೦ಕ್ಕಿಂತ ಕಡಿಮೆಯಾಗಿ ಈಗ ಸಾಲೆಗೆ ಹೋಗುತ್ತಿರಬೇಕೆಂದು ಕಾಣುತ್ತದೆ. ೧೪ರಿಂದ೧೭ ವಯಸ್ಸಿನ ಹುಡುಗ ಹುಡಿಗೆಯರಲ್ಲಿ ಪ್ರತಿಶತ ೧ ಕ್ಕಿಂತಲೂ ಕಡಿಮೆಯಾದವರು ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಕಲಿಯುತ್ತಿರಬೇಕು. ಇಡಿಯ ಜನ ಸಂಖ್ಯೆಯಲ್ಲಿ ಪ್ರತಿ ಶತ ೧೪ ಮಾತ್ರ ಶಿಕ್ಷಿತರು ಅಥವಾ ಸಾಕ್ಷರರಾಗಿದ್ದಾರೆ. ಈ ಅಂಕಿ ಸಂಖ್ಯೆಗಳಿಂದ ಶಿಕ್ಷಣದ ಸೌಕರ್ಯವನ್ನು ಇನ್ನೂ ಭಾರಿಯಾಗಿ ಬೆಳಿಸಬೇಕಾಗುವದೆಂದು ತಿಳಿದು ಬರುವದು.

ರಾಜ್ಯಾಂಗ ಶಾಸನದ ನಿರ್ದೇಶದ ಪ್ರಕಾರ ೧೪ ವರ್ಷ ವಯೋಮರ್ಯಾದೆಯ ಎಲ್ಲ ಮಕ್ಕಳಿಗೂ ಶಾಸನವು ಕಾರ್ಯಾಗತವಾದ ೧೦ ವರ್ಷಗಳಲ್ಲಿ ಕಡ್ಡಾಯದ ಉಚಿತ ಶಿಕ್ಷಣವು ದೊರೆಯಬೇಕೆಂಬ ನಿರ್ದೇಶವನ್ನು ಸಾಧಿಸುವದಾಗುವದಿಲ್ಲವೆಂಬ ಭೀತಿಯಿದೆ. ಅನೇಕ ವರ್ಷಗಳವರೆಗೆ ಉಪೇಕ್ಷೆ ಮಾಡಿ ಬಿಟ್ಟ ದೊಡ್ಡ ತಪ್ಪು ಉಚ್ಚ ಘೋಷಣೆಗಳ ಆಕ್ರೋಶದಿಂದಾಗಲಿ ಹೇಗೋ ಒಂದು ಸಮಾಧಾನವನ್ನು ಮಾಡಿ ಕೊಂಡಾಗಲಿ ನಿವಾರಣೆಯಾಗುವದಿಲ್ಲ.

ಅದನ್ನು ಸರಿಪಡಿಸಲಿಕ್ಕೆ ಕಷ್ಟ ಸಾಧ್ಯವಾದ ಸಂತತವಾದ ಸಮನ್ವಿತವಾದ ಪ್ರಯತ್ನವು ಒಳ್ಳೇ ಮಾರ್ಗದರ್ಶನದಲ್ಲಿ ನಡೆಯಬೇಕು. ಪ್ರಗತಿಯು ಬಹಳ ವಿಧಾನವಾಗಿದೆಯಷ್ಟೇ ಅಲ್ಲ. ಇಡುವ ಹೆಜ್ಜೆಗಳು ನಿರರ್ಗಳವಾಗಿರದೆ ಮೀನ-ಮೇಷ ಮಾಡುತ್ತಾ ಇರುವವಾಗಿವೆ ಮತ್ತು ಮನಸ್ಸಿನ ನಿರ್ಧಾರದ ಅಭಾವವನ್ನು ಮಾತ್ರವಲ್ಲದೆ ಸರಿಯಾದ ಮಾರ್ಗದರ್ಶನದ ಅಭಾವವನ್ನು ಸೂಚಿಸುತ್ತವೆಂದೂ ನನಗೆ ಅನಿಸುವದು.

ಪಂಚವಾರ್ಷಿಕ ಯೋಜನೆಯಲ್ಲಿ ಹಾಕಿ ಕೊಂಡ ಗುರಿಗಳನ್ನು ಮುಟ್ಟುವದು ಕಷ್ಟವಾಗುವದೆಂದು ನನಗೆನಿಸುತ್ತದೆ. ಈ (ಮೊದಲನೇ) ಯೋಜನೆಯಲ್ಲಿಯ ಗುರಿಗಳು ನಿಮಗೆ ಗೊತ್ತಿದ್ದಂತೆ ಹೀಗಿವೆ: ೬ ರಿಂದ ೧೧ ವಯಸ್ಸಿನ ಮಕ್ಕಳಲ್ಲಿ ಕನಿಷ್ಟ ಪ್ರತಿ ಶತ ೬೦ ಮಕ್ಕಳಿಗೆ ಶಿಕ್ಷಣವನ್ನು ಕೊಡುವದು. ಈ ವಯೋಮರ್ಯಾದೆಯ ಸಾಲೆಗೆ ಹೋಗುವ ಹೆಣ್ಣುಮಕ್ಕಳ ಪ್ರಮಾಣವನ್ನು ೧೯೫೦-೫೧ರಲ್ಲಿ ೨೩.೩ ಇದ್ದುದನ್ನು ೧೯೫೫-೫೬ರಲ್ಲಿ ೪೦ಕ್ಕೆ ಏರಿಸು

ವದು; ನಿರ್ದಿಷ್ಟ ವಯಸ್ಸಿನ ಮಕ್ಕಳಲ್ಲಿ ಪ್ರತಿಶತ ೧೫ ಮಕ್ಕಳನ್ನು ಮಾಧ್ಯಮಿಕ ಶಾಲೆಗಳಲ್ಲಿ ತರುವದು. ಈ ನಿರ್ದಿಷ್ಟ ವಯಸ್ಸಿನ ಹೆಣ್ಣು ಮಕ್ಕಳ ಪ್ರಮಾಣವನ್ನು ೧೦ ಕ್ಕೆ ಏರಿಸುವದು; ಮತ್ತು ೧೪ ರಿಂದ ೪೦ ವರ್ಷದ ಅವಧಿಯ ಕನಿಷ್ಟ ೩೦ ರಷ್ಟು ಜನರಿಗೆ "ಸಮಾಜ ಶಿಕ್ಷಣ" ವೆಂದು ಕರೆಯಲಾಗುತ್ತಿರುವ ವಿದ್ಯೆಯನ್ನು ಒದಗಿಸುವದು.

ನಾವು ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪಡೆದ ಅನುಭವವು ವ್ಯರ್ಥವಾಗಲಿಕ್ಕಿಲ್ಲೆಂದೂ ಮುಂದಿನ ಯೋಜನೆಗಳಲ್ಲಿ ಶಿಕ್ಷಣದ ಪ್ರಗತಿಯ ಹೆಜ್ಜೆಯನ್ನು ತೀವ್ರ ಗತಿಯಿಂದ ಇಡಲಾಗುವದೆಂದೂ ನಾನು ನಂಬಿದ್ದೇನೆ. ಶಿಕ್ಷಣಕ್ಕೆ ಹೆಚ್ಚು ಉದಾರ ಸಹಾಯವನ್ನು ಪೂರೈಸಲಾದೀತು; ಅದನ್ನು ಹೆಚ್ಚು ದಕ್ಷ ರೀತಿಯಲ್ಲಿ ಉಪಯೋಗಿಸಲಾದೀತು. ರಾಷ್ಟ್ರೀಯ ಶಿಕ್ಷಣದ ಯಂತ್ರ ಸಾಮಗ್ರಿಯನ್ನು ಪೂರ್ತಿಯಾಗಿ ಕೂಡಿಸುವದೆಂದರೆ ೬ ರಿಂದ ೧೪ ವಯಸ್ಸಿನ ಎಲ್ಲ ಹುಡುಗ ಹುಡಿಗೆಯರಿಗೆ ಮೂಲ ಶಿಕ್ಷಣ ಕೊಡುವದು, ಮೊದಲನೆಯ ಘಟ್ಟದಿಂದ ಹೊರಬಿದ್ದು ಬಂದ ಹುಡುಗರಲ್ಲಿ ಪ್ರತಿ ಶತ ೨೦ ರಷ್ಟು ವಿದ್ಯಾರ್ಥಿಗಳಿಗೆ ಮಾಧ್ಯಮಿಕ ಶಿಕ್ಷಣದ ವ್ಯವಸ್ಥೆಯನ್ನು ಮಾಡುವದು, ಹೈಸ್ಕೂಲುಗಳಿಂದ ಹೊರಬಿದ್ದ ವಿದ್ಯಾರ್ಥಿಗಳಲ್ಲಿ ಪ್ರತಿ ಶತ ೧೦ ಜನರಿಗೆ ವಿಶ್ವವಿದ್ಯಾಲಯ ಶಿಕ್ಷಣವನ್ನು ಒದಗಿಸುವದು, ಬೆಳೆಯುತ್ತಿರುವ ರಾಷ್ಟ್ರೀಯ ಆರ್ಥಿಕ ಯೋಜನೆಗೆ ಬೇಕಾಗುವ ತಾಂತ್ರಿಕ ಶಿಕ್ಷಣದ ತರಬೇತಿಯನ್ನು ಕೆಲ ಮಟ್ಟಿಗಾದರೂ ಕೊಡುವದು, ಮೂಲ ಶಿಕ್ಷಣ ಮತ್ತು ಮಾಧ್ಯಮಿಕ ಶಿಕ್ಷಣಕ್ಕೆ ಬೇಕಾಗುವ ೨೬೩ ಲಕ್ಷ ಶಿಕ್ಷಕರ ಟ್ರೇನಿಂಗ್ ವ್ಯವಸ್ಥೆ ಮಾಡುವದು—ಇದೆಲ್ಲಕ್ಕೂ ಕನಿಷ್ಟ ಇನ್ನಿಪ್ಪತ್ತೈದು ವರ್ಷಗಳು ಬೇಕಾಗಬಹುದು; ಇದೆಲ್ಲಕ್ಕೂ ಆ ಅವಧಿಯಲ್ಲಿ ಅವಿಶ್ರಾಂತ ಪರಿಶ್ರಮ ಮತ್ತು ಸಾಧನ ಸಲಕರಣೆಗಳು ಅವಿಚ್ಛಿನ್ನವಾಗಿ ಒದಗಿ ಬರುತ್ತಿರಬೇಕು.

ಈ ವಿದ್ಯಾದಾನ ವ್ಯವಸ್ಥೆಯು ಅಸ್ತಿತ್ವದಲ್ಲಿ ಬಂದರೆ ಅದು ಜಗತ್ತಿನಲ್ಲಿಯೇ ಅತಿ ದೊಡ್ಡ ವ್ಯವಸ್ಥೆಯಾಗುವದು. ಆದರೆ ಪ್ರಮಾಣದ ವಿಸ್ತಾರವು ನೈತಿಕವಾದೊಂದು ಗುಣವಲ್ಲ; ದೊಡ್ಡದೆಂದರೆ ಒಳ್ಳೆಯದೆಂದೇ ಹೇಳಲಿಕ್ಕಾಗುವದಿಲ್ಲ. ಆ ದೊಡ್ಡ ಯಂತ್ರದಿಂದ ನಾವು ಯಾವ ಉಪಯೋಗ ಮಾಡಿಕೊಳ್ಳುವೆವು, ಅದರಿಂದ ಯಾವ ಧ್ಯೇಯವನ್ನು ಸಾಧಿಸಬೇಕೆಂಬುದೇ ಮುಖ್ಯ ಪ್ರಶ್ನೆ.

ಹಾಗಾದರೆ ಆ ವಿದ್ಯಾಭ್ಯಾಸದ ಗೊತ್ತುಗುರಿಗಳು, ಅದರ ಸಾಮಗ್ರಿ, ಪದ್ಧತಿ, ಈ ಯೋಚಿಸುವದಕ್ಕೆ ಕಠಿಣವಾದ ವಿಷಯಗಳಿಗೆ ಈಗ ನಾವು ಬಂದಂತಾಯಿತು:- ಶಿಕ್ಷಣದ ಭವಿಷ್ಯ, ಯೋಜನೆಗಳು, ಶಿಕ್ಷಣ ಪುನರ್ರಚನೆ, ಈ ಬಗೆಗೆ ಅನೇಕ ಭಿನ್ನ ಭಿನ್ನ ಆಲೋಚನೆಗಳಿವೆ. ಇವು ರಾಷ್ಟ್ರೀಯ ಜೀವನದ ಎಲ್ಲ ವಿಭಾಗಗಳಲ್ಲಿದ್ದ ಸದಿಚ್ಛಾಪೂರಿತರಾದ ಜನರ ಆಸೆಗಳು. ಅಭಿಪ್ರಾಯಗಳು, ಅಶಾಸ್ತ್ರೀಯವೂ ಆಪಾತತಃ ತೋರಿದವೂ ಆಗಿವೆಯಷ್ಟೇ. ಅಶಾಸ್ತ್ರೀಯವಾದ ಊಹೆಯು ಯಾವ ಕ್ಷೇತ್ರವಾದರೂ ಸರಿ, ಪಂಡಿತಂ ಮನ್ಯರ ಸುಖ ವಿಹಾರವೆಂದೇ ಹೇಳಬಹುದು. ಇಂತಹ ಸ್ವರ್ಗದ ಅನಿರ್ಬಂಧ ಸ್ವಾತಂತ್ರ್ಯದ ನೆರಳಿನಲ್ಲಿಯೇ ನಮ್ಮ ಶಿಕ್ಷಣ ವ್ಯವಸ್ಥೆಯ ಬಹ್ವಂಶದ ಆಲೋಚನೆಯು ನಡೆಯುವದು. ಈ ಸ್ವೇಚ್ಛಾ ವಿಹಾರವನ್ನು ಬುದ್ಧಿ ಪೂರ್ವಕವಾಗಿ ನಿಯಂತ್ರಿಸಲಾಗುವದೆಂದು ನಾನು ಆಶಿಸಿದ್ದೇನೆ. ಶಿಕ್ಷಣದ ಸುಧಾರಣೆ, ಪುನರ್ರಚನೆಯ ಯೋಜನೆಗಳು ಶಿಕ್ಷಣ ತಂತ್ರದ, ಶಿಕ್ಷಣ ವಿಧಾನದ ಸರಿಯಾದ ತಿಳುವಳಿಕೆಯ ನೆಲಗಟ್ಟಿನ ಮೇಲೆ ನಿಲ್ಲಬೇಕು.

ಹಾಗಾದರೆ ಈ ಶಿಕ್ಷಣ ವಿಧಾನದ ಸ್ವರೂಪವೇನು? ಮನಸ್ಸಿನ ವಿಕಾಸ. ಸಂಸ್ಕೃತಿ ಎಂಬರ್ಥದಲ್ಲಿ ವಿದ್ಯಾಭ್ಯಾಸವನ್ನು ಸಾಧಿಸುವದೆಂತು ? ನಿಜವಾದ ಶಿಕ್ಷಣ ಅಥವಾ ಮನಸ್ಸಿನ ಪರಿಪಾಕವು ಮಾನವ ದೇಹದ 'ಬೆಳವಣಿಗೆ—ಸರ್ವಾಂಗ ವಿಕಾಸವನ್ನು ಸಂಪೂರ್ಣವಾಗಿ ಹೋಲುವದು. ಶರೀರವು ಅದರ ಗರ್ಭಾವಸ್ಥೆಯಿಂದ ಪೂರ್ಣ ಬೆಳವಣಿಗೆಯನ್ನು ಹೇಗೆ ಹೊಂದುವದು ? ತಕ್ಕ ಆಹಾರವನ್ನು ಜೀರ್ಣಿಸಿಕೊಂಡು ಮಾಡುವ ಚಲನ ವಲನ ವ್ಯಾಯಾಮ ವಿಹಾರಗಳಿಂದ; ಮತ್ತು ಭೌತಶಾಸ್ತ್ರ ರಸಾಯನಶಾಸ್ತ್ರಗಳ ನಿಯಮಗಳಿಗನುಸಾರವಾಗಿ ಹಾಗೆಯೇ ಮನಸ್ಸಿನ ಪರಿಪಕ್ವ ವಿಕಾಸವು ಅದರ ಬೆಳವಣಿಗೆಯ ನಿಯಮಾನುಸಾರವಾಗಿ, ಮಾನಸಿಕ ಆಹಾರದ ಪೂರೈಕೆಯಿಂದ, ಮಾನಸಿಕ ಚಟುವಟಿಕೆ—ಇವೇ ಮೊದಲಾದವುಗಳಿಂದ.

ಮನಸ್ಸಿಗೆ ಈ ಆಹಾರವು ಅದು ವಾಸಿಸುವ ಸಮಾಜದ ಸಾಂಸ್ಕೃತಿಕ ಸಂಪತ್ತಿಯಿಂದ ದೊರೆಯುವದು. ಈ ಸಂಪತ್ತಿಯಲ್ಲಿ ವಿವಿಧ ವಿಜ್ಞಾನಗಳು, ಕಲಾಕೌಶಲ್ಯಗಳು, ತಾಂತ್ರಿಕ ವಿದ್ಯೆಗಳು, ಧರ್ಮ, ಆಚಾರ ಸಂಪ್ರದಾಯಗಳು, ನೈತಿಕ ಹಾಗು ನ್ಯಾಯದಾನ ವಿಧಾನಗಳು,

ಸಾಮಾಜಿಕ ಪದ್ಧತಿಗಳು, ಸಂಸ್ಥೆಗಳು, ವ್ಯಕ್ತಿಗಳ—ಇಷ್ಟೆಲ್ಲ ಬರುತ್ತವೆ, ಈ ದ್ರವ್ಯಮಯ ಹಾಗು ಅದ್ರವ್ಯಮಯ ಸಾಂಸ್ಕೃತಿಕ ಸಂಪತ್ತು ಹಲವು ಶ್ರೇಷ್ಠ ವ್ಯಕ್ತಿಗಳ ಮತ್ತು ಜನರ ಗುಂಪುಗಳ ಪ್ರಯತ್ನದ ಫಲವಾಗಿದೆ. ಅವುಗಳ ಉತ್ಪಾದಕರು ಅವುಗಳನ್ನು ತಮ್ಮ ಆಶೋತ್ತರಗಳ ಪ್ರತೀಕವಾಗಿ ಉಂಟು ಮಾಡಿರುವರೆಂದು ಅರ್ಥವಾಗುವದು. ಈ ಎಲ್ಲ ಸಂಸ್ಥೆ ರೀತಿ ನೀತಿಗಳಿಗೆ ಮಾನವನ ಉಚ್ಚ ಜೀವನವೇ ಗುರಿಯಾಗಿದೆ,

ಶಿಕ್ಷಣ ವಿಧಾನವನ್ನು ಕಾರ್ಯಗತ ಮಾಡುವಲ್ಲಿ ಈ ಸಾಂಸ್ಕೃತಿಕ ಧನವೇ ಮುಖ್ಯ ಸಾಧನ. ಮನುಷ್ಯನ ಮನಸ್ಸು-ಬುದ್ಧಿಗಳ ಬೆಳವಣಿಗೆಗೆ ಅವೇ ಅನ್ನ. ಸಮಾಜವು ತನ್ನಸ್ವಾಧೀನದಲ್ಲಿಟ್ಟ ಈ ಸಂಸ್ಕೃತಿಯ ಭಾಂಡಾರದ ಮಧ್ಯದಲ್ಲಿದ್ದುಕೊಂಡು ಮನುಷ್ಯನ ಬೆಳೆಯುತ್ತಿರುವ ಮನಸ್ಸು ಈ ಸಾಮಗ್ರಿಗಳನ್ನು ಬಳಸಿಕೊಂಡು ಅವುಗಳ ವಿನಿಯೋಗ ಮಾಡಿಕೊಳ್ಳಬೇಕು.

ಈ ಸಾಂಸ್ಕೃತಿಕ ದ್ರವ್ಯವೇ ವಿದ್ಯಾಭ್ಯಾಸದ ದ್ರವ್ಯವಾಗುವದು. ಸುಸಂಸ್ಕೃತ ಜನರು ಅವನ್ನು ಸಂಪಾದಿಸಿದ್ದರು. ಈಗ ಅವು ಹೊಸ ಪೀಳಿಗೆಯವರನ್ನು ಸುಸಂಸ್ಕೃತ ಮಾಡುವವು.

ಆದರೆ ಪ್ರತಿಯೊಬ್ಬ ವ್ಯಕ್ತಿಯು ಒಂದೇ ಬಗೆಯ ಸಾಮಗ್ರಿಯನ್ನು ತನ್ನ ಬೆಳವಣಿಗೆಗೆ ಉಪಯೋಗಿಸಿಕೊಳ್ಳಲಾರನು ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಮನುಷ್ಯನ ವ್ಯಕ್ತಿತ್ವದಲ್ಲಿ ಕಲ್ಪನೆಯನ್ನು ನಾವು ಪರಿಶೀಲಿಸಬೇಕು. ಮನುಷ್ಯರಿಂದ, ಪದಾರ್ಥಗಳಿಂದ ತುಂಬಿದ ಜಗತ್ತಿನ ನಾನಾ ಶಕ್ತಿಗಳ ಪ್ರಚೋದನೆಗೆ ಪ್ರತಿಯೊಬ್ಬ ವ್ಯಕ್ತಿಯು ತನ್ನದೇಆದ ಒಂದು ವಿಶಿಷ್ಟ ರೀತಿಯಲ್ಲಿ ಪ್ರತಿಕ್ರಿಯೆ ಮಾಡುವನು. ಆತನ ವಿಶಿಷ್ಟ ಶಾರೀರಿಕ ರಚನೆ, ಮಾನಸಿಕ ಪ್ರವೃತ್ತಿಗಳು ಇದಕ್ಕೆ ಕಾರಣ. ಈ ಪ್ರವೃತ್ತಿಗಳು ಅವನಲ್ಲಿ ಭಾವನೆ, ಸಂಕಲ್ಪ, ಕ್ರಿಯಾರೂಪವಾಗಿ ಕಾಣುವವು; ಮತ್ತು ತನ್ನ ಸುತ್ತಲಿನ ವಿಷಯಗಳನ್ನು ನೋಡಿ ತಿಳಿದು ಕೊಳ್ಳುವದರಲ್ಲಿಯೂ ಪರಿಣಮಿಸುವವು; ಈ ವೈಯಕ್ತಿಕ ಪ್ರತಿಕ್ರಿಯೆಯನ್ನು ನಾವು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಈ ಮೂಲಭೂತವಾದ ಮಾನವನ ವ್ಯಕ್ತಿತ್ವದಲ್ಲಿ ಬಹಳವಾಗಿ ಬದಲಾಗುವದೇ ಇಲ್ಲ; ಆದರೆ ಇದರ ಆಧಾರದ ಮೇಲೆ ಹೆಚ್ಚು ವಿಕಸಿತವಾದ ವ್ಯಕ್ತಿತ್ವವೊಂದು ಬೆಳೆದು ಬರಬಹುದು—ಚೈತನ್ಯರೂಪವಾದದ್ದು. ವ್ಯಕ್ತಿಗಳನ್ನು ಹಲವು ಬಗೆಯಾಗಿ ವರ್ಗೀಕರಣ ಮಾಡಲಿಕ್ಕೆ ಅನೇಕ ಮನೋವಿಜ್ಞಾನಿಗಳು ಪ್ರಯತ್ನಿಸಿದ್ದಾರೆ. ಅವುಗಳ ವಿವರಣೆಯ ಬಗೆಗೆ ನಾನು ಇಲ್ಲಿ ಹೇಳುವದಿಲ್ಲ. ಸಾಂಸ್ಕೃತಿಕ ದ್ರವ್ಯದಿಂದ ವ್ಯಕ್ತಿಯ ಮಾನಸಿಕ ವಿಕಾಸವಾಗಬೇಕಾದರೆ ಆ ಮನಸಿನ ವಿಶಿಷ್ಟ ರಚನೆಯು ಪೂರ್ತಿಯಾಗಿ ಇಲ್ಲವೆ ಕೆಲವಂಶದಿಂದಾದರೂ ಆ ದ್ರವ್ಯಕ್ಕೆ ಅನುರೂಪವಾಗಿದ್ದರೆ ಮಾತ್ರ ಸಾಧ್ಯವಾಗುವದೆಂಬ ಮಾತನ್ನು ನಾವು ವಿದ್ಯಾಭ್ಯಾಸದ ಸಂಘಟನೆ ಮಾಡಲಿಚ್ಛಿಸುವವರು ನೆನಪಿಡಬೇಕು. ನಮ್ಮ ಶೈಕ್ಷಣಿಕ ವಿಕಾಸದ ಭವಿಷ್ಯವು ವ್ಯಕ್ತಿಯ ಮನಸ್ಸಿಗೂ ಅದರ ಬೆಳವಣಿಗೆಗೆ ಉಪಯೋಗಿಸಿದ ಸಾಂಸ್ಕೃತಿಕ ದ್ರವ್ಯಕ್ಕೂ ಇರುವ ಹೊಂದಿಕೆಯ ಮೂಲಸಿದ್ಧಾಂತವನ್ನಾಶ್ರಯಿಸಿರುತ್ತದೆಂದು ನನಗೆ ಖಂಡಿತವೆನಿಸುತ್ತದೆ.

ಅಸಾಮಾನ್ಯ ಬುದ್ಧಿವಂತರಿಗೆ ಹೊಳೆಯುವಂತೆ ಸತ್ಯದ ಅರಿವು ಹೊಳೆಯುತ್ತಿದ್ದ ಗಾಂಧಿಜಿಯವರು ಕೈಕೆಲಸವನ್ನು ೧೪ ವರ್ಷ ವಯಸ್ಸಿನ ಹುಡುಗ ಹುಡಿಗೆಯರಿಗೆ ಶಿಕ್ಷಣದ ಮಾಧ್ಯಮವಾಗಿ ಮಾಡಿದರು. ಭಾರತೀಯ ವಿದ್ಯಾ ವ್ಯವಸ್ಥಾಪಕರಿಗೆ ಈ ಮೂಲಭೂತ ಸಿದ್ಧಾಂತವನ್ನು ಅಲಕ್ಷ್ಯ ಮಾಡಿದರೆ ಅನರ್ಥವಾಗುವದೆಂಬ ಅರಿವನ್ನು ಅವರು ಮಾಡಿಕೊಟ್ಟರು. ಅವರು ಈ ಶಿಕ್ಷಣ ಮಾಧ್ಯಮದ ತತ್ವವನ್ನು ವಿವರವಾಗಿ ತಿಳಿಸದಿದ್ದರೂ ಶೈಕ್ಷಣಿಕ ವಿಮರ್ಶೆಗೆ ಅವರು ಅದ್ಭುತ ಕಾಣಿಕೆಯನ್ನು ನೀಡಿದ್ದಾರೆಂದು ಹೇಳಬಹುದು. ಇದು ನಮ್ಮ ಮುಂದಿನ ಎಲ್ಲ ಶಿಕ್ಷಣಿಕ ಯೋಜನೆಗಳಲ್ಲಿಯೂ ಪ್ರಭಾವವನ್ನು ಬೀರುವದು. ಈ ವಯೋವಧಿಯ ಮುಖ್ಯ ಲಕ್ಷಣವೆಂದರೆ ಉಪಯುಕ್ತ ಚಟುವಟಿಕೆ ಎಂಬುದನ್ನು ಗಾಂಧಿಜಿಯವರು ಒತ್ತಿ ಹೇಳಿ ನಮಗೆ ಉಪಕಾರ ಮಾಡಿದ್ದಾರೆ. ಆಪಾತತಃ ಸುಸ್ಪಷ್ಟವಾಗಿರುವ ಈ ಸತ್ಯವನ್ನು ಅನೇಕ ವರ್ಷಗಳ ಅಭ್ಯಾಸ-ಆಲಸ್ಯದಿಂದ ನಾವು ಕಾಣದಾಗಿದ್ದೆವು. ಈ ಅವಧಿಯಲ್ಲಿ ಸಣ್ಣ ಮಕ್ಕಳು ತಮ್ಮ ಸ್ವಭಾವ ಪ್ರವೃತ್ತಿಯಿಂದ ಒಂದು ಗಳಿಗೆಯೂ ಸುಮ್ಮನೇ ಕೂಡಲಾರದ ಕಾರ್ಯ ನಡೆಯಿಸುವ ತುಂಬಉತ್ಸಾಹವುಳ್ಳವರಿರುವರು. ಅವರು ಕಲಿಯುವದು ತಮ್ಮ ಕೈಗಳಿಂದ, ಏನಾದರೊಂದು ಕಣ್ಣಿಗೆ ಕಾಣುವ, ಕೈಗಳಿಗೆ ಶ್ರಮವಾಗುವ, ಕೆಲಸ ಮಾಡುತ್ತಲೇ ಇರುವರೆಂದು ಹೇಳಬಹುದು. ಅವರು ಮಾನವ ಜನಾಂಗದ ಚರಿತ್ರವನ್ನೇ ಪುನಃ ತಮ್ಮ ಚಟುವಟಿಕೆಗಳಲ್ಲಿ ಪ್ರದರ್ಶಿಸುವಂತೆ

ನಮ್ಮ ವಿದ್ಯಾಸಂಸ್ಥೆಗಳೆಲ್ಲವೂ ಪ್ರಾತ್ಯಕ್ಷಿಕ ಜೀವಿಗಳ ಸಮಾಜಗಳಾಗುವವು. ಈ ವಿದ್ಯಾಸಂಸ್ಥೆಗಳು ಕೈಕಟ್ಟಿಕೊಂಡು ಕುಳಿತುಕೊಳ್ಳುವ ಸಂಸ್ಥೆಗಳಾಗಿರದೆ ದುಡಿದು ಅನುಭವಿಸುವ ಸಂಸ್ಥೆಗಳಾಗಿರುವದರಿಂದ ಅಂಥವುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರತ್ಯಕ್ಷಪ್ರಯೋಗಕ್ಕೆ ಸಂಶೋಧನೆಗೆ ದುಡಿಮೆಗೆ ಜೀವನಕ್ಕೆ ಬೇಕಾಗುವ ಸೌಕರ್ಯಗಳಿರುವವು. ಅವರು ಮಾಡುವ ಕೆಲಸವು ಶೀಲಸ್ವಭಾವವನ್ನು ರೂಪಿಸುವದು; ಜೀವಿಸುವ ರೀತಿಯು ಬಾಳನ್ನು ರೂಪಿಸುವದು; ಮತ್ತು ಎಲ್ಲ ಸಮರ್ಥಕಾರ್ಯಾಚರಣೆಯಂತೆ ಎಲ್ಲ ಪರಿಶುದ್ಧ ಬಾಳುವೆಯಂತೆ ಈ ಸಂಸ್ಥೆಗಳು ಸಹಕಾರಯುತ ಪ್ರಯತ್ನದ ಮಟ್ಟವನ್ನು ಎತ್ತರಿಸುವದರಲ್ಲಿ ತೊಡಗಿದ ಸಹಕಾರಿ ಸಮಾಜಸಂಸ್ಥೆಗಳ ಕುಟುಂಬಗಳಾಗುವವು. ಅದೇ ಕಾರ್ಯಾರಂಭಕ್ಕೆ ಇಳಿದಾಗಲೇ ಜ್ಞಾನದ ಯಥಾವಾದ ಮೌಲ್ಯವು ಅಸ್ತಿತ್ವದಲ್ಲಿ ಬರುವದು. ಒಬ್ಬ ಆಂಗ್ಲ ಶಿಕ್ಷಣತಜ್ಞನು ಹೇಳಿದಂತೆ, "ರಹಸ್ಯವಾದ ಬಚ್ಚಿಟ್ಟುಕೊಂಡ ಜ್ಞಾನವು ಜನರ ಅಲ್ಪ ತಂಡವೊಂದರ ಸೊತ್ತಾಗಿಯೇ ಇದ್ದರೆ ಆ ಸಮಾಜದಲ್ಲಿ ಜ್ಞಾನವು ನಿರರ್ಥಕವೇ! ಸಮಾಜದ ಜೀವನ ಉದ್ಯೋಗಗಳಲ್ಲಿ ಅದೇ ಕಾಲ ಕಾಲಕ್ಕೆ ಬೆರೆತುಕೊಂಡು ಬರುತ್ತಿದ್ದರೆ ಮಾತ್ರ ಜ್ಞಾನವು ಮಾನವನನ್ನು ದುರ್ಬಲತೆ ದಾಸ್ಯಗಳಿಂದ ವಿಮೋಚನೆ ಗೈಯುವದಕ್ಕೆ ಆತನಿಗೆ ನವಚೈತನ್ಯ ಪ್ರಧಾನಕ್ಕೆ ಉಪಕಾರಿಯಾಗಬಲ್ಲದು" ನಮ್ಮ ವಿದ್ಯಾಸಂಸ್ಥೆಗಳೆಲ್ಲವೂ ಇಂತಹ ವಿಮೋಚಕ ಜ್ಞಾನಮಂದಿರಗಳೂ, ಇಂತಹ ಸಾರ್ಥಕ ಸಂಪನ್ನ ಸಮರ್ಥಜೀವನವನ್ನು ಜೀವಿಸುವ ನಾಂಘಿಕ ಸಮಾಜಗಳೂ ಆಗಲಿಕ್ಕೆ ಹೆಣಗುವವು.

ಇದು ಕೆಲವರಿಗೆ ಕನಸಾಗಿ ಕಾಣಬಹುದು. ಇನ್ನು ಕೆಲವರಿಗೆ ಅದು ಮುಗಿಲಿಗೆ ಮುಟ್ಟುವ ಅಶಕ್ಯ ಸಾಹಸದಂತೆ ತೋರಬಹುದು. ಅದು ಅನತಿದೂರದಲ್ಲಿರುವ ವಿದ್ಯಾಕಟ್ಟಡದ ಯಥಾರ್ಥಸ್ವರೂಪ ನಿರೂಪಣೆಯೆಂದು ನಾನು ತಿಳಿಯುವೆನು, ಯಾಕೆಂದರೆ ಈಗಾಗಲೇ ಎಲ್ಲೆಡೆಗೆ ಹರಡಿದ ವಿಚಾರಗಳ ಪರಿಪಾಕವು ಅದು; ನಮ್ಮ ವಿದ್ಯಾಭ್ಯಾಸ ಪದ್ಧತಿಯನ್ನು ಖಂಡಿತವಾಗಿ ರೂಪಾಂತರಿಸುವದು ವಿದ್ಯಾಲಯಗಳು ಹೇಗೋ ಹಾಗೆ ಬೆಳೆದು ಬಂದ ಸಂಸ್ಥೆಗಳಾಗದೆ ಸುಸಂಗತವಾದ ಸಮನ್ವಿತವಾದ ಏಕರೂಪವು ಅವುಗಳಿಗೆ ಬರುವದು. ಇದುವರೆಗೆ ಅವು ಇದ್ದ ಹಾಗೆ ಕೇವಲ ತಾತ್ವಿಕ, ಏಕಾಂಗಿಯಾದ ಬುದ್ಧಿಪ್ರಧಾನವಾದ ಸಂಸ್ಥೆಗಳಾಗಿ ಉಳಿಯದೆ ಜೀವನೋಪಯುಕ್ತವಾದ ಬಹುಮುಖವಾದ ಮಾನವತೆಯ ಸಂಸ್ಥೆಗಳಾಗುವವು. ಕೈಕಟ್ಟಿಕೊಂಡು ಸುಮ್ಮನೆ ಕುಳಿತು ಕೇಳಿ ಸ್ವೀಕರಿಸುವ ಕ್ಷೇತ್ರಗಳಾಗದೆ ಭರದಿಂದ ಸ್ವಪ್ರೇರಣೆಯಿಂದ ನಡೆಯುವ ಕಾರ್ಯಾಲಯಗಳಾಗುವವು. ಅವು ಬೌದ್ಧಿಕ ಅಸುಸಂಗತವಾದ ವಿಷಯಜ್ಞಾನದ ಸ್ಥಳಗಳಾಗದೆ ಪರಿಪೂರ್ಣ ಮನಸ್ಸಿನ ತರಬೇತಿಯ ತಪೋವನಗಳಾಗುವವು; ಮಾಹಿತಿಯನ್ನು ಕೂಡಿಹಾಕುವ ಸ್ಥಾನಗಳಾಗದೆ ಸಾಂಸ್ಕೃತಿಕ ಸಂಪತ್ತಿನಲ್ಲಿ ಅಡಕವಾದ ಮೌಲ್ಯಗಳನ್ನು ಜೀವನದಿಂದ ಅನುಭವಿಸುವ ಪುಣ್ಯ ಭೂಮಿಗಳಾಗುವವು; ಅವು ವೈಯಕ್ತಿಕ ಸ್ವಾರ್ಥಸಾಧನೆಯ ಮಾರುಕಟ್ಟೆಗಳಾಗದೆ ಸಹಕಾರಯುತ ಸಾಮಾಜಿಕ ಸತತ ಪ್ರಯತ್ನದ ಸಂಸಾರಗಳಾಗುವವು.

ಇಷ್ಟೆಲ್ಲ ಕೇಳಿಯೂ ನಾನು ಇನ್ನೂ ಕನಸಿನಲ್ಲಿಯೇ ಇದ್ದಂತೆ ನಿಮಗೆ ಕಂಡರೆ, ನನ್ನ ಕನಸು ನನಸಾಗಲೆಂದು ನೀವು ಬಯಸುವದಿಲ್ಲವೇ?

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ
ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ
ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿ]

೪ ರಿಂದ ೭ ನೇಯ ವರ್ಗದ ವರೆಗಿನ
ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ: ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ:—

ಸಾಯಿ ಪಬ್ಲಿಶಿಂಗ್ ಹಾವುಸ್,
ವಿಜಯ ರೋಡ, ಧಾರವಾಡ.

ಭಾರತದಲ್ಲಿ ಎಲ್ಲಕ್ಕೂ ದೊಡ್ಡದಾದ
ಶರಾವತಿ ಜಲವಿದ್ಯುತ್ ಯೋಜನೆ

(ಲಿಂಗನಮಕ್ಕಿ ಅಣೆಕಟ್ಟಿನ ಪ್ರಾರಂಭೋತ್ಸವ)

ಲೇಖಕರು : ಶ್ರೀ ಶಿಂತ್ರಿ ಬಸಪ್ಪನವರು

ಮೊದಲ ಮಾತು

ದಿನಾಂಕ ೫-೨-೧೯೫೮ರ ಶುಭಮುಹೂರ್ತದಲ್ಲಿ ಮುಂಜಾವಿನ ಆಲ್ಹಾದಕರವಾದ ಮತ್ತು ಮಂಜಿನಿಂದ ತುಂಬಿದ ಪ್ರೇಮಮಯ ವಾತಾವರಣದಲ್ಲಿ ಕೇಂದ್ರ ಸರಕಾರದ ನೀರಾವರಿ ಹಾಗೂ ವಿದ್ಯುತ್ ಶಾಖೆಯ ಮಂತ್ರಿಗಳಾದ ಶ್ರೀ ಎಸ್. ಕೆ. ಪಾಟೀಲರವರು ಶರಾವತಿ-ಕೊಳ್ಳದಲ್ಲಿರುವ ಲಿಂಗನಮಕ್ಕಿ ಹಳ್ಳಿಯ ಪಕ್ಕದಲ್ಲಿ ಮೂರು ಬುಟ್ಟಿ ಕಾಂಕ್ರೀಟನ್ನು ಸ್ವತಃ ಸುರುವಿ ಅದರಲ್ಲಿ ಈ ಭವ್ಯ ಯೋಜನೆಯ ಅಡಿಗಲ್ಲನ್ನು ಭದ್ರವಾಗಿ ನೆಟ್ಟು ಕಿಕ್ಕಿರಿದು ನೆರೆದಿದ್ದ ಜನಸ್ತೋಮದ ಮಧ್ಯದಲ್ಲಿ ಅತ್ಯಂತ ವಿಜೃಂಭಣೆಯಿಂದ ಉದ್ಘಾಟನವನ್ನು ಜರುಗಿಸಿದರಷ್ಟೇ. ಈ ಸಮಾರಂಭದ ಅಧ್ಯಕ್ಷತೆಯನ್ನು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರು ವಹಿಸಿದ್ದರು. ನಮ್ಮ ರಾಜ್ಯದ ಲೋಕೋಪಯೋಗಿ ಶಾಖೆಯ ಮಂತ್ರಿಗಳಾದ ಶ್ರೀ ಎಚ್. ಕೆ. ವೀರಣ್ಣಗೌಡರು ಸ್ವಾಗತ ಭಾಷಣವನ್ನು ಮಾಡಿದರು. ಮುಖ್ಯ ಅತಿಥಿಗಳಾದ ಶ್ರೀ ಪಾಟೀಲರವರು ೬೦ ಕೋಟಿ ರೂಪಾಯಿಗಳ ಅಂದಾಜಿನ ವೆಚ್ಚದ ಈ ಅದ್ಭುತ ಯೋಜನೆಯು ಐದಾರು ವರುಷಗಳಲ್ಲಿ ಮುಗಿಯಬಹುದೆಂದು ಹೇಳಿದರು. ಇಲ್ಲಿ ಉತ್ಪನ್ನವಾಗುವ ವಿದ್ಯುತ್ತು ಅತ್ಯಂತ ಅಗ್ಗದರದಲ್ಲಿ ಲಭಿಸುವದು. ಪ್ರತಿಯೊಂದು ಕಿಲೊವ್ಯಾಟಿನ ಕಿಮ್ಮತ್ತು (ಕಿಲೊ = ಸಾವಿರ; ವ್ಯಾಟ = ವಿದ್ಯುತ್ತನ್ನು ಅಳೆಯುವದೊಂದು ಅಳತೆ) ೫೩ ರೂಪಾಯಿಗಳಷ್ಟಾಗುವದು; ಅಂದರೆ ಒಂದು ಯುನಿಟ್ಟಿಗೆ ಮುಕ್ಕಾಲು ನಯಾಪೈಸಾ ಸಹ ಬೀಳುವದಿಲ್ಲ. ಈ ಯೋಜನೆಯಿಂದ ಗೆರಸೊಪ್ಪೆಯಲ್ಲಿಯ ಮಹಾತ್ಮಾ ಗಾಂಧಿ ಜಲವಿದ್ಯುದಾಗರಕ್ಕೆ ಆವ ತರಹದ ಗಂಡಾಂತರವಿಲ್ಲವೆಂದೂ ಭರವಸೆಯನ್ನಿತ್ತರು. ಅಣೆಕಟ್ಟನ್ನು ಕಟ್ಟುವದರಲ್ಲಿ ಈ ರಾಜ್ಯದ ಇಂಜನೀಯರರು ಹೆಸರನ್ನು ಗಳಿಸಿಕೊಂಡದ್ದನ್ನುಲ್ಲೇಖಿಸಿ ಗೊತ್ತುಪಡಿಸಿದ ಕಾಲಾವಧಿಗಿಂತ ಮುಂಚಿತವಾಗಿಯೇ ಈ ಯೋಜನೆಯನ್ನು ಅವರು ಪೂರ್ತಿಗೊಳಿಸುವರೆಂಬ ಬಲವಾದ ಆಶೆಯನ್ನು ತಾವು ತಳೆದಿರುವದಾಗಿ ಸಾರಿದರು. ಭಾಕ್ರಾ-ನಾಂಗಲ್ ಮೊದಲಾದ ಯೋಜನೆಗಳಂತೆ ಈ ಯೋಜನೆಯ ಹೆಸರೂ ಪ್ರತಿಯೊಬ್ಬ ಭಾರತೀಯ ಮಗುವಿನ ನಾಲಿಗೆಯ ತುದಿಯ ಮೇಲೆ ಕುಣಿದಾಡಹತ್ತುವದೆಂದು ಹೇಳಿ, ಈ ಯೋಜನೆಗೆ ಕೇಂದ್ರ ಸರಕಾರವು ಅಗ್ರಪ್ರಾಶಸ್ತ್ಯವನ್ನು ಕೊಟ್ಟಿದುದರ ಔಚಿತ್ಯವನ್ನು ವಿವರಿಸಿ, ತಮ್ಮ ಭಾಷಣವನ್ನು ಮುಗಿಸಿದರು. ಮುಖ್ಯಮಂತ್ರಿಗಳು ನಮ್ಮ ರಾಜ್ಯದಲ್ಲಿ ವಿದ್ಯುತ್ತಿನ ಬೇಡಿಕೆಯು ಇತ್ತಿತ್ತಲಾಗಿ ಹೆಚ್ಚಾಗಿದ್ದರಿಂದ ಅದನ್ನು ಪೂರೈಸಲು ಈ ಯೋಜನೆಯ ಅವಶ್ಯಕತೆಯು ಬಹಳಷ್ಟಿತ್ತೆಂದು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದರು.

ಸ್ಥಳ ಮತ್ತು ರಚನೆ

ಈ ಯೋಜನೆಯು ಗೆರಸೊಪ್ಪೆಯಿಂದ ಸುಮಾರು ಆರು ಮೈಲುಗಳ ಮೇಲಿರುವ ಲಿಂಗನಮಕ್ಕಿ ಎಂಬ ಹೆಸರಿನ ಹಳ್ಳಿಯ ಹತ್ತರ ಕಟ್ಟಲ್ಪಡುವದು. ಗೆರಸೊಪ್ಪೆಯಲ್ಲಿಯ ಮಹಾತ್ಮಾ ಗಾಂಧಿ ಜಲವಿದ್ಯುದಾಗರವು ೧೯೪೮ರಲ್ಲಿ ಪೂರ್ತಿಗೊಳಿಸಲ್ಪಟ್ಟಿದೆಯಷ್ಟೇ, ಆ ವಿದ್ಯುದಾಗರಕ್ಕೆ ಲಿಂಗನಮಕ್ಕಿಯ ಆಣೆಕಟ್ಟಿನಿಂದ ಆವ ಭಯವೂ ಇಲ್ಲ. ಕಾರಣವೆಂದರೆ, ಆ ಪ್ರದೇಶದಲ್ಲಿ ಅತಿ ಮಳೆಯಾಗುವದರಿಂದ ಈ ಎರಡೂ ಯೋಜನೆಗಳಿಗೆ ನೀರು ಸಾಕಾಗಿ ಹೆಚ್ಚಾದ ನೀರು [redacted] ಅಳತೆಗೆಟ್ಟು ಮುಂದೆ ಅರಬೀ ಸಮುದ್ರಕ್ಕೆ ಸಾಗುವದು. ಆದುದರಿಂದ ನೀರಿನ ಪುರವಠೆಯು ಕಡಿಮೆಯಾದೀತೆಂಬ ಅಂಜಿಕೆಗೆ ಎಳ್ಳಷ್ಟೂ ಆಸ್ಪದವಿಲ್ಲ. ಈ ಆಣೆಕಟ್ಟಿನ ಎತ್ತರವು ನದಿಯ ಪಾತಳಿಯ ಮೇಲೆ ೧೮೪ ಅಡಿಯಷ್ಟಾಗುವದು. ಮತ್ತು ಮೇಲ್ಪದಿಯ ಮೇಲೆ ಅದರ ಉದ್ದಳತೆಯು ೭೪೯೦ ಅಡಿಯಷ್ಟಾಗುವದು. ಅದನ್ನು ಕಲ್ಲು ಮತ್ತು ಗಚ್ಚುಗಳಿಂದ ಕಟ್ಟಲಾಗುವದು. ಅದರ ನೆತ್ತಿಯ ಮೇಲೆ ೧೬ ಅಡಿ ಅಗಲವುಳ್ಳ ರಸ್ತೆಯನ್ನು ರಚಿಸಲಾಗುವದು. ವಿದ್ಯು

ತ್ತನ್ನು ಹುಟ್ಟಿಸಲು ಒಟ್ಟು ಹತ್ತು ಯಂತ್ರಗಳು ರಚಿಸಲ್ಪಡುವವು. ಪ್ರತಿಯೊಂದು ಯಂತ್ರವು ೮೯೧೦೦ ಕಿಲೋವ್ಯಾಟ ವಿದ್ಯುತ್ತನ್ನು ಉತ್ಪಾದಿಸುವದು. ಹತ್ತೂ ಯಂತ್ರಗಳು ಕೆಲಸ ಮಾಡಲು ಪ್ರಾರಂಭಿಸಿದವೆಂದರೆ ೮,೯೧,೦೦೦ ಕಿಲೊ ವ್ಯಾಟಿನಷ್ಟು ವಿದ್ಯುತ್ತು ಹೊರಡುವದು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ೭೩ ಕೋಟಿ ರೂಪಾಯಿಗಳನ್ನು ಈ ಯೋಜನೆಗೋಸ್ಕರ ಕೇಂದ್ರ ಸರಕಾರವು ಮೀಸಲಾಗಿಟ್ಟಿದೆ. ಇದರ ರಚನೆಯನ್ನು ಆರ್ಥಿಕ ತೊಂದರೆಯ ಮೂಲಕ ಹಂತ ಹಂತವಾಗಿ ಪೂರೈಸಲಾಗುವದು. ಈಗಿನ ಪಂಚವಾರ್ಷಿಕ ಯೋಜನೆಯ ಕೊನೆಗೆ ೧,೭೮,೦೦೦ ಕಿಲೊವ್ಯಾಟಿನಷ್ಟು ವಿದ್ಯುತ್ತನ್ನು ಹುಟ್ಟಿಸುವ ಯಂತ್ರಗಳನ್ನು ರಚಿಸಲಾಗುವದು. ಉಳಿದ ಯಂತ್ರಗಳನ್ನು ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ತಿಗೊಳಿಸಲಾಗುವದು. ಸದ್ಯಕ್ಕೆ ನಮ್ಮ ರಾಜ್ಯದಲ್ಲಿ ಶಿವಸಮುದ್ರಂ. ಶಿಂಷಾಪೂರ, ಮಹಾತ್ಮಾ ಗಾಂಧಿ ಹೈಡ್ರೊ ಇಲೆಕ್ಟ್ರಿಕ್ ವರ್ಕ್ಸ, ತುಂಗಭದ್ರಾ, ಇವುಗಳಲ್ಲಿ ಹುಟ್ಟುವ ವಿದ್ಯುತ್ತು ನಮ್ಮ ರಾಜ್ಯದ ಬೇಡಿಕೆಯ ಒಂದಂಶದಷ್ಟು ಸಹ ಪೂರೈಸಲು ಅಸಮರ್ಥವಾಗಿವೆ. ಇದರ ಮೇಲಿಂದ ಈ ಯೋಜನೆಯನ್ನು ಕೇಂದ್ರ ಸರಕಾರವು ಕೈಗೊಂಡಿರುವದರ ಉದ್ದೇಶವು ಸುಸ್ಪಷ್ಟವಾದದ್ದೇ ಇದೆ. ಭಾರತದಲ್ಲಿರುವಷ್ಟು ಜಲ ಮತ್ತು ವಿದ್ಯುತ್ತಿನ ಸಂಗ್ರಹವು ಜಗತ್ತಿನಲ್ಲಿ ಬೇರಾವ ರಾಷ್ಟ್ರದಲ್ಲಿಲ್ಲ. ಭಾರತಮಾತೆಯು ನಮಗೆ ಕಲ್ಪಿಸಿದ ಅಮೂಲ್ಯವಾದ ಕೊಡುಗೆಯು ಇದು. ನಮ್ಮ ಪೂರ್ವಜರು ಅಗ್ನಿ ಮತ್ತು ಜಲ ಇವುಗಳನ್ನು ಏಕೆ ಆರಾಧಿಸುತ್ತಿದ್ದರೆಂಬುದನ್ನು ಈಗಿನ ವಿಜ್ಞಾನ ಯುಗದಲ್ಲಿಯ ನಾವು ಚನ್ನಾಗಿ ಅರಿತುಕೊಳ್ಳಬೇಕಾಗಿದೆ. ವಿಜ್ಞಾನವೇ ನಮಗೆ ಆಧ್ಯಾತ್ಮಿಕದ ದಾರಿಯನ್ನು ಬೊಟ್ಟು ಮಾಡಿ ತೋರಿಸುತ್ತಿದೆ. ಉದ್ದವಾದ ನದಿಗಳು ನೀರಾವರಿಗೂ ಚಿಕ್ಕ ಹೊಳೆಗಳು ವಿದ್ಯುತ್ತಿಗೂ ಬಹಳಷ್ಟು ಉಪಯುಕ್ತವಾಗಿವೆ. ಶರಾವತಿಯು ಕೇವಲ ೮೨ ಮೈಲುದ್ದದ ಚಿಕ್ಕ ಹೊಳೆಯಾಗಿದ್ದರೂ, ಅದರಲ್ಲಿ ಎಂತಹ ಪ್ರಚಂಡ ಶಕ್ತಿಯ (ವಿದ್ಯುತ್ತಿನ) ಸಂಗ್ರಹವಿದೆಯೆಂಬುದನ್ನು ಕಂಡುಕೊಂಡು ನಿಸರ್ಗ ದೇವಿಯನ್ನು ನಾವು ಎಷ್ಟು ಕೊಂಡಾಡಿದರೂ ಕಡಿಮೆಯೇ ಸೈ.

ಜಲಸಂಚಯ

ಲಿಂಗನಮಕ್ಕಿಯ ಅಣೆಕಟ್ಟಿನಿಂದ ಹಿಡಿದಿಡಲ್ಪಡುವ ನೀರಿನ ಸಮೂಹವು ಸುಮಾರು ೧೫೩ ಚದುರು ಮೈಲುಗಳಷ್ಟಾಗುವದೆಂದು ಅಂದಾಜಿದೆ. ಅದರಲ್ಲಿ ಮುಳುಗುವ ವಿಸ್ತಾರವಾದ ಭೂಭಾಗದಲ್ಲಿ ಸಾಗುವಳಿ ಕ್ಷೇತ್ರವು ಅತ್ಯಲ್ಪ ಪ್ರಮಾಣದಲ್ಲಿದ್ದು ಬಹಳಷ್ಟು ಭಾಗವು ಅರಣ್ಯಮಯವಾಗಿದೆ. ಆದರೂ ಹಲವಾರು ಹಳ್ಳಿಗಳು ಅದರಲ್ಲಿ ಮುಳುಗಲಿವೆ. ಅಲ್ಲಿಯ ನಿರ್ವಾಸಿತರಾಗುವ ಜನರಿಗೆ ಬೇರೆಡೆಯಲ್ಲಿ ಪುನರ್ನಿವೇಶನಗೊಳಿಸುವ ಕಾರ್ಯವನ್ನು ಸರಕಾರವು ಈಗಾಗಲೇ ಪ್ರಾರಂಭಿಸಿದೆ. ಅಣೆಕಟ್ಟನ್ನು ಕಟ್ಟುವಲ್ಲಿ ಕಾರ್ಮಿಕರಿಗೋಸ್ಕರ ವಸತಿ ಹಾಗೂ ಜೀವನಾವಶ್ಯಕ ಸೌಕರ್ಯಗಳನ್ನು ಒತ್ತರದಿಂದ ಪೂರೈಸಲು ತಕ್ಕ ಕ್ರಮಗಳು ಈಗಾಗಲೇ ಕೈಕೊಳ್ಳಲ್ಪಟ್ಟಿವೆ. ಅಣೆಕಟ್ಟನ್ನು ರಚಿಸುವ ಕಾರ್ಯವು ಮುಗಿದ ನಂತರ ಅದರಿಂದ ತಡೆದು ಹಿಡಿಯಲ್ಪಡುವ ಜಲಸಂಚಯವು ಒಂದು ಸಾಗರದಂತೆ ಕಾಣಿಸುವದು. ಈ ಜಲಾಶಯದಲ್ಲಿ ಒಟ್ಟು ೧೮೦೦೦೦ ಘನ ಅಡಿ ನೀರು ನಿಲ್ಲುವದು. ಅದು ಕೃಷ್ಣರಾಜಸಾಗರದ ನಾಲ್ಕು ಪಟ್ಟು, ಮೆಟ್ಟೂರು ಜಲಾಶಯದ ಎರಡು ಪಟ್ಟು ಆಗುವದು. ತುಂಗಭದ್ರಾ ಜಲಾಶಯಕ್ಕಿಂತ ಇದು ಹಿರಿದೆನಿಸಿಕೊಳ್ಳುವದು. ಲಿಂಗನಮಕ್ಕಿಯ ಅಣೆಕಟ್ಟು ಭಾರತದಲ್ಲಿಯೇ ಏಕೆ ಜಗತ್ತಿನಲ್ಲಿಯೇ ಅತಿದೊಡ್ಡ ಅಣೆಕಟ್ಟೆಂಬ ಪ್ರಸಿದ್ಧಿಯನ್ನು ಪಡೆಯುವದು ಖಂಡಿತ. ನಾಮಾಂಕಿತ ಇಂಜಿನಿಯರರನ್ನು ಇದರ ನಿರ್ಮಾಣಕ್ಕೋಸ್ಕರ ನಮ್ಮ ರಾಜ್ಯ ಸರಕಾರವು ನಿಯಮಿಸಿದೆ. ಅನುಭವಿಕ ಇಂಜಿನೀಯರರು ಅದರಲ್ಲಿ ಕೆಲಸ ಮಾಡುತ್ತಿರುವದರಿಂದ ಅದು ಶೀಘ್ರವಾಗಿ ಮುಕ್ತಾಯವನ್ನು ಹೊಂದುವದರಲ್ಲಿ ಸಂದೇಹವಿಲ್ಲ.

ಕೊನೆಯ ಮಾತು

ಸ್ವಾತಂತ್ರ್ಯದ ನಂತರ ನಮ್ಮ ರಾಷ್ಟ್ರವು ನೈಸರ್ಗಿಕ ಸಂಪತ್ತುಗಳಲ್ಲೊಂದಾದ ಜಲಸಂಪತ್ತಿನ ಉಪಯೋಗವನ್ನು ಚನ್ನಾಗಿ ಮಾಡಿಕೊಳ್ಳಲು ಪ್ರಾರಂಭಿಸಿದೆಯೆಂಬುದು ಭಾರತೀಯರಿಗೆಲ್ಲ ದೊಡ್ಡದೊಂದು ಹೆಮ್ಮೆಯ ಮಾತು. ಸಹ್ಯಾದ್ರಿ ಪರ್ವತದಲ್ಲಿ ಹುಟ್ಟಿ ಪಶ್ಚಿಮವಾಹಿನಿಯಾಗಿ ಅರಬಿ ಸಮುದ್ರಕ್ಕೆ ಕೂಡುವ ಶರಾವತಿಯಂತಹ ಇನ್ನೂ ಹಲವಾರು ಚಿಕ್ಕ ಹೊಳೆಗಳಿವೆ. ಅವುಗಳಿಗೆ ಸಹ ತಕ್ಕ ಸ್ಥಳಗಳಲ್ಲಿ ಒಡ್ಡುಗಳನ್ನು ಕಟ್ಟಿ ಜಲವಿದ್ಯುತ್ತನ್ನುತ್ಪಾದಿಸುವದು ಶಕ್ಯವಿದೆಯೆಂದು ಸಂಶೋಧನ ಶಾಖೆಯವರು ಕಂಡು ಹಿಡಿದಿದ್ದಾರೆ. ಕರ್ನಾಟಕ ಮಾತೆಯು ನಮ್ಮ ರಾಷ್ಟ್ರಕ್ಕೆ ನೀಡಿದ ಜಲಸಂಪತ್ತಿನ ಕೊಡುಗೆಯ ಉಪಯೋಗವನ್ನು ನಮ್ಮ ರಾಷ್ಟ್ರವು

ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಸಂಪೂರ್ಣವಾಗಿ ಮಾಡಿಕೊಳ್ಳುವದೆಂದು ನಾವು ಹಾರೈಸುತ್ತೇವೆ. ಅತ್ಯಂತ ಕಡಿಮೆ ವೆಚ್ಚದಲ್ಲಿ ಅತ್ಯಧಿಕ ಶಕ್ತಿಯನ್ನು ಹುಟ್ಟಿಸುವಲ್ಲಿ ಈ ಶರಾವತಿ ಯೋಜನೆಯು ನಮ್ಮ ದೇಶದಲ್ಲಿ ಅಪೂರ್ವವಾದದ್ದು. ಒಂದು ಯುನಿಟ್ಟಿಗೆ ಮುಕ್ಕಾಲು ನಯಾಪೈಸಾ ಸಹ ಬೀಳುವದಿಲ್ಲವೆಂದು ಮೇಲೆ ಹೇಳಿದೆಯಷ್ಟೇ. ಇಷ್ಟೊಂದು ಅಗ್ಗದರದಿಂದ ಶಕ್ತಿಯು ಪೂರೈಸಲ್ಪಟ್ಟರೆ ನಮ್ಮ ರಾಜ್ಯದಲ್ಲಿಯ ಎಲ್ಲ ತರಹದ ಉದ್ಯಮಗಳಿಗೆ ಹೇಳತೀರದಷ್ಟು ಲಾಭವಾಗುವದು. ನಮಗೆ ಒಂದು ವೇಳೆ ಹೆಚ್ಚಾಗಿ ಉಳಿಯಬಹುದಾದ ಶಕ್ತಿಯನ್ನು ನೆರೆಹೊರೆಯ ರಾಜ್ಯಗಳಿಗೆ ಕೊಟ್ಟು ಅವುಗಳಿಗೆ ನೆರವಾಗಲು ಅನುಕೂಲವಾಗುವದು. ಆ ಸುದಿನಗಳು ಬೇಗನೆ ಪ್ರಾಪ್ತವಾಗಲೆಂದು ಹಾರೈಸುತ್ತೇವೆ.

— ಜಯ ಹಿಂದ —

ಮೂಲ ಶಿಕ್ಷಣದ ಬಗೆಗೆ ಗಾಂಧೀಜಿಯವರ ವಿಚಾರಗಳು

ಲೇಖಕರು : **ಶ್ರೀ ಮ. ಗು. ಹಂದ್ರಾಳ,** ಬಿ.ಎ.(ಆನರ್ಸ), ಎಂ.ಎಡ್. (ದ್ವಿತೀಯ ವರ್ಗ)
ಎ. ಓ. ಡಿ. ಸ್ಕೂ. ಬೋ. ಧಾರವಾಡ.

ಪೂಜ್ಯ ಗಾಂಧೀಜಿಯವರು ಮೊಟ್ಟ ಮೊದಲು ೧೯೩೭ನೇ ಜುಲೈ ತಿಂಗಳಲ್ಲಿ ಹರಿಜನ ಪತ್ರಿಕೆಯಲ್ಲಿ ಶಿಕ್ಷಣದ ಬಗೆಗೆ ತಮ್ಮ ವಿಚಾರಗಳನ್ನು ಈ ರೀತಿ ಪ್ರಕಟ ಮಾಡಿದರು.

"ಶಿಕ್ಷಣದಿಂದ ಮಗುವಿನ ಸಮನ್ವಿತ ವಿಕಾಸವಾಗಬೇಕು. ಸಾಕ್ಷರತೆಯು ಶಿಕ್ಷಣವಲ್ಲ. ಕೈಗಾರಿಕೆಯ ಮುಖಾಂತರ ಮಗುವಿನ ಶಿಕ್ಷಣವು ಆರಂಭವಾಗಬೇಕು. ಮಕ್ಕಳ ಕೆಲಸದಿಂದುಂಟಾದ ಸಾಮಾನುಗಳನ್ನು ಸರಕಾರವು ಕೊಂಡಲ್ಲಿ ಶಿಕ್ಷಣವು ಸ್ವಾವಲಂಬಿಯಾಗಬಲ್ಲದು. ಇಂಥ ಶಿಕ್ಷಣದ ಯೋಜನೆಯನ್ವಯ ಮಗುವಿನ ಮನಸ್ಸು ಹಾಗು ಆತ್ಮ ಪೂರ್ತಿ ವಿಕಾಸ ಹೊಂದುವವು. ಕೈಗಾರಿಕೆಯನ್ನು ಯಾಂತ್ರಿಕವಾಗಿ ಕಲಿಸದೆ, ಶಾಸ್ತ್ರಬದ್ಧವಾಗಿ ಕಲಿಸಬೇಕು. ಪ್ರತಿಯೊಂದು ವಿಧಾನದ ಕಾರ್ಯಕಾರಣ ತಿಳಿಯಬೇಕು. ಆತ್ಮವಿಶ್ವಾಸವಿಲ್ಲದೆ, ಹೀಗೆ ನಾನು ಬರೆದಿಲ್ಲ; ಅನುಭವದ ಹಿನ್ನೆಲೆಯಿದೆ."

(ಹರಿಜನ, ತಾರೀಖು ೩೧-೭-೧೯೩೭)

ಈ ಮಾತುಗಳಲ್ಲಿ ಹೊಸ ಶಿಕ್ಷಣದ ಎಷ್ಟೋ ಅಂಶಗಳು ಬಹು ಸೂಕ್ಷ್ಮವಾಗಿ ಸೇರಿಕೊಂಡಿವೆ. ಅವು ಸೂತ್ರರೂಪದಲ್ಲಿ ನಿರೂಪಿಸಲ್ಪಟ್ಟಿವೆ. ಸಾಮಾನ್ಯ ಜನತೆಗೆ ಅವು ತೀವ್ರವಾಗಿ ಅರ್ಥವಾಗುವದಿಲ್ಲ. ಯಾಕೆಂದರೆ ಈ ವಿಚಾರಗಳು ಗಾಂಧೀಜಿಯವರ ದರ್ಶನದ ಫಲವಾಗಿ ಪರಿಣಮಿಸಿವೆ. ಅವರ ದರ್ಶನದ ವಾಸ್ತವತೆ, ಸಹಜತೆ, ಸತ್ಯತೆಗಳನ್ನು ಅರಿಯಲು ತಾಳ್ಮೆ, ವಿದ್ಯಾವ್ಯಾಸಂಗ, ಹೊಸ ಸಂಗತಿಗಳನ್ನು ವಿಶಾಲ ದೃಷ್ಟಿಯಿಂದ ನೋಡುವ ಬುದ್ಧಿ ಸಾಮರ್ಥ್ಯ ಮೊದಲಾದ ಒಳ್ಳೇ ಗುಣಗಳು ಬೇಕಾಗುತ್ತವೆ. ಇವಿಲ್ಲದಿದ್ದರೆ ಸಾಶಂಕ ದೃಷ್ಟಿ ಕೆಲವರಲ್ಲಿ ಹುಟ್ಟುತ್ತದೆ. ಇದಲ್ಲದೆ ಆ ದರ್ಶನದ ಸ್ವೈಜತೆಯನ್ನು ತಿಳಿಯಲು ಕುತೂಹಲರಾಗಿ ವಿರೋಧವನ್ನು ವ್ಯಕ್ತ ಮಾಡುವದೂ ಉಂಟು. ಒಟ್ಟಿನಲ್ಲಿ ಗಾಂಧೀಜಿಯವರ ವಿಚಾರಗಳು ಕೆಲವರಿಗೆ ಒಗ್ಗಲಿಲ್ಲ. ಅಂಥವರಿಗೆ ಉತ್ತರ ರೂಪವಾಗಿ ಹರಿಜನ ಪತ್ರಿಕೆಯಲ್ಲಿ ಮತ್ತೆ ಈ ರೀತಿ ಬರೆದರು—

"ನನ್ನ ಸೂಚನೆಯು ಶಿಕ್ಷಣ ತಜ್ಞರಿಗೆ ಸಿಡಿಲು ಬಡಿದಂತಾಗಿದೆ. ಯಾಕೆಂದರೆ ಅವರಿಗೆ ಇನ್ನೊಂದು ಪದ್ಧತಿಯ ಪರಿಚಯವಿಲ್ಲ. ಶಿಕ್ಷಣವು ಸ್ವಾವಲಂಬಿಯಾಗಬೇಕೆಂಬ ವಿಚಾರವಂತೂ ಶಿಕ್ಷಣದ ಮೂಲ್ಯವನ್ನೇ ಕಿತ್ತೊಗೆದಂತಾಗಿದೆ ಎಂದು ಅನ್ನುವರು. ದೈಹಿಕ ಶ್ರಮದಿಂದ ಮಕ್ಕಳು ಶ್ರಮಗೌರವ ತಿಳಿಯುವರು. ಅವರ ಬುದ್ಧಿಯೂ ವಿಕಾಸವಾಗುವದು.

ರಾಷ್ಟ್ರೀಯ ಶಿಕ್ಷಣದಲ್ಲಿ ಬೌದ್ಧಿಕ ಶಿಕ್ಷಣದ ಸಂಗತಿಯಾಗಿ ಕೈಗಾರಿಕೆ ಕಲಿಸಬೇಕೆಂಬುದು ನನ್ನ ಸೂಚನೆಯಲ್ಲ. ಕೈಗಾರಿಕೆಯು ಬುದ್ಧಿಯನ್ನು ವಿಕಸಿಸುವ ಸಾಧನವಾಗಬೇಕು. ಈ ನಿರ್ಣಯಕ್ಕೆ ನಾನು ಬಂದಿದ್ದೇನೆ. ಯಾಕೆಂದರೆ ನಮ್ಮ ಬಾಲಕರ ಬುದ್ಧಿಯು ಅಪವ್ಯಯವಾಗುತ್ತಿದೆ. ಶಾಲೆ ಬಿಟ್ಟ ನಂತರ ಏನು ಮಾಡಬೇಕೆಂಬುದು ಅವರಿಗೆ ಗೊತ್ತಿಲ್ಲ."

(ಹರಿಜನ, ದಿನಾಂಕ ೧೧-೯-೧೯೩೭)

ನಮ್ಮ ದೇಶದ ಮಕ್ಕಳು ರಾಷ್ಟ್ರೀಯ ಶಿಕ್ಷಣವನ್ನು ಪಡೆಯುವಂತಾಗಬೇಕು. ಅದು ಉದ್ಯಮ ಮೂಲ ಶಿಕ್ಷಣವಿರಬೇಕು. ಎಂದರೆ ಕೈಗಾರಿಕೆಗಳು ಸಾಮಾನ್ಯ ಶಿಕ್ಷಣದ ಸಾಧನಗಳಾಗಿ ಕಲಿಸಲ್ಪಡಬೇಕು. ಮಕ್ಕಳ ಶಿಕ್ಷಣವು ಅವರ ನಿತ್ಯ ಜೀವನಕ್ಕೆ ಸಂಬಂಧಿಸಿ ರಚಿಸಲ್ಪಡಬೇಕು. ಈ ಎಲ್ಲ ವಿಚಾರಗಳು ಆಧುನಿಕ ಶಿಕ್ಷಣ ತಜ್ಞರ ವಿಚಾರಗಳನ್ನೇ ಪುಷ್ಟೀಕರಿಸಿವೆ. ಅಂತೆಯೇ ರಾಷ್ಟ್ರೀಯ ಶಿಕ್ಷಣ ಪ್ರೇಮಿಗಳು ಗಾಂಧೀಜಿಯವರ ವಿಚಾರಗಳನ್ನು ಪರಿಶೀಲಿಸಬೇಕೆಂಬ ಸೂಚನೆಯನ್ನು ಮುಂದೆ ಮಾಡಿ, ವರ್ಧಾದಲ್ಲಿ ಶಿಕ್ಷಣ ತಜ್ಞರ ಒಂದು ಸಮ್ಮೇಲನವನ್ನು ೧೯೩೭ನೇ ಅಕ್ಟೋಬರ ತಿಂಗಳಲ್ಲಿ ಕರೆದರು. ಗಾಂಧೀಜಿಯವರೇ ಆ ಸಮ್ಮೇಲನದ ಅಧ್ಯಕ್ಷರಾಗಿದ್ದರು. ಅವರ ಆ ದಿನ ಭಾಷಣವು ಭಾರತದ ಶಿಕ್ಷಣದಲ್ಲಿ ಹೊಸ ಹಾದಿಯನ್ನೇ ತೋರಿಸಿತು. ನಮ್ಮ ದೇಶದ ಶಿಕ್ಷಣ ಚರಿತ್ರೆಯಲ್ಲಿ ಅದು ಅಮರವಾಣಿಯಾಗಿ ಪರಿಣಮಿಸಿದೆ. ಅವರ ಮಾತುಗಳಲ್ಲಿಯ ಕೆಲವನ್ನು ಮಾತ್ರ ಇಲ್ಲಿ ಆಯ್ದುಕೊಂಡು ನೋಡೋಣ.

"ಸದ್ಯದ ಪ್ರಾಥಮಿಕ ಶಿಕ್ಷಣವು ದುಂದಿನದು; ಅಷ್ಟೇ ಅಲ್ಲ; ನಿಶ್ಚಯವಾಗಿ ಅಪಾಯಕರವಾದದ್ದು ಅದೆ ಎಂದು ನನ್ನ ಮನವರಿಕೆ. ಎಷ್ಟೋ ಹುಡುಗರು ತಮ್ಮ ತಂದೆ ತಾಯಿಗಳಿಗೂ, ಅವರು ಮಾಡುತ್ತಿರುವ ಉದ್ಯೋಗಗಳಿಗೂ ಎರವಾಗಿದ್ದಾರೆ. ಅವರು ದುಶ್ಚಟಗಳಿಗೆ ಈಡಾಗುತ್ತಾರೆ. ನಗರದ ರೀತಿಗಳಿಗೆ ಆಸಕ್ತರಾಗುತ್ತಾರೆ. ಗುಣಗುಡಲು ಸ್ವಲ್ಪ ಕಲಿಯುವರು. ಅದಾದರೂ ಶಿಕ್ಷಣವನ್ನು ಬಿಟ್ಟು ಮತ್ತೇನಾದರೂ ಅನಗಬಹುದು; ಎಂದ ಮೇಲೆ ಪ್ರಾಥಮಿಕ ಶಿಕ್ಷಣದ ಸ್ವರೂಪವು ಎಂಥಹದು ಇರಬೇಕು? ಔದ್ಯೋಗಿಕ ಅಥವಾ ದೈಹಿಕ ಶಿಕ್ಷಣದ ಮೂಲಕ ಶಿಕ್ಷಣ ಕೊಡುವದೇ ತಕ್ಕ ಉಪಾಯವೆಂದು ನಾನು ತಿಳಿಯುತ್ತೇನೆ. ದಕ್ಷಿಣ ಆಫ್ರಿಕೆಯಲ್ಲಿಯ ಟಾಲಸ್ಟಾಯ ಫಾರ್ಮಿನಲ್ಲಿ ನನ್ನ ಹಾಗೂ ಇತರರ ಮಕ್ಕಳನ್ನು ದೈಹಿಕ ಶ್ರಮದ ಮುಖಾಂತರ ತರಬೇತು ಮಾಡಿ ನನಗೆ ಅನುಭವವಿದೆ.

ನಾನು ಇಂದು ನಿಮ್ಮೆದುರು ಇಡಬಯಸುವ ಯೋಜನೆಯು ಸಾಮಾನ್ಯ ಶಿಕ್ಷಣದ ಜೊತೆಗೆ ಕೆಲವು ಕೈಗಾರಿಕೆಗಳನ್ನು ಕಲಿಸುವದು ಅಲ್ಲ. ಯಾವದೊಂದು ಕೈಗಾರಿಕೆಯ ಇಲ್ಲವೆ ಉದ್ಯೋಗದ ಮೂಲಕ ಇಡಿಯ ಶಿಕ್ಷಣವು ಕೊಡಲ್ಪಡಬೇಕೆಂದು ನಾನು ಬಯಸುತ್ತೇನೆ. ಮಧ್ಯ ಯುಗದಲ್ಲಿ ಕೈಗಾರಿಕೆಗಳು ವಿದ್ಯಾರ್ಥಿಗಳಿಗೆ ಕಲಿಸಲ್ಪಡುತ್ತಿದ್ದವೆಂದು ಆಕ್ಷೇಪಿಸಬಹುದು. ಆದರೆ ಆನಗಿ ಔದ್ಯೋಗಿಕ ತರಬೇತು ಶೈಕ್ಷಣಿಕ ಉದ್ದೇಶದಿಂದ ದೂರ ಸಿಡಿದಿತ್ತು; ಕೈಗಾರಿಕೆಗಳು ಕೇವಲ ಕೈಗಾರಿಕೆಗಳಾಗಿ ಕಲಿಸಲ್ಪಡುತ್ತಿದ್ದವು; ಅವುಗಳ ಜೊತೆಗೆ ಬುದ್ಧಿ ಪ್ರಚೋದನೆಗೆ ಎಡೆಯಿರಲಿಲ್ಲ.

ಯಾವದೊಂದು ಉದ್ಯೋಗದ ಶಾಸ್ತ್ರ ಹಾಗೂ ಕಲೆ ಇವುಗಳನ್ನು ಪ್ರತ್ಯಕ್ಷ ಅನುಭವದ ಮೂಲಕ ಕಲಿಸಬೇಕು. ಅಂಥ ಉದ್ಯೋಗದ ಮೂಲಕ ಇಡಿಯ ಶಿಕ್ಷಣವು ದೊರೆಯಬೇಕು. ಇದುವೇ ತಕ್ಕ ಚಿಕಿತ್ಸೆ.

ವಿದ್ಯಾರ್ಥಿಗಳು ದೈಹಿಕ ಶ್ರಮದ ಉತ್ಪಾದನೆಯಿಂದ ಶಿಕ್ಷಕರ ವೇತನದಷ್ಟು ವೆಚ್ಚವನ್ನು ತೆಗೆಯಬಹುದೆಂದು ನಾನು ಉತ್ಸುಕನಾಗಿದ್ದೇನೆ. ಯಾಕೆಂದರೆ ಕೋಟಿಗಟ್ಟಲೆ ಮಕ್ಕಳಿಗೆ ಶಿಕ್ಷಣವನ್ನು ಒದಗಿಸಲು ಅನ್ಯ ಮಾರ್ಗವಿಲ್ಲವೆಂದು ನಾನು ಮನಗಂಡಿದ್ದೇನೆ. ಸಾಕಷ್ಟು ಹಣ ದೊರೆಯುವವರೆಗೆ ಮತ್ತು ವ್ಹಾಯಿಸರಾಯರು ಸೈನ್ಯದ ವೆಚ್ಚವನ್ನು ಕಡಿಮೆ ಮಾಡುವವರೆಗೆ ನಾವು ತಡೆಯುವಂತಿಲ್ಲ. ಪ್ರಾಥಮಿಕ ಶಿಕ್ಷಣವು ಸ್ವಚ್ಛತೆ, ಆರೋಗ್ಯ, ಪೌಷ್ಟಿಕ ಆಹಾರ, ಸ್ವಾವಲಂಬನ, ಮನೆಯಲ್ಲಿ ಪಾಲಕರಿಗೆ ನೆರವು ಇತ್ಯಾದಿ ವಿಷಯಗಳನ್ನು ಒಳಗೊಂಡಿರಬೇಕು.

ಇಂಗ್ಲಂಡು, ಅಮೇರಿಕಾ ದೇಶಗಳು ಶಿಕ್ಷಣಕ್ಕಾಗಿ ಲಕ್ಷಗಟ್ಟಲೆ ಹಣ ವೆಚ್ಚ ಮಾಡುತ್ತವೆಂದು ನಾವು ಕೇಳುತ್ತೇವೆ; ಆದರೆ ಅದೆಲ್ಲ ಸುಲಿಗೆಯಿಂದ ಬಂದ ಹಣವೆಂದು ಮರೆಯುತ್ತೇವೆ. ಅವರು ಸುಲಿಗೆಯ ಕಲೆಯನ್ನು ಶಾಸ್ತ್ರದ ಮಟ್ಟಕ್ಕೆ ಇಳಿಸಿದ್ದಾರೆ. ಅವರು ಹೆಚ್ಚು ವೆಚ್ಚದ ಶಿಕ್ಷಣವನ್ನು ಕೊಡಬಲ್ಲರು. ಸುಲಿಗೆಯ ದೃಷ್ಟಿಯಿಂದ ನಾವು ವಿಚಾರಿಸಲಾರೆವು, ವಿಚಾರಿಸುವದಿಲ್ಲ. ಅಹಿಂಸೆಯ ತಳಗಲ್ಲಿನ ಮೇಲೆ ನಿಲ್ಲಿಸದ ಶಿಕ್ಷಣದ ಯೋಜನೆಯ ಹೊರತು ನಮಗೆ ಇನ್ನೊಂದು ಮಾರ್ಗವಿಲ್ಲ."

ಈ ರೀತಿಯಾಗಿ ಗಾಂಧೀಜಿಯವರು ವರ್ಧಾ ಶಿಕ್ಷಣದ ಪ್ರಥಮ ಸಮ್ಮೇಲನದಲ್ಲಿ ತಮ್ಮ ಸೂಚನೆಗಳನ್ನು ಪ್ರಾಸ್ತಾವಿಕ ಭಾಷಣದಲ್ಲಿ ನಿರೂಪಿಸಿದರು. ಅಂದು ಅಲ್ಲಿ ನೇರಿದ ಶಿಕ್ಷಣ ತಜ್ಞರೆಲ್ಲ ಅವರ ವಿಚಾರಗಳನ್ನು ಕೂಲಂಕಷವಾಗಿ ಚರ್ಚಿಸಿದರು. ಈ ಚರ್ಚೆಯ ಪರಿಣಾಮವಾಗಿ ಕೆಳಗಿನ ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು.

(೧) ಏಳು ವರ್ಷಗಳ ಅವಧಿಯ ಪ್ರಾಥಮಿಕ ಶಿಕ್ಷಣವು ಪುಕ್ಕಟೆಯಾಗಿಯೂ, ಕಡ್ಡಾಯವಾಗಿಯೂ, ಸಾರ್ವತ್ರಿಕವಾಗಿಯೂ ಕೊಡಲ್ಪಡಬೇಕು.

೨) ಈ ಹಂತದಲ್ಲಿ ಮಾತೃ ಭಾಷೆಯು ಶಿಕ್ಷಣದ ಮಾಧ್ಯಮವಾಗಿರಬೇಕು.

೩) ಶಿಕ್ಷಣವು ಉತ್ಪಾದಕ ಉದ್ಯಮವನ್ನು ಕೇಂದ್ರವಾಗಿಟ್ಟುಕೊಂಡು ಸಾಗಬೇಕು. ಆರಿಸಿದ ಕೈಗಾರಿಕೆಯ ಮುಖಾಂತರವೇ ಮಗುವನ್ನು ಇಡಿಯಾಗಿ ತರಬೇತು ಗೊಳಿಸಬೇಕು. ಈ ಕ್ರಿಯೆಯಲ್ಲಿ ಅವನ ವಾತಾವರಣವನ್ನು ಅನುಲಕ್ಷಿಸಬೇಕು.

೪) ಈ ಶಿಕ್ಷಣ ಪದ್ಧತಿಯಿಂದ ಶಿಕ್ಷಕರ ಸಂಬಳದಷ್ಟು ಉತ್ಪತ್ತಿಯು ಕ್ರಮೇಣ ಹೊರಡಬಹುದು.

ವರ್ಧಾ ಶಿಕ್ಷಣ ಸಮ್ಮೇಲನವು ಡಾ. ಝಕೀರ ಹುಸೇನರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು. ಗಾಂಧೀಜಿಯವರ ವಿಚಾರಪ್ರಣಾಲಿಗನುಸಾರವಾಗಿ ಶಿಕ್ಷಣದ ಏಳು ವರ್ಷಗಳಲ್ಲಿಯ ಅಭ್ಯಾಸ ಕ್ರಮವನ್ನು ನಿರ್ದಿಷ್ಟಗೊಳಿಸಿತು. ಪ್ರಾಥಮಿಕ ಶಿಕ್ಷಣವು ಶಿಕ್ಷಣ ವೃಕ್ಷದ ಮೂಲ ಅಥವಾ ಬೇರು. ಆದುದರಿಂದ ಈ ಶಿಕ್ಷಣದ ಯೋಜನೆಗೆ ಬುನಿಯಾದಿ ತಾಲೀಮ ಎಂದರೆ ಮೂಲ ಶಿಕ್ಷಣ ಎಂದೂ ಕರೆಯಲಾಯಿತು. ಈ ಅವಧಿಯಲ್ಲಿ ನಾಗರಿಕತೆಗೆ ಅವಶ್ಯವಿದ್ದಷ್ಟು ಮೂಲ ಜ್ಞಾನವನ್ನು ಮಕ್ಕಳಿಗೆ ಕೊಡಲಾಗುವದು. ಅಲ್ಲದೆ ಜೀವನದ ಮೂಲ ಭೂತ ಬೇಡಿಕೆಗಳಾದ ಅನ್ನ, ಅರಿವೆ, ಆಶ್ರಯ ಮೊದಲಾದ ವಿದ್ಯೆಗಳಲ್ಲಿ ಮಕ್ಕಳನ್ನು ತರಬೇತುಗೊಳಿಸಲಾಗುವದು. ಈ ಉದ್ಯಮಗಳು ಸಾಮಾನ್ಯ ಶಿಕ್ಷಣದ ಸಾಧನಗಳಾಗಿವೆ. ಮೊದಲು ಪುಸ್ತಕೀಯ ವಿದ್ಯೆಗೆ ಪ್ರಾಧಾನ್ಯ ಕೊಡಲಾಗುತ್ತಿತ್ತು. ಈ ಯೋಜನೆಯಲ್ಲಿ ಮಕ್ಕಳು ಮಾಡುತ್ತಿರುವ ಉಪಯುಕ್ತ ಚಟುವಟಿಕೆಗಳೆಲ್ಲ ಅವರ ಶಿಕ್ಷಣದ ಸಾಧನಗಳಾಗಿ ಪರಿಣಮಿಸುತ್ತವೆ. ಇವುಗಳ ಮುಖಾಂತರ ಅವರಿಗೆ ಅಗತ್ಯವಿದ್ದ ವ್ಯವಹಾರಿಕ ಜ್ಞಾನವು ದೊರೆಯುತ್ತದೆ. ಶಾಲೆಯಲ್ಲಿ ವರ್ಗದ ಮಕ್ಕಳು ಎಷ್ಟೋ ಕೆಲಸಗಳನ್ನು ಕೂಡಿಕೊಂಡು ಮಾಡಬೇಕಾಗುವದು. ಅವರಲ್ಲಿ ಪರಸ್ಪರ ಸಹಕಾರ, ಪ್ರೇಮ ಭಾವನೆಗಳು ಸ್ವಾಭಾವಿಕವಾಗಿ ಬೆಳೆಯುತ್ತವೆ. ಪ್ರಜಾಪ್ರಭುತ್ವ ತತ್ವದ ತಳಹದಿಯ ಮೇಲೆ ಮಕ್ಕಳ ಕಾರ್ಯಕ್ರಮಗಳೆಲ್ಲ ಸಂಘಟಿಸಲ್ಪಡುವವು. ವಿವಿಧ ಚಟುವಟಿಕೆಗಳನ್ನು ಸಂಘಟಿಸುವ ಸಾಮರ್ಥ್ಯವು ಅವರಲ್ಲಿ ಉಂಟಾಗುವದು. ಪ್ರಜಾಪ್ರಭುತ್ವದ ಆಡಳಿತದ ಅನುಭವವು ಅವರಿಗೆ ದೊರೆಯುವದು. ಸಾಮೂಹಿಕ ಪ್ರಾರ್ಥನೆ, ಸಫಾಯಿ, ಉದ್ಯೋಗ ಮೊದಲಾದ ಚಟುವಟಿಕೆಗಳು ಮಕ್ಕಳಿಗೆ ಸಾಂಘಿಕ ಜೀವನದಲ್ಲಿ ತರಬೇತು ಕೊಡುವವು. ಅವರಿಗೆ ಸಹಜೀವನದ ಅರಿವು ಉಂಟಾಗುವದು. ಈ ರೀತಿಯಾಗಿ ಮಕ್ಕಳಿಗೆ ಅವರ ಜೀವನದ ಸನ್ನಿವೇಶಗಳ ಮುಖಾಂತರ ಜೀವನದ ಶಿಕ್ಷಣವು ಬಹುಮಟ್ಟಿಗೆ ದೊರೆಯುತ್ತದೆ. ಆದುದರಿಂದ ಮೂಲ ಶಿಕ್ಷಣಕ್ಕೆ ಜೀವನ ಶಿಕ್ಷಣವೆಂದೂ ಕರೆಯುವರು ಗಾಂಧೀಜಿಯರು ಈ ಶಿಕ್ಷಣಕ್ರಮಕ್ಕೆ "ನಈ ತಾಲೀಮ" ಎಂದರೆ ಹೊಸ ಶಿಕ್ಷಣ ಎಂದೂ ಕರೆದರು. ಅವರು ಕೊಟ್ಟ ವ್ಯಾಖ್ಯೆಯು ಶಿಕ್ಷಣದ ಹೊಸ ದೆಸೆಯನ್ನು ತೋರಿಸುತ್ತದೆ. ಮಗುವಿನಲ್ಲಿ ಹುದುಗಿದ ಶಾರೀರಿಕ, ಬೌದ್ಧಿಕ, ನೈತಿಕ ಹಾಗೂ ಆಧ್ಯಾತ್ಮಿಕ ಅಂಶಗಳನ್ನು ಉತ್ತಮ ರೀತಿಯಲ್ಲಿ ಪ್ರಕಟಗೊಳಿಸುವದೇ ಶಿಕ್ಷಣವೆಂದು ಗಾಂಧೀಜಿಯವರು ನಿರೂಪಿಸಿದ್ದಾರೆ. ಮಗುವಿನ ಇಡಿಯ ಬೆಳವಣಿಗೆಯೇ ಶಿಕ್ಷಣದ ಮೂಲ ಉದ್ದೇಶವೆಂದು ಆಧುನಿಕ ಶಿಕ್ಷಣ ತಜ್ಞರೂ ಹೇಳುತ್ತಿರುವರು. ಮೂಲ ಶಿಕ್ಷಣವನ್ನು ಪಡೆದ ಮಕ್ಕಳು ಸದೃಢ ಕಾಯವುಳ್ಳವರೂ ಚುರುಕು ಬುದ್ಧಿಯವರೂ, ಸಚ್ಛೀಲರೂ ಆಗುವರು. ಅವರ ಜೀವನವು ಅಖಂಡವಾಗಿ ವಿಕಾಸಗೊಂಡು ಅವರ ವ್ಯಕ್ತಿತ್ವವು ಇಡಿಯಾಗಿ ಬೆಳೆಯುತ್ತದೆ. ಅವರು ಅನೇಕ ಸಾಮಾಜಿಕ ಕೆಲಸಗಳನ್ನು ಮಾಡುವರು. ಅವರಲ್ಲಿ ಪರೋಪಕಾರ ಮತ್ತು ಸೇವಾ ಬುದ್ಧಿಗಳು ಬೆಳೆದು ಬರುತ್ತವೆ. ಅವರಿಗೆ ಸಾಮಾಜಿಕ ಜೀವನದ ಅರಿವು ಉಂಟಾಗುತ್ತದೆ.

ಮೂಲ ಶಿಕ್ಷಣವು ಉದ್ಯಮ ಮೂಲ ಶಿಕ್ಷಣವು. ಮಕ್ಕಳಿಗೆ ಉತ್ಪಾದಕ ಉದ್ಯೋಗಗಳಲ್ಲಿ ತರಬೇತು ದೊರೆಯುತ್ತದೆ. ಅವರಲ್ಲಿ ಸ್ವಾವಲಂಬನ ಪ್ರವೃತ್ತಿಯು ಹುಟ್ಟಿ ಬೆಳೆಯುತ್ತದೆ. ದುಡಿತದಲ್ಲಿ ಪ್ರೀತಿಯುಳ್ಳವರಾಗಿ ಅವರು ಬೆಳೆಯುವರು. ಜೀವನದ ಸಮಸ್ಯೆಗಳನ್ನು ದಿಟ್ಟತನದಿಂದ ಎದುರಿಸುವ ಸಾಮರ್ಥ್ಯವು ಅವರಲ್ಲಿ ಉಂಟಾಗುವದು. ಗಾಂಧೀಜಿಯವರು ಇಚ್ಛಿಸಿದ ಸ್ವಾವಲಂಬಿ ಸಮಾಜದ ಉತ್ತಮ ಘಟಕಗಳಾಗಿ ಅವರು ಬೆಳೆಯುವರು. ನಮ್ಮ ದೇಶದಲ್ಲಿಯ ಬಡತನ, ನಿರಕ್ಷರತೆ, ಅನಾರೋಗ್ಯ ಮೊದಲಾದ ಸಾಮಾಜಿಕ ಆರ್ಥಿಕ ರೋಗಗಳನ್ನು ನಿವಾರಿಸಲು ಇಂಥ ಸಮಾಜ ನಿರ್ಮಾಣವಾಗುವದು ಅಗತ್ಯವಿದೆ.

ಮೂಲ ಶಿಕ್ಷಣವು ಒಂದು ವಿಧವಾದ ಮೌನ ಸಾಮಾಜಿಕ ಕ್ರಾಂತಿಯೆಂದು (Silent Social Revolution) ಒಮ್ಮೆ ಗಾಂಧೀಜಿಯವರು ಹೇಳಿರುವರು. ಹಿಂದಿನ ಶಿಕ್ಷಣಕ್ರಮದಲ್ಲಿ ಕೇವಲ ಬೌಧಿಕ ಬೆಳವಣಿಗೆಗೆ ಪ್ರಾಧಾನ್ಯವಿತ್ತು. ಆದರೆ ಮೂಲ ಶಿಕ್ಷಣ ಯೋಜನೆಯಲ್ಲಿ ಕೈಯಿಂದ ಮಿದುಳಿಗೆ, ವೈಯಿಂದ ಮನಕ್ಕೆ, ವೈಕೈಗಳಿಂದ ಬುದ್ಧಿ ಹೃದಯಗಳಿಗೆ ಸಂಸ್ಕಾರವನ್ನುಂಟು ಮಾಡುವ ವೈಶಿಷ್ಟ್ಯವಿದೆ. ಮಗುವಿನ ದೇಹ, ಬುದ್ಧಿ, ನೀತಿ, ಇವುಗಳ ಸಮನ್ವಯ ವಿಕಾಸವಾಗುವದು. ಅವನು ಇಡಿಯಾಗಿ ಬೆಳೆದು, ಅವನ ಸಮತೋಲ ವ್ಯಕ್ತಿತ್ವವು ಜೀವನದ ಮೂಲ್ಯಗಳ ದ್ವಾರಾ ಹೊರಹೊಮ್ಮುವದು. ಸತ್ಯನಿಷ್ಠೆ, ನ್ಯಾಯನಿಷ್ಠುರತೆ, ಸಹಕಾರ, ಸ್ವಾವಲಂಬನ ಅಹಿಂಸೆ, ಪ್ರೇಮ, ಬಂಧುತ್ವ ಮೊದಲಾದ ಶ್ರೇಷ್ಠ ಗುಣಗಳು ಅವನಲ್ಲಿ ಅಂಕುರಿಸಿ ಪ್ರಜ್ವಲಿಸುವವು. ಸಮಾಜ ಸೇವೆಯಲ್ಲಿಯೇ ಆತ್ಮಸಿದ್ಧಿಯನ್ನು ಪಡೆಯಲು ಅವನು ಯತ್ನಿಸುವನು. ತನ್ನಿಂದ ಸಮಾಜದೆಡೆಗೆ ಸ್ವಾರ್ಥದಿಂದ ಪರಾರ್ಥದೆಡೆಗೆ ಅವನು ಸಾಗುವನು. ತನ್ನ ಮೂಲಭೂತ ಹಕ್ಕುಗಳನ್ನು ಪಡೆಯಲು ಅವನು ಅಣಿಯಾಗುವನು. ಇಂಥ ಆದರ್ಶ ವ್ಯಕ್ತಿಗಳನ್ನು ಸಿದ್ಧಗೊಳಿಸುವದು ಮೂಲ ಶಿಕ್ಷಣದಿಂದಲೇ ಸಾಧ್ಯವಿದೆಯೆಂದು ಗಾಂಧೀಜಿಯವರು ನಂಬಿದ್ದರು. ಕಾಯಕದಿಂದ, ಹುಟ್ಟಿನಿಂದ, ಧರ್ಮದಿಂದ, ಮೇಲುಕೀಳು ಬಗೆಯುವ ಸರ್ವರಿಗೂ ಸಮಾನ ಸೌಕರ್ಯಗಳನ್ನು ಕಲ್ಪಿಸಿಕೊಡುವ, ಸರ್ವರನ್ನೂ ಸಮದೃಷ್ಟಿಯಿಂದ ಕಾಣುವ, ಸಕಲರಿಗೂ ಸುಖ–ಶಾಂತಿಗಳನ್ನು ಕೋರುವ–ಅಹಿಂಸಾತ್ಮಕ ಸಮಾಜವನ್ನು ರಚಿಸಬೇಕೆಂದು ಗಾಂಧೀಜಿಯವರು ಆಶಿಸಿದ್ದರು. ಇದು ಅವರ ಕನಸಿನ ನವ ಸಮಾಜವು. ಇಂಥ ಸಮಾಜವನ್ನು ನಿರ್ಮಿಸಲು ಮೂಲ ಶಿಕ್ಷಣವು ಸಾಧನ ಕ್ಷೇತ್ರವೆಂದು ಅವರು ನೆರೆನಂಬಿದ್ದರು. ಆದುದರಿಂದ ವರ್ಗರಹಿತ, ಶೋಷಣ ರಹಿತ ನವಸಮಾಜವನ್ನು ನಿರ್ಮಿಸುವದೇ ಮೂಲ ಶಿಕ್ಷಣದ ಗುರಿಗುರಿಯಾಗಿದೆ. ಗಾಂಧೀಜಿಯವರ ಕನಸಾಗಿದ್ದ ನವಸಮಾಜ ನಿರ್ಮಾಣ ಕಾರ್ಯವನ್ನು ನನಸಾಗಿ ಮಾಡಲು ನಾವೆಲ್ಲರೂ ಪ್ರಯತ್ನಿಸೋಣ.

(ಆಕಾಶವಾಣಿ ಧಾರವಾಡ ಇವರ ಕೃಪೆಯಿಂದ)

— ಜಯ ಹಿಂದ್ —

ಜೀವನ ಶಿಕ್ಷಣ

(ಒಂದು ಚರ್ಚೆ)

ಲೇಖಕರು : **ಪ್ರೊ· ರೋಹಿಡೇಕರ ಶಾಮರಾಯರು,** ಎಸ್. ಟಿ. ಕಾಲೇಜ, ಬೆಳಗಾಂವಿ.

ಪಾಲಕ— ಅಲ್ರೀ ಮಾಸ್ತರರೇ, ಶಾಲೆಯನ್ನೆಲ್ಲಾ ಕೆಡಿಸಿ ಬಿಟ್ಟಿರಿ.

ಶಿಕ್ಷಕ— ಯಾಕೆ? ಏನಾಯಿತು ?

ಪಾಲಕ— ಆಗುವದೇನು ? ಶಾಲೆಯಲ್ಲಿ ಕಲಿಸುವದೊಂದು ಬಿಟ್ಟು ಉಳಿದದ್ದೇನೇನೋ ನಡೆಯುವದು.

ಶಿಕ್ಷಕ— ಅದೇಕೆ? ನಾವು ಕಲಿಸುವದಿಲ್ಲವೇನು ?

ಪಾಲಕ— ನೀವು ಏನು ಕಲಿಸುವಿರೆಂಬುದನ್ನು ನಾವು ನೋಡಿಲ್ಲವೇನು ? ಕಸ ಉಡುಗುವುದು, ನೂಲುವುದು, ನೇಯುವುದು ಇವೇ ನಡೆದಿರುತ್ತವೆ ಯಾವಾಗಲು.

ಶಿಕ್ಷಕ— ಹೌದು. ಅವನ್ನೂ ಮಾಡಲೇ ಬೇಕಾಗುತ್ತವೆ.

ಪಾಲಕ— ಅದೇಕೆ? ಅವನ್ನು ಬಿಟ್ಟು ವಿದ್ಯೆಯನ್ನು ಕಲಿಸುವುದು ಬೇಡವೆಂದು ನಿಮ್ಮ ಸಾಹೇಬರು ಹೇಳಿರುವರೇನು ?

ಶಿಕ್ಷಕ— ದಿನಾಲು ೨೦ ನಿಮಿಷ ಸಾಂಘಿಕ ಜೀವನ, ಎರಡು ತಾಸು ಮೂಲೋದ್ಯೋಗ ಮಾಡಬೇಕೆಂದು ನಮಗೆ ಸರ್ಕ್ಯೂಲರ ಬಂದಿವೆ. ನಾವಾದರೂ ಏನು ಮಾಡಬೇಕು ?

ಪಾಲಕ— ಆ ಸರ್ಕ್ಯುಲರ ತೆಗೆಯುವವರೊಬ್ಬರು ಮೂರ್ಖರು. ಅದರಂತೆ ನಡೆಯುವ ನೀವೂ ಶತಮೂರ್ಖರು. ಇಷ್ಟೇ ಅಲ್ಲದೆ, ನಮ್ಮ ಹುಡುಗರನ್ನು ಹೊರಗೆ ಏಕೆ ಕರೆದುಕೊಂಡು ಹೋಗತ್ತಿರುವಿರಿ ?

ಶಿಕ್ಷಕ— ಈಗಿನ ಅಭ್ಯಾಸ ಕ್ರಮದ ಪ್ರಕಾರ, ಪ್ರವಾಸ, ದಿನಾಚರಣೆ, ಸಾಮಾಜಿಕ ಚಟುವಟಿಕೆ ಇವನ್ನೆಲ್ಲ ಮಾಡಬೇಕಾಗುತ್ತದೆ. ಅದಕ್ಕಾಗಿ ಮಕ್ಕಳನ್ನು ಮೇಲಿಂದ ಮೇಲೆ ಹೊರಗೆ ಕರೆದುಕೊಂಡು ಹೋಗುವ ಪ್ರಸಂಗ ಬರುತ್ತದೆ.

ಪಾಲಕ— ಅಂತೂ ಇಂತೂ ಕುಂತೀ ಮಕ್ಕಳಿಗೆ ರಾಜ್ಯವಿಲ್ಲವೆಂಬಂತೆ ನಮ್ಮ ಮಕ್ಕಳಿಗೆ ಶಿಕ್ಷಣವಿಲ್ಲ.

ಶಿಕ್ಷಕ— ಉಳಿದ ವೇಳೆಯಲ್ಲಿ ನಮ್ಮ ಕೈಲಾದಷ್ಟು ನಾವು ಕಲಿಸುತ್ತೇವೆ. ನಾವಾದರೂ ಏನು ಮಾಡಬೇಕು? ಸರ್ಕ್ಯುಲರ ಪ್ರಕಾರ ನಡೆಯಲೇ ಬೇಕಾಗುತ್ತದೆ.

ಪಾಲಕ— ಆ ಸರ್ಕ್ಯುಲರ ಅಲ್ಲೇ ಇರಲಿ. ನಮ್ಮ ಮಕ್ಕಳಿಗೆ ಓದಲಿಕ್ಕೆ ಚೆನ್ನಾಗಿ ಬರುವದಿಲ್ಲ; ಬರಹವಂತೂ ನೋಡಲೇಬಾರದು. ಗಣಿತ ವಿಷಯ ತೀರ ಕಚ್ಚಾ ಅದೆ. ಶಾಲೆಯಲ್ಲಿ ನೀವು ಕಲಿಸುತ್ತೀರಾದರೂ ಏನು?

ಶಿಕ್ಷಕ— ಸಫಾಇ, ನೂಲುವುದು, ಅದರ ಲೆಕ್ಕ ಪತ್ರ ಈ ಚಟುವಟಿಕೆಗಳು, ದಿನಾಚರಣೆ, ಗ್ರುಪ ಮೀಟಿಂಗು, ಮನೋರಂಜನ ಕಾರ್ಯಕ್ರಮ ಹೀಗೆಲ್ಲಾ ನಡೆದು, ಮಕ್ಕಳಿಗೆ ಶಿಕ್ಷಣ ಕೊಡಲು ವೇಳೆಯೇ ಉಳಿಯುವದಿಲ್ಲ.

ಪಾಲಕ— ನಮ್ಮ ಮಕ್ಕಳ ಶಿಕ್ಷಣ ಹಾಳಾಗಲಿಕ್ಕೆ ಹತ್ತಿದೆ. ಇದಕ್ಕೆ ಹೊಣೆಗಾರರು ಯಾರು?

ಶಿಕ್ಷಕ— (ಬಾಗಿಲ ಕಡೆ ನೋಡಿ) ಅಕೋ ನಮ್ಮ ಶಾಲೆಯ ಸಾಹೇಬರೇ ಬಂದರು. ಅವರನ್ನೇ ಕೇಳಿರಿ. (ಪೂರ್ಣ ಖಾದಿ ಉಡುಪಿನಲ್ಲಿದ್ದ ಸಾಹೇಬರ ಪ್ರವೇಶ)

ಪಾಲಕ— ಬಹಳ ಒಳ್ಳೆಯದಾಯಿತು. ಅವರನ್ನು ಕೇಳಬೇಕೆಂದು ಎಷ್ಟೋ ದಿನಗಳಿಂದ ವಿಚಾರ ಮಾಡುತ್ತಿದ್ದೆ. ಅನಾಯಾಸವಾಗಿ ಇಂದು ಸಿಕ್ಕಿರುವರು. (ಸಾಹೇಬರಿಗೆ), ಸಾಹೇಬರೇ, ಈಗ ನಮ್ಮ ಊರ ಶಾಲೆಯಲ್ಲಿ ಅಭ್ಯಾಸ ನಡೆಯುವುದೇ ಇಲ್ಲ.

ಇನ್‌ಸ್ಪೆಕ್ಟರ— ಯಾಕೆ? ಶಿಕ್ಷಕರು ಕಲಿಸುವದಿಲ್ಲವೇನು?

ಪಾಲಕ— ಏನು ಕಲಿಸುವರು? ನಿಮ್ಮ ಸರ್ಕ್ಯುಲರ ಪ್ರಕಾರ ಜೀವನ ಶಿಕ್ಷಣ ಬಂದು ನಮ್ಮ ಶಾಲೆಗಳೆಲ್ಲ ಕೆಟ್ಟು ಹೋಗಿವೆ.

ಇನ್‌ಸ್ಪೆಕ್ಟರ— ಇಲ್ಲಿ ಕೇಳಿರಿ. ನಮ್ಮ ತಾಲೂಕಿನಲ್ಲಿ ಜೀವನ ಶಿಕ್ಷಣ ಶಾಲೆಗಳು ಕೇವಲ ೨೧. ಉಳಿದ ಸುಮಾರು ನೂರು ಶಾಲೆಗಳು ಸಾದಾ ಶಾಲೆಗಳು. ಜೀವನ ಶಿಕ್ಷಣ ಶಾಲೆಗಳಿಗಿಂತ ಸಾದಾ ಶಾಲೆಗಳು ಉತ್ತಮವೆಂದು ನಿಮ್ಮ ಅಭಿಪ್ರಾಯವೋ?

ಪಾಲಕ— ಅ.... ಅ....ಅ.... ಅವಂತು ಇದಕ್ಕೂ ಕೆಟ್ಟಿವೆ.

ಇನ್‌ಸ್ಪೆಕ್ಟರ— ಅಂದ ಬಳಿಕ ಜೀವನ ಶಿಕ್ಷಣ ಬಂದು ನಮ್ಮ ಶಾಲೆಗಳು ಕೆಟ್ಟಿವೆಯೆಂದು ನೀವು ಹೇಳುವುದು ಸರಿಯಲ್ಲ.

ಪಾಲಕ— ಅದೇನೇ ಇರಲಿ. ಹುಡುಗರ ಅಭ್ಯಾಸದ ಗತಿ ಏನು?

ಇನ್‌ಸ್ಪೆಕ್ಟರ— ಸಾದಾ ಶಾಲೆಗಳಿಗಿಂತ ಜೀವನ ಶಿಕ್ಷಣ ಶಾಲೆಗಳಲ್ಲಿ ಅಭ್ಯಾಸವು ಚೆನ್ನಾಗಿ ಆಗುತ್ತದೆ. ಮೇಲಾಗಿ ಉದ್ಯೋಗವು ಚೆನ್ನಾಗಿ ಬರುತ್ತದೆ. ಅಲ್ಲದೆ, ಮಕ್ಕಳಲ್ಲಿ ಧೈರ್ಯ, ಸಹಕಾರದಿಂದ ಕೆಲಸ ಮಾಡುವುದು ಇತ್ಯಾದಿ ಸದ್ಗುಣಗಳು ಬೆಳೆಯುತ್ತವೆ.

ಪಾಲಕ— ಇಲ್ಲಿ ನೋಡಿರಿ, ಮಕ್ಕಳು ಸುಮ್ಮನೆ ಕಸಗೂಡಿಸುವುದು, ನೂಲುವದು, ಪ್ರವಾಸ ಇವುಗಳಲ್ಲಿ ಏಕೆ ವೇಳೆ ಕಳೆಯಬೇಕು?

ಇನ್‌ಸ್ಪೆಕ್ಟರ— ಇದರಲ್ಲಿ ತಪ್ಪೇನಾಯಿತು? ಇದು ಜೀವನ ಶಿಕ್ಷಣ ಶಾಲೆ. ಅಂದ ಬಳಿಕ........

ಪಾಲಕ— ಅಲ್ರೀ ಸಾಹೇಬರೆ, ಕಸ ಉಡುಗುವುದನ್ನು ಕಲಿಸಲಿಕ್ಕೆ ನಮ್ಮ ಮಕ್ಕಳನ್ನು ನಾವು ಶಾಲೆಗೆ ಯಾಕೆ ಕಳಿಸಬೇಕು?

ಇನ್‌ಸ್ಪೆಕ್ಟರ— ಇಲ್ಲಿಯೇ ನೀವು ತಪ್ಪು ತಿಳಿದುಕೊಂಡಿರುವಿರಿ.

ಪಾಲಕ— ಏನದು ತಪ್ಪು?

ಇನ್‌ಸ್ಪೆಕ್ಟರ— ಇಲ್ಲಿ ಕೇಳಿರಿ. ನಮ್ಮ ದೇಶದಲ್ಲಿ ಬ್ರಿಟಿಶರು ತಮ್ಮ ಆಡಳಿತಕ್ಕೆ ಅನುಕೂಲವಾಗುವಂತೆ ಕೇವಲ ಕಾರಕೂನರು, ಶಿಕ್ಷಕರು, ವಕೀಲರು ಮುಂತಾದವರನ್ನು ಸಿದ್ಧಗೊಳಿಸುವ ಶಿಕ್ಷಣ-ಪದ್ಧತಿಯನ್ನು ಆಚರಣೆಯಲ್ಲಿ ತಂದಿದ್ದರು. ಆದರೆ ನಮ್ಮ ದೇಶದ ಮುಂದಾಳಾದ ಮಹಾತ್ಮಾ ಗಾಂಧೀಜಿಯವರು ಬಹಳ ವಿಚಾರ ಮಾಡಿ ಈ ಹೊಸ ಶಿಕ್ಷಣ ಪದ್ಧತಿಯನ್ನು ದೇಶದ ಮುಂದಿಟ್ಟರು. ಅದರ ಪ್ರಕಾರ ನಮ್ಮ ಕಾಂಗ್ರೆಸ ಸರಕಾರದವರು ಈ ಪದ್ಧತಿಯನ್ನು ಬಳಕೆಯಲ್ಲಿ ತಂದಿದ್ದಾರೆ.

ಪಾಲಕ— ಎಲ್ಲದಕ್ಕೂ ಆ ಗಾಂಧೀಜಿಯವರ ಹೆಸರು ತೆಗೆದುಕೊಳ್ಳುವುದೊಂದು ರೂಢಿಯಾಗಿಬಿಟ್ಟಿದೆ. ಇಕೋ ಕೇಳಿರಿ. ಗಾಂಧೀಜಿ, ಜವಾಹರಲಾಲ ಮುಂತಾದ

ವರ ಹೆಸರು ತೆಗೆದುಕೊಳ್ಳಬೇಡಿರಿ. ಈ ಶಿಕ್ಷಣದಿಂದ ನಮಗೇನು ಲಾಭವಿದೆ ನಮಗೆ ತಿಳಿಯುವಂತೆ ಹೇಳಿರಿ.

ಇನ್‌ಸ್ಪೆಕ್ಟರ್— ಒಳ್ಳೇದು, ಮಕ್ಕಳ ವ್ಯಯಕ್ತಿಕ ಸ್ವಚ್ಛತೆಯಿಂದ ಲಾಭವಿಲ್ಲವೇ ?

ಪಾಲಕ— ಅವರ ಸ್ವಚ್ಛತೆಯ ಬಗೆಗೆ ಏನು ನಡೆ ಯುತ್ತಿದೆ ಶಾಲೆಯಲ್ಲಿ? ನೀವು ಬೇಕಾದರೆ ನೋಡಿರಿ. ಹುಡುಗರು ಎಷ್ಟು ಹೊಲಸು ಕಾಣುತ್ತಿದ್ದಾರೆ! ಅವರ ಅಂಗಿಯ ಗುಂಡಿ ಹರಿದು ಹೋಗಿವೆ. ಹಾಗೆಯೇ ಎದೆ ತಕ್ಕೊಂಡು ಕುಳಿತಿದ್ದಾರೆ. ಮುಖ ತೊಳೆದುಕೊಂಡಿಲ್ಲ.

ಇನ್‌ಸ್ಪೆಕ್ಟರ—ಯಾಕೆ ಶಿಕ್ಷಕರೇ, ಮಕ್ಕಳ ವ್ಯೆಯ ಕ್ತಿಕ ಸ್ವಚ್ಛತೆಯನ್ನು ನೋಡುವದಿಲ್ಲವೇ ?

ಶಿಕ್ಷಕ— ಹೇಳಿ ಹೇಳಿ ಬೇಸತ್ತಿದ್ದೇವೆ. ದಿನಾಲು ಹೇಳುತ್ತೇವೆ. ಮತ್ತೆ ಮಕ್ಕಳು ಹಾಗೇ ಬಂದರೆ ನಾವೇನು ಮಾಡುವುದು ?

ಇನ್‌ಸ್ಪೆಕ್ಟರ— ಇಲ್ಲೇ ತಪ್ಪಿರುವದು. ಕೇವಲ ಹೇಳಿ ಫಲವಿಲ್ಲ. ಶಾಲೆಯಲ್ಲಿ ಅಂತಹ ಅಸ್ವಚ್ಛ ಮಕ್ಕಳನ್ನು ಕರೆದು ಅವರಿಂದ ಹಲ್ಲುತಿಕ್ಕುವುದು, ಮುಖ ತೊಳೆದುಕೊಳ್ಳುವುದು, ಅಂಗಿಗಳಿಗೆ ಹರಿದಲ್ಲಿ ತೇಪೆ ಹಚ್ಚುವುದು, ಗುಂಡಿಹಚ್ಚಿಕೊಳ್ಳುವುದು ಇವೆಲ್ಲವನ್ನು ಪ್ರತ್ಯಕ್ಷ ಮಾಡಿಸಬೇಕು.

ಪಾಲಕ— ಅದಾಯಿತು. ಕಸಗುಡಿಸುವದರಿಂದೇನು ಫಲ ?

ಇನ್‌ಸ್ಪೆಕ್ಟರ— ಇಲ್ಲಿ ನೋಡಿರಿ. ಮನೆಯನ್ನು ನೀವುಸ್ವಚ್ಛವಾಗಿ ಇರಿಸುವದಿಲ್ಲವೇ ? ಗುಡಿಗುಂಡಾರಗಳನ್ನು ಸ್ವಚ್ಛಗೊಳಿಸುವದಿಲ್ಲವೇ? ಹಾಗೆ ಶಾಲೆ ಎಂಬುದು ನಮ್ಮ ಮನೆ ಎಂಬ ಕಲ್ಪನೆ ಶಿಕ್ಷಕರಿಗೂ— ಮಕ್ಕಳಿಗೂ ಕೂಡಿಯೇ ಬರಬೇಕು.

ಪಾಲಕ— ಶಿಕ್ಷಕರು ಸುಮ್ಮನೆ ನೋಡುತ್ತ ನಿಲ್ಲುವರು; ಇಲ್ಲವೆ, ಮಕ್ಕಳಿಗೆ ಆ ಕೆಲಸ ಹಚ್ಚಿ ತಾವು ಹೊರಗೆ ತಿರುಗಾಡಿ ಬರುವರು.

ಶಿಕ್ಷಕ— ಅದೇಕೆ ? ನಾವು ಒಮ್ಮೊಮ್ಮೆ ಭಾಗ ವಹಿಸುತ್ತೇವೆ. ನಮ್ಮ ಮುಖ್ಯ ಕೆಲಸ ಮೇಲ್ವಿಚಾರಣೆ.

ಇನ್‌ಸ್ಪೆಕ್ಟರ— ಅಲ್ಲ, ಮಕ್ಕಳಕೂಡ ಪ್ರತಿನಿತ್ಯ ನೀವು ಸಫಾಇ, ಕೆಲಸದಲ್ಲಿ ಭಾಗವಹಿಸಬೇಕು. ಭಾಗ ವಹಿಸುತ್ತ ಮೇಲ್ವಿಚಾರಣೆ ಮಾಡಬೇಕು.

ಪಾಲಕ— ಅಲ್ರೀ ಸಾಹೇಬರೇ, ಎರಡುನೂರಾ ಐವತ್ತು ಹುಡುಗರಿಗೆ ದಿನಾಲು ಇಲ್ಲಿ ಸಫಾಯಿ ಕೆಲಸ ವಾದರೂ ಏನಿರುತ್ತದೆ? ಸುಮ್ಮನೆ ಶಾಲೆಯ ಆವಾರದಲ್ಲಿ ಕುಳಿತು ಹರಳು ಆರಿಸುವದನ್ನು ನೋಡುತ್ತೇವೆ.

ಶಿಕ್ಷಕ— ಸ್ಥಳಾಭಾವ ಬಹಳವಿದೆ. ಅದಕ್ಕೆ ನಾವೇನು ಮಾಡುಬೇಕು "

ಇನ್‌ಸ್ಪೆಕ್ಟರ— "ಸಫಾಇ" ಇದರ ಸಂಪೂರ್ಣ ಸರಿಯಾದ ಅರ್ಥವನ್ನೇ ನೀವು ತಿಳಿದಿಲ್ಲ. ಶಾಲೆಯ ಒಳಗೂ ಹೊರಗೂ ಇದ್ದ ಕಸವನ್ನು ತೆಗೆದುಹಾಕುವಷ್ಟೇ 'ಸಫಾಇ' ಅಲ್ಲ. ಅದು ಒಂದು ಭಾಗ ಮಾತ್ರ. ಎರಡನೆಯ ಭಾಗವೆಂದರೆ, ಅಲ್ಲಲ್ಲಿ ಬಿದ್ದಿದ್ದ ತಗ್ಗುಗಳನ್ನು ಸರಿಪಡಿಸುವುದು. ಶಾಲೆಯ ಗೋಡೆಗಳ ಮೇಲಿನ ಧೂಳು ಜಾಡಿಸುವುದು. ಗೋಡೆಗಳಲ್ಲಿಯ ತೂತುಗಳನ್ನು ಮುಚ್ಚುವುದು. ಚಿತ್ರಪಟಗಳನ್ನು ಸರಿಪಡಿಸುವುದು, ಉಪಕರಣಗಳ ದುರಸ್ತಿ, ಯಾವ ಯಾವ ಉಪಕರಣಗಳು ಎಲ್ಲಿ ಎಲ್ಲಿ ಇರಬೇಕು, ಅಲ್ಲಿಯೇ ಇಡುವುದು. ಒಟ್ಟಾರೆ ಶಾಲೆಯಲ್ಲಿ ಸ್ವಚ್ಛತೆ ಹಾಗೂ ಸೌಂದರ್ಯದ ವಾತಾವರಣವನ್ನು ನಿರ್ಮಾಣ ಮಾಡುವುದು. ಮೂರನೆಯ ಭಾಗವೆಂದರೆ, ಪ್ರಾರ್ಥನೆಗೆ ಕುಳಿತಾಗ, ನಮ್ಮ ಮನಸ್ಸಿನಲ್ಲಿಯ ಕೆಟ್ಟ ಭಾವನೆ, ಕೆಟ್ಟ ವಿಚಾರಗಳನ್ನು ಕಸಗೂಡಿಸಿ ತೆಗೆಯುವುದು. ಅವು ಬಾರದಂತೆ ಮನಸ್ಸಿನಲ್ಲಿಯ ತಗ್ಗುಗಳನ್ನು, ತೂತುಗಳನ್ನು ಮುಚ್ಚುವುದು. ಇನ್ನು ನಾಲ್ಕನೆಯದೆಂದರೆ, 'ಸಫಾಇ' ಕೆಲಸ ನಡೆದಾಗ, ಪ್ರಾರ್ಥನೆ ನಡೆದಾಗ, ನಾಲ್ಕು ಜನ ಇತರರ ಕೂಡ ಸಹಕಾರ ಹಾಗು ಶಿಸ್ತಿನಿಂದ ಕೆಲಸ ಮಾಡುವದನ್ನು ಕಲಿಯುವುದು. ಮನಸ್ಸಿನಲ್ಲಿ ಒಳ್ಳೆಯ ವಿಚಾರ, ದೇವರಲ್ಲಿ ಭಕ್ತಿ, ಸೇವಾ ಭಾವ ಇತ್ಯಾದಿ ಒಳ್ಳೆಯ ಗುಣಗಳ ಸುಂದರ ಅರಮನೆಯನ್ನು ಮನಸ್ಸಿನಲ್ಲಿ ನಿರ್ಮಿಸುವುದು—ಹೀಗೆ ವಿವಿಧವಾದ 'ಸಫಾಇ' ಕಾರ್ಯಕ್ರಮದ ಅಂಶಗಳನ್ನು ಗಮನಿಸಿ ಶಿಕ್ಷಕರೂ, ಹುಡುಗರೂ ಕೆಲಸ ಮಾಡಿದರೆ, ಮುಂದೆ ಮಕ್ಕಳು ಸುಂದರ ಮನೆ ಹಾಗೂ ಸುಂದರ ಸಮಾಜಗಳನ್ನು ನಿರ್ಮಿಸಲು ಸಮರ್ಥರಾಗುವುದಿಲ್ಲವೇ ?

ಪಾಲಕ— ಇವೆಲ್ಲ ನಮಗೆ ಗೊತ್ತಿದ್ದಿಲ್ಲ ಬಿಡಿರಿ. ಮತ್ತೆ ಈ ಶಿಕ್ಷಕರಿಗಾದರೂ ಇವೆಲ್ಲಿ ಗೊತ್ತಿವೆ ? ಸರ್ಕ್ಯುಲರ ಬಂದಿವೆ. ಅದಕ್ಕೆ ಮಾಡುತ್ತೇವೆಂದು ಹೇಳುತ್ತಾರೆ.

ಶಿಕ್ಷಕ— ಸ್ವಲ್ಪ ಮಟ್ಟಿಗೆ ಕಾಲೇಜಿನಲ್ಲಿ ಇವನ್ನು ಹೇಳಿದ್ದರು. ಅದರೆ ಎಲ್ಲಾ ಮರೆತಿತ್ತು. ಇನ್ನು

ಮೇಲೆ ಸಾಹೇಬರು ಹೇಳಿದಂತೆ ಮಾಡುತ್ತ ಹೋಗುತ್ತೇವೆ.

ಪಾಲಕ— ಈ ಮಾತು ಇರಲಿ. ಆ ನೂಲುವುದು, ನೇಯುವುದು ಯಾಕೆ ಬೇಕು. ನಮ್ಮ ಮಕ್ಕಳಿಗೆ? ನಮ್ಮ ಮಕ್ಕಳೇನು ನೇಕಾರರಾಗುವುದು ಬೇಕಾಗಿಲ್ಲ ನಮಗೆ.

ಇನ್‌ಸ್ಪೆಕ್ಟರ— ಮಕ್ಕಳನ್ನು ನೇಕಾರರನ್ನಾಗಿ ಮಾಡಲಿಕ್ಕೆ ಅವನ್ನು ಕಲಿಸುವದಿಲ್ಲ.

ಪಾಲಕ— ಮತ್ತೇಕೆ? ಸರ್ಕ್ಯೂಲರ ಬಂದಿದೆಯೆಂದೋ?

ಇನ್‌ಸ್ಪೆಕ್ಟರ—(ನಕ್ಕು) ಹಾಗೆ ಶಿಕ್ಷಕರು ಹೇಳಿದರೇನು? ಇಲ್ಲಿ ಕೇಳಿರಿ. ಮಕ್ಕಳಿಗೆ ಕೇವಲ ಪುಸ್ತಕೀ ವಿದ್ಯೆಯನ್ನು ಕೊಟ್ಟರೆ, ತೀರ ಬೇಸರ ಬರುವುದಲ್ಲದೇ ಹಾಗೆ ಕಲಿತ ವಿದ್ಯೆ ರಕ್ತಗತವಾಗದು. ಉದಾಹರಣೆಗಾಗಿ ೨+೩=೫ ಎಂಬುದನ್ನು ಕೇವಲ ಬಾಯಿಪಾಠ ಮಾಡಿಸುವ ಬದಲಾಗಿ ತಾವು ಪ್ರತ್ಯಕ್ಷ ಮಾಡಿದ ವಸ್ತುಗಳನ್ನು ಎಣಿಸಿ, ಕೂಡಿಸಿ ತಿಳಿದುಕೊಂಡರೆ ಹೆಚ್ಚು ಚನ್ನಾಗಿ ತಿಳಿಯುವದು. ಒಬ್ಬ ಹುಡುಗನು ಎರಡು ಹಂಜಿಗಳನ್ನು ಉಪಯೋಗಿಸಿದ. ಇನ್ನೊಬ್ಬ ಮೂರು ಹಂಜಿಗಳನ್ನು ಉಪಯೋಗಿಸಿದಾಗ, ಇಬ್ಬರೂ ಕೂಡಿ ಎಷ್ಟು ಹಂಜಿಗಳನ್ನು ಉಪಯೋಗಿಸಿದಂತಾಯಿತು ಎಂಬುದನ್ನು ಪ್ರತ್ಯಕ್ಷ ಅನುಭವದಿಂದ ತಿಳಿದುಕೊಂಡರೆ, ಅದು ಹೆಚ್ಚು ಮನಸ್ಸಿನಲ್ಲಿ ಮೂಡುವುದು. ಇದಲ್ಲದೆ ಮಕ್ಕಳು ಕೃತಿಪ್ರಿಯರು, ಅದರಲ್ಲಿ ಆಸ್ಥೆಯುಳ್ಳವರು, ಅವರಿಗೆ ಬೇಸರ ಬರದಂತೆ ವಿದ್ಯೆ ಸಾಗುವುದು, ಕೃತಿಯು ಬರುವುದು. ಉಪಕರಣಗಳನ್ನು ಶಿಸ್ತಿನಿಂದ ತೆಗೆದುಕೊಳ್ಳುವುದೂ, ಹಂಚುವದೂ, ತೆಗೆದಿಡುವದೂ, ಉಳಿದವರ ಕೂಡ ಸಹಕಾರದಿಂದ ಕೆಲಸ ಮಾಡುವುದು ಶಾರೀರಿಕ ಶ್ರಮದ ಬಗೆಗೆ ಗೌರವ ಇತ್ಯಾದಿ ಸಂಗತಿಗಳು ನಿತ್ಯ ನಡೆದು ಮಕ್ಕಳ ಮನಸ್ಸಿಗೆ ಅವಯವಗಳಿಗೆ ಒಳ್ಳೆಯ ರೂಢಿಯಾಗುತ್ತದೆ. ಕೃತಿಯ ಮುಖಾಂತರ ಕಲಿ ಎಂಬ ತತ್ತ್ವವನ್ನು ಮುಂದುವರಿದ ಎಲ್ಲ ದೇಶಗಳು ಒಪ್ಪಿರುವಾಗ ನಮ್ಮ ದೇಶ ಹಿಂದುಳಿಯಬೇಕೆ?

ಪಾಲಕ— ಈ ನೂಲುವ ನೇಯುವ ಕೃತಿಯ ಮುಖಾಂತರ ಭಾಷೆ, ಇತಿಹಾಸ, ಭೂಗೋಲ, ಸಾಮಾನ್ಯವಿಜ್ಞಾನ ಈ ಎಲ್ಲ ವಿಷಯಗಳನ್ನು ಕಲಿಸುವುದು ಸಾಧ್ಯವೇ? ಇವೆಲ್ಲ ಹುಚ್ಚು ವಿಚಾರವಲ್ಲವೇ?

ಇನ್‌ಸ್ಪೆಕ್ಟರ— ನೂಲುವದು, ನೇಯುವದು ಇವು ಶಾಲೆಯಲ್ಲಿ ನಡೆಯುವ ಆರ್ಥಿಕ ಚಟುವಟಿಕೆ ಮಾತ್ರ. ಇವಲ್ಲದೆ ಹಬ್ಬ-ಹುಣ್ಣಿವೆಗಳ ಆಚರಣೆ, ರಾಷ್ಟ್ರೀಯ ದಿನಾಚರಣೆ, ವನಮಹೋತ್ಸವ, ಪ್ರದರ್ಶನ ಇತ್ಯಾದಿಗಳು ನಡೆಯುತ್ತವೆ. ಉದಾಹರಣೆಗಾಗಿ ಬಸವಜಯಂತಿಯ ಆಚರಣೆಯಲ್ಲಿ ಬಸವೇಶ್ವರನ ಚರಿತ್ರೆ, ತತ್ವಗಳು, ವಚನಗಳು, ಶಿವಾನುಭವ ಮಂಟಪ ಇವನ್ನೆಲ್ಲ ತಿಳಿಸಲು ಬರುತ್ತದೆ. ಕೃಷ್ಣಾಷ್ಟಮಿಯ ದಿನ ಮಹಾಭಾರತದ ಕಥಾಭಾಗವನ್ನು ಜೋಡಿಸಲಿಕ್ಕೆ ಬರುತ್ತದೆ. ವನಮಹೋತ್ಸವಕ್ಕೆ ಸಂಬಂಧಿಸಿ, ಭೂಗೋಲ, ಸಾಮಾನ್ಯ ವಿಜ್ಞಾನ ಇತ್ಯಾದಿಗಳನ್ನು ಹೇಳಲು ಬರುತ್ತದೆ.

ಪಾಲಕ— ಆದರೆ ಶಿಕ್ಷಕರು ಕೇವಲ ದಿನಾಚರಣೆ ಮಾಡುತ್ತಾರೆ. ಈ ವಿಷಯಗಳಿಗೆ ಸಂಬಂಧಿಸಿ ತಿಳಿಸಕೊಟ್ಟದ್ದನ್ನು ನಾವೇನೂ ನೋಡಿಲ್ಲ. ಮಕ್ಕಳಿಗೆ ಪ್ರಶ್ನೆ ಕೇಳಿ ನೀವೂ ಖಾತ್ರಿ ಮಾಡಿಕೊಳ್ಳಬಹುದು.

ಶಿಕ್ಷಕ— ನಿಜವಾಗಿ ಹೇಳಬೇಕಾದರೆ, ಈ ತಂತ್ರ ಒಳ್ಳೇ ಕಠಿಣವಿದೆ.

ಇನ್‌ಸ್ಪೆಕ್ಟರ—ಶಿಕ್ಷಕರು, ತಮ್ಮ ಶಾಲೆಗಳಲ್ಲಿ ಚಟುವಟಿಕೆ ನಡೆಸಿದಾಗ, ಈ ಮಾತುಗಳನ್ನು ಲಕ್ಷ್ಯದಲ್ಲಿಡದಿದ್ದರೆ, ಮತ್ತು ಈ ದಿಸೆಯಲ್ಲಿ ಯಾವಾಗಲೂ ವಿಚಾರಕ್ಕೆ ತೊಡಗದಿದ್ದರೆ, ನಮ್ಮ ಶಿಕ್ಷಣಕ್ಕೆ ಹಾನಿಯುಂಟು. ಶಿಕ್ಷಕರು ಕೂಡಿದಾಗಲೆಲ್ಲ, ಕೇವಲ ವರ್ಗಾವರ್ಗಿ, ಸಾಹೇಬರ ಟೀಕೆ, ಇಲ್ಲವೆ, ರಾಜಕೀಯ ಮುಖಂಡರ ವರ್ಣನೆ, ಇಲ್ಲವೆ ಟೀಕೆ ಈ ವಿಚಾರಗಳಲ್ಲಿ ತೊಡಗುವ ಬದಲು ತಮ್ಮ ಪರಸ್ಪರ ಅನುಭವಗಳನ್ನು ತಿಳಿದುಕೊಂಡು ಸುಧಾರಣೆ ಮಾಡಿಕೊಳ್ಳಲು ಯತ್ನಿಸಬೇಕು. ವಿಚಾರಶೀಲರಾಗಬೇಕು.

ಪಾಲಕ— ಈ ಪ್ರವಾಸವೇಕೆ ಬೇಕು ನಮ್ಮ ಮಕ್ಕಳಿಗೆ? ಸುಮ್ಮನೇ ಊಟಾ ಕಟ್ಟಿಕೊಂಡು, ಪಟ್ಟಿ ಇಸಕೊಂಡು ಹೋಗುವರು. ವೇಳೆ, ಹಣ, ಎಲ್ಲ ವ್ಯರ್ಥ.

ಇನ್‌ಸ್ಪೆಕ್ಟರ— ಪ್ರವಾಸದ ಮಹತ್ವ ನಿಮಗೆ ಸರಿಯಾಗಿ ತಿಳಿದಿಲ್ಲ, ಪ್ರವಾಸದ ಯೋಜನೆ ಚನ್ನಾಗಿ ಮಾಡಿಕೊಂಡು ಅದರಂತೆ ಚಟುವಟಿಕೆಯನ್ನು ಕೈಕೊಂಡರೆ, ಒಳ್ಳೇ ಲಾಭವಿದೆ. ಶಾಲೆಯಿಂದ ಪ್ರವಾಸದ ಸ್ಥಳದ ದೂರ ಹಾಗು ದಿಸೆ ಇವುಗಳ ಆಕೃತಿ ತೆಗೆಯುವುದು, ಆ ಸ್ಥಳದ ಐತಿಹಾಸಿಕ, ಭೌಗೋಲಿಕ ಮಾಹಿತಿ; ಅಲ್ಲಿದ್ದ ಗಿಡಗಳ, ಎಲೆಗಳ, ಪ್ರಾಣಿಗಳ ಬಗ್ಗೆ ಪ್ರತ್ಯಕ್ಷ ಮಾಹಿತಿ;

ವರ ಹೆಸರು ತೆಗೆದುಕೊಳ್ಳಬೇಡಿರಿ. ಈ ಶಿಕ್ಷಣದಿಂದ ನಮಗೇನು ಲಾಭವಿದೆ ನಮಗೆ ತಿಳಿಯುವಂತೆ ಹೇಳಿರಿ.

ಇನ್‌ಸ್ಪೆಕ್ಟರ್— ಒಳ್ಳೇದು, ಮಕ್ಕಳ ವ್ಯಯಕ್ತಿಕ ಸ್ವಚ್ಛತೆಯಿಂದ ಲಾಭವಿಲ್ಲವೇ ?

ಪಾಲಕ— ಅವರ ಸ್ವಚ್ಛತೆಯ ಬಗೆಗೆ ಏನು ನಡೆಯುತ್ತಿದೆ ಶಾಲೆಯಲ್ಲಿ? ನೀವು ಬೇಕಾದರೆ ನೋಡಿರಿ. ಹುಡುಗರು ಎಷ್ಟು ಹೊಲಸು ಕಾಣುತ್ತಿದ್ದಾರೆ! ಅವರ ಅಂಗಿಯ ಗುಂಡಿ ಹರಿದು ಹೋಗಿವೆ. ಹಾಗೆಯೇ ಎದೆ ತಕ್ಕೊಂಡು ಕುಳಿತಿದ್ದಾರೆ. ಮುಖ ತೊಳೆದುಕೊಂಡಿಲ್ಲ.

ಇನ್‌ಸ್ಪೆಕ್ಟರ—ಯಾಕೆ ಶಿಕ್ಷಕರೇ, ಮಕ್ಕಳ ವೈಯಕ್ತಿಕ ಸ್ವಚ್ಛತೆಯನ್ನು ನೋಡುವದಿಲ್ಲವೇ ?

ಶಿಕ್ಷಕ— ಹೇಳಿ ಹೇಳಿ ಬೇಸತ್ತಿದ್ದೇವೆ. ದಿನಾಲು ಹೇಳುತ್ತೇವೆ. ಮತ್ತೆ ಮಕ್ಕಳು ಹಾಗೇ ಬಂದರೆ ನಾವೇನು ಮಾಡುವುದು ?

ಇನ್‌ಸ್ಪೆಕ್ಟರ— ಇಲ್ಲೇ ತಪ್ಪಿರುವದು. ಕೇವಲ ಹೇಳಿ ಫಲವಿಲ್ಲ. ಶಾಲೆಯಲ್ಲಿ ಅಂತಹ ಅಸ್ವಚ್ಛ ಮಕ್ಕಳನ್ನು ಕರೆದು ಅವರಿಂದ ಹಲ್ಲುತಿಕ್ಕುವುದು, ಮುಖ ತೊಳೆದುಕೊಳ್ಳುವುದು, ಅಂಗಿಗಳಿಗೆ ಹರಿದಲ್ಲಿ ತೇಪೆ ಹಚ್ಚುವುದು, ಗುಂಡಿಹಚ್ಚಿಕೊಳ್ಳುವುದು ಇವೆಲ್ಲವನ್ನು ಪ್ರತ್ಯಕ್ಷ ಮಾಡಿಸಬೇಕು.

ಪಾಲಕ— ಆದಾಯಿತು. ಕಸಗುಡಿಸುವದರಿಂದೇನು ಫಲ ?

ಇನ್‌ಸ್ಪೆಕ್ಟರ— ಇಲ್ಲಿ ನೋಡಿರಿ. ಮನೆಯನ್ನು ನೀವುಸ್ವಚ್ಛವಾಗಿ ಇಡಿಸುವದಿಲ್ಲವೇ ? ಗುಡಿಗುಂಡಾರಗಳನ್ನು ಸ್ವಚ್ಛಗೊಳಿಸುವದಿಲ್ಲವೇ? ಹಾಗೆ ಶಾಲೆ ಎಂಬುದು ನಮ್ಮ ಮನೆ ಎಂಬ ಕಲ್ಪನೆ ಶಿಕ್ಷಕರಿಗೂ-ಮಕ್ಕಳಿಗೂ ಕೂಡಿಯೇ ಬರಬೇಕು.

ಪಾಲಕ— ಶಿಕ್ಷಕರು ಸುಮ್ಮನೆ ನೋಡುತ್ತ ನಿಲ್ಲುವರು; ಇಲ್ಲವೆ, ಮಕ್ಕಳಿಗೆ ಆ ಕೆಲಸ ಹಚ್ಚಿ ತಾವು ಹೊರಗೆ ತಿರುಗಾಡಿ ಬರುವರು.

ಶಿಕ್ಷಕ— ಅದೇಕೆ? ನಾವು ಒಮ್ಮೊಮ್ಮೆ ಭಾಗವಹಿಸುತ್ತೇವೆ. ನಮ್ಮ ಮುಖ್ಯ ಕೆಲಸ ಮೇಲ್ವಿಚಾರಣೆ.

ಇನ್‌ಸ್ಪೆಕ್ಟರ— ಅಲ್ಲ, ಮಕ್ಕಳಕೂಡ ಪ್ರತಿನಿತ್ಯ ನೀವು ಸಫಾಇ, ಕೆಲಸದಲ್ಲಿ ಭಾಗವಹಿಸಬೇಕು. ಭಾಗವಹಿಸುತ್ತ ಮೇಲ್ವಿಚಾರಣೆ ಮಾಡಬೇಕು.

ಪಾಲಕ— ಅಲ್ರೀ ಸಾಹೇಬರೇ, ಎರಡುನೂರಾ ಐವತ್ತು ಹುಡುಗರಿಗೆ ದಿನಾಲು ಇಲ್ಲಿ ಸಫಾಯಿ ಕೆಲಸವಾದರೂ ಏನಿರುತ್ತದೆ? ನಮ್ಮನೆ ಶಾಲೆಯ ಆವಾರದಲ್ಲಿ ಕುಳಿತು ಹರಳು ಆರಿಸುವದನ್ನು ನೋಡುತ್ತೇವೆ.

ಶಿಕ್ಷಕ— ಸ್ಥಳಾಭಾವ ಬಹಳವಿದೆ. ಅದಕ್ಕೆ ನಾವೇನು ಮಾಡುಬೇಕು "

ಇನ್‌ಸ್ಪೆಕ್ಟರ— "ಸಫಾಇ" ಇದರ ಸಂಪೂರ್ಣ ಸರಿಯಾದ ಅರ್ಥವನ್ನೇ ನೀವು ತಿಳಿದಿಲ್ಲ. ಶಾಲೆಯ ಒಳಗೂ ಹೊರಗೂ ಇದ್ದ ಕಸವನ್ನು ತೆಗೆದುಹಾಕುವಷ್ಟೇ 'ಸಫಾಇ' ಅಲ್ಲ. ಅದು ಒಂದು ಭಾಗ ಮಾತ್ರ. ಎರಡನೆಯ ಭಾಗವೆಂದರೆ, ಅಲ್ಲಲ್ಲಿ ಬಿದ್ದಿದ್ದ ತಗ್ಗುಗಳನ್ನು ಸರಿಪಡಿಸುವುದು. ಶಾಲೆಯ ಗೋಡೆಗಳ ಮೇಲಿನ ಧೂಳು ಜಾಡಿಸುವುದು. ಗೋಡೆಗಳಲ್ಲಿಯ ತೂತುಗಳನ್ನು ಮುಚ್ಚುವುದು. ಚಿತ್ರಪಟಗಳನ್ನು ಸರಿಪಡಿಸುವುದು, ಉಪಕರಣಗಳ ದುರಸ್ತಿ, ಯಾವ ಯಾವ ಉಪಕರಣಗಳು ಎಲ್ಲಿ ಎಲ್ಲಿ ಇರಬೇಕು, ಅಲ್ಲಿಯೇ ಇಡುವುದು. ಒಟ್ಟಾರೆ ಶಾಲೆಯಲ್ಲಿ ಸ್ವಚ್ಛತೆ ಹಾಗೂ ಸೌಂದರ್ಯದ ವಾತಾವರಣವನ್ನು ನಿರ್ಮಾಣ ಮಾಡುವುದು. ಮೂರನೆಯ ಭಾಗವೆಂದರೆ, ಪ್ರಾರ್ಥನೆಗೆ ಕುಳಿತಾಗ, ನಮ್ಮ ಮನಸ್ಸಿನಲ್ಲಿಯ ಕೆಟ್ಟ ಭಾವನೆ, ಕೆಟ್ಟ ವಿಚಾರಗಳನ್ನು ಕಸಗೂಡಿಸಿ ತೆಗೆಯುವುದು. ಅವು ಬಾರದಂತೆ ಮನಸ್ಸಿನಲ್ಲಿಯ ತಗ್ಗುಗಳನ್ನು, ತೂತುಗಳನ್ನು ಮುಚ್ಚುವುದು. ಇನ್ನು ನಾಲ್ಕನೆಯದೆಂದರೆ, 'ಸಫಾಇ' ಕೆಲಸ ನಡೆದಾಗ, ಪ್ರಾರ್ಥನೆ ನಡೆದಾಗ, ನಾಲ್ಕು ಜನ ಇತರರ ಕೂಡ ಸಹಕಾರ ಹಾಗು ಶಿಸ್ತಿನಿಂದ ಕೆಲಸ ಮಾಡುವದನ್ನು ಕಲಿಯುವುದು. ಮನಸ್ಸಿನಲ್ಲಿ ಒಳ್ಳೆಯ ವಿಚಾರ, ದೇವರಲ್ಲಿ ಭಕ್ತಿ, ಸೇವಾಭಾವ ಇತ್ಯಾದಿ ಒಳ್ಳೆಯ ಗುಣಗಳ ಸುಂದರ ಅರಮನೆಯನ್ನು ಮನಸ್ಸಿನಲ್ಲಿ ನಿರ್ಮಿಸುವುದು—ಹೀಗೆ ವಿವಿಧವಾದ 'ಸಫಾಇ' ಕಾರ್ಯಕ್ರಮದ ಅಂಶಗಳನ್ನು ಗಮನಿಸಿ ಶಿಕ್ಷಕರೂ, ಹುಡುಗರೂ ಕೆಲಸ ಮಾಡಿದರೆ, ಮುಂದೆ ಮಕ್ಕಳು ಸುಂದರ ಮನೆ ಹಾಗೂ ಸುಂದರ ಸಮಾಜಗಳನ್ನು ನಿರ್ಮಿಸಲು ಸಮರ್ಥರಾಗುವುದಿಲ್ಲವೇ ?

ಪಾಲಕ— ಇವೆಲ್ಲ ನಮಗೆ ಗೊತ್ತಿದ್ದಿಲ್ಲ ಬಿಡಿರಿ. ಮತ್ತೆ ಈ ಶಿಕ್ಷಕರಿಗಾದರೂ ಇವೆಲ್ಲಿ ಗೊತ್ತಿವೆ ? ಸರ್ಕ್ಯುಲರ ಬಂದಿವೆ. ಅದಕ್ಕೆ ಮಾಡುತ್ತೇವೆಂದು ಹೇಳುತ್ತಾರೆ.

ಶಿಕ್ಷಕ— ಸ್ವಲ್ಪ ಮಟ್ಟಿಗೆ ಕಾಲೇಜಿನಲ್ಲಿ ಇವನ್ನು ಹೇಳಿದ್ದರು. ಆದರೆ ಎಲ್ಲಾ ಮರೆತಿತ್ತು. ಇನ್ನು

ಮೇಲೆ ಸಾಹೇಬರು ಹೇಳಿದಂತೆ ಮಾಡುತ್ತ ಹೋಗುತ್ತೇವೆ.

ಪಾಲಕ— ಈ ಮಾತು ಇರಲಿ. ಆ ನೂಲುವುದು, ನೇಯುವುದು ಯಾಕೆ ಬೇಕು. ನಮ್ಮ ಮಕ್ಕಳಿಗೆ ? ನಮ್ಮ ಮಕ್ಕಳೇನು ನೇಕಾರರಾಗುವುದು ಬೇಕಾಗಿಲ್ಲ ನಮಗೆ.

ಇನ್‌ಸ್ಪೆಕ್ಟರ— ಮಕ್ಕಳನ್ನು ನೇಕಾರರನ್ನಾಗಿ ಮಾಡಲಿಕ್ಕೆ ಅವನ್ನು ಕಲಿಸುವದಿಲ್ಲ.

ಪಾಲಕ— ಮತ್ತೇಕೆ ? ಸರ್ಕ್ಯುಲರ ಬಂದಿವೆಯೆಂದೋ ?

ಇನ್‌ಸ್ಪೆಕ್ಟರ—(ನಕ್ಕು) ಹಾಗೆ ಶಿಕ್ಷಕರು ಹೇಳಿದರೇನು ? ಇಲ್ಲಿ ಕೇಳಿರಿ. ಮಕ್ಕಳಿಗೆ ಕೇವಲ ಪುಸ್ತಕೀ ವಿದ್ಯೆಯನ್ನು ಕೊಟ್ಟರೆ, ತೀರ ಬೇಸರ ಬರುವುದಲ್ಲದೇ ಹಾಗೆ ಕಲಿತ ವಿದ್ಯೆ ರಕ್ತಗತವಾಗದು. ಉದಾಹರಣೆಗಾಗಿ ೨+೩=೫ ಎಂಬುದನ್ನು ಕೇವಲ ಬಾಯಿಪಾಠ ಮಾಡಿಸುವ ಬದಲಾಗಿ ತಾವು ಪ್ರತ್ಯಕ್ಷ ಮಾಡಿದ ವಸ್ತುಗಳನ್ನು ಎಣಿಸಿ, ಕೂಡಿಸಿ ತಿಳಿದುಕೊಂಡರೆ ಹೆಚ್ಚು ಚನ್ನಾಗಿ ತಿಳಿಯುವದು. ಒಬ್ಬ ಹುಡುಗನು ಎರಡು ಹಂಜಿಗಳನ್ನು ಉಪಯೋಗಿಸಿದ. ಇನ್ನೊಬ್ಬ ಮೂರು ಹಂಜಿಗಳನ್ನು ಉಪಯೋಗಿಸಿದಾಗ, ಇಬ್ಬರೂ ಕೂಡಿ ಎಷ್ಟು ಹಂಜಿಗಳನ್ನು ಉಪಯೋಗಿಸಿದಂತಾಯಿತು ಎಂಬುದನ್ನು ಪ್ರತ್ಯಕ್ಷ ಅನುಭವದಿಂದ ತಿಳಿದುಕೊಂಡರೆ, ಅದು ಹೆಚ್ಚು ಮನಸ್ಸಿನಲ್ಲಿ ಮೂಡುವುದು. ಇದಲ್ಲದೆ ಮಕ್ಕಳು ಕೃತಿಪ್ರಿಯರು, ಅದರಲ್ಲಿ ಆಸ್ಥೆಯುಳ್ಳವರು, ಅವರಿಗೆ ಬೇಸರ ಬರದಂತೆ ವಿದ್ಯೆ ಸಾಗುವುದು, ಕೃತಿಯು ಬರುವುದು. ಉಪಕರಣಗಳನ್ನು ಶಿಸ್ತಿನಿಂದ ತೆಗೆದುಕೊಳ್ಳುವುದೂ, ಹಂಚುವದೂ, ತೆಗೆದಿಡುವದೂ, ಉಳಿದವರ ಕೂಡ ಸಹಕಾರದಿಂದ ಕೆಲಸ ಮಾಡುವುದು ಶಾರೀರಿಕ ಶ್ರಮದ ಬಗೆಗೆ ಗೌರವ ಇತ್ಯಾದಿ ಸಂಗತಿಗಳು ನಿತ್ಯ ನಡೆದು ಮಕ್ಕಳ ಮನಸ್ಸಿಗೆ ಅವಯವಗಳಿಗೆ ಒಳ್ಳೆಯ ರೂಢಿಯಾಗುತ್ತದೆ. ಕೃತಿಯ ಮುಖಾಂತರ ಕಲಿ ಎಂಬ ತತ್ತ್ವವನ್ನು ಮುಂದುವರಿದ ಎಲ್ಲ ದೇಶಗಳು ಒಪ್ಪಿರುವಾಗ ನಮ್ಮ ದೇಶ ಹಿಂದುಳಿಯಬೇಕೇ ?

ಪಾಲಕ— ಈ ನೂಲುವ ನೇಯುವ ಕೃತಿಯ ಮುಖಾಂತರ ಭಾಷೆ, ಇತಿಹಾಸ, ಭೂಗೋಲ, ಸಾಮಾನ್ಯವಿಜ್ಞಾನ ಈ ಎಲ್ಲ ವಿಷಯಗಳನ್ನು ಕಲಿಸುವುದು ಸಾಧ್ಯವೇ ? ಇವೆಲ್ಲ ಹುಚ್ಚು ವಿಚಾರವಲ್ಲವೇ ?

ಇನ್‌ಸ್ಪೆಕ್ಟರ— ನೂಲುವದು, ನೇಯುವದು ಇವು ಶಾಲೆಯಲ್ಲಿ ನಡೆಯುವ ಆರ್ಥಿಕ ಚಟುವಟಿಕೆ ಮಾತ್ರ. ಇವಲ್ಲದೆ ಹಬ್ಬ-ಹುಣ್ಣಿವೆಗಳ ಆಚರಣೆ, ರಾಷ್ಟ್ರೀಯ ದಿನಾಚರಣೆ, ವನಮಹೋತ್ಸವ, ಪ್ರದರ್ಶನ ಇತ್ಯಾದಿಗಳು ನಡೆಯುತ್ತವೆ. ಉದಾಹರಣೆಗಾಗಿ ಬಸವಜಯಂತಿಯ ಆಚರಣೆಯಲ್ಲಿ ಬಸವೇಶ್ವರನ ಚರಿತ್ರೆ, ತತ್ವಗಳು, ವಚನಗಳು, ಶಿವಾನುಭವ ಮಂಟಪ ಇವನ್ನೆಲ್ಲ ತಿಳಿಸಲು ಬರುತ್ತದೆ. ಕೃಷ್ಣಾಷ್ಟಮಿಯ ದಿನ ಮಹಾಭಾರತದ ಕಥಾಭಾಗವನ್ನು ಜೋಡಿಸಲಿಕ್ಕೆ ಬರುತ್ತದೆ. ವನಮಹೋತ್ಸವಕ್ಕೆ ಸಂಬಂಧಿಸಿ, ಭೂಗೋಲ, ಸಾಮಾನ್ಯ ವಿಜ್ಞಾನ ಇತ್ಯಾದಿಗಳನ್ನು ಹೇಳಲು ಬರುತ್ತದೆ.

ಪಾಲಕ— ಆದರೆ ಶಿಕ್ಷಕರು ಕೇವಲ ದಿನಾಚರಣೆ ಮಾಡುತ್ತಾರೆ. ಈ ವಿಷಯಗಳಿಗೆ ಸಂಬಂಧಿಸಿ ತಿಳಿಸಕೊಟ್ಟದ್ದನ್ನು ನಾವೇನೂ ನೋಡಿಲ್ಲ. ಮಕ್ಕಳಿಗೆ ಪ್ರಶ್ನೆ ಕೇಳಿ ನೀವೂ ಖಾತ್ರಿ ಮಾಡಿಕೊಳ್ಳಬಹುದು.

ಶಿಕ್ಷಕ— ನಿಜವಾಗಿ ಹೇಳಬೇಕಾದರೆ, ಈ ತಂತ್ರ ಒಳ್ಳೇ ಕಠಿಣವಿದೆ.

ಇನ್‌ಸ್ಪೆಕ್ಟರ—ಶಿಕ್ಷಕರು, ತಮ್ಮ ಶಾಲೆಗಳಲ್ಲಿ ಚಟುವಟಿಕೆ ನಡೆಸಿದಾಗ, ಈ ಮಾತುಗಳನ್ನು ಲಕ್ಷ್ಯದಲ್ಲಿಡದಿದ್ದರೆ, ಮತ್ತು ಈ ದಿಸೆಯಲ್ಲಿ ಯಾವಾಗಲೂ ವಿಚಾರಕ್ಕೆ ತೊಡಗದಿದ್ದರೆ, ನಮ್ಮ ಶಿಕ್ಷಣಕ್ಕೆ ಹಾನಿಯುಂಟು. ಶಿಕ್ಷಕರು ಕೂಡಿದಾಗಲೆಲ್ಲ, ಕೇವಲ ವರ್ಗಾವರ್ಗಿ, ಸಾಹೇಬರ ಟೀಕೆ, ಇಲ್ಲವೆ, ರಾಜಕೀಯ ಮುಖಂಡರ ವರ್ಣನೆ, ಇಲ್ಲವೆ ಟೀಕೆ ಈ ವಿಚಾರಗಳಲ್ಲಿ ತೊಡಗುವ ಬದಲು ತಮ್ಮ ಪರಸ್ಪರ ಅನುಭವಗಳನ್ನು ತಿಳಿದುಕೊಂಡು ಸುಧಾರಣೆ ಮಾಡಿಕೊಳ್ಳಲು ಯತ್ನಿಸಬೇಕು. ವಿಚಾರಶೀಲರಾಗಬೇಕು.

ಪಾಲಕ— ಈ ಪ್ರವಾಸವೇಕೆ ಬೇಕು ನಮ್ಮ ಮಕ್ಕಳಿಗೆ ? ಸುಮ್ಮನೇ ಊಟಾ ಕಟ್ಟಿಕೊಂಡು, ಪಟ್ಟಿ ಇಸಕೊಂಡು ಹೋಗುವರು. ವೇಳೆ, ಹಣ, ಎಲ್ಲ ವ್ಯರ್ಥ.

ಇನ್‌ಸ್ಪೆಕ್ಟರ— ಪ್ರವಾಸದ ಮಹತ್ವ ನಿಮಗೆ ಸರಿಯಾಗಿ ತಿಳಿದಿಲ್ಲ, ಪ್ರವಾಸದ ಯೋಜನೆ ಚನ್ನಾಗಿ ಮಾಡಿಕೊಂಡು ಅದರಂತೆ ಚಟುವಟಿಕೆಯನ್ನು ಕೈಕೊಂಡರೆ, ಒಳ್ಳೇ ಲಾಭವಿದೆ. ಶಾಲೆಯಿಂದ ಪ್ರವಾಸದ ಸ್ಥಳದ ದೂರ ಹಾಗು ದಿಸೆ ಇವುಗಳ ಆಕೃತಿ ತೆಗೆಯುವುದು, ಆ ಸ್ಥಳದ ಐತಿಹಾಸಿಕ, ಭೌಗೋಲಿಕ ಮಾಹಿತಿ; ಅಲ್ಲಿದ್ದ ಗಿಡಗಳ, ಎಲೆಗಳ, ಪ್ರಾಣಿಗಳ ಬಗ್ಗೆ ಪ್ರತ್ಯಕ್ಷ ಮಾಹಿತಿ;

ಪ್ರವಾಸಕ್ಕೆ ತಗಲಿದ ವೇಳೆ ಹಾಗೂ ಅಂತರಗಳಿಂದ ವೇಳೆ ಕೆಲಸ ವೇಗದ ಲೆಕ್ಕಗಳು; ಆ ಪ್ರವಾಸಕ್ಕೆ ಸಂಬಂಧ ಪಟ್ಟ ಆಯ-ವ್ಯಯ ಪಟ್ಟಿ ತಯಾರಿಸುವುದು; ದಾರಿಯಲ್ಲಿ ದಾರಿಯ ನಿಯಮಗಳನ್ನು ಪಾಲಿಸಿ ನಡೆಯುತ್ತ ಹೋಗುವುದು: ಪ್ರವಾಸದ ಪ್ರತ್ಯಕ್ಷ ಅನುಭವಗಳ ಆಧಾರದ ಮೇಲೆ ನಿಬಂಧ ಬರೆಯುವುದು; ಪ್ರವಾಸಕ್ಕೆ ಸಂಬಂಧಿಸಿ ಕಾರ್ಯವಿಭಾಗ; ಗುಂಪಿನಲ್ಲಿ ಸಹಕಾರ; ಇವಲ್ಲದೆ, ಮನರಂಜನೆ, ಬಯಲು ಹವೆಯ ಲಾಭ ಇತ್ಯಾದಿ ನೂರಾರು ಒಳ್ಳೆಯ ಮಾತುಗಳು ಪ್ರವಾಸದಲ್ಲಿ ಅಡಕವಾಗಿವೆ.

ಪಾಲಕ--- ಇವುಗಳಲ್ಲಿ ಒಂದನ್ನೂ ನಾವು ಶಾಲೆಯಲ್ಲಿ ನೋಡುವುದಿಲ್ಲ, ಕೇಳಿರಿ ಬೇಕಾದರೆ ಈ ಶಿಕ್ಷಕರನ್ನು. ಮೊನ್ನೆ ನೊಗಲ ಸೋಮೇಶ್ವರಕ್ಕೆ ಪ್ರವಾಸಕ್ಕೆ ಹೋಗಿದ್ದರು. ಅದಕ್ಕೆ ಸಂಬಂಧಿಸಿ ಎಷ್ಟೆಷ್ಟು ಮಾಹಿತಿ ಕೊಟ್ಟಿದ್ದಾರೆ. ಎಷ್ಟು ಲೆಕ್ಕ ಹೇಳಿದ್ದಾರೆ; ಯಾವ ನಿಬಂಧ ಬರೆಯಿಸಿದ್ದಾರೆ ಕೇಳಿರಿ.

ಶಿಕ್ಷಕ— ಸಾಹೇಬರೆ, ನಿಬಂಧ ಬರೆಸಿದ್ದೇವೆ.

ಇನ್‌ಸ್ಪೆಕ್ಟರ— ತರ್ರಿ ನೋಡೋಣ.

ಶಿಕ್ಷಕ— ಇನ್ನೂ ತಪಾಸು ಮಾಡಿಲ್ಲ.

ಪಾಲಕ--- ಕೇಳಿರಿ.

ಇನ್‌ಸ್ಪೆಕ್ಟರ— ಶಿಕ್ಷಕರೇ ನಾನು ಈಗ ಹೇಳಿದ ಎಲ್ಲ ಮಾತುಗಳನ್ನು ಲಕ್ಷ್ಯದಲ್ಲಿಟ್ಟು ಪ್ರವಾಸ ಕೈಕೊಳ್ಳಬೇಕು; ವಿಷಯಗಳನ್ನು ಕಲಿಸಲು ತಂತಾನೇ ಪ್ರಸಂಗಗಳು ಬರುವವು.

ಪಾಲಕ — ಹಾಗಾದರೆ ಯಾರು ಬೇಡವೆನ್ನುವರು?

ಇನ್‌ಸ್ಪೆಕ್ಟರ— ಅದಕ್ಕೆ ನಿಮ್ಮ ಸಹಕಾರವೂ ಶಿಕ್ಷಕರಿಗೆ ಬೇಕು. ಶಿಕ್ಷಕರೂ ಈ ಎಲ್ಲಾ ಒಳ್ಳೆಯ ತತ್ತ್ವಗಳನ್ನು ಕಾರ್ಯರೂಪದಲ್ಲಿಳಿಸಲು ಯತ್ನಿಸಬೇಕು. ಇಲ್ಲವಾದರೆ, ಈ ಅತ್ಯುತ್ತಮ ಶಿಕ್ಷಣ ಪದ್ಧತಿಯನ್ನು ನಮಗೆ ಒದಗಿಸಿದ ಮಹಾತ್ಮಾ ಗಾಂಧಿಯವರಿಗೂ ನಮ್ಮ ದೇಶಕ್ಕೂ ನಾವು ದ್ರೋಹ ಬಗೆದಂತಾಗುತ್ತದೆ.

ಪಾಲಕ--- ಈಗ ಆ ಗಾಂಧೀಜಿಯವರ ಹೆಸರು ತೆಗೆದುಕೊಳ್ಳಲಡ್ಡಿಯಿಲ್ಲ.

ಇನ್‌ಸ್ಪೆಕ್ಟರ--- ಈ ಶಿಕ್ಷಣ ಪದ್ಧತಿಯ ಮರ್ಮವನ್ನು ಶಿಕ್ಷಕರು ಪಾಲಕರು ತಿಳಿದುಕೊಂಡು ಸಹಕರಿಸಿ ನಡೆದರೆ, ನಮ್ಮ ಇಂದಿನ ಮಕ್ಕಳು, ನಿಜವಾದ ತಿಳಿವಳಿಕೆಯುಳ್ಳವರಾಗಿ, ಜ್ಞಾನ, ಕೃತಿ ಎರಡನ್ನೂ ಪಡೆದು, ಸದ್ಗುಣ ಸಂಪನ್ನರಾಗಿ ಬೆಳೆದು ಹೊಸ ಸಮಾಜವನ್ನು ಕಟ್ಟುವರೆಂಬಲ್ಲಿ ಸಂಶಯವಿಲ್ಲ. ಹಿಂದೆ ಕೇವಲ ಪುಸ್ತಕೀ ವಿದ್ಯೆ ಕಲಿತು, ಜನರನ್ನು ಮೋಸಗೊಳಿಸಿ, ಹೇರಳ ಹಣವನ್ನು ಗಳಿಸಿ, ಉಪ್ಪರಿಗೆಯ ಮನೆಗಳನ್ನು ಕಟ್ಟಿಸಿ, ಐಷಾರಾಮದಲ್ಲಿದ್ದು ಬಡವರನ್ನೂ ದೈಹಿಕ ಶ್ರಮ ಮಾಡಿ ಹೊಟ್ಟೆ ಹೊರೆದುಕೊಳ್ಳುವವರನ್ನೂ ಹೀಯಾಳಿಸಿ ಉನ್ಮತ್ತರಾಗಿ ಬಾಳ್ವೆ ಮಾಡುವ ವಿದ್ಯಾವಂತರಿಗಿಂತಲೂ, ಕಲಿತ ವಿದ್ಯೆಯನ್ನು ರಕ್ತಗತ ಮಾಡಿಕೊಂಡು, ಎಲ್ಲರೊಡನೆ ಸಮಭಾವವನ್ನು ತಾಳಿ, ಸದ್ಗುಣ ಸಂಪನ್ನರಾಗಿ ಬಾಳುವ ಜೀವನ ಶಿಕ್ಷಣ ಶಾಲೆಗಳಿಂದ ಹೊರಡುವ ಒಳ್ಳೆಯ ನಾಗರಿಕರನ್ನು ನಿರ್ಮಿಸಿ ಅವರ ಮುಖಾಂತರ ಸಾಮಾಜಿಕ ಕ್ರಾಂತಿಯನ್ನು ಸಾಧಿಸಬೇಕಾದ ಗುರುತರವಾದ ಹೊಣೆ ಮುಖ್ಯವಾಗಿ ಶಿಕ್ಷಕರ ಮೇಲಿದೆ. ಅವರಿಗೆ ಪಾಲಕರು ಈ ದಿಶೆಯಲ್ಲಿ ಸಹಕಾರನಿತ್ತು ಹುರಿದುಂಬಿಸಿದರೆ, ನಮ್ಮ ಗುರಿ ಇನ್ನಷ್ಟು ಬೇಗನೆ ಸಫಲವಾಗುವುದು.

ಪಾಲಕ--- ನಿಜವಾಗಿಯೂ ನನ್ನ ತಪ್ಪುಕಲ್ಪನೆ ಈಗ ದೂರಾಯಿತು.

ಶಿಕ್ಷಕ--- ಈಗ ನನ್ನ ಬುದ್ಧಿಗೆ ಈ ಜೀವನ ಶಿಕ್ಷಣದ ಸರಿಯಾದ ದಾರಿ ತಿಳಿಯಿತು.

ಇನ್‌ಸ್ಪೆಕ್ಟರ--- ಶಿಕ್ಷಕರೆಲ್ಲ ಈ ಮೊದಲೇ ಸರಿಯಾದ ದಾರಿಯನ್ನು ತಿಳಿದೇ ಶಾಲೆ ನಡಿಸಿದ್ದಾರೆಂಬ ನನ್ನ ತಪ್ಪು ಕಲ್ಪನೆಯು ಈಗ ದೂರಾಯಿತು. ಇನ್ನು ನಾವೂ ನೀವೂ ಎಲ್ಲರೂ ನಮ್ಮ ಕರ್ತವ್ಯಕ್ಕೆ ತೊಡಗೋಣ.

ಮೂಲೋದ್ಯೋಗದ ಹೊಸ ಅಭ್ಯಾಸ ಪತ್ರಿಕೆ

(ಪ್ರಾಥಮಿಕ ಶಾಲೆಗಳಲ್ಲಿ ೧ ರಿಂದ ೬ನೆಯ ಇ. ಗಳಿಗಾಗಿ)

ಬೆಲೆ : ೦—೨—೬

ಒಬ್ಬ ಶಿಕ್ಷಕ ಸಾಲೆಗಳಿಗಾಗಿ

(ಇಯತ್ತೆ ೧ ರಿಂದ ೪)

ಬೆಲೆ : ೧ ಆಣೆ,

ಅಂಚೆ ವೆಚ್ಚ ಬೇರೆ

ಪ್ರತಿಗಳು ಸಿಗುವ ಸ್ಥಳ :

ಪ್ರಧಾನ ಸಂಪಾದಕರು ಜೀವನ ಶಿಕ್ಷಣ,

ಧಾರವಾಡ.

ರಾಷ್ಟ್ರೀಯ ಜೀವನ ಶಿಕ್ಷಣ

ಲೇಖಕರು : **ಶ್ರೀ ರಾ. ವಿ. ದೇಸಾಯಿ,** ಗಂ. ಸ. ಟ್ರೇ. ಕಾಲೇಜದ ನಿವೃತ್ತ ಮುಖ್ಯಾಧ್ಯಾಪಕರು.

ಇತ್ತೀಚೆಗೆ ಜೀವನ ಶಿಕ್ಷಣ ಪ್ರಸಾರವು ಬಹಳೆಡೆಗೆ ಆಗಿದ್ದರೂ ಜೀವನ ಶಿಕ್ಷಣದ ನಿಜವಾದ ಕಲ್ಪನೆ ಅನೇಕರಿಗೆ ಆಗಿಲ್ಲವೆಂದೆನಿಸುವದು. ಕೆಲವರು ಮೂಲೋದ್ಯೋಗ ಶಿಕ್ಷಣವೇ ಜೀವನ ಶಿಕ್ಷಣವೆಂದೂ, ಇನ್ನಿತರರು ಸಫಾಯಿ, ಸಾಂಘಿಕ ಕೆಲಸ ಮೊದಲಾದ ಕೆಲಸಗಳನ್ನು ಕೈಕೊಳ್ಳುವವೇ ಜೀವನ ಶಿಕ್ಷಣವೆಂದೂ, ಮತ್ತೆ ಕೆಲವರು ಇವೆರಡೂ ವಿಷಯಗಳನ್ನು ಕೂಡಿಸಿ ಕಲಿಸುವದೇ ಜೀವನ ಶಿಕ್ಷಣವೆಂದೂ ಊಹಿಸಿದ್ದುಂಟು. ಇದರಲ್ಲಿಯೇ ಸ್ವಲ್ಪು ಮುಂದುವರಿದು ಕುತೂಹಲದಿಂದ ವಿಚಾರಿಸಿದವರು, ಜೀವನ ಶಿಕ್ಷಣವೆಂದರೆ ಜೀವನ ಕ್ರಮಕ್ಕೆ ಬೇಕಾಗುವ ಶಿಕ್ಷಣವು; ಮತ್ತು ಅದು ರಾಷ್ಟ್ರೀಯ ಭಾವನೆಯನ್ನು ಹುಟ್ಟಿಸಲು ಅನುಕೂಲವಾಗುವದೆಂದು ರಾಷ್ಟ್ರೀಯ ಜೀವನ ಶಿಕ್ಷಣವೆಂದೂ ಕರೆದದ್ದುಂಟು. ಈ ರೀತಿಯಿಂದ ಕರೆಯುವದು ಕೆಲಮಟ್ಟಿಗೆ ಸಮಂಜಸವೆನಿಸಬಹುದು. ಆದರೆ ಕೇವಲ ಇಷ್ಟು ಸಣ್ಣ ವ್ಯಾಖ್ಯೆಯಿಂದ ಜೀವನ ಶಿಕ್ಷಣದ ಆಳವಾದ ತತ್ವಗಳು, ವೈಶಿಷ್ಟ್ಯಗಳು ಮತ್ತು ಲಾಭಗಳು ತಿಳಿಯಲಾರವು ಎಂದೆನಿಸುವದು. ಅಲ್ಲದೆ ಅದು ರಾಷ್ಟ್ರೀಯ ಭಾವನೆಯನ್ನು ಹುಟ್ಟಿಸಲು ಹೇಗೆ ಸಹಾಯಕವಾಗುವದೆಂಬುದು ಕಲ್ಪನೆಗೆ ನಿಲುಕಲಾರದೆಂದು ಭಾವಿಸಬಹುದು, ಆದ್ದರಿಂದ ಜೀವನ ಶಿಕ್ಷಣದ ನಿಜವಾದ ಅರ್ಥವನ್ನು ಮಾಡಿಕೊಳ್ಳುವದು ಮತ್ತು ಅದರ ವಿಶೇಷ ಗುಣವೈಶಿಷ್ಟ್ಯಗಳನ್ನು ಕೆಲಮಟ್ಟಿಗೆ ತಿಳಿದುಕೊಳ್ಳಲು ಪ್ರಯತ್ನಿಸುವದೇ ಈ ಲೇಖದ ಮುಖ್ಯ ಗುರಿಯಾಗಿದೆ.

ಭಾರತೀಯರನ್ನು ಪರರಾಷ್ಟ್ರದವರು ಆಳುತ್ತಿರುವಾಗ ನಮಗೆ ದೊರೆಯುತ್ತಿರುವ ಶಿಕ್ಷಣವು ಬಹಳಷ್ಟು ಪುಸ್ತಕೀಯವಾಗಿದ್ದು ಒಂದು ತರದ ಕೇವಲ ಪಾಂಡಿತ್ಯ ಬೆಳೆಸುವಂತಹದಾಗಿತ್ತೆಂದು ಎಲ್ಲರೂ ಒಪ್ಪುವರು. ಅದು ಅವ್ಯವಹಾರಿಕವಾಗಿದ್ದು ಜೀವನ ಕ್ರಮಕ್ಕೆ ಎಳ್ಳಷ್ಟೂ ಉಪಯೋಗವಿಲ್ಲದ್ದೆಂದು ತಕರಾರುಗಳು ನಮ್ಮ ಹಿಂದುಸ್ಥಾನದಲ್ಲಿ ಏಕೆ ಇಡೀ ಯುರೋಪದಲ್ಲೆಲ್ಲ ಹಬ್ಬಿದ್ದವು. ಶಿಕ್ಷಣ ತಜ್ಞ ರೂಸೋನು ತನ್ನ ಕಾಲದಲ್ಲಿ ಹೇಳಿದ್ದನ್ನು ಅನುಲಕ್ಷಿಸಿದರೆ ಈ ಮಾತು ಸ್ಪಷ್ಟವಾಗುವದು. ಅವನು ಹೇಳಿದ್ದೇನೆಂದರೆ ಪ್ರತಿಯೊಂದು ಮಗು ತನ್ನದೇ ಆದ ಒಂದು ಸ್ವತಂತ್ರ ಶೈಲಿಯಲ್ಲಿ ವಿಚಾರಮಾಡಬಲ್ಲನು; ಹೊಳೆದದ್ದನ್ನು ಹೇಳಬಲ್ಲನು. ಮತ್ತು ಪ್ರತ್ಯಕ್ಷ ಕೆಲಸ ಮಾಡಿ ಅನುಭವ ಪಡೆಯಬಲ್ಲನು. ಹೀಗಿರುವಾಗ ನಮ್ಮ ಕ್ರಮಗಳನ್ನು ಅವನ ಮೇಲೆ ಒತ್ತಾಯದಿಂದ ಹೇರುವದು ಅತ್ಯಂತ ಅಸ್ವಾಭಾವಿಕವೂ ಅಯೋಗ್ಯವೂ ಎನಿಸುವದು. ಇದರಂತೆ ನಮ್ಮ ಪೂರ್ವಜರು ಹೇಳಿದ್ದೇನೆಂದರೆ वितरति गुरुः प्राज्ञे विद्यां यथैव तथा जडे। ಇದರ ಪ್ರಕಾರ ಶಿಕ್ಷಕನು ಜಾಣ ಮತ್ತು ದಡ್ಡ ವಿದ್ಯಾರ್ಥಿಗೆ ಒಂದೇ ಪ್ರಕಾರದ ವಿದ್ಯೆಯನ್ನು ಹೇಳಿಕೊಟ್ಟರೂ ದಡ್ಡನು ಜಾಣ ವಿದ್ಯಾರ್ಥಿಯನ್ನು ಸರಿಗಟ್ಟಲಾರನು. ಹೀಗಿರುವಾಗ ಶಿಕ್ಷಕ ಮತ್ತು ವಿಷಯ ಪ್ರಾಧಾನ್ಯ ಶಿಕ್ಷಣವು ತಿಲಮಾತ್ರವೂ ಉಪಯೋಗವಾಗಲಾರದು. ಅಂತೆಯೇ ರೂಸೋ, ಪೆಸ್ಟೆಲಾಝಿ, ಹರ್ಬಾರ್ಟ, ಫ್ರೊಬೆಲ್ ಮೊದಲಾದ ಶಿಕ್ಷಣ ತಜ್ಞರು ಶಿಶುಪ್ರಾಧಾನ್ಯ ಶಿಕ್ಷಣವನ್ನು ಪ್ರತಿಪಾದಿಸಿದರು. ಶಿಶುವಿನ ಅಂತಃಶಕ್ತಿಗಳನ್ನು ಸ್ಫುರಗೊಳಿಸಿ ಸ್ವಾಭಾವಿಕವಾಗಿ ಅವನು ತನ್ನ ಬುದ್ಧಿ, ಶರೀರ ಮತ್ತು ಆತ್ಮಗಳನ್ನು ವಿಕಾಸ ಮಾಡಿಕೊಳ್ಳುವ ಯೋಗ್ಯ ರೀತಿಗಳನ್ನು ಒದಗಿಸಿಕೊಡುವದು ಮತ್ತು ತಕ್ಕ ಅಭಿಲಾಷೆ ಹುಟ್ಟಿಸುವಂಥ ವಿಧಾನಗಳನ್ನು ಕಲಿಸುವದು ಶಿಕ್ಷಣ ಕ್ರಮದಲ್ಲಿ ಇರಬೇಕು. ಹೊರತು ಕೇವಲ ವಿಷಯಾಭ್ಯಾಸ ಮಾಡಿಸುವ ಯಾಂತ್ರಿಕ ಕ್ರಮವಿರಕೂಡದು. ಮಗುವಿನಲ್ಲಿ ಕುತೂಹಲ ಪ್ರವೃತ್ತಿಯು ಬಲವಾಗಿರುವದು. ಮತ್ತು ಅವನು ಚಟುವಟಿಕೆ ಪ್ರಿಯನು. ಈ ಸಂಗತಿಗಳನ್ನು ಅರಿತು ಶಿಕ್ಷಣ ತಜ್ಞರು ಶಿಶು ಪ್ರಾಧಾನ್ಯ ಶಿಕ್ಷಣಕ್ಕೆ ಅನುಗುಣವಾಗುವ ಹೊಸ ಶಿಕ್ಷಣ ಕ್ರಮವನ್ನು ಮಂಡಿಸಿದರು. ಇದೇ ಈ ಚಟುವಟಿಕೆಯ ಮುಖಾಂತರ, ಇಲ್ಲವೆ ಕಾರ್ಯಮುಖಾಂತರ ಅಥವಾ ವೃತ್ತಿಮೂಲಕ ಎಂದು ಕರೆಯುವ ಶಿಕ್ಷಣ ಪದ್ಧತಿಯ ಉಗಮವೆಂದು ಹೇಳಬಹುದು.

ಈ ದಿಶೆಯಲ್ಲಿ ಅಮೇರಿಕೆಯ ಶಿಕ್ಷಣ ತಜ್ಞರಾದ ಜಾನ್‌ಡ್ಯೂಯಿ ಅವರು ಆರಂಭ ಪುರುಷರಾಗಿರುವರು. ಚಟುವಟಿಕೆ ಮುಖಾಂತರ ಕಲಿಯುವ ಶಿಕ್ಷಣ ಕ್ರಮದಲ್ಲಿ ಸಾಕಷ್ಟು ಪ್ರಯೋಗಗಳನ್ನು ಮಾಡಿ ಅನುಭವ ಪಡೆದು

ಪ್ರವಾಸಕ್ಕೆ ತಗಲಿದ ವೇಳೆ ಹಾಗೂ ಅಂತರಗಳಿಂದ ವೇಳೆ ಕೆಲಸ ವೇಗದ ಲೆಕ್ಕಗಳು; ಆ ಪ್ರವಾಸಕ್ಕೆ ಸಂಬಂಧಪಟ್ಟ ಆಯವ್ಯಯ ಪಟ್ಟಿ ತಯಾರಿಸುವುದು; ದಾರಿಯಲ್ಲಿ ದಾರಿಯ ನಿಯಮಗಳನ್ನು ಪಾಲಿಸಿ ನಡೆಯುತ್ತ ಹೋಗುವುದು: ಪ್ರವಾಸದ ಪ್ರತ್ಯಕ್ಷ ಅನುಭವಗಳ ಆಧಾರದ ಮೇಲೆ ನಿಬಂಧ ಬರೆಯುವುದು; ಪ್ರವಾಸಕ್ಕೆ ಸಂಬಂಧಿಸಿ ಕಾರ್ಯವಿಭಾಗ; ಗುಂಪಿನಲ್ಲಿ ಸಹಕಾರ; ಇವಲ್ಲದೆ, ಮನರಂಜನೆ, ಬಯಲು ಹವೆಯ ಲಾಭ ಇತ್ಯಾದಿ ನೂರಾರು ಒಳ್ಳೆಯ ಮಾತುಗಳು ಪ್ರವಾಸದಲ್ಲಿ ಅಡಕವಾಗಿವೆ.

ಪಾಲಕ— ಇವುಗಳಲ್ಲಿ ಒಂದನ್ನೂ ನಾವು ಶಾಲೆಯಲ್ಲಿ ನೋಡುವುದಿಲ್ಲ, ಕೇಳಿರಿ ಬೇಕಾದರೆ ಈ ಶಿಕ್ಷಕರನ್ನು. ಮೊನ್ನೆ ನೊಗಲ ಸೋಮೇಶ್ವರಕ್ಕೆ ಪ್ರವಾಸಕ್ಕೆ ಹೋಗಿದ್ದರು. ಅದಕ್ಕೆ ಸಂಬಂಧಿಸಿ ಎಷ್ಟೆಷ್ಟು ಮಾಹಿತಿ ಕೊಟ್ಟಿದ್ದಾರೆ. ಎಷ್ಟು ಲೆಕ್ಕ ಹೇಳಿದ್ದಾರೆ; ಯಾವ ನಿಬಂಧ ಬರೆಯಿಸಿದ್ದಾರೆ ಕೇಳಿರಿ.

ಶಿಕ್ಷಕ— ಸಾಹೇಬರೆ, ನಿಬಂಧ ಬರೆಸಿದ್ದೇನೆ.

ಇನ್ಸ್ಪೆಕ್ಟರ— ತರ್ರಿ ನೋಡೋಣ.

ಶಿಕ್ಷಕ— ಇನ್ನೂ ತಪಾಸು ಮಾಡಿಲ್ಲ.

ಪಾಲಕ— ಕೇಳಿರಿ.

ಇನ್ಸ್ಪೆಕ್ಟರ— ಶಿಕ್ಷಕರೇ ನಾನು ಈಗ ಹೇಳಿದ ಎಲ್ಲ ಮಾತುಗಳನ್ನು ಲಕ್ಷ್ಯದಲ್ಲಿಟ್ಟು ಪ್ರವಾಸ ಕೈಕೊಳ್ಳಬೇಕು; ವಿಷಯಗಳನ್ನು ಕಲಿಸಲು ತಂತಾನೇ ಪ್ರಸಂಗಗಳು ಬರುವವು.

ಪಾಲಕ— ಹಾಗಾದರೆ ಯಾರು ಬೇಡವೆನ್ನುವರು?

ಇನ್ಸ್ಪೆಕ್ಟರ— ಅದಕ್ಕೆ ನಿಮ್ಮ ಸಹಕಾರವೂ ಶಿಕ್ಷಕರಿಗೆ ಬೇಕು. ಶಿಕ್ಷಕರೂ ಈ ಎಲ್ಲಾ ಒಳ್ಳೆಯ ತತ್ವಗಳನ್ನು ಕಾರ್ಯರೂಪದಲ್ಲಿಳಿಸಲು ಯತ್ನಿಸಬೇಕು. ಇಲ್ಲವಾದರೆ, ಈ ಅತ್ಯುತ್ತಮ ಶಿಕ್ಷಣ ಪದ್ಧತಿಯನ್ನು ನಮಗೆ ಒದಗಿಸಿದ ಮಹಾತ್ಮಾ ಗಾಂಧಿಯವರಿಗೂ ನಮ್ಮ ದೇಶಕ್ಕೂ ನಾವು ದ್ರೋಹ ಬಗೆದಂತಾಗುತ್ತದೆ.

ಪಾಲಕ— ಈಗ ಆ ಗಾಂಧೀಜಿಯವರ ಹೆಸರು ತೆಗೆದುಕೊಳ್ಳಲಡ್ಡಿಯಿಲ್ಲ.

ಇನ್ಸ್ಪೆಕ್ಟರ— ಈ ಶಿಕ್ಷಣ ಪದ್ಧತಿಯ ಮರ್ಮವನ್ನು ಶಿಕ್ಷಕರು ಪಾಲಕರು ತಿಳಿದುಕೊಂಡು ಸಹಕರಿಸಿ ನಡೆದರೆ, ನಮ್ಮ ಇಂದಿನ ಮಕ್ಕಳು, ನಿಜವಾದ ತಿಳಿವಳಿಕೆಯುಳ್ಳವರಾಗಿ, ಜ್ಞಾನ, ಕೃತಿ ಎರಡನ್ನೂ ಪಡೆದು, ಸದ್ಗುಣ ಸಂಪನ್ನರಾಗಿ ಬೆಳೆದು ಹೊಸ ಸಮಾಜವನ್ನು ಕಟ್ಟುವರೆಂಬಲ್ಲಿ ಸಂಶಯವಿಲ್ಲ. ಹಿಂದೆ ಕೇವಲ ಪುಸ್ತಕೀ ವಿದ್ಯೆ ಕಲಿತು, ಜನರನ್ನು ಮೋಸಗೊಳಿಸಿ, ಹೇರಳ ಹಣವನ್ನು ಗಳಿಸಿ, ಉಪ್ಪರಿಗೆಯ ಮನೆಗಳನ್ನು ಕಟ್ಟಿಸಿ, ಐಷಾರಾಮದಲ್ಲಿದ್ದು ಬಡವರನ್ನೂ ದೈಹಿಕ ಶ್ರಮ ಮಾಡಿ ಹೊಟ್ಟೆ ಹೊರೆದುಕೊಳ್ಳುವವರನ್ನೂ ಹೀಯಾಳಿಸಿ ಉನ್ಮತ್ತರಾಗಿ ಬಾಳ್ವೆ ಮಾಡುವ ವಿದ್ಯಾವಂತರಿಗಿಂತಲೂ, ಕಲಿತ ವಿದ್ಯೆಯನ್ನು ರಕ್ತಗತ ಮಾಡಿಕೊಂಡು, ಎಲ್ಲರೊಡನೆ ಸಮಭಾವವನ್ನು ತಾಳಿ, ಸದ್ಗುಣ ಸಂಪನ್ನರಾಗಿ ಬಾಳುವ ಜೀವನ ಶಿಕ್ಷಣ ಶಾಲೆಗಳಿಂದ ಹೊರಡುವ ಒಳ್ಳೆಯ ನಾಗರಿಕರನ್ನು ನಿರ್ಮಿಸಿ ಅವರ ಮುಖಾಂತರ ಸಾಮಾಜಿಕ ಕ್ರಾಂತಿಯನ್ನು ಸಾಧಿಸಬೇಕಾದ ಗುರುತರವಾದ ಹೊಣೆ ಮುಖ್ಯವಾಗಿ ಶಿಕ್ಷಕರ ಮೇಲಿದೆ. ಅವರಿಗೆ ಪಾಲಕರು ಈ ದಿಶೆಯಲ್ಲಿ ಸಹಕಾರವಿತ್ತು ಹುರಿದುಂಬಿಸಿದರೆ, ನಮ್ಮ ಗುರಿ ಇನ್ನಷ್ಟು ಬೇಗನೆ ಸಫಲವಾಗುವುದು.

ಪಾಲಕ— ನಿಜವಾಗಿಯೂ ನನ್ನ ತಪ್ಪುಕಲ್ಪನೆ ಈಗ ದೂರಾಯಿತು.

ಶಿಕ್ಷಕ— ಈಗ ನನ್ನ ಬುದ್ಧಿಗೆ ಈ ಜೀವನ ಶಿಕ್ಷಣದ ಸರಿಯಾದ ದಾರಿ ತಿಳಿಯಿತು.

ಇನ್ಸ್ಪೆಕ್ಟರ— ಶಿಕ್ಷಕರೆಲ್ಲ ಈ ಮೊದಲೇ ಸರಿಯಾದ ದಾರಿಯನ್ನು ತಿಳಿದೇ ಶಾಲೆ ನಡಿಸಿದ್ದಾರೆಂಬ ನನ್ನ ತಪ್ಪು ಕಲ್ಪನೆಯು ಈಗ ದೂರಾಯಿತು. ಇನ್ನು ನಾವೂ ನೀವೂ ಎಲ್ಲರೂ ನಮ್ಮ ಕರ್ತವ್ಯಕ್ಕೆ ತೊಡಗೋಣ.

ಮೂಲೋದ್ಯೋಗದ ಹೊಸ ಅಭ್ಯಾಸ ಪತ್ರಿಕೆ

(ಪ್ರಾಥಮಿಕ ಶಾಲೆಗಳಲ್ಲಿ ೧ ರಿಂದ ೭ನೆಯ ಇ. ಗಳಿಗಾಗಿ)

ಬೆಲೆ : ೦—೨—೬

ಒಬ್ಬ ಶಿಕ್ಷಕ ಶಾಲೆಗಳಿಗಾಗಿ

(ಇಯತ್ತೆ ೧ ರಿಂದ ೪)

ಬೆಲೆ : ೧ ಆಣೆ,

ಅಂಚೆ ವೆಚ್ಚ ಬೇರೆ

ಪ್ರತಿಗಳು ಸಿಗುವ ಸ್ಥಳ :

ಪ್ರಧಾನ ಸಂಪಾದಕರು ಜೀವನ ಶಿಕ್ಷಣ,

ಧಾರವಾಡ.

ರಾಷ್ಟ್ರೀಯ ಜೀವನ ಶಿಕ್ಷಣ

ಲೇಖಕರು : **ಶ್ರೀ ರಾ. ವಿ. ದೇಸಾಯಿ,** ಗಂ. ಸ. ಟ್ರೇ. ಕಾಲೇಜದ ನಿವೃತ್ತ ಮುಖ್ಯಾಧ್ಯಾಪಕರು.

ಇತ್ತೀಚೆಗೆ ಜೀವನ ಶಿಕ್ಷಣ ಪ್ರಸಾರವು ಬಹಳೆಡೆಗೆ ಆಗಿದ್ದರೂ ಜೀವನ ಶಿಕ್ಷಣದ ನಿಜವಾದ ಕಲ್ಪನೆ ಅನೇಕರಿಗೆ ಆಗಿಲ್ಲವೆಂದೆನಿಸುವದು. ಕೆಲವರು ಮೂಲೋದ್ಯೋಗ ಶಿಕ್ಷಣವೇ ಜೀವನ ಶಿಕ್ಷಣವೆಂದೂ, ಇನ್ನಿತರರು ಸಫಾಯಿ, ಸಾಂಘಿಕ ಕೆಲಸ ಮೊದಲಾದ ಕೆಲಸಗಳನ್ನು ಕೈಕೊಳ್ಳುವವೇ ಜೀವನ ಶಿಕ್ಷಣವೆಂದೂ, ಮತ್ತೆ ಕೆಲವರು ಇವೆರಡೂ ವಿಷಯುಗಳನ್ನು ಕೂಡಿಸಿ ಕಲಿಸುವದೇ ಜೀವನ ಶಿಕ್ಷಣವೆಂದೂ ಊಹಿಸಿದ್ದುಂಟು. ಇದರಲ್ಲಿಯೇ ಸ್ವಲ್ಪ ಮುಂದುವರಿದು ಕುತೂಹಲದಿಂದ ವಿಚಾರಿಸಿದವರು, ಜೀವನ ಶಿಕ್ಷಣವೆಂದರೆ ಜೀವನ ಕ್ರಮಕ್ಕೆ ಬೇಕಾಗುವ ಶಿಕ್ಷಣವು; ಮತ್ತು ಅದು ರಾಷ್ಟ್ರೀಯ ಭಾವನೆಯನ್ನು ಹುಟ್ಟಿಸಲು ಅನುಕೂಲವಾಗುವದೆಂದು ರಾಷ್ಟ್ರೀಯ ಜೀವನ ಶಿಕ್ಷಣವೆಂದೂ ಕರೆದದ್ದುಂಟು. ಈ ರೀತಿಯಿಂದ ಕರೆಯುವದು ಕೆಲಮಟ್ಟಿಗೆ ಸಮಂಜಸವೆನಿಸಬಹುದು. ಆದರೆ ಕೇವಲ ಇಷ್ಟು ಸಣ್ಣ ವ್ಯಾಖ್ಯೆಯಿಂದ ಜೀವನ ಶಿಕ್ಷಣದ ಆಳವಾದ ತತ್ವಗಳು, ವೈಶಿಷ್ಟ್ಯಗಳು ಮತ್ತು ಲಾಭಗಳು ತಿಳಿಯಲಾರವು ಎಂದೆನಿಸುವದು. ಅಲ್ಲದೆ ಅದು ರಾಷ್ಟ್ರೀಯ ಭಾವನೆಯನ್ನು ಹುಟ್ಟಿಸಲು ಹೇಗೆ ಸಹಾಯಕವಾಗುವದೆಂಬುದು ಕಲ್ಪನೆಗೆ ನಿಲುಕಲಾರದೆಂದು ಭಾವಿಸಬಹುದು, ಆದ್ದರಿಂದ ಜೀವನ ಶಿಕ್ಷಣದ ನಿಜವಾದ ಅರ್ಥವನ್ನು ಮಾಡಿಕೊಳ್ಳುವದು ಮತ್ತು ಅದರ ವಿಶೇಷ ಗುಣವೈಶಿಷ್ಟ್ಯಗಳನ್ನು ಕೆಲಮಟ್ಟಿಗೆ ತಿಳಿದುಕೊಳ್ಳಲು ಪ್ರಯತ್ನಿಸುವದೇ ಈ ಲೇಖದ ಮುಖ್ಯ ಗುರಿಯಾಗಿದೆ.

ಭಾರತೀಯರನ್ನು ಪರರಾಷ್ಟ್ರದವರು ಆಳುತ್ತಿರುವಾಗ ನಮಗೆ ದೊರೆಯುತ್ತಿರುವ ಶಿಕ್ಷಣವು ಬಹಳಷ್ಟು ಪುಸ್ತಕೀಯವಾಗಿದ್ದು ಒಂದು ತರದ ಕೇವಲ ಪಾಂಡಿತ್ಯ ಬೆಳೆಸುವಂತಹದಾಗಿತ್ತೆಂದು ಎಲ್ಲರೂ ಒಪ್ಪುವರು. ಅದು ಅವ್ಯವಹಾರಿಕವಾಗಿದ್ದು ಜೀವನ ಕ್ರಮಕ್ಕೆ ಎಳ್ಳಷ್ಟು ಉಪಯೋಗವಿಲ್ಲದ್ದೆಂದು ತಕರಾರುಗಳು ನಮ್ಮ ಹಿಂದುಸ್ಥಾನದಲ್ಲಿ ಏಕೆ ಇಡೀ ಯುರೋಪದಲ್ಲೆಲ್ಲ ಹಬ್ಬಿದ್ದವು. ಶಿಕ್ಷಣ ತಜ್ಞ ರೂಸೋನು ತನ್ನ ಕಾಲದಲ್ಲಿ ಹೇಳಿದ್ದನ್ನು ಅನುಲಕ್ಷಿಸಿದರೆ ಈ ಮಾತು ಸ್ಪಷ್ಟವಾಗುವದು. ಅವನು ಹೇಳಿದ್ದೇನೆಂದರೆ ಪ್ರತಿಯೊಂದು ಮಗು ತನ್ನದೇ ಆದ ಒಂದು ಸ್ವತಂತ್ರ ಶೈಲಿಯಲ್ಲಿ ವಿಚಾರಮಾಡಬಲ್ಲನು; ಹೊಳೆದದ್ದನ್ನು ಹೇಳಬಲ್ಲನು. ಮತ್ತು ಪ್ರತ್ಯಕ್ಷ ಕೆಲಸ ಮಾಡಿ ಅನುಭವ ಪಡೆಯಬಲ್ಲನು. ಹೀಗಿರುವಾಗ ನಮ್ಮ ಕ್ರಮಗಳನ್ನು ಅವನ ಮೇಲೆ ಒತ್ತಾಯದಿಂದ ಹೇರುವದು ಅತ್ಯಂತ ಅಸ್ವಾಭಾವಿಕವೂ ಅಯೋಗ್ಯವೂ ಎನಿಸುವದು. ಇದರಂತೆ ನಮ್ಮ ಪೂರ್ವಜರು ಹೇಳಿದ್ದೇನೆಂದರೆ वितरति गुरुः प्राज्ञे विद्यां यथैव तथा जडे। ಇದರ ಪ್ರಕಾರ ಶಿಕ್ಷಕನು ಜಾಣ ಮತ್ತು ದಡ್ಡ ವಿದ್ಯಾರ್ಥಿಗೆ ಒಂದೇ ಪ್ರಕಾರದ ವಿದ್ಯೆಯನ್ನು ಹೇಳಿಕೊಟ್ಟರೂ ದಡ್ಡನು ಜಾಣ ವಿದ್ಯಾರ್ಥಿಯನ್ನು ಸರಿಗಟ್ಟಲಾರನು. ಹೀಗಿರುವಾಗ ಶಿಕ್ಷಕ ಮತ್ತು ವಿಷಯ ಪ್ರಾಧಾನ್ಯ ಶಿಕ್ಷಣವು ತಿಲಮಾತ್ರವೂ ಉಪಯೋಗವಾಗಲಾರದು. ಅಂತೆಯೇ ರೂಸೋ, ಪೆಸ್ಟೆಲಾಝಿ, ಹರ್ಬಾರ್ಟ, ಫ್ರೋಬೆಲ್ ಮೊದಲಾದ ಶಿಕ್ಷಣ ತಜ್ಞರು ಶಿಶುಪ್ರಾಧಾನ್ಯ ಶಿಕ್ಷಣವನ್ನು ಪ್ರತಿಪಾದಿಸಿದರು. ಶಿಶುವಿನ ಅಂತಃಶಕ್ತಿಗಳನ್ನು ಸ್ಫುರಗೊಳಿಸಿ ಸ್ವಾಭಾವಿಕವಾಗಿ ಅವನು ತನ್ನ ಬುದ್ಧಿ, ಶರೀರ ಮತ್ತು ಆತ್ಮಗಳನ್ನು ವಿಕಾಸ ಮಾಡಿಕೊಳ್ಳುವ ಯೋಗ್ಯ ರೀತಿಗಳನ್ನು ಒದಗಿಸಿಕೊಡುವದು ಮತ್ತು ತಕ್ಕ ಅಭಿಲಾಷೆ ಹುಟ್ಟಿಸುವಂಥ ವಿಧಾನಗಳನ್ನು ಕಲಿಸುವದು ಶಿಕ್ಷಣ ಕ್ರಮದಲ್ಲಿ ಇರಬೇಕು ಹೊರತು ಕೇವಲ ವಿಷಯಾಭ್ಯಾಸ ಮಾಡಿಸುವ ಯಾಂತ್ರಿಕ ಕ್ರಮವಿರಕೂಡದು. ಮಗುವಿನಲ್ಲಿ ಕುತೂಹಲ ಪ್ರವೃತ್ತಿಯು ಬಲವಾಗಿರುವದು. ಮತ್ತು ಅವನು ಚಟುವಟಿಕೆ ಪ್ರಿಯನು. ಈ ಸಂಗತಿಗಳನ್ನು ಅರಿತು ಶಿಕ್ಷಣ ತಜ್ಞರು ಶಿಶು ಪ್ರಾಧಾನ್ಯ ಶಿಕ್ಷಣಕ್ಕೆ ಅನುಗುಣವಾಗುವ ಹೊಸ ಶಿಕ್ಷಣ ಕ್ರಮವನ್ನು ಮಂಡಿಸಿದರು. ಇದೇ ಈ ಚಟುವಟಿಕೆಯ ಮುಖಾಂತರ, ಇಲ್ಲವೆ ಕಾರ್ಯಮುಖಾಂತರ ಅಥವಾ ವೃತ್ತಿಮೂಲಕ ಎಂದು ಕರೆಯುವ ಶಿಕ್ಷಣ ಪದ್ಧತಿಯ ಉಗಮವೆಂದು ಹೇಳಬಹುದು.

ಈ ದಿಶೆಯಲ್ಲಿ ಅಮೇರಿಕೆಯ ಶಿಕ್ಷಣ ತಜ್ಞರಾದ ಜಾನ್‌ಡ್ಯೂಯಿ ಅವರು ಆರಂಭ ಪುರುಷರಾಗಿರುವರು. ಚಟುವಟಿಕೆ ಮುಖಾಂತರ ಕಲಿಯುವ ಶಿಕ್ಷಣ ಕ್ರಮದಲ್ಲಿ ಸಾಕಷ್ಟು ಪ್ರಯೋಗಗಳನ್ನು ಮಾಡಿ ಅನುಭವ ಪಡೆದು

ಒಳ್ಳೆ ಮನದಟ್ಟಾಗುವ ತತ್ವಗಳನ್ನು ಸ್ಥಾಪಿಸಿರುವರು. ಜೀವನ ಶಿಕ್ಷಣದ ತತ್ವಗಳೂ ಕೂಡ ಬಹಳಷ್ಟು ಪಾಲು ಜಾನ್‌ಡ್ಯೂಯಿಯವರ ತತ್ವಗಳಿಗೆ ಸರಿಹೋಲುವವು. ಜಾನ್‌ಡ್ಯೂಯಿ ಅವರು ಹೇಳಿದಂತೆ ದೈಹಿಕ ದುಡಿಮೆ ಅಥವಾ ವಿಧಾಯಕ ಕಾರ್ಯವು ಯೋಗ್ಯ ರೀತಿಯಲ್ಲಿ ಯೋಜಿಸಲ್ಪಡುವಾಗ ಮತ್ತು ಪ್ರತ್ಯಕ್ಷ ಕಾರ್ಯ ರೂಪದಲ್ಲಿ ನಡೆಯುವಾಗ ಒಳ್ಳೆ ಶೈಕ್ಷಣಿಕವಾಗಿ ಪರಿಣಮಿಸುವದು ಮತ್ತು ಅವರು ಹೇಳಿದ್ದೇನೆಂದರೆ ಪ್ರತಿಯೊಬ್ಬ ಮಗು ತಿಳುವಳಿಕೆಯಿಂದ ಮನಃಪೂರ್ವಕ ವಾಗಿ ದುಡಿದು ತನ್ನ ಹಾಗು ತನ್ನ ಪರಿವಾರದವರ ಉಪಜೀವನದ ಸಾಧನವನ್ನು ಕಂಡುಕೊಳ್ಳಬೇಕಲ್ಲದೆ ಆತ್ಮೋನ್ನತಿ ಮತ್ತು ಆತ್ಮಗೌರವವನ್ನು ಸಾಧಿಸಿಕೊಳ್ಳ ಬೇಕು. ಸಾಮಾಜಿಕ ಜೀವನದ ಜೀವಾಳವು ವ್ಯಕ್ತಿಯ ದುಡಿಮೆಯಾಗಿದ್ದು, ಸಮಾಜದ ಉನ್ನತಿ ಅವನತಿಗಳೂ ಹಿತಾಹಿತಗಳೂ ಪ್ರತಿಯೊಬ್ಬ ವ್ಯಕ್ತಿಯ ಶ್ರಮ ಜೀವನ, ಸಾಹಸ, ಬುದ್ಧಿಮತ್ತೆ—ಇವುಗಳನ್ನೇ ಅವಲಂಬಿಸಿ ಕೊಂಡಿವೆ. ಇಂದಿನ ಯಾಂತ್ರಿಕ ಯುಗದಲ್ಲಿ ಪ್ರತಿಯೊಂದು ವ್ಯವಸಾಯದ ಅಥವಾ ಉದ್ಯೋಗದ ರೀತಿನೀತಿಗಳು, ಸಾಧನ ಸಾಮಗ್ರಿಗಳು ಆ ಆ ದೇಶದ, ಸಮಾಜದ ಪ್ರಾಕೃತಿಕ ಹಾಗೂ ಸಾಮಾಜಿಕ ಪರಿಸ್ಥಿತಿಯನ್ನೇ ಹೆಚ್ಚಾಗಿ ಅವಲಂಬಿಸಿಕೊಂಡಿರುವವು. ಇವುಗಳನ್ನೆಲ್ಲ ಅಲ್ಲಿಯ ಸಮಾಜ ನೀತಿಯೇ ಚನ್ನಾಗಿ ರೂಪಿಸಬಲ್ಲದು; ಉಪಯೋಗ ಮಾಡಿಕೊಳ್ಳಬಲ್ಲದು. ಡ್ಯೂಯಿಯವರ ಅಭಿಪ್ರಾಯದ ಪ್ರಕಾರ ಹಸ್ತವ್ಯವಸಾಯಗಳಲ್ಲಿಯೂ ಕೂಡ ಬುದ್ಧಿಯನ್ನು ವೃದ್ಧಿಗೊಳಿಸುವ ಸಾಮರ್ಥ್ಯವಿದೆ. ಹಸ್ತವ್ಯವಸಾಯಗಳು ಮಾನಃಶಾಸ್ತ್ರ ದೃಷ್ಟಿಯಿಂಧಲೂ, ಕಣ್ಣು ಮತ್ತು ಕೈಕೆಲಸಗಳ ಸಂಯೋಜನ ದೃಷ್ಟಿ ಯಿಂದಲೂ ಮತ್ತು ಶಾರೀರಿಕ ಶ್ರಮದ ದೃಷ್ಟಿಯಿಂದಲೂ ಒಳ್ಳೆ ಪರಿಣಾಮಕಾರಕವಾಗಿರುತ್ತವೆ. ಇಂಥ ಹಸ್ತವ್ಯವ ಸಾಯಗಳಲ್ಲಿ ನೂಲುವದು, ನೇಯುವದು, ಕೈತೋಟ, ಒಕ್ಕಲುತನ, ರಟ್ಟಿನ ಕೆಲಸ, ಬಡಿಗತನ ಮೊದಲಾದವುಗಳು ಕೆಲವೊಂದು ಆಗಿರುವವು. ಜೀವನ ಶಿಕ್ಷಣದ ಒಂದು ಮಹತ್ವದ ಅಂಗನೆಂದರೆ ಮೂಲೋದ್ಯೋಗ. ಆದರೆ ಮೂಲೋದ್ಯೋಗ ಶಿಕ್ಷಣವೇ ಜೀವನ ಶಿಕ್ಷಣವಲ್ಲ. ಜೀವನ ಶಿಕ್ಷಣದಲ್ಲಿ ಮೂಲೋದ್ಯೋಗಕ್ಕೆ ಇರುವಸ್ಥಾನವು ಡ್ಯೂಯಿ ಯವರು ಕೊಟ್ಟ ಸ್ಥಾನಕ್ಕಿಂತಲೂ ನೇಲ್ಮರಗತಿಯದ್ದಾಗಿದೆ. ಈ ಮೂಲೋದ್ಯೋಗಗಳು ಕೇವಲ ಶಾರೀರಿಕ ಶ್ರಮದ ದೃಷ್ಟಿಯಿಂದ ಮತ್ತು ಮಾನಸ ಶಾಸ್ತ್ರದ ದೃಷ್ಟಿ ಯಿಂದ ಮಹತ್ವವಿರದೆ ಆರ್ಥಿಕ ದೃಷ್ಟಿಯಿಂದಲೂ ಕೂಡ ಬಹಳಷ್ಟು ಮಹತ್ವವಾಗಿವೆ. ಅವುಗಳ ಮುಖಾಂತರ ಅಭ್ಯಾಸ ಕ್ರಮದ ಅನೇಕ ವಿಷಯಗಳನ್ನು ಸೈಜವಾಗಿ ಸಮವಾಯ ಮಾಡಿ ಸಶಾಸ್ತ್ರವಾಗಿ ಕಲಿಸಬಹುದೆಂದು ಮಹಾತ್ಮಾಜಿಯವರು ಅಭಿಪ್ರಾಯಪಟ್ಟು ಶಿಕ್ಷಣರಂಗದಲ್ಲಿ ಒಂದು ಕ್ರಾಂತಿಯನ್ನೇ ಉಂಟು ಮಾಡಿರುವರು.

ಈ ಸಂಗತಿಯು ಮಾನ್ಯ ಶ್ರೀ ರಂಗನಾಥ ದಿವಾಕರ ಅವರು ಹೇಳಿದ ಮಾತುಗಳನ್ನು ಅನುಲಕ್ಷಿಸಿದರೆ ಮತ್ತಷ್ಟು ಸ್ಪಷ್ಟವಾಗದೆ ಇರದು. ಅವರು ಹೇಳಿದ್ದೇನೆಂದರೆ— "ಶಿಕ್ಷಣ ಶಾಸ್ತ್ರವು ಇತರ ಶಾಸ್ತ್ರಗಳಂತೆ ಯಾವಾಗಲೂ ಹೊಸ ಹೊಸ ಪ್ರಯೋಗಗಳ ಮೂಲಕ ಹೊಸ ಶೋಧ ಗಳನ್ನು ಮಾಡುತ್ತಲೇ ಜೀವಂತವಿರಬಲ್ಲದು. ಹರಿಗಡಿದ ಹೊಳೆ ಹೊಳೆಯಲ್ಲ; ಪ್ರಯೋಗರಹಿತ ಶಾಸ್ತ್ರ ಶಾಸ್ತ್ರವಲ್ಲ ಮೇಲಾಗಿ ಶಿಕ್ಷಣಶಾಸ್ತ್ರ ಜೀವನಶಾಸ್ತ್ರ ಇವೆರಡೂ ಪರಸ್ಪರ ಅತ್ಯಂತ ಸಂಬಂಧವಿರುವವು. ಜೀವನದ ವಿಕಾಸವಾಗುತ್ತ ಹೋದಂತೆ ಶಿಕ್ಷಣವು ವಿಕಸಿತವಾಗಲಿಕ್ಕೇ ಬೇಕು. ಮನು ಷ್ಯನ ಮಾನವತೆಯ ವಿಕಾಸವು ಪೂರ್ಣವಾಗಬೇಕಾದರೆ ಅವನಿಗೆ ಶಿಕ್ಷಣವು ಕೂಡ ಅದೇ ಬಗೆಯದ್ದು ಬೇಕು. ಅವನ ಸರ್ವ ಶಕ್ತಿಗಳ ವಿಕಾಸವು ಸಮನ್ವಯದಿಂದ ಆಗ ಲಿಕ್ಕೇ ಬೇಕು. ನಮ್ಮಲ್ಲಿ ರೂಢವಿದ್ದ ಕೇವಲ ಬೌದ್ಧಿಕ ಶಿಕ್ಷಣಕ್ಕೆ ತಿದ್ದುಪಡಿಯೊಂದು ಮಹಾತ್ಮಾಜಿಯವರು ನಿತ್ಯ ಜೀವನೋಪಯೋಗಿಯಾದ ಯಾವದೊಂದು ಹಸ್ತೋ ದ್ಯೋಗದ ಮೂಲಕ ಮಕ್ಕಳಿಗೆ ಜ್ಞಾನವನ್ನು ಕೊಡ ಬೇಕೆಂದು ಪ್ರತಿಪಾದಿಸಿದರು. ಆ ಮಾತು ಅಷ್ಟಕ್ಕೆ ನಿಲ್ಲದೆ ಶಿಕ್ಷಣವು ಆಮರಣಾಂತ ನಡೆಯಬೇಕು, ಅದು ಸಮಗ್ರ ವಿರಬೇಕು. ಜೀವನ ವ್ಯಾಪಿಯಾಗಿರಬೇಕು; ಅದು ಕೇವಲ ಪುಸ್ತಕಗಳ ಮೂಲಕ ಕೊಡಲ್ಪಡದೆ ವಿದ್ಯಾರ್ಥಿಯ ಸುತ್ತಲಿನ ಪರಿಸ್ಥಿತಿಯ ಮೂಲಕ ಸಮವಾಯ ಮಾರ್ಗ ದಿಂದ ಕೊಡಲ್ಪಡಬೇಕೆಂಬ ಸಿದ್ಧಾಂತಕ್ಕೆ ಮಹಾತ್ಮರು ಬಂದರು. ಅದೇ ಅವರ ವರ್ಧಾಶಿಕ್ಷಣ ಪದ್ಧತಿಯ ಮೂಲಮಂತ್ರ."

ಜ್ಞಾನವನ್ನು ಸಮವಾಯ ಮಾರ್ಗದಿಂದ ಕೊಡು ವದು ಅತ್ಯಂತ ಶೈಕ್ಷಣಿಕವಾಗಿ ಪರಿಣಮಿಸುವದೆಂಬುದಕ್ಕೆ ಮುಖ್ಯವಾಗಿ ಎರಡು ತತ್ವಗಳನ್ನು ಗಮನಿಸಬಹುದು. (೧) ಚಟುವಟಿಕೆಗಳು ಜೀವನ ಸಾಫಲ್ಯಕ್ಕೆ ಮೂಲ

ಸಾಧನವಾದವುಗಳು (೨) ಜ್ಞಾನವು ಒಂದು ಅಖಂಡ ಘಟಕವು.

೧. ಚಟುವಟಿಕೆಗಳು ಜೀವನ ಸಾಫಲ್ಯಕ್ಕೆ ಮೂಲ ಸಾಧನಗಳು:— ಪ್ರತಿಯೊಬ್ಬ ಮಗುವು ಚಟುವಟಿಕೆ ಪ್ರಿಯನು, ಚಟುವಟಿಕೆಯು ಉದ್ದೇಶ ಪೂರಕವಾಗಿದ್ದರೆ ಮಗುವು ಒಳ್ಳೆ ಕುತೂಹಲದಿಂದ ಆಸ್ಥೆ ವಹಿಸಿ ಚಟುವಟಿಕೆಯನ್ನು ಕೈಕೊಳ್ಳುವನು. ಚಟುವಟಿಕೆಯು ಉದ್ದೇಶಪೂರಕವಾಗಿರಬೇಕಾದರೆ ಮಗುವಿನ ನಿತ್ಯದ ಜೀವನೋಪಯೋಗಿಯಾಗಿದ್ದು ಇದ್ದು ಅವನ ಮಾನಸಿಕ ಹಾಗೂ ಆರ್ಥಿಕ ಬೇಡಿಕೆಗಳನ್ನು ಪೂರೈಸುವಂತಹದಿರಬೇಕೆಂದು ಬೇರೆ ಹೇಳಬೇಕಾಗಿಲ್ಲ. ಹೀಗಿದ್ದಾಗ ಮಾತ್ರ ಮಗುವಿನ ಮನೋಭಾವನೆಯು ತೀಕ್ಷ್ಣತೆಯನ್ನು ಹೊಂದುವದು ಮತ್ತು ಕೈಕೊಂಡ ಕಾರ್ಯವನ್ನು ಯಶಸ್ವಿಯಾಗಿ ಕೊನೆಗಾಣಿಸಲು ಅವನನ್ನು ಅಣಿಮಾಡುವದು. ಮಗುವು ಒಮ್ಮೆ ಕಾರ್ಯ ಪ್ರವೃತ್ತನಾದನೆಂದರೆ, ಆ ಕಾರ್ಯವನ್ನು ಒಳ್ಳೆ ಉತ್ಸಾಹದಿಂದ ಕೈಕೊಳ್ಳುವನು. ಆ ಕಾರ್ಯವನ್ನು ನಿರ್ವಹಿಸುವಾಗ ಮಗುವಿಗೆ ಆಗಾಗ್ಗೆ ಪ್ರತ್ಯಕ್ಷ ಅನುಭವಗಳು ಸತತವಾಗಿ ಬರುವವು. ಈ ಸತತ ಅನುಭವಗಳು ಮಗುವಿನಲ್ಲಿ ಒಲವುಗಳನ್ನೂ ಗುಣದೋಷಗಳ ವಿಮರ್ಶಾತ್ಮಕ ವಿಚಾರಗಳನ್ನೂ ಉಂಟು ಮಾಡುವವು. ಈ ಪ್ರಕಾರ ತದನುಬಂಧಿತ ವಿಚಾರಗಳೆಲ್ಲವೂ ಶೈಕ್ಷಣಿಕವಾಗಿ ಪರಿಣಮಿಸುವವು.

ಆದ್ದರಿಂದಲೇ ಚಟುವಟಿಕೆ ಪ್ರಾಧಾನ್ಯ ಮತ್ತು ಶಿಶುಪ್ರಾಧಾನ್ಯ ತತ್ವದ ಮೇಲೆ ಇತ್ತೀಚೆಗೆ ಎಷ್ಟೋ ಶಿಕ್ಷಣ ಯೋಜನೆಗಳನ್ನು ಹೆಣೆಯಲು ಹವಣಿಸಿದ್ದಾಗಿದೆ. ಅವುಗಳಲ್ಲಿ ಜಾನ್‌ಡ್ಯೂಯಿಯವರು ಹಾಕಿಕೊಟ್ಟ "ಯೋಜನಾ ಪದ್ಧತಿ" (Project Method)ಯು ಒಂದಾಗಿದೆ ಎಂದು ಈ ಮೊದಲೇ ವಿವರಿಸಲಾಗಿದೆ. ಈ ಪದ್ಧತಿಯ ಪ್ರಕಾರ ಒಂದು ವ್ಯವಹಾರಿಕವಾದ ಚಟುವಟಿಯನ್ನು ಅದರ ನೈಜ ಪರಿಸ್ಥಿತಿಯಲ್ಲಿ ಯಶಸ್ವಿಯಾಗಿ ಕೊನೆಗಾಣಿಸುವದು, ಅಗ್ರಸ್ಥಾನವನ್ನು ವಹಿಸಿದೆ. ಹೀಗೆ ಯಶಸ್ವಿಯಾಗಿ ಕಾರ್ಯವನ್ನು ಕೊನೆಗಾಣಿಸಬೇಕಾದಾಗ ಇತಿಹಾಸ, ಭೂಗೋಲ, ಸಾಮಾನ್ಯವಿಜ್ಞಾನ ಗಣಿತ ಮೊದಲಾದ ವಿಷಯಗಳ ಕೆಲವೊಂದು ಕಲ್ಪನೆಯು ಅವಶ್ಯವಾಗಿ ತೋರುವದು. ತತ್ಪರಿಣಾಮವಾಗಿ ಈ ವಿಷಯಗಳನ್ನು ಕಲಿಯುವ ಸನ್ನಿವೇಶವು ನಿರ್ಮಾಣವಾಗುವದು. ಆವಾಗ ಮಾತ್ರ ಜ್ಞಾನ ಸಂಗ್ರಹವಾಗುವದು. ಅಂತೂ ಜ್ಞಾನ ಸಂಗ್ರಹ ಮಾಡುವ ಕಾರ್ಯವು ಯೋಜನಾ ಪದ್ಧತಿಯಲ್ಲಿ ಉಪಕ್ರಮವಾಗಿ ಪರಿಣಮಿಸುವದೆಂದು ಹೇಳಬಹುದು. ಆದರೂ ಕಲಿಯುವ ವಿಧಾನವು ಪ್ರೇರಣಾತ್ಮಕವೂ ಉದ್ದೇಶಪೂರಕವೂ ಆಗುತ್ತಿರುವದು ನೋಡಿದರೆ ಈ ಪದ್ಧತಿಯು ಅತ್ಯಂತ ಅರ್ಥಗರ್ಭಿತವೂ ಮತ್ತು ಸಮಂಜಸವೂ ಆದ ಶಿಕ್ಷಣ ಪದ್ಧತಿ ಎನ್ನಲು ಅಡ್ಡಿ ಇಲ್ಲ.

ಇದಕ್ಕೂ ಒಂದು ಹೆಜ್ಜೆ ಮುಂದುವರಿದು ಜೀವನ ಶಿಕ್ಷಣ ತಜ್ಞರು ತಮ್ಮ ಪ್ರಯೋಗ ಮತ್ತು ಅನುಭವಗಳಿಂದ ಚಟುವಟಿಕೆ ಮತ್ತು ಶಿಶುಪ್ರಾಧಾನ್ಯ ತತ್ವದ ಮೇಲೆ ಅವಲಂಬಿಸಿ ಒಂದು ಹೊಸ ಅಭ್ಯಾಸಕ್ರಮವನ್ನೇ ತಯಾರಿಸಿದರು. ಈ ಅಭ್ಯಾಸ ಕ್ರಮವನ್ನು ಮಗುವಿನ ಸ್ವಾಭಾವಿಕ, ಆರ್ಥಿಕ ಹಾಗು ಸಾಮಾಜಿಕ ಬೆಳವಣಿಗೆಗೆ ಸಹಾಯಕವಾದ ಅವನ ನಿಕಟ ಸಂಬಂಧಿತ ಜೀವನದ ಮೂರೂ ಪರಿಸ್ಥಿತಿಗಳ ಸುತ್ತುಮುತ್ತು ಹೆಣೆದು ಹೆಚ್ಚು ನೈಜವಾದ ಶೈಕ್ಷಣಿಕ ಕ್ರಮವನ್ನು ನಿರ್ಮಿಸಿದ್ದಾರೆ. ಇದುವೇ ಆ ಮೂಲ ಶಿಕ್ಷಣದ ಅಭ್ಯಾಸಕ್ರಮವು. ಈ ಅಭ್ಯಾಸಕ್ರಮದ ಸಂಗತಿಗಳು ಉದ್ದೇಶಪೂರಕವೂ ಉತ್ಪಾದಕವೂ ಆಗಿರುವವು. ಮತ್ತು ಈ ಕ್ರಮವು ಮಗುವಿನ ಮನ, ಮೈ, ಆತ್ಮಗಳ ಸರ್ವತೋಮುಖ ವಿಕಾಸಕ್ಕೆ ತುಂಬ ಸಹಾಯಕಾರಿಯಾಗಿದೆ ಎಂಬುದು ಕೆಳಗಿನ ಸಂಗತಿಗಳ ಮೇಲಿಂದ ಸ್ಪಷ್ಟವಾಗದೆ ಇರದು:—

ಮಗುವಿನ ಸರ್ವತೋಮುಖ ಬೆಳವಣಿಗೆಗೆ ಶೈಕ್ಷಣಿಕವಾಗಿ ಪರಿಣಮಿಸಿದ ಮೂರು ಪರಿಸ್ಥಿತಿಗಳೆಂದರೆ (೧) ಮಗುವಿನ ನೈಸರ್ಗಿಕ ಪರಿಸ್ಥಿತಿ (೨) ಸಾಮಾಜಿಕ ಪರಿಸ್ಥಿತಿ ಮತ್ತು (೩) ಆರ್ಥಿಕ ಪರಿಸ್ಥಿತಿ.

ಮಗುವಿಗೂ ನಿಸರ್ಗಕ್ಕೂ ನಿಕಟ ಸಂಬಂಧ. ನಿಸರ್ಗ ನಿಯಮಗಳಿಗೆ ಹೊಂದಿಕೊಂಡು ಹೋಗುವ ಸಾಮರ್ಥ್ಯವನ್ನು ತನ್ನಲ್ಲಿ ತಂದುಕೊಳ್ಳುವದು ಮಗುವಿನ ಆದ್ಯ ಕೆಲಸವಾಗಿದೆ. ಮಗುವು ತನ್ನ ಸುತ್ತಲಿನ ನಿಸರ್ಗದ ವೈಶಿಷ್ಟ್ಯಗಳನ್ನು ತಿಳಿದುಕೊಳ್ಳಬೇಕು; ನಿಸರ್ಗದಲ್ಲಿದ್ದ ಸೌಂದರ್ಯವನ್ನು ಉಪಾಸನೆ ಮಾಡಬೇಕು. ಮತ್ತು ನಿಸರ್ಗದಲ್ಲಿ ಅಡಗಿದ ಕೆಲವು ಮಹತ್ವದ ಶಕ್ತಿಗಳನ್ನು ತನ್ನ ಜೀವನ ಸಾಫಲ್ಯಕ್ಕೆ ಉಪಯೋಗಿಸಿಕೊಳ್ಳಬೇಕು. ಸ್ವಾಭಾವಿಕವಾಗಿ ಈ ಮೂರೂ ಕ್ರಿಯೆಗಳು ಮಗುವಿನಲ್ಲಿ ನಡೆದಿರುವವು. ಇದಕ್ಕೆ ತಕ್ಕ ಸಂದರ್ಭ ಸನ್ನಿವೇಶಗಳನ್ನು

ಕಲ್ಪಿಸಿಕೊಡಲು ಅಭ್ಯಾಸ ಕ್ರಮದಲ್ಲಿ ಆಸ್ಪದವಿರಬೇಕೆಂಬುದು ಯೋಗ್ಯವೆನಿಸದಿರಲಾರದು. ಉದಾಹರಣಾರ್ಥವಾಗಿ— ಒಂದು ಸಮೀಪದ ನದಿ ಪ್ರವಾಹದ ಮನೋಹರ ದೃಶ್ಯದ ನಿರೀಕ್ಷಣೆಯಲ್ಲಿ ಬಾಲಕರು ತೊಡಗಿದಾಗ ಯಾವ ಶೈಕ್ಷಣಿಕ ಲಾಭವನ್ನು ಪಡೆಯಬಹುದೆಂಬುದನ್ನು ನೋಡುವಾ. ಮಕ್ಕಳು, ನದಿ ಎಂದರೇನು, ಅದು ಹೇಗೆ ಉಂಟಾಗುವದು, ಅದು ಸಮುದ್ರಕ್ಕೆ ಮುಟ್ಟುವ ಪೂರ್ವದಲ್ಲಿ ಯಾವ ಬದಲಾವಣೆಗಳನ್ನು ಹೊಂದುವದು, ಅದರ ದಿಕ್ಕು ಮತ್ತು ಉಗಮ ಸ್ಥಾನಗಳು ಯಾವ ಸಂಗತಿಗಳನ್ನು ಅವಲಂಬಿಸಿಕೊಂಡಿವೆ ಮೊದಲಾದ ಸಂಗತಿಗಳ ಬಗೆಗೆ ಜ್ಞಾನ ಮಾಡಿಕೊಳ್ಳಬಹುದು. ತರುವಾಯ ಗಿರಿಕಂದರಗಳಲ್ಲಿ ಹಾಯ್ದು ಜುಳುಜುಳು ನಾದಮಾಡುತ್ತ ಹರಿಯುವ ಅದರ ಪ್ರವಾಹದ ಸೊಬಗನ್ನೂ ಅದರ ಎಡಬಲದಲ್ಲಿದ್ದ ಸೃಷ್ಟಿ ಸೌಂದರ್ಯವನ್ನೂ ಅಲ್ಲದೆ ನಿಸರ್ಗದ ವಸ್ತುಗಳಿಂದ ಉಂಟಾದ ಇತರ ಮನೋಹರ ದೃಶ್ಯಗಳನ್ನೂ ಕಂಡು ಸ್ಫೂರ್ತಿಗೊಂಡು ಮಗುವು ತನ್ನ ಭಾವನೆಗಳನ್ನು ಬಲಪಡಿಸಿ ವ್ಯಕ್ತಮಾಡಬಹುದು. ಅದುವೆ ಒಂದು ಕಾವ್ಯದ ರೂಪವನ್ನೋ ಅಥವಾ ಲೇಖದ ರೂಪವನ್ನೋ ತಾಳಬಹುದು. ಮೂರನೆಯದಾಗಿ ಅದರಲ್ಲಿ ಅಡಗಿದ ಕೆಲವು ಶಕ್ತಿಗಳನ್ನು ಉಪಯೋಗಿಸಲು ಹವಣಿಸುವನು. ನದಿಯಿಂದ ನೀರಿನ ಪೂರೈಕೆ ಮಾಡಿಕೊಳ್ಳಬಹುದು. ತನ್ನ ಬಟ್ಟೆ, ಪಾತ್ರೆ, ಶರೀರ ಮುಂತಾದವುಗಳನ್ನು ಸ್ವಚ್ಛಮಾಡಿಕೊಳ್ಳಲಿಕ್ಕೆ ಅದರ ನೀರನ್ನು ಉಪಯೋಗಿಸಬಹುದು. ಅದರ ಪ್ರವಾಹದ ಶಕ್ತಿಯಿಂದ ವಿದ್ಯುತ್‌ಶಕ್ತಿಯನ್ನು ಹೊರಡಿಸಿದ ಯೋಜನೆಗಳನ್ನು ಕುರಿತು ವಿಚಾರಿಸಬಹುದು. ಆದರೆ ಈ ಮೂರೂ ವಿಧವಾಗಿ ಮಗುವಿನ ಜ್ಞಾನಾರ್ಜನೆಗೆ ಕಾರಣೀಭೂತವಾದದ್ದೆಂದರೆ ನದಿಯ ನಿರೀಕ್ಷಣೆಯ ಚಟುವಟಿಕೆಯು. ಆದರೆ ಆ ಚಟುವಟಿಕೆರಹಿತ ಸಾಮಾನ್ಯ ಶಿಕ್ಷಣ ಕ್ರಮದಲ್ಲಿ ಮಗುವಿನ ಈ ಮೂರೂ ಅಂಗಗಳಿಗೆ ಆಸ್ಪದ ಕೊಡದೆ ಕೇವಲ ಪಠ್ಯಪುಸ್ತಕಗಳ ಮುಖಾಂತರ ವಿಷಯ ಜ್ಞಾನ ಮಾಡಿಕೊಳ್ಳಬೇಕೆಂದು ಇಟ್ಟಿದ್ದು ದೋಷಯುಕ್ತವಾಗಿರುವದೆಂದು ಬೇರೆ ಹೇಳಬೇಕಾಗಿಲ್ಲ. ಜೀವನ ಶಿಕ್ಷಣದ ಅಭ್ಯಾಸ ಕ್ರಮವು ಈ ದೋಷವನ್ನು ಹೋಗಲಾಡಿಸಿ ಮಗುವಿನ ಜ್ಞಾನೋಪಾಸನೆ, ಸೌಂದರ್ಯೋಪಾಸನೆ, ಕ್ರಿಯೋಪಾಸನೆ ಪ್ರವೃತ್ತಿಗಳಿಗೆ ಆಸ್ಪದ ದೊರೆಯುವಂತೆ ಮಗುವಿನ ನೈಸರ್ಗಿಕ, ಸಾಮಾಜಿಕ ಹಾಗು ಆರ್ಥಿಕ ಪರಿಸ್ಥಿತಿಗಳಲ್ಲಿಯ ಚಟುವಟಿಗಳನ್ನು ಆಯ್ದುಕೊಂಡು ವಿಷಯಗಳು ಸಮವಾಯಗೊಳ್ಳುವಂತೆ ಅಭ್ಯಾಸ ಕ್ರಮವನ್ನು ಹೆಣೆದಿದೆ.

ಇನ್ನು ಈ ಮೂರೂ ಪರಿಸ್ಥಿತಿಗಳ ಚಟುವಟಿಕೆಗಳ ರೂಪರೇಷೆಯನ್ನಷ್ಟು ನೋಡುವಾ. ಮತ್ತು ಅವು ಮಗುವಿನ ವಿವಿಧವಾದ ಮನೋವಿಕಾಸಕ್ಕೆ ಹೇಗೆ ಸಹಾಯಕಾರಿಯಾಗಿರುವವೆಂದು ಸ್ವಲ್ಪ ತಿಳಿದುಕೊಳ್ಳುವಾ. ಗುಡ್ಡ, ಹೊಲ, ನದಿ, ಆಯಗಾರರ ಕಾರ್ಯಾಲಯ ಮೊದಲಾದವುಗಳನ್ನು ನಿರೀಕ್ಷಿಸುವ ಚಟುವಟಿಕೆಗಳು ನೈಸರ್ಗಿಕ ಪರಿಸ್ಥಿತಿಯ ಚಟುವಟಿಕೆಗಳಾಗಿವೆ. ಇವುಗಳಿಗೆ ಅನುಬಂಧಿಸಿ ಹೆಚ್ಚಾಗಿ ಭೂಗೋಲ, ವಿಜ್ಞಾನಶಾಸ್ತ್ರ ಮೊದಲಾದ ವಿಷಯಗಳನ್ನು ಕ್ರಮಬದ್ಧಗೊಳಿಸಿ, ತರ್ಕಬದ್ಧವಾಗಿ ಕಲಿಸಲಾಗುವದು. ಈ ಕ್ರಮದ ಪ್ರಕಾರ ಪದಾರ್ಥವಿಜ್ಞಾನಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಖಗೋಲಶಾಸ್ತ್ರ, ಭೂಗೋಲಶಾಸ್ತ್ರ ಮೊದಲಾದ ಶಾಸ್ತ್ರಗಳನ್ನು ಭಿನ್ನಭಿನ್ನ ವಿಷಯಗಳನ್ನಾಗಿ ರೂಪಿಸಿ ಕಲಿಸದೆ ಅವುಗಳನ್ನು ಅಖಂಡವಾಗಿ ಮಗುವು ನಿರೀಕ್ಷಿಸಿದ ವಸ್ತುಗಳಿಗೆ ಅನುಬಂಧಿಸಿ ಕಲಿಸಲಾಗುವದು.

ಸಫಾಯಿ, ಪ್ರಾರ್ಥನೆ, ಗಣ್ಯವ್ಯಕ್ತಿಗಳ ಜಯಂತಿ, ಪುಣ್ಯದಿನ, ಮಹತ್ವದ ಹಬ್ಬಗಳ ದಿನಾಚರಣೆ ಮುಂತಾದ ಚಟುವಟಿಕೆಗಳು ಮಗುವಿನ ಸಾಮಾಜಿಕ ಪರಿಸ್ಥಿತಿಗೆ ಹೊಂದಿಕೊಂಡಿರುವವು. ಇಂಥ ಕಾರ್ಯಗಳನ್ನು ಕೈಕೊಂಡಾಗ ಭೌಗೋಲಿಕ, ಐತಿಹಾಸಿಕ, ಮತ್ತು ಸಮಾಜನೀತಿಯೆ ಮೊದಲಾದ ವಿಷಯಗಳ ಬಗೆಗೆ ಜ್ಞಾನವನ್ನು ಸಮವಾಯ ಮಾಡಲಾಗುವದು. ಈ ಪರಿಸ್ಥಿತಿಯ ಚಟುವಟಿಕೆಗಳಿಗೆ ಸಮವಾಯ ಮಾಡುವ ಮುಖ್ಯ ಉದ್ದೇಶವೆಂದರೆ ಮಗುವಿಗೆ, ಮಾನವಕೋಟಿಯ ನಿತ್ಯದ ವ್ಯವಹಾರ ಮತ್ತು ಸಂಸ್ಥೆಗಳ ಕಾರ್ಯಗಳ ಬಗೆಗೆ ಪರಿಚಯ ಮಾಡಿಕೊಡುವದು. ಮಗು ಸಮಾಜ ಜೀವಿ. ತನ್ನ ಸಮಾಜಕ್ಕೆ ಅವನು ಅತ್ಯಂತ ಉಪಯುಕ್ತವಾಗುವ ಒಂದು ಘಟಕವಾಗಬೇಕೆಂಬುದು ಎಲ್ಲರೂ ಒಪ್ಪತಕ್ಕ ಮಾತು. ಗಣ್ಯವ್ಯಕ್ತಿಗಳ ಜಯಂತಿ, ಹಬ್ಬಗಳ ದಿನಾಚರಣೆ ಮೊದಲಾದ ಸಾಮಾಜಿಕ ದಿನಾಚರಣೆಗಳನ್ನು ಕೈಕೊಂಡಾಗ ಮಗುವು ಆ ದಿನಗಳ ವೈಶಿಷ್ಟ್ಯಗಳನ್ನೂ, ಪೌರಾಣಿಕ, ಸಾಮಾಜಿಕ ಮತ್ತು ಐತಿಹಾಸಿಕ ಹಿನ್ನೆಲೆಗಳನ್ನೂ ತಿಳಿದುಕೊಳ್ಳಲು ಕುತೂಹಲವುಳ್ಳವನಾಗುವನು. ಅಲ್ಲದೆ ಗಣ್ಯವ್ಯಕ್ತಿಗಳ ಗುಣ ವೈಶಿಷ್ಟ್ಯಗಳನ್ನು ಅರಿತುಕೊಂಡು

ಅನುಕರಣ ಮಾಡಲು ಅವನಿಗೆ ತುಂಬಾ ಆಸ್ಪದ ದೊರೆಯುವದು. ಹೀಗೆ ತನ್ನ ಸಂಸ್ಕೃತಿಯ ಮಟ್ಟವನ್ನು ಏರಿಸಿಕೊಳ್ಳಲು ಸಹ ಮಾರ್ಗ ದೊರೆಯುವದು. ಈ ದಿಶೆಯಿಂದ ನೋಡಿದರೆ ಇತಿಹಾಸ, ಭೂಗೋಲ, ಪೌರನೀತಿ ಮೊದಲಾದ ವಿಷಯಗಳನ್ನು ಕೂಡಿಸಿ "ಸಮಾಜ ನೀತಿ" (Social Studies) ಎಂದು ಕರೆದದ್ದು ಸಮಂಜಸವೇ ಸರಿ. ಈ ವಿಷಯವು ಸಮವಾಯಗೊಂಡಾಗ ಅದನ್ನು ಸಾರ್ಥಕವಾಗಿ ಕಲಿಸಬೇಕಾದರೆ ಶಿಕ್ಷಕನು ಸಮಾಜದ ವ್ಯಾಪಕ ಕ್ಷೇತ್ರದಲ್ಲಿ ಅನುಭವ ಪಡೆದವನಿರಬೇಕು; ಬಹಳಷ್ಟು ಓದಿಕೊಂಡಿರಬೇಕು. ಅಂದರೆಯೇ ಮಾನವ ಕೋಟಿಯ ವೈಶಿಷ್ಟ್ಯವೆನಿಸಿದ ಸಹಜೀವನ, ಸಹಕಾರ, ಸ್ನೇಹ ಮೊದಲಾದ ಸದ್ಗುಣಗಳನ್ನು ಮಕ್ಕಳಲ್ಲಿ ನೆಲೆಗೊಳ್ಳುವಂತೆ ಮಾಡಲು ಶಕ್ತನಾಗುವನು.

ಮೂರನೆಯದಾಗಿ ಆರ್ಥಿಕ ಪರಿಸ್ಥಿತಿಯ ಚಟುವಟಿಕೆಗಳು. ಇವುಗಳಲ್ಲಿ ಮೂಲೋದ್ಯೋಗದ ಎಲ್ಲ ಕ್ರಿಯೆಗಳು ಬಹು ಭಾಗವನ್ನು ಆಕ್ರಮಿಸುವವು. ಮಗುವಿನ ನೈಸರ್ಗಿಕ ಪರಿಸ್ಥಿತಿಯನ್ನು ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಜೋಡಿಸುವ ಇದೊಂದು ಸರಪಳಿಯಾಗಿದೆ ಅನ್ನಬಹುದು. ಯಾಕೆಂದರೆ ಮನುಷ್ಯನಿಗೆ ಬೇಕಾಗುವ ಅರಿವೆ, ಆಹಾರ, ಆಶ್ರಯಗಳನ್ನು ತಯಾರಿಸಿಕೊಳ್ಳಲು ಬೇಕಾಗುವ ಹತ್ತಿ, ಧಾನ್ಯ, ಕಟ್ಟಿಗೆ ಮುಂತಾದ ಕಚ್ಚಾಮಾಲು ನಿಸರ್ಗದಿಂದಲೇ ದೊರೆಯುವದು. ಮಗುವು ತನ್ನ ಜೀವನ ಕ್ರಮಕ್ಕೆ ಬೇಕಾಗುವ ವಸ್ತುಗಳನ್ನು ಸುಲಭವಾಗಿ ತಯಾರಿಸಿಕೊಳ್ಳಲು ಪ್ರಯತ್ನಿಸುವದು ವ್ಯವಹಾರಿಕವಾಗಿದೆ. ಅದಕ್ಕಾಗಿ ಬೇಕಾಗುವ ಕಚ್ಚಾಮಾಲನ್ನು ವೆಚ್ಚವಿಲ್ಲದೆ ಸುಲಭವಾಗಿ ದೊರಕಿಸಿಕೊಳ್ಳಬೇಕೆಂಬುದು ಅವನ ಆರ್ಥಿಕ ಪರಿಸ್ಥಿಯ ಹಿನ್ನೆಲೆಯಾಗಿದೆ. ಇವೆರಡೂ ಬೇಡಿಕೆಗಳನ್ನು ಮಗುವಿನ ಸಾಮಾಜಿಕ ನೈಸರ್ಗಿಕ ಪರಿಸ್ಥಿತಿಗಳು ಒದಗಿಸಿಕೊಟ್ಟರೂ, ಕಚ್ಚಾಮಾಲಿನಿಂದ ಪಕ್ಕಾಮಾಲಿನ ವರೆಗೆ ಹೋಗಬೇಕಾದ ಕ್ರಿಯೆಗಳ ಜ್ಞಾನವನ್ನು ಮಾಡಿಕೊಡುವ ಒಂದು ಸಾಧನದ ಅವಶ್ಯಕತೆ ಇರುವದು. ಈ ಮೂರನೆಯ ಅವಶ್ಯಕತೆಯನ್ನು ಮಗುವಿನ ಆರ್ಥಿಕ ಪರಿಸ್ಥಿತಿಯ ಅಗ್ರಸ್ಥಾನವನ್ನು ವಹಿಸಿದ ಮೂಲೋದ್ಯೋಗವೇ ಪೂರೈಸುವದು. ಈ ರೀತಿಯಾಗಿ ಜೀವನೋಪಯೋಗಿ ವಸ್ತುಗಳನ್ನು ಕಚ್ಚಾಮಾಲಿನಿಂದ ತಯಾರಿಸುವ ಸಶಾಸ್ತ್ರ ಜ್ಞಾನವನ್ನು ಮೂಲೋದ್ಯೋಗವು ಮಾಡಿಕೊಡುವದು ಮಾನಃಶಾಸ್ತ್ರ ದೃಷ್ಟಿಯಿಂದ ಮಗುವಿನ ಚಟುವಟಿಕೆಯ ಪ್ರವೃತ್ತಿಗೆ ತಕ್ಕ ಆಸ್ಪದಕೊಟ್ಟು ಅವನನ್ನು ಪ್ರೇರಿಸುವದು; ಸಾಮಾಜಿಕ ದೃಷ್ಟಿಯಿಂದ ಮೇಲು, ಕೀಳು ಎಂಬ ಭಾವನೆಯನ್ನು ತೆಗೆದು ಎಲ್ಲರನ್ನು ಒಂದೇ ಸಮನಾಗಿ ಶಾರೀರಿಕ ಶ್ರಮಕ್ಕೆ ಹಚ್ಚಿ ಶ್ರಮಗೌರವವನ್ನು ತಂದುಕೊಡುವದು; ಇದಲ್ಲದೆ ಒಳ್ಳೇ ಜಾಣಾಕ್ಷತನದಿಂದ ಮೂಲೋದ್ಯೋಗಗಳನ್ನು ನಾಗಿಸಿದರೆ ಮಾನವನ ವೈಯಕ್ತಿಕ ಉತ್ಪಾದನೆಯನ್ನು ಬೆಳೆಯಿಸಲು ಸಹಾಯಕವಾಗುವದು; ಮತ್ತು ಮನುಷ್ಯನು ತನ್ನ ಬಿಡುವಿನ ವೇಳೆಯನ್ನು ಉತ್ಪಾದಕ ವಸ್ತುಗಳನ್ನು ತಯಾರಿಸುವದರಲ್ಲಿ ಯೋಗ್ಯ ರೀತಿಯಿಂದ ಕಳೆಯಲು ತುಂಬಾ ಅನುಕೂಲವಾಗುವದು. ಪರಿಸ್ಥಿತಿಗನುಗುಣವಾದ ಮೂಲೋದ್ಯೋಗಗಳನ್ನು ಶಿಕ್ಷಣದ ತಳಹದಿಯನ್ನಾಗಿಟ್ಟುಕೊಂಡು ಸಮವಾಯಗೊಂಡ ಜ್ಞಾನವನ್ನು ಸಶಾಸ್ತ್ರವಾಗಿ ಕೊಟ್ಟರೆ ಶೈಕ್ಷಣಿಕ ದೃಷ್ಟಿಯಿಂದ ಅತ್ಯಂತ ಪರಿಣಾಮಕಾರಿಯಾಗಬಲ್ಲದು. ಮಗುವಿನ ವೈಯಕ್ತಿಕ ವಿಕಾಸಕ್ಕೂ ಹಾಗೂ ಸಂಸ್ಕೃತಿಯ ಮಟ್ಟವನ್ನು ಏರಿಸುವದಕ್ಕೂ ಸಹಾಯಕವಾಗುವದು. ಶಿಕ್ಷಣದಲ್ಲಿ ಇಂಥದೊಂದು ಕೇಂದ್ರಸ್ಥಾನವನ್ನು ಮೂಲೋದ್ಯೋಗಗಳಿಗೆ ಕೊಡುವ ಸಹಾಸ ಮಾಡಿದ್ದೇಂದರೆ ಜೀವನ ಜಿಕ್ಷಣವೇ ಹೊರತು ಬೇರೊಂದಿಲ್ಲವೆಂದರೆ ತಪ್ಪಾಗಲಿಕ್ಕಿಲ್ಲ.

೨. ಜ್ಞಾನವು ಒಂದು ಅಖಂಡ ಘಟಕವು:— ಜ್ಞಾನದ ನಿಜಸ್ವರೂಪವು ಅಖಂಡವಾಗಿರುವದು. ಆದರೆ ನಮ್ಮ ಜ್ಞಾನಭಾಂಡಾರವು ಅತಿಶಯ ಬೆಳೆದು ಬಿಟ್ಟದ್ದರಿಂದ ಅದನ್ನು ಸುಲಭವಾಗಿ ಗಳಿಸುವದಕ್ಕೆ ಅನುಕೂಲ ಮಾರ್ಗವನ್ನು ಹುಡುಕಲು ಮಾನವನು ಪ್ರಯತ್ನಿಸುವದುಂಟು. ಈ ಅಖಂಡ ಜ್ಞಾನವನ್ನು ಭೂಗೋಲ, ಇತಿಹಾಸ, ಸಾಮಾನ್ಯವಿಜ್ಞಾನ, ಗಣಿತ ಮೊದಲಾದ ವಿಷಯಗಳಲ್ಲಿ ಭಾಗಮಾಡಿದ್ದು ಇಂಥ ಪ್ರಯತ್ನಗಳಲ್ಲಿ ಒಂದಾಗಿದೆ ಎನ್ನಬಹುದು. ಇವು ಕೃತ್ರಿಮವೆನಿಸಿದರೂ ಕಲಿಸಲು ಅನುಕೂಲವಾಗುವದರಿಂದ ಅನೇಕ ಕಾರ್ಯಕರ್ತರು ಬೇರೆ ಬೇರೆ ವಿಷಯಗಳನ್ನು ವಿಂಗಡಿಸಿ ಕಲಿಸುವದೇ ಒಳ್ಳೇದು ಎಂದು ಪ್ರತಿಪಾದಿಸುತ್ತ ಬಂದಿರುವರು. ಆದರೆ ಶಿಕ್ಷಣವು ಜೀವನೋಪಯೋಗಿಯಾಗಬೇಕು ಮತ್ತು ಅದು ಅನುಸರಿಸುವ ವಿಧಾನವು ನೈಜವಾದದ್ದಿರಬೇಕು. ಎಂದು ಸ್ವೀಕರಿಸಿದಾಗ ಜ್ಞಾನವು ಅಭಿನ್ನವಾಗಿಯೂ ಸಮಗ್ರವಾಗಿಯೂ ಜೀವನೋಪಯೋಗಿ ಚಟುವಟಿಕೆಯ ಮುಖಾಂತರ ವಿಕಾಸ ಹೊಂದುತ್ತ ಹೋಗಬೇಕೆಂಬು

ದನ್ನು ಒತ್ತಿ ಹೇಳಬೇಕಾಗುವದಿಲ್ಲ. ಮಗುವು ತನ್ನ ಜೀವನದ ಬೇಡಿಕೆಯನ್ನು ಪೂರೈಸಿಕೊಳ್ಳುವ ಚಟುವಟಿಕೆಯಲ್ಲಿ ತೊಡಗಿದಾಗ ಅದನ್ನು ಯಶಸ್ವಿಗೊಳಿಸಲು ಕೇವಲ ನಿರ್ದಿಷ್ಟ ಒಂದೆರಡು ವಿಷಯಗಳ ಅಭ್ಯಾಸ ಮಾಡಿದರೆ ಸಾಲದು. ಅಲ್ಲದೆ ಯಾವದೇ ಒಂದು ವಿಷಯದ ಅನಾವಶ್ಯಕ ಆಳವಾದ ಅಭ್ಯಾಸ ಮಾಡಿದರೂ ಉಪಯೋಗವಾಗಲಾರದು. ಆದ್ದರಿಂದ ಚಟುವಟಿಕೆಯ ಮುಖಾಂತರ ಪಡೆಯುವ ಸಹಜೋತ್ಪನ್ನ ಜ್ಞಾನವು ಅಖಂಡ ಸ್ವರೂಪವನ್ನು ತಾಳಬೇಕು. ಮತ್ತು ಸಶಾಸ್ತ್ರವಾಗಿ ಕಲಿಸಲ್ಪಡಬೇಕೆಂಬ ನಿರ್ಣಯವು ಅನಿವಾರ್ಯವಾದುದು. ಇಂಥ ಮೂಲಭೂತ ನಿರ್ಣಯವನ್ನು ಸ್ಥಾಪಿಸಿದ್ದೇ ಜೀವನ ಶಿಕ್ಷಣದ ಹೊಸ ಕ್ರಾಂತಿಯ ದ್ಯೋತಕವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಪಠ್ಯ ಪುಸ್ತಕಗಳ ಮುಖಾಂತರ ಕಲಿಸುವ ಶಿಕ್ಷಕರಿಗೆ ಬೇರೆ ಬೇರೆ ಪರಿಸ್ಥಿತಿಯ ಚಟುವಟಿಕೆಗಳ ಮುಖಾಂತರ, ಜ್ಞಾನವನ್ನು ಅಖಂಡ ಸ್ವರೂಪದಲ್ಲಿ ಕೊಡುವದು ಒಂದು ದೊಡ್ಡ ಕ್ರಾಂತಿಯೆನಿಸದೆ ಇರಲಾರದು. ಮತ್ತು ಒಮ್ಮೊಮ್ಮೆ ಅವ್ಯವಹಾರಿಕವಾಗಿಯೂ ಅನಿಸಬಹುದು. ಮೇಲಾಗಿ ಭಾಷೆಯನ್ನು ಕಲಿಸಲು ಈ ಪದ್ಧತಿಯಲ್ಲಿ ಸ್ಥಾನವೆಲ್ಲಿದೆ ಎಂದು ಪ್ರಶ್ನೆಯನ್ನೂ ಹಾಕಬಹುದು. ಆದರೆ ಆಳವಾದ ಶ್ರದ್ಧೆಯಿಂದಲೂ ಮುಕ್ತ ಮನಸ್ಸಿನಿಂದಲೂ ಪ್ರತ್ಯಕ್ಷ ಕಾರ್ಯರೂಪಕ್ಕೆ ಇಳಿದು ನೋಡಲಾಗಿ ಈ ಎಲ್ಲ ಶಂಕೆಗಳು ಮಾಯವಾಗತೊಡಗುವವೆಂದು ಧಾರಾಳವಾಗಿ ಹೇಳಬಹುದು. ಇನ್ನು ಭಾಷೆಯ ವಿಷಯ. ಮಗುವಿನಲ್ಲಿ ಅವನ ಬುದ್ಧಿ ಮಟ್ಟಕ್ಕೆ ತಕ್ಕಂತೆ ಭಾಷೆಯು ಬಲಪಡಬೇಕಾಗುವ ಎಲ್ಲ ತರದ ಅಸ್ಪದವು ಜೀವನ ಶಿಕ್ಷಣದಲ್ಲಿ ಇದೆ ಎನ್ನುವದು ಒಂದೆರಡು ಮಾತುಗಳಿಂದ ಸ್ಪಷ್ಟವಾಗಬಹುದು. ಮಗುವು ಯಾವದೊಂದು ಚಟುವಟಿಕೆಯನ್ನು ಕೈಕೊಂಡಿರುವಾಗ ಅದರ ಬಗೆಗೆ ಚರ್ಚಿಸಬೇಕಾಗುವದು, ಶಂಕೆಗಳನ್ನು ವ್ಯಕ್ತಮಾಡಬೇಕಾಗುವದು, ಭಾವನೆಗಳನ್ನು ತಿಳಿಸಬೇಕಾಗುವದು, ಕಾರ್ಯದ ಪದ್ಧತಿಯನ್ನು ತರ್ಕಬದ್ಧಗೊಳಿಸಬೇಕಾಗುವದು. ಇವೆಲ್ಲ ಕ್ರಿಯೆಗಳನ್ನು ಮಾಡುವಾಗ ಭಾಷೆಯು ತಾನಾಗಿಯೇ ಬಲಪಡುವದು. ಶಿಕ್ಷಕರು ಸನ್ನಿವೇಶಕ್ಕೆ ತಕ್ಕಂತೆ ಪಾಠಗಳನ್ನು ನಿರ್ಮಿಸುವಷ್ಟು ಯೋಗ್ಯತೆಯುಳ್ಳವರಿದ್ದರೆ ಪಠ್ಯ ಪುಸ್ತಕಗಳಿಲ್ಲದೆ ಭಾಷೆಯನ್ನು ಪರಿಣಾಮಕಾರಿಯಾಗಿ ಕಲಿಸಬಹುದು. ಪ್ರಾರಂಭದಲ್ಲಿಯಂತೂ ಇಂಥ ಕ್ರಮಗಳೇ ಹೆಚ್ಚು ನೈಜವಾಗಿಯೂ ಪರಿಣಾಮಕಾರಿಯಾಗಿಯೂ ಆಗಬಲ್ಲವು. ಚಿಕ್ಕಮಕ್ಕಳು ಆಡುತ್ತಿರುವ ತೊದಲ್ನುಡಿಗಳನ್ನು ತಿದ್ದಿ ತೀಡಿ ಸುಸ್ಪಷ್ಟಗೊಳಿಸಬಹುದು. ಇಂಥ ಮಾತುಗಳನ್ನು ಕೂಡಿಸಿ ಮಕ್ಕಳ ಮನಸ್ಸು ಹಿಡಿಯುವ ಚಿಕ್ಕ ಪಾಠಗಳನ್ನು ರಚಿಸಬಹುದು. ಇಂಥ ಪಾಠಗಳಲ್ಲಿ ಮಕ್ಕಳ ಆಸಕ್ತಿ ಬಹಳ. ಯಾಕೆಂದರೆ ತಮ್ಮ ಮಾತುಗಳೇ ಒಂದು ಭಾಷಾ ಪಾಠದ ಸ್ವರೂಪವನ್ನು ತಾಳಿದ್ದು ಕಾಣಲು ಅವರಿಗೆ ಒಂದು ಹೆಮ್ಮೆಯ ವಿಷಯವೆನಿಸುವದು. ಈ ಕ್ರಮವನ್ನು ಅನುಸರಿಸುವದು ಶಿಕ್ಷಕರಿಗೆ ಅಶಕ್ಯವೇನಲ್ಲ. ಜೀವನ ಶಿಕ್ಷಣದಲ್ಲಿ ದುಡಿಯುತ್ತಿರುವ ಅನೇಕ ಶಿಕ್ಷಕರು ತಾವು ಉಪಯೋಗಿಸಿದ ಭಾಷಾ ಪಾಠಗಳು ಇಂದು ಪಠ್ಯಪುಸ್ತಕಗಳ ರೂಪವನ್ನು ತಾಳುತ್ತಿರುವದು ಇದಕ್ಕೆ ದೊಡ್ಡ ಸಾಕ್ಷಿಯಾಗಿದೆ. ಮೇಲಾಗಿ ಶಿಕ್ಷಣದ ಮುಖ್ಯ ಗುರಿಯು ವ್ಯಕ್ತಿಯ ಮನ, ಮೈ ಮತ್ತು ಆತ್ಮಗಳ ವಿಕಾಸವಾಗಬೇಕೆಂಬುದು ಇದ್ದಾಗ ಕೇವಲ ಸಾಕ್ಷರತೆಯ ಶಿಕ್ಷಣವು ಅಷ್ಟೊಂದು ದೊಡ್ಡ ಸಾಧನವಾಗಲಾರದು. ಮಹಮ್ಮದ ಪೈಗಂಬರ, ಅಕಬರ ಬಾದಶಹ, ರವೀಂದ್ರನಾಥ ಟಾಗೋರ ಮೊದಲಾದವರು ದೊಡ್ಡ ವ್ಯಕ್ತಿಗಳಾಗಿ ಹೋದರೂ ಸಾಕ್ಷರತೆಯ ಶಿಕ್ಷಣವು ಅವರಿಗೆ ದೊಡ್ಡ ಪ್ರಮಾಣದಲ್ಲಿ ಆಗಿರಲಿಲ್ಲವಂತೆ. ಅವರಲ್ಲಿದ್ದ ಭಾಷೆಯ ಪ್ರತಿಭೆಯು ಯಾವ ರೀತಿಯಿಂದಲೂ ಕಡಿಮೆಯ ತರದ್ದಿರಲಿಲ್ಲವೆಂದು ಬೇರೆ ಹೇಳಬೇಕಾಗಿಲ್ಲ.

ಕೊನೆಯದಾಗಿ ಜೀವನ ಶಿಕ್ಷಣದಲ್ಲಿ ಕೇವಲ ಪಾಠ ಮಾಡಿ ಕೆಲವೊಂದು ಪ್ರಶ್ನೆಗಳಿಗೆ ಉತ್ತರ ಕೊಡುವ ಕೃತ್ರಿಮ ಪರೀಕ್ಷಾ ಪದ್ಧತಿಗಳಿಗೆ ಸ್ಥಾನವಿಲ್ಲ. ಮತ್ತು ಜೀವನ ಶಿಕ್ಷಣ ಕ್ರಮದಲ್ಲಿ ಗುರು ಶಿಷ್ಯರಿಗೆ ನಿಕಟ ಸಂಬಂಧ ಉಂಟಾಗುವದು. ಜ್ಞಾನವನ್ನು ಕೊಡುವ ಕ್ರಮವು ಚಟುವಟಿಕೆಯ ಮುಖಾಂತರ ಅಖಂಡ ಸ್ವರೂಪದಲ್ಲಿ ನಡೆದಿರುವದರಿಂದ ಗುರು ಶಿಷ್ಯರು ಒಂದು ಕುಟುಂಬದ ಸದಸ್ಯರಾಗಿ ಕಾರ್ಯಪ್ರವೃತ್ತರಾಗುವರು. ಬಿಚ್ಚು ಮನಸ್ಸಿನಿಂದ ಪರಸ್ಪರ ವಿಚಾರ ವಿನಿಮಯ ಮಾಡಲು ಇದರಲ್ಲಿ ಪೂರ್ಣ ಸ್ವಾತಂತ್ರ್ಯವಿದೆ. ಆದ್ದರಿಂದ ಮಗುವು ದಿನಂಪ್ರತಿ ಹೊಂದುತ್ತಿರುವ ಶಾರೀರಿಕ ಮತ್ತು ಬೌದ್ಧಿಕ ನಿಜವಾದ ಬೆಳವಣಿಗೆಯನ್ನು ತಿಳಿದುಕೊಳ್ಳಲು ಸುಲಭ ಸಾಧ್ಯವಿದೆ. ಸಾಂಘಿಕ ಚಟುವಟಿಕೆ, ಸಾಂಸ್ಕೃತಿಕ ಚಟುವಟಿಕೆ, ಮತ್ತು ಮೂಲೋದ್ಯೋಗ ಚಟುವಟಿಕೆಗಳಲ್ಲಿ ದಿನಂಪ್ರತಿ ಮಗುವು

ತೋರಿಸುವ ಆಸ್ಥೆ ಆವಿಷ್ಕರಣ ಶಕ್ತಿಗಳೇ ಅವನ ಶೈಕ್ಷಣಿಕ ಬೆಳವಣಿಗೆಯ ಅಳತೆಗೋಲುಗಳಾಗಿವೆ. ಜೀವನ ಶಿಕ್ಷಣವು ಪರಿಶೀಲನೆ ಕಾರ್ಯದಲ್ಲಿಯೂ ಕೂಡ ಒಂದು ಕ್ರಾಂತಿ ಕಾರಕ ಪದ್ಧತಿಯನ್ನು ಹಾಕಿಕೊಟ್ಟಿದೆ ಎನ್ನಬಹುದು.

ಒಟ್ಟಾರೆ ಹೇಳುವದಾದರೆ ಜೀವನ ಶಿಕ್ಷಣವನ್ನು ಪಡೆಯುವ ಮಗು ಕೇವಲ ಒಬ್ಬ ಅಕ್ಷರಾಭ್ಯಾಸಿಯಾಗದೆ ಒಂದು ಉತ್ತಮ ಸಮಾಜವನ್ನು ಕಟ್ಟುವ ನವನಾಗರಿಕ ನಾಗುವನೆಂದರೆ ಅತಿಶಯೋಕ್ತಿಯಾಗಲಾರದು. ಅವನಲ್ಲಿ ಯೋಗ್ಯ ಒಲವು ಭಾವನೆಗಳು ಒಡಮೂಡದೆ ಇರಲಾರವು. ಇಂಥ ಉತ್ತಮ ನವನಾಗರಿಕರ ಸಮಾಜದಿಂದ ಕೂಡಿದ ರಾಷ್ಟ್ರವು ಸುಖ ಶಾಂತಿಯನ್ನು ಹೊಂದುವ ರಾಷ್ಟ್ರವೇ ಸರಿ: ಆದ್ದರಿಂದ ಇಂಥ ರಾಷ್ಟ್ರವು ಅಂತರ ರಾಷ್ಟ್ರಿಯ ಸಂಬಂಧವನ್ನು ಬೆಳೆಸಿಕೊಂಡು ಸಹಜೀವನ, ಸಹಕಾರ, ಸತ್ಯ, ಅಹಿಂಸೆ ಮಾರ್ಗಗಳಿಂದ ವಿಶ್ವಬಾಂಧವ್ಯ ವನ್ನು ಪಡೆಯಲು ಅಣಿಯಾಗಬೇಕೆಂಬ ಮಹಾತ್ಮಾ ಗಾಂಧೀಜಿಯವರ ಕನಸು ಬೇಗನೆ ನನಸಾಗುವದೆಂಬ ಭರವಸೆ ತಾಳಲು ಯಾವ ಆತಂಕವೂ ಇಲ್ಲವೆಂದೆ ನಿಸುವದು.

ಈ ರೀತಿ ಸರ್ವಗುಣ ಪರಿಪೂರ್ಣವಾಗಿರುವ ಜೀವನ ಶಿಕ್ಷಣವು ಕೇವಲ ಮಹಾತ್ಮಾ ಗಾಂಧೀಜಿಯವ ರಂಥ ಸತ್ಪುರುಷರಿಂದ ಹೊರಟಿರುವದೆಂದು ಸ್ವೀಕರಿಸದೆ ಪ್ರಪಂಚದ ಮಾನವಕೋಟಿಯ ಸುಖಶಾಂತಿಗಾಗಿರುವ ದೆಂದು ನಮ್ಮ ಇಡೀ ಹಿಂದುಸ್ಥಾನವೇ ಅದರ ತತ್ವಗಳನ್ನು ಮಾನ್ಯಮಾಡಿರುವದು. ಹಲಕೆಲವು ತಜ್ಞರು ಈ ಶಿಕ್ಷಣಕ್ಕೆ ಆಕ್ಷೇಪಿಸಿದ್ದೂ ಉಂಟು. ಆದರೆ ಅವರು ಆಕ್ಷೇಪಿಸಿದ್ದು ಹಲಕೆಲವು ಕಾರ್ಯ ಕ್ಷೇತ್ರದಲ್ಲಿ ಉಂಟಾದ ಕುಂದು ಕೊರತೆಗಳನ್ನು ಕಂಡುದದರಿಂದ ಹೊರತು ಜೀವನ ಶಿಕ್ಷಣ ತತ್ವಕ್ಕಲ್ಲವೆಂದೆನಿಸುವದು. ಎರಡನೆಯದಾಗಿ ಜೀವನಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರು ಅದರ ನಿಜವಾದ ಸ್ವರೂಪ ಮತ್ತು ಮಹತ್ವಗಳ ಬಗೆಗೆ ಸರಿಯಾದ ಕಲ್ಪನೆಯನ್ನು ಜನಸಾಮಾನ್ಯರಿಗೆ ಮಾಡಿಕೊಟ್ಟಿರುವದಿಲ್ಲವೆಂದೇ ಜೀವನ ಶಿಕ್ಷಣವು ಅವರ ಬಲವಾದ ಟೀಕೆಗೆ ಗುರಿಯಾಗಿದೆ ಎಂದೂ ಭಾವಿಸಬಹುದು. ಆದ್ದರಿಂದ ಈ ಕ್ರಾಂತಿ ಸ್ವರೂಪದಲ್ಲಿದ್ದ ಜೀವನ ಶಿಕ್ಷಣದ ಬಗೆಗೆ ಸರಿಯಾದ ಕಲ್ಪನೆಯನ್ನು ಜನಸಾಮಾನ್ಯರಿಗೆ ಯೋಗ್ಯ ರೀತಿಯಲ್ಲಿ ತಿಳಿಸಿಕೊಡುವದು ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವವರ ಮುಖ್ಯ ಕರ್ತವ್ಯ ಗಳಲ್ಲಿ ಒಂದಾಗಿದೆ ಎನ್ನಬಹುದು. ಅದೊಂದನ್ನು ಮಾಡಿ ದರೆ ಜೀವನ ಶಿಕ್ಷಣದ ನಿಜವಾದ ಲಾಭವು ನಮ್ಮ ದೇಶದ ಎಲ್ಲ ಭಾಗಗಳಿಗೆ ತಟ್ಟಿ ಗಾಂಧೀಜಿಯವರು ತರ್ಕಿಸಿದ ಹೊಸ ಸಮಾಜ ನಿರ್ಮಾಣವಾಗುವದೆಂಬುದರಲ್ಲಿ ಸಂದೇಹವಿಲ್ಲ.

— ಓಂ. ತತ್ ಸತ್ —

ಪತ್ರಗಳು

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಕನ್ನಡ ಟ್ರೇನಿಂಗ ಕಾಲೇಜದ ಶತಾಬ್ಧಿ ಸಮಾ ರಂಭ ಸಮಿತಿ ಅವರಿಗೆ—

ವೀರಪ್ಪ ಅಂದಾನಪ್ಪ ಸಂಶಿ, ಪೆ.ಮಾಸ್ತರ, ಪ್ರ್ಯಾ. ಸ್ಕೂಲ ನಂ. ಮ. ಟ್ರೇನಿಂಗ ಕಾಲೇಜ ಧಾರವಾಡ. ನಾನು ಬರೆದುಕೊಳ್ಳುವದೇನಂದರೆ—

ತಾವು ನಡೆಯಿಸುವ ಸಮಾರಂಭದ ಕಾಲಕ್ಕೆ ನನ್ನ ಬಹು ದಿನದ ಬಯಕೆಯನ್ನು ಈಡೇರಿಸಿಕೊಡಬೇಕೆಂದು ಕೋರುತ್ತೇನೆ.—

ಮಹನೀಯರೇ, ಸರ್ವರ ಮಕ್ಕಳೂ ಚೆನ್ನಾಗಿ ಓದಿ ಮುಂದೊರೆಯಬೇಕೆಂಬ ಹಂಬಲ ನನಗೆ. ಅದರಲ್ಲಿಯೂ ನಮ್ಮಂಥ ಬಡ ಶಿಕ್ಷಕ-ಶಿಕ್ಷಿಕೆಯರ ಮಕ್ಕಳು ಹೇಗೆ ಮುಂದೆ ಬಂದಾರು ? ಎಂಬ ಚಿಂತೆ. ಈ ಚಿಂತೆಯು ಗ್ಹಳಂಸೆಯ ಸಾಲಿನಿಂದ ನನ್ನ ಮನದಲ್ಲಿ ಕಟೆಯುತ್ತ, ಮಿಟೆಯುತ್ತ ಬಂದಿತು. ಆದರೆ ಈಗ ಆ ಚಿಂತೆಯು ದೂರಾಗುವ ಲಕ್ಷಣಗಳು ದೂರೇ ಇವೆಯೆಂದು ನನಗೆ ಅನಿಸಿದ್ದರಿಂದ; "ಅಳಿಲು ಸೇವೆ ಮಳಲು ಕಣ" ಎಂಬಂತೆ ಸೇವೆ ಸಲ್ಲಿಸಬೇಕೆಂದು ನಿಶ್ಚಯಿಸಿದ್ದೇನೆ.—ಈ ಜಿಲ್ಹೆಯ ಕನ್ನಡ ಶಿಕ್ಷಕ ಶಿಕ್ಷಿಕೆಯರ ಮಕ್ಕಳು ಒನೆಯ ಇಯತ್ತೆ (ಹಾಯ್‌ಸ್ಕೂಲ) ಸ್ಕಾಲರ ಪರೀಕ್ಷೆಯಲ್ಲಿ ಮೇಲ್ತರಗತಿ ಯಲ್ಲಿ ಪಾಸಾದವರಿಗೆ (ಒಂದೇ ವರ್ಷದ ಮಟ್ಟಿಗೆ) ಇಪ್ಪ ತ್ತೈದು ರೂಪಾಯಿಗಳಂತೆ ಇನಾಮು ಹಣ ಕೊಡಬೇಕು. ಇದೇ ಪ್ರಕಾರ ಪ್ರತಿವರ್ಷವೂ ನನ್ನ ಜೀವಮಾನದ

ವರೆಗೂ ಇನಾಮು ಹಣ ಕೊಡುತ್ತ ಹೋಗಬೇಕೆಂದು ನಿಶ್ಚಯಿಸಿದ್ದೇನೆ. ಮತ್ತು ೧೯೫೮/೫೯ ನೆಯ ಸಾಲಿನ ಇನಾಮು ಹಣ ಇಪ್ಪತ್ತೈದು ರೂಪಾಯಿಗಳನ್ನು ಪರಮ ಪೂಜ್ಯ ಶ್ರೀ ಮ. ನಿ. ಪ್ರ. ಸ್ವ. ಬಂಥನಾಳ ಶಿವಯೋಗಿಗಳ ಆಶೀರ್ವಾದವು ಇದಕ್ಕೆ ದೊರೆಯಲೆಂದು ಇಚ್ಛಿಸಿ, ಮಹಾಸ್ವಾಮಿಯವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಮತ್ತು ಮುಂದಿನ ಸಾಲುಗಳ ಇನಾಮು ಹಣವನ್ನು ಹಂಚುವ ಕಾರ್ಯವನ್ನು ಸರಕಾರಿ ಗಂ. ಮ. ಟ್ರೇ. ಕಾಲೇಜದ ಪ್ರಿನ್ಸಿಪಾಲ ಸಾಹೇಬರು ನೋಡಿಕೊಳ್ಳಲು ಅವರಿಗೆ ವಿಜ್ಞಾಪಿಸಿಕೊಳ್ಳುತ್ತೇನೆ.

ನನ್ನ ಇಚ್ಛೆಯನ್ನು ಪೂರೈಸಿಕೊಟ್ಟು ಶ್ರೇಯೋಭಾಗಿಗಳಾಗಬೇಕೆಂದು ಸಮಿತಿಯವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ತಮ್ಮ ವಿಶ್ವಾಸಿ.
ವೀರಪ್ಪ ಅಂದಾನಪ್ಪ ಸಂಶಿ.
ಪೆ. ಮಾಸ್ತರ, ಮನೋಹರ ನಿವಾಸ, ಸಪ್ತಾಪೂರ
ಧಾರವಾಡ

x x x x

ಅಧ್ಯಕ್ಷ ಮಹಾಶಯರೇ, ಟ್ರೇನಿಂಗ ಕಾಲೇಜದ ಶತಮಾನೋತ್ಸವ ಸಮಿತಿಯ ಸಂಚಾಲಕರೇ, ಪ್ರಿನ್ಸಿಪಾಲರೇ,

ನನಗೂ ಈ ಟ್ರೇನಿಂಗ ಕಾಲೇಜಕ್ಕೂ ಇರುವ ಸಂಬಂಧವು ತುಂಬ ದೀರ್ಘ ಕಾಲಾವಧಿಯದು. ಸನ್ ೧೯೧೦ ನೆಯ ಇಸ್ವಿಯ ಡಿಸೆಂಬರದಿಂದ ೧೯೪೩ ನೆಯ ಡಿಶೆಂಬರ ತಿಂಗಳ ಕೊನೆಯವರೆಗೂ ನಾನು ಟ್ರೇನಿಂಗ ಸಂಸ್ಥೆಯಲ್ಲಿಯೇ ಕೆಲಸ ಮಾಡಿ ಬೆಳೆದು ಬಾಳಿದ್ದೇನೆ. ನಾನು ೧೯೦೭ ರಿಂದ ೧೯೧೦ ರ ವರೆಗೆ ಈ ಕಾಲೇಜದಲ್ಲಿ ವಿದ್ಯಾರ್ಥಿಯಾಗಿದ್ದೆನು. ೧೯೩೩ ರಿಂದ ಸುಮಾರು ೩೦ ವರುಷಗಳ ಕಾಲದಲ್ಲಂತೂ ನಾನು ಈ ಕಾಲೇಜದ ಆವಾರದಲ್ಲಿಯೇ ವಾಸಮಾಡಿಕೊಂಡು ಕೆಲಸ ಮಾಡುತ್ತಿದ್ದೆನು. ಈ ಅವಧಿಯಲ್ಲಿ ನಾನು ಪ್ರ್ಯಾಕ್ಟಿಸಿಂಗ್ ಸ್ಕೂಲಿನ ಮುಖ್ಯಾಧ್ಯಾಪಕನಾಗಿದ್ದೆನು. ಇಷ್ಟು ಕಾಲಾವಧಿಯ ಸಾನ್ನಿಧ್ಯದ ಮೂಲಕ ಈ ನನ್ನ ಮಾತೃಸ್ಥಾನದ ಬಗೆಗೆ ನನ್ನಲ್ಲಿ ಇನ್ನಿಲ್ಲದಷ್ಟು ಆದರ-ಭಕ್ತಿ–ವಿಶ್ವಾಸಗಳು ಒಡಮೂಡಿವೆ. ಮೇಲಾಗಿ ಆ ಮಾತೃದೇವತೆಯ ಆಶೀರ್ವಾದ ಬಲದಿಂದಲೇ ನಾನು ಸೇವಾ ನಿವೃತ್ತನಾಗಿ ಹದಿನೈದು ವರುಷಗಳು ಕಳೆದರೂ ಬಾಳಿ ಬದುಕಿರುವ ಮತ್ತು ಆ ಮಾತೆಯ ಶತಮಾನೋತ್ಸವವನ್ನು ಕಾಣುವ ಸುಯೋಗವು ನನಗೆ ಲಭಿಸಿದೆ. ಇಂಥ ಸುಸಂಧಿಯಲ್ಲಿ ನಾನು ಆ ಮಾತೃದೇವತೆಯ ಋಣ ಭಾರವನ್ನು ತೀರ ಸಣ್ಣ ಪ್ರಮಾಣದಲ್ಲಾದರೂ ಕಳೆದುಕೊಳ್ಳಲು ಹವಣಿಸುವದು ನನ್ನ ಕರ್ತವ್ಯವಾಗಿದೆ. ನಾನು ಈ ಸಂಸ್ಥೆಯಲ್ಲಿ ಮಾಡಿದ ಎಲ್ಲ ಕೆಲಸಗಳಲ್ಲಿ ಶಿಕ್ಷಕ ವಿದ್ಯಾರ್ಥಿಗಳಿಗೆ ಪ್ರತ್ಯಕ್ಷ ಪಾಠ ಕಲಿಸುವ ವಿಷಯದಲ್ಲಿ ಮಾರ್ಗದರ್ಶನ ಮಾಡುವದು ಪ್ರಾಮುಖ್ಯವಾಗಿದ್ದಿತು. ಈ ಎಲ್ಲ ಸಂಗತಿಗಳನ್ನು ಮನದಂದು ನಾನು ಈ ಕೆಳಗಿನ ಯೋಜನೆಯೊಂದನ್ನು ತಮ್ಮ ಮುಂದಿಟ್ಟಿರುತ್ತೇನೆ.

"ಪ್ರತಿವರ್ಷ ನಡೆಯುವ ಈ ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯಲ್ಲಿ ಪ್ರತ್ಯಕ್ಷ ಪಾಠ ಕಲಿಸುವ ವಿಷಯದಲ್ಲಿ ಎಲ್ಲರಲ್ಲಿ ಹೆಚ್ಚು ಗುಣಗಳನ್ನು ಪಡೆದು ಪಾಸಾದ ವಿದ್ಯಾರ್ಥಿ ಶಿಕ್ಷಕನಿಗೆ ೨೫ ರೂಪಾಯಿಗಳ ಬಹುಮಾನವನ್ನು ಕೊಡುವೆನು. ಪರೀಕ್ಷೆಯ ಪರಿಣಾಮವು ಪ್ರಕಟವಾದ ಕೂಡಲೇ ನನಗೆ ಅದನ್ನು ತಿಳಿಸಿದರೆ ನಾನು ಆ ಇಪ್ಪತ್ತೈದು ರೂಪಾಯಿಗಳನ್ನು ಪ್ರಿನ್ಸಿಪಾಲರಿಗೆ ಕಳಿಸಿಕೊಡುವೆನು. ೧೯೫೮ ನೆಯ ಇಸ್ವಿಯ ಪರೀಕ್ಷೆಯಿಂದ ಈ ಬಹುಮಾನವು ಪ್ರಾರಂಭವಾಗಿ ನನ್ನ ಜೀವಮಾನದ ವರೆಗೂ ನಡೆದು ಬರುವದು. ಇದನ್ನು ಶ್ರೀ ಕುರಡಿ ನಾರಾಯಣರಾಯರ ಪಾರಿತೋಷಿಕವೆಂದು ಕರೆಯಬೇಕು.

ಕಾಲೇಜದ ಶತಮಾನೋತ್ಸವದ ಸ್ಮಾರಕವೆಂದು ನಾನು ಕೊಡುವ ಈ ಅಲ್ಪ ಕೊಡುಗೆಯನ್ನು ಸ್ವೀಕರಿಸಿ ಮುಂದಿನ ವ್ಯವಸ್ಥೆಯನ್ನು ಕೈಕೊಳ್ಳಬೇಕೆಂದು ತಮ್ಮನ್ನು ಪ್ರಾರ್ಥಿಸುವೆನು.

ಎನ್. ವ್ಹಿ. ಕುರಡಿ

x x x x

— ೪ ನೆಯ ಪುಟಕ್ಕೆ

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ರ್ವ ಸಂಧಿ ! ಸಚಿತ್ರ ಗ್ರಂಥ !! ಸುಂದರ ಮುದ್ರಣ !!!

" ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮನ ಸಂಥ, **ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ, ಅಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿದ್ಯಾಲಯದ ಉಪ ಕುಲಪತಿಗಳಾದ ರ್‍ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂಥ,** ಶ್ರೇಷ್ಠ **ಗ್ರಂಥ.**

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯರ ಬಣ್ಣಗಳಲ್ಲಿ ೪೧ **ಫೋಟೊ ಬ್ಲಾಕ್,** ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರಂಥ. ದಲ್ಲಿ **ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಆಗಸ್ಟ ೫೭ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯಕ್ಷತೆ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿವೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ ಪ್ರೋತ್ಸಾಹಿಸಿ ಕೊಡಿರಿ.

ಪ್ರತಿ ೩ ರೂ.] **ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಶನ್.** [**ಸುಂದರ ಪ್ರತಿ ೪ ರೂ**

ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಿಕೋಟಾ, ಜಿಲ್ಲಾ :— ವಿಜಾಪುರ.

ಸುಬೋಧ ಹಿಂದೀ ಕನ್ನಡ ವ್ಯಾಕರಣ

ಇದನ್ನು ಬರೆದವರು ಹಿಂದೀ ಕ್ಷೇತ್ರದಲ್ಲಿ ಹೆಸರು ಪಡೆದ **ಶ್ರೀ ಗುರನಾಥ ಜೋಶಿ** ಅವರು. ತಮ್ಮ ಆಳವಾದ ನದಿಂದ ಅಲ್ಲಲ್ಲಿ ಕನ್ನಡ ವ್ಯಾಕರಣಕ್ಕೆ ಹೋಲಿಸಿ ಸುಲಭ ಭಾಷೆಯಲ್ಲಿ ಸರ್ವರಿಗೂ ತಿಳಿಯುವಂತೆ ಬರೆದಿದ್ದಾರೆ ಕೇವಲ ವ್ಯಾಕರಣದ ನಿಯಮಗಳು ಇರದೆ ಹಿಂದೀಯಿಂದ ಕನ್ನಡಕ್ಕೂ ಕನ್ನಡದಿಂದ ಹಿಂದಿಗೂ ಂತರ ಮಾಡುವದಕ್ಕೆ ವಾಕ್ಯಗಳೂ ಕೊಡಲ್ಪಟ್ಟಿವೆ. ಇದರಿಂದ ಕಲಿಯಬಯಸುವವರೆಲ್ಲರೂ ಸುಲಭವಾಗಿ ಯನ್ನೂ ಕಲಿಯಬಹುದಾಗಿದೆ. ಈ ಪುಸ್ತಕವನ್ನು ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ, **ಪ್ರಿನ್ಸಿಪಾಲ ಗೋಕಾಕ ಅವರು ಸ್ವಾಗತಿಸಿದ್ದಾರೆ.** ಇಂದೇ ಇದನ್ನು ತರಿಸಿಕೊಂಡು ಹಿಂದೀಯನ್ನು ಕಲಿಯಿರಿ ನೂರಾ ಹನ್ನೆರಡು ಪುಟಗಳು! ಬೆಲೆ ಕೇವಲ ೧೪ ಆಣೆ. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ನು !

ಕೆಳಗಿನ ಪತ್ತೆಗೆ ಬರೆಯಿರಿ.

ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ.

Regd. No. B. 53'

ಶ್ರೀ ಅರವಿಂದ ಪ್ರಭಾವಿತೆಯೂ ಶ್ರೀ ತಾಯಿಯವರ ಪ್ರಾಸಾದಿಕತೆಯೂ ಒಂದೆಡೆಗೆ ತೋರುವ ಪವಿತ್ರ ಸಾಹಿತ್ಯದಿಂದ

ವಾಚನಾಲಯದ ಬೆಲೆ ಹೆಚ್ಚಿಸಬೇಕಿವೇ ?

ಹಾಗಿದ್ದರೆ, ಕೆಳಗೆ ಕಾಣಿಸಿದ ಪುಸ್ತಕಗಳನ್ನು ತರಿಸಿಕೊಳ್ಳಿರಿ.

೧.	ನನ್ನನಲ್ಲ (ಅಂತರ್ಮುಖಗೊಳಿಸುವ ದಿ. ಮಧುರಚೆನ್ನರ ಸಮಗ್ರ ಕವನ ಸಂಗ್ರಹ	....	೧-೧೨
೨.	ಆತ್ಮಸಂಶೋಧನ (ದಿ. ಮಧುರಚೆನ್ನರ ಜೀವನದ ಕಲಶಪ್ರಾಯದ ಪ್ರಾಂಜಲ ಸಾಹಿತ್ಯ)	....	೧-೨
೩.	ಪವಿತ್ರ ಜೀವನ (ಹೊಸಕಾಲದ ಋಷಿ ಟಾಲಸ್ಟಾಯರ ಕಥಾಸಂಕಲನ)	....	೧-೨
೪.	ಸುಂದರ ಕಥೆಗಳು (ಮಕ್ಕಳಿಗೂ ಮಕ್ಕಳಂಥವರಿಗೂ ಶ್ರೀ ತಾಯಿಯವರು ಹೇಳಿದುವು)	....	೧-೪
೫.	ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ)	....	೧-೮
೬.	ಶ್ರೀ ಅರವಿಂದರ ಪತ್ರಗಳು (ಪೂರ್ಣಜೀವನದ ಸಿರಿಮೊಳಕೆ)		೦-೨
೭.	ಸ್ವರ್ಗದೋಲೆಗಳು (ಕನ್ನಡಿಗರ ಕೈಗೆ ಬಂದ ಸಾಂಸ್ಕೃತಿಕ ಕನ್ನಡಿ)	....	೧-೮
೮.	ಮುಗಿಲ ಜೇನು (ಮಿಂಚಿನ ಶಲಾಖೆಯಂಥ ಕವನ ಸಂಕಲನ)	....	೧-೮
೯.	ಸಪ್ತಪದಿ (ವಿದ್ಯಾರ್ಥಿಗಳ ಮೆಚ್ಚುಗೆಯ ಏಕಾಂಕಗಳು)	....	೧-೪
೧೦.	ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ)	....	೧-೦
೧೧.	ಬೆಟ್ಟದ ಹೊಳೆ (ಜೀವನ ಪ್ರಚೋದಕವಾದ ಕಾದಂಬರಿ)	....	೧-೮
೧೨.	ಗರತಿಯ ಬಾಳು (ಹೆಣ್ಣಿನ ಮಾಯೆಯಲ್ಲಿ ಕಪಿಲ ಸಿದ್ಧಮಲ್ಲಿಕಾರ್ಜುನ)	....	೧-೪
೧೩.	ಬಾಳಬಟ್ಟೆ (ಆಧುನಿಕ ಬಾಳಿನ ಒಂಡಾಟಕ್ಕೆ ಚಿಕಿತ್ಸೆ)	....	೧-೮
೧೪.	ಪೂಜಾ (ಅತೀಂದ್ರಿಯ ಜಾಗ್ರತಿಯ ಮಿಸುಕು)	....	೦-೧೨
೧೫.	ಜೀವನ ದೃಷ್ಟಿ (ಭವ್ಯ ಬದುಕಿನ ಬೊಕ್ಕಸ)	....	೧-೨
೧೬.	ಕನ್ನಡ ಕುಲದೀಪ ಬಸವಣ್ಣ (ಹಿಡಿದರೆ ಹಿಡಿಕೆಯಲ್ಲಿ ಬಿಟ್ಟರೆ ಮನೆತುಂಬ)	....	೧-೦

ಕನ್ನಡದಲ್ಲಿ ಶ್ರೀ ಅರವಿಂದರ ಸಾಹಿತ್ಯ ಬೇಕಾದರೆ ಬರೆಯಿರಿ. ಮೇಲೆ ಕಾಣಿಸಿದ ಪುಸ್ತಕಗಳನ್ನೆಲ್ಲ ತರಿಸಿಕೊಂಡಲ್ಲಿ ಅಂಚೆ ನಾವೇ ವಹಿಸುವೆವು.

ಶ್ರೀ ಅರವಿಂದ ಗ್ರಂಥಾಲಯ ಪ್ರೋ:— **ಚಡಚಣ** ಜಿ. ವಿಜಾ

ಶ್ರೀ ಶಂಗು ಬಿರಾದಾರರ **ನೌಕರಿಯ ಹುಚ್ಚು** ಬಹುವಿನೂತನ ಏಕಾಂಕ ನಾಟಕ ಬೆಲೆ : ೩೫ ನ. ಪೈ.

ಮಾಲೆಯ **೭ನೇ, ೩ನೇ ಕುಸುಮಗಳು**

ಶ್ರೀ ಪಿ. ಎಸ್. ಗಣಪಯ್ಯನವರ **ಚೌತಿ ಗಣಪ** ಮಕ್ಕಳ ಸಚಿತ್ರ ಕವಿತೆಗಳು, ಬೆಲೆ : ೩೫ ನ. ಪೈ.

- ಕೇವಲ ೭-೮-೦ (ಅಂಚೆ ಸೇರಿ) ವಾರ್ಷಿಕ ಚಂದಾಹಣದಲ್ಲಿ ಮಾಲೆಯ ೫ನೆಯ ಕುಸುಮವನ್ನಾಗಿ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ನಾಲ್ಕೈದು ಕೃತಿಗಳು ೪೦೦ ಪುಟಗಳಲ್ಲಿ.
- ಎಪ್ರಿಲದಿಂದ ಎಪ್ರಿಲಕ್ಕೆ ಒಂದು ವರುಷ.
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಶ್ರೇಷ್ಠ ಸಾಹಿತಿಗಳ ಕೃತಿಗಳನ್ನು ಪ್ರಕಟಿಸಿ ಚಂದಾದಾರರಿಗೆ ಕ್ಷಿ ಬೆಲೆಯಲ್ಲಿ ಕೊಡಲಾಗುವದು. (ಅಂಚೆ ಬೇರೆ)
- ಶಿಕ್ಷಕರಿಗೆ ವಿಶೇಷ ಸವಲತ್ತುಗಳಿವೆ. ಕೂಡಲೇ ಚಂದಾದಾರರಾಗಿ ತಮ್ಮದೇ ಆದ ಶಿಕ್ಷಕರ ಸಂಸ್ಥೆಯು ಚಿರಸ್ಥಾಯಿಯಾಗಿ ನಿಲ್ಲುವಂತೆ ನೆರವು ನೀಡಿರಿ. ಈ ಅತ್ಯಲ್ಪಹಣ ತಮ್ಮ ಶಿಕ್ಷಕ ಮಿತ್ರರ ಏಳ್ಗೆಗೆ ಮೀಸಲಾಗಿದೆ.

★ ಮುಂಬಯಿ ರಾಜ್ಯದ ಶಿಕ್ಷಣಾಧಿಕಾರಿಗಳಿಂದ ಶಾಲಾವಾಚನಾಲಯಗಳಿಗೆ ಮಂಜೂರಾದ ೩೦೦ ಜನ ಶ್ರೇಷ್ಠ ಸಾಹಿತಿ ವಿವಿಧ ಕೃತಿ, ಪರಿಚಯಗಳನ್ನೊಳಗೊಂಡ 'ಆಣೆಕಲ್ಲು' 'ಪುಟಚೆಂಡು' ಕಥೆ, ಕ ನಗಳ ಪುಸ್ತಕಗಳು ನಿಮ್ಮಲ್ಲಿವೆ ಕೆಲವೇ ಪ್ರತಿ ಉಳಿದಿವೆ. ಈಗಲೇ ತರಿಸಿಕೊಳ್ಳಿರಿ ಚಂದಾದಾರರಿಗೆ ಮಾತ್ರ ಕ್ಷಿ ಬೆಲೆ (ಅಂಚೆ ಬೇರೆ) ಬೆಲೆ ೧೨ ಆಣೆಯ

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

Printed by Shri S. F. Kattimani, at Manohar Power Printing Press, Hubli. Edited a Published by Sjts. S. P. Patil, B. M. Shintri, S. R. Tatti & Smti. P. A. Bhaskar, at the Kanna Jeevan Shikshan Office, Govt. Training College for Men, Dharwar.

ಜೀವನ ಶಿಕ್ಷಣ

ಪ್ರಧಾನ ಸಂಪಾದಕರು: ಶ್ರೀ ಎಸ್. ಪಿ. ಪಾಟೀಲ



ಟ್ರೇನಿಂಗ ಕಾಲೇಜದ ಕಟ್ಟಡ

ಪ್ರತಿ ೬ ಅಣೆ ಮೇ ೧೯೫೮ ವಾ. ಚಂ. ೪ ರೂ.

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಜಿ. ಕೆ. ಕೊಪ್ಪಿಕರ, ಬಿ.ಎ.(ಆನರ್ಸ), ಬಿ.ಎಸ್‌ಸಿ., ಎಮ್.ಇಡಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ, ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ, ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗದ (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೩ ಮೇ, ೧೯೫೮ ಸಂಚಿಕೆ ೧೨

— ಪರಿವಿಡಿ —

೧	ಸಂಪಾದಕೀಯ	....	೧
೨	ಜೀವನ ಶಿಕ್ಷಣ	ಶ್ರೀ ಮಾನೇಶ್ವರ ನಾಯಕ	೨
೩	ನೂಲುವ ನೇಯುವ ಮಾರೋದ್ಯೋಗವನ್ನು ಯಶಸ್ವಿಯಾಗಿ ಸಾಗಿಸುವ ವಿಧಾನಗಳು	ಶ್ರೀ ಎಸ್. ಬಿ. ಹಳಕಟ್ಟಿ	೫
೪	ಜೀವನ ಶಿಕ್ಷಣವೂ ಪ್ರದರ್ಶನಗಳೂ	ಶ್ರೀಮತಿ ರುಕ್ಮಿಣಮ್ಮಾ	೯
೫	ಶಿಕ್ಷಕನ ಆಯುಧಗಳು	ಶ್ರೀ ಶ್ರೀರಾಮ ಪಾಟೀಲ	೧೧
೬	ಹಾವೇರಿ ತಾಲೂಕ ಪ್ರಾ. ಶಿಕ್ಷಕ-ಶಿಕ್ಷಿಕೆಯರ ಶೈಕ್ಷಣಿಕ ಪರಿಷತ್ತು—ಸ್ವಾಗತ ಭಾಷಣ	ಶ್ರೀ ಸಿ. ಕೆ. ಕುಲಕರ್ಣಿ	೧೩
೭	ಅಧ್ಯಕ್ಷೀಯ ಭಾಷಣ	ಶ್ರೀ ಎಸ್. ವ್ಹಿ. ಜೇವೂರ	೧೭
೮	ಪ್ರಾಥಮಿಕ ಶಿಕ್ಷಣದ ಮಟ್ಟ ಕಡಿಮೆಯಾಗಿದೆಯೇ?	ಶ್ರೀ ಜಿ. ಕೆ. ಕೊಪ್ಪಿಕರ	೧೭
೯	ಇಂದಿನ ಪರೀಕ್ಷಾ ಪದ್ಧತಿಯಲ್ಲಿ ಆಗಬೇಕಾದ ಸುಧಾರಣೆಗಳು	ಶ್ರೀ ಆರ್. ಎಸ್. ಕರಡಿ	೨೨
೧೦	ವೃಷಭ ಶಿಲಾಮೂರ್ತಿಗಳು	ಡಾ. ಬಿ. ಎಸ್. ಗದ್ದಗಿಮಠ	೨೫
೧೧	ಮೂಲ ಶಿಕ್ಷಣದ ಅರಿವು	ಶ್ರೀ ಶಿಂತ್ರಿ ಬಸಪ್ಪನವರು	೨೮

ಸಂಪಾದಕೀಯ

ಶತಮಾನೋತ್ಸವಕ್ಕೆ ಕೂಡಿದ ಹಣದ ಬಳಕೆ:

ಶತಾಬ್ದಿ ಸಮಾರಂಭದ ಕೊನೆಗೆ ಸಮಿತಿಯ ಪರವಾಗಿ ಅಲ್ಲಿಯವರೆಗೆ ಕೂಡಿದ ಹಣ ಹಾಗೂ ಖರ್ಚಿನ ಬಗೆಗೆ ಸಂಕ್ಷಿಪ್ತ ವರದಿಯನ್ನು ಬಹಿರಂಗ ಅಧಿವೇಶನದಲ್ಲಿ ಮಂಡಿಸಿ, ಕೆಲವು ದಿನಗಳಲ್ಲಿಯೇ ಸಂಪೂರ್ಣ ವಿವರಗಳನ್ನು ಪ್ರಸಿದ್ಧಿಸಲಾಗುವವೆಂದು ತಿಳಿಸಿತ್ತು, ಆದರೆ ನಿಧಿ ಸಂಗ್ರಹಿಸಿದವರಿಂದ ಪಾವತಿ ಪುಸ್ತಗಳು ಸಕಾಲದಲ್ಲಿ ಬರಲಿಲ್ಲವಾದ್ದರಿಂದ ಹೆಚ್ಚಿನ ವಿವರಗಳ ಪ್ರಕಟನೆಯನ್ನು ಮುಂದೂಡಬೇಕಾಯಿತು. ಕೆಲವರಿಂದ ಒಂದೆರಡು ಪಾವತಿ ಪುಸ್ತಕಗಳು ಇನ್ನೂ ಬರಬೇಕಾಗಿವೆ. ಮತ್ತು ಮೈಸೂರ ಸರಕಾರದಿಂದ ಬರಬೇಕೆಂದು ಅಪೇಕ್ಷಿಸಿದ ಧನ ಸಹಾಯವು ಕೂಡ ಬರಲಿಲ್ಲ. ಹೊರಗಿರುವ ಪಾವತಿ ಪುಸ್ತಕಗಳು ಮತ್ತು ಸರಕಾರದ ಧನ ಸಹಾಯವು ನಮ್ಮ ಕೈಸೇರಲು ಇನ್ನೆಷ್ಟು ಕಾಲಬೇಕೆಂಬುದು ತಿಳಿಯದಾಗಿದ್ದರಿಂದ ಉಪಲಬ್ಧವಿರುವ ಎಲ್ಲ ವಿವರಗಳನ್ನು ಪ್ರಕಟಿಸ ಬಯಸುತ್ತೇವೆ. ಮೊಟ್ಟ ಮೊದಲು ಇಲ್ಲಿ ಒಂದು ಮಾತನ್ನು ಸಂತೋಷದಿಂದಲೂ ಅಭಿಮಾನಪೂರ್ವಕವಾಗಿಯೂ ಹೇಳಬೇಕಾಗುತ್ತದೆ. ನಿಧಿ ಸಂಗ್ರಹದ ಕಾರ್ಯದಲ್ಲಿಯೂ ಸಮಾರಂಭದ ಸಂಘಟನೆಯಲ್ಲಿಯೂ ಶಿಕ್ಷಕರೂ ಶಿಕ್ಷಣಾಭಿಮಾನಿಗಳೂ ತೋರಿಸಿದ ಆಸ್ಥೆ, ಅಭಿಮಾನ, ಅವರು ನೀಡಿದ ಸಹಾಯ ಸಹಕಾರಗಳ ಬಗೆಗೆ ಅವರೆಲ್ಲರ ಉಪಕಾರವನ್ನು ಸ್ಮರಿಸಿದಷ್ಟು ಕಡಿಮೆ. ಶತಮಾನೋತ್ಸವಕ್ಕೆ ಹತ್ತಬಹುದಾದ ಖರ್ಚಿನ ಅಂದಾಜನ್ನು ಕೆಳಗಿನಂತೆ ಮಾಡಿ ನಮ್ಮ ಸಮಿತಿಯವರು ಸಾರ್ವಜನಿಕರಿಂದ ನಿಧಿ ಸಹಾಯವನ್ನು ಕೇಳಿದ್ದರು.

೧.	ಸ್ಮಾರಕ ಸಂಪುಟದ ಪ್ರಕಟನೆ	೨೦೦೦ ರೂ.
೨.	ಭಾವಚಿತ್ರಗಳ ಅನಾವರಣ	೫೦೦ ರೂ.
೩.	ಸ್ಮಾರಕ ಶಿಲಾ ಸ್ಥಾಪನೆ	೫೦೦ ರೂ.
೪.	ಜೀವನ ಶಿಕ್ಷಣ ಪ್ರದರ್ಶನ	೫೦೦ ರೂ.
೫.	ಮಂಟಪದ ರಚನೆ	೮೦೦ ರೂ.
೬.	ಪಾರಿತೋಷಿಕಗಳ ವಿತರಣೆ	೨೫೦ ರೂ.
೭.	ಪ್ರಾಥಮಿಕ ಶಿಕ್ಷಕರ ಮಕ್ಕಳ ಸಲುವಾಗಿ ಶತಾಬ್ದಿ ಸ್ಮಾರಕ ಪಾರಿತೋಷಿಕ ನಿಧಿ	೩,೦೦೦ ರೂ.
೮.	ಇತರ ಖರ್ಚು	೭೦೦ ರೂ.
	ಅಂತೂ	೮೨೫೦ ರೂ.

ಈ ಯೋಜನೆಯ ಪ್ರಕಾರ ಹತ್ತುವ ಖರ್ಚಿನ ಬಹುಭಾಗವನ್ನು ಶಿಕ್ಷಕರ ಹಾಗೂ ಶಿಕ್ಷಣಾಭಿಮಾನಿಗಳ ಧನ ಸಹಾಯದಿಂದಲೂ ಕನಿಷ್ಠಪಕ್ಷ ಒಂದು ಮೂರಂಶ ಭಾಗವನ್ನು ಸರಕಾರದ ಸಹಾಯದಿಂದಲೂ ನಿರ್ವಹಿಸಬೇಕೆಂಬದು ಸಮಿತಿಯವರ ನಿರ್ಧಾರವಾಗಿತ್ತು.

ಸುದೈವದಿಂದ ಸಾರ್ವಜನಿಕರಿಂದ ಧನ ಸಹಾಯವು ನಮ್ಮ ಅಪೇಕ್ಷೆಯನ್ನು ಮೀರಿ ಬಂದದ್ದರಿಂದ ನಮ್ಮ ಕೆಲಸದಲ್ಲಿ ಯಾವ ಅಡಚಣೆಯೂ ಬರಲಿಲ್ಲ. ಇಷ್ಟೇ ಅಲ್ಲದೆ ಸರಕಾರದಿಂದ ಬರಬೇಕಾದ ಧನ ಸಹಾಯವು ಇನ್ನೂ ಬರದಿದ್ದರೂ, ಸಮಿತಿಯವರು ಯೋಚಿಸಿದಂತೆ ಎಲ್ಲ ಕಾರ್ಯಗಳೂ ನಡೆದು ಈಗ ಸುಮಾರು ೩೪೭೮=೨೩ ರೂಪಾಯಿಗಳು ಉಳಿದಿವೆ. ಜಮಾಖರ್ಚಿನ ವಿವರಗಳು ಕೆಳಗಿನಂತಿವೆ.

ನಿಧಿ ಸಂಗ್ರಹದ ವಿವರಗಳು :—

೧.	ವಿಜಾಪೂರ ಜಿ.ಸ್ಕೂ.ಬೋ. ಶಿ.ರಿಂದ	೨,೧೪೯=೩೩
೨.	ಧಾರವಾಡ ,, ,, ,,	೧,೮೩೬=೯೦
೩.	ಬೆಳಗಾವಿ ,, ,, ,,	೫೧೯=೨೧
೪.	ಕಾರವಾರ ,, ,, ,,	೨೩೪=೩೧
೫.	ಹುಬ್ಬಳ್ಳಿ ಮ್ಯುನಿಸಿಪಲ್ ,,	೨೮೦=೦೦
೬.	ಗದಗ ,, ,, ,,	೨೫೩=೭೫
೭.	ಧಾರವಾಡ ,, ,, ,,	೨೨೨=೦೦
೮.	ಧಾರವಾಡ ನಾಗರಿಕರಿಂದ ,,	೧,೪೮೧=೮೨
		೬,೯೭೭=೩೨

ಖರ್ಚಿನ ವಿವರಗಳು:—

೧.	ತೈಲ ಚಿತ್ರಗಳು	೫೦೦=೦೦
೨.	ಸಂಗಮವರಿ ಶಿಲೆಗಳು	೨೨೫=೦೦
೩.	ಜೀವನ ಶಿಕ್ಷಣ ಹಾಗೂ ಸಮ್ಮೇಲನ	೨೫೦=೦೦

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಜಿ. ಕೆ. ಕೊಪ್ಪಿಕರ, ಬಿ.ಎ.(ಆನರ್ಸ), ಬಿ.ಎಸ್‌ಸಿ., ಎಮ್. ಇಡಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ, ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗದ (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೪೩ | ಮೇ, ೧೯೫೮ | ಸಂಚಿಕೆ ೧೨

— ಪರಿವಿಡಿ —

೧	ಸಂಪಾದಕೀಯ	....	೧
೨	ಜೀವನ ಶಿಕ್ಷಣ	ಶ್ರೀ ಮಾನೇಶ್ವರ ನಾಯಕ	೨
೩	ನೂಲುವ ನೇಯುವ ಮೂಲೋದ್ಯೋಗವನ್ನು ಯಶಸ್ವಿಯಾಗಿ ಸಾಗಿಸುವ ವಿಧಾನಗಳು	ಶ್ರೀ ಎಸ್. ಬಿ. ಹಳಕಟ್ಟಿ	೫
೪	ಜೀವನ ಶಿಕ್ಷಣವೂ ಪ್ರದರ್ಶನಗಳೂ	ಶ್ರೀಮತಿ ರುಕ್ಮಿಣಮ್ಮಾ	೯
೫	ಶಿಕ್ಷಕನ ಆಯುಧಗಳು	ಶ್ರೀ ಶ್ರೀರಾಮ ಪಾಟೀಲ	೧೧
೬	ಹಾವೇರಿ ತಾಲೂಕ ಪ್ರಾ. ಶಿಕ್ಷಕ-ಶಿಕ್ಷಿಕೆಯರ ಶೈಕ್ಷಣಿಕ ಪರಿಷತ್ತು—ಸ್ವಾಗತ ಭಾಷಣ	ಶ್ರೀ ಸಿ. ಕೆ. ಕುಲಕರ್ಣಿ	೧೩
೭	ಅಧ್ಯಕ್ಷೀಯ ಭಾಷಣ	ಶ್ರೀ ಎನ್. ವ್ಹಿ. ಜೇವೂರ	೧೭
೮	ಪ್ರಾಥಮಿಕ ಶಿಕ್ಷಣದ ಮಟ್ಟ ಕಡಿಮೆಯಾಗಿದೆಯೇ ?	ಶ್ರೀ ಜಿ. ಕೆ. ಕೊಪ್ಪಿಕರ	೧೭
೯	ಇಂದಿನ ಪರೀಕ್ಷಾ ಪದ್ಧತಿಯಲ್ಲಿ ಆಗಬೇಕಾದ ಸುಧಾರಣೆಗಳು	ಶ್ರೀ ಆರ್. ಎನ್. ಕರಡಿ	೨೨
೧೦	ವೃಷಭ ಶಿಲಾಮೂರ್ತಿಗಳು	ಡಾ. ಬಿ. ಎಸ್. ಗದ್ದಗಿಮಠ	೨೫
೧೧	ಮೂಲ ಶಿಕ್ಷಣದ ಅರಿವು	ಶ್ರೀ ಶಿಂತ್ರಿ ಬಸಪ್ಪನವರು	೨೮

ಸಂಪಾದಕೀಯ

ಶತಮಾನೋತ್ಸವಕ್ಕೆ ಕೂಡಿದ ಹಣದ ಬಳಕೆ:

ಶತಾಬ್ದಿ ಸಮಾರಂಭದ ಕೊನೆಗೆ ಸಮಿತಿಯ ಪರವಾಗಿ ಅಲ್ಲಿಯವರೆಗೆ ಕೂಡಿದ ಹಣ ಹಾಗೂ ಖರ್ಚಿನ ಬಗೆಗೆ ಸಂಕ್ಷಿಪ್ತ ವರದಿಯನ್ನು ಬಹಿರಂಗ ಅಧಿವೇಶನದಲ್ಲಿ ಮಂಡಿಸಿ, ಕೆಲವು ದಿನಗಳಲ್ಲಿಯೇ ಸಂಪೂರ್ಣ ವಿವರಗಳನ್ನು ಪ್ರಸಿದ್ಧಿಸಲಾಗುವದೆಂದು ತಿಳಿಸಿತ್ತು, ಆದರೆ ನಿಧಿ ಸಂಗ್ರಹಿಸಿದವರಿಂದ ಪಾವತಿ ಪುಸ್ತಗಳು ಸಕಾಲದಲ್ಲಿ ಬರಲಿಲ್ಲವಾದ್ದರಿಂದ ಹೆಚ್ಚಿನ ವಿವರಗಳ ಪ್ರಕಟನೆಯನ್ನು ಮುಂದೂಡಬೇಕಾಯಿತು. ಕೆಲವರಿಂದ ಒಂದೆರಡು ಪಾವತಿ ಪುಸ್ತಕಗಳು ಇನ್ನೂ ಬರಬೇಕಾಗಿವೆ. ಮತ್ತು ಮೈಸೂರ ಸರಕಾರದಿಂದ ಬರಬೇಕೆಂದು ಅಪೇಕ್ಷಿಸಿದ ಧನ ಸಹಾಯವು ಕೂಡ ಬರಲಿಲ್ಲ. ಹೊರಗಿರುವ ಪಾವತಿ ಪುಸ್ತಕಗಳು ಮತ್ತು ಸರಕಾರದ ಧನ ಸಹಾಯವು ನಮ್ಮ ಕೈಸೇರಲು ಇನ್ನೆಷ್ಟು ಕಾಲಬೇಕೆಂಬುದು ತಿಳಿಯದಾಗಿದ್ದರಿಂದ ಉಪಲಬ್ಧವಿರುವ ಎಲ್ಲ ವಿವರಗಳನ್ನು ಪ್ರಕಟಿಸ ಬಯಸುತ್ತೇವೆ. ಮೊಟ್ಟ ಮೊದಲು ಇಲ್ಲಿ ಒಂದು ಮಾತನ್ನು ಸಂತೋಷದಿಂದಲೂ ಅಭಿಮಾನಪೂರ್ವಕವಾಗಿಯೂ ಹೇಳಬೇಕಾಗುತ್ತದೆ. ನಿಧಿ ಸಂಗ್ರಹದ ಕಾರ್ಯದಲ್ಲಿಯೂ ಸಮಾರಂಭದ ಸಂಘಟನೆಯಲ್ಲಿಯೂ ಶಿಕ್ಷಕರೂ ಶಿಕ್ಷಣಾಭಿಮಾನಿಗಳೂ ತೋರಿಸಿದ ಆಸ್ಥೆ, ಅಭಿಮಾನ, ಅವರು ನೀಡಿದ ಸಹಾಯ ಸಹಕಾರಗಳ ಬಗೆಗೆ ಅವರೆಲ್ಲರ ಉಪಕಾರವನ್ನು ಸ್ಮರಿಸಿದಷ್ಟು ಕಡಿಮೆ. ಶತಮಾನೋತ್ಸವಕ್ಕೆ ಹತ್ತಬಹುದಾದ ಖರ್ಚಿನ ಅಂದಾಜನ್ನು ಕೆಳಗಿನಂತೆ ಮಾಡಿ ನಮ್ಮ ಸಮಿತಿಯವರು ಸಾರ್ವಜನಿಕರಿಂದ ನಿಧಿ ಸಹಾಯವನ್ನು ಕೇಳಿದ್ದರು.

೧. ಸ್ಮಾರಕ ಸಂಪುಟದ ಪ್ರಕಟನೆ	೨೦೦೦ ರೂ.
೨. ಭಾವಚಿತ್ರಗಳ ಅನಾವರಣ	೫೦೦ ರೂ.
೩. ಸ್ಮಾರಕ ಶಿಲಾ ಸ್ಥಾಪನೆ	೫೦೦ ರೂ.
೪. ಜೀವನ ಶಿಕ್ಷಣ ಪ್ರದರ್ಶನ	೫೦೦ ರೂ.
೫. ಮಂಟಪದ ರಚನೆ	೮೦೦ ರೂ.
೬. ಪಾರಿತೋಷಿಕಗಳ ವಿತರಣೆ	೨೫೦ ರೂ.
೭. ಪ್ರಾಥಮಿಕ ಶಿಕ್ಷಕರ ಮಕ್ಕಳ ಸಲುವಾಗಿ ಶತಾಬ್ದಿ ಸ್ಮಾರಕ ಪಾರಿತೋಷಿಕ ನಿಧಿ	೩೦೦೦ ರೂ.
೮. ಇತರ ಖರ್ಚು	೨೦೦ ರೂ.
ಅಂತೂ	೮೨೫೦ ರೂ.

ಈ ಯೋಜನೆಯ ಪ್ರಕಾರ ಹತ್ತುವ ಖರ್ಚಿನ ಬಹುಭಾಗವನ್ನು ಶಿಕ್ಷಕರ ಹಾಗೂ ಶಿಕ್ಷಣಾಭಿಮಾನಿಗಳ ಧನ ಸಹಾಯದಿಂದಲೂ ಕನಿಷ್ಠಪಕ್ಷ ಒಂದು ಮೂರಂಶ ಭಾಗವನ್ನು ಸರಕಾರದ ಸಹಾಯದಿಂದಲೂ ನಿರ್ವಹಿಸಬೇಕೆಂಬದು ಸಮಿತಿಯವರ ನಿರ್ಧಾರವಾಗಿತ್ತು.

ಸುದೈವದಿಂದ ಸಾರ್ವಜನಿಕರಿಂದ ಧನ ಸಹಾಯವು ನಮ್ಮ ಅಪೇಕ್ಷೆಯನ್ನು ಮೀರಿ ಬಂದದ್ದರಿಂದ ನಮ್ಮ ಕೆಲಸದಲ್ಲಿ ಯಾವ ಅಡಚಣಿಯೂ ಬರಲಿಲ್ಲ. ಇಷ್ಟೇ ಅಲ್ಲದೆ ಸರಕಾರದಿಂದ ಬರಬೇಕಾದ ಧನ ಸಹಾಯವು ಇನ್ನೂ ಬರದಿದ್ದರೂ, ಸಮಿತಿಯವರು ಯೋಚಿಸಿದಂತೆ ಎಲ್ಲ ಕಾರ್ಯಗಳೂ ನಡೆದು ಈಗ ಸುಮಾರು ೩೪೭೮=೨೩ ರೂಪಾಯಿಗಳು ಉಳಿದಿವೆ. ಜಮಾಖರ್ಚಿನ ವಿವರಗಳು ಕೆಳಗಿನಂತಿವೆ.

ನಿಧಿ ಸಂಗ್ರಹದ ವಿವರಗಳು :—

೧. ವಿಜಾಪೂರ ಜಿ.ಸ್ಕೂ.ಬೋ. ಶಿ.ರಿಂದ		೨,೧೪೯=೩೩
೨. ಧಾರವಾಡ	,, ,, ,,	೧,೮೩೬=೯೦
೩. ಬೆಳಗಾವಿ	,, ,, ,,	೫೧೯=೨೧
೪. ಕಾರವಾರ	,, ,, ,,	೨೩೪=೩೧
೫. ಹುಬ್ಬಳ್ಳಿ ಮ್ಯುನಿಶಿಪಲ್	,,	೨೮೦=೦೦
೬. ಗದಗ	,, ,, ,,	೨೫೩=೭೫
೭. ಧಾರವಾಡ	,, ,, ,,	೨೨೨=೦೦
೮. ಧಾರವಾಡ ನಾಗರಿಕರಿಂದ	,,	೧,೪೮೧=೮೨
		೬,೯೭೭=೩೨

ಖರ್ಚಿನ ವಿವರಗಳು:—

೧. ತೈಲ ಚಿತ್ರಗಳು	೫೦೦=೦೦
೨. ಸಂಗಮವರಿ ಶಿಲೆಗಳು	೨೨೫=೦೦
೩. ಜೀವನ ಶಿಕ್ಷಣ ಹಾಗೂ ಸಮ್ಮೇಲನ	೨೫೦=೦೦

೪.	ಮಂಟಪದ ರಚನೆ	೫೦೨=೧೬
೫.	ಮುದ್ರಣ	೧೭೦=೦೦
೬.	ವಿದ್ಯುದ್ದೀಪ	೨೫೦=೦೦
೭.	ಚಲನಚಿತ್ರ	೧೭೦=೦೦
೮.	ಕಾರಕೂನರ ಪಗಾರ	೧೬೨೦೫೦
೯.	ನಿಧಿಸಂಗ್ರಹ ಹಾಗೂ ಅತಿಥಿಗಳು	೪೦೦=೦೦
೧೦.	ಟಪಾಲು	೧೫೯=೦೦
೧೧.	ಸಾದಿಲವಾರ ಹಾಗು ಚಿಲ್ಲರ ವೆಚ್ಚ	೭೧೦=೪೩
		೩,೪೯೯=೦೯
	ಒಟ್ಟು ನಿಧಿ ಸಂಗ್ರಹ	೬,೯೭೭=೩೨
	ಒಟ್ಟು ಖರ್ಚು	೩,೪೯೯=೦೯
	ಶಿಲ್ಕು	೩,೪೭೮=೨೩

ಈ ಪ್ರಕಾರ ನಮ್ಮಲ್ಲಿ ೩೪೭೮=೨೩ ಹಣ ಶಿಲ್ಕು ಇದೆ. ಅದರಲ್ಲಿ ೩೦೦೦ ರೂಪಾಯಿಗಳನ್ನು ಶತಾಬ್ದಿ ಸ್ಮಾರಕ ಶಿಷ್ಯವೇತನಕ್ಕಾಗಿಯೂ ಇನ್ನುಳಿದ ಹಣವನ್ನು ಸಮಾರಂಭನಡೆದ ಕಟ್ಟಿಗೆ ಹೊದಿಕೆಯನ್ನು ಹಾಕುವದಕ್ಕಾಗಿಯೂ ಉಪಯೋಗಿಸಬೇಕೆಂದು ಸಮಿತಿಯವರು ನಿರ್ಣಯಿಸಿದ್ದಾರೆ. ಇದಾದರೂ ಇಷ್ಟರಲ್ಲಿಯೇ ಮುಗಿಯಬೇಕಾಗಿದೆ. ಅಂಥ ಭರವಸೆಯೂ ಉಂಟು. ಸಮಾರಂಭದ ಯಶಸ್ಸಿಗೆ ಕಾರಣರಾದ ಮಹನೀಯರಿಗೂ ಮಿತ್ರರಿಗೂ ನಮ್ಮ ಹಾರ್ದಿಕ ವಂದನೆಗಳನ್ನು ಸಲ್ಲಿಸ ಬಯಸುವೆವು. ಕೆಲವೇ ಕೆಲವರಿಂದ ಬರಬೇಕಾದ ಪಾವತಿ ಪುಸ್ತಕಗಳು ಬೇಗನೇ ನಮ್ಮ ಕೈಸೇರುವವೆಂದು ಆಶಿಸುತ್ತೇವೆ. ಲೆಕ್ಕಪತ್ರಗಳನ್ನು ನೋಡುವವರಿಗೆ ಯಾವಾಗಲೂ ಸ್ವಾಗತವಿದೆಯೆಂದು ತಿಳಿಸುವೆವು.

ಜೀವನ ಶಿಕ್ಷಣ

ಲೇಖಕರು: **ಮಾನೇಶ್ವರ ನಾಯಕ,** ಬಿ.ಎಸ್‌ಸಿ.(ಆನರ್ಸ), ಎಮ್.ಈಡಿ., ಡಿ.ಬಿ.ಈ.

೧. ಪ್ರಸ್ತಾವನೆ: ಶಿಕ್ಷಣದ ಉದ್ದೇಶವು ದೇಶ, ಕಾಲ, ಪರಿಸ್ಥಿತಿಗಳನ್ನು ಅವಲಂಬಿಸಿರುತ್ತದೆ. ಕಾಲ ಕಾಲಕ್ಕೆ ಶಿಕ್ಷಣದ ಧ್ಯೇಯಗಳೂ ಬದಲಾಗುತ್ತ ಬಂದಿವೆ. ಬದಲಾವಣೆಯು ಪ್ರಗತಿಯ ಚಿನ್ಹೆ. "ಹಳೆಯುವೆಲ್ಲ ಹೊನ್ನು, ಹೊಸವೆಲ್ಲ ಮಣ್ಣು" ಎನ್ನುವ ಕಾಲವೂ ಒಂದಿತ್ತು. ಈಗ "ಹೊಸದೆಲ್ಲವೂ ಹಳೆಯುದನ್ನು ಅವಲಂಬಿಸಿದೆ; ಹೊಸವೆಲ್ಲಕ್ಕೂ ಹಳೆಯುದೇ ಮೂಲ" ಎಂಬ ಮಾತು ಎಲ್ಲ ರಂಗಗಳಲ್ಲಿಯೂ ಕಂಡು ಬರುತ್ತಿದೆ. ವಾನರನಿಂದ ಅರೆನರ, ಅರೆನರನಿಂದ ನರನ ಉತ್ಪತ್ತಿಯಾಯಿತೆಂದು ಉತ್ಕ್ರಾಂತಿವಾದ ಹೇಳುತ್ತಿಲ್ಲವೇ? ಈ ಮಾತು ಶಿಕ್ಷಣ ಶಾಸ್ತ್ರಕ್ಕೂ-ಜೀವನ ಶಿಕ್ಷಣಕ್ಕೂ ಅನ್ವಯಿಸುತ್ತದೆ.

೨. ಶಿಕ್ಷಣದ ಗುರಿಗಳು: ಹಿಂದೊಮ್ಮೆ ನಿರ್ವಾಣ ಇಲ್ಲವೆ ಮುಕ್ತಿಯು ಶಿಕ್ಷಣದ ಗುರಿಯಾಗಿತ್ತು— "ವಿದ್ಯಾ ವಿಮುಕ್ತಿಯೇ" ಕ್ರಮೇಣ "ಮಠ–ವಿಹಾರಗಳ ಕಾಲದಲ್ಲಿ" (Monastic Age) ಓದು, ಬರೆಹ ಮತ್ತು ಧರ್ಮಗಳು (Reading, Writing, Religion three 'Rs') ಶಿಕ್ಷಣದ ಗುರಿಯಾಗಿದ್ದವು. ಆಗ ಓದು ಧರ್ಮ ಗ್ರಂಥಗಳ ಪಠನೆಗೂ, ಬರೆಹವು ಧರ್ಮಗ್ರಂಥಗಳ ಹಸ್ತಲಿಖಿತ ಪ್ರತಿಗಳನ್ನು ತಯಾರಿಸುವದಕ್ಕೂ ಹಾಗೂ ಧರ್ಮವು ಸ್ವಧರ್ಮ–ಶಿಕ್ಷಣಗಳಿಗೂ ಮರ್ಯಾದಿತವಾಗಿದ್ದವು. ಕ್ರಮೇಣ ಧರ್ಮ ಗುರುಗಳ ಹಾಗೂ ಧರ್ಮಾಧಿಕಾರಿಗಳ ಅನನ್ವಿತ ಅನಾಚಾರಗಳಿಂದಾಗಿ ಹಾಗೂ ಮಾರ್ಟಿನ್ ಲ್ಯೂಥರ ಆದಿಯಾಗಿ ಪ್ರಗತಿಪರ ವಿಚಾರವಾದಿಗಳಿಂದ ಪ್ರಜಾಪ್ರಭುತ್ವದ ಗಾಳಿಬೀಸಿ ಮೇಲೆ ಹೇಳಿದ ಮೂರು ಉದ್ದೇಶಗಳಲ್ಲಿ ಕೊನೆಯದಾದ ಧರ್ಮದ ಸ್ಥಾನವನ್ನು ಗಣಿತವು ಆಕ್ರಮಿಸಿಕೊಂಡಿತು. (Reading, Writing, & Arithmetic—Three "Rs") ಆ ಕಾಲದಲ್ಲಿ ಗಣಿತವು ಮಠ, ವಿಹಾರಗಳ ಇಲ್ಲವೇ ಅವುಗಳಿಗೆ ಸಂಬಂಧಿಸಿದ ವಸತಿ ಗೃಹಗಳ ಆಯವ್ಯಯಗಳಿಗೆ ಮಿತಗೊಳಿಸಲಾಗಿತ್ತು. ಕೆಲವು ಕಡೆಗಳಲ್ಲಿ ಉದಾ: ಸ್ಪಾರ್ಟಾ, ಎಥೆನ್ಸ ಮುಂತಾದ ನಗರ ರಾಜ್ಯಗಳಲ್ಲಿ ಸೈನಿಕ ಶಿಕ್ಷಣವು ಶಿಕ್ಷಣದ ಗುರಿಯಾಗಿತ್ತು. ಶಾರೀರಿಕ ಶಿಕ್ಷಣವನ್ನು ಕಡ್ಡಾಯವಾಗಿ ಕೊಡುವದರ ಜೊತೆಗೆ ಅಶಕ್ತ ಹಾಗೂ ನಿರ್ಬಲ ಬಾಲಕರನ್ನು ಸಮೀಪದ ಗುಡ್ಡಗಳಿಗೆ ಒಯ್ದು ನಾಯಿಲಿಕ್ಕೆ ಬಿಡುತ್ತಿದ್ದರು. ಇದಕ್ಕೆ ಅಲ್ಲಿಯ ಪರಿಸ್ಥಿತಿಯೇ ಕಾರಣವಾಗಿತ್ತು. ದಿನಗಳುರುಳಿದಂತೆ ನಾಗರಿಕತೆ (Citizenship), ತುಂಬು ಜೀವನ

(Complete living), ಸರ್ವಾಂಗೀಣ ವಿಕಾಸ (All round), ಅರ್ಥಾತ್ ಶಾರೀರಿಕ, ಮಾನಸಿಕ ಮತ್ತು ನೈತಿಕ ಹಾಗೂ ವ್ಯಕ್ತಿ ವಿಕಾಸಗಳು (Integrated development ಶಿಕ್ಷಣದ ಗುರಿಗಳಾದವು.

೩. ಶಿಕ್ಷಣದ ವಿಧಾನ: ಇಂದು ಶಿಕ್ಷಣದ ಗುರಿಯು ಮಗುವಿನ ಸರ್ವಾಂಗೀಣ ವಿಕಾಸವೆಂದು ಎಲ್ಲರೂ ಒಪ್ಪಿಕೊಳ್ಳುತ್ತಿದ್ದರೂ, ಅದನ್ನು ಸಾಧಿಸುವ ವಿಧಾನದ ಬಗ್ಗೆ ಶಿಕ್ಷಣ ತಜ್ಞರಲ್ಲಿ ಭಿನ್ನಾಭಿಪ್ರಾಯಗಳಿವೆ. ಈ ವರೆಗೆ ಸಾಲೆಗಳಲ್ಲಿ ಶಿಕ್ಷಣವೆಂಬ ಹೆಸರಿನಿಂದ ಕೊಡಲಾಗುತ್ತಿರುವ ಪರಂಪರಾಗತ ವಿಧಾನವು (Traditional method) ಮಗುವಿನ ವಿಕಾಸವನ್ನು ಸಾಧಿಸುವದರಲ್ಲಿ ಯಶಸ್ವಿಯಾಗಿಲ್ಲವೆಂಬ ಮಾತನ್ನು ಮಾತ್ರ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಕೆಲವರು ಅದು ಕೇವಲ ಬೌದ್ಧಿಕ ವಿಕಾಸವನ್ನು ಮಾತ್ರ ಸಾಧಿಸಿದೆಯೆಂದು ಹೇಳಿದರೆ ಗಾಂಧೀಜಿಯವರ ಪಟ್ಟ ಶಿಷ್ಯರಾದ ಪೂಜ್ಯ ವಿನೋಬಾರವರು ಅದರಿಂದ "ಬೌದ್ಧಿಕ ವಿಕಾಸ" ವಾಗಿರದೇ "ಬೌದ್ಧಿಕ ವಿಲಾಸ" ವಾಗಿದೆಯೆನ್ನುವ ವರೆಗೂ ಹೋಗುತ್ತಾರೆ. ಪಾಶ್ಚಾತ್ಯ ಶಿಕ್ಷಣತಜ್ಞರಾದ ರೂಸೋ, ಫ್ರೊಬೆಲ್, ಮೊಂಟೆಸಿರಿ ಹಾಗೂ ಜಾನ್ ಡ್ಯೂಯಿ ಮೊದಲಾದವರು ಚಟುವಟಿಕೆಯ ಶಿಕ್ಷಣವನ್ನು ಪ್ರತಿಪಾದಿಸಿದ್ದಾರೆ. ಶಿಶುವಿಹಾರ, ಮೊಂಟೆಸರಿ ಪದ್ಧತಿ, ಯೋಜನಾ ಪದ್ಧತಿಗಳೇ ಇದಕ್ಕೆ ನಿದರ್ಶನ. ಸೂರ್ಯನು ಪೂರ್ವದಲ್ಲಿ ಬೆಳಗಿದರೂ ವಿಜ್ಞಾನದ ಬೆಳಕಿಗಾಗಿ ನಾವು ಪಶ್ಚಿಮದ ಕಡೆಗೆ ನೋಡುತ್ತಿರುವಾಗ ಮಹಾತ್ಮಾ ಗಾಂಧೀಜಿಯವರು ದೇಶಕ್ಕೆ "ಜೀವನ ಶಿಕ್ಷಣ"ದಂಥ ತಾರಕ ಮಂತ್ರವನ್ನು ನೀಡಿದರು. ಅದು ಸನಾತನ ರಕ್ಷಣದ ವಿಕಾಸವೇ ಆಗಿದೆ. ಶಿಕ್ಷಣವು ಕ್ರಾಂತಿಯ (Revolution) ಮಾರ್ಗವನ್ನು ಹಿಡಿಯದೇ ಉತ್ಕ್ರಾಂತಿಯ (Evolution) ತತ್ವವನ್ನು ಅನುಸರಿಸಬೇಕೆಂಬ ತತ್ವವೂ ಇದರಲ್ಲಿ ಅಡಕವಾಗಿದೆ.

೪. ಜೀವನ ಶಿಕ್ಷಣದ ತತ್ವಪ್ರಣಾಲಿ : ಸತ್ಯ, ನ್ಯಾಯ, ಪ್ರೇಮ ಹಾಗೂ ಸಹಕಾರಗಳ ಚೌಕಟ್ಟಿಗಳ ಮೇಲೆ ಜಾತ್ಯತೀತವಾದ ಶೋಷಣೆರಹಿತವಾದ ಸ್ವಾವಲಂಬೀ ಸಮಾಜವನ್ನು ಕಟ್ಟುವ ಶಿಕ್ಷಣ ವಿಧಾನವೇ ಜೀವನ ಶಿಕ್ಷಣವಾಗಿದೆ. ಇದಕ್ಕೆ 'ಮೂಲಶಿಕ್ಷಣ' 'ಹೊಸ ಶಿಕ್ಷಣ' 'ವರ್ಧಾ ಶಿಕ್ಷಣ' ಎಂಬ ಬೇರೆ ಬೇರೆ ಹೆಸರುಗಳೂ ಇವೆ. "ಅದು ಮುಟ್ಟದ ಗಿಡವಿಲ್ಲ" ಎಂಬಂತೆ ಗಾಂಧೀಜಿಯವರು ಮುಟ್ಟದ ವಿಷಯವಿಲ್ಲ- ಹರಿಜನೋದ್ಧಾರ, ಮಹಿಳೋದ್ಧಾರ, ಖಾದಿ, ಪಾನ ಪ್ರತಿಬಂಧ, ಗ್ರಾಮೋದ್ಯೋಗ, ಸತ್ಯಾಗ್ರಹ, ಅಹಿಂಸೆ, ಸ್ವಾತಂತ್ರ್ಯ ಹೀಗೆ ಒಂದೇ ? ಎರಡೇ ? ಆದರೆ, ಕೊನೆಯಲ್ಲಿ ಮುಟ್ಟಿದ್ದು ಶಿಕ್ಷಣ. ಅದು ಮುಟ್ಟದ್ದೆಲ್ಲ ಹಾಳಾದರೆ ಗಾಂಧೀಜಿ ಮುಟ್ಟದ್ದೆಲ್ಲ ಚಿನ್ನವಾಗಿದೆ. ಅವರು ಶಿಕ್ಷಣ ಕ್ಷೇತ್ರವನ್ನು ಮುಟ್ಟಿದ್ದು ತುತ್ತತುದಿಯಲ್ಲಿ; ಅವರ ಬುದ್ಧಿ ಪರಿಪಕ್ವವಾದ ಮೇಲೆ. ಅಂತೆಯೇ ಅವರ ಶಿಷ್ಯರಲ್ಲಿ ಒಬ್ಬರಾದ ಶ್ರೀ ಜೆ.ಬಿ. ಕೃಪಲಾನಿಯವರು ಈ ಕೊನೆಯ ಕೊಡುಗೆಗೆ ಇತ್ತೀಚಿನ ಹುಚ್ಚು (Latest Fod) ಎಂದು ಕರೆದಿದ್ದಾರೆ.

೧೯೩೭ ನೇ ಸಾಲಿನಲ್ಲಿ ಅಧಿಕಾರ ವಹಿಸಿಕೊಂಡ ಕಾಂಗ್ರೆಸು ಅಲ್ಲಿಯ ವರೆಗೂ ಪರಂಪರಾಗತ ಶಿಕ್ಷಣಕ್ಕೆ ಅರಾಷ್ಟ್ರೀಯ ಶಿಕ್ಷಣವೆಂದು ಕರೆಯುತ್ತಿತ್ತು. ಮತ್ತು ಆ ಶಿಕ್ಷಣ ಸಂಸ್ಥೆಗಳನ್ನು ಬಹಿಷ್ಕರಿಸಿ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳನ್ನು ಸಹ ನಡೆಸಿತ್ತು- ಉದಾ: ತಿಲಕ ವಿದ್ಯಾಪೀಠ, ಗುಜರಾತ ವಿದ್ಯಾಪೀಠ, ಕರ್ನಾಟಕ ವಿದ್ಯಾಪೀಠ, ಮುಂ. ಆದರೆ, ಅಧಿಕಾರ ವಹಿಸಿಕೊಂಡ ಮೇಲೆ ಶಿಕ್ಷಣದ ವಿಷಯದಲ್ಲಿ ಅದರ ಹೊಣೆಗಾರಿಕೆಯು ಸಹಜವಾಗಿ ಹೆಚ್ಚಿನದಾಯಿತು. ೧೯೩೭ನೇ ಸಾಲಿನ 'ಹರಿಜನ' ಪತ್ರಿಕೆಯ ಪುಟಗಳನ್ನು ತಿರುವಿಹಾಕಿದರೆ ಇದರ ಅರಿವೂ ಹಾಗು ಈ ಹೊಣೆಯನ್ನು ನಿರ್ವಹಿಸಲು ರಾಷ್ಟ್ರಪಿತನು ಪಟ್ಟಶ್ರಮವೂ ತಿಳಿದುಬರುವದು. ಅದರ ಪರಿಣಾಮವೇ ೧೯೩೭ ರ ದೀಪಾವಳಿಯ ಶುಭ ಸಂದರ್ಭದಲ್ಲಿ ಅಕ್ಟೋಬರ ೨೨ ಹಾಗೂ ೨೩ ರಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ವರ್ಧಾ ಸಮ್ಮೇಳನ. ಆ ಪರಿಷತ್ತು ಅಂಗೀಕರಿಸಿದ ನಾಲ್ಕು ಗೊತ್ತುವಳಿಗಳೇ ಜೀವನ ಶಿಕ್ಷಣದ ಮೂಲ ತತ್ವಗಳೆನ್ನಬಹುದು.

೧) ಏಳು ವರ್ಷಗಳ ವರೆಗೆ ಶಿಕ್ಷಣವನ್ನು ಪುಕ್ಕಟೆಯಾಗಿ, ಏಳರಿಂದ ಹದಿನಾಲ್ಕುವರ್ಷಗಳವರೆಗೆ ಕಡ್ಡಾಯವಾಗಿ ಹಾಗೂ ಸಾರ್ವತ್ರಿಕವಾಗಿ ಕೊಡಬೇಕು.

೨) ಶಿಕ್ಷಣವು ಮಗುವಿನ ಮಾತೃ ಭಾಷೆಯ ಮೂಲಕವೇ ಸಾಗಬೇಕು.

೩) ಮೇಲಿನ ಅವಧಿಯಲ್ಲಿ ಶಿಕ್ಷಣವನ್ನು ಮಗುವಿನ ಪರಿಸ್ಥಿತಿಯಿಂದ, ಆಯ್ದುಕೊಂಡ ಯಾವದೊಂದು ಉಪಯುಕ್ತ, ಉತ್ಪಾದಕ, ಉದ್ಯೋಗದ ಮೂಲಕ ಕೊಡಬೇಕು.

೪) ಸಾಧ್ಯವಿದ್ದ ಮಟ್ಟಿಗೆ ಶಿಕ್ಷಣವು ಸ್ವಾವಲಂಬಿಯಾಗಬೇಕು.

ಮುಂದೆ ಕೆಲವೇ ಸಮಯದಲ್ಲಿ ಉದ್ಯೋಗ ಒಂದೇ ಶಿಕ್ಷಣದ ಮಾಧ್ಯಮವಾಗಿರದೆ ನಿಸರ್ಗ ಹಾಗೂ ಸಮಾಜ ಕೇಂದ್ರಗಳ ಮೂಲಕವೂ ಶಿಕ್ಷಣವನ್ನು ಕೊಡಬೇಕೆಂದು ಗೊತ್ತು ಮಾಡಲಾಯಿತು. ಹೀಗೆ ಆರ್ಥಿಕ, ನೈಸರ್ಗಿಕ ಹಾಗೂ ಸಾಂಸ್ಕೃತಿಕ ಕೇಂದ್ರಗಳು ಶಿಕ್ಷಣದ ಮೂರು ಕೇಂದ್ರಗಳಾದವು. ಹಾಗೂ "ಸಮವಾಯ ಪದ್ಧತಿಯು" ಈ ಶಿಕ್ಷಣದ ತಂತ್ರವಾಯಿತು. ಇದರಿಂದಾಗಿ, ಜ್ಞಾನವು ಒಂದು ಕೊಟ್ಟ ಕೆಲಸವನ್ನು ನಿರ್ವಹಿಸಲು ಬೇಕಾದ ಆವಶ್ಯಕ ಜ್ಞಾನವಾಗಿ ಪರಿಣಮಿಸಿತು.

(ಮುಂದುವರೆಯುವದು)

ಜೀವನ ಶಿಕ್ಷಣ ಪ್ರಪಂಚ

ಹುನಗುಂದ:— ದಿ. ೨೭ ರಂದು ಕೇಂದ್ರಶಾಲೆಯಲ್ಲಿ ಇಲ್ಲಿಯ ಜ್ಯುಡಿಶಿಯಲ್ ಮ್ಯಾಜಿಸ್ಟ್ರೇಟ ಇವರ ಅಧ್ಯಕ್ಷತೆಯಲ್ಲಿ ಶ್ರೀ ಬಿ. ಎಸ್. ಬಾಲಕಟ್ಟಿ ಇವರ ಸೇವಾ ನಿವೃತ್ತಿಯ ಬಗ್ಗೆ ಬೀಳ್ಕೊಡುವ ಸಮಾರಂಭವು ಜರುಗಿತು.

ಆಲಮೇಲ:— ದಿ. ೨೬ ರಂದು ಇಲ್ಲಿ ಜಿ.ಶಿ.ಕ. ಗಂ. ಮ. ಶಾಲೆಯಲ್ಲಿ ಈ ಭಾಗದ ಅ.ಡೆ.ಎ.ಇ. ರಾದ ಶ್ರೀ ಲ. ತಿ. ಶಿರಹಟ್ಟಿಯವರ ಸೇವಾನಿವೃತ್ತಿಯ ಸಮಾರಂಭವು ಇಲ್ಲಿಯ ಸೇವಾನಿವೃತ್ತಿಹೊಂದಿದ ಶ್ರೀ ನಾಟೇಕರ ಗುರುಗಳ ಅಧ್ಯಕ್ಷತೆಯಲ್ಲಿ ಜರುಗಿತು.

ಶೇಡಬಾಳ:— ಫೆಬ್ರುವರಿ ತಿಂಗಳಲ್ಲಿ ಜರುಗಿದ ಸಾಹಿತ್ಯಪರಿಷತ್ತಿನ ಜಾಣ ಪರೀಕ್ಷೆಯಲ್ಲಿ ಕುಳಿತ ನಾಲ್ಕು ಜನರು ಪಾಸಾಗಿದ್ದಾರೆ. ಅವರಲ್ಲಿ ಶ್ರೀ ವಾಯ್.ಎಸ್. ಮೂಕಣ್ಣವರ ಅ. ಮಾ. ಇವರು ಮೈಸೂರು ರಾಜ್ಯಕ್ಕೆ ಮೊದಲನೇ ನಂಬರು ಬಂದಿರುವರು. ಇವರು ೧೯೫೮ ರಲ್ಲಿ ಗಂ. ಸ. ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳು.

ಮೂಲ ಶಿಕ್ಷಣದ ಅರಿವು

(೨೮ನೆಯ ಪುಟದಿಂದ ಬಂದದ್ದು)

ಗಳಿಗೂ ಅನ್ವಯಿಸುತ್ತಿದೆ. ಬೇಸಿಕ್ ಶಿಕ್ಷಣದ ವಿಚಾರ ಪ್ರಣಾಲಿಗನುಗುಣವಾಗುವಂತೆ ಕಾಲೇಜುಗಳ ಅಭ್ಯಾಸ ಪತ್ರಿಕೆಯಲ್ಲಿ ಕಾರ್ಯಕ್ರಮವನ್ನಿಟ್ಟುಕೊಳ್ಳುವಂತೆ ವಿಶ್ವವಿದ್ಯಾಲಯಗಳ ಮನವೊಲಿಸಬೇಕು. ದುಡಿಮೆಯ ಮುಖಾಂತರ ಶಿಕ್ಷಣವೆಂಬ ವಿಚಾರಪ್ರಣಾಲಿಯ ಕಾರ್ಯಕ್ರಮವು ನಮ್ಮ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ತ್ವರಿತವಾಗಿ ಸೇರ್ಪಡೆಯಾಗುವದು ನಮಗೆ ಬೇಕಾಗಿದೆ.

ಬೇಸಿಕ್ ಶಿಕ್ಷಣವು ನಮ್ಮ ರಾಷ್ಟ್ರದ ಬೇಡಿಕೆಗಳನ್ನು ಎಲ್ಲ ದೃಷ್ಟಿಯಿಂದಲೂ ಪೂರೈಸಬೇಕಾಗಿದ್ದರೆ, ನಮ್ಮ ರಾಷ್ಟ್ರದ ಇಂದಿನ ಹಾಗೂ ಮುಂದಿನ ಬೇಡಿಕೆಗಳನ್ನು ಶೋಧಿಸಿ ಕಂಡುಹಿಡಿಯುವ ಎಚ್ಚರಿಕೆಯನ್ನು ನಾವು ಆವಾಗಲೂ ವಹಿಸುವದು ಲೇಸು. ನಮ್ಮ ರಾಷ್ಟ್ರದ ಜನತೆಯು ಹಳ್ಳಿಗಳಲ್ಲಿಯೇ ಹೆಚ್ಚಾಗಿರುವದರಿಂದ ಅಲ್ಲಿ ವಾಸಿಸುವ ಕೋಟ್ಯನುಕೋಟಿ ಬಡ ಗಂಡಸರ ಹಾಗೂ ಹೆಂಗಸರ ಬಗೆಗೆ ನಮ್ಮ ರಾಷ್ಟ್ರದ ಪಿತಾಮಹನು ಸತತವಾಗಿ ಚಿಂತಿಸುತ್ತಿದ್ದನೆಂಬುದು ಅತ್ಯಂತ ನಿಜವಿದೆ. ಆದರೆ, ಮೂಲ ಶಿಕ್ಷಣವು ಎಲ್ಲ ಜನರ ಉತ್ಕರ್ಷದ ಸಾಧನವಾಗಿದೆಯೆಂಬುದನ್ನು ಕಂಡುಕೊಳ್ಳುವದೊಳಿತು. ಆದುದರಿಂದ, ಹಳ್ಳಿಗಳಲ್ಲಿಯ ಹಾಗೂ ಶಹರಗಳಲ್ಲಿಯ ನಾನಾ ತರಹದ ದರ್ಜೆಗಳ ಗಂಡಸರ ಮತ್ತು ಹೆಂಗಸರ ಇಂದಿನ ಹಾಗೂ ಮುಂದಿನ ಸ್ಥಿತಿಗತಿಗಳಿಗನುಗುಣವಾಗುವಂತೆ ಯೋಜನೆಗಳ ಕಾರ್ಯಕ್ರಮವನ್ನು ಬೇಸಿಕ್ ಶಿಕ್ಷಣವು ಹಮ್ಮಿಕೊಳ್ಳಬೇಕು. ತಮ್ಮ ತಮ್ಮ ಸುತ್ತುಮುತ್ತಲಿನ ಜನತೆ ಹಾಗೂ ಪರಿಸ್ಥಿತಿಗಳಿಗೊಗ್ಗುವಂತೆ ಕಾರ್ಯಕ್ರಮದಲ್ಲಿಯ ವಿವರಗಳನ್ನು ಹೆಚ್ಚುಕಡಿಮೆ ಮಾಡಿಕೊಳ್ಳುವ ಪೂರ್ಣ ಸ್ವಾತಂತ್ರ್ಯವು ಆಯಾ ಸಂಸ್ಥೆಗಳಿಗಿರಬೇಕು.

ಬೇಸಿಕ್ ಶಿಕ್ಷಣವು ನಮ್ಮ ರಾಷ್ಟ್ರಪಿತನಿಂದ ಕೃಪೆಸಲ್ಪಟ್ಟ ಕೊನೆಯ ಹಾಗೂ ಅತ್ಯಂತ ಮಹತ್ವದ ಕೊಡುಗೆಯು. ಅರ್ಧ ಶತಮಾನದ ವರೆಗೆ ರಾಷ್ಟ್ರಕ್ಕೋಸ್ಕರ ಆತನು ಬಿಟ್ಟೂಬಿಡದೆ ಸಲ್ಲಿಸಿದ ನಿಷ್ಠಾವಂತ ಸೇವೆಯ ಕೊನೆಯ ಪರಿಣಾಮವು ಅದಾಗಿದೆ. ಮಗುವಿಗೋಸುಗ ಆತನಲ್ಲಿದ್ದ ನೈಜವಾದ ಹಾಗೂ ಆಳವಾದ ಪ್ರೇಮದ ದ್ಯೋತಕವೂ ಅದಾಗಿದೆ- ಪ್ರತಿಯೊಂದು ಮಗುವು ತನ್ನ ಬುದ್ಧಿಮಟ್ಟಕ್ಕನುಸರಿಸಿ ವಿಕಾಸ ಹೊಂದಲು ಸಂಪೂರ್ಣ ಸ್ವಾತಂತ್ರ್ಯ ಮತ್ತು ಸದವಕಾಶ ಇವು ಅದಕ್ಕೆ ಲಭಿಸಬೇಕು. ನಮ್ಮ ಮಕ್ಕಳಿಗೆ ಈ ಅನುಕೂಲತೆಗಳನ್ನೊದಗಿಸಿ ಕೊಡುವದರ ಮೇಲೆಯೇ ನಮ್ಮ ರಾಷ್ಟ್ರದ ಭವಿತವ್ಯವು ಅವಲಂಬಿಸಿದೆ.

ಜಯ ಹಿಂದ

ನೂಲುವ ನೇಯುವ ಮೂಲೋದ್ಯೋಗವನ್ನು ಯಶಸ್ವಿಯಾಗಿ ಸಾಗಿಸುವ ವಿಧಾನಗಳು

ಲೇಖಕರು: **ಶ್ರೀ ಎಸ್. ಬಿ. ಹಳಕಟ್ಟಿ, ಅ. ಡಿ. ಎ. ಇ. ಧಾರವಾಡ.**

ಜೀವನದ ಮುಖಾಂತರ ಶಿಕ್ಷಣವನ್ನು ಪಡೆದು ವ್ಯಕ್ತಿತ್ವವಿಕಾಸವನ್ನು ಮಾಡಿಕೊಳ್ಳುವದೇ ಜೀವನ ಶಿಕ್ಷಣದ ಗುರಿ. ಆದುದರಿಂದ ಮಗುವು ಪಡೆಯುವ ಪಡೆಯಬೇಕಾಗಿರುವ ಜ್ಞಾನವೆಲ್ಲವನ್ನು ಅನುಭವರೂಪದಿಂದ, ಜೀವನದ ಮುಖಾಂತರ ಒದಗಿಸಬೇಕಾಗಿದೆ. ಜೀವನಕ್ಕೆ ನಿಕಟವಾಗಿ ಹೊಂದಿಕೊಂಡ, ಭೌತಿಕ, ಸಾಮಾಜಿಕ ಹಾಗೂ ಆರ್ಥಿಕ ಪರಿಸರಗಳೇ ಮಗುವಿನ ಜ್ಞಾನದ ಆಗರಗಳು. ಆ ಜ್ಞಾನವನ್ನು ಮಗುವಿಗೆ ಉಣಬಡಿಸಿ, ಅದು ರಕ್ತಗತವಾಗಿ ಜೀವನದಲ್ಲಿ ಇಳಿದು ಬರುವಂತೆ ನೋಡಿಕೊಳ್ಳಬೇಕಾದರೆ, ಸಮವಾಯ ತಂತ್ರವನ್ನರಿತ ಪರಿಸ್ಥಿತಿಯ ಸದುಪಯೋಗ ಮಾಡಿಕೊಳ್ಳಬಲ್ಲ ಸಮರ್ಥಶಿಕ್ಷಕನ ಅವಶ್ಯಕತೆಯಿದೆ.

ಆರ್ಥಿಕ ಪರಿಸರದಲ್ಲಿ ಮಗುವಿನ ಸುತ್ತಲೂ ಪ್ರಚಲಿತವಿರುವ ಉತ್ಪಾದಕ ಚಟುವಟಿಕೆಗಳು ಸಮಾವೇಶವಾಗುತ್ತವೆ. ಅವುಗಳಲ್ಲಿ ಕೆಳಗಿನ ಉದ್ಯೋಗಗಳಿಗೆ ಮಾತ್ರ ಅಭ್ಯಾಸ ಪತ್ರಿಕೆಯಲ್ಲಿ ಅಸುವು ಮಾಡಿಕೊಡಲಾಗಿದೆ.

೧) ನೂಲುವದು ಹಾಗೂ ನೇಯುವದು,
೨) ಕೈತೋಟ ಹಾಗೂ ಒಕ್ಕಲುತನ,
೩) ರಟ್ಟಿನ ಕೆಲಸ ಹಾಗೂ ಬಡಿಗತನ,

ಈ ಉದ್ಯೋಗಗಳನ್ನು ಶಾಲೆಗಳಲ್ಲಿ ಸಾಗಿಸಿಕೊಂಡು ಹೋಗುವಾಗ ಶಿಕ್ಷಕರು ಇಬ್ಬಗೆಯ ಉದ್ದೇಶಗಳ ಕಡೆಗೆ ಲಕ್ಷ್ಯಪೂರೈಸಬೇಕಾಗುತ್ತದೆ. ಜ್ಞಾನಬೋಧನೆಯ ಕೆಲಸದಲ್ಲಿ ವ್ಯತ್ಯಯಬಾರದಂತೆ ನೋಡಿಕೊಳ್ಳುವದು ಹಾಗೂ ಉದ್ಯೋಗದಲ್ಲಿ ಬಾಲಕರಿಗೆ ಸರಿಯಾದ ಪರಿಣತಿಯನ್ನು ತಂದುಕೊಡುವದು. ಈ ಉದ್ದೇಶವನ್ನು ಸಾಧಿಸಬಯಸುವ ಶಿಕ್ಷಕನು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ಯಾವುದಾದರೊಂದು ಯೋಜನೆ ಯಶಸ್ವಿ ರೀತಿಯಿಂದ ಮುಂದುವರಿಯಬೇಕಾದರೆ, ಆತ್ಮವಿಶ್ವಾಸವುಳ್ಳ ಕಾರ್ಯಕರ್ತರ ಅವಶ್ಯಕತೆಯಿದೆ. ಪ್ರಥಮತಃ ಕಾರ್ಯಕರ್ತನಲ್ಲಿಯೇ ಸಂಶಯಕ್ಕೆ ಆಸ್ಪದ ಉಂಟಾದರೆ ಕಾರ್ಯವು ಯಶಸ್ವಿಯಾಗಿ ಮುಂದುವರೆಯುವದಾದರೂ ಹೇಗೆ? ಆದ್ದರಿಂದ ಕಾರ್ಯಕರ್ತರಲ್ಲಿ ಯೋಜನೆಯ ಬಗೆಗೆ ಅಚಲವಾದ ವಿಶ್ವಾಸ ಹಾಗೂ ಅದನ್ನು ಯಶಸ್ವಿಗೊಳಿಸಲು ಬೇಕಾಗಬಹುದಾದ ಕಷ್ಟಸಹಿಷ್ಣುತೆ, ತಾಂತ್ರಿಕ ಕುಶಲತೆ ಇವೆಲ್ಲವೂ ಬೇಕಾಗುತ್ತವೆ. ತಾಂತ್ರಿಕ ಕುಶಲತೆಯನ್ನು ತರಬೇತಿಯು ತಂದುಕೊಡಬಹುದು. ಆದರೆ ಆತ್ಮವಿಶ್ವಾಸ, ಕಷ್ಟಸಹಿಷ್ಣುತೆ ಅವನಲ್ಲಿಯೇ ಬೆಳೆದು ಬರಬೇಕಾಗುತ್ತದೆ. ಉಪಜೀವನದ ಮಾರ್ಗವಾಗಿ ಕೈಕೊಳ್ಳಲ್ಪಟ್ಟ 'ಶಿಕ್ಷಕವೃತ್ತಿ' ಹೊಸ ಸಮಾಜವನ್ನು ರೂಪಿಸುವ ವ್ಯಕ್ತಿಯಾಗಿ ಮಾರ್ಪಟ್ಟಾಗ ಮಾತ್ರ ಅಂಥ ಶಕ್ತಿಗಳು ಬೆಳೆದು ಬರಬಲ್ಲವು. "ತನಗಾಗಿ ಹುದ್ದೆಯಲ್ಲ! ಹುದ್ದೆಗಾಗಿ ತಾನು." ಎಂಬುದನ್ನು ಅರಿತು ತನ್ನ ಕಾರ್ಯಸಾಧನೆಗೆ ಬೇಕಾಗಬಹುದಾದ ಜ್ಞಾನ, ಶೀಲ, ಶಕ್ತಿಗಳನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಇಂಥ ಆತ್ಮ ಶಕ್ತಿಯನ್ನು ಪಡೆದ ಶಿಕ್ಷಕರೆದುರು ಎಂಥ ಸಮಸ್ಯೆಗಳಾದರೂ ನಿರಾಯಾಸವಾಗಿ ಬಿಟ್ಟು ಹೋಗುತ್ತವೆ.

ನೂಲುವ ನೇಯುವ ಮೂಲೋದ್ಯೋಗವನ್ನು ಕಲಿಸುತ್ತಿರುವ ಶಾಲೆಯ ಶಿಕ್ಷಕರು ಅದನ್ನು ಪ್ರಗತಿಪಥದಲ್ಲಿ ನಡೆಯಿಸಿಕೊಂಡು ಹೋಗಬೇಕಾದರೆ ಅನೇಕ ವಿಷಯಗಳ ಕಡೆಗೆ ಗಮನಕೊಡಬೇಕಾಗುತ್ತದೆ. ಈ ಕಾರ್ಯದಲ್ಲಿ ಉದ್ಭವಿಸಬಹುದಾದ ಎಲ್ಲ ಸಮಸ್ಯೆಗಳನ್ನು ಸಮರ್ಥ ರೀತಿಯಿಂದ ಎದುರಿಸುವದರಲ್ಲಿಯೇ ಕಾರ್ಯದ ಯಶಸ್ಸು ಅಡಕವಾಗಿರುತ್ತದೆ. ಪ್ರಾರಂಭದಲ್ಲಿ ಬೇಕಾಗುವ ಕಚ್ಚಾ ಮಾಲಿನಿಂದ ಈ ಸಮಸ್ಯೆಗಳು ಪ್ರಾರಂಭವಾಗುತ್ತವೆ.

ಉತ್ತಮ ಹತ್ತಿಯನ್ನು ದೊರಕಿಸುವದು ಒಂದು ಕಷ್ಟದ ಕೆಲಸವೇ ಆಗುತ್ತದೆ. ಬಹುತರವಾಗಿ ನೂಲುವ ನೇಯುವ ಮೂಲೋದ್ಯೋಗವನ್ನು ಕಲಿಸುವ ಶಾಲೆಗಳು ಹತ್ತಿ ಬೆಳೆಯುವ ಕ್ಷೇತ್ರದಲ್ಲಿಯೇ ಹೆಚ್ಚಾಗಿ ಇರುತ್ತವೆ. ಎಷ್ಟೋ ಕಡೆಗಳಲ್ಲಿ ಜಯಧರ ಹತ್ತಿಯ ಬದಲಾಗಿ

ಲಕ್ಷ್ಮೀಹತ್ತಿಯನ್ನು ಬೆಳೆಯುವದುಂಟು. ಇದರಿಂದ ಉತ್ತಮ ಜಯಧರ ಹತ್ತಿಯನ್ನು ಸಂಗ್ರಹಿಸಲು ತೊಂದರೆಯುಂಟಾಗುತ್ತದೆ. ಜಯಧರ ಹತ್ತಿ ಬೆಳೆಯುವ ಕ್ಷೇತ್ರದಲ್ಲಿಯ ಶಾಲೆಯುವರು ತಮ್ಮ ಶಾಲೆಗೆ ಬೇಕಾಗುವ ಹತ್ತಿಯನ್ನು ತಾವೇ ಬಿಡಿಸಿ ತರುವದು ಉತ್ತಮ. ಇದಕ್ಕೆ ಪಾಲಕರ ಹಾಗೂ ಹೊಲದೊಡೆಯರ ಸಹಕಾರ ಸಿಗುವದಿಲ್ಲೆಂಬ ಕೂಗು ಕೇಳಿಬರುತ್ತದೆ. ಅವರಿಗೆ ನಿಮ್ಮ ಕೆಲಸದ ಉದ್ದೇಶದ ಬಗೆಗೆ ಸರಿಯಾದ ತಿಳುವಳಿಕೆ ಕೊಟ್ಟಲ್ಲಿ ಆ ತೊಂದರೆ ಸುಲಭವಾಗಿ ನಿವಾರಣೆಯಾಗುವದೆಂಬುದರ ಬಗೆಗೆ ಸಾಕಷ್ಟು ಉದಾಹರಣೆಗಳಿವೆ.– ಕಳೆದವರ್ಷ ಎಷ್ಟೋ ಶಾಲೆಯುವರು ತಮಗೆ ಬೇಕಾಗುವ ಹತ್ತಿಯನ್ನು ತಾವೇ ಸಂಗ್ರಹಿಸಿದ್ದುಂಟು. ಜಯಧರ ಹತ್ತಿ ಬೆಳೆಯದ ಕ್ಷೇತ್ರದವರು ಸಮೀಪದ ಜಯಧರ ಹತ್ತಿ ಬೆಳೆಯುವ ಕ್ಷೇತ್ರದ ಶಾಲೆಯುವರೊಂದಿಗೆ ಸಂಪರ್ಕವಿಟ್ಟುಕೊಂಡು ಅಲ್ಲಿಂದ ಹತ್ತಿಯನ್ನು ತಂದುಕೊಳ್ಳುವದು ವಿಹಿತ.

ಉತ್ತಮ ಹತ್ತಿಯನ್ನು ಸಂಗ್ರಹಿಸಿದ ನಂತರ ಮೂಲೋದ್ಯೋಗವನ್ನು ಪ್ರಾರಂಭಿಸುವ ಪೂರ್ವದಲ್ಲಿ ಯೋಜನೆಯನ್ನು ಮಾಡಿಕೊಳ್ಳುವದು ಅತ್ಯಂತ ಮಹತ್ವದ್ದು. ಮೂಲೋದ್ಯೋಗವು ಯಾಂತ್ರಿಕವಾಗಿ ನಡೆಯದೆ ಉದ್ದೇಶವನ್ನಿಟ್ಟುಕೊಂಡು ಸಾಗಬೇಕು. ಮೊದಲನೆಯದಾಗಿ ಶಾಲೆಯಲ್ಲಿರುವ ಮೂಲೋದ್ಯೋಗದ ಉಪಕರಣ, ಮಕ್ಕಳ ಸಂಖ್ಯೆ, ಕೆಲಸಕ್ಕೆ ಸಿಗಬಹುದಾದ ಅವಧಿ ಇವೆಲ್ಲವುಗಳನ್ನು ಅನುಲಕ್ಷಿಸಿ ಶಾಲೆಗಾಗಿ ಒಟ್ಟಾರೆ ಒಂದು ಯೋಜನೆಯನ್ನು ತಯಾರಿಸಿಕೊಂಡು ಅದರಲ್ಲಿ ಪ್ರತಿಯೊಂದು ವರ್ಗದವರು ಆಯಾ ತಿಂಗಳಲ್ಲಿ ಸಾಧಿಸಬೇಕಾದ ಗುರಿಗಳನ್ನು ಗೊತ್ತುಪಡಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ ಬೇರೆ ಬೇರೆ ಕ್ರಿಯೆಗಳು ಒಂದನ್ನೊಂದು ಅವಲಂಬಿಸಿ ಸಾಗುತ್ತವೆ. ಕೆಳಗಿನ ವರ್ಗದವರು ತಯಾರಿಸಿದ ನೂಲನ್ನು ಮೇಲಿನ ವರ್ಗದ ಆಸನಗಳ ನೆಯ್ಗೆಯಲ್ಲಿ ಉಪಯೋಗಿಸಿಕೊಳ್ಳಬೇಕಾಗುತ್ತದೆ. ಇಂಥ ಯೋಜನೆಯನ್ನು ತಯಾರಿಸುವಲ್ಲಿ ಉಪಕರಣಗಳ ಎಣಿಕೆ ಮಹತ್ವದ್ದು. ಎಲ್ಲ ವರ್ಗದವರೂ ಮೂಲೋದ್ಯೋಗವನ್ನು ಒಂದೇ ವೇಳೆಗೆ ಇಟ್ಟುಕೊಳ್ಳದೆ ಬೇರೆ ಬೇರೆ ವೇಳೆಯಲ್ಲಿ ಇಟ್ಟುಕೊಂಡದ್ದಾದರೆ ಅವೇ ಉಪಕರಣಗಳನ್ನು ೩-೪ ವರ್ಗದವರು ಉಪಯೋಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ಉಪಕರಣಗಳ ಕೊರತೆಯನ್ನು ಕೆಲ ಮಟ್ಟಿಗೆ ಕಡಿಮೆಮಾಡಬಹುದು.

ಶಾಲೆಯ ಇಡೀ ವರ್ಷದ ನೂಲುವ ಹಾಗೂ ನೆಯ್ಗೆಯ ಯೋಜನೆಯನ್ನು ಸಿದ್ಧಪಡಿಸಿಕೊಂಡ ನಂತರ ಆಯಾ ವರ್ಗದವರು ತಮ್ಮ ವರ್ಗದ ವಾರ್ಷಿಕ ಅಂದಾಜನ್ನು ತಯಾರು ಮಾಡಿಕೊಳ್ಳಬೇಕು. ಹೀಗೆ ಯೋಜನೆಯನ್ನು ತಯಾರಿಸುವಾಗ ಸ್ಥಳೀಯ ಬೇಡಿಕೆಗಳಿಗೆ ಅನುಸರಿಸಿ ಮೇಲಿನ ವರ್ಗದವರು ಉತ್ಪಾದಿಸಬಹುದಾದ ಅರಿವೆ, ಆಸನ ಇತ್ಯಾದಿಗಳನ್ನು ಗಮನಿಸಿ ವರ್ಗದವರು ಅದಕ್ಕನುಗುಣವಾಗುವಂತೆ ತಮ್ಮ ವರ್ಗದ ಅಂದಾಜನ್ನು ತಯಾರಿಸಿಕೊಳ್ಳಬೇಕು.

ಯೋಜನೆಯನ್ನು ತಯಾರಿಸಿದ ನಂತರ ಅದನ್ನು ಕಾರ್ಯಗತ ಮಾಡುವದರಲ್ಲಿಯೇ ಯೋಜನೆಯ ಯಶಸ್ಸು ಅವಲಂಬಿಸಿರುತ್ತದೆ. ಹೊಸ ಅಭ್ಯಾಸ ಪತ್ರಿಕೆಯಲ್ಲಿ ೧ನೆಯ ವರ್ಗಕ್ಕೆ ಮೂಲೋದ್ಯೋಗವನ್ನು ಸೇರ್ಪಡೆ ಮಾಡಿಲ್ಲ. ಮೇಲಿನ ವರ್ಗಗಳ ಮೂಲೋದ್ಯೋಗದ ನಿರೀಕ್ಷಣೆ ಹಾಗೂ ಅವರಿಗೆ ಸಹಾಯ ಮಾಡುವದನ್ನು ಮಾತ್ರ ಇಟ್ಟಿದ್ದಾರೆ. ಇದರ ಲಾಭವನ್ನು ಪಡೆದು ಶಿಕ್ಷಕರು ಬಾಲಕರ ಮನಸ್ಸಿನಲ್ಲಿ ಮೂಲೋದ್ಯೋಗದ ಬಗೆಗೆ ಸರಿಯಾದ ಅಭಿರುಚಿಯನ್ನು ಹುಟ್ಟಿಸಿ ಮೂಲೋದ್ಯೋಗಕ್ಕಾಗಿ ಅವರ ಮನಸ್ಸನ್ನು ಹದಗೊಳಿಸಬೇಕು, ಇಲ್ಲದೆ ಹೋದರೆ ೨ನೆಯ ವರ್ಗಕ್ಕೆ ಹೋದಾಗ ಅವರಿಗೆ ಮೂಲೋದ್ಯೋಗವೊಂದು ತಲೆಭಾರವಾಗುತ್ತದೆ. ಆದ್ದರಿಂದ ೧ನೆಯ ವರ್ಗದಲ್ಲಿ ಅವರಿಗೆ ಮೂಲೋದ್ಯೋಗದ ಬೇರೆ ಬೇರೆ ಕ್ರಿಯೆಗಳ ನಿರೀಕ್ಷಣೆ ಮಾಡಿಸಿ ಕೊನೆಗೆ ತಯಾರಾದ ಅರಿವೆ, ಆಸನ ಇತ್ಯಾದಿ ವಸ್ತುಗಳ ಕಡೆಗೆ ಅವರ ಲಕ್ಷ್ಯವನ್ನೆಳೆಯಬೇಕು. ಆಕರ್ಷಕವಾದ ಈ ವಸ್ತುಗಳು ಸ್ವಾಭಾವಿಕವಾಗಿ ಅವರ ಮನಸ್ಸನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತವೆ. ತಾನೂ ಅಂಥ ವಸ್ತುಗಳನ್ನು ತಯಾರಿಸಬೇಕೆಂಬ ಪ್ರವೃತ್ತಿ ಅವನಲ್ಲಿ ಜಾಗ್ರತವಾಗುತ್ತದೆ. ಈ ಅಭಿಲಾಷೆಯನ್ನು ಸರಿಯಾದ ರೀತಿಯಲ್ಲಿ ಪೋಷಿಸಿ, ಬೆಳಿಸಿ, ಉಳಿಸಿಕೊಂಡು ಹೋದರೆ ಮೂಲೋದ್ಯೋಗವು ಯಶಸ್ವಿಯಾಗುವದರಲ್ಲಿ ಯಾವ ಸಂಶಯವೂ ಇಲ್ಲ.

ಸಾಕಷ್ಟು ಪೂರ್ವ ತಯಾರಿಯನ್ನು ಮಾಡಿದ ನಂತರ, ೨ನೆಯ ವರ್ಗದಲ್ಲಿ ಬಂದ ಬಾಲಕರು ಮೂಲೋದ್ಯೋಗದ ಎಲ್ಲ ಕ್ರಿಯೆಗಳನ್ನು ಮಾಡಬೇಕಾಗುತ್ತದೆ. ಇಂಥ ಕ್ರಿಯೆಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಬಾಲಕರು ಕಳೆದ ವರ್ಷ ಮಾಡಿದ ನಿರೀಕ್ಷಣೆಯ ನೆನಪು ತಂದು

ಕೊಡಬೇಕು. ಬಾಲಕರನ್ನು ಪ್ರತ್ಯಕ್ಷ ಚಟುವಟಿಕೆಯಲ್ಲಿ ತೊಡಗಿಸುವ ಪೂರ್ವದಲ್ಲಿ ವರ್ಗದೊಳಗೆ ಯೋಗ್ಯ ಗುಂಪುಗಳನ್ನು ಮಾಡಿ ಪ್ರತಿಯೊಂದು ಗುಂಪಿನಲ್ಲಿ ಎಲ್ಲ ಮಟ್ಟದ ವಿದ್ಯಾರ್ಥಿಗಳಿರುವಂತೆ ನೋಡಿಕೊಂಡು ಅವರಲ್ಲಿ ಸ್ಪರ್ಧೆಯನ್ನು ಪ್ರಚೋದಿಸಬೇಕು. ಉತ್ತಮ ಕೆಲಸ ಮಾಡಿದ ಬಾಲಕರತ್ತ ವರ್ಗದ ಲಕ್ಷ್ಯವನ್ನೆಳೆಯುತ್ತ ಅವರನ್ನು ಪ್ರೋತ್ಸಾಹಿಸಿದರೆ ಕೆಲಸದಲ್ಲಿ ಸಾಕಷ್ಟು ಪ್ರಗತಿ ಕಂಡು ಬರುತ್ತದೆ. ಮೂಲೋದ್ಯೋಗವು ನಡೆದ ಕಾಲಕ್ಕೆ ಶಿಕ್ಷಕರು ಬಾಲಕರೊಡನೆ ಒಂದುಗೂಡಿ ಕೆಲಸ ಮಾಡಬೇಕು. ಬಾಲಕರನ್ನು ಚಟುವಟಿಕೆಯಲ್ಲಿ ತೊಡಗಿಸಿ ತಾವು ಬೇರೊಂದು ಕೆಲಸದಲ್ಲಿ ತೊಡಗಿದ್ದಾದರೆ ಬಾಲಕರ ಮನಸ್ಸಿನ ಮೇಲೆ ವಿಪರೀತ ಪರಿಣಾಮವಾಗುತ್ತದೆ. ಆದ್ದರಿಂದ ಶಿಕ್ಷಕರು ಬಾಲಕರೊಡನೆ ಮೂಲೋದ್ಯೋಗವನ್ನು ಮಾಡುತ್ತ ಮಾರ್ಗದರ್ಶನ ಮಾಡಬೇಕು.

ಮೂಲೋದ್ಯೋಗವು ಸುಗಮವಾಗಿ ಸಾಗಬೇಕಾದರೆ ಪ್ರಾರಂಭದ ಎಲ್ಲ ಚಟುವಟಿಕೆಗಳ ಕಡೆಗೆ ನಾವು ಪೂರ್ಣ ಲಕ್ಷ್ಯ ಪೂರೈಸಬೇಕಾಗುತ್ತದೆ. ಬಾಲಕರು ಉತ್ತಮ ಹಂಜಿಗಳನ್ನು ತಯಾರಿಸಿಕೊಂಡರೆ ಮುಕ್ಕಾಲು ಪಾಲು ಕೆಲಸವನ್ನು ಯಶಸ್ವಿ ರೀತಿಯಿಂದ ಪೂರೈಸಿದಂತಾಗುತ್ತದೆ. ಉತ್ತಮ ಹತ್ತಿಯನ್ನು ಬಿಡಿಸಿ ತಂದನಂತರ ಅದನ್ನು ಪೂರ್ತಿಯಾಗಿ ಒಣಗಿಸಿ ಅದರಲ್ಲಿಯ ಕಸರನ್ನು ತಂತುಗಳಿಗೆ ದಕ್ಕೆಯಾಗದಂತೆ ಬೇರ್ಪಡಿಸಿ ಅರೆಯಬೇಕು. ಅರೆದ ನಂತರ ಅರಳೆಯನ್ನು ತಿಳಿಯಾಗಿ ಹಿಂಜಬೇಕು. ಹಿಂಜುವಾಗ ತಂತುಗಳಿಗೆ ಹೆಚ್ಚು ಪೆಟ್ಟು ತಗಲದಂತೆಯೂ ಹಾಗೂ ಗಂಟುಗಳುಳಿಯದಂತೆಯೂ ನೋಡಿಕೊಳ್ಳಬೇಕು. ಆಣೆ ತೂಕದ ಹಿಂಜಿದ ಅರಳೆಯನ್ನು ತೆಗೆದುಕೊಂಡು ಮಣೆಯ ಮೇಲೆ ಸಮನಾಗಿ ಹರಡಿ, ತಂತುವಿನಗಿಂತಲೂ ಸ್ವಲ್ಪೇ ದೊಡ್ಡದಾದ ವ್ಯಾಸವುಳ್ಳ ಹಂಜಿಯ ಕಡ್ಡಿಯಿಂದ ಹಂಜಿಗಳನ್ನು ತಯಾರಿಸಬೇಕು. ಹೀಗೆ ತಯಾರಿಸಿದ ಹಂಜಿಗಳನ್ನು ಹಂಜೀ ರಕ್ಷಕಗಳಲ್ಲಿ ಸಂಗ್ರಹಿಸಿ ಗಾಳಿ ತಗಲದಂತೆ ಇಟ್ಟುಕೊಳ್ಳಬೇಕು. ಮಳೆಗಾಲಕ್ಕೆ ಬೇಕಾಗಬಹುದಾದ ಹಂಜಿಗಳನ್ನು ಮುಂಚಿತವಾಗಿ ತಯಾರಿಸಿ ಇಟ್ಟುಕೊಳ್ಳುವದು ಉತ್ತಮ.

ನೂಲುವ ಮೊದಲನೆಯ ಪಾಠವನ್ನು ಪ್ರಾರಂಭಿಸುವಾಗ ಹೆಚ್ಚು ಕಾಳಜಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಮೊದಲನೆಯ ದಿನ ಅವರಿಗೆ ಬೆರಳುಗಳಿಂದ ತಕಲಿಯನ್ನು ತಿರುಗಿಸುವ ರೂಢಿ ಮಾಡಿಸಬೇಕಾಗುತ್ತದೆ. ಅದರ ರೂಢಿ ಸಾಕಷ್ಟಾದ ನಂತರ ಪ್ರತ್ಯಕ್ಷ ನೂಲುವ ಕ್ರಿಯೆ ಪ್ರಾರಂಭವಾಗುವದು. ನೂಲುವಾಗ ಎರಡೂ ಕೈಗಳ ಸ್ನಾಯುಗಳು ಬೇರೆ ಬೇರೆ ಕೆಲಸ ಮಾಡಬೇಕಾಗಿ ಬರುತ್ತದೆ. ಬಲಗೈಯಿಂದ ತಕಲಿಯು ತಿರುವುವದನ್ನೂ ಎಡಗೈಯಿಂದ ಹಂಜಿಯನ್ನೆಳೆಯುವದನ್ನೂ ಮಾಡಬೇಕಾಗುತ್ತದೆ. ಎರಡೂ ಕೈಗಳ ಸ್ನಾಯುಗಳಲ್ಲಿ ಸರಿಯಾದ ಸಾಮರಸ್ಯವೇರ್ಪಟ್ಟಿದ್ದರೆ ಮಾತ್ರ ಈ ಕೆಲಸ ಸುಲಭಸಾಧ್ಯವಾಗುತ್ತದೆ. ಅದನ್ನು ತಂದುಕೊಡಲು ತಕಲಿಗೆ ಕೈಯಳೆಯನ್ನು ಹಚ್ಚಿದ ನಂತರ ಮೊದಲು ತಕಲಿಯನ್ನು ತಿರುವಿ ಕೈಯೆಳೆಗೆ ಹುರಿಕೊಟ್ಟು ನಂತರ ಹಂಜಿಯ ಕೈಯನ್ನು ಮೇಲಕ್ಕೆಳೆಯಬೇಕು. ಈ ರೀತಿಯಾಗಿ ಸ್ನಾಯುಗಳಲ್ಲಿ ಸಾಮರಸ್ಯ ಏರ್ಪಟ್ಟ ನಂತರ ಮುಂದೆ ಮಕ್ಕಳು ಸುಲಭವಾಗಿ ನೂಲ ಬಲ್ಲರು. ಪ್ರಾರಂಭದ ದಿಸೆಯಲ್ಲಿ ಮಕ್ಕಳ ಮನಸ್ಸು ತರಗತಿಗಿಂತ ಉತ್ಪಾದನೆಯತ್ತ ಹರಿಯುವದು ಸ್ವಾಭಾವಿಕ. ಆಗ ಶಿಕ್ಷಕರು ಉತ್ತಮ ಕೃತಿಗೆ ಪ್ರೋತ್ಸಾಹನೆ ಕೊಡುತ್ತ ಅವರ ಮನಸ್ಸನ್ನು ಆ ದಿಸೆಯಲ್ಲಿ ಸೆಳೆದರೆ ಹಾಳಿನ ಪ್ರಮಾಣವನ್ನು ಕಡಿಮೆ ಮಾಡಿ ಉತ್ತಮ ನೂಲನ್ನು ತಯಾರಿಸಬಹುದು.

ನೂಲಲು ತೊಡಗಿದಾಗ ಬಾಲಕರು ಕೇವಲ ಉತ್ಪಾದನೆಯೊಂದನ್ನೇ ಗುರಿಯಾಗಿಟ್ಟುಕೊಳ್ಳದೆ ಅದರ ಸಂಗಡ ಶಕ್ತಿ ಸಮಾನತೆ ಹಾಗೂ ನೂಲಿನ ನಂಬರನ್ನು ಗಮನದಲ್ಲಿ ತಂದುಕೊಳ್ಳಬೇಕು. ನೂಲುವಾಗ ಬಾಲಕರು ಬೇರೆ ಬೇರೆ ನಂಬರಿನ ನೂಲನ್ನು ತೆಗೆಯುವದು ಸ್ವಾಭಾವಿಕ, ಆದರೆ ಪ್ರಾರಂಭದಲ್ಲಿಯೇ ಶಿಕ್ಷಕರು ಆ ದಿಸೆಯಲ್ಲಿ ಲಕ್ಷ್ಯಪೂರೈಸಿದ್ದಾದರೆ ಸಾಧಾರಣವಾಗಿ ಎಲ್ಲ ವಿದ್ಯಾರ್ಥಿಗಳು ಸ್ವಲ್ಪ ಹೆಚ್ಚುಕಡಿಮೆ ಒಂದೇ ನಂಬರಿನ ನೂಲನ್ನು ತೆಗೆಯಲು ಸಾಧ್ಯವಾಗುತ್ತದೆ. ಮಕ್ಕಳು ನೂಲವ ಕಲೆಯನ್ನು ಯಾಂತ್ರಿಕವಾಗಿ ಅಳವಡಿಕೊಳ್ಳದೆ ತಮ್ಮ ಬೇಡಿಕೆಗಳಿಗೆ ಅನುಕೂಲವಾಗಿ ಉತ್ಪಾದಿಸುವ ತಾಂತ್ರಿಕ ಕುಶಲತೆಯನ್ನು ಪಡೆಯುವಂತೆ ನೋಡಿಕೊಳ್ಳಬೇಕು. ಈ ತರದ ನೈಪುಣ್ಯವನ್ನು ಬಾಲಕರು ಪಡೆಯುವದರಿಂದ ಮುಂದೆ ನೆಯ್ಗೆಯ ಕಾಲಕ್ಕೆ ಹೆಚ್ಚು ಅನುಕೂಲವಾಗುತ್ತವೆ. ಏಕೆಂದರೆ ಯಾವುದೊಂದು ನೆಯ್ಗೆಗೆ ಬೇಕಾಗುವ ವಿಶಿಷ್ಟ ನಂಬರಿನ ನೂಲನ್ನು ಬಾಲಕರು ಸುಲಭವಾಗಿ ತೆಗೆಯಲು ಸಮರ್ಥರಾಗುತ್ತಾರೆ.

ಲಕ್ಷ್ಮೀಹತ್ತಿಯನ್ನು ಬೆಳೆಯುವದುಂಟು. ಇದರಿಂದ ಉತ್ತಮ ಜಯಧರ ಹತ್ತಿಯನ್ನು ಸಂಗ್ರಹಿಸಲು ತೊಂದರೆಯುಂಟಾಗುತ್ತದೆ. ಜಯಧರ ಹತ್ತಿ ಬೆಳೆಯುವ ಕ್ಷೇತ್ರದಲ್ಲಿಯ ಶಾಲೆಯವರು ತಮ್ಮ ಶಾಲೆಗೆ ಬೇಕಾಗುವ ಹತ್ತಿಯನ್ನು ತಾವೇ ಬಿಡಿಸಿ ತರುವದು ಉತ್ತಮ. ಇದಕ್ಕೆ ಪಾಲಕರ ಹಾಗೂ ಹೊಲದೊಡೆಯರ ಸಹಕಾರ ಸಿಗುವದಿಲ್ಲೆಂಬ ಕೂಗು ಕೇಳಿಬರುತ್ತದೆ. ಅವರಿಗೆ ನಿಮ್ಮ ಕೆಲಸದ ಉದ್ದೇಶದ ಬಗೆಗೆ ಸರಿಯಾದ ತಿಳುವಳಿಕೆ ಕೊಟ್ಟಲ್ಲಿ ಆ ತೊಂದರೆ ಸುಲಭವಾಗಿ ನಿವಾರಣೆಯಾಗುವದೆಂಬುದರ ಬಗೆಗೆ ಸಾಕಷ್ಟು ಉದಾಹರಣೆಗಳಿವೆ.– ಕಳೆದವರ್ಷ ಎಷ್ಟೋ ಶಾಲೆಯವರು ತಮಗೆ ಬೇಕಾಗುವ ಹತ್ತಿಯನ್ನು ತಾವೇ ಸಂಗ್ರಹಿಸಿದ್ದುಂಟು. ಜಯಧರ ಹತ್ತಿ ಬೆಳೆಯದ ಕ್ಷೇತ್ರದವರು ಸಮೀಪದ ಜಯಧರ ಹತ್ತಿ ಬೆಳೆಯುವ ಕ್ಷೇತ್ರದ ಶಾಲೆಯವರೊಂದಿಗೆ ಸಂಪರ್ಕವಿಟ್ಟುಕೊಂಡು ಅಲ್ಲಿಂದ ಹತ್ತಿಯನ್ನು ತಂದುಕೊಳ್ಳುವದು ವಿಹಿತ.

ಉತ್ತಮ ಹತ್ತಿಯನ್ನು ಸಂಗ್ರಹಿಸಿದ ನಂತರ ಮೂಲೋದ್ಯೋಗವನ್ನು ಪ್ರಾರಂಭಿಸುವ ಪೂರ್ವದಲ್ಲಿ ಯೋಜನೆಯನ್ನು ಮಾಡಿಕೊಳ್ಳುವದು ಅತ್ಯಂತ ಮಹತ್ವದ್ದು. ಮೂಲೋದ್ಯೋಗವು ಯಾಂತ್ರಿಕವಾಗಿ ನಡೆಯದೆ ಉದ್ದೇಶವನ್ನಿಟ್ಟುಕೊಂಡು ಸಾಗಬೇಕು. ಮೊದಲನೆಯದಾಗಿ ಶಾಲೆಯಲ್ಲಿರುವ ಮೂಲೋದ್ಯೋಗದ ಉಪಕರಣ, ಮಕ್ಕಳ ಸಂಖ್ಯೆ, ಕೆಲಸಕ್ಕೆ ಸಿಗಬಹುದಾದ ಅವಧಿ ಇವೆಲ್ಲವುಗಳನ್ನು ಅನುಲಕ್ಷಿಸಿ ಶಾಲೆಗಾಗಿ ಒಟ್ಟಾರೆ ಒಂದು ಯೋಜನೆಯನ್ನು ತಯಾರಿಸಿಕೊಂಡು ಅದರಲ್ಲಿ ಪ್ರತಿಯೊಂದು ವರ್ಗದವರು ಆಯಾ ತಿಂಗಳಲ್ಲಿ ಸಾಧಿಸಬೇಕಾದ ಗುರಿಗಳನ್ನು ಗೊತ್ತುಪಡಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ ಬೇರೆ ಬೇರೆ ಕ್ರಿಯೆಗಳು ಒಂದನ್ನೊಂದು ಅವಲಂಬಿಸಿ ಸಾಗುತ್ತವೆ. ಕೆಳಗಿನ ವರ್ಗದವರು ತಯಾರಿಸಿದ ನೂಲನ್ನು ಮೇಲಿನ ವರ್ಗದ ಆಸನಗಳ ನೆಯ್ಗೆಯಲ್ಲಿ ಉಪಯೋಗಿಸಿಕೊಳ್ಳಬೇಕಾಗುತ್ತದೆ. ಇಂಥ ಯೋಜನೆಯನ್ನು ತಯಾರಿಸುವಲ್ಲಿ ಉಪಕರಣಗಳ ಎಣಿಕೆ ಮಹತ್ವದ್ದು. ಎಲ್ಲ ವರ್ಗದವರೂ ಮೂಲೋದ್ಯೋಗವನ್ನು ಒಂದೇ ವೇಳೆಗೆ ಇಟ್ಟುಕೊಳ್ಳದೆ ಬೇರೆ ಬೇರೆ ವೇಳೆಯಲ್ಲಿ ಇಟ್ಟುಕೊಂಡದ್ದಾದರೆ ಅವೇ ಉಪಕರಣಗಳನ್ನು ೨–೩ ವರ್ಗದವರು ಉಪಯೋಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ಉಪಕರಣಗಳ ಕೊರತೆಯನ್ನು ಕೆಲ ಮಟ್ಟಿಗೆ ಕಡಿಮೆಮಾಡಬಹುದು.

ಶಾಲೆಯ ಇಡೀ ವರ್ಷದ ನೂಲುವ ಹಾಗೂ ನೆಯ್ಗೆಯ ಯೋಜನೆಯನ್ನು ಸಿದ್ಧಪಡಿಸಿಕೊಂಡ ನಂತರ ಆಯಾ ವರ್ಗದವರು ತಮ್ಮ ವರ್ಗದ ವಾರ್ಷಿಕ ಅಂದಾಜನ್ನು ತಯಾರು ಮಾಡಿಕೊಳ್ಳಬೇಕು. ಹೀಗೆ ಯೋಜನೆಯನ್ನು ತಯಾರಿಸುವಾಗ ಸ್ಥಳೀಯ ಬೇಡಿಕೆಗಳಿಗೆ ಅನುಸರಿಸಿ ಮೇಲಿನ ವರ್ಗದವರು ಉತ್ಪಾದಿಸಬಹುದಾದ ಅರಿವೆ, ಆಸನ ಇತ್ಯಾದಿಗಳನ್ನು ಗಮನಿಸಿ ವರ್ಗದವರು ಅದಕ್ಕನುಗುಣವಾಗುವಂತೆ ತಮ್ಮ ವರ್ಗದ ಅಂದಾಜನ್ನು ತಯಾರಿಸಿಕೊಳ್ಳಬೇಕು.

ಯೋಜನೆಯನ್ನು ತಯಾರಿಸಿದ ನಂತರ ಅದನ್ನು ಕಾರ್ಯಗತ ಮಾಡುವದರಲ್ಲಿಯೇ ಯೋಜನೆಯ ಯಶಸ್ಸು ಅವಲಂಬಿಸಿರುತ್ತದೆ. ಹೊಸ ಅಭ್ಯಾಸ ಪತ್ರಿಕೆಯಲ್ಲಿ ೧ನೆಯ ವರ್ಗಕ್ಕೆ ಮೂಲೋದ್ಯೋಗವನ್ನು ಸೇರ್ಪಡೆ ಮಾಡಿಲ್ಲ. ಮೇಲಿನ ವರ್ಗಗಳ ಮೂಲೋದ್ಯೋಗದ ನಿರೀಕ್ಷಣೆ ಹಾಗೂ ಅವರಿಗೆ ಸಹಾಯ ಮಾಡುವದನ್ನು ಮಾತ್ರ ಇಟ್ಟಿದ್ದಾರೆ. ಇದರ ಲಾಭವನ್ನು ಪಡೆದು ಶಿಕ್ಷಕರು ಬಾಲಕರ ಮನಸ್ಸಿನಲ್ಲಿ ಮೂಲೋದ್ಯೋಗದ ಬಗೆಗೆ ಸರಿಯಾದ ಅಭಿರುಚಿಯನ್ನು ಹುಟ್ಟಿಸಿ ಮೂಲೋದ್ಯೋಗಕ್ಕಾಗಿ ಅವರ ಮನಸ್ಸನ್ನು ಹದಗೊಳಿಸಬೇಕು, ಇಲ್ಲದೆ ಹೋದರೆ ೨ನೆಯ ವರ್ಗಕ್ಕೆ ಹೋದಾಗ ಅವರಿಗೆ ಮೂಲೋದ್ಯೋಗವೊಂದು ತಲೆಭಾರವಾಗುತ್ತದೆ. ಆದ್ದರಿಂದ ೧ನೆಯ ವರ್ಗದಲ್ಲಿ ಅವರಿಗೆ ಮೂಲೋದ್ಯೋಗದ ಬೇರೆ ಬೇರೆ ಕ್ರಿಯೆಗಳ ನಿರೀಕ್ಷಣೆ ಮಾಡಿಸಿ ಕೊನೆಗೆ ತಯಾರಾದ ಅರಿವೆ, ಆಸನ ಇತ್ಯಾದಿ ವಸ್ತುಗಳ ಕಡೆಗೆ ಅವರ ಲಕ್ಷ್ಯವನ್ನೆಳೆಯಬೇಕು. ಆಕರ್ಷಕವಾದ ಈ ವಸ್ತುಗಳು 'ಸ್ವಾಭಾವಿಕವಾಗಿ ಅವರ ಮನಸ್ಸನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತವೆ. ತಾನೂ ಅಂಥ ವಸ್ತುಗಳನ್ನು ತಯಾರಿಸಬೇಕೆಂಬ ಪ್ರವೃತ್ತಿ ಅವನಲ್ಲಿ ಜಾಗ್ರತವಾಗುತ್ತದೆ. ಈ ಅಭಿಲಾಷೆಯನ್ನು ಸರಿಯಾದ ರೀತಿಯಲ್ಲಿ ಪೋಷಿಸಿ, ಬೆಳೆಸಿ, ಉಳಿಸಿಕೊಂಡು ಹೋದರೆ ಮೂಲೋದ್ಯೋಗವು ಯಶಸ್ವಿಯಾಗುವದರಲ್ಲಿ ಯಾವ ಸಂಶಯವೂ ಇಲ್ಲ.

ಸಾಕಷ್ಟು ಪೂರ್ವ ತಯಾರಿಯನ್ನು ಮಾಡಿದ ನಂತರ, ೨ನೆಯ ವರ್ಗದಲ್ಲಿ ಬಂದ ಬಾಲಕರು ಮೂಲೋದ್ಯೋಗದ ಎಲ್ಲ ಕ್ರಿಯೆಗಳನ್ನು ಮಾಡಬೇಕಾಗುತ್ತದೆ. ಇಂಥ ಕ್ರಿಯೆಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಬಾಲಕರು ಕಳೆದ ವರ್ಷ ಮಾಡಿದ ನಿರೀಕ್ಷಣೆಯ ನೆನಪು ತಂದು

ಕೊಡಬೇಕು. ಬಾಲಕರನ್ನು ಪ್ರತ್ಯಕ್ಷ ಚಟುವಟಿಕೆಯಲ್ಲಿ ತೊಡಗಿಸುವ ಪೂರ್ವದಲ್ಲಿ ವರ್ಗದೊಳಗೆ ಯೋಗ್ಯ ಗುಂಪುಗಳನ್ನು ಮಾಡಿ ಪ್ರತಿಯೊಂದು ಗುಂಪಿನಲ್ಲಿ ಎಲ್ಲ ಮಟ್ಟದ ವಿದ್ಯಾರ್ಥಿಗಳಿರುವಂತೆ ನೋಡಿಕೊಂಡು ಅವರಲ್ಲಿ ಸ್ಪರ್ಧೆಯನ್ನು ಪ್ರಚೋದಿಸಬೇಕು. ಉತ್ತಮ ಕೆಲಸ ಮಾಡಿದ ಬಾಲಕರತ್ತ ವರ್ಗದ ಲಕ್ಷ್ಯವನ್ನೆಳೆಯುತ್ತ ಅವರನ್ನು ಪ್ರೋತ್ಸಾಹಿಸಿದರೆ ಕೆಲಸದಲ್ಲಿ ಸಾಕಷ್ಟು ಪ್ರಗತಿ ಕಂಡು ಬರುತ್ತದೆ. ಮೂಲೋದ್ಯೋಗವು ನಡೆದ ಕಾಲಕ್ಕೆ ಶಿಕ್ಷಕರು ಬಾಲಕರೊಡನೆ ಒಂದುಗೂಡಿ ಕೆಲಸ ಮಾಡಬೇಕು. ಬಾಲಕರನ್ನು ಚಟುವಟಿಕೆಯಲ್ಲಿ ತೊಡಗಿಸಿ ತಾವು ಬೇರೊಂದು ಕೆಲಸದಲ್ಲಿ ತೊಡಗಿದ್ದಾದರೆ ಬಾಲಕರ ಮನಸ್ಸಿನ ಮೇಲೆ ವಿಪರೀತ ಪರಿಣಾಮವಾಗುತ್ತದೆ. ಆದ್ದರಿಂದ ಶಿಕ್ಷಕರು ಬಾಲಕರೊಡನೆ ಮೂಲೋದ್ಯೋಗವನ್ನು ಮಾಡುತ್ತ ಮಾರ್ಗದರ್ಶನ ಮಾಡಬೇಕು.

ಮೂಲೋದ್ಯೋಗವು ಸುಗಮವಾಗಿ ಸಾಗಬೇಕಾದರೆ ಪ್ರಾರಂಭದ ಎಲ್ಲ ಚಟುವಟಿಕೆಗಳ ಕಡೆಗೆ ನಾವು ಪೂರ್ಣ ಲಕ್ಷ್ಯ ಪೂರೈಸಬೇಕಾಗುತ್ತದೆ. ಬಾಲಕರು ಉತ್ತಮ ಹಂಜಿಗಳನ್ನು ತಯಾರಿಸಿಕೊಂಡರೆ ಮುಕ್ಕಾಲು ಪಾಲು ಕೆಲಸವನ್ನು ಯಶಸ್ವಿ ರೀತಿಯಿಂದ ಪೂರೈಸಿದಂತಾಗುತ್ತದೆ. ಉತ್ತಮ ಹತ್ತಿಯನ್ನು ಬಿಡಿಸಿ ತಂದನಂತರ ಅದನ್ನು ಪೂರ್ತಿಯಾಗಿ ಒಣಗಿಸಿ ಅದರಲ್ಲಿಯ ಕಸರನ್ನು ತಂತುಗಳಿಗೆ ಧಕ್ಕೆಯಾಗದಂತೆ ಬೇರ್ಪಡಿಸಿ ಅರೆಯಬೇಕು. ಅರೆದ ನಂತರ ಅರಳೆಯನ್ನು ತಿಳಿಯಾಗಿ ಹಿಂಜಬೇಕು. ಹಿಂಜುವಾಗ ತಂತುಗಳಿಗೆ ಹೆಚ್ಚು ಪೆಟ್ಟು ತಗಲದಂತೆಯೂ ಹಾಗೂ ಗಂಟುಗಳುಳಿಯದಂತೆಯೂ ನೋಡಿಕೊಳ್ಳಬೇಕು. ಆಣೆ ತೂಕದ ಹಿಂಜಿದ ಅರಳೆಯನ್ನು ತೆಗೆದುಕೊಂಡು ಮಣೆಯ ಮೇಲೆ ಸವನಾಗಿ ಹರಡಿ, ತಂತುವಿನಗಿಂತಲೂ ಸ್ವಲ್ಪೇ ದೊಡ್ಡದಾದ ವ್ಯಾಸವುಳ್ಳ ಹಂಜಿಯ ಕಡ್ಡಿಯಿಂದ ಹಂಜಿಗಳನ್ನು ತಯಾರಿಸಬೇಕು. ಹೀಗೆ ತಯಾರಿಸಿದ ಹಂಜಿಗಳನ್ನು ಹಂಜೀ ರಕ್ಷಕಗಳಲ್ಲಿ ಸಂಗ್ರಹಿಸಿ ಗಾಳಿ ತಗಲದಂತೆ ಇಟ್ಟುಕೊಳ್ಳಬೇಕು. ಮಳೆಗಾಲಕ್ಕೆ ಬೇಕಾಗಬಹುದಾದ ಹಂಜಿಗಳನ್ನು ಮುಂಚಿತವಾಗಿ ತಯಾರಿಸಿ ಇಟ್ಟುಕೊಳ್ಳುವದು ಉತ್ತಮ.

ನೂಲುವ ಮೊದಲನೆಯ ಪಾಠವನ್ನು ಪ್ರಾರಂಭಿಸುವಾಗ ಹೆಚ್ಚು ಕಾಳಜಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಮೊದಲನೆಯ ದಿನ ಅವರಿಗೆ ಬೆರಳುಗಳಿಂದ ತಕಲಿಯನ್ನು ತಿರುಗಿಸುವ ರೂಢಿ ಮಾಡಿಸಬೇಕಾಗುತ್ತದೆ. ಅದರ ರೂಢಿ ಸಾಕಷ್ಟಾದ ನಂತರ ಪ್ರತ್ಯಕ್ಷ ನೂಲುವ ಕ್ರಿಯೆ ಪ್ರಾರಂಭವಾಗುವದು. ನೂಲುವಾಗ ಎರಡೂ ಕೈಗಳ ಸ್ನಾಯುಗಳು ಬೇರೆ ಬೇರೆ ಕೆಲಸ ಮಾಡಬೇಕಾಗಿ ಬರುತ್ತದೆ. ಬಲಗೈಯಿಂದ ತಕಲಿಯ ತಿರುವುವದನ್ನೂ ಎಡಗೈಯಿಂದ ಹಂಜಿಯನ್ನೆಳೆಯುವದನ್ನೂ ಮಾಡಬೇಕಾಗುತ್ತದೆ. ಎರಡೂ ಕೈಗಳ ಸ್ನಾಯುಗಳಲ್ಲಿ ಸರಿಯಾದ ಸಾಮರಸ್ಯವೇರ್ಪಟ್ಟಿದ್ದರೆ ಮಾತ್ರ ಈ ಕೆಲಸ ಸುಲಭ ಸಾಧ್ಯವಾಗುತ್ತದೆ. ಅದನ್ನು ತಂದುಕೊಡಲು ತಕಲಿಗೆ ಕೈಯುಳಿಯನ್ನು ಹಚ್ಚಿದ ನಂತರ ಮೊದಲು ತಕಲಿಯನ್ನು ತಿರುವಿ ಕೈಯೊಳಗೆ ಹುರಿಕೊಟ್ಟು ನಂತರ ಹಂಜಿಯ ಕೈಯನ್ನು ಮೇಲಕ್ಕೆಳೆಯಬೇಕು. ಈ ರೀತಿಯಾಗಿ ಸ್ನಾಯುಗಳಲ್ಲಿ ಸಾಮರಸ್ಯ ಏರ್ಪಟ್ಟ ನಂತರ ಮುಂದೆ ಮಕ್ಕಳು ಸುಲಭವಾಗಿ ನೂಲ ಬಲ್ಲರು. ಪ್ರಾರಂಭದ ದಿಸೆಯಲ್ಲಿ ಮಕ್ಕಳ ಮನಸ್ಸು ತರಗತಿಗಿಂತ ಉತ್ಪಾದನೆಯತ್ತ ಹರಿಯುವದು ಸ್ವಾಭಾವಿಕ. ಆಗ ಶಿಕ್ಷಕರು ಉತ್ತಮ ಕೃತಿಗೆ ಪ್ರೋತ್ಸಾಹನೆ ಕೊಡುತ್ತ ಅವರ ಮನಸ್ಸನ್ನು ಆ ದಿಸೆಯಲ್ಲಿ ಸೆಳೆದರೆ ಹಾಳಿನ ಪ್ರಮಾಣವನ್ನು ಕಡಿಮೆ ಮಾಡಿ ಉತ್ತಮ ನೂಲನ್ನು ತಯಾರಿಸಬಹುದು.

ನೂಲಲು ತೊಡಗಿದಾಗ ಬಾಲಕರು ಕೇವಲ ಉತ್ಪಾದನೆಯೊಂದನ್ನೇ ಗುರಿಯಾಗಿಟ್ಟುಕೊಳ್ಳದೆ ಅದರ ಸಂಗಡ ಶಕ್ತಿ ಸಮಾನತೆ ಹಾಗೂ ನೂಲಿನ ನಂಬರನ್ನು ಗಮನದಲ್ಲಿ ತಂದುಕೊಳ್ಳಬೇಕು. ನೂಲುವಾಗ ಬಾಲಕರು ಬೇರೆ ಬೇರೆ ನಂಬರಿನ ನೂಲನ್ನು ತೆಗೆಯುವದು ಸ್ವಾಭಾವಿಕ, ಆದರೆ ಪ್ರಾರಂಭದಲ್ಲಿಯೇ ಶಿಕ್ಷಕರು ಆ ದಿಸೆಯಲ್ಲಿ ಲಕ್ಷ್ಯಪೂರೈಸಿದ್ದಾದರೆ ಸಾಧಾರಣವಾಗಿ ಎಲ್ಲ ವಿದ್ಯಾರ್ಥಿಗಳು ಸ್ವಲ್ಪ ಹೆಚ್ಚುಕಡಿಮೆ ಒಂದೇ ನಂಬರಿನ ನೂಲನ್ನು ತೆಗೆಯಲು ಸಾಧ್ಯವಾಗುತ್ತದೆ. ಮಕ್ಕಳು ನೂಲವ ಕಲೆಯನ್ನು ಯಾಂತ್ರಿಕವಾಗಿ ಅಳವಡಿಕೊಳ್ಳದೆ ತಮ್ಮ ಬೇಡಿಕೆಗಳಿಗೆ ಅನುಕೂಲವಾಗಿ ಉತ್ಪಾದಿಸುವ ತಾಂತ್ರಿಕ ಕುಶಲತೆಯನ್ನು ಪಡೆಯುವಂತೆ ನೋಡಿಕೊಳ್ಳಬೇಕು. ಈ ತರದ ನೈಪುಣ್ಯವನ್ನು ಬಾಲಕರು ಪಡೆಯುವದರಿಂದ ಮುಂದೆ ನೆಯ್ಗೆಯ ಕಾಲಕ್ಕೆ ಹೆಚ್ಚು ಅನುಕೂಲವಾಗುತ್ತವೆ. ಏಕೆಂದರೆ ಯಾವುದೊಂದು ನೆಯ್ಗೆಗೆ ಬೇಕಾಗುವ ವಿಶಿಷ್ಟ ನಂಬರಿನ ನೂಲನ್ನು ಬಾಲಕರು ಸುಲಭವಾಗಿ ತೆಗೆಯಲು ಸಮರ್ಥರಾಗುತ್ತಾರೆ.

ನೂಲನ್ನು ತಯಾರಿಸಿದ ನಂತರ ಅದರ ನಂಬರನ್ನು ತೆಗೆದು ವರ್ಗೀಕರಣ ಮಾಡಿ ಕಾಯ್ದಿಡುವದು ಉತ್ತಮ. ಅಂದರೆ ಮುಂದೆ ನೆಯ್ಗೆಯ ಕಾಲಕ್ಕೆ ನೂಲನ್ನು ತೆಗೆದುಕೊಳ್ಳಲು ಅನುಕೂಲವಾಗುತ್ತದೆ. ನೂಲುವಾಗ ಪ್ರತಿಯೊಬ್ಬ ವಿದ್ಯಾರ್ಥಿಗೆ ಮೂರು ತಕಲಿ ಇಲ್ಲವೇ ಕದಿರುಗಳನ್ನು ಕೊಟ್ಟು ಹುರಿನೂಲನ್ನೇ ತೆಗೆದುಕೊಳ್ಳುವದು ನೆಟ್ಟಗೆ. ಹೀಗೆ ಮಾಡುವದರಿಂದ ಒಂದೇ ನಂಬರಿನ ಹುರಿನೂಲು ದೊರೆಯುತ್ತದಲ್ಲದೆ ಅನಂತರದ ಕ್ರಿಯೆಗಳಲ್ಲಿ ಆಗಬಹುದಾದ ಹಾಳಿನ ಪ್ರಮಾಣ ಕಡಿಮೆಯಾಗುತ್ತದೆ. ನೂಲುವಾಗ ಇಲ್ಲವೇ ಹುರಿಹಾಕುವಾಗ ತಮಗೆ ಮುಂದೆ ನೆಯ್ಗೆಗೆ ಬೇಕಾಗಬಹುದಾದ ನಂಬರಿನ ನೂಲನ್ನೇ ತಯಾರಿಸುವಂತೆಯೂ ಬೇಕಾದಷ್ಟನ್ನೇ ತಯಾರಿಸುವಂತೆಯೂ ನೋಡಿಕೊಳ್ಳಬೇಕು. ಯೋಜನೆಯು ಸರಿಯಾಗಿ ತಯಾರಿಸಲ್ಪಟ್ಟಲ್ಲಿ ಈ ತೆರನಾದ ಸಾಮರಸ್ಯ ಕಂಡುಬರುತ್ತದೆ. ಹೀಗೆ ಮಾಡುವದರಿಂದ ನೂಲು ಹೆಚ್ಚಾಗಿ ಶಿಲ್ಕು ಉಳಿದು ಹಾಳಾಗುವದು ಕಡಿಮೆಯಾಗುತ್ತದೆ.

ಮೂಲೋದ್ಯೋಗದ ಯಶಸ್ಸು ಉತ್ತಮಾರ್ಥವಾದ ನೆಯ್ಗೆಯ ಮೇಲೆಯೇ ಅವಲಂಬಿಸಿರುತ್ತದೆ. ಉತ್ತಮ ಮಧ್ಯಮ ಹಾಗೂ ಕನಿಷ್ಠ ನೂಲನ್ನು ಹಾಸು ಹೊಕ್ಕುಗಳಲ್ಲಿ ಜಾಣ್ಮೆಯಿಂದ ಅಣಿಗೊಳಿಸಿ ಆಕರ್ಷಕವಾದ ಪಕ್ಕಾ ಮಾಲನ್ನು ತಯಾರಿಸುವದರಲ್ಲಿಯೇ ಮೂಲೋದ್ಯೋಗದ ಯಶಾಪಯಶಗಳು ಅಡಗಿರುತ್ತವೆ. ತಟ್ಟಿನ ನಂಬರಿಗೆ ಸರಿಹೋಗುವ ನೂಲನ್ನು ಹಾಸಿಗಾಗಿ ಉಪಯೋಗಿಸುವದರಿಂದ ಉತ್ತಮ ಅರಿವೆಯನ್ನು ತಯಾರಿಸಲು ಅನುಕೂಲವಾಗುತ್ತದೆ. ಹಾಸಿಗಾಗಿ ತೆಗೆದು ಕೊಂಡಂತೆ ಹೊಕ್ಕಿಗಾದರೂ ಸಾಧಾರಣವಾಗಿ ಒಂದೇ ನಂಬರಿನ ನೂಲನ್ನು ಆಯ್ದುಕೊಳ್ಳುವಂತೆ ನೋಡಿಕೊಳ್ಳಬೇಕು. ಹಾಗೂ ನೆಯ್ಗೆ ಒಂದೇ ತೆರನಾಗಿ ಆಗುವಂತೆ ದಕ್ಷತೆ ವಹಿಸಬೇಕು. ಪ್ರತಿಸಲಕ್ಕೆ ೯ ರಿಂದ ೧೨ ವಾರದ ಹಾಸನ್ನು ಹಾಕುವದು ನೆಟ್ಟಗೆ. ಇದರಿಂದ ಹಾಳಿನ ಪ್ರಮಾಣ ಕಡಿಮೆಯಾಗುತ್ತದೆ. ಹಾಳಿನ ಪ್ರಮಾಣ ಇನ್ನೂ ಕಡಿಮೆ ಮಾಡಬೇಕೆಂದಿದ್ದಲ್ಲಿ ಅದೇ ಹಾಸಿನ ಕೊನೆಗೆ ಹೊಸ ಹಾಸನ್ನು ಕೆಚ್ಚಿ ತಟ್ಟಿನಲ್ಲಿ ಹಾಯಿಸಿ ನಂತರ ಬದ್ದಿಗೆಯನ್ನ ಬಿಟ್ಟು ಮೊದಲಿನ ಅರಿವೆಯನ್ನು ಬೇರ್ಪಡಿಸಿಕೊಳ್ಳಬೇಕು. ಇದರಿಂದ ಕೊನೆಗೆ ಉಳಿಯುವ ಚುಂಗಿಯ ಕರಿಯ ಹಾಳಿನ ಪ್ರಮಾಣ ತೀರ ಕಡಿಮೆಯಾಗುತ್ತದೆ.

ಅಭ್ಯಾಸ ಪತ್ರಿಕೆಯಲ್ಲಿ ಇಟ್ಟ ಗುರಿಯನ್ನು ಮುಟ್ಟಲು ತಪ್ಪು ದಾರಿಯನ್ನು ಅನುಸರಿಸಿ ಶಾಲೆಗಳನ್ನು ಕಾರಖಾನೆಗಳನ್ನಾಗಿ ಪರಿವರ್ತಿಸಿದ ದೃಶ್ಯ ಅಲ್ಲಲ್ಲಿ ನೋಡಲು ಸಿಗುತ್ತದೆ. ಇಂಥ ಶಾಲೆಗಳನ್ನು ನೋಡಿದ ಪಾಲಕರು ಶಾಲೆಗಳು ಕಾರಖಾನೆಗಳಾಗಿವೆ ಎಂದೆನ್ನುವ ಮಾತು ಸ್ವಾಭಾವಿಕವಾಗಿದೆ. ಮೂಲೋದ್ಯೋಗವನ್ನು ಯಶಸ್ವಿ ರೀತಿಯಿಂದ ಸಾಗುತ್ತಿರುವೆಂದು ತಿಳಿದು ಕೇವಲ ಉತ್ಪಾದನೆಯೊಂದನ್ನೇ ಗುರಿಯಿಟ್ಟು ಸಾಗುವದರಿಂದ ಈ ತೆರನಾದ ದೋಷಗಳಾಗುತ್ತವೆ. ಉತ್ಪಾದನೆಯನ್ನು ತುಸುಮಟ್ಟಿಗೆ ಬದಿಗಿಟ್ಟು, ಮೂಲೋದ್ಯೋಗವು ಶಾಲೆಯಲ್ಲಿ ಕಾಲಿಡುವಾಗ ಇಟ್ಟುಕೊಂಡ ಉದ್ದೇಶಗಳತ್ತ ನಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿದ್ದಾದರೆ ನಮಗೆ ಹೊಸ ಬೆಳಕು ಕಾಣದಿರದು. ಜೀವನ ಶಿಕ್ಷಣದ ಗುರಿಯು, ಮಗುವನ್ನು ಅರ್ಥರಹಿತ ಉತ್ಪಾದಕನನ್ನಾಗಿ ಮಾರ್ಪಡಿಸುವದಿರದೆ, ಆ ಉತ್ಪಾದನೆಯೊಂದಿಗೆ ಅವನಲ್ಲಿ ಹುದುಗಿದ ಸುಪ್ತ ಚೇತನೆಗಳನ್ನು ಕುದುರಿಸಿ ಅವನನ್ನು ಪರಿಪೂರ್ಣ ಜೀವನದತ್ತ ಸಾಗಿಸುವದೇ ಆಗಿದೆ. ಮೂಲೋದ್ಯೋಗದ ಯಶಾಪಯಶಗಳು ಕೇವಲ ಉತ್ಪಾದನೆಯೊಂದನ್ನೇ ಅವಲಂಬಿಸಿರದೆ ಅದರ ಇನ್ನೊಂದು ಅಂಗವಾದ ಜ್ಞಾನಬೋಧನೆಯನ್ನು ಅವಲಂಬಿಸಿರುತ್ತದೆ. ಆದುದರಿಂದ ತಾಂತ್ರಿಕ ಕುಶಲತೆ ಹಾಗೂ ಜ್ಞಾನಬೋಧನೆಗಳೆರಡನ್ನೂ ಸಮದೃಷ್ಟಿಯಿಂದ ನೋಡಿ ಬಾಲಕನ ವ್ಯಕ್ತಿತ್ವ ವಿಕಾಸವನ್ನು ಸಾಧಿಸುವದೇ ಮೂಲೋದ್ಯೋಗವನ್ನು ಯಶಸ್ವಿಯಾಗಿ ಸಾಗಿಸುವ ವಿಧಾನವಾಗಿದೆ.

ಜೀವನ ಶಿಕ್ಷಣವೂ ಪ್ರದರ್ಶನಗಳೂ

ಲೇಖಕರು : **ಶ್ರೀಮತಿ ರುಕ್ಮಿಣಮ್ಮಾ,** ಹೆ. ಮ. ಸ. ಟ್ರೇ. ಕಾ. ಧಾರವಾಡ.

(ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು)

ಮಕ್ಕಳು ಸುಂದರವಾಗಿ ತಯಾರು ಮಾಡಿದ ವಸ್ತುಗಳನ್ನು ಆ ಶಾಲೆಯ ಉಳಿದ ವರ್ಗದವರೂ ಬೇರೆಯವರೂ ನೋಡಬೇಕಾದರೆ ಪ್ರದರ್ಶನಗಳನ್ನು ಏರ್ಪಡಿಸಬೇಕಾಗುತ್ತದೆ. ಈ ಪ್ರದರ್ಶನಗಳು ಬರಿಯ ಪ್ರದರ್ಶನಗಳಾಗದೆ ಶೈಕ್ಷಣಿಕ ಪ್ರದರ್ಶನಗಳಾಗಬೇಕು.

ಪ್ರದರ್ಶನಗಳನ್ನು ಎರಡು ಪ್ರಕಾರವಾಗಿ ಏರ್ಪಡಿಸಬಹುದು. ತಯಾರಾದ ಸಾಮಾನುಗಳನ್ನು ಮಾರಲಿಕ್ಕೂ ಕೊಡಬಹುದು. ಇಲ್ಲದೆ ಬರೀ ಪ್ರದರ್ಶಿಸಿ ಆ ಸಾಮಾನುಗಳನ್ನು ತಯಾರಿಸಿದವರೇ ಇಟ್ಟುಕೊಳ್ಳಬಹುದು. ಮೊದಲನೆಯ ಪ್ರಕಾರದ ಪ್ರದರ್ಶನಗಳನ್ನು ದೊಡ್ಡ ಪ್ರಮಾಣದಲ್ಲಿ ಕೈಗಾರಿಕೆ ಸಾಗಿಸುವವರು ಜಾಹೀರಾತಿಗಾಗಿ ಮತ್ತು ಮಾರಾಟಕ್ಕಾಗಿ ಇಡುವರು. ಎರಡನೆಯ ಪ್ರಕಾರದ ಪ್ರದರ್ಶನಗಳನ್ನು ಶೈಕ್ಷಣಿಕ ಸಂಸ್ಥೆಗಳು ಪ್ರಚಾರಕ್ಕಾಗಿ, ಜ್ಞಾನಪ್ರಸಾರಕ್ಕಾಗಿ ಏರ್ಪಡಿಸುವವು. ತಯಾರಿಸಿದವರು ಆ ಸಾಮಾನುಗಳನ್ನು ತಾವೇ ಇಟ್ಟುಕೊಳ್ಳುವರು. ತಮ್ಮವರಿಗೆ ಕೊಡುವರು. ತಾನು ತಯಾರಿಸಿದ್ದು ಎಂಬ ಅಭಿಮಾನದಿಂದ ಅವುಗಳನ್ನು ಉಪಯೋಗಿಸುವುದರಿಂದ ಮಾರಲು ಇಚ್ಛಿಸುವುದಿಲ್ಲ.

ಶೈಕ್ಷಣಿಕ ಪ್ರದರ್ಶನಗಳನ್ನು ಮೂರು ಉದ್ದೇಶಗಳನಿಟ್ಟು ಏರ್ಪಡಿಸಬಹುದು. ಮೊದಲನೆಯದು ಮೆಚ್ಚಿಗೆಯನ್ನು ತೋರಿಸುವದಕ್ಕಾಗಿ; ಎರಡನೆಯದು ಸ್ಪರ್ಧೆಗಾಗಿ; ಮೂರನೆಯದು ಸಹಕಾರ ಮತ್ತು ಸಹನಶೀಲತೆಯನ್ನು ಬೆಳೆಸುವುದು,

ಜೀವನ ಶಿಕ್ಷಣ ಶಾಲೆಗಳಲ್ಲಿ ಒಕ್ಕಲತನ, ಬಡಿಗತನ, ನೇಯಿಗೆ ರಟ್ಟಿನ ಕೆಲಸ ಮತ್ತು ಇತರ ಕೈಕೆಲಸಗಳನ್ನೂ ಕಲಿಸುವುದರಿಂದ ಪ್ರದರ್ಶನದಲ್ಲಿಡಲು ವೈವಿಧ್ಯಪೂರ್ಣ ಸಾಮಾನುಗಳು ಸಿಗುವವು. ಇವುಗಳನ್ನು ವ್ಯವಸ್ಥಿತ ರೀತಿಯಲ್ಲಿ ಜೋಡಿಸಿದರೆ ಪ್ರದರ್ಶನವು ಚಿತ್ತಾಕರ್ಷಕವಾಗುವುದು. ಒಂದೊಂದು ಉದ್ಯೋಗಕ್ಕೆ ಸಂಬಂಧಿಸಿದ ಸಂಗತಿಗಳನ್ನು ಒಂದೊಂದು ವಿಭಾಗದಲ್ಲಿ ಹೊಂದಿಸಿಟ್ಟರೆ ಪ್ರೇಕ್ಷಕರಿಗೂ ನೋಡಲು ಅನುಕೂಲವಾಗುತ್ತದೆ. ಉತ್ತಮ ಸಂಗತಿಗಳನ್ನು ನೆನಪಿಡಲೂ ಸುಲಭವಾಗುತ್ತದೆ; ಬೇಕೆನಿಸಿದರೆ ಟಿಪ್ಪಣಿಯನ್ನು ಮಾಡಿಕೊಳ್ಳಬಹುದು. ಬಣ್ಣ ಬಣ್ಣದ ವಸ್ತುಗಳನ್ನು ಕಲಾಕುಶಲತೆಯಿಂದ ಜೋಡಿಸಿದರೆ ಯಾರ ಮನಸ್ಸು ಮೋಹಿತವಾಗುವುದಿಲ್ಲ ! ಜೋಡಣೆಯು ಹೀಗೆಯೇ ಇರಬೇಕು. ಎಂದು ಕಟ್ಟುನಿಟ್ಟುಗಳನ್ನು ಹಾಕಲು ಸಾಧ್ಯವಿಲ್ಲ, ಪ್ರತ್ಯಕ್ಷ ಕೆಲಸ ಮಾಡಲು ನಿಂತಾಗ ತಮ್ಮ ಸೌಂದರ್ಯ ದೃಷ್ಟಿಯು ಮತ್ತು ಕಲಾಕುಶಲತೆಯ ಉಪಯೋಗ ಮಾಡಿಕೊಂಡು ವಸ್ತುಗಳನ್ನು ಹೊಂದಿಸಬೇಕು. ಇದಕ್ಕಾಗಿ ಬಹಳ ವಿಚಾರವೂ, ಪರಿಶ್ರಮವೂ ಬೇಕಾಗುವುದು. ಇಷ್ಟು ದುಡಿಯಲು ಸಿದ್ಧರಾದರೆ ಮಾತ್ರ ಪ್ರದರ್ಶನಗಳನ್ನೇರ್ಪಡಿಸಬೇಕು. ಇಲ್ಲದಿದ್ದರೆ ಸಾಮಾನುಗಳ ರಾಶಿಯನ್ನು ಸಂತೆಯಲ್ಲಿ ಇಟ್ಟಂತೆ ಆಗುವುದು.

ಸಿದ್ಧವಾದ ಸಾಮಾನುಗಳ ನಡುನಡುವೆ ಗೋಡೆಗಳ ಮೇಲೆ ಆಯಾ ಸಾಮಾನುಗಳ ಬಗೆಗೆ ಮಾಹಿತಿಯನ್ನು ಅದಕ್ಕೆ ಸಂಬಂಧಪಟ್ಟ ಸಾಹಿತ್ಯದ ಯೋಗ್ಯ ಪಟಗಳನ್ನೂ, ಚಿತ್ರಪಟಗಳನ್ನೂ ಹಚ್ಚಬಹುದು. ಸೌಂದರ್ಯವು ಹೆಚ್ಚಲು ನಾಡಿನ ನಾಯಕರ ಭಾವಚಿತ್ರಗಳನ್ನೂ, ಉತ್ತಮ ಕಲಾಕಾರರ ಕಲಾಕೃತಿಗಳನ್ನೂ ಇಡಬಹುದು. ನಿಜವಾದ ಹೂಬಳ್ಳಿ ಹಣ್ಣುಕಾಯಿಗಳಿಂದ ಅಲ್ಲಲ್ಲಿ ಶೃಂಗರಿಸಬಹುದು. ರಂಗವಲ್ಲಿ, ಚಿತ್ರಕಲೆಯಿಂದ ಅಲಂಕಾರ ಹೆಚ್ಚಿಸಬಹುದು. ದೇಶದ ಹಿರಿಯರ ಅಮೃತವಾಣಿಗಳನ್ನು ದೊಡ್ಡ ಅಕ್ಷರಗಳಲ್ಲಿ ಗೋಡೆಯಮೇಲೆ ಬರೆಯಬಹುದು. ಒಟ್ಟಿನಲ್ಲಿ ಹಿತವಾಗಿ, ಮಿತವಾಗಿ ಬೇಕಾದಷ್ಟು ಭವ್ಯವಾಗಿ ಕಾಣುವಂತೆ ಪ್ರದರ್ಶನವನ್ನು ಏರ್ಪಡಿಸಬೇಕು. ನೋಡುವವರಿಗೆ ಆನಂದವನ್ನೂ ಬೋಧೆಯನ್ನೂ ಕೊಡುವಂತೆ ಪ್ರದರ್ಶನವಾಗಬೇಕು. ಜೀವನ ಶಿಕ್ಷಣ ಶಾಲೆಗಳು ಏರ್ಪಡಿಸುವುದರಿಂದ ಈ ಪ್ರದರ್ಶನಗಳು ಶೈಕ್ಷಣಿಕವೂ ಜೀವನಕ್ಕೆ ಉಪಯುಕ್ತವೂ ಆಗಬೇಕಲ್ಲವೇ?

ಪ್ರದರ್ಶಗಳು ಪ್ರೇಕ್ಷಕರಿಗಾಗಿ ಇರುವವು. ಆದುದರಿಂದ ನೋಡಲು ಬಂದವರಿಗೆ ಸಾಲಾಗಿ ಹೋಗಲು

ಮತ್ತು ಒಂದು ಸಾಲನ್ನು ನೋಡಿ ಮುಗಿಸಿ ಮತ್ತೊಂದು ಕಡೆಗೆ ಹೋಗಲು ವ್ಯವಸ್ಥೆ ಮಾಡಬೇಕು. ಬಂದವರು ದೊಂಬಿಯಾಗಿ ಗದ್ದಲ ಮಾಡಲು ಅನುಕೂಲವಾಗದಂತೆ ಒಂದೊಂದು ಸಾಲನ್ನು ಒಬ್ಬೊಬ್ಬರೇ ನಿಂತು ನೋಡು ವಂತೆ, ಇಬ್ಬರಿಗೆ ಮಾತ್ರ ನಡುವೆ ಹೋಗಲು ಅನು ಕೂಲ ಮಾಡಬೇಕು. ಒಂದು ಸಾಲನ್ನು ಮುಗಿಸಿ ಅದರ ವಿರುದ್ಧ ಸಾಲನ್ನು ನೋಡಿಕೊಂಡು ಮುಂದಿನ ಸಾಲಿಗೆ ಹೋಗಲು ಸುಲಭವಾಗುತ್ತದೆ. ಒಂದು ಸಾರಿ ಹಾಯ್ದು ಹೋಗುವಾಗ ನೋಡುವವರ ದೃಷ್ಟಿಪಥದ ಮುಂದೆ ಬರುವಷ್ಟೇ ಸಾಮಾನುಗಳನ್ನು ಆ ಸಾಲಿನಲ್ಲಿ ಇಡಬೇಕು. ಹೀಗಲ್ಲದೆ ಬಹಳಷ್ಟು ವಿಶಾಲವಾದ ಸ್ಥಳದಲ್ಲಿ ಬಹಳ ಸಾಮಾನುಗಳನ್ನು ಸೇರಿಸಿ ಇಟ್ಟರೆ ಕೆಲವು ವಸ್ತುಗಳು ಕಣ್ಣು ತಪ್ಪಿಸಿ ಉಳಿಯಬಹುದು. ಪ್ರದರ್ಶನದ ಉದ್ದೇಶ ಸಫಲವಾಗಲಾರದು.

ಮಾನವನು ಮನಸ್ಸಿನಿಂದ ಮಾಡುವ ಒಂದೊಂದು ಕೆಲಸವೂ ಪ್ರಯೋಜನಕಾರಿಯಾಗುವುದು. ಉತ್ತಮ ಪ್ರದರ್ಶನಗಳಿಂದಲೂ ಅನೇಕ ಲಾಭಗಳಾಗುತ್ತವೆ. ಬೇರೆಯವರು ತಯಾರಿಸಿದ ಉತ್ತಮ ವಸ್ತು ಗಳನ್ನು ನೋಡುವದರಿಂದ ಮಕ್ಕಳು ತಾವೂ ಹಾಗೆಯೇ ಕೆಲವು ಸಾರಿ ಅವಕ್ಕಿಂತಲೂ ಚನ್ನಾದ, ಸಾಮಾನು ಗಳನ್ನು ತಯಾರಿಸಬೇಕೆಂದು ಹವಣಿಸುವರು. ಈ ರೀತಿ ಮಕ್ಕಳಲ್ಲಿ ಅಭಿರುಚಿಯನ್ನೂ ಸ್ಪರ್ಧೆಯನ್ನೂ ಹುಟ್ಟಿಸಿ ದಂತಾಗುತ್ತದೆ. ಉತ್ತಮವಾಗಿ ತಯಾರಿಸಿದವರಿಗೆ ಪಾರಿತೋಷಿಕ ಪ್ರಶಸ್ತಿಪತ್ರಗಳನ್ನು ಕೊಡುವ ಏರ್ಪಾಡು ಮಾಡಿದರೆ ಉತ್ತೇಜನವನ್ನು ಕೊಟ್ಟು ಉತ್ತಮ ಕಾರ್ಯಕ್ಕೆ ಮತ್ತಷ್ಟು ಹುರಿದುಂಬಿಸಬಹುದು. ಶಾಲೆಗೆ ಹೋಗುವ ಮಕ್ಕಳಲ್ಲಿ ಅಷ್ಟೇ ಅಲ್ಲದೆ ಉಳಿದ ಜನರಲ್ಲಿಯೂ ಸಹ ಪ್ರದರ್ಶನಗಳ ಮುಖಾಂತರ ಸೌಂದರ್ಯದ ಕಲಾಕುಶ ಲತೆಯ ಬಗೆಗೆ ಅಭಿರುಚಿಯನ್ನು ಹುಟ್ಟಿಸಬಹುದು. ತಮ್ಮ ಶಾಲೆಯಲ್ಲಿಯೇ ಪ್ರದರ್ಶನವನ್ನು ಏರ್ಪಡಿಸುವು ದಾದರೆ ಇಡೀ ಶಾಲೆಯ ಮಕ್ಕಳು ಕೂಡಿ ಕೆಲಸ ಮಾಡುವುದರಿಂದ ಮತ್ತು ಶಿಕ್ಷಕ-ಶಿಕ್ಷಕಿಯರೆಲ್ಲರೂ ಮಾರ್ಗದರ್ಶನ ಮಾಡಬೇಕಾಗುವುದರಿಂದ ಮತ್ತು ಬೇರೆ ಬೇರೆ ವರ್ಗಗಳ ಮಕ್ಕಳಲ್ಲಿ ಮತ್ತು ಎಲ್ಲ ಶಿಕ್ಷಕವರ್ಗ ಮತ್ತು ವಿದ್ಯಾರ್ಥಿಗಳಲ್ಲಿ ಸಹಕಾರ ಭಾವನೆ ಮತ್ತು ಸಹನಶೀಲತೆ ಬೆಳೆಯುತ್ತವೆ. ಊರಿನ ಹಲವಾರು ಶಾಲೆಗಳು ಕೂಡಿ ಪ್ರದರ್ಶನವನ್ನೇರ್ಪಡಿಸಿದರೆ ಬೇರೆ ಬೇರೆಯ ಶಾಲೆಗಳ ವಿದ್ಯಾರ್ಥಿ, ಶಿಕ್ಷಕರ ನಿಕಟ ಸಂಬಂಧ ಬಂದು, ಪರಸ್ಪರ ಪ್ರೇಮ ಸೌಹಾರ್ದಗಳು ಬೆಳೆಯುತ್ತವೆ. ಇದಲ್ಲದೆ ಪಾಲಕರು ಪ್ರೇಕ್ಷಕರಾಗಿ ಬರುವುದರಿಂದಲೂ ಬೇಕಾದಾಗ ಸಹಾಯ ನೀಡಬೇಕಾಗುವುದರಿಂದಲೂ ಊರಿನ ಜನರ ಮತ್ತು ಶಿಕ್ಷಕವರ್ಗದ ಪರಿಚಯವು ಬೆಳೆದು ಜೀವನ ಶಿಕ್ಷಣ ಶಾಲೆಗಳ ಪ್ರಗತಿಗಾಗಿ ಅವರೂ ಸಹಕರಿಸಿ ಸಹಾಯಕರಾಗಬಲ್ಲರು. ತಾಲೂಕಾ ಅಥವಾ ಜಿಲ್ಹಾ ಮಟ್ಟದ ಮೇಲೆ ಜೀವನ ಶಿಕ್ಷಣ ಶಾಲೆಗಳ ಪ್ರದರ್ಶನಗಳ ನ್ನಿಟ್ಟರೆ ಊರಿಂದೂರಿಗೆ ಹೋಗುವ ಸುಸಂಧಿ ಸಿಗುತ್ತದೆ. ಅನೇಕರ ಪರಿಚಯವೂ ಅವರಲ್ಲಿರತಕ್ಕ ಉತ್ತಮ ಸಂಗತಿ ಗಳ ಅರಿವೂ ಆಗಿ ಹೆಚ್ಚಿನ ಅನುಭವಗಳಿಸಿ ಉತ್ತಮ ಮಾನವರಾಗಲು ಸಹಾಯ ಸಿಗುತ್ತದೆ. ಹೀಗೆ ಮಾಡಿದ ವರಿಗೂ, ನೋಡಿದವರಿಗೂ ಪ್ರದರ್ಶನಗಳಿಂದ ಲಾಭವಾ ಗುವುದು; ಮತ್ತು ಸ್ನೇಹ, ಸಹಕಾರ ಮತ್ತು ಸೌಂದ ರ್ಯೋಪಾಸನೆ, ಕಲಾಭಿರುಚಿಗಳ ಬೆಳವಣಿಗೆಯಿಂದ ಸಂಸ್ಕೃತಿಯ ಬೆಳವಣಿಗೆಯನ್ನು ಮಾಡಿದಂತಾಗು ವುದು.

ಯಾವ ಸಂಗತಿಯೇ ಆಗಲಿ ಪರಿಪೂರ್ಣವಾಗಿರು ವುದಿಲ್ಲ ಎಂದು ಹೇಳುವುದುಂಟು. ಗುಣಗಳು ನೂರಾರು ಇದ್ದರೂ ಒಂದಾದರೂ ದೋಷವಿರುತ್ತದೆಂದು ಹೇಳು ವುದು ವಾಡಿಕೆ. ಇದು ಸತ್ಯವೂ ಹೌದು. ಪ್ರದರ್ಶನ ಗಳನ್ನು ಸ್ಪರ್ಧಾ ದೃಷ್ಟಿಯಿಂದ ಏರ್ಪಡಿಸಿದಾಗ ಬಹು ಮಾನಗಳನ್ನೂ ಪ್ರಶಸ್ತಿಪತ್ರಗಳನ್ನೂ ಕೊಡಬೇಕಾಗು ವುದು. ಇಂತಹ ಪ್ರಸಂಗದಲ್ಲಿ ಪಕ್ಷಪಾತವಾದರೆ ಸ್ಪರ್ಧಾಳು ಗಳಿಗೆ ನಿರಾಶೆಯೂ ಅಂತಹ ಪ್ರದರ್ಶನ ಸಂಸ್ಥೆಗಳ ಬಗೆಗೆ ತಿರಸ್ಕಾರವೂ ಉಂಟಾಗುತ್ತದೆ. ಅನೇಕ ಸಾರಿ ಈ ರೀತಿ ಅನ್ಯಾಯವು ಆಗಿ ಅದರಿಂದ ದುಷ್ಪರಿಣಾಮವುಂಟಾಗು ವುದು ಅನುಭವಕ್ಕೆ ಬಂದ ಮಾತಾಗಿದೆ. ಆದುದರಿಂದ ಬಹುಮಾನ, ಪ್ರಶಸ್ತಿಗಳನ್ನು ಕೊಡುವಾಗ ನಿಷ್ಪಕ್ಷಪಾತ ಬುದ್ಧಿಯಿಂದ ನಿರ್ಣಯ ಕೊಟ್ಟು ಯೋಗ್ಯರಾದವರಿಗೆ ಉತ್ತೇಜನ ಕೊಡುವ ದಕ್ಷತೆ ವಹಿಸಬೇಕು.

ಎರಡನೆಯ ದೋಷವೆಂದರೆ ಪ್ರದರ್ಶನಕ್ಕೆ ಕಳುಹಿ ಸಿದ ಸಾಮಾನುಗಳು ಇದ್ದ ಸ್ಥಿತಿಯಲ್ಲಿಯೇ ಕಳುಹಿಸಿದ ವರಿಗೆ ತಲುಪದಿರುವುದು; ಕೆಲವು ಸಾರಿ ತಲುಪದೇ ಇರುವುದು. ಶ್ರಮಪಟ್ಟು ತಯಾರಿಸಿದ ಸುಂದರ ವಸ್ತು ಗಳು ಕಳೆದು ಹೋಗುವವೆಂಬ ಭಯದಿಂದ ಮತ್ತೊಮ್ಮೆ ಆ ಮಕ್ಕಳಾಗಲೀ ಸಂಸ್ಥೆಯಾಗಲೀ ಪ್ರದರ್ಶನದಲ್ಲಿ ಭಾಗ

ವಹಿಸಲು ಹಿಂಜರಿಯುವರು. ಈ ಎರಡು ಲೋಪ ದೋಷಗಳನ್ನು ಜಾಗರೂಕತೆಯಿಂದ ಹೋಗಲಾಡಿಸಿದರೆ ಪ್ರದರ್ಶನಗಳು ಮಾರ್ಗದರ್ಶನಗಳು ಆಗುವುದರಲ್ಲಿ ಸಂದೇಹವಿಲ್ಲ. ಮತ್ತು ಮಕ್ಕಳು ಸಂಸ್ಕೃತಿ ಪಥದಲ್ಲಿ ಸುಗಮವಾಗಿ ಸಾಗಲು ಸಾಧಕವಾಗಬಲ್ಲುವೆಂದು ಘಂಟಾಘೋಷವಾಗಿ ಹೇಳಬಹುದು.

ಶಿಕ್ಷಕನ ಆಯುಧಗಳು

(ಮಾನಸಶಾಸ್ತ್ರದ ನಿಲುವು)

ಬರೆಹಗಾರರು : **ಶ್ರೀರಾಮ ಪಾಟೀಲ,** ಎಮ್. ಎಡ್.; ಡಿ. ಬಿ. ಈ.

ಸಂಗ್ರಾಮದಲ್ಲಿದ್ದ ಪ್ರತಿಯೊಬ್ಬನಿಗೂ ಆಯುಧಗಳ ಅವಶ್ಯಕತೆ ಇದೆ, ಆದರೆ ಕೇವಲ ಆಯುಧಪಾಣಿಯಾಗಿ ಉಪಯೋಗವಿಲ್ಲ. ಆಯುಧಗಳು ಸದಾಸನ್ನದ್ಧವಾಗಿರಬೇಕಲ್ಲದೆ, ಆಯುಧಗಳ ಪ್ರಕಾರ, ಉಪಯೋಗ, ಜೋಪಾನ ಮತ್ತು ರಿಪೇರಿ ಇತ್ಯಾದಿಗಳ ಪರಿಚಯವೂ ಆಯುಧವನ್ನು ಉಪಯೋಗಿಸುವ ಪ್ರತಿಯೊಬ್ಬನಿಗೂ ಇರುವದು ಅವಶ್ಯವಾಗಿದೆ. ಆಯುಧಗಳು ಅತ್ಯಾಧುನಿಕವಾದಂತೆ ಅವುಗಳ ಫಲವೂ ಪರಿಣಾಮಕಾರಿಯಾಗಿ ಹೊರಡುವದು. ಇಲ್ಲಿ ಎರಡು ಆಯುಧಗಳ ವಿವರಗಳನ್ನು ಮಾತ್ರ ಚರ್ಚಿಸಲಾಗಿದೆ.

ಶಿಕ್ಷಕನ ಮೊದಲನೆಯ ಆಯುಧವೆಂದರೆ ಪುನರುಕ್ತಿ; ಪುನರುಕ್ತಿಯೆಂದರೆ ಹೇಳಿದುದನ್ನೇ ಪುನಃ ಪುನಃ ಹೇಳುವದು; ಫಲದೊರಕಿಲ್ಲವೆಂಬ ಬಗೆಗೆ ಅನ್ನಿಸುತ್ತಿದ್ದರೂ ಮತ್ತೆ–ಮತ್ತೆ ಹೇಳುವದು; ಹೇಳಿದುದನ್ನೇ ಹೇಳುವದು. ಪುನರುಕ್ತಿಯ ಉದ್ದೇಶಗಳು ಎರಡು ವಿಧವಾಗಿವೆ:

೧. ಅನುಕರಣೆಗೆ ಸಹಾಯ ಮಾಡುವದು.
೨. ಉತ್ತಮ ಚಟಗಳನ್ನು ನೆಡುವದು.

ಶಿಕ್ಷಕರ ಕೃತಿಗಳನ್ನು ಬಾಲಕರು ಅನುಕರಣೆ ಮಾಡಬೇಕಾದಾಗ ಅಂತಹ ಕೃತಿಗಳನ್ನು ಶಿಕ್ಷಕನು ಒಂದೇ ಸಲ ಮಾಡಿದರಾಗದು. ಒಂದು ದಿನದಲ್ಲಿ ಅನೇಕ ಸಲ, ಒಂದು ತಿಂಗಳಲ್ಲಿ ಕೆಲವು ಸಲ ಮತ್ತು ಒಂದು ವರುಷದಲ್ಲಿ ಹಲವು ಸಲ ಅದನ್ನು ಮಾಡಬೇಕಾಗುವದು. ಬಾಲಕರು ಚಂಚಲರು; ಅಲಕ್ಷಪ್ರಿಯರು; ಅಲ್ಲದೆ ಬಹಳ ಹೊತ್ತಿನ ವರೆಗೆ ಅವರ ಲಕ್ಷವನ್ನು ಒಂದು ಕಡೆಗೆ ಎಳೆಯುವದು ಬಹಳ ಕಠಿಣವಾದ ಕೆಲಸವಾಗಿದೆ. ಇಂತಹ ಸಮಯದಲ್ಲಿ ಮಾಡಿದುದನ್ನೇ ಅನೇಕ ಸಲ ಮಾಡಿ ತೋರಿಸಬೇಕಾಗುತ್ತದೆ. ಇದರಿಂದ ಶಿಕ್ಷಕರಿಗೆ ಬೇಜಾರ ಬಂದರೂ ಬಾಲಕರಿಗೆ ಬೋಧಪ್ರದವಾಗಿದೆ.

ಚಟಗಳು ಪುನರುಕ್ತಿಯಿಂದಲೇ ವಿಕಾಸ ಹೊಂದಿ ದೃಢವಾಗುವವು. ಮೇಲ್ಮಟ್ಟದ ವಿಚಾರಕ್ಕೆ ಚಟಗಳ ಅವಶ್ಯಕತೆ ಇದೆ. ನೃತ್ಯದಲ್ಲಿ ಹೆಜ್ಜೆ, ಕೈ ಮತ್ತು ಅಭಿನಯಗಳು ಒಳಗೊಳ್ಳುತ್ತವೆ. ಇವುಗಳಲ್ಲಿ ಹೆಜ್ಜೆ ಬಡಿಯುವದು, ಕೈಗಳಿಂದ ಮುದ್ರೆತೋರಿಸುವದು ಇತ್ಯಾದಿ ಕ್ರಿಯೆಗಳು ಚಟದ ಮಟ್ಟಕ್ಕೆ ಇಳಿಯಬೇಕು. ಅಂದರೆ ನರ್ತಕನು ತನ್ನ ಸರ್ವ ಲಕ್ಷವನ್ನು ಅಭಿನಯದಲ್ಲಿ ಕೇಂದ್ರೀಕರಿಸಿ ಉತ್ತಮ ಮಟ್ಟದ ನಟನೆಯನ್ನು ನೀಡಬಲ್ಲನು. ಆದರೆ ಅವನು ತನ್ನ ಲಕ್ಷವನ್ನು ಈ ಮೂರೂ ಕ್ರಿಯೆಗಳಲ್ಲಿ ವಿಭಜಿಸಿದರೆ ನರ್ತನದಲ್ಲಿ ಸಮರಸ ಉಂಟಾಗಲಾರದು. ಹೊಸಬನು ದೇವರಿಗೆ ಮಂಗಳಾರತಿ ಮಾಡಿದ ಹಾಗಾಗುವದು.

ನಮ್ಮ ನೆರೆಮನೆಯ ಒಬ್ಬ ಬಾಲಕಿ ನಮ್ಮ ಮನೆಗೆ ಬರುತ್ತಿದ್ದಳು. ಅವಳು ಚಡ್ಡಿಯನ್ನು ಹಾಕುತ್ತಿರಲಿಲ್ಲ. ಅವಳ ತಂದೆ ಅನುಕೂಲಸ್ಥ; ಅವಳಿಗೆ ನಾಕಷ್ಟು ಚಡ್ಡಿಗಳನ್ನು ಹೊಲಿಸಿಕೊಟ್ಟಿದ್ದನು. ಒಂದು ದಿನ ಆ ಬಾಲಕಿಯು ನಮ್ಮ ಮನೆಗೆ ಬಂದ ಕೂಡಲೇ, ಅವಳನ್ನು, “ಚಡ್ಡಿ ಹಾಕಿಕೊಂಡು, ಬಾ,” ಎಂದು ತಿರುಗಿ ಅವಳ ಮನೆಗೆ ಕಳಿಸಿದೆನು. ಹೀಗೆ ಅವಳನ್ನು ೮–೧೦ ಸಲ ತಿರುಗಿ ಅವಳ ಮನೆಗೆ ನಾನು ಕಳಿಸಿದೆನು. ಹನ್ನೊಂದನೆಯ ಸಲ ಆ ಬಾಲಕಿಯು ನಮ್ಮ ಮನೆಯಲ್ಲಿ ಇದ್ದಾಗ ನಾನು ಹೊರಗಿನಿಂದ ಬಂದೆನು. ಆಗ ಆ ಬಾಲಕಿಯು ತಾನೇ ಎದ್ದು, “ನಾನು ಚಡ್ಡೀ ಹಾಕ್ಕೊಂಡು ಬರ್ತೀನಿ,” ಎಂದು ತಿರುಗಿ ಹೋದಳು; ಅಲ್ಲದೇ ಚಡ್ಡಿ ಹಾಕಿಕೊಂಡು ಬಂದು ನನಗೆ ತೋರಿಸಿದಳು. ಬರಬರುತ್ತೇ ನಮ್ಮ

ಮನೆಗೆ ಬರಬೇಕಾದರೆ ಅವಳು ಚಡ್ಡಿಯನ್ನು ಹಾಕಿಕೊಂಡು ಬರಲಿಕ್ಕೆ ಮರೆಯಲಿಲ್ಲ. ನನ್ನ ಹತ್ತು ಸಲ ಹೇಳಿಕೆಯಿಂದ ಆ ಬಾಲಕೆಯಲ್ಲಿ ಒಂದು ಉತ್ತಮ ಚಟ ಬೆಳೆದರೆ ಸಾಕಾಗಲಿಲ್ಲವೇ? ಶಿಕ್ಷಣವಾದರೂ ಇದಕ್ಕಿಂತ ಹೆಚ್ಚು ಏನು ಅಪೇಕ್ಷಿಸುತ್ತದೆ?

ಪ್ರಾಥಮಿಕ ಶಾಲೆಗಳ ಕೆಳಗಿನ, ಮೂರು ವರ್ಗಗಳಲ್ಲಾದರೂ ಪುನರುಕ್ತಿಯನ್ನು ಪರಿಣಾಮಕಾರಿಯಾಗಿ ಪ್ರಯೋಗಿಸಬಹುದು. ಹಲ್ಲು ತಿಕ್ಕುವದು, ಮುಖ ತೊಳೆಯುವದು, ಟೊಪ್ಪಿಗೆ ಹಾಕಿಕೊಂಡು ಬರುವದು, ಪುಸ್ತಕ ಪಾಟಿ ತಟ್ಟುಗಳನ್ನು ವ್ಯವಸ್ಥಿತವಾಗಿ ಮರೆಯದೆ ತರುವದು, ಸಾಲಾಗಿ ವರ್ಗದ ಹೊರಗೆ ಹೋಗುವದು, ಕ್ರಮವಾಗಿ ವರ್ಗ ಸೇರುವದು, ತಮಗೆ ಗೊತ್ತುಪಡಿಸಿದ ಸ್ಥಳಗಳಲ್ಲಿಯೇ ಕೂಡುವದು ಇತ್ಯಾದಿ ಚಟಗಳನ್ನು ನಿರಲಸವಾದ ಪುನರುಕ್ತಿಯಿಂದಲೇ ವಿದ್ಯಾರ್ಥಿಗಳಲ್ಲಿ ದೃಢೀಕರಿಸಬಹುದು.

ಒಂದು ಊರಲ್ಲಿ ನಾನು ಒಂದು ವರ್ಗಕ್ಕೆ ಸಂದರ್ಶನವಿತ್ತಾಗ ಮೊದಲನೆಯ ವರ್ಗದ ನಾಲ್ಕು ವಿದ್ಯಾರ್ಥಿಗಳು ಸಾಲೆಗೆ ಟೊಪ್ಪಿಗೆ ಹಾಕಿಕೊಂಡು ಬಂದಿರಲಿಲ್ಲ. ನಾನು ಅವರನ್ನು ಉಬ್ಬಿಸಿ ವಿಚಾರಿಸಿದೆನು. ಒಬ್ಬನು ತೀರ ಬಡವ; ಅವನ ಹತ್ತಿರ ಟೊಪ್ಪಿಗೆಯೇ ಇರಲಿಲ್ಲ. ಇನ್ನೊಬ್ಬನು ಟೊಪ್ಪಿಗೆಯನ್ನು ಕೆಡುಕೊಂಡಿದ್ದನು. ಉಳಿದ ಇಬ್ಬರು ಟೊಪ್ಪಿಗೆಗಳನ್ನು ತಮ್ಮ ಮನೆಯಲ್ಲಿ ಮರೆತು ಬಂದಿದ್ದರು. ನನ್ನ ಅಪ್ಪಣೆಯನ್ನು ಕೇಳಿ ಓಡುತ್ತ ಮನೆಗೆ ಹೋಗಿ ಟೊಪ್ಪಿಗೆ ಹಾಕಿಕೊಂಡು ಬಂದು ನನಗೆ ತೋರಿಸಿದರು. ಬಾಲಕರು ತೇಕುತ್ತಿದ್ದರು. ಆದರೂ ಅವರ ಉತ್ಸಾಹ ಅಪರಿಮಿತವಾಗಿತ್ತು. ಪರೀಕ್ಷೆಯಲ್ಲಿ ಗೆದ್ದವರಂತೆ ಉಲ್ಹಾಸಗೊಂಡಿದ್ದರು. ಆಗ ಒಂಬತ್ತು ಗಂಟೆಯಾಗಿತ್ತು. ವರ್ಗ ಪ್ರಾರಂಭವಾದ ಕೂಡಲೇ ಈ ಕೆಲಸವನ್ನು ಆ ವರ್ಗದ ಶಿಕ್ಷಕರು ಮಾಡಬಹುದಾಗಿತ್ತು. ಅವರನ್ನು ಕೇಳಿದರೆ, "ಸಾಹೇಬರ, ನಾನು ದಿನಾ ಹೇಳಿ ಬೇಸತ್ತಿರುವೆ." ಎಂದು ಉತ್ತರಿಸಿದರು. ಅಲ್ಲದೆ ಒಬ್ಬ ಬಾಲಕನನ್ನು ಎಬ್ಬಿಸಿ ತಮ್ಮ ಹೇಳಿಕೆಗೆ ಸಾಕ್ಷಿಯನ್ನೂ ಕೊಡಿಸಿದರು. ಆದರೆ ಶಿಕ್ಷಣದಲ್ಲಿ ಬೇಸರಿಕೆ ಯಾವ ಕೆಲಸಕ್ಕೂ ಬಾರದು. ಅದರಲ್ಲಿಯೂ ಪುನರುಕ್ತಿಯ ಚಲಾವಣೆಯಲ್ಲಿ ಎಳ್ಳಷ್ಟೂ ತರವಲ್ಲ. ಶಿಕ್ಷಕರು, ಸಾಲೆಯಲ್ಲಿ ತಮ್ಮ ತಮ್ಮ ವರ್ಗಗಳ ಆರೋಗ್ಯ ಪರೀಕ್ಷೆಯನ್ನು ದಿನಾಲೂ ಮಾಡಿಸುವದಿಲ್ಲ ಎಂದು ನನ್ನ ಅಭಿಪ್ರಾಯವಲ್ಲ. ಆದರೆ ಆರೋಗ್ಯ ಪರೀಕ್ಷೆಯಾಗುವದು ಯಾವಾಗ ನಿಲ್ಲಬೇಕು? ವಿದ್ಯಾರ್ಥಿಗಳಲ್ಲಿ ಕೆಲಸದ ಕ್ರಮಗಳು ದೃಢವಾಗಿ ಬೇರೂರಿದಾಗ. ಅಲ್ಲಿಯವರೆಗೆ, "ಸಾಹೇಬರ, ನಾನು ದಿನಾ ಹೇಳಿ ಬೇಸತ್ತಿರುವೆ" ಎನ್ನುವ ಉತ್ತರವು ಅರ್ಥವಿಲ್ಲದ್ದು. ಶಿಕ್ಷಕರ ಈ ಹೇಳಿಕೆಯಿಂದ ಅವರು ಹೇಳಿಯೇ ಇಲ್ಲವೆಂದಾಗಲೀ ಅಥವಾ ಹೇಳಿದರೂ ಅವರ ಹೇಳಿಕೆಯು ಪರಿಣಾಮಕಾರಿಯಾಗಿ ಪ್ರಭಾವ ಬೀರಿಲ್ಲವೆಂದಾಗಲೀ ಅರ್ಥ ಮಾಡಬೇಕಾಗುವದು. ಇವೆರಡೂ ಅರ್ಥಗಳು ಶಿಕ್ಷಕನಿಗೆ ಅನುಕೂಲವಾಗಿಲ್ಲ.

ಪುನರುಕ್ತಿಯಲ್ಲಿ ಪರಮಶಕ್ತಿಯಿದೆ. ಈ ಶಕ್ತಿಯನ್ನು ಶಿಕ್ಷಕನು ಕಂಡು ಹಿಡಿಯಬೇಕು; ಅದನ್ನು ಚಲಾವಣೆಯಲ್ಲಿ ತರಬೇಕು. ಆದರೆ ಅದನ್ನು ಕಾರ್ಯರೂಪದಲ್ಲಿ ತರಬೇಕಾದರೆ, ನಿರಾಲಸ್ಯ, ಸಹನೆ, ತಾಳ್ಮೆ, ಆಶಾವಾದ, ದೃಢತೆ ಇತ್ಯಾದಿ ಗುಣಗಳನ್ನು ತಮ್ಮಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ.

ಶಿಕ್ಷಕನ ಎರಡನೆಯ ಆಯುಧವೆಂದರೆ ಭಾವಸ್ಫುರಣೆ (Suggestion). ಇದು ಅತಿ ಶ್ರೇಷ್ಠವಾದ ಆಯುಧವು. ಭಾವಸ್ಫುರಣೆಯೆಂದರೆ, ಹೇಳಿದ ಸಂಗತಿಗಳನ್ನು ಹಿಂದು ಮುಂದಿನ ವಿಚಾರ ಮಾಡದೇ, ಸಂಗತಿಯ ಸತ್ಯಾಸತ್ಯತೆಯನ್ನು ಪರೀಕ್ಷಿಸದೇ, ಇನ್ನೊಬ್ಬನು ನಂಬಿ ಬಿಡುವದು ಮತ್ತು ವಿಶ್ವಾಸವಿಡುವದು. ತಾಯಿ ತಂದೆಗಳು ಬಾಲಕನಿಗೆ ಭಾವಸ್ಫುರಣೆಯ ಪ್ರೇರಕರಾಗಿದ್ದಾರೆ. ಆದರೆ ತಾಯಿ ತಂದೆಗಳ ಮತ್ತು ಶಿಕ್ಷಕರ ಭಾವಸ್ಫುರಣೆಗಳು ತಿಕ್ಕಾಡುತ್ತಿರುವಾಗ ಬಾಲಕನು ಶಿಕ್ಷಕನ ಭಾವಸ್ಫುರಣೆಗೆ ಮಹತ್ವ ಕೊಡುತ್ತಾನೆ. ಭಾವಸ್ಫುರಣೆಗೆ ಎರಡು ಸಂಗತಿಗಳು ಅವಶ್ಯವಾಗಿವೆ.

೧. ಬಾಲಕನ ಅಪಕ್ವ ಬುದ್ಧಿ ಮತ್ತು ಅನುಭವ.

೨. ಶಿಕ್ಷಕನ ಪಕ್ವ ಬುದ್ಧಿ ಹಾಗೂ ಅನುಭವ.

ಶಿಕ್ಷಣವು ಪರಿಣಾಮಕಾರಿಯಾಗಬೇಕಾದರೆ ಇವೆರಡರಲ್ಲಿ ಬಹಳ ಅಂತರ ಬೀಳಬೇಕಾಗುವದು. ಶಿಕ್ಷಕನ ಮತ್ತು ಬಾಲಕರ ಬುದ್ಧಿ ಮತ್ತು ಅನುಭವಗಳಲ್ಲಿ ಬಹಳ ಅಂತರವಾಗದಿದ್ದರೆ ಶಿಕ್ಷಣವು ಪರಿಣಾಮಕಾರಿಯಾಗುವದಿಲ್ಲ. ಇಷ್ಟೇ ಅಲ್ಲ ಬಾಲಕರಲ್ಲಿ ಶಿಕ್ಷಕನು ನಗೆಗೀಡು ಆಗಬಲ್ಲನು. ಗೌರವಹೀನ ಶಿಕ್ಷಕನು ಬಾಲಕರ ಮೇಲೆ ಭಾವಸ್ಫುರಣೆಯ ಅಸ್ತ್ರವನ್ನು ಪ್ರಯೋಗಿಸಲಾರನು. ಇಂತಹ ಸಂದರ್ಭಗಳಲ್ಲಿ ಶಿಕ್ಷಕನು ತನ್ನ ನಡತೆಯನ್ನು

ಕಲಂಕ ರಹಿತವಾಗಿ ಇಟ್ಟುಕೊಂಡರೆ ಮಾತ್ರ ಉಳಿದು ಕೊಳ್ಳುವನು. ಇಲ್ಲವಾದರೆ ಬಾಲಕರಲ್ಲಿ ತನ್ನ ಗೌರವ ವನ್ನು ಉಳಿಸಿಕೊಳ್ಳಲಿಕ್ಕೆ ಅವನು ತನ್ನ ವಿಕಾಸವನ್ನೂ ಸಾಧಿಸಿಕೊಳ್ಳಬೇಕಾಗುವದು. ನಮ್ಮಲ್ಲಿ ಬಹಳ ಕಡಿಮೆ ಶಿಕ್ಷಕರು ತರಬೇತಿ ವಿದ್ಯಾಲಯದಲ್ಲಿ ಕಲಿತುದರಕಿಂತಲೂ ಹೆಚ್ಚಾಗಿ ಓದಿಕೊಂಡಿದ್ದಾರೆ; ಕೆಲವರು ಅದೇ ಭಾಂಡವಲ ಮೇಲೆಯೇ ನಿವೃತ್ತಿ ಹೊಂದುತ್ತಾರೆ; ಕೆಲವರಂತೂ ತರಬೇತಿ ವಿದ್ಯಾಲಯಕ್ಕೆ ಬೆನ್ನು ತೋರಿಸಿದ ದಿನವೇ ಅಲ್ಲಿ ಕಲಿತುದನ್ನು ಮರೆತು ಬಿಡುತ್ತಾರೆ.

ಭಾವಸ್ಫುರಣೆಯ ಪರಿಣಾಮವು ಸತ್ವಶಾಲಿಯಾಗ ಬೇಕಿದ್ದರೆ ಸ್ಫುರಣೆ ಮಾಡುವವನ ಜ್ಞಾನ ಭಾಂಡಾರವು ನಿರ್ದುಷ್ಟವಾಗಿರಬೇಕು; ಅಲ್ಲದೆ ಅದು ವಿಕಾಸವಾಗುತ್ತ ಹೋಗಬೇಕು. ಶಿಕ್ಷಕನು ಹಂಚಿದ ಜ್ಞಾನವು ತಪ್ಪು ತಪ್ಪಾಗಿದ್ದರೆ ಮತ್ತು ಪ್ರಬುದ್ಧನಾದ ಮೇಲೆ ಅದನ್ನು ಬಾಲಕನು ಅರಿತುಕೊಂಡರೆ ಶಿಕ್ಷಕನ ಮೇಲಿನ ಗೌರವವು ಮತ್ತಿಷ್ಟು ಕಡಿಮೆಯಾಗುವದು. ಗೌರವದ ಜೊತೆಗೆ ಸಹಾನುಭೂತಿಯೂ, ಸಹಾನುಭೂತಿಯ ಜೊತೆಗೆ ಸಹಾಯಕ ಮನೋವೃತ್ತಿಯೂ ಕಳಚಿ ಬೀಳುವವು. ಅಧೋಗತಿಗೆ ಇಳಿದವನನ್ನು ಬಹಳ ಕಡಿಮೆ ಜನರು ಉದ್ಧರಿಸುವರು. ಶಿಕ್ಷಕನು ತನ್ನ ಮಟ್ಟವನ್ನು ಎತ್ತರಿಸಬೇಕು ಎನ್ನುವ ವಾದಸರಣಿಯಲ್ಲಿ ಇದು ಒಂದು ವಿಚಾರವು ತಳಹದಿಯಾಗಿದೆ.

ತನ್ನ ಶಿಷ್ಯನು ಬಾದಶಹನಾದನೆಂದು ತಿಳಿದು ಅವನಿಂದ ಸಹಾಯ ಕೋರುವ ಉದ್ದೇಶದಿಂದ ಔರಂಗ-ಜೇಬನ ಗುರುವು ಅವನ ಅರಮನೆಗೆ ತೆರಳಿದನು. ಔರಂಗಜೇಬನು ಗುರುವನ್ನು ಕಾಣಲು ನಿರಾಕರಿಸಿದನು. ಅಲ್ಲದೆ ಅವನಿಗೊಂದು ಲಂಬಾಯಮಾನವಾದ ಪತ್ರವನ್ನು ಬರೆದು ಗುರುವು ತನಗೆ ಬಹಳ ಕಡಿಮೆ ಕಲಿಸಿರುವನೆಂದೂ ಮತ್ತು ಕಲಿಸಿದುದನ್ನಾದರೂ ತಪ್ಪು ತಪ್ಪು ಕಲಿಸಿರುವ ನೆಂದೂ ಅವನ ಮೇಲೆ ಆರೋಪ ಹೊರಿಸಿದನು. ಔರಂಗಜೇಬನ ಪತ್ರವು ಶಿಕ್ಷಣದ ಇತಿಹಾಸದಲ್ಲಿ ಒಂದು ಪ್ರಮಾಣ ವಚನವಾದರೂ ಶಿಕ್ಷಣದ ಪ್ರತಿಕ್ರಿಯೆ ಶಿಷ್ಯನ ಮೇಲೆ ಎಂತಾಗಬಲ್ಲದು ಎಂಬುದಕ್ಕೆ ಇದೊಂದು ಜೀವಂತ ಆಧಾರವಾಗಿದೆ. ಇಂತಹ ಮನೋವೃತ್ತಿ ವ್ಯಾಪಕನಾದರೆ ಶಿಕ್ಷಕರಿಗೂ ಸಮಾಜಕ್ಕೂ ಬಹಳ ಘಾತುಕವಾಗುತ್ತದೆ. ಇದನ್ನು ಮನದಂದು ಶಿಕ್ಷಕರು ತಮ್ಮನ್ನು ತಾವೇ ಉದ್ಧರಿಸಿ ಕೊಳ್ಳಬೇಕು.

ಒಟ್ಟಿನ ಮೇಲೆ ಹೇಳಬೇಕಾದರೆ ಸೈನಿಕನ ಶಸ್ತ್ರಗಳಿಗೂ ಶಿಕ್ಷಕನ ಆಯುಧಗಳಿಗೂ ಬಹಳ ಅಂತರವಿದೆ. ಸೈನಿಕನ ಅಸ್ತ್ರಗಳು ಶರೀರದ ಕಸಿಮಾಡಬಹುದು. ಆದರೆ ಶಿಕ್ಷಕನ ಆಯುಧಗಳು ಮನಸ್ಸು, ಹೃದಯ ಮತ್ತು ಬುದ್ಧಿಗಳ ಕಸಿಮಾಡಿ ಬಾಲಕರಿಗೆ ಉತ್ತಮ ಕರ್ತೃತ್ವ ಶಕ್ತಿಯನ್ನು ನೀಡಬಲ್ಲವು. ಬ್ರಹ್ಮನು ಜನ್ಮದಾತೃವಾಗ ಬಹುದು; ಆದರೆ ಬಾಲಕರಿಗೆ ಉತ್ತಮ ಚರಿತ್ರೆಯನ್ನು ನೀಡಬಲ್ಲ ಶಿಕ್ಷಕನು ಪರಮಬ್ರಹ್ಮನಾಗಬಲ್ಲನು.

ಹಾವೇರಿ ತಾಲೂಕ ಪ್ರಾಥಮಿಕ ಶಿಕ್ಷಕ-ಶಿಕ್ಷಕಿಯರ ಶೈಕ್ಷಣಿಕ ಪರಿಷತ್ತು

ದಿನಾಂಕ ೧೬—೩—೧೯೫೮

ಸ್ವಾಗತ ಭಾಷಣ

ಸ್ವಾಗತಾಧ್ಯಕ್ಷರು : **ಶ್ರೀ ಸಿ. ಕೆ. ಕುಲಕರ್ಣಿ,** ಚೇರಮನ್ ಡಿ. ಸ್ಕೂ. ಬೋ. ಧಾರವಾಡ.

ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಮಾನ್ಯ ಡಿ. ಸಿ. ಪಾವಟೆಯವರೇ, ಧಾರವಾಡ ವಿಭಾಗದ ಡೆಪ್ಯೂಟಿ ಡಾಯರೆಕ್ಟರರಾದ ಶ್ರೀ ಎಸ್. ವ್ಹಿ. ಬೇವೂರವರೇ, ಧಾರವಾಡ ಜಿಲ್ಹಾ ಶಿಕ್ಷಣಾಧಿಕಾರಿಗಳಾದ ಶ್ರೀ ಜಿ. ಕೆ. ಕೊಪ್ಪಿಕರರವರೇ, ಉಪಶಿಕ್ಷಣಾಧಿಕಾರಿಗಳೇ, ಜಿಲ್ಹಾ ಸ್ಕೂಲ ಬೋರ್ಡಿನ ಸದಸ್ಯರೇ, ಸನ್ಮಾನ್ಯ ಅತಿಥಿಗಳೇ, ನಾಗರಿಕರೇ ಹಾಗೂ ಶಿಕ್ಷಕ-ಶಿಕ್ಷಕಿಯರೇ,

ಹಾವೇರಿ ತಾಲೂಕಿನ ಎಲ್ಲ ಪ್ರಾಥಮಿಕ ಶಾಲೆಗಳ ಶಿಕ್ಷಕ–ಶಿಕ್ಷಕಿಯರ ಪರವಾಗಿ ಜರಗುವ ಈ ಶೈಕ್ಷಣಿಕ ಪರಿಷತ್ತಿಗೆ ನಾನು ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇಂದಿನ ನಮ್ಮ ಉದ್ಘಾಟಕರಾದ ರ್‍ಯಾಂಗ್ಲರ, ಡಿ. ಸಿ. ಪಾವಟೆ, ಎಮ್. ಎ. (ಕೆಂಬ್ರಿಜ್)

ಇವರು ದೊರೆತದ್ದು ನಮ್ಮ ಭಾಗದ ಪುಣ್ಯವಿಶೇಷವೆಂದು ನಾನು ತಿಳಿಯುತ್ತೇನೆ.

ಮುಂಬಯಿ ರಾಜ್ಯದಂಥ ಪ್ರಗತಿಶೀಲ ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರದ ಅತ್ಯುನ್ನತ ಸ್ಥಾನಕ್ಕೇರಿ ಸುಮಾರು ಎಂಟು ವರ್ಷಗಳ ವರೆಗೆ ದಕ್ಷ ಹಾಗೂ ಸಾಮರ್ಥ್ಯಪೂರ್ಣ ಆಡಳಿತೆಯನ್ನು ನಡೆಯಿಸಿ ಕರ್ನಾಟಕಕ್ಕೆ ಕೀರ್ತಿಯನ್ನೇ ತಂದಿರುವರು. ಶ್ರೀಯುತರು ಪ್ರಾಥಮಿಕ ಶಿಕ್ಷಕರ ಪ್ರಗತಿಗಾಗಿ ವಿಶೇಷ ಹೆಣಗಿದವರಾಗಿದ್ದಾರೆ. ಇವರ ಕಾರ್ಯಕ್ಷೇತ್ರವು ಇತ್ತೀಚಿಗೆ ಕೇವಲ ನಮ್ಮ ದೇಶವಲ್ಲದೇ ಅಂತರರಾಷ್ಟ್ರೀಯವಾಗಿರುವದು ಅವರ ಬುದ್ಧಿ ಚಾತುರ್ಯ, ಕಾರ್ಯಕ್ಷಮತೆಯ ದ್ಯೋತಕವಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದ ಸರ್ವಾಂಗೀಣ ಪ್ರಗತಿಗಾಗಿ ಅಹೋರಾತ್ರಿ ಪರಿಶ್ರಮಿಸುತ್ತಿರುವಾಗಲೂ ಕೂಡ ಪ್ರಾಥಮಿಕ ಶಿಕ್ಷಣದ ಪ್ರಗತಿಯ ಕಡೆಗೆ ಸದಾಲಕ್ಷ್ಯವನ್ನಿಟ್ಟಿರುವರು. ಮೈಸೂರ ರಾಜ್ಯವನ್ನು ಒಳಗೊಂಡಿರುವ ಐದು ಬೇರೆ ಬೇರೆ ಶಿಕ್ಷಣ ಕ್ರಮಗಳನ್ನು ಒಗ್ಗೂಡಿಸಿ ಭಾವೀ ಕನ್ನಡ ಪೀಳಿಗೆಯ ವಿದ್ಯಾಭ್ಯಾಸದ ಕ್ರಮವನ್ನು ರೂಪಿಸುವದರಲ್ಲಿ ರ್‍ಯಾಂಗ್ಲರ ವರ ಸೇವೆಯು ಅಮೂಲ್ಯವಾಗಿದೆ. ಕಾರ್ಯಬಾಹುಲ್ಯದಲ್ಲಿಯೂ ಸಮಯವನ್ನುಳಿಸಿಕೊಂಡು ಇಲ್ಲಿಯ ವರೆಗೆ ಆಗಮಿಸಿದ ಮಾನ್ಯ ಉದ್ಘಾಟಕರಿಗೆ ಕೃತಜ್ಞತೆಯಿಂದ ಶಿಕ್ಷಣಾಭಿಮಾನಿಗಳ ಪರವಾಗಿ ಸ್ವಾಗತ ಕೋರುತ್ತೇನೆ.

ಈ ಸಮಾರಂಭಕ್ಕೆ ಯೋಗ್ಯರಾದ ಅಧ್ಯಕ್ಷರೊಬ್ಬರು ನಮಗೆ ಬೇಕಾಗಿದ್ದರು. ಆ ಸ್ಥಳಕ್ಕೆ ಧಾರವಾಡ ವಿಭಾಗದ ಡೆಪ್ಯೂಟಿ ಡಾಯರೆಕ್ಟರರಾದ ಶ್ರೀಮಾನ್ ಎಸ್. ವ್ಹಿ. ಜೇವೂರ ಇವರು ದೊರೆತಿರುವದು ವಿಶೇಷ ಸೌಭಾಗ್ಯವಾಗಿದೆ. ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳ ಆಡಳಿತೆಯನ್ನು ತಮ್ಮ ವೈವಿಧ್ಯಪೂರ್ಣವಾದ ಅನುಭವ ಜಾಣ್ಮೆಗಳಿಂದ ಸಮರ್ಪಕವಾಗಿ ನಡೆಸಿ ಹೆಸರು ಪಡೆದಿದ್ದಾರೆ. ಆಡಳಿತೆಯಲ್ಲಿ ಮಾರ್ಚ ತಿಂಗಳವೆಂದರೆ ಬಲು ತೊಂದರೆದಾಯಕ ತಿಂಗಳು. ಇಂಥ ಅಮೂಲ್ಯವಾದ ವೇಳೆಯಲ್ಲಿ ನಮ್ಮ ಕರೆಗೆ ಮನ್ನಣೆಯನ್ನು ಕೊಟ್ಟು ಬಂದಿರುವ ಶ್ರೀ ಜೇವೂರ ಸಾಹೇಬರವರಿಗೆ ಆದರದ ಸ್ವಾಗತವನ್ನು ಬಯಸುತ್ತೇನೆ.

ಈ ಪರಿಷತ್ತಿನ ಅಂಗವಾಗಿ ಏರ್ಪಡಿಸಿದ ಪ್ರದರ್ಶನಗಳನ್ನು ಉದ್ಘಾಟಿಸಲು ಈ ಜಿಲ್ಲೆಯ ಶಿಕ್ಷಣಾಧಿಕಾರಿಗಳಾದ ಶ್ರೀ ಜಿ. ಕೆ. ಕೊಪ್ಪೀಕರ ಇವರು ದೊರೆತಿರುವದು ಔಚಿತ್ಯಪೂರ್ಣವಾಗಿದೆ. ಹಾವೇರಿಗೆ ಹಲವಾರು ಕಾರ್ಯಕ್ರಮಗಳ ಮೂಲಕ ಆಗಮಿಸುವ ಈ ಶಿಕ್ಷಣಾಧಿಕಾರಿಗಳು ಇಲ್ಲಿಯ ಶಿಕ್ಷಣದ ಎಲ್ಲ ಸುಳುವು-ಹೊಳವುಗಳನ್ನು ಅರಿತವರಾಗಿದ್ದಾರೆ. ಇವರನ್ನು ನಮ್ಮ ಸಮಿತಿಯ ಪತಿಯಿಂದ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಈ ಪರಿಷತ್ತಿನಲ್ಲಿ ಚರ್ಚೆಯಾಗುವ ವಿಷಯುಗಳು ತಮ್ಮಲ್ಲಿ ಅನೇಕರಿಗೆ ವಿದಿತವಾಗಿವೆ. ಅವುಗಳನ್ನು ತಮ್ಮ ಅಭ್ಯಾಸ ಹಾಗೂ ಅನುಭವಗಳ ಮೂಲಕವಾಗಿ ಚರ್ಚಿಸಿ ಹೊಸಪ್ರಭಾವ ಬೀರಬಲ್ಲ ವ್ಯಕ್ತಿಗಳು ದೊರೆತಿರುವದು ನಮ್ಮ ಭಾಗ್ಯ. ನಮ್ಮ ಜಿಲ್ಲೆಯ ಶಾಸನಾಧಿಕಾರಿಗಳಾದ ಶ್ರೀ ಎಂ. ಜಿ. ಹಂದ್ರಾಳರವರು ಜೀವನ ಶಿಕ್ಷಣದಲ್ಲಿ ವಿಶೇಷವಾದ ಪರಿಣತಿಯನ್ನು ಹೊಂದಿದ ವ್ಯಕ್ತಿಗಳಲ್ಲಿ ಗಣ್ಯರು, ನಮ್ಮ ಮೇಲಿನ ಅಭಿಮಾನದಿಂದ ತಮ್ಮ ಅಸ್ವಾಸ್ಥ್ಯವನ್ನು ಬದಿಗಿಟ್ಟು ಈ ಪರಿಷತ್ತಿಗೆ ಆಗಮಿಸಿದ್ದಾರೆ. ಇವರ ವಿದ್ವತ್ಪೂರ್ಣವಾದ ಚರ್ಚೆಯ ಲಾಭವನ್ನು ನಾವೆಲ್ಲರೂ ಪಡೆಯುವದರಲ್ಲಿ ಸಂಶಯವಿಲ್ಲ.

ಧಾರವಾಡ ಜಿಲ್ಲೆಯ ಡಿ, ಇ. ಆಯ್. ರವರಾದ ಶ್ರೀ ಎಸ್. ಜಿ. ಗವಿಮಠರವರು ತರುಣರೂ, ಉತ್ಸಾಹಿಗಳೂ ಆಗಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಇವರ ಜಿಜ್ಞಾಸೆ ಬಹುಶ್ರುತವಾಗಿದೆ. ಇಂಥ ಉತ್ತಮ ಅಧಿಕಾರಿಗಳು ನಮ್ಮ ಶಿಕ್ಷಕ-ಶಿಕ್ಷಕಿಯರ ಮಾರ್ಗದರ್ಶನಕ್ಕಾಗಿ ದೊರೆತಿರುವದು ತೀರ ಲಾಭದಾಯಕವಾಗಿದೆ. ಈ ಪರಿಷತ್ತಿಗೆ ಧಾರವಾಡ ವಿಭಾಗದ ಕ್ರಾಫ್ಟ ಆರ್ಗನಾಯಿಜರರಾದ ಶ್ರೀ ಎಫ್. ಸಿ. ಉಣಕಲ್ಲರವರೂ ಹಾಗೂ ಬೇರೆ ಬೇರೆ ಭಾಗಗಳ ಎ.ಡಿ.ಇ.ಆಯ್. ರವರೂ ಆಗಮಿಸಿರುವದು ವೈಶಿಷ್ಟ್ಯಪೂರ್ಣವಾಗಿದೆ. ಈ ಎಲ್ಲ ಮಹನೀಯರು ನಮ್ಮ ಪರಿಷತ್ತಿನ ವಿವಿಧ ಅಂಗಗಳಲ್ಲಿ ತಮ್ಮ ಸಹಾಯವನ್ನು ಸಲ್ಲಿಸಲಿದ್ದಾರೆ.

ಪ್ರಾಥಮಿಕ ಶಿಕ್ಷಣದಲ್ಲಿ ಜೀವನ ಶಿಕ್ಷಣ ಯೋಜನೆಯು ಅತ್ಯುತ್ತಮವೆಂದು ಪ್ರಥಮ ದರ್ಜೆಯ ಅನೇಕ ಶಿಕ್ಷಣ ತಜ್ಞರು ಪ್ರತಿಪಾದಿಸುತ್ತಿದ್ದಾರೆ. ಅದೇ ಕಾಲಕ್ಕೆ ದೇಶದ ನಾನಾ ಮೂಲೆಗಳಿಂದ ವಿರೋಧಾಭಾಸದ ಅಭಿಪ್ರಾಯಗಳು ಕೇಳಬರುತ್ತವೆ. ನವ ಕರ್ನಾಟಕದ ಸಂಕ್ರಾಂತಿಯ ಈ ಸಮಯದಲ್ಲಿ ಭಾವೀ ಪೀಳಿಗೆಯನ್ನು ತಯಾರಿಸತಕ್ಕ ಪ್ರಾಥಮಿಕ ಶಿಕ್ಷಣದ ಸರ್ವಾಂಗೀಣ ಹಾಗೂ ಸಮರ್ಪಕ ಯೋಜನೆಯ ಬಗ್ಗೆ ಇಲ್ಲಿ ಕೂಡಿದ ತಜ್ಞರು ವಿಚಾರಿಸುವರಾಗಿ ನಂಬಿದ್ದೇನೆ. ಇಂದಿನ

ಹಿರಿಯರು ಈ ದಿಶೆಯಲ್ಲಿ ಮಾರ್ಗದರ್ಶನ ಮಾಡಬೇಕೆಂದು ಕೋರುತ್ತೇನೆ.

ಈ ಸಮಾರಂಭಕ್ಕೆ ಹಾವೇರಿ ನಗರ ಸಭೆಯ ಅಧ್ಯಕ್ಷರೂ ಮತ್ತು ಸದಸ್ಯರೂ, ನಗರದ ಹಿರಿಯ ವ್ಯಕ್ತಿಗಳೂ ಮತ್ತು ತಾಲೂಕಿನ ಪ್ರಮುಖರೂ, ಶಿಕ್ಷಣಾಭಿಮಾನಿಗಳೂ, ಡಿ. ಎಲ್. ಬಿ. ಮತ್ತು ಡಿ. ಎಸ್. ಬಿ. ಸದಸ್ಯರೇ ಮೊದಲಾದ ಅನೇಕ ಮಹನೀಯರೂ ಇಲ್ಲಿ ಸಮ್ಮಿಲಿತರಾಗಿರುವದನ್ನು ನೋಡಿ ನನ್ನ ಆನಂದವು ಉಕ್ಕಿ ಬರುತ್ತಿದೆ. ಸರಕಾರಿ ಅಧಿಕಾರಿಗಳೂ, ಧಾರವಾಡ, ಹುಬ್ಬಳ್ಳಿ ಮೊದಲಾದ ಮುನಸಿಪಲ್ ಕ್ಷೇತ್ರದ ಶಿಕ್ಷಕರೂ ಇಲ್ಲಿ ಆಗಮಿಸಿದ್ದಾರೆ. ತಮ್ಮ ಸಮಸ್ಯೆಗಳಿಗೆ ಪರಿಹಾರ ವನ್ನು ಕಂಡುಕೊಳ್ಳಲು ಶಿಕ್ಷಕ-ಶಿಕ್ಷಕಿಯರೂ ನೂರಾರು ಸಂಖ್ಯೆಯಲ್ಲಿ ಬಂದಿದ್ದಾರೆ. ಅವರೆಲ್ಲರನ್ನೂ ಆದರದಿಂದ ಸ್ವಾಗತಿಸುತ್ತೇನೆ. ಈ ಪರಿಷತ್ತಿನ ವೈಶಿಷ್ಟ್ಯವೆಂದರೆ, ಇದು ಕೇವಲ ಶಿಕ್ಷಕರಿಂದಲೇ ಹುಟ್ಟಿ, ಯೋಜಿಸಿ ಕಾರ್ಯ ಗತವಾಗಿದೆ. ಶಿಕ್ಷಕರ ಸಂಘಗಳು ಕೇವಲ ತಮ್ಮ ಬೇಡಿಕೆ ಗಳನ್ನು ಮಂಡಿಸಲು ಕೂಡಿದ ಕೂಲಿಕಾರ ಸಂಘಗಳಲ್ಲ; ಅವು ತಮ್ಮ ಕ್ಷೇತ್ರದಲ್ಲಿ ತಮ್ಮ ಕರ್ತವ್ಯದ ಪಾವಿತ್ರ್ಯತೆ ಯನ್ನು ಅರಿತು ಅದರ ಶ್ರೇಷ್ಠ ನಿರ್ವಹಣೆಗಾಗಿ ಹೆಣಗಾಡುವ ಸಜೀವ ಸಂಸ್ಥೆಗಳು, ಈ ತಾಲೂಕಿನ ಶಿಕ್ಷಕರು ತಮ್ಮ ಅಡೆತಡೆಗಳನ್ನು ನಿವಾರಿಸಿಕೊಳ್ಳಲು ತಜ್ಞರನ್ನು ಆಮಂತ್ರಿಸಿ, ಇಂಥ ಸಮಾರಂಭವನ್ನು ಹೂಡಿದ್ದು, ಈ ಜಿಲ್ಲೆಯ ಶಿಕ್ಷಕರ ಇತಿಹಾಸದಲ್ಲೇ ಅಪೂರ್ವವಾದದ್ದು. ಬೇರೆ ಬೇರೆ ತಾಲೂಕಿನ ಸಂಘಗಳು ಹಾವೇರಿ ತಾಲೂಕಿನ ಮಾದರಿಯನ್ನು ಅನುಸರಿಸುವ ವೆಂದು ನಂಬಿದ್ದೇನೆ.

ನಮ್ಮ ಈ ದೊಡ್ಡ ಕಾರ್ಯದಲ್ಲಿ ಮಾಡಬೇಕಾದ ಹಲವಾರು ಕಾರ್ಯಕ್ರಮಗಳಲ್ಲಿ ವಿವಿಧ ಲೋಪದೋಷಗಳ ಾಗುವದುಂಟು. ಶಿಕ್ಷಣಾಭಿಮಾನಿಗಳೂ, ತಜ್ಞರೂ ಸುಹೃದಯರೂ ಆದ ತಾವು ತಮಗಾಗಬಹುದಾದ ಎಲ್ಲ ತೊಂದರೆಗಳನ್ನು ಸಹಿಸಿಕೊಂಡು ನಮ್ಮ ದೋಷಗಳಿಗೆ ಕ್ಷಮೆಯನ್ನು ನೀಡಬೇಕೆಂದು ಕೋರುತ್ತೇನೆ.

ಶಿಕ್ಷಕರೂ, ಅಧಿಕಾರಿಗಳು ತಜ್ಞರೂ ಸಮ್ಮಿಲಿತ ರಾಗಿರುವ ಈ ಕಾರ್ಯಕ್ರಮವನ್ನು ತಾವೆಲ್ಲರೂ ನಡೆಸಿ ಕೊಂಡು ಹೋಗಬೇಕೆಂದು ಪ್ರಾರ್ಥಿಸಿ, ಸರ್ವರಿಗೂ ಮತ್ತೊಮ್ಮೆ ಸ್ವಾಗತವನ್ನು ಬಯಸುತ್ತೇವೆ.

ಜೈ-ಹಿಂದ್

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ
ಸಾಮಾನ್ಯ. ಪ್ರಾ. ಶಾ. ಪ್ರ. ಪರೀಕ್ಷೆಯ
ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೀಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]

೪ ರಿಂದ ೭ ನೇಯ ವರ್ಗದ ವರೆಗಿನ
ವಿಷಯವನ್ನೆಲ್ಲ ಒಳಗೊಂಡಿದೆ.
ಬೆಲೆ: ೧ರೂ. ೪ಆಣೆ ಮಾತ್ರ

ದೊರೆಯುವ ಸ್ಥಳ:—

ಸಾಯಿ ಪಬ್ಲಿಶಿಂಗ್ ಹಾವುಸ್,
ವಿಜಯ ರೋಡ, ಧಾರವಾಡ.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ
ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು
ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. ಬೆಲೆ ೧—೧೨—೦ ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.
ಇದು ಕನ್ನಡದಲ್ಲಿಯೂ ಸಿಗುತ್ತದೆ,

ಜಿ. ನಾಯ್‌. ರಾಣೆ
ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.

ಹಾವೇರಿ ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕ-ಶಿಕ್ಷಕಿಯರ ಸಂಘದ ಪರವಾಗಿ ಜರುಗಿದ ಶೈಕ್ಷಣಿಕ ಸಮ್ಮೇಲನದಲ್ಲಿ ಅಧ್ಯಕ್ಷಸ್ಥಾನ ವಹಿಸಿದ ಶ್ರೀ ಎಸ್. ವ್ಹಿ. ಜೇವೂರ, ಡೆಪ್ಯುಟಿ ಡಾಯರೆಕ್ಟರ ಧಾರವಾಡ ವಿಭಾಗ ಇವರು ಮಾಡಿದ

ಅಧ್ಯಕ್ಷೀಯ ಭಾಷಣ

ಇಂದಿನ ಶುಭಸಮಾರಂಭಕ್ಕೆ ಬಂದು ಅಧ್ಯಕ್ಷ ಸ್ಥಾನವನ್ನು ವಹಿಸಲು ನನಗೆ ತುಂಬಾ ಅಭಿಮಾನವೆನಿಸುತ್ತದೆ. ಈ ಸಭೆಯಲ್ಲಿ ಅಧಿಕಾರಿಗಳೂ, ಶಿಕ್ಷಕರೂ, ಹಾಗೂ ಪಾಲಕರೂ ಕೂಡಿಕೊಂಡು ಶೈಕ್ಷಣಿಕ ವಿಷಯಗಳ ಬಗೆಗೆ ಚರ್ಚೆ ಮಾಡಲಿರುವರು. ಈ ಉಪಕ್ರಮವು ವಿಶೇಷ ಲಾಭದಾಯಕವಾಗುವದರಲ್ಲಿ ಯಾವ ಸಂದೇಹವೂ ಇಲ್ಲ. ಹಾವೇರಿ ತಾಲೂಕಿನ ಪರಿಷತ್ತು ಪ್ರಾಥಮಿಕ ಶಿಕ್ಷಕರಿಂದಲೇ ಯೋಜಿಸಲ್ಪಟ್ಟು ಅವರಿಂದಲೇ ಕಾರ್ಯಗತ ಮಾಡಲ್ಪಟ್ಟಿರುವದು ವೈಶಿಷ್ಟ್ಯಪೂರ್ಣವಾಗಿದೆ. ಈ ಸಮಾರಂಭವು ಉಳಿದ ಭಾಗದ ಶಿಕ್ಷಕರಿಗೆ ಯೋಗ್ಯ ಮಾರ್ಗದರ್ಶನವನ್ನು ಮಾಡುತ್ತಿದೆ.

ಈ ಶೈಕ್ಷಣಿಕ ಪರಿಷತ್ತನ್ನು ಉದ್ಘಾಟಿಸಲು ದೊರೆತ ರ್‍ಯಾಂಗ್ಲರ ಡಿ. ಸಿ. ಪಾವಟೆ ಸಾಹೇಬರವರು ಶಿಕ್ಷಣದ ಪವಿತ್ರ ಕ್ಷೇತ್ರದಲ್ಲಿ ತಮ್ಮ ಅಮೂಲ್ಯವಾದ ಜೀವನವನ್ನೇ ಸವಿಸಿದ್ದಾರೆ. ಇಂದಿಗೂ ಸಹ ನವಚೈತನ್ಯದಿಂದ ನವಕರ್ನಾಟಕದ ಹೊಸ ಶಿಕ್ಷಣ ಕ್ರಮವನ್ನು ರೂಪಿಸುವದರಲ್ಲಿ ವಿಶೇಷ ಪರಿಶ್ರಮವನ್ನು ವಹಿಸುತ್ತಲಿದ್ದಾರೆ. ಅವರ ವಿದ್ವತ್ಪೂರ್ಣ ಮಾರ್ಗದರ್ಶನವು ಇಂದು ನಮ್ಮ ನಿಮ್ಮೆಲ್ಲರಿಗೂ ದೊರೆತದ್ದು ಸುದೈವವೇ ಸರಿ!

ಪ್ರಾಥಮಿಕ ಶಿಕ್ಷಣವು ಜನತೆಯ ನಿಜವಾದ ಕಲ್ಯಾಣವನ್ನು ಸಾಧಿಸಬೇಕಾದರೆ ಅವರ ಅಭಿಪ್ರಾಯಗಳನ್ನು ಬಹುಮಟ್ಟಿಗೆ ಮನ್ನಿಸಬೇಕಾಗುವದು. ಸರಕಾರವು ಜನತೆಯನ್ನು ವಿಶ್ವಾಸದಲ್ಲಿ ತೆಗೆದುಕೊಂಡೇ ಎಲ್ಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತಲಿದೆ. ಯಾವದಾದರೊಂದು ಗ್ರಾಮದ ಅಭಿವೃದ್ಧಿ ಯೋಜನೆಯನ್ನು ಕೈಕೊಳ್ಳುವಾಗ ಸ್ಥಳಿಕ ಜನರ ಹಾರ್ದಿಕ ಸಹಾಯ ಸಹಕಾರಗಳನ್ನು ಪಡೆದುಕೊಳ್ಳುವದು. ಗ್ರಾಮದ ಜನರು ತಮ್ಮ ಏಳ್ಗೆಗಾಗಿ ತನು, ಮನ, ಧನಗಳನ್ನು ನೀಡಿ ಸಹಕರಿಸುವರು. ಈ ರೀತಿ ಮಾಡುವದರಿಂದ ಜನತೆಯ ಆಶೆ ಆಕಾಂಕ್ಷೆಗಳು ಈಡೇರಿ ಪ್ರಗತಿಯು ಸಾಧಿಸುವದು. ಅದೇ ಮೇರೆಗೆ ಶಿಕ್ಷಣ ಕಾರ್ಯದಲ್ಲಿಯೂ ಜನತಾಭಿಪ್ರಾಯಕ್ಕೆ ಸರಿಯಾದ ಸ್ಥಾನವಿರುವದು ಉಚಿತವಾಗಿದೆ. ಸ್ಥಾನಿಕ ಸ್ಕೂಲಬೋರ್ಡ ಮುಂತಾದ ಸಂಸ್ಥೆಗಳ ಮುಖಾಂತರ ಜನರ ಅಭಿಪ್ರಾಯಗಳನ್ನು ಸಂಗ್ರಹಿಸಿಕೊಳ್ಳುವದಲ್ಲದೆ ಅವೇ ಸಂಸ್ಥೆಗಳ ಮೂಲಕವಾಗಿಯೇ ಶಿಕ್ಷಣ ಪ್ರಸಾರ ಕಾರ್ಯವನ್ನು ಕೈಕೊಳ್ಳುವದೇ ಸೂಕ್ತವಾದುದು. ಪಾಲಕರೂ, ಶಿಕ್ಷಣತಜ್ಞರೂ, ತಮ್ಮ ಮಕ್ಕಳಿಗೆ ಯಾವ ತರಹದ ಶಿಕ್ಷಣ ಬೇಕೆಂಬುದನ್ನು ಇಂಥ ಜನತಾ ಸಂಸ್ಥೆಗಳ ಮೂಲಕವಾಗಿಯೇ ಸರಕಾರಕ್ಕೆ ನಿವೇದಿಸುವರು. ಶಿಕ್ಷಣ ಕಾರ್ಯದಲ್ಲಿ ಇಂಥ ಸಾರ್ವಜನಿಕ ಸಂಸ್ಥೆಗಳು ಎಲ್ಲ ತರಹದ ಸಹಾಯ ಸಲಕರಣೆಗಳನ್ನು ಒದಗಿಸುವಲ್ಲಿ ಆಸ್ಥೆವಹಿಸುವವು. ಜನತಾ ರಾಜ್ಯದಲ್ಲಿ ಜನತೆಯು ಶಿಕ್ಷಣದ ಬಗ್ಗೆ ಆಸ್ಥೆವಹಿಸುವದು ತುಂಬಾ ಯೋಗ್ಯವಾಗಿದೆ.

ಶಾಲೆಯ ಆಡಳಿತೆಯಲ್ಲಿ ಶಿಕ್ಷಕರ ಮತ್ತು ತಪಾಸಣೆಯ ಅಧಿಕಾರಿಗಳ ನಿಕಟ ಸಂಬಂಧವು ಬರುವದು. ತಪಾಸಣೆಯ ಅಧಿಕಾರಿಗಳು ಶಿಕ್ಷಕರನ್ನು ಸನ್ಮಿತ್ರರೆಂದು ಭಾವಿಸಿ ಅವರ ಕಾರ್ಯದಲ್ಲಿ ಯೋಗ್ಯ ಮಾರ್ಗದರ್ಶನವನ್ನು ಮಾಡಬೇಕು. ಶಿಕ್ಷಕರನ್ನು ವಿಶ್ವಾಸದಲ್ಲಿ ತೆಗೆದುಕೊಂಡು ಶಾಲಾ-ಆಡಳಿತೆಯನ್ನು ಸುಧಾರಿಸಬೇಕು. ಪ್ರತಿಯೊಂದು ಶಾಲೆಯು ತನ್ನ ವಿಶಿಷ್ಟ ಪರಿಸ್ಥಿತಿಗನುಸಾರವಾಗಿ ರೂಪಗೊಂಡಿರುತ್ತದೆ. ಶಾಲೆಯ ಅಧಿಕಾರಿಗಳು ಪ್ರತಿಯೊಂದು ಶಾಲೆಯ ಪರಿಸ್ಥಿತಿಯನ್ನು ಇಡಿಯಾಗಿ ಅಭ್ಯಸಿಸಿ ಅಲ್ಲಿ ಎದುರಿಸಬೇಕಾದ ಸಮಸ್ಯೆಗಳನ್ನು ಕಂಡುಹಿಡಿಯಬೇಕು. ಆಯಾ ಶಾಲೆಗಳ ಶಿಕ್ಷಕರು ಹಾಗೂ ಅಧಿಕಾರಿಗಳು ಪರಸ್ಪರ ಸಹಕಾರದಿಂದ ಪ್ರಯತ್ನಿಸಿ ತಮ್ಮ ತಮ್ಮ ಶಾಲೆಗಳ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸಬೇಕಾಗುವದು. ಶಾಲೆಯ ಸ್ಥಳಾವಕಾಶ, ಶಿಕ್ಷಕರ ಯೋಗ್ಯತೆ, ಸಲಕರಣೆ, ಪಾಲಕರ ಸಹಕಾರ ಮುಂತಾದವುಗಳು ಎಲ್ಲ ಕಡೆಗೂ ಒಂದೇ ತೆರನಾಗಿರುವದಿಲ್ಲ. ಆದ್ದರಿಂದ ಮಾರ್ಗದರ್ಶಕ ಅಧಿಕಾರಿಗಳು ಸ್ಥಾನಿಕ ಪರಿಸ್ಥಿತಿಯನ್ನು ವಿವರವಾಗಿ ಅಭ್ಯಸಿಸಬೇಕು.

ಎಲ್ಲ ಶಾಲೆಗಳಲ್ಲಿಯೂ, ಒಂದೇ ತರದ ನಿರ್ದಿಷ್ಟ ಸೂಚನೆಗಳನ್ನೇ ಕೊಡುತ್ತ ಹೋಗುವದರಲ್ಲಿ ಯಾವ ಲಾಭವಿಲ್ಲ. ಆದ್ದರಿಂದ ಶಿಕ್ಷಣ ಪ್ರಗತಿಯ ಕಾರ್ಯದಲ್ಲಿ ಅಧಿಕಾರಿಗಳೂ, ಶಿಕ್ಷಕರೂ, ಪರಿಸ್ಥಿತಿಯನ್ನು ಮನದಂದು ಮುನ್ನಡೆಯಬೇಕು.

ನಮ್ಮ ಬಡದೇಶದಲ್ಲಿ ಶಿಕ್ಷಣ ಪ್ರಸಾರವಾಗಬೇಕಾದರೆ ನಾವೆಲ್ಲರೂ ದೇಶಸೇವಾಭಾವನೆಯಿಂದ ದುಡಿಯಬೇಕು. ಸ್ವತಂತ್ರ ರಾಷ್ಟ್ರಕ್ಕೆ ಯೋಗ್ಯವಾಗುವ ಶಿಕ್ಷಣ ಯೋಜನೆಯನ್ನು ತಜ್ಞರು ನಮಗೆ ಕೊಟ್ಟಿದ್ದಾರೆ. ಅದೇ ಇಂದಿನ ಜೀವನ ಶಿಕ್ಷಣ ಅಥವಾ 'ಬೇಸಿಕ್ ಶಿಕ್ಷಣ'. ಮಹಾತ್ಮಾ ಗಾಂಧಿಯವರ ಆಶೀರ್ವಾದವನ್ನು ಪಡೆದ ಈ ಯೋಜನೆಯು ನಮ್ಮ ರಾಷ್ಟ್ರದಾದ್ಯಂತ ತೀವ್ರವಾಗಿ ಪ್ರಸಾರಗೊಳ್ಳತೊಡಗಿದೆ. ಹಳೆಯ ಶಿಕ್ಷಣದಲ್ಲಿ ಸರಕಾರಿ ಖಾತೆಗಳಿಗೆ ಯೋಗ್ಯರಾದ ನವಕರರನ್ನು ತಯಾರಿಸುವದೇ ಮುಖ್ಯ ಗುರಿಯಾಗಿತ್ತು. ರಾಷ್ಟ್ರೀಯ ಜಾಗ್ರತಿಯನ್ನು ಅದು ಉಂಟು ಮಾಡುತ್ತಿದ್ದಿಲ್ಲ. ಹಿಂದಿನ ಕಾಲದಲ್ಲಿ ಗುರುಗಳೂ, ಶಿಷ್ಯರೂ ಒಂದೇ ಕಡೆಗೆ ಕುಳಿತು ವ್ಯಾಸಂಗ ಮಾಡುತ್ತಿದ್ದರು. ಕೆಲಮಟ್ಟಿಗೆ ಸ್ವಾವಲಂಬಿ ಇದ್ದರು. ಆದರೆ ರಾಷ್ಟ್ರೀಯ ಜಾಗ್ರತೆಯು ಆಗ ಇರಲಿಲ್ಲ. ಶಿಕ್ಷಣವು ಜನಜೀವನವನ್ನು ಮಾರ್ಪಡಿಸಲು ವಿಶೇಷವಾಗಿ ಯತ್ನಿಸಲಿಲ್ಲ. ಆದ್ದರಿಂದ ಹಿಂದಿನ ಶಿಕ್ಷಣ ಕ್ರಮದಲ್ಲಿ ಕೆಲವೊಂದು ಉತ್ತಮ ಅಂಶಗಳು ಇದ್ದರೂ ಅದನ್ನು ಈಗ ತ್ಯಜಿಸಬೇಕಾಗಿದೆ.

ಜೀವನ ಶಿಕ್ಷಣವು ರಾಷ್ಟ್ರೀಯ ಶಿಕ್ಷಣವೆಂದು ಸ್ವೀಕರಿಸಲ್ಪಟ್ಟಿದೆ. ಈ ಯೋಜನೆಯಲ್ಲಿ ಮಗುವು ತನ್ನ ಸುತ್ತುಮುತ್ತಲಿನ ಪರಿಸರಗಳ ಮುಖಾಂತರ ಶಿಕ್ಷಣ ಪಡೆಯುವನು. ಯಾವದಾದರೊಂದು ವೃತ್ತಿಯನ್ನೂ ಕಲಿತುಕೊಳ್ಳುವನು. ಜೀವನ ಶಿಕ್ಷಣವು ಮಗುವಿನ ಶಾರೀರಿಕ ಬೌದ್ಧಿಕ, ಮಾನಸಿಕ ಸಮತೋಲ ಬೆಳವಣಿಗೆಯನ್ನು ಸಾಧಿಸಲೆತ್ನಿಸುವದು. ಮಗುವು ಕ್ರಿಯಾಶೀಲನಾಗಿರುವದರಿಂದ ಅವನು ಮಾಡುವ ಉದ್ಯೋಗವು ಅವನಿಗೆ ವಿಶೇಷ ಆನಂದವನ್ನು ಕೊಡುತ್ತದೆ. ಶಾಲೆಯಲ್ಲಿ ಗುರುಗಳೊಡನೆ ಹಾಗೂ ಮಿತ್ರರೊಡನೆ ಪ್ರೀತಿ ವಿಶ್ವಾಸಗಳಿಂದ ಬಾಳಿ ನಾಗರಿಕ ಗುಣಗಳನ್ನು ಅಳವಡಿಸಿಕೊಳ್ಳುವನು. ಇಂದಿನ ಶಿಕ್ಷಣವು ಮಗುವಿನ ಸಮಗ್ರ ಬೆಳವಣಿಗೆಯನ್ನು ಲಕ್ಷಿಸುವದರಿಂದ ಹಿಂದಿನ ಎಲ್ಲ ಶೈಕ್ಷಣಿಕ ಕ್ರಮಗಳಿಗಿಂತಲೂ ವಿಶೇಷ ಪ್ರಗತಿ ಪರವಾಗಿದೆ. ಅಮೇರಿಕೆಯಂತಹ ಮುಂದುವರಿದ ರಾಷ್ಟ್ರಗಳಲ್ಲಿಯೂ ಕೂಡ ಈ ವಿಚಾರವು ಮನ್ನಣೆಯನ್ನು ಪಡೆದಿದೆ.

ಯಾವದೇ ಶಿಕ್ಷಣ ಯೋಜನೆಯನ್ನು ಬಳಿಕೆಯಲ್ಲಿ ತರಲು ಶಿಕ್ಷಕರೇ ವಿಶೇಷ ಆಸ್ಥೆಯನ್ನು ವಹಿಸಬೇಕಾಗುವದು ಅವರ ಪರಿಶ್ರಮಪೂರ್ಣ ಪ್ರಯತ್ನಗಳೇ ಶಿಕ್ಷಣದ ಯಶಸ್ಸಿಗೆ ಕಾರಣವಾಗುವವು. ಇತ್ತೀಚೆಗೆ ಶಿಕ್ಷಕರು ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ತನ್ಮೂಲಕ ತಮ್ಮ ಬೇಡಿಕೆಗಳನ್ನು ಖಾತೆಯ ಪರಿಸ್ತಾರ ಮುಂದೆ ಮಂಡಿಸುವರು. ಆರ್ಥಿಕ ಬಾಧೆಯನ್ನು ನೀಗಿಸಲು ಪಗಾರ, ಭತ್ತೆ ಮುಂತಾದವುಗಳನ್ನು ಹೆಚ್ಚಿಸಬೇಕೆಂದು ವಿನಂತಿಸುತ್ತಿರುವರು. ಶಿಕ್ಷಕರ ಪಗಾರವನ್ನು ಹೆಚ್ಚಿಸಿ ಅವರ ಪ್ರಾಸಂಚಿಕ ತಾಪತ್ರಯಗಳನ್ನು ಪರಿಹರಿಸುವ ವಿಚಾರದಲ್ಲಿ ನನ್ನ ಸಂಪೂರ್ಣ ಸಹಕಾರ ಸಹಾನುಭೂತಿಗಳುಂಟು. ಆರ್ಥಿಕ ದುರ್ದೆಶೆಯಿಂದ ಬಳಲುವ ವ್ಯಕ್ತಿಯು ಶಾಲೆಯಲ್ಲಿ ಮನಮುಟ್ಟಿ ದುಡಿಯಲಾರ. ಈ ಸಮಯದಲ್ಲಿ ಶಿಕ್ಷಕರಿಗೆ ಹೇಳಬೇಕಾದ ಮಾತೆಂದರೆ, ಅವರು ತಮ್ಮ ಹೊಣೆಗಾರಿಕೆಯನ್ನು ಅರಿತು ಕಾರ್ಯ ಮಾಡಬೇಕೆಂಬುದೇ ಆಗಿದೆ. ಕೇವಲ ಪಗಾರವನ್ನು ತೋರಿಸಿ ತಮ್ಮ ಕಾರ್ಯವನ್ನು ಕಡೆಗಣಿಸಬಾರದು. ಸೇವಾಭಾವನೆಯಿಂದ ಕಾರ್ಯತತ್ಪರರಾದರೆ ಮಾತ್ರ ಮಕ್ಕಳ ಕಲ್ಯಾಣವಾಗುವದು. ಶಿಕ್ಷಕರು ಸಮಾಜದಲ್ಲಿ ಸುಶೀಲರಾಗಿ ಸಹಕಾರದಿಂದ ವರ್ತಿಸಬೇಕು. ಸಾಮಾಜಿಕ ಸ್ಥಾನಮಾನಗಳನ್ನು ತಮ್ಮ ವರ್ತನೆಯಿಂದಲೇ ಗಳಿಸಿಕೊಳ್ಳಬೇಕಲ್ಲದೆ ಯಾಚಿಸುವದು ಯೋಗ್ಯವಾಗಲಾರದು. ಶಿಕ್ಷಕರು ಪ್ರಗತಿಶೀಲ ವಿಚಾರದವರಿರಬೇಕು. ಹೊಸ ಹೊಸ ಜ್ಞಾನವನ್ನು ಸಂಗ್ರಹಿಸಿ ಮಕ್ಕಳಿಗೆ ಪೂರೈಸಬೇಕು. ಕಲಿಸುವ ತಂತ್ರದಲ್ಲಿ ವಿಶೇಷ ಪ್ರಯೋಗಗಳನ್ನು ಕೈಕೊಂಡರೆ ಅವರ ಯೋಗ್ಯತೆಯು ಬೆಳೆಯುವದು.

ಪ್ರತಿಯೊಂದು ಶಾಲೆಯು ಮುಖ್ಯ ಗುರುಗಳ ನೇತೃತ್ವದಲ್ಲಿ ಸುಂದರವಾದ ಕುಟುಂಬದಂತೆ ಕಾರ್ಯ ಸಾಗಿಸಬೇಕು. ಹಿರಿಯ ಗುರುಗಳು ಉಪಗುರುಗಳನ್ನು ಬಂಧುಗಳೆಂದು ಭಾವಿಸಿ ಅವರಿಗೆ ಯೋಗ್ಯ ಮಾರ್ಗದರ್ಶನ ಮಾಡಬೇಕು. ತಜ್ಞರ ನೇತೃತ್ವದಲ್ಲಿ ಮೇಲಿಂದ ಮೇಲೆ ತಮ್ಮ ಕೆಲಸಕ್ಕೆ ಅನುಕೂಲವಾಗುವಂತೆ ವಿಚಾರ ಸಂಕಿರಣಗಳನ್ನು ಏರ್ಪಡಿಸಿಕೊಳ್ಳಬಹುದು. ಅಭ್ಯಾಸ ಪತ್ರಿಕೆ, ಶಿಕ್ಷಣತಂತ್ರ, ಉಪಕರಣ ಮುಂತಾದವುಗಳ

ಬಗೆಗೆ ಚರ್ಚೆಯನ್ನೇರ್ಪಡಿಸಿ ತಮ್ಮ ತಮ್ಮ ಸಂಶಯಗಳನ್ನು ನಿವಾರಿಸಿಕೊಳ್ಳಬೇಕು.

ಈ ತಾಲೂಕಿನ ಇಂದಿನ ಸಮ್ಮೇಲನವು ಶಿಕ್ಷಕರ ಕಾರ್ಯನಿರ್ವಹಣೆಯಲ್ಲಿ ಹೊಸ ಹಾದಿಯನ್ನು ತೋರುವದೆಂದು ನಂಬಿದ್ದೇನೆ. ಉಳಿದ ಭಾಗದ ಶಿಕ್ಷಕರೂ ಕೂಡ ಇದೇ ಮಾದರಿಯ ಮೇಲೆ ತಮ್ಮತಮ್ಮ ಸಮಸ್ಯೆಗಳನ್ನು ಚರ್ಚಿಸಿಕೊಳ್ಳಬೇಕೆಂದು ಸೂಚಿಸ ಬಯಸುತ್ತೇನೆ.

ಪ್ರಾಥಮಿಕ ಶಿಕ್ಷಣದ ಮಟ್ಟ ಕಡಿಮೆಯಾಗಿದೆಯೇ?

ಹಾವೇರಿ ತಾಲೂಕಿನ ಪ್ರಾ. ಶಿಕ್ಷಕ-ಶಿಕ್ಷಿಕೆಯರ ಸಮ್ಮೇಲನದಲ್ಲಿ ಮಾಡಿದ ಭಾಷಣ

ಭಾಷಣಕಾರರು: **ಶ್ರೀ ಜಿ. ಕೆ. ಕೊಪ್ಪಿಕರ, ಜಿಲ್ಹಾ ಶಿಕ್ಷಣಾಧಿಕಾರಿಗಳು ಧಾರವಾಡ.**

ದಿನಾಂಕ ೧೬—೩—೧೯೫೮

ಮಗುವಿಗೆ ಪ್ರಾಥಮಿಕ ಶಿಕ್ಷಣವು ಅತಿ ಮಹತ್ವದ್ದು. ನಮ್ಮ ದೇಶವು ಸ್ವತಂತ್ರವಾದ ಬಳಿಕ ಪ್ರಾಥಮಿಕ ಶಿಕ್ಷಣದ ಬಗೆಗೆ ಎಲ್ಲರೂ ಹೆಚ್ಚು ಲಕ್ಷ್ಯ ಪೂರೈಸುತ್ತಿರುವದು ಸಂತೋಷದ ಸಂಗತಿ. ಭಾರತ ಸರಕಾರದವರು ೬ ರಿಂದ ೧೧ ವರುಷದ ಎಲ್ಲ ಮಗುಗಳಿಗೆ ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ದೊರಕಿಸಿಕೊಡಲು ತೀವ್ರವಾಗಿ ಆಲೋಚಿಸುತ್ತಿದ್ದಾರೆ. ಆ ದಿಶೆಯಲ್ಲಿ ಎಲ್ಲ ಪ್ರಾಂತಿಕ ಸರಕಾರಗಳೂ ತಮ್ಮ ಶಕ್ತಿಮೀರಿ ಪ್ರಯತ್ನಿಸಹತ್ತಿವೆ. ಉಚ್ಚ ಮಟ್ಟದ ಪ್ರಾ. ಶಿಕ್ಷಣವನ್ನು ಕೊಡುವದರ ಬಗೆಗೆ ಅನೇಕ ತಜ್ಞರೂ ಶಿಕ್ಷಕರೂ ಜನಸಾಮಾನ್ಯರೂ ವಿಚಾರಿಸಹತ್ತಿದ್ದಾರೆ. ಸಾಮಾನ್ಯವಾಗಿ ಇಂದಿನ ಪ್ರಾಥಮಿಕ ಶಿಕ್ಷಣದ ಮಟ್ಟ ಕಡಿಮೆಯಾಗಿದೆ ಎನ್ನುವ ವಿಚಾರವು ಎಲ್ಲ ಭಾಗಗಳಿಂದಲೂ ಕೇಳಬರುತ್ತದೆ. ಪ್ರಾ. ಶಿಕ್ಷಣವು ಅತಿ ಮಹತ್ವದ ಘಟ್ಟವಾಗಿರುವದರಿಂದ ಅದರ ಮಟ್ಟ ನಿಜವಾಗಿಯೂ ಕಡಿಮೆಯಾಗಿದೆಯೇ? ಎನ್ನುವ ಬಗೆಗೆ ವಿಚಾರಿಸೋಣ.

ಶೈಕ್ಷಣಿಕ ಮಟ್ಟಗಳನ್ನು ಅಳೆಯುವ ವಿಧಾನವು ವಿವಿಧ ಜನರಲ್ಲಿ ಬೇರೆ ಬೇರೆ ತೆರನಾಗಿದೆ. ಸರ್ವಸಮ್ಮತವಾಗುವ ಶೈಕ್ಷಣಿಕ ಅಳತೆಗೋಲು ನಮಗೆ ದೊರೆತಿಲ್ಲ. ಆಯಾಕಾಲಕ್ಕನುಸರಿಸಿ ಅವಶ್ಯವಿರುವ ವಿಷಯಗಳನ್ನು ಕಲಿಯುವದರ ಮೇಲಿಂದ ಮಟ್ಟ ಹೆಚ್ಚು ಅಥವಾ ಕಡಿಮೆಯಾಗಿದೆ ಎಂದು ಜನರು ಅಭಿಪ್ರಾಯ ಪಡುತ್ತಾರೆ. ಪರೀಕ್ಷಾ ಪದ್ಧತಿಗಳಲ್ಲಿಯೂ ಕಾಲಕಾಲಕ್ಕೆ ಬದಲಾವಣೆಗಳು ಆಗುತ್ತ ನಡೆದಿರುವದು ಎಲ್ಲರ ಅನುಭವಕ್ಕೆ ಬಂದ ಮಾತು. ಶೈಕ್ಷಣಿಕ ಸಂಶೋಧಕರು ಬಹಳ ಪ್ರಯಾಸದಿಂದ ಅತಿ ಯೋಗ್ಯವಾದ ಪರೀಕ್ಷಾ ಪದ್ಧತಿಯನ್ನು ಸೂಚಿಸಲು ಯತ್ನಿಸಿದ್ದಾರೆ. ಚಿಕ್ಯಾಗೊ (ಅಮೇರಿಕಾ) ವಿಶ್ವವಿದ್ಯಾಲಯದ ಡಾ. ಬ್ಲೂಮ ಎಂಬವರು ಪರೀಕ್ಷಾ ಪದ್ಧತಿಯಲ್ಲಿ ವಿಶೇಷ ಮಾರ್ಪಾಡುಗಳನ್ನು ಸೂಚಿಸಿದ್ದಾರೆ. ಅವರ ಸೂಚನೆಗಳನ್ನು ಸ್ವೀಕರಿಸಿ, ನಮ್ಮ ಕೇಂದ್ರ ಸರಕಾರವು ನೂತನ ಪರೀಕ್ಷಾ ಯೋಜನೆಯನ್ನು ರೂಪಿಸಲು ಯತ್ನಿಸುತ್ತಿದೆ. ಅವರ ಈ ಕಾರ್ಯವು ಕೂಡಲೇ ಮೂರ್ತಸ್ವರೂಪ ತಾಳುವದೆಂಬ ಭರವಸೆ ಇದೆ. ವಸ್ತು-ಸ್ಥಿತಿಯು ಹೀಗಿರುವಾಗ ಸಾಮಾನ್ಯ ಮನುಷ್ಯನು ಶಿಕ್ಷಣದ ಮಟ್ಟದ ಬಗ್ಗೆ ಮಾತನಾಡುವದು ಬಹು ಸಾಹಸದ ವಿಚಾರವೇ ಸರಿ.

ನಿಜವಾಗಿಯೂ ಇಂದು ಶಿಕ್ಷಣದ ಮಟ್ಟ ಆಳವಾಗಿಲ್ಲ, ಆದರೆ ವಿಶಾಲವಾಗಿದೆ. ಈ ಮೊದಲು ಕೇವಲ ಓದು, ಬರೆಹ, ಗಣಿತ ಈ ಮೂರು ವಿಷಯಗಳಿಗೆ ವಿಶೇಷ ಪ್ರಾಧಾನ್ಯತೆ ಕೊಟ್ಟು ವ್ಯಾಸಂಗ ಮಾಡುತ್ತಿದ್ದರು. ಇತಿಹಾಸ, ಭೂಗೋಲದಂತಹ ಕೆಲವು ವಿಷಯಗಳನ್ನು ಅಮುಖ್ಯವೆಂದು ಗಣಿಸುತ್ತಿದ್ದರು. ಈ ಶಿಕ್ಷಣದಲ್ಲಿ ಅಭಿರುಚಿಯುಳ್ಳ ಪಾಲಕರೇ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತಿದ್ದರು. ಆದುದರಿಂದ ಈ ಎಲ್ಲ ವಿಷಯಗಳಲ್ಲಿ ಆಗಿನ ಬಾಲಕರು ವಿಶೇಷ ಜ್ಞಾನವನ್ನು ಪಡೆಯುತ್ತಿದ್ದರೆಂಬುವಲ್ಲಿ ವೈಶಿಷ್ಟ್ಯವೇನಿಲ್ಲ. ಸದ್ಯದ ಕಾಲಮಾನವು ತೀವ್ರಗತಿಯಿಂದ ಬದಲಾವಣೆ ಹೊಂದಿರುವದನ್ನು ನಾವು ಲಕ್ಷಿಸಬೇಕು. ವಿಜ್ಞಾನದ ಪ್ರಗತಿಯು ಭರದಿಂದ ಸಾಗಿ ನಮ್ಮ ಜೀವನದ ಪ್ರತಿಯೊಂದು ರಂಗವನ್ನು ವ್ಯಾಪಿಸಿದೆ. ನಮ್ಮ ದೇಶವು ಸ್ವತಂತ್ರವಾಗಿರುವದರಿಂದ

ಪ್ರಜಾರಾಜ್ಯದ ಪ್ರಭಾವವು, ನಮ್ಮ ಶಿಕ್ಷಣದ ಯೋಜನೆಯನ್ನು ರೂಪಿಸತೊಡಗಿದೆ. ಭಾರತದ ಮಗು ಬೌದ್ಧಿಕ, ಮಾನಸಿಕ, ಶಾರೀರಿಕ ಸಮತೋಲ ಬೆಳವಣಿಗೆಯನ್ನು ಹೊಂದಬೇಕಲ್ಲದೆ ಸಮಾಜದಲ್ಲಿ ವಿಧಾಯಕ ನಾಗರಿಕರಾಗಬೇಕೆಂದು ನಮ್ಮ ಶಿಕ್ಷಣವು ಹವಣಿಸುತ್ತಿದೆ. ಆಧುನಿಕ ವಿಜ್ಞಾನದ ಎಲ್ಲ ಸೌಕರ್ಯಗಳನ್ನು ಬಳಸಿಕೊಳ್ಳಲು ಕಲಿಸುತ್ತಿದೆ. ಈ ಹಿನ್ನೆಲೆಯಲ್ಲಿ ಇಂದು ನಮ್ಮ ಶಾಲೆಗಳಲ್ಲಿ ಕೇವಲ ಭಾಷೆ, ಗಣಿತಗಳಲ್ಲದೆ ಸಾಯನ್ಸ, ನಾಗರಿಕ ಶಾಸ್ತ್ರ, ಇತಿಹಾಸ, ಭೂಗೋಲ, ಚಿತ್ರಕಲೆ, ಶಾರೀರಿಕ ಶಿಕ್ಷಣ ಮುಂತಾದ ವಿಷಯಗಳನ್ನೂ ಒಳ್ಳೇ ಮುಖ್ಯ ವಿಷಯಗಳೆಂದು ಪರಿಗಣಿಸುತ್ತಿದ್ದೇವೆ. ಜೀವನ ಶಿಕ್ಷಣ ಯೋಜನೆಯು ಅಮಲಿನಲ್ಲಿರುವ ಶಾಲೆಗಳಲ್ಲಿ ಮೂಲೋದ್ಯೋಗವೂ ಅವಶ್ಯವಾಗಿ ಕಲಿಸಲ್ಪಡುವದು. ಇದೂ ಅಲ್ಲದೆ ಇತ್ತೀಚಿಗೆ ಹಿಂದಿ, ಹಾಗೂ ಇಂಗ್ಲೀಷ ಅಭ್ಯಾಸವನ್ನು ಪ್ರಾಥಮಿಕ ಶಿಕ್ಷಣ ಘಟ್ಟದಲ್ಲಿಯೇ ಪ್ರಾರಂಭಿಸಿರುವರು. ಈ ಎಲ್ಲ ಮೇಲೆ ವಿವರಿಸಿದ ವಿಷಯಗಳನ್ನು ಮಗು ಸಮನಾದ ಹೊಣೆಗಾರಿಕೆಯಿಂದ ಕಲಿಯಬೇಕಾದರೆ ಅವನಿಗೆ ಬಹಳೇ ಭಾರವಾಗುವದು. ಮಗುವಿನ ವಯೋಮಾನ, ಬುದ್ಧಿಯ ವಿಕಾಸ ಶಕ್ತಿ ಉತ್ಸಾಹಗಳನ್ನು ಪರಿಗಣಿಸಿ ಮಟ್ಟನ್ನು ಅಳೆಯುವದು ಯೋಗ್ಯವಲ್ಲವೇ ? ಕೆಲವೇ ವಿಷಯಗಳನ್ನು ಆಳವಾಗಿ ಅಭ್ಯಸಿಸುವದಕ್ಕಿಂತಲೂ ಅನೇಕ ಜೀವನೋಪಯೋಗಿ ವಿಷಯಗಳನ್ನು ತಕ್ಕಮಟ್ಟಿಗೆ ಕಲಿಯುವ ಮಗುವಿನ ಮಟ್ಟವು ಕಡಿಮೆಯಾಗುವದೇ ? ನಿರ್ವಿಕಾರವಾಗಿ ನಿರ್ಣಯಿಸುವದಾದರೆ ಸದ್ಯದ ಅಭ್ಯಾಸ ಕ್ರಮವು ಬಹುಮುಖವಾಗಿರುವದರಿಂದ ಮಗುವಿನ ಮಟ್ಟವು ವಿಶಾಲವಾಗಿದೆ. ಆದ್ದರಿಂದ ಆಳವಾಗಿಲ್ಲವೆಂದು ಹೇಳಬಹುದು. ಇಂದಿನ ಮಗು ಬೇಗನೆ ಶಾಲೆಯನ್ನು ಸೇರಿ ಹಲವು ವಿಷಯಗಳನ್ನು ಕಲಿಯುವನಲ್ಲದೆ ಎಷ್ಟೋ ವಿಧಾಯಕ ಕಾರ್ಯಗಳನ್ನು ಕೈಕೊಳ್ಳುವನು. ಸ್ವಾವಲಂಬನದ ದೃಷ್ಟಿಯನ್ನು ಬಹುಮಟ್ಟಿಗೆ ಅಳವಡಿಸಿಕೊಳ್ಳುವನು. ಇಂದಿನ ವಿದ್ಯಾರ್ಥಿಯು ದಿಟ್ಟನೂ, ಸಾಹಸಿಯೂ ಆಗುವನಲ್ಲದೆ, ಜೀವಿಸುವ ಕಲೆಯನ್ನು ತುಸು ಅರಿತವನಾಗುತ್ತಾನೆ. ಸಂಪ್ರದಾಯ ಶಿಕ್ಷಣ ಪದ್ಧತಿಯ ಪ್ರಿಯರು ಈ ಎಲ್ಲ ವಿಚಾರಗಳನ್ನು ಅವಶ್ಯವಾಗಿ ತಿಳಿದುಕೊಳ್ಳಬೇಕಾಗಿದೆ.

ಇಂದಿನ ವಿಜ್ಞಾನ ಯುಗದಲ್ಲಿ ಶೈಕ್ಷಣಿಕ ಸೌಲಭ್ಯಗಳೂ, ಕಲಿಸುವ ವಿಧಾನಗಳೂ ಹೆಚ್ಚಾಗಿ ದೊರೆತಿವೆ. ತಜ್ಞರು ಹಾಗು ಅನುಭವಿಕ ಶಿಕ್ಷಕರು ಮೇಲಿಂದ ಮೇಲೆ ಶಿಕ್ಷಣದ ಮಟ್ಟವನ್ನು ಸುಧಾರಿಸಲು ಸಲಹೆ ಸೂಚನೆಗಳನ್ನು ಕೊಡುತ್ತ ಬಂದಿದ್ದಾರೆ. ವಾಚನಾಲಯಗಳು, ಉಪಕರಣಗಳು, ಶಾಸ್ತ್ರೀಯ ಗ್ರಂಥಗಳು, ವಿಜ್ಞಾನದ ಪ್ರಯೋಗ ಶಾಲೆಗಳು ಇವೇ ಮುಂತಾದ ಅನುಕೂಲತೆಗಳು ಇಂದಿನ ಮಗುವಿಗೆ ದೊರೆಯುತ್ತಿವೆ. ಇವುಗಳ ಸಹಾಯದಿಂದ ನಮ್ಮ ಪ್ರಾಥಮಿಕ ಶಿಕ್ಷಣದ ಮಟ್ಟನ್ನೂ ಕೂಡ ಈಗಿನಕ್ಕಿಂತಲೂ ಹೆಚ್ಚು ಎತ್ತರಿಸಲು ಅವಕಾಶವಿದೆ. ಆದರೂ ಈ ಗುರಿಯು ಬಹು ದೂರವಿದೆ ಎಂದು ಹೇಳಬೇಕಾಗುತ್ತದೆ. ಮೇಲೆ ವಿವರಿಸಿದ ಶೈಕ್ಷಣಿಕ ಅನುಕೂಲತೆಗಳು ಹೇರಳವಾಗಿದ್ದರೂ ಇಂದಿನ ಶಿಕ್ಷಣದ ಮಟ್ಟು ಇನ್ನೂ ಎತ್ತರವಾಗದಿರುವದಕ್ಕೆ ಕಾರಣಗಳನ್ನು ಈ ಕೆಳಗಿನಂತೆ ಹೇಳಬಹುದು.

೧) ಒತ್ತಾಯದ ಪ್ರಾಥಮಿಕ ಶಿಕ್ಷಣವು ೬ರಿಂದ ೧೧ ವಯಸ್ಸಿನ ಮಕ್ಕಳಲ್ಲಿ ಜಾರಿಯಾಗಿರುವದರಿಂದ ಶಾಲೆಗೆ ಬರುವ ಬಾಲ-ಬಾಲಿಕೆಯರ ಸಂಖ್ಯೆಯು ವಿಶೇಷವಾಗಿ ಬೆಳೆದಿದೆ. ಶಾಲೆಗೆ ಬರುವ ಎಲ್ಲ ಮಗುಗಳಿಗೆ ಕೂಡ್ರಲು ಸರಿಯಾದ ಸ್ಥಳಾವಕಾಶವು ಎಷ್ಟೋ ಕಡೆಗೆ ದೊರೆಯುವದಿಲ್ಲ. ಆದುದರಿಂದ ಕೆಲವು ಶಾಲೆಗಳಲ್ಲಿ ಸರತಿ (ಸಿಫ್ಟ) ಪದ್ಧತಿಯನ್ನು ಅನುಸರಿಸಬೇಕಾಗುತ್ತಿದೆ. ಈ ಯೋಜನೆಯಂತೆ ಪ್ರತಿಯೊಂದು ಮಗು ೧ ಹಾಗು ೨ ನೆಯ ವರ್ಗಗಳಲ್ಲಿ ಒಪ್ಪತ್ತೇ ಶಾಲೆ ಕಲಿಯಬೇಕಾಗುವದು.

೨) ಭಿನ್ನ ಭಿನ್ನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ನೈತಿಕ ಹಿನ್ನೆಲೆಯುಳ್ಳ ಮಕ್ಕಳು ಒಂದೇ ವರ್ಗದಲ್ಲಿ ಕೂಡಿ ಕಲಿಯುತ್ತಿರುವದರಿಂದ ಎಲ್ಲರ ಪ್ರಗತಿಯು ಸಮಾನವಾಗಿ ಸಾಗುವದಿಲ್ಲ.

೩) ೧, ೨ ನೆಯ ವರ್ಗಗಳಲ್ಲಿ ಒಂದೇ ಅಭ್ಯಾಸ ಕ್ರಮವನ್ನು ಸುಮಾರು ೫೦–೬೦ ವಿದ್ಯಾರ್ಥಿಗಳಿಗೆ ಅನ್ವಯಿಸುವದರಿಂದ ಪ್ರಗತಿಯು ಕುಂಠಿತವಾಗುವದು. ಪ್ರತಿಯೊಬ್ಬ ಶಿಕ್ಷಕನಿಗೆ ಹೆಚ್ಚೆಂದರೆ ೪೦ ವಿದ್ಯಾರ್ಥಿಗಳು ಮಾತ್ರ ಇರಬೇಕು.

೪) ಕಡ್ಡಾಯ ಶಿಕ್ಷಣದಲ್ಲಿ ಅನಿಯಮಿತ ಮಕ್ಕಳ ಸಂಖ್ಯೆಯು ಹೆಚ್ಚಾಗುವದರಿಂದ ಕ್ರಮಬದ್ಧ ಪ್ರಗತಿಯನ್ನು ಸಾಧಿಸುವದು ತೊಂದರೆದಾಯಕವಿದೆ. ಶಿಕ್ಷಣಾಭಿರುಚಿಯುಳ್ಳ ಪಾಲಕರು ತಮ್ಮ ಹುಡುಗರನ್ನು ನಿಯ

ಮಿತವಾಗಿ ತಪ್ಪದೇ ಶಾಲೆಗೆ ಕಳಿಸುತ್ತಾರೆ. ಕೆಲವು ಪಾಲಕರು ಶಾಲೆಯ ಬಗೆಗೆ ವಿಶೇಷ ಗಮನ ಕೊಡುವದಿಲ್ಲ. ಅಂಥವರ ಮಕ್ಕಳು ಅನಿಯಮಿತತನದಿಂದ ಶಾಲೆಗೆ ಹೋಗುತ್ತಾರೆ. ಹೀಗಾಗಿ ಮಕ್ಕಳ ಓದುಬರೆಹ ಮೊದಲಾದ ವಿಷಯಗಳಲ್ಲಿ ಸಮಾನ ಪ್ರಗತಿಯು ಕಂಡುಬರುವದಿಲ್ಲ.

೫) ಎಲ್ಲ ವಿದ್ಯಾರ್ಥಿಗಳಿಗೆ ಯೋಗ್ಯ ಗೃಹಶಿಕ್ಷಣವು ದೊರೆಯುವದಿಲ್ಲ. ಸುಶಿಕ್ಷಿತ ಪಾಲಕರು ಸರಿಯಾದ ಗೃಹ ಶಿಕ್ಷಣವನ್ನು ಕೊಟ್ಟು ಶಿಕ್ಷಣ ಕಾರ್ಯದಲ್ಲಿ ಗುರುಗಳಿಗೆ ನೆರವಾಗುತ್ತಾರೆ, ಆದರೆ ಬಹುಸಂಖ್ಯಾಕರ ಪಾಲಕರಿಗೆ ಇದು ಸಾಧ್ಯವಾಗಿರುವದಿಲ್ಲ. ನಮ್ಮ ದೇಶದಲ್ಲಿ ಬಹುಜನರು ತಮ್ಮ ಕುಟುಂಬ ನಿರ್ವಹಣೆಗಾಗಿಯೇ ಹೋರಾಡಬೇಕಾದ ಪರಿಸ್ಥಿತಿ ಇದೆ. ತಮ್ಮ ಬಡತನದಲ್ಲಿ ಮಕ್ಕಳ ಶಿಕ್ಷಣದ ಬಗೆಗೆ ಅವರು ಆಲೋಚಿಸುವದಿಲ್ಲ. ಶಿಕ್ಷಣದ ಮಹತ್ವವಂತೂ ಅವರಿಗೆ ಮೊದಲೇ ಗೊತ್ತಿಲ್ಲ. ಹೆಣ್ಣು ಮಕ್ಕಳಿಗೆ ಶಾಲೆಯನ್ನು ಕಲಿಸುವದು ನಿಷ್ಪ್ರಯೋಜಕವೆಂದು ಭಾವಿಸುವ ಪಾಲಕರೂ ಅನೇಕರಿದ್ದಾರೆ. ಹೀಗಿರುವಾಗ ಶಾಲೆಗೆ ಬರುವ ವಿದ್ಯಾರ್ಥಿಗಳಲ್ಲಿ ಕ್ರಮವೇ ಉಳಿಯುವದಿಲ್ಲ. ಆದುದರಿಂದ ಪ್ರಗತಿಯು ಹೆಚ್ಚು ಕಡಿಮೆಯಾಗುವದು.

೬) ಶಾಲಾ ಮಕ್ಕಳು ಗುರುಗಳ ಬಳಿಯಲ್ಲಿ ಹೆಚ್ಚು ವೇಳೆಯನ್ನು ಕಳೆಯದೆ ಮನರಂಜನೆ, ಆಟಪಾಟ ಮುಂತಾದ ಹೊರಗಿನ ಸೆಳೆತಗಳಿಗೆ ಬಲೆಬಿದ್ದು ವಿಶೇಷವಾಗಿ ಹಣವನ್ನೂ ಅಮೂಲ್ಯವಾದ ವೇಳೆಯನ್ನೂ ಅಪವ್ಯಯ ಮಾಡುವರು. ಯೋಗ್ಯ ಮಾರ್ಗದರ್ಶನವಿಲ್ಲದಿದ್ದರೆ ಹೀಗಾಗುವದು ಸಹಜ.

೭) ಶಾಲೆಯಲ್ಲಿ ಅಭ್ಯಾಸ ಮಂಡಲ, ಬಾಲಕ ಸಂಘ ಮುಂತಾದವುಗಳು ವಿಶೇಷವಾಗಿರುವದಿಲ್ಲ. ಬಾಲಕರು ಇವುಗಳ ಸಹಾಯದಿಂದ ತಮ್ಮ ಸುಪ್ತ ಕಲೆಗಳನ್ನು ವಿಕಾಸಗೊಳಿಸಿಕೊಳ್ಳಲು ಅನುವು ದೊರೆಯುವದಿಲ್ಲ.

೮) ಮಟ್ಟವನ್ನು ವಿವೇಚಿಸುವಾಗ ಶಿಕ್ಷಕರ ಪಾತ್ರವನ್ನೂ ಕಡೆಗಣಿಸುವದು ಸಾಧ್ಯವಿಲ್ಲ. ಅವನ ಪ್ರಾಪಂಚಿಕ ತೊಂದರೆಗಳು ಆರ್ಥಿಕ ಮುಗ್ಗಟ್ಟು ವಿಶೇಷವಾಗಿವೆ. ಇದರಿಂದ ಅವನ ಶಕ್ತಿ ಉತ್ಸಾಹಗಳು ಕೆಲಮಟ್ಟಿಗೆ ಕುಗ್ಗಿರುವವು. ಹಿಂದಿನಂತೆ ಶಿಕ್ಷಕನು ಇಂದು ಸುಖಿಯಾಗಿಲ್ಲ. ಆದ್ದರಿಂದ ಅವನು ಶಿಕ್ಷಣದ ಪವಿತ್ರ ಕಾರ್ಯವನ್ನು ಕ್ರಿಸ್ತಮಿಶನರಿಗಳಂತೆ ಆಯುಷ್ಯದ ಆದ್ಯಂತ ಕೈಕೊಳ್ಳುವದರ ಬದಲು, ಅದೊಂದು ಕೇವಲ ನೌಕರಿಯೆಂದು ಮಾತ್ರ ಬಗೆಯತೊಡಗಿದ್ದಾನೆ.

ಹೀಗೆ ಹಲವಾರು ಕಾರಣಗಳನ್ನು ಮಟ್ಟ ಕಡಿಮೆಯಾದುದುದರ ಬಗೆಗೆ ನಿರೂಪಿಸಬಹುದು.

ಪ್ರಾಥಮಿಕ ಶಿಕ್ಷಣದಲ್ಲಿ ಮಟ್ಟವನು ಎತ್ತರಿಸುವ ತೀವ್ರಾಲೋಚನೆಗಳು ನಡೆಯುತ್ತಿರುವದು ತುಂಬಾ ಸಂತೋಷದ ವಿಷಯ. ಇಂದು ನಮಗೆ ದೊರೆಯುವ ಸೌಲಭ್ಯಗಳನ್ನು ಪಡೆದುಕೊಂಡರೆ ಶಿಕ್ಷಣವು ಪ್ರಗತಿಪರವಾಗುವದರಲ್ಲಿ ಸಂದೇಹವಿಲ್ಲ. ಶಾಲೆಯ ಪ್ರಗತಿಯ ದೃಷ್ಟಿಯಿಂದ ಕೆಳಗಿನ ಸೂಚನೆಗಳನ್ನು ಮಾಡಬಹುದು.

೧) ಪ್ರಥಮತಃ ಶಿಕ್ಷಕನು ತನ್ನ ಕೆಲಸವನ್ನು ಚನ್ನಾಗಿ ತಿಳಿದವನಿರಬೇಕು. ಈ ಕಾರಣದಿಂದ ಶೈಕ್ಷಣಿಕ ತರಬೇತಿ ಪಡೆದ ಉಚ್ಚ ದರ್ಜೆಯ ಶಿಕ್ಷಕರನ್ನು ಆರಿಸಿ ಶಾಲೆಗಳಲ್ಲಿ ತುಂಬಬೇಕು. ಶಿಕ್ಷಕರನ್ನು ಆಯ್ಕೆ ಮಾಡುವಾಗ ಗುಣ, ಶೀಲ, ವ್ಯಕ್ತಿತ್ವ ಮುಂತಾದವುಗಳ ಬಗೆಗೆ ಜಾಗ್ರತೆ ವಹಿಸಬೇಕು. ಶಿಕ್ಷಕರಿಗೆ ಯೋಗ್ಯ ದುಡಿತವನ್ನು ಕೊಡುವಂತೆ ಸಾಕಷ್ಟು ಪ್ರತಿಫಲವನ್ನೂ ಕೊಡುವದು ಯೋಗ್ಯವಾಗಿದೆ.

೨) ಪ್ರತಿಯೊಬ್ಬ ಶಿಕ್ಷಕನಿಗೂ ಸಾಧ್ಯವಾದಷ್ಟು ಕಡಿಮೆ ವಿದ್ಯಾರ್ಥಿಗಳು ಬರುವಂತೆ ಯೋಜಿಸುವದು ಒಳಿತು. ಹೆಚ್ಚೆಂದರೆ ಒಬ್ಬ ಶಿಕ್ಷಕನಿಗೆ ೪೦ ಹುಡುಗರಿರಬೇಕು. ಕಡಿಮೆ ಸಂಖ್ಯೆಯಾದಲ್ಲಿ ಶಿಕ್ಷಕನು ಪ್ರತಿಯೊಂದು ಮಗುವಿನ ವೈಯಕ್ತಿಕ ಬೆಳವಣಿಗೆಯನ್ನು ಗಮನಿಸುವನು. ಪಾಲಕರ ಸಂಬಂಧವನ್ನೂ ಬೆಳಿಸಿಕೊಳ್ಳಲು ಅನುಕೂಲವಾಗುವದು.

೩) ಪಾಲಕರು ಹೆಚ್ಚು ಹೊಣೆಯನ್ನು ಹೊರಲು ಸಿದ್ಧರಾಗಬೇಕು. ಮಕ್ಕಳನ್ನು ಅವರ ಪಾಡಿಗೆ ಬಿಡದೆ ಆಗಿಂದಾಗ್ಗೆ ಶಾಲೆಯ ವರೆಗೆ ಹೋಗಿ ಮಗುವಿನ ಪ್ರಗತಿಯ ಬಗೆಗೆ ಮನವರಿಕೆ ಮಾಡಿಕೊಳ್ಳಬೇಕು. ಶಿಕ್ಷಕರ ಸಲಹೆಯ ಮೇರೆಗೆ ಮನೆಯಲ್ಲಿ ಅಭ್ಯಾಸದ ಅನುಕೂಲತೆಗಳನ್ನು ಒದಗಿಸಿಕೊಡಬೇಕಾಗುವದು.

೪) ಬಡತನದ ಕಾರಣದಿಂದ ಶಾಲೆಗೆ ಬಾರದ ಮಕ್ಕಳಿಗೆ ಜನತಾ ಸರಕಾರವು ಉಚಿತವಾಗಿಯೇ ಪಾಠಪುಸ್ತಕಗಳನ್ನು ಕೊಡುತ್ತಿರುವದು. ಇದೇ ಮೇರೆಗೆ ಬಡಮಕ್ಕಳಿಗೆ ಪುಕ್ಕಟೆ ಊಟದ ವ್ಯವಸ್ಥೆಯಾದರೆ ಶಾಲಾ ಹಾಜರಿಯ ಬಹುದೊಡ್ಡ ಸಮಸ್ಯೆಯು ಬಗೆಹರಿಯುವದು. ಸಾಧ್ಯವಾದರೆ ವಸತಿಯ ಸೌಕರ್ಯವನ್ನೂ

ಒದಗಿಸುವದು ಯೋಗ್ಯವಾದುದು. ಎಲ್ಲ ಮಕ್ಕಳೂ ಶಿಕ್ಷಕನ ಸಾನ್ನಿಧ್ಯದಲ್ಲಿ ಹೆಚ್ಚು ವೇಳೆ ಉಳಿಯುವದರಿಂದ ಯೋಗ್ಯ ನಿಯಂತ್ರಣದಲ್ಲಿ ಬೆಳೆದು ದುಶ್ಚಟಗಳಿಂದ ಮುಕ್ತರಾಗುವರು.

೫) ಶಾಲೆಗಳಲ್ಲಿ ಯೋಗ್ಯ ಸ್ಥಳಾವಕಾಶವೂ, ಮೂಲೋದ್ಯೋಗದ ಉಪಕರಣಗಳೂ, ಆಟದ ಬಯಲೂ ಇತ್ಯಾದಿ ಅನುಕೂಲತೆಗಳು ಅವಶ್ಯವಾದವುಗಳು. ಶೀಘ್ರವಾಗಿ ಅವುಗಳನ್ನು ಒದಗಿಸಬೇಕು.

೬) ಶಿಕ್ಷಕರು ಕಲಿಸುವಾಗ ನವೀನ ತಂತ್ರಗಳನ್ನು ಅನುಸಂಸಬೇಕು. ಎಷ್ಟೋ ಶಿಕ್ಷಕರು ಹಳೆಯ ತಂತ್ರಗಳನ್ನೇ ಹೆಚ್ಚು ಬಳಿಸುತ್ತಿರುವರು. ಆದರೆ ಪ್ರಾಥಮಿಕ ಶಿಕ್ಷಣದ ೭ ವರ್ಷದ ಅಲ್ಪಾವಧಿಯಲ್ಲಿ ಮಗು ಸಾಧಿಸಬೇಕಾದ ಪ್ರಗತಿಯನ್ನು ನೆನೆದುಕೊಂಡರೆ, ಕಲಿಸುವ ವಿಧಾನಗಳಲ್ಲಿ ಹೊಸ ತಂತ್ರಗಳನ್ನು ಅನುಸರಿಸುವದೇ ವಿಹಿತವಾದುದು. ಗುರುಗಳು ಹೊಸ ಹೊಸ ಸಂಗತಿಗಳನ್ನು ಅರಿತುಕೊಂಡು ಮಕ್ಕಳಿಗೆ ಕಲಿಸುತ್ತ ಹೋಗಬೇಕು. ವಿದ್ಯಾರ್ಥಿಗಳ ಕಲ್ಯಾಣವೇ ತನ್ನ ನಿಜವಾದ ಭಾಗ್ಯವೆಂದು ಪ್ರತಿಯೊಬ್ಬ ಶಿಕ್ಷಕನು ತಿಳಿಯಬೇಕು.

೭) ಶಾಲೆಗಳಲ್ಲಿ ಚರ್ಚಾಕೂಟ, ಅಭ್ಯಾಸ ಮಂಡಲ, ಮಕ್ಕಳಕೂಟ ಇವೇ ಮೊದಲಾದವುಗಳನ್ನು ಆರಂಭಿಸಿ ಚಿಕ್ಕ ಮಕ್ಕಳ ಸುಪ್ತ ಶಕ್ತಿಗಳನ್ನು ವಿಕಾಸಗೊಳಿಸಬೇಕು.

೮) ಪ್ರತಿ ವರ್ಷ ಮಗುವನ್ನು ಮುಂದಿನ ವರ್ಗಕ್ಕೆ ಕಳಿಸುವಾಗ ವಿಶೇಷ ಜಾಗ್ರತೆ ವಹಿಸಬೇಕು. ಅಯೋಗ್ಯ ಮಕ್ಕಳನ್ನು ಯಾವದೇ ಕಾರಣದಿಂದ ಮುಂದಿನ ವರ್ಗಗಳಿಗೆ ಕಳಿಸುತ್ತ ಹೋಗಬಾರದು. ಪರೀಕ್ಷಾ ಪದ್ಧತಿಯಲ್ಲಿ ವಿಶೇಷ ಸುಧಾರಣೆಗಳು ಆಗಬೇಕಾಗಿವೆ. ಇಂದು ಪರೀಕ್ಷೆಗೆ ಅವಾಸ್ತವ ಮಹತ್ವವನ್ನು ಕೊಡಲಾಗಿದೆ. ಎಲ್ಲ ವಿಷಯಗಳನ್ನೂ ಒಂದೇ ವೇಳೆಗೆ ಪರೀಕ್ಷಿಸಬೇಕೆಂಬುದು ಉಚಿತವಾಗುವದಿಲ್ಲ. ಸದ್ಯದ ಪರೀಕ್ಷಾ ಪದ್ಧತಿಯಲ್ಲಿ ಮಗುವಿನ ಮೇಲೆ ವಿಶೇಷ ಭಾರವು ಬಿದ್ದಿದೆ. ಬೇಗನೆ ಈ ಭಾರವು ಕಡಿಮೆಯಾಗಬೇಕಾಗಿದೆ. ಇಡೀವರ್ಷ ಶಾಲೆಯ ಅವಧಿಯಲ್ಲಿ ಮಕ್ಕಳು ಮಾಡುವ ಕೆಲಸದ ಬಗೆಗೆ, ಹಾಗೂ ಅವರು ಸಾಧಿಸುವ ಪ್ರಗತಿಯ ಬಗೆಗೆ ಶಿಕ್ಷಕರು ಪ್ರಾಮಾಣಿಕ ವರದಿಗಳನ್ನು ಬರೆದಿಡಬೇಕು. ವರುಷಾಂತ್ಯದಲ್ಲಿ ಮಗುವನ್ನು ಮುಂದಿನ ವರ್ಗಕ್ಕೆ ಹಾಕುವಾಗ ಈ ವರದಿಗಳನ್ನು ಗಮನಿಸಬೇಕು. ಕೆಲವೇ ವಿಷಯಗಳನ್ನು ವರ್ಷಾಂತ್ಯದಲ್ಲಿ ಲೇಖೀ ಪರೀಕ್ಷೆಗೆ ಗೊತ್ತುಪಡಿಸಬೇಕು. ಹೀಗೆ ಕೆಲವು ವಿಷಯಗಳನ್ನು ಪ್ರಾಯೋಗಿಕ ಕಾರ್ಯದ ಮೂಲಕವಾಗಿ ಇನ್ನುಳಿದ ವಿಷಯಗಳನ್ನು ಬರೆಹದ ಮೂಲಕವಾಗಿ ಪರೀಕ್ಷಿಸಿದರೆ ಮಗುವಿನ ಮೇಲಿನ ಭಾರವು ಕಡಿಮೆಯಾಗಿ ಪರೀಕ್ಷೆಯ ಬಗೆಗೆ ಅವನು ಭಯಪಡುವದಿಲ್ಲ. ಮತ್ತು ತಿಳಿಯದೆ ಪಾಠಮಾಡುವ ಪ್ರವೃತ್ತಿಯು ಕಡಿಮೆಯಾಗುವದು.

ಒಟ್ಟಿನಲ್ಲಿ ಶಿಕ್ಷಣದ ಮಟ್ಟನ್ನು ಅಳೆಯುವಾಗ ಆಯಾ ಕಾಲಮಾನಗಳನ್ನೂ ಅಭ್ಯಾಸ ಕ್ರಮಗಳನ್ನೂ ಪರಿಗಣಿಸಬೇಕಾಗುವದು. ನಮ್ಮ ಇಂದಿನ ಪ್ರಗತಿಯನ್ನು ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ಸಮಗ್ರವಾಗಿ ಅವಲೋಕಿಸಿದರೆ ನಿರಾಶೆ ಪಡುವ ಕಾರಣವೇನಿಲ್ಲ. ಆದರೂ ನಮಗೆ ದೊರೆತಿರುವ ಎಲ್ಲ ಅವಕಾಶಗಳನ್ನು ಉಪಯೋಗಿಸಿಕೊಂಡರೆ ಇಂದಿಗಿಂತಲೂ ವಿಶೇಷ ಪ್ರಗತಿಯನ್ನು ಮಾಡಿತೋರಿಸಬಹುದು.

ಮೂಲೋದ್ಯೋಗದ ಹೊಸ ಅಭ್ಯಾಸ ಪತ್ರಿಕೆ

(ಪ್ರಾಥಮಿಕ ಶಾಲೆಗಳಲ್ಲಿ ೧ ರಿಂದ ೬ನೆಯ ಇ. ಗಳಿಗಾಗಿ)

ಬೆಲೆ : ೦—೨—೬

ಒಬ್ಬ ಶಿಕ್ಷಕ ಸಾಲೆಗಳಿಗಾಗಿ

(ಇಯತ್ತೆ ೧ ರಿಂದ ೪)

ಬೆಲೆ : ೧ ಆಣೆ,

ಅಂಚೆ ವೆಚ್ಚ ಬೇರೆ

ಪ್ರತಿಗಳು ಸಿಗುವ ಸ್ಥಳ :

ಪ್ರಧಾನ ಸಂಪಾದಕರು ಜೀವನ ಶಿಕ್ಷಣ, ಧಾರವಾಡ.

ಇಂದಿನ ಪರೀಕ್ಷಾ ಪದ್ಧತಿಯಲ್ಲಿ ಆಗಬೇಕಾದ ಸುಧಾರಣೆಗಳು

ಹಾವೇರಿ ತಾಲೂಕಿನ ಪ್ರಾಥಮಿಕ ಶಿಕ್ಷಕ-ಶಿಕ್ಷಕಿಯರ ಪರಿಷತ್ತಿನಲ್ಲಿ ಮಾಡಿದ ಭಾಷಣ

ಭಾಷಣಕಾರರು : **ಶ್ರೀ ಆರ್. ಎನ್. ಕರಡಿ,** ಅ. ಡೆ. ಎ. ಇ. ಧಾರವಾಡ.

ಪರೀಕ್ಷಾ ಪದ್ಧತಿ ಎಂದರೆ ಯಾವದಾದರೊಂದು ವಿಷಯದಲ್ಲಿ ಸಾಧಿಸಿದ ಪ್ರಗತಿಯನ್ನು ಅಳೆಯುವದು. ಕಾಲಕಾಲಕ್ಕೆ ಯೋಗ್ಯವಾದ ಕ್ರಮವನ್ನು ಅನುಸರಿಸಿ ಪ್ರಗತಿಯನ್ನು ಅಳೆಯುತ್ತಲೇ ಬಂದಿರುವರು. ಶೈಕ್ಷಣಿಕ ಕ್ರಮದಲ್ಲಿ ವಿಕಾಸವಾದಂತೆ ಮಗುವಿನ ಮಟ್ಟವನ್ನು ಅಳೆಯುವ ವಿಧಾನದಲ್ಲಿಯೂ ಬದಲಾವಣೆಯಾಗುವದು ಯೋಗ್ಯವಾಗಿದೆ. ಇಂದಿನ ಪ್ರಾಥಮಿಕ ಶಿಕ್ಷಣದಲ್ಲಿ ಅನುಸರಿಸುವ ಪದ್ಧತಿಯನ್ನು ಲಕ್ಷದಲ್ಲಿಟ್ಟುಕೊಂಡು ಈ ವಿಷಯವನ್ನು ಕೆಲಮಟ್ಟಿಗೆ ವಿವೇಚಿಸಲಾಗಿದೆ.

ನಮ್ಮ ಸಮಾಜದಲ್ಲಿ ಇಂದು ಪರೀಕ್ಷೆಗೆ ಬಹು ವಿಧದ ಮಹತ್ವವಿದೆ. ಯಾವದಾದರೊಂದು ನೌಕರಿ ಕೊಡುವಾಗ, ವ್ಯಕ್ತಿಯ ಗೌರವವನ್ನು ನಿರ್ಣಯಿಸುವಾಗ, ಪ್ರತಿಫಲವನ್ನು ಕೊಡುವಾಗ, ಪರೀಕ್ಷೆಯ ಪದವಿಯನ್ನೇ ಗಮನಿಸುತ್ತಾರೆ. ನಿಜವಾಗಿಯೂ ಇಂದಿನ ಪರೀಕ್ಷೆಯ ಪದ್ಧತಿಗಳು ವ್ಯಕ್ತಿಯ ಬುದ್ಧಿಮಾನದ ಯೋಗ್ಯ ಅಳತೆಗೋಲಗಳಲ್ಲವೆಂದು ಎಷ್ಟೋ ತಜ್ಞರ ಮತ. ಒಂದು ವರ್ಷದಲ್ಲಿ ಕಲಿತ ಹಲವಾರು ವಿಷಯಗಳ ಜ್ಞಾನದ ಮಟ್ಟವನ್ನು ೨-೩ ತಾಸುಗಳ ಕೆಲವು ಲಿಖಿತ ಪ್ರಶ್ನೆಗಳಲ್ಲಿ ಅಳೆಯಲಾರರು. ಮಗುವಿನ ವ್ಯಕ್ತಿತ್ವದ ವಿಕಾಸವು ಇದರಿಂದ ಕಂಡುಬರುವದಿಲ್ಲ. ೧೦೦ ಕ್ಕೆ ೩೫ ರಷ್ಟು ಗುಣಗಳನ್ನು ದೊರೆಕಿಸಿದ ಮಗುವು ಉತ್ತೀರ್ಣವೆಂದು ಹೇಳುವದು ಜ್ಞಾನಾರ್ಜನೆಯ ದೃಷ್ಟಿಯಿಂದ ದೋಷದಾಯಕವಾದುದು. ಕೆಲವು ಉತ್ತರಗಳನ್ನು ಕಂಠಪಾಠ ಮಾಡಿ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಸಂಭವವು ಬಹಳವಾಗಿರುವದರಿಂದ ಮಗುವಿನ ಜ್ಞಾನದ ಬದಲು ಅವನ ಸ್ಮರಣಶಕ್ತಿಯನ್ನೇ ನಾವು ಪರೀಕ್ಷೆ ಮಾಡಿದಂತಾಗುವದು. ಶಿಕ್ಷಣ ತಜ್ಞರು ಹೀಗೆ ಅನೇಕ ಲೋಪದೋಷಗಳನ್ನು ಎತ್ತಿತೋರಿಸುತ್ತಿರುವದು ಎಲ್ಲರಿಗೂ ವಿದಿತವಾಗಿದೆ.

ಹಾಗಾದರೆ ಪರೀಕ್ಷೆಗಳನ್ನೇ ತೆಗೆದು ಹಾಕಬೇಕೆ? ಒಂದು ವೇಳೆ ಅವುಗಳನ್ನು ಉಳಿಸಿಕೊಂಡರೆ ಯಾವ ರೀತಿಯಲ್ಲಿ ಪರೀಕ್ಷಿಸಬೇಕು? ಪರೀಕ್ಷೆಯ ಉದ್ದೇಶಗಳೇನು? ಎನ್ನುವ ಹಲವು ವಿಚಾರಗಳು ನಮ್ಮನ್ನೆದುರಿಸುತ್ತವೆ. ಪರೀಕ್ಷೆಗಳು ದೋಷಯುಕ್ತವಾದವುಗಳಾದರೂ ಅನಿವಾರ್ಯವಾದವುಗಳೇ! ಪದ್ಧತಿಯಲ್ಲಿ ಯೋಗ್ಯ ಬದಲಾವಣೆಗಳನ್ನು ಮಾಡಿಕೊಳ್ಳುವದು ಯೋಗ್ಯವಾಗಿದೆ. ಇಂದಿನ ವರೆಗೆ ಶೈಕ್ಷಣಿಕ ಶೋಧಕರು ಎಷ್ಟೇ ಪ್ರಯಾಸಪಟ್ಟರೂ ಪರಿಪೂರ್ಣವಾದ ಪರೀಕ್ಷಾ ಪದ್ಧತಿಯನ್ನು ಯೋಜಿಸಲು ಶಕ್ತರಾಗಿಲ್ಲ. ಪ್ರತಿಯೊಂದು ದೇಶದಲ್ಲಿ ತಜ್ಞರಿಗೆ ಸಮ್ಮತವಾಗುವ ರೀತಿಯಲ್ಲಿ ಬದಲಾವಣೆ ಮಾಡಿಕೊಂಡು ಒಂದು ಯೋಜನೆಯನ್ನು ತಯಾರಿಸಿಕೊಂಡಿದ್ದಾರೆ.

ಶೈಕ್ಷಣಿಕ ಮಟ್ಟವನ್ನು ಅಳೆಯುವ ಮುನ್ನ ಅದರ ಉದ್ದೇಶವನ್ನು ಲಕ್ಷಿಸುವದು ಅಗತ್ಯ. ಇಂದು ನಮ್ಮ ಪ್ರಾಥಮಿಕ ಶಿಕ್ಷಣವು ಮಗುವಿನ ಶಾರೀರಿಕ, ಬೌದ್ಧಿಕ, ಮಾನಸಿಕ ಸಮತೋಲದ ಬೆಳವಣಿಗೆಯನ್ನು ಮಾಡಲು ಹವಣಿಸುತ್ತದೆ. ಮಗುವು ಸಹೃದಯದ ಹೊಣೆಗಾರ ನಾಗರಿಕನಾಗಿ ಸಮಾಜದಲ್ಲಿ ವಿಧಾಯಕ ಸದಸ್ಯನಾಗಬೇಕೆಂದು ಇಚ್ಛಿಸುತ್ತದೆ. ಈ ಉದ್ದೇಶಗಳು ಎಷ್ಟು ಸಾಧಿಸಿವೆಯೆಂದು ತಿಳಿದುಕೊಳ್ಳುವದೇ ನಮ್ಮ ಇಂದಿನ ಪರೀಕ್ಷಾಕ್ರಮದ ಗುರಿಯೆಂದಾಯಿತು.

ಪ್ರಥಮದಲ್ಲಿ ಲಕ್ಷಿಸತಕ್ಕ ಸಂಗತಿಯೆಂದರೆ ನಮ್ಮ ಮಗುವಿನ "ಬೌದ್ಧಿಕ ವಯಸ್ಸು" ಶಾರೀರಿಕ ವಯಸ್ಸಿಗೆ ಹೊಂದಿದೆಯೋ ಹೇಗೆ? ಎಂಬುದು. ಪ್ರಾಥಮಿಕ ಶಾಲೆ ಮುಗಿಯುವದರೊಳಗಾಗಿ ಒಮ್ಮೆ ಅಥವಾ ಎರಡು ಸಾರೆ ಮಗುವಿನ ಬುದ್ಧಿಮಾಪನ ಮಾಡಿ ಅವನ 'ಬೌದ್ಧಿಕ ವಯೋಮಾನಕ್ಕೆ' ಅನುಸರಿಸಿ ಪ್ರಗತಿಯನ್ನು ಸಾಧಿಸಲು ಅನುವು ಮಾಡಿಕೊಡಬೇಕು. ಎಲ್ಲ ಮಕ್ಕಳನ್ನು ಒಂದೇ ರೀತಿಯಿಂದ ಒಂದೇ ವಯಸ್ಸಿನಲ್ಲಿ ಪರೀಕ್ಷಿಸುವದೂ, ಅಷ್ಟೇ ಪ್ರಗತಿಯನ್ನು ಸಾಧಿಸುವರೆಂದು ತಿಳಿದುಕೊಳ್ಳುವದೂ ದೋಷದಾಯಕವಾದುದು.

ಪ್ರಾಥಮಿಕ ಶಿಕ್ಷಣದ ಏಳು ವರ್ಷದಲ್ಲಿ ಹೆಚ್ಚು

ಬುದ್ಧಿವಂತ ಬಾಲಕರು ಹೆಚ್ಚಿನ ವೇಗದಿಂದ ಮುಂದುವರಿಯಲು ಅನುವಿರಬೇಕು. ಇಂದು ನಮ್ಮ ಶಾಲೆಗಳಲ್ಲಿ ನಡೆಯುವ ಪರೀಕ್ಷೆಗಳು ಅವನ ಬೌದ್ಧಿಕ ಪ್ರಗತಿಯ ಆಳವನ್ನು ಅಳೆಯುವವು. ಈ ಪರೀಕ್ಷೆಗಳಲ್ಲಿ ಉತ್ತೀರ್ಣನಾದವನು ಯಾವದೇ ನೌಕರಿಗೆ ಯೋಗ್ಯನೆಂದು ಗಣಿಸುವ ಅಗತ್ಯವಿಲ್ಲ. ಪ್ರತಿಯೊಂದು ನೌಕರಿಗೆ ಯೋಗ್ಯವಾಗಿರುವ ಅಂಶಗಳನ್ನು ತಿಳಿದುಕೊಳ್ಳಲು ಬೇರೆ ಬೇರೆ ಪರೀಕ್ಷೆಗಳು ಏರ್ಪಟ್ಟರೆ ಶಾಲಾ ಪರೀಕ್ಷೆಗಳಲ್ಲಾಗುವ ಅನೇಕ ಅಕ್ರಮಗಳು ಕಡಿಮೆಯಾಗಬಹುದು. ಮಗುವಿನ ಮನಸ್ಸಿನಲ್ಲಿಯ ಪರೀಕ್ಷಾ ಭೂತವನ್ನು ಹೊಡೆದೋಡಿಸುವದರಲ್ಲಿ ಈ ಕ್ರಮವು ಎಷ್ಟೋ ಸಹಾಯಕಾರಿಯಾಗುವದು. ಈ ಹಿನ್ನೆಲೆಯಲ್ಲಿ ನಾವು ಪರೀಕ್ಷೆಯ ಕ್ರಮದ ಬದಲಾವಣೆಗಳನ್ನು ಚರ್ಚಿಸಿದರೆ ಮಗುವು ನಿಜವಾಗಿಯೂ ಜ್ಞಾನಾರ್ಜನೆಯ ಉದ್ದೇಶದಿಂದಲೇ ಶಾಲೆಯಲ್ಲಿ ಅಭ್ಯಸಿಸಬೇಕಾಗುವದು.

ಮಗುವು ಶಾಲೆಯಲ್ಲಿರುವಾಗ ಅದರ ವರ್ತನೆ, ಗುಣ, ದೋಷಗಳ ಬಗ್ಗೆ, ನಡಾವಳಿಯ ಬಗ್ಗೆ ವರ್ಗದ ಗುರುಗಳು ಹಾಗೂ ಹಿರಿಯ ಗುರುಗಳು ಪ್ರಾಮಾಣಿಕ ವರದಿಯನ್ನು ಬರೆದಿಡಬೇಕು. ವರ್ಷಾಂತ್ಯದಲ್ಲಿ ಪ್ರಗತಿಯನ್ನು ಅಳೆಯುವಾಗ ಈ ವರದಿಯು ಗಣಿಸಲ್ಪಡಬೇಕು. ಮಗುವಿನಲ್ಲಿ ನಾಗರಿಕ ಗುಣಗಳು ಬೆಳೆದು ಬರಬೇಕಾದರೆ, ಅವನ ವರ್ತನೆಯ ಬಗ್ಗೆ ಬರೆದಿರುವ ಈ ವರದಿಗೆ ಯೋಗ್ಯ ಮಹತ್ವವು ಇರಬೇಕು. ಇದರಂತೆಯೇ ಶಾಲೆಯಲ್ಲಿ ಇಡೀ ವರ್ಷ ಸಾಧಿಸಿದ ಮೂಲೋದ್ಯೋಗದ, ಇಲ್ಲವೆ ಕೈಗಾರಿಕೆಯ ಪ್ರಗತಿಯನ್ನು ನಮೂದಿಸಿಡಬೇಕು. ಶಾಲೆಯಲ್ಲಿಯ ಸಾಂಘಿಕ ಜೀವನ ಹಾಗೂ ವಿಧಾಯಕ ಕಾರ್ಯಗಳ ಬಗ್ಗೆ ಶಿಕ್ಷಕನ ವರದಿಯು ಮಹತ್ವದ ಸ್ಥಾನವನ್ನು ಪಡೆಯುವದು. ಸಾಮಾನ್ಯವಾಗಿ ಪ್ರಾ. ಶಾ. ಸ್ರ. ಪರೀಕ್ಷೆಗೆ ಹೋಗತಕ್ಕ ಉಮೇದವಾರನು ಉತ್ತಮ ನಡತೆಯವನಿರಬೇಕಲ್ಲದೆ, ಐದು ಜನರನ್ನು ಸಾಕ್ಷರಗೊಳಿಸಿರಬೇಕು. ಒಂದು ಗ್ರಾಮದ ಸರ್ವೆ ಮಾಡಿರಬೇಕು. ನಾಲ್ಕು ಸಾಮಾಜಿಕ ಕಾರ್ಯಗಳನ್ನು ಮಾಡಿದವನಿರಬೇಕು. ಸಹಕಾರಿ ಅಂಗಡಿಯಲ್ಲಿ ಪಾಲುಗಾರನಿರಬೇಕು. ಶಾರೀರಿಕ ಶಿಕ್ಷಣದಲ್ಲಿ ತರಬೇತಿ ಹೊಂದಿದವನಿರಬೇಕು. ಚರ್ಚಾಕೂಟದಲ್ಲಿ ಭಾಗವಹಿಸಿರಬೇಕು. ಈ ಪ್ರಕಾರದ ಕೆಲವು ನಾಗರಿಕ ಗುಣಗಳನ್ನು ಬೆಳೆಸಬಲ್ಲ ಕಾರ್ಯಗಳನ್ನು ಕಡ್ಡಾಯವಾಗಿರಿಸುವದು ಯೋಗ್ಯವಾಗಿದೆ. ಇಂಥ ಸಮಯದಲ್ಲಿ ಗುರುಗಳು ತಮ್ಮ ಮೇಲಿರುವ ಹೊಣೆಗಾರಿಕೆಯನ್ನು ಸರಿಯಾಗಿ ಅರ್ಥಮಾಡಿಕೊಂಡು ವ್ಯವಹರಿಸಬೇಕಾಗುವದು.

ಪ್ರತಿ ವರ್ಷದಲ್ಲಿ ಕೆಲಸದ ದಿವಸಗಳ ಮುಕ್ಕಾಲು ಭಾಗ ಅವಶ್ಯವಾಗಿ ಶಾಲೆಯಲ್ಲಿ ಹಾಜರಿರಬೇಕೆಂದು ವಿಧಿಸುವದು ಒಳಿತು. ತ್ರೈಮಾಸಿಕ ಪರೀಕ್ಷೆಗಳನ್ನು ಏರ್ಪಡಿಸಿ ಆಯಾ ವಿಷಯಗಳಲ್ಲಿ ಬಾಲಕನು ಸಾಧಿಸಿದ ಪ್ರಗತಿಯನ್ನು ಕಾಯ್ದಿಟ್ಟು ವರ್ಷಾಂತ್ಯದಲ್ಲಿ ಮೇಲಕ್ಕೆ ಹಾಕುವಾಗ ಪರಿಗಣಿಸಬೇಕು. ಲಿಖಿತ ಪರೀಕ್ಷೆಗಳನ್ನು ಸದ್ಯಕ್ಕೆ ಆಯಾ ಶಾಲೆಯ ಗುರುಗಳೇ ನಡೆಸುತ್ತಿರುವರು. ಸಕ್ತಿ ಶಿಕ್ಷಣವು ಅಮಲಿನಲ್ಲಿರುವದರಿಂದ ಗುರುಗಳೇ ಪರೀಕ್ಷೆಯ ಎಲ್ಲ ಹೊಣೆಯನ್ನು ಹೊತ್ತುಕೊಳ್ಳಬೇಕಾಗಿದೆ. ಅಧಿಕಾರಿಗಳ ಸಿಬ್ಬಂದಿಯನ್ನು ನೇಮಿಸಿ ಪರೀಕ್ಷಿಸುವದು ತೊಂದರೆದಾಯಕವಾಗಿದೆ. ಗುರುಗಳನ್ನು ವಿಶ್ವಾಸದಲ್ಲಿ ತೆಗೆದುಕೊಂಡೇ ಮಗುವಿನ ಪರೀಕ್ಷೆಯನ್ನು ಏರ್ಪಡಿಸುವದು ಶಿಕ್ಷಣ ಶಾಸ್ತ್ರದ ದೃಷ್ಟಿಯಿಂದ ಸಮ್ಮತವಾದ ವಿಚಾರ. ಆದಾಗ್ಯೂ ಅದರಲ್ಲಿಯ ಲೋಪದೋಷಗಳನ್ನು ತಿದ್ದಿಕೊಳ್ಳುವ ಯೋಜನೆಯನ್ನು ಮಾಡಬಹುದು. ಪ್ರತಿಯೊಂದು ತಾಲೂಕಿನಲ್ಲಿ ಗುಂಪು ಶಾಲೆಗಳನ್ನು ರಚಿಸಿ ಕೇಂದ್ರಶಾಲೆಯ ಪ್ರಧಾನ ಗುರುಗಳ ಅಧ್ಯಕ್ಷತೆಯಲ್ಲಿ ಪರೀಕ್ಷಾ ಸಮಿತಿಗಳನ್ನು ನೇಮಿಸಬೇಕು. ಆಯಾ ಗುಂಪಿನಲ್ಲಿಯ ತರಬೇತಿ ಹೊಂದಿದ ಕನಿಷ್ಠ ಐದು ವರ್ಷ ಸರ್ವಿಸಿನ ಯೋಗ್ಯ ಶಿಕ್ಷಕರನ್ನು ಅಧಿಕಾರಿಗಳು ಆಯ್ಕೆ ಮಾಡಿ ಪರೀಕ್ಷಕರೆಂದು ನೇಮಿಸಬೇಕು. ೪ ರಿಂದ ೭ನೆಯ ವರ್ಗದ ಪರೀಕ್ಷೆಗಳು ಕೇಂದ್ರ ಸ್ಥಳದಲ್ಲಿಯೇ ನಡೆದು ಗುಪ್ತ ಪದ್ಧತಿಯಿಂದ ಉತ್ತರ ಪುಸ್ತಕಗಳ ತಪಾಸಣೆಯಾಗಬೇಕು. ಒಂದು ಗುಂಪಿನ ಉತ್ತರ ಪುಸ್ತಕಗಳನ್ನು ಮತ್ತೊಂದು ಗುಂಪಿನ ಪರೀಕ್ಷಕರಿಂದ ತಪಾಸಿಸುವದಾದರೆ ಹೆಚ್ಚು ಒಳ್ಳೆಯದಾಗುವದು. ೧ ರಿಂದ ೩ನೆಯ ವರ್ಗದ ವರೆಗಿನ ಮಕ್ಕಳು ಆಯಾ ಶಾಲೆಯಲ್ಲಿ ಅನುಭವಿಕ ಟ್ರೇಂಡ ಶಿಕ್ಷಕರಿಂದಲೇ ಪರೀಕ್ಷಿಸಲ್ಪಡಬಹುದು. ಏಕ ಶಿಕ್ಷಕ ಶಾಲೆಗೆ ಹಾಗೂ ಖಾಸಗಿ ಶಾಲೆಗೆ ಸಮೀಪದ ಪ್ರಮುಖ ಶಾಲೆಗಳಿಂದ ಅನುಭವಿಕ ಟ್ರೇಂಡ ಗುರುಗಳನ್ನು ಕಳಿಸಿಕೊಡಬೇಕು. ಪರೀಕ್ಷಕರೆಂದು ಕೆಲಸ ಮಾಡುವವರಿಗೆ ಯೋಗ್ಯ ಭತ್ತೆ ಮುಂತಾದ ಪ್ರತಿಫಲವನ್ನು ಕೊಡುವದು ತುಂಬಾ ಉಚಿತವಾಗಿದೆ. ಲೇಖಿ ಪರೀಕ್ಷೆಗಳಲ್ಲಿ ಕೊಡುವ ಪ್ರಶ್ನೆಗಳು ಮಗುವಿನ

ಮಟ್ಟಕ್ಕೆ ಯೋಗ್ಯವಾಗಿರಬೇಕಾದರೆ ಚಿಕ್ಕ ಚಿಕ್ಕ ಉತ್ತರಗಳನ್ನು ಕೊಡುವಂಥವಾಗಿರಬೇಕು. ಪ್ರಶ್ನೆಗಳನ್ನು ಉತ್ತರ ಪುಸ್ತಕಗಳಲ್ಲಿಯೇ ಮುದ್ರಿಸಿದರೆ ಹೆಚ್ಚು ಅನುಕೂಲವಾಗುವದು. ಈ ಪ್ರಶ್ನೆಗಳು ಯಾವದೇ ವರ್ಗದ ಇಡೀ ವರ್ಷದ ಅಭ್ಯಾಸವನ್ನು ಒಳಗೊಂಡಿರಬೇಕು. ಕೆಲವು ಸೂಕ್ತ ಉತ್ತರಗಳನ್ನು ಕೊಟ್ಟು ಯೋಗ್ಯ ಪ್ರಶ್ನೆಗಳನ್ನು ಕೇಳಲೂ ಹಚ್ಚಬಹುದು. ಈ ಪದ್ಧತಿಯು ತೊಂದರೆದಾಯಕವಾದರೂ ಉಪಯುಕ್ತವಾದೀತೆಂದು ಅನಿಸುವದು. ಭಾಷಾ ಪ್ರಭುತ್ವವನ್ನು ಅಳೆಯಲು, ವಿಷಯದ ಸಮಗ್ರತೆಯನ್ನು ಪರೀಕ್ಷಿಸಲು, ಪುಸ್ತಕಗಳನ್ನು ನೋಡಿ ಬರೆಯಲು ಕೆಲವು ಪೇಪರುಗಳನ್ನು ಏರ್ಪಡಿಸಬಹುದು. ಪ್ರತಿಯೊಂದು ಪರೀಕ್ಷೆಯಲ್ಲಿ ಮೌಖಿಕ ವಿಭಾಗವನ್ನು ಏರ್ಪಡಿಸಬೇಕು. ಇದರಿಂದ ಮಗುವಿನ ಉಚ್ಚಾರ, ಭಾಷಾಶೈಲಿ, ಉತ್ತರಿಸುವ ವೇಗ, ಗ್ರಹಣಶಕ್ತಿ, ವ್ಯಕ್ತಿತ್ವ ಮುಂತಾದವುಗಳ ಅಳತೆಯಾಗುವದು. ಪರೀಕ್ಷೆಗಳಲ್ಲಿ ಕನಿಷ್ಠ ಕ್ಕೆ ಶೇ ದಷ್ಟು ಗುಣಗಳನ್ನು ಪಡೆದರೆ ಮಾತ್ರ ತೇರ್ಗಡೆ ಹೊಂದಿದವನೆಂದು ಗಣಿಸಲಡ್ಡಿಯಿಲ್ಲ. ಅನುತ್ತೀರ್ಣವಾದ ವಿಷಯಗಳಲ್ಲಿ ಮಾತ್ರ ೨-೩ ತಿಂಗಳ ಅವಧಿಯ ನಂತರ ಪುನಃ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು. ಇಂಥ ಸಂದರ್ಭದಲ್ಲಿ ಮುಂದಿನ ವರ್ಷದ ಅಭ್ಯಾಸಕ್ಕೆ ಪರವಾನಿಗೆಯನ್ನು ಕೊಡಲು ಅಡ್ಡಿಯಿಲ್ಲ.

ಪರೀಕ್ಷಾ ತಂತ್ರದ ಹಾಗೂ ವೇಳೆಯ ದೃಷ್ಟಿಯಿಂದ ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕು. ಪ್ರಾಥಮಿಕ ಶಾಲೆಯಲ್ಲಿ ಮಕ್ಕಳು ಚಿಕ್ಕವರಿರುವದರಿಂದ ದಿನಾಲು ಎರಡು ಕಾಗದ(ವಿಷಯ)ಗಳನ್ನು ಪರೀಕ್ಷೆಗಾಗಿ ಇಡಬಾರದು. ಹೆಚ್ಚು ದಣಿವಾಗುವದರಿಂದ ಮಗುವಿನಲ್ಲಿ ಶಕ್ತಿ ಉತ್ಸಾಹಗಳು ಕುಗ್ಗಿ ನಿರಾಶರಾಗುವ ಸಂಭವವುಂಟು. ಪ್ರತಿದಿನ ಒಂದೇ ವಿಷಯವನ್ನು ಪರೀಕ್ಷಿಸುವದು ಯೋಗ್ಯವಾಗಿದೆ. ಲೇಖೀ ಪರೀಕ್ಷೆಗಳನ್ನು ಏರ್ಪಡಿಸುವ ಕಾಲವನ್ನೂ ಲಕ್ಷಿಸಬೇಕಾಗುವದು. ಸದ್ಯಕ್ಕೆ ಹೆಚ್ಚಾಗಿ ನಡುಬೇಸಿಗೆಯ ಕಾಲದಲ್ಲಿ ಪರೀಕ್ಷೆಯನ್ನು ಏರ್ಪಡಿಸುವದರಿಂದ ವಾತಾವರಣವು ಅನುಕೂಲವಾಗಿರುವದಿಲ್ಲ. ಪ್ರತಿ ವರುಷ ಜನವರಿ ಇಲ್ಲವೆ ಫೆಬ್ರುವರಿ ತಿಂಗಳಲ್ಲಿ ಈ ಪರೀಕ್ಷೆಗಳು ಮುಗಿಯುವಂತೆ ಯೋಜಿಸುವದು ಅತಿ ಯೋಗ್ಯವಾಗಿದೆ.

ಶಿಕ್ಷಣವು ವ್ಯಕ್ತಿಯ ಬೆಳವಣಿಗೆಯನ್ನು ಪರಿಪೂರ್ಣಗೊಳಿಸಬೇಕಾದರೆ ಅವನಲ್ಲಿಯ ಯಾವದಾದರೊಂದು ಒಲವಿನ ಕಲೆಯನ್ನು (Hobby) ಕುದುರಿಸಿ ವಿಕಾಸಗೊಳಿಸಬೇಕು. ಪ್ರಾಥಮಿಕ ಶಾಲೆಯನ್ನು ಬಿಡುವದರೊಳಗಾಗಿ ಯಾವದಾದರೊಂದು ಕೌಶಲ್ಯವನ್ನು ಪಡೆದುಕೊಂಡು ಹೋಗುವಂತೆ ಯೋಜಿಸುವದು ಅವಶ್ಯವಾಗಿದೆ. ಉದಾ: ಗಾಯನ, ಚಿತ್ರಕಲೆ, ನೃತ್ಯ, ಕಸರತ್ತು, ಲೇಖನಕಲೆ, ಹೊಲಿಗೆ, ಕಸೂತಿ, ಅಡಿಗೆ ಮಾಡುವದು, ನೂಲು-ನೇಯಿಗೆ, ಕೃಷಿ, ಬಡಿಗತನ, ಭಾಷಣಕಲೆ ಇತ್ಯಾದಿ. ಇಂಥ ಯಾವದಾದರೊಂದು, ವಿಷಯವನ್ನು ಮಗುವು ಐಚ್ಛಿಕವಾಗಿ ಆಯ್ಕೆಮಾಡಿಕೊಂಡು ವ್ಯಾಸಂಗ ಮಾಡಬೇಕಾಗುವದು. ಪ್ರಾಥಮಿಕ ಶಾಲೆಯ ಕೊನೆಯ ಪರೀಕ್ಷೆಯಲ್ಲಿ ಈ ವಿಷಯವು ಅವಶ್ಯವಾಗಿ ಪರೀಕ್ಷೆಯ ಯೋಜನೆಯಲ್ಲಿ ಇರಬೇಕು.

ಶಿಕ್ಷಣ ಖಾತೆಯ ಅಧಿಕಾರಿಗಳನ್ನು ಪ್ರತಿಯೊಂದು ಹಂತದಲ್ಲಿ ಮೇಲ್ವಿಚಾರಕರೆಂದು ನೇಮಿಸಿದರೆ, ಅವರ ಸಮರ್ಥ ನೇತೃತ್ವದಲ್ಲಿ ಇಂದಿನ ಪರೀಕ್ಷಾ ಕ್ರಮವನ್ನು ಚನ್ನಾಗಿ ಕಾರ್ಯರೂಪದಲ್ಲಿ ತರಲು ಅನುಕೂಲವಾಗುವದು. ಮೇಲಿನ ಈ ನನ್ನ ಸೂಚನೆಗಳಲ್ಲಿ ಎಷ್ಟೋ ದೋಷಗಳು ಓದುಗರ ದೃಷ್ಟಿಗೆ ಬರಬಹುದು. ಆದರೆ ಶಿಕ್ಷಣಾಧಿಕಾರಿಗಳು ಹಾಗೂ ಶಿಕ್ಷಕರು ಪರಸ್ಪರರಲ್ಲಿ ನಂಬಿಗೆ ಹಾಗೂ ವಿಶ್ವಾಸಗಳಿಂದ ಸಹಕರಿಸಿ ಕಾರ್ಯಪ್ರವೃತ್ತರಾದರೆ ಯಾವ ತೊಂದರೆಗಳೂ ಬಾಧಿಸಲಾರವೆಂದು ಹೇಳಬಹುದು. ಪರೀಕ್ಷೆಗಳು ಮಕ್ಕಳಿಗೆ ಭೀತಿಯ ಭೂತಗಳಾಗದೆ ಉಲ್ಲಾಸದ ಆಟಗಳಾಗಬೇಕು.

❀ ❀ ❀

ವೃಷಭ ಶಿಲಾಮೂರ್ತಿಗಳು

ಲೇಖಕರು : **ಡಾ. ಬಿ. ಎಸ್. ಗದ್ದಗಿಮಠ**, ಎಂ.ಎ., ಪಿಎಚ್.ಡಿ.

ಶಿಲ್ಪಕಲೆಯು ಮಾನವ ಸಂಸ್ಕೃತಿಯ ಪ್ರಗತಿಯ ಒಂದು ದ್ಯೋತಕ. ಅದರಲ್ಲಿ ಆಯಾ ಕಾಲದ ರಸಭಾವಗಳು ಕಲೆಗಾರನ ಮನಮೆಚ್ಚಿ ಮೂರ್ತವೆತ್ತಿವೆ. ಧಾರ್ಮಿಕ ಭಾವನೆಗಳಾಗಲಿ, ಪರಂಪರೆಗಳಾಗಲಿ, ಪೌರಾಣಿಕ ಕಲ್ಪನೆಗಳಾಗಲಿ, ಇತಿಹಾಸ ಸನ್ನಿವೇಶಗಳಾಗಲಿ ಜನಾಂಗಕ್ಕೆ ಬೇಕೆನಿಸಿದಾಗ ಕಲಾನೈಪುಣ್ಯದೊಡನೆ ಕಲೆಗಾರನು ಅವುಗಳನ್ನು ಲಲಿತ ಕಲೆಗಳಲ್ಲಿ ಅರಳಿಸಿ ಮನಮೆಚ್ಚಿಸಿ ಜನಮೆಚ್ಚಿಗೆ ಪಡೆಯುತ್ತಾನೆ. ಧಾರ್ಮಿಕ ಪರಂಪರೆಯು ಪುರಾಣವಾಗಿ ಸಂಭವಿಸಿದರೂ ಅದರ ಹಿನ್ನೆಲೆಯ ಸತ್ಯವು ಇತಿಹಾಸವೆಂಬುದನ್ನು ಯಾವ ಮಾನವನೂ ಅಲ್ಲಗಳೆಯಲಾರ. ಈ ದಿಶೆಯಲ್ಲಿ ಭರತಖಂಡದಲ್ಲಿಯ ವೃಷಭ ಶಿಲಾಮೂರ್ತಿಗಳನ್ನು ಕೂಲಂಕಷವಾಗಿ ಸಂಶೋಧನೆಯಿಂದ ನೋಡಲು ವಿಶ್ವೋತ್ಪತ್ತಿಯಿಂದ ಇಂದಿನ ವರೆಗೆ ಈ ವೃಷಭ (ಬಸವ) ದೇವನ ಸಂಬಂಧ ಮಾನವನ ಭಾವಗಳು ಬೇರೆ ಬೇರೆಯಾಗಿದ್ದುದು ಕಂಡು ಬರುವುವು.

೧. ಆಗಮ ಪುರಾಣಾದಿ ಪರಂಪರೆಯಿಂದ 'ವೃಷಭ' ಹಾಗೂ 'ನಂದಿ' ಶಬ್ದಗಳು ಭರತಖಂಡದಲ್ಲಿ ಬಳಕೆಯಲ್ಲಿ ಬಂದಿವೆ.

೨. ಜೈನಾಗಮಗಳಲ್ಲಿ 'ವೃಷಭ' ಹಾಗೂ 'ನಂದಿ'[1] ಶಬ್ದಗಳು ಬಳಸಲ್ಪಟ್ಟಿವೆ. ಜೈನರ ಮೊದಲನೆಯ ತೀರ್ಥಂಕರನು 'ವೃಷಭ'ನಾಗಿದ್ದಾನೆ. ಈ 'ವೃಷಭ'ನೇ ಅವರಿಗೆ 'ಆದಿ ದೇವನು.'

೩. ದ್ರಾವಿಡ ಜನಾಂಗಕ್ಕಂತೂ 'ವೃಷಭ'ನು ಜನಾಂಗದ ದೇವನಾಗೆಯೇ ಪರಿಣಮಿಸಿದ್ದಾನೆ.

೪. ಭರತಖಂಡದ ಉತ್ತರಕ್ಕಿಂತ ದಕ್ಷಿಣದಲ್ಲಿ 'ವೃಷಭ' ವಿಗ್ರಹವಿಲ್ಲದ ಹಳ್ಳಿಯೇ ಇಲ್ಲವೆಂದರೆ ತಪ್ಪಾಗಲಿಕ್ಕಿಲ್ಲ. ಅಷ್ಟು ಪ್ರಭಾವಪೂರ್ಣವಾಗಿದೆ ಈ ವೃಷಭ ಶಿಲಾಮೂರ್ತಿಯು ಜನಾಂಗದ ಮೇಲೆ.

'ವೃಷಭ' ಹಾಗೂ 'ನಂದಿ'ಶಬ್ದಗಳ ಉತ್ಪತ್ತಿಯು ವಿದಿತವಾಗಲು ಅವು ಅರ್ಥ ವೈಶಿಷ್ಟ್ಯಪೂರ್ಣವಾಗಿವೆ ಎಂದು ಅನಿಸದಿರಲಾರದು. 'ವೃಷಭ' ಶಬ್ದವು ಸಂಸ್ಕೃತ ಶಬ್ದವು. **'ವೃಷ+ಭ'** ಈ ಎರಡರ ಸಂಯೋಗವಿದೆ ಇಲ್ಲಿ. **'ವೃಷ'** ಶಬ್ದವು **'ಧರ್ಮ'**ವೆಂಬ ಅರ್ಥವನ್ನು ಕೊಡುವುದು. **'ಭ'** ಇದು **''ಭೃ''** ಈ ಧಾತುವಿನಿಂದ ಬಂದುದು– **"ಪರಿಪೂರ್ಣವಾದುದು"** ಎಂಬ ಅರ್ಥವನ್ನು ಸೂಚಿಸುವುದು. 'ವೃಷಭ' ಇದು **'ಧರ್ಮಪೂರಿತ'**ವೆಂದಂತಾಗುವುದು. ಅಂದರೆ 'ವೃಷಭ' ಮೂರ್ತಿಯು **"ಧರ್ಮ ಪೂರಿತ ಮೂರ್ತಿ"**ಯಾಗಿರಬಹುದೇ? ಸಂಸ್ಕೃತ 'ವೃಷಭ' ಈ ಶಬ್ದವು ಕನ್ನಡದಲ್ಲಿ ತದ್ಭವವಾಗಿ 'ಬಸವ'ವಾಗಿದೆ. ಈ ಶಬ್ದವು ದ್ರಾವಿಡ ಭಾಷೆಗಳಲ್ಲಿಳಿಯುವಾಗ ಭಿನ್ನಭಿನ್ನ ರೂಪಾಂತರ ಹೊಂದಿ **"ಬಸವ"** ಆಗಿ ಕನ್ನಡಕ್ಕೆ ಬಂದಿದೆ. ತಮಿಳಿನಲ್ಲಿ **"ವಸವ"** ಎಂದು ಆಗಿದೆ. ಮುಂದೆ ಈ ಶಬ್ದವು ಕ್ರಿ. ಶ. ೧೨ನೆಯ ಶತಮಾನದ ನಂತರ ಕರ್ನಾಟಕದಲ್ಲಂತೂ ಪೂರ್ಣ ಧ್ವನಿಭರಿತವಾಗಿ ಇಲ್ಲಿಯ ವರೆಗೆ ಬಂದಿದೆ. ಈ ಶಬ್ದದಲ್ಲಿ **ಮಂತ್ರೀಶ ಬಸವ** ಹಾಗೂ **ಚೆನ್ನಬಸವ**ರಿಬ್ಬರೂ ಧ್ವನಿ ಮಾಡುತ್ತಿರುವುದು ತಿಳಿದು ಬರುವುದು. ಇಂದು ಹಳ್ಳಿಗರಿಗಂತೂ ಈ ಕಲ್ಲ ಬಸವ (ವೃಷಭ ಶಿಲಾ) ಮೂರ್ತಿಯೆಂದರೆ ಕಲ್ಯಾಣ ಬಸವ–ಚೆನ್ನಬಸವರೆಂದೇ ಗ್ರಹಿಕೆ.

'ನಂದಿ' ಶಬ್ದವು 'ವೃಷಭ' ಶಬ್ದಾರ್ಥವನ್ನು ಹೇಳುವ ಇನ್ನೊಂದು ಶಬ್ದವು. ಸಾಮಾನ್ಯವಾಗಿ ಈ ಶಬ್ದವು ದ್ರಾವಿಡ ಎಲ್ಲ ಭಾಷೆಗಳಲ್ಲಿಯೂ ಬಳಸಲ್ಪಟ್ಟಿದೆ. ಶಬ್ದರೂಪವು ಸಂಸ್ಕೃತವೆಂದೇ ಕಂಡು ಬಂದರೂ ದ್ರಾವಿಡ ಜನಾಂಗದಲ್ಲಿ ಇದು ಮನೆ ಬಳಕೆಯಾಗಿ ನಿಂತಿದೆ. ಕನ್ನಡಿಗರಿಗೆ 'ನಂದಿ'ಯು 'ನಂದೆಪ್ಪ'ವಾಗಿದೆ. 'ನಂದಿ'ಯೇ 'ಬಸವ' ಆಗಿದೆ. ಕನ್ನಡಿಗರಲ್ಲಿ **"ನಂದಿ" ಹೆಸರುಳ್ಳ** ಮನೆತನದವರು ಅನೇಕರುಂಟು. ಅವರ ಮೂಲೋದ್ಯೋಗವು ಒಕ್ಕಲುತನವಾಗಿದೆ. ನಂದಿಯ ಪೂಜಕರೂ ಪರಿಚಾರಕರೂ ಭಕ್ತರೂ ಒಕ್ಕಲಿಗರೇ ಆಗಿದ್ದಾರೆ. ಅಲ್ಲದೆ **"ನಂದಿಕೋಲಿನ"** ಆಟವೂ ಕರ್ನಾಟಕದಲ್ಲಿ ತುಂಬ ಕಂಡು ಬರುವುದು. ಇದು ಎತ್ತಿ (ನಂದಿ) ನೊಡನೆ ಪರಿಣಮಿಸಿದರೆ **ಕೌಲೆತ್ತಿನಾಟ**ವಾಗುವುದು. ನಂದಿ ಕೋಲಾಟ

---

[1] ನಂದಿ, ಗರುಡ, ರಕ್ಕಸ, ರಾವಳ, ನಾಗ, ಸಿದ್ಧ, ಪುಲ್ಲ ಮೊದಲಾದುವು ದ್ರಾವಿಡ ಜನಾಂಗದ ಒಳಪಂಗಡಗಳಿರಬಹುದೇ? ಎಂಬ ಅನುಮಾನ ಬರುವುದು.

ವನ್ನು ಆಡುವವರು **"ನಂದಿಸಂಬಾಳದಯ್ಯಗಳು."** 'ಕೌಲೆತ್ತಿನಾಟ'ವನ್ನಾಡುವವರು **"ಕೌಲೆತ್ತಿನಯ್ಯಗಳು."** ನಂದಿಯ ಕೀರ್ತಿಯನ್ನು ಜನತೆಗೆ ಹೇಳುವುದಕ್ಕಾಗಿಯೇ ಪರಸಿ ಕೂಡಿದಲ್ಲಿ ಈ ಆಟಗಳನ್ನು ಪ್ರದರ್ಶಿಸುತ್ತಾರೆ. ಈ ಆಟಗಳನ್ನು ಆಡುವಾಗ ಹಾಡುವ ಹಾಡುಗಳಲ್ಲಾಗಲಿ ಹೇಳುವ ವಚನಗಳಲ್ಲಾಗಲಿ ನಾವು ಇದನ್ನು ಕೇಳಿ ಮನಗಾಣಬಹುದು.

ಕನ್ನಡ 'ಹೇಳವರು'[2] ತಮ್ಮ 'ಬೆಡಗು'[3] ಹೇಳುವಾಗ ತಮ್ಮ ಗುರುಸ್ಥಲ ಪೀಠಿಕೆಯನ್ನು ಹೇಳುವರಲ್ಲದೆ ಅವರಲ್ಲಿ, ತಮ್ಮಲ್ಲಿಯ ಎರಡು ಬಣಗಳನ್ನು ಹೇಳುವ ವಾಡಿಕೆಯಿದೆ.

೧. ನಂದಿ ಬಣ.

೨. ಗರುಡ ಬಣ.

ಈ ನಂದಿ ಬಣದವರೇ 'ನಂದಿಸಂಬಾಳದ' ಹಾಗೂ 'ಕೌಲೆತ್ತಿನಯ್ಯ'ಗಳಾಗಿದ್ದಾರೆ. ಗರುಡ ಬಣದವರೇ ಮನೆ ಮನೆಗೆ ಅಲೆದಾಡಿ ವಂಶಾವಳಿಯನ್ನು ಸಾರುವ-ಹೇಳುವ ಹೆಳುವಯ್ಯಗಳಾಗಿದ್ದಾರೆ. ಮುಂದೆ ೧೨ ನೆಯ ಶತಮಾನದಲ್ಲಿ ಈ ಜನರು ಲಿಂಗವಂತರಾಗಲು ಇವರು ಕೈಕೊಂಡ ಕೆಲಸಗಳು ಕಾಯಕಗಳಾಗಿ ಪರಿಗಣನವಾದುದು 'ಕಾಯಕ' ಇತಿಹಾಸದಿಂದ ತಿಳಿದು ಬರುವುದು. ಪುರಾಣಾದಿ ಶಾಸ್ತ್ರಗಳಂತೆ 'ನಂದಿ'ಯು ಶಿವನಿಗೆ ವಾಹನನಾಗಿದ್ದಾನೆ; ರಕ್ಷಕನೂ ಆಗಿದ್ದಾನೆ. ಹೀಗೆ 'ನಂದಿ' ಶಬ್ದದ ಅರ್ಥವು ಕನ್ನಡಿಗರಲ್ಲಿ ಇಷ್ಟು ವ್ಯಾಪ್ತಿಯಾಗಿ ಪರಿಣಮಿಸಿದೆ.

ಹೀಗೆ ಪರಂಪರೆಯ ಶಬ್ದದ ಅರ್ಥ ಹಾಗೂ ಸಂಸ್ಕೃತಿಯ ಭಾವಗಳು ಪುರಾಣ ಕಾವ್ಯಗಳಲ್ಲಿ ಒಡಮೂಡಿ ಬಂದುವಲ್ಲದೆ ಶಿಲ್ಪಿಯ ಕೈಯಲ್ಲಿ ಶಿಲಾಕೃತಿಗಳಾಗಿಯೂ ಬಂದುವು. ಅವು ಕಾವ್ಯಗಳಲ್ಲಿ ಸೈಜದ ಸುಳುವಿನಲ್ಲಿ ಪವಾಡಗಳಾಗಿ ಹೊರಹೊಮ್ಮಿವೆ. ಆದರೆ ಶಿಲಾಕೃತಿಗಳಲ್ಲಿ ಜನತೆಯ ಸೂಕ್ತ ಅಭಿಮತಗಳ ಕೈವಾಡವು ಶಿಲಾಮೂರ್ತಿಯಾಗಿ ನಿಂತಿದೆ. ಶಿಲ್ಪಿಯು ಜನತೆಯ ಅಭಿಮತವನ್ನೇ ತನ್ನ ಕೃತಿಯಲ್ಲಿ ಕೆತ್ತಿದ್ದಾನೆ. ಅದು ಪುರಾಣವೂ ಆಗಬಹುದು, ಅಥವಾ ಇತಿಹಾಸವೂ ಆಗಿರಬಹುದು.

---

2 ಹೆಳುವಯ್ಯಗಳು ವಂಶಾವಳಿಯನ್ನು 'ಹೇಳುವ' ಅಯ್ಯಗಳು.

3 'ಬೆಡಗು' ಸೂತ್ರಗೋತ್ರವಾಗಿದೆ.

ಭರತಖಂಡದಲ್ಲಿಯ 'ವೃಷಭ' (ಬಸವ) ವಿಗ್ರಹಗಳನ್ನು ನಾಲ್ಕು ವಿಧವಾಗಿ ಕಾಣಬಹುದಾಗಿದೆ.

೧. ಮುಂಗಾಲುಗಳೆರಡನ್ನು ಮಡಿಚಿ ಗದ್ದುಗೆ ಹಾಕಿದ 'ವೃಷಭ' (ಬಸವ)ನ ಮುಂದೆ ಶಿವಲಿಂಗವು ಚಿಕ್ಕದುದಾಗಿ ನಿಂತಿದೆ. ಇಂತಹ ವೃಷಭ ವಿಗ್ರಹವು ಮೊಟ್ಟಮೊದಲು ಗರ್ಭದೇವಾಲಯದಲ್ಲಿಯೇ ಸ್ಥಾಪಿತವಾಗಿದೆ.

೨. ಎರಡನೆಯ ತರದ ವೃಷಭ ವಿಗ್ರಹದಲ್ಲಿ ಶಿವಲಿಂಗವು ನಿರ್ಗಡಿಸಲ್ಪಟ್ಟು ಗರ್ಭದೇಗುಲವನ್ನು ಸೇರಿದೆ. ಮುಂಗಾಲುಗಳೆರಡನ್ನು ಮಡಿಚಿ ವೃಷಭ (ಬಸವ)ನು ಗದ್ದುಗೆ ಹಾಕಿದ್ದಾನೆ ಸಭಾಮಂಟಪದಲ್ಲಿ; ಇನ್ನೂ ಕೆಲವಡೆಯಲ್ಲಿ ಪಾದಗಟ್ಟೆಯ ಮೇಲೆ ಮಲಗಿದ್ದಾನೆ.

೩. ಕೆಲವು ವೃಷಭ-ಶಿಲಾಮೂರ್ತಿಗಳಲ್ಲಿ ಗದ್ದುಗೆ ಹಾಕಿ ಮಲಗಿದ ವೃಷಭ (ಬಸವ)ನು ತನ್ನ ಎಡಗಾಲನ್ನೆತ್ತಿ ಮುಂದೆ ಇಟ್ಟಿದ್ದಾನೆ.

೪ ಬೇರೆ ಕೆಲವುಗಳಲ್ಲಿ ಗದ್ದುಗೆ ಹಾಕಿ ಮಲಗಿದ ವೃಷಭ(ಬಸವ)ನು ತನ್ನ ಬಲಗಾಲನ್ನೆತ್ತಿ ಮುಂದೆ ಇಟ್ಟಿದ್ದಾನೆ. ಈ ನಾಲ್ಕು ತೆರದ ಮೂರ್ತಿಗಳು ನೆದರಿಗೆ ಬಿದ್ದಾಗ ಯಾವ ಸಂಶೋಧಕನನ್ನು ವಿಚಾರದಲ್ಲಿ ನೂಕಲಿಕ್ಕಿಲ್ಲ? ಇವುಗಳ ಮಹತ್ವವನ್ನರಿತು ಜನತೆಯ ಮುಂದಿಡುವುದು ಸಂಶೋಧಕನ ಕರ್ತವ್ಯವಾಗಿದೆ.

ಈ ಭಿನ್ನ ಭಿನ್ನ ವೃಷಭ (ಬಸವ) ಶಿಲಾಮೂರ್ತಿಗಳ ಔಚಿತ್ಯವೇನು? ನಮ್ಮ ಪೂರ್ವಜರು ಇವುಗಳನ್ನು ಹೀಗೆ ಕೆತ್ತಿಸಲು ಕಾರಣವೇನು? ಅವು ಅನರ್ಥವಿರಬಹುದೇ? ಅಥವಾ ಅವುಗಳನ್ನರಿಯಲು ಬಾರದ ನಾವು ಅನರ್ಥಿಗಳೇ? ಎಂಬ ಪ್ರಶ್ನೆಗಳು ಸಂಶೋಧಕನ ತಲೆಯನ್ನು ಕೆಡುಚುವುವು. ವಿಚಾರವಂತ ಮಾನವನಿಗೆ ಅವು ಅನರ್ಥವಲ್ಲ; ಪರಂಪರೆಯಿಂದ ಬಂದ ನಮ್ಮ ಸಂಸ್ಕೃತಿಯ ರಹಸ್ಯವೆಂದು ಹೊಳೆಯದಿರದು. ನಾವೆಲ್ಲರೂ ಇಂದು ಈ ರಹಸ್ಯವನ್ನರಿತರೆ ನಮ್ಮ ಪೂರ್ವಜರ ವಿಚಾರ ಮಹತಿಯು ನಮಗೆ ತಿಳಿಯದಿರದು. ಈ ಪ್ರತಿಯೊಂದರಲ್ಲಿ ನಮ್ಮ ಪೂರ್ವಜರ ಒಂದೊಂದು ಮಹಾ ಕಲ್ಪನೆಯಿದೆ.

ಮೊದಲನೆಯ ವಿಗ್ರಹದಲ್ಲಿ ವೃಷಭ(ಬಸವ)ನು ದೊಡ್ಡವನಿದ್ದಾನೆ; ಶಿವನು ಚಿಕ್ಕವನಿದ್ದಾನೆ. ಅಂತೆಯೇ **ವೃಷಭ (ಬಸವ) ನು ಆದಿದೇವನು.** ಕಾರಣ ಜೈನರು 'ವೃಷಭ' (ಬಸವ)ನಿಗೆ ಆದಿದೇವನೆಂದು ಕರೆದಿದ್ದಾರೆ. ಈ ಆದಿದೇವನೇ ಜೈನರ ಮೊದಲನೆಯ ತೀರ್ಥಂಕರನಾಗಿದ್ದಾನೆ. ವೃಷಭನು ಶಿವನಕಿಂತಲೂ

ಹಿರಿಯನೆಂಬ ಕಲ್ಪನೆಯಿದೆ ಇಲ್ಲಿ. ಈ ಕಲ್ಪನೆಯನ್ನು ಜನಪದವು ಮರೆತಿಲ್ಲ; ಪರಂಪರೆಯನ್ನು ಕಥೆಗಳಲ್ಲಿ ಹೇಳುತ್ತ ಬಂದಿದೆ; ಹಾಡುಗಳಲ್ಲಿ ಹಾಡುತ್ತ ಬಂದಿದೆ–

ಭೂಮಿ ಹುಟ್ಟಿದ ಮೊದಲು ಭೂಮಿ ಕಟ್ಟಿದ ಮೊದಲು
ಭೂಪ ಹುಟ್ಟೇದ ಬಸವಯ್ಯಾ | ವ್ಯಾಗೀನ
ಶಿವಗೇಳು ದಿನಕ ಹಿರಿಯಾನ|| —[4]ಜನತಾ ಗೀತೆ

ಗಳು ಎಂದು ಒಕ್ಕಲಿಗನು ಹಂತಿಯಲ್ಲಿ ಹಾಡಿದ್ದಾನೆ. ಅಮೃತವು ವೃಷಭ(ಬಸವ)ನ ಯೋಗನಿದ್ರೆಯ 'ಜೊಲ್ಲು' ಎಂದು ಒಂದು ರಹಸ್ಯಪೂರ್ಣವಾದ ಜನಪದ ಕಥೆಯೂ ಬರುವುದು. ಈ ಬಸವನೇ ನಮಗೆ ಆದಿವೃಷಭ ನಾಗಿದ್ದಾನೆ.

ಎರಡನೆಯದರಲ್ಲಿ ಶಿವನು ಸೃಷ್ಟಿಯ ಉತ್ಪತ್ತ್ಯಾದಿಗಳಿಗೆ ಮೂಲಪುರುಷನೆಂಬುದನ್ನು ಜನಾಂಗವು ಮನ ಗಂಡ ಮೇಲೆ ಶಿವನಿಗೆ ಎಲ್ಲ ದೇವರಿಗಿಂತ ಹಿರಿಮೆ ಬಂತು. ಜನರ ಕಲ್ಪನೆಯಂತೆ ಶಿಲ್ಪಿಯು ಈ ಮೂರ್ತಿಗಳನ್ನು ಕಟೆಯಬೇಕಾಯಿತು. ಆಗ ಶಿವನು ವೃಷಭ (ಬಸವ) ಶಿಲಾಮೂರ್ತಿಯಿಂದ ಬಿಂಗಡಿಸಲ್ಪಟ್ಟು ಗರ್ಭದೇವಾಲಯದಲ್ಲಿ ಶಿವಲಿಂಗವಾದ. ಬಸವನು, ಶಿವನ ಅಂಗರಕ್ಷಕನಾಗಿ ಶಿವಲಿಂಗದ ಮುಂದೆ ಸಭಾಮಂಟಪ ಸೇರಿದ; ಇನ್ನೂ ಕೆಲವಡೆಯಲ್ಲಿ ಅವನನ್ನು ನಾವು ಪಾದಗಟ್ಟೆಯ ಮೇಲೆ ಕಾಣುತ್ತೇವೆ. ಇವನೇ **"ಲೆಂಕ ಬಸವ"**ನಾಗಿದ್ದಾನೆ. ಇಂತಹ ವಿಗ್ರಹಗಳನ್ನು ನಾವು ಭರತ ಖಂಡದ ತುಂಬೆಲ್ಲ ಕಾಣುತ್ತೇವೆ.

ಹನ್ನೆರಡನೆಯ ಶತಮಾನವು ಕರ್ನಾಟಕದಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಕ್ರಾಂತಿಯ ಕಾಲ. ಇದು ತನ್ನ ಪ್ರಭಾವವನ್ನು ಶಿಲ್ಪಕಲೆಯ ಮೇಲೂ ಚೆಲ್ಲಿದಂತೆ ಕಾಣುತ್ತದೆ. ಈ ವೃಷಭನ ಸಂಬಂಧ ಜನರ ಕಲ್ಪನೆಯೇ ಬೇರೆಯಾಯಿತು. ಜನರು ಮಂತ್ರೀಶ ಬಸವ–ಚೆನ್ನಬಸವರೇ ಈ ವೃಷಭನ ಅವತಾರವೆಂದು ಗ್ರಹಿಸಹತ್ತಲು ಅಂದಿನಿಂದ ಈ ವೃಷಭನೇ ಕರ್ನಾಟಕದಲ್ಲಿ ಬಸವ-ಚೆನ್ನಬಸವರ ಧ್ವನಿಭರಿತ ಬಸವಣ್ಣನಾದ. ಈ ಕಲ್ಪನೆಯನ್ನು ಶಿಲ್ಪಿಯು ತನ್ನ ಕಲೆಯುಲ್ಲಿಯೂ ಮೂಡಿಸಿದ. ಲಿಂಗವಂತರಿಗೆ **ಬಸವನು "ಭಕ್ತಭಂಡಾರಿ"; ಚೆನ್ನಬಸವನು "ಜ್ಞಾನಭಂಡಾರಿ"**. ಭಕ್ತಿಯು ಸೇವಾಭಾವದ ಎಡಭಾಗವನ್ನು ತೋರಿಸುವುದು; ಜ್ಞಾನವು ಹಸ್ತಜ್ಯೋತಿಯ ಬಲಭಾಗವನ್ನು ಸೂಚಿಸುವುದು. ಶಿಲ್ಪಿಯು ವೃಷಭ-ವಿಗ್ರಹವನ್ನು ಕಟೆಯುವಾಗ ತನ್ನ ಕಾಲದ ಜನರ ಅನುಮತಿಯಂತೆ ಶಾಸ್ತ್ರೋಕ್ತವಾಗಿ, ಭಕ್ತಿಯನ್ನು ಅದರ ಎಡಗಾಲನ್ನೆತ್ತಿ ಹಾಗೂ ಜ್ಞಾನವನ್ನು ಅದರ ಬಲಗಾಲನ್ನೆತ್ತಿ ಮುಂದಿಟ್ಟು ಕಟೆದು ತೋರಿಸಿದ್ದಾನೆ. ಕಾರಣ ಇಂತಹ ವಿಗ್ರಹಗಳನ್ನು ಲಿಂಗವಂತರು ಕಲ್ಯಾಣ ಬಸವ ಚೆನ್ನಬಸವರ ದ್ಯೋತಕಗಳೆಂದು ತಿಳಿಯುತ್ತಾರೆ. ಈ ಪರಂಪರೆಯು ಬಸವಾದಿ ಪ್ರಮಥರ ಕಾಲದಿಂದಲೂ ಲಿಂಗವಂತರಲ್ಲಿ ಬಂದಿದೆ. ಕಾರಣ ವೃಷಭ ವಿಗ್ರಹದಲ್ಲಿ ಎಡಗಾಲು ಮುಂದಿಟ್ಟಿದ್ದರೆ **"ಭಕ್ತಬಸವ"**ನೆಂದೂ ಬಲಗಾಲು ಮುಂದಿಟ್ಟಿದ್ದರೆ **"ಜ್ಞಾನಬಸವ"** (ಚೆನ್ನಬಸವ)ನೆಂದೂ ಕರೆಯುವ ವಾಡಿಕೆಯು ಲಿಂಗವಂತರಲ್ಲಿ ಈಗಲೂ ಕೇಳಬರುವುದು.

ಲಿಂಗವಂತರಿಗೆ **"ಉದ್ಧರಣೆ"**ಯು ಒಂದು ಚಿತ್ರಪಟದ ಮಹಾ ಧರ್ಮಗ್ರಂಥ. ಅದರಲ್ಲಿ ವೇದೋಪನಿಷತ್ ವಚನ ಶಾಸ್ತ್ರಾದಿಗಳ ಧರ್ಮಸಾರವನ್ನು ಲಿಂಗವಂತ ಧರ್ಮಕ್ಕೆ ಸಂಬಂಧಿಸಿ ಚಿತ್ರಪಟಗಳಲ್ಲಿ ಹೇಳಲಾಗಿದೆ. ಪೂರ್ಣ **'ಉದ್ಧರಣೆ'**ಯಲ್ಲಿ ಮೂವತ್ತೈದು ಚಿತ್ರಪಟಗಳಿದ್ದುದು ಕಂಡುಬರುವುದು. ಪ್ರತಿಯೊಬ್ಬ ವಿರಕ್ತನಿಗೆ ಪಟ್ಟಗಟ್ಟುವ ಸಮಯದಲ್ಲಿ ಲಿಂಗವಂತ ಧರ್ಮದ ಪ್ರಕಾರ ಒಪ್ಪಿಸುವ ಆರು ಮಹಾಗ್ರಂಥಗಳಲ್ಲಿ ಉದ್ಧರಣೆಯೂ ಒಂದಾಗಿದೆ. ಈ ಉದ್ಧರಣೆ ಮಹಾಗ್ರಂಥದಲ್ಲಿ 'ವೃಷಭೋದ್ಧರಣೆ'ಎಂಬ ಚಿತ್ರಪಟವೂ ಬರುವುದು. ಅಲ್ಲಿ ವೃಷಭನ ನಾಲ್ಕೂ ಪಾದಗಳಿಗೆ ಬೇರೆ ಬೇರೆ ನಾಮಾಂಕಿತಗಳೂ ಬರುವುವು. ಇದೇ ನಾಮಾಂಕಿತಗಳನ್ನು ಸಾಮಾನ್ಯ ಜನತೆಗೆ ಗುರುಕುಲವು ಬಿಚ್ಚಿ ಹೇಳುವಾಗ ವೃಷಭ(ಬಸವನ)ನ ಪಾದಗಳಿಗೆ ಬೇರೆ ಬೇರೆ ಹೆಸರಿಟ್ಟು ಹೇಳಿದ ಪರಂಪರೆಯೊಂದು ಲಿಂಗವಂತರಿಗೆ ರೂಢಿಯಲ್ಲಿದೆ. ವೃಷಭನ ಮುಂಗಾಲುಗಳಲ್ಲಿ ಎಡಗಾಲನ್ನು **ಭಕ್ತಪಾದ**ವೆಂದೂ **(ಭಕ್ತಬಸವ)** ಬಲಗಾಲನ್ನು **ಜ್ಞಾನಪಾದ**ವೆಂದೂ **(ಜ್ಞಾನಿಬಸವ ಅಥವಾ ಚೆನ್ನಬಸವ)** ಹಿಂಗಾಲುಗಳಲ್ಲಿ ಎಡಗಾಲು **ಪ್ರಸಾದಪಾದ**ವೆಂದೂ **(ಮಹಾಪ್ರಸಾದಿ ಕಕ್ಕಯ್ಯ)**, ಬಲಗಾಲು **ದಾಸೋಹಪಾದ**ವೆಂದೂ **(ದಾಸೋಹಿ ಹರಳಯ್ಯ)** ಲಿಂಗವಂತರಲ್ಲಿ ಈಗಲೂ ಗ್ರಾಹಿಕೆಯಿದೆ.

ಮುಂದೆ ಕಾಲಾಂತರದಲ್ಲಿ ಈ ಗ್ರಹಿಕೆಯು ತಿಳಿಯದೆ ಶಿಲ್ಪಿಯು ಈ ನಾಲ್ಕೂ ವಿಗ್ರಹಗಳನ್ನು ಕಲಬೆರಿಕೆ

---

4 **ಜನತಾ ಗೀತೆಗಳು :** ಡಾ. ಬಿ. ಎಸ್. ಗದ್ದಗಿಮಠ.

ಮಾಡಿ ಕಟೆದದ್ದು ಕಂಡು ಬರುವುದು. ಅದು ಕಾಲಾ ಮಹಿಮೆಯೇ ಹೊರತು ಪೂಜ್ಯ ಪರಂಪರೆಯ ತಪ್ಪಲ್ಲ. ಮರೆತದುದನ್ನು ಸಾಮಾನ್ಯರ ಗಮನಕ್ಕೆ ಸಂಶೋಧಕನು ತಂದುಕೊಡಬೇಕು. ಜನವು ಅದನ್ನು ವಿಚಾರಿಸಿ ಸತ್ಯವನ್ನು ಭಕ್ತಿಯಿಂದ ಉಳಿಸಿ ಬೆಳಸಬೇಕು. ಹೀಗಾದರೆ ಮಾತ್ರ ನಮ್ಮ ಸಂಸ್ಕೃತಿಯು ಕಾಲಾಂತರದ ವರೆಗೂ ಪ್ರಜ್ವಲಿಸಬಹುದು. ಇಂತಹ ಲೇಖನಗಳನ್ನು ಸಹೃದಯಿಗಳಾಗಿ ಓದಿ ಎಲ್ಲರೂ ತಮ್ಮ ಸಹಕಾರ ಸಲಹೆಗಳನ್ನೀಯಲಿ.

ಮೂಲ ಶಿಕ್ಷಣದ ಅರಿವು

(ಕಳೆದ ಅಕ್ಟೋಬರ ಸಂಚಿಕೆಯಿಂದ ಸಾಗಿ ಬಂದದ್ದು)

ಅನುವಾದಕರು : **ಶ್ರೀ ಶಿಂತ್ರಿ ಬಸಪ್ಪನವರು, ಬಿ.ಎ.,ಬಿ.ಟಿ.**

ಇವಲ್ಲದೆ, ಕಾಯಕಗಳಲ್ಲಿ ದೈಹಿಕ ಶ್ರಮವನ್ನು ಕೈಕೊಳ್ಳಲು ಸುಪ್ರಸಂಗಗಳನ್ನೊದಗಿಸುವಂತಹ ಅಭ್ಯಾಸ ಕ್ರಮಗಳು ಉಚ್ಚ ಶಿಕ್ಷಣದಲ್ಲಿರುವದೊಳಿತು. ಹೀಗೆ ಮಾಡುವದರಿಂದ ಆಯಾ ವಿಷಯಗಳನ್ನು ಒಳಹೊಕ್ಕು ಅಭ್ಯಾಸ ಮಾಡಲನುವಾಗುವದು. ಉದಾಹರಣಾರ್ಥವಾಗಿ, ಎಂಜಿನೀಯರನ ಕಾಯಕನೆಂದರೆ ಭೌತಿಕ ಶಾಸ್ತ್ರದ ಪ್ರಾಯೋಗಿಕವು. ಕೃಷಿ ಕರ್ಮವೆಂದರೆ ಜೀವ ರಸಾಯನ ಶಾಸ್ತ್ರದ ರೂಢಿಯು. ತೊಗಲು ಹದ ಮಾಡುವ ಮುಂತಾದ ಕಾಯಕಗಳೆಂದರೆ ರಾಸಾಯನಿಕ ತತ್ವಗಳ ಪ್ರಾಯೋಗಿಕಗಳು. ಕಾಲೇಜುಗಳಿಗೂ ದುಡಿಮೆಯ ಮನೆಗಳಿಗೂ ನಿಕಟ ಸಂಬಂಧವನ್ನಿಟ್ಟುಕೊಂಡರೆ, ಉದ್ದಿಮೆಯ ವಿಕಾಸದ ದೃಷ್ಟಿಯಿಂದಲೂ ತಾತ್ವಿಕಗಳ ಆಳವಾದ ಜ್ಞಾನದ ದೃಷ್ಟಿಯಿಂದಲೂ ಬಹಳಷ್ಟು ಲಾಭಕರವಿದೆ. ಕಾಯಕದ ಕೆಲಸವು ಪ್ರತಿಯೊಬ್ಬನಿಂದ ಬಹಳ ತಾಸುಗಳ ವರೆಗೆ ಕಡ್ಡಾಯವಾಗಿ ಮಾಡಲ್ಪಡಬೇಕೆಂಬುದು ಉದ್ದೇಶವಿರುವದಿಲ್ಲ. ಸಂಶೋಧನ ಹಾಗೂ ಆಳವಾದ ಅಭ್ಯಾಸಗಳತ್ತ ಗಮನವಿದ್ದ ಹಲವೇ ಹಲವು ಪ್ರತಿಷ್ಠಿತ ವ್ಯಕ್ತಿಗಳು ಸಮಾಜದಲ್ಲಿರುವದುಂಟು. ಅಂತಹವರಿಗೆ ಆಯಾ ವಿಷಯಗಳಲ್ಲಿ ಆಳವಾದ ಅಭ್ಯಾಸವನ್ನು ಮಾಡಿ ಪಾರಂಗತರಾಗಲು ಸುಪ್ರಸಂಗಗಳನ್ನೊದಗಿಸಿ ಕೊಡುವದು ಲೇಸು. ಆದರೆ, ಅಂತಹ ವ್ಯಕ್ತಿಗಳ ಸಂಖ್ಯೆಯು ಎಂದಿಗೂ ದೊಡ್ಡದಿರಲಾರದು. ಅಂತಹವರನ್ನಷ್ಟು ಬಿಟ್ಟರೆ, ಉಚ್ಚ ಶಿಕ್ಷಣವನ್ನು ಹೊಂದುವ ಉಳಿದೆಲ್ಲ ವಿದ್ಯಾರ್ಥಿಗಳಿಗೆ ದೈಹಿಕ ಶ್ರಮವನ್ನೂ ಬೌದ್ಧಿಕ ಶ್ರಮವನ್ನೂ ಜತೆ-ಜತೆಯಾಗಿ ಮಾಡಲು ಪ್ರಸಂಗಗಳನ್ನೊದಗಿಸಿ ಕೊಡಬೇಕು. ಹೀಗೆ ಮಾಡುವದರಿಂದ ಉಚ್ಚ ಶಿಕ್ಷಣವು ಹೆಚ್ಚು ಉದ್ದೇಶಪೂರಿತವಾದಂತಾಗುವದು.

ಮೂಲ ಶಿಕ್ಷಣವು ಪ್ರಾಯೋಗಿಕಾವಸ್ಥೆಯನ್ನು ದಾಟಿದೆಯಷ್ಟೇ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅದು ತಮ್ಮ ಶಿಕ್ಷಣದ ಧೋರಣವಾಗಿದೆಂದು ಒಪ್ಪಿಕೊಂಡಿವೆ. ಆದರೆ, ಅದನ್ನು ಇನ್ನೂ ವರೆಗೂ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಸಮನ್ವಯಿಸದೆ ಇದ್ದುದು ಸೋಜಿಗವು. ನಾನಾ ತರಹದ ಅಸಂಖ್ಯ ಸಾಲೆಗಳೆಂಬ ಮಹಾ ಸಾಗರದ ಮಧ್ಯದಲ್ಲಿ ಬೇಸಿಕ್ ಸಾಲೆಗಳೂ, ಬೇಸಿಕ್ ಟ್ರೇನಿಂಗ ಸಂಸ್ಥೆಗಳೂ ಅಲ್ಲಲ್ಲಿ ನಡುಗಡ್ಡೆಗಳಂತೆ ಕಂಗೊಳಿಸುತ್ತಿವೆ. ಈ ಸ್ಥಿತಿಯು ಸ್ವಾಭಾವಿಕವಾಗಿ ಬೇಸಿಕ್ ಶಿಕ್ಷಣದ ಬೆಳವಣಿಗೆಗೆ ಸಹಾಯಕವಾಗಿಲ್ಲ. ಬೇಸಿಕ್ ಶಿಕ್ಷಣದ ಪರಿಣಾಮ-ಗುಣಗಳ ಬಗೆಗೆ ನಮಗೆ ಮನವರಿಕೆಯಾಗಿದ್ದರೆ, ಅದಕ್ಕನುಗುಣವಾಗುವಂತೆ ನಮ್ಮ ಸಾಲೆಗಳನ್ನು ಪುನರ್‍ರಚಿಸಲು ಕ್ರಮಗಳನ್ನು ನಾವು ಕೂಡಲೆ ಕೈಕೊಳ್ಳಬೇಕು. ಈ ಎಲ್ಲ ಸಾಲೆಗಳಲ್ಲಿ ಕಾಯಕಗಳನ್ನು ಮತ್ತು ಉಳಿದ ಚಟುವಟಿಕೆಗಳನ್ನು ಕೂಡಲೆ ಅಮಲಿನಲ್ಲಿ ತರಲು ಆಡಳಿತದ ಅಡಚಣೆಗಳು ಇದ್ದಿರಬಹುದು. ಆದರೆ ಸಫಾಯಿ, ತೋಟಗಾರಿಕೆ ಮುಂತಾದ ಚಟುವಟಿಕೆಗಳನ್ನು ತಡಮಾಡದೆ ಬಳಿಕೆಯಲ್ಲಿ ತರಲು ಬರುವಂತಿದೆ. ಬೇಸಿಕ್ ಶಿಕ್ಷಣವು ಮಂದಗತಿಯಿಂದ ಸಾಗಿದುದು ಸೋಮಾರಿತನದ ಲಕ್ಷಣವು. ಈ ಸೋಮಾರಿತನವೇ ಶಿಕ್ಷಣ ಕ್ಷೇತ್ರದಲ್ಲಿಯ ಎಲ್ಲ ಪ್ರಗತಿಗೆ ವೈರಿಯು. ಶಕ್ಯವಿದ್ದ ಚಟುವಟಿಕೆಗಳನ್ನೆಲ್ಲ ನಮ್ಮ ಪ್ರಾಥಮಿಕ ಸಾಲೆಗಳಲ್ಲಿ ಕೂಡಲೆ ಪ್ರಾರಂಭಿಸಬೇಕು; ಈ ಮಾತು ಮಾಧ್ಯಮಿಕ ಸಾಲೆ

— ಒನೆಯ ಪುಟಕ್ಕೆ

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ ! **ಸಚಿತ್ರ ಗ್ರಂಥ !!** **ಸುಂದರ ಮುದ್ರಣ !!!**

“ಶಿಕ್ಷಣ-ಶಿಕ್ಷಕ-ದರ್ಶನ”

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮನ ತಣಿಸುವಂಥ, **ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ, ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್‍ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂಥ, ಅಮೋಘ ಗ್ರಂಥ.**

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯರ ಬಣ್ಣ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರಂಥ. ಕನ್ನಡದಲ್ಲಿ **ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಆಗಸ್ಟ ೫೬ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯಕ್ಷತೆಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ. ಪ್ರೋತ್ಸಾಹನೆ ಕೊಡಿರಿ.

ಸಾದಾ ಪ್ರತಿ ೩ ರೂ.] **ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್.** [ಸುಂದರ ಪ್ರತಿ ೪ ರೂ.

ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಿಕೋಟಾ, ಜಿಲ್ಲಾ :— ವಿಜಾಪುರ.

ಸುಬೋಧ ಹಿಂದೀ ಕನ್ನಡ ವ್ಯಾಕರಣ

● ★ ●

ಇದನ್ನು ಬರೆದವರು ಹಿಂದೀ ಕ್ಷೇತ್ರದಲ್ಲಿ ಹೆಸರು ಪಡೆದ **ಶ್ರೀ ಗುರನಾಥ ಜೋಶಿ** ಅವರು. ತಮ್ಮ ಆಳವಾದ ಅನುಭವದಿಂದ ಅಲ್ಲಲ್ಲಿ ಕನ್ನಡ ವ್ಯಾಕರಣಕ್ಕೆ ಹೋಲಿಸಿ ಸುಲಭ ಭಾಷೆಯಲ್ಲಿ ಸರ್ವರಿಗೂ ತಿಳಿಯುವಂತೆ ಬರೆದಿದ್ದಾರೆ ಇವರಲ್ಲಿ ಕೇವಲ ವ್ಯಾಕರಣದ ನಿಯಮಗಳು ಇರದೆ ಹಿಂದೀಯಿಂದ ಕನ್ನಡಕ್ಕೂ ಕನ್ನಡದಿಂದ ಹಿಂದಿಗೂ ಭಾಷಾಂತರ ಮಾಡುವದಕ್ಕೆ ವಾಕ್ಯಗಳೂ ಕೊಡಲ್ಪಟಿವೆ. ಇದರಿಂದ ಕಲಿಯಬಯಸುವವರೆಲ್ಲರೂ ಸುಲಭವಾಗಿ ಹಿಂದಿಯನ್ನೂ ಕಲಿಯಬಹುದಾಗಿದೆ. ಈ ಪುಸ್ತಕವನ್ನು ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ, ಪ್ರಿನ್ಸಿಪಾಲ ವ್ಹಿ. ಕೆ. ಗೋಕಾಕ ಅವರು ಸ್ವಾಗತಿಸಿದ್ದಾರೆ. ಇಂದೇ ಇದನ್ನು ತರಿಸಿಕೊಂಡು ಹಿಂದೀಯನ್ನು ಕಲಿಯಿರಿ ಒಂದುನೂರಾ ಹನ್ನೆರಡು ಪುಟಗಳು! ಬೆಲೆ ಕೇವಲ ೧೪ ಆಣೆ. ವ್ಯಾಪಾರಸ್ಥರಿಗೆ ಯೋಗ್ಯ ಕಮಿಷನ್ನು !

ಕೆಳಗಿನ ಪತ್ತೆಗೆ ಬರೆಯಿರಿ.

ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ.

Regd. No. B. 5375

ಶ್ರೀ ಅರವಿಂದ ಪ್ರಭಾವಿತೆಯೂ ಶ್ರೀ ತಾಯಿಯವರ ಪ್ರಾಸಾದಿಕತೆಯೂ ಒಂದೆಡೆಗೆ ತೋರುವ ಪವಿತ್ರ ಸಾಹಿತ್ಯದಿಂದ

ವಾಚನಾಲಯದ ಬೆಲೆ ಹೆಚ್ಚಿಸಬೇಡವೇ ?

ಹಾಗಿದ್ದರೆ, ಕೆಳಗೆ ಕಾಣಿಸಿದ ಪುಸ್ತಕಗಳನ್ನು ತರಿಸಿಕೊಳ್ಳಿರಿ.

೧.	ನನ್ನನಲ್ಲಿ (ಅಂತರ್ಮುಖಗೊಳಿಸುವ ದಿ. ಮಧುರಚೆನ್ನರ ಸಮಗ್ರ ಕವನ ಸಂಗ್ರಹ	....	೧-೧೨-
೨.	ಆತ್ಮಸಂಶೋಧನ (ದಿ. ಮಧುರಚೆನ್ನರ ಜೀವನದ ಕಲಶಪ್ರಾಯದ ಪ್ರಾಂಜಲ ಸಾಹಿತ್ಯ)	....	೧- ೮-
೩.	ಪವಿತ್ರ ಜೀವನ (ಹೊಸಕಾಲದ ಋಷಿ ಟಾಲಸ್ಟಾಯರ ಕಥಾಸಂಕಲನ)	....	೧- ೨-
೪.	ಸುಂದರ ಕಥೆಗಳು (ಮಕ್ಕಳಿಗೂ ಮಕ್ಕಳಂಥವರಿಗೂ ಶ್ರೀ ತಾಯಿಯವರು ಹೇಳಿದುವು)	....	೧- ೪-
೫.	ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ)	....	೧- ೮-
೬.	ಶ್ರೀ ಅರವಿಂದರ ಪತ್ರಗಳು (ಪೂರ್ಣಜೀವನದ ಸಿರಿಮೊಳಕೆ)		೦- ೮-
೭.	ಸ್ವರ್ಗದೋಲೆಗಳು (ಕನ್ನಡಿಗರ ಕೈಗೆ ಬಂದ ಸಾಂಸ್ಕೃತಿಕ ಕನ್ನಡಿ)	....	೧- ೮-
೮.	ಮುಗಿಲ ಜೇನು (ಮಿಂಚಿನ ಶಲಾಖೆಯಂಥ ಕವನ ಸಂಕಲನ)	....	೧- ೮-
೯.	ಸಪ್ತಪದಿ (ವಿದ್ಯಾರ್ಥಿಗಳ ಮೆಚ್ಚಿಕೆಯ ಏಕಾಂಕಗಳು)	....	೧- ೬-
೧೦.	ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ)	....	೧- ೦-
೧೧.	ಬೆಟ್ಟದ ಹೊಳೆ (ಜೀವನ ಪ್ರಚೋದಕವಾದ ಕಾದಂಬರಿ)	....	೧- ೪-
೧೨.	ಗರತಿಯ ಬಾಳು (ಹೆಣ್ಣಿನ ಮಾಯೆಯಲ್ಲಿ ಕಪಿಲ ಸಿದ್ಧಮಲ್ಲಿಕಾರ್ಜುನ)	....	೧- ೪-
೧೩.	ಬಾಳಬಟ್ಟೆ (ಆಧುನಿಕ ಬಾಳಿನ ಬಂಡಾಟಕ್ಕೆ ಚಿಕಿತ್ಸೆ)	....	೧- ೮-
೧೪.	ಪೂಜಾ (ಅತೀಂದ್ರಿಯ ಜಾಗೃತಿಯ ಮಿಸುಕು)	....	೦-೧೨-
೧೫.	ಜೀವನ ದೃಷ್ಟಿ (ಭವ್ಯ ಬದುಕಿನ ಬೊಕ್ಕಸ)	....	೧- ೨-
೧೬.	ಕನ್ನಡ ಕುಲದೀಪ ಬಸವಣ್ಣ (ಹಿಡಿದರೆ ಹಿಡಿಕೆಯಲ್ಲಿ ಬಿಟ್ಟರೆ ಮನೆತುಂಬ)	....	೧- ೦-

ಕನ್ನಡದಲ್ಲಿ ಶ್ರೀ ಅರವಿಂದರ ಸಾಹಿತ್ಯ ಬೇಕಾದರೆ ಬರೆಯಿರಿ. ಮೇಲೆ ಕಾಣಿಸಿದ ಪುಸ್ತಕಗಳನ್ನೆಲ್ಲ ತರಿಸಿಕೊಂಡಲ್ಲಿ ಅಂಚೆವೆಚ್ಚ ನಾವೇ ವಹಿಸುವೆವು.

ಶ್ರೀ ಅರವಿಂದ ಗ್ರಂಥಾಲಯ ಪೋ:— ಚಡಚಣ ಜಿ. ವಿಜಾಪು

ಶ್ರೀ ಶ್ರೀಕೃಷ್ಣ ಪಾಟೀಲರ **ಗುರುಕುಲ** ಬೆಲೆ ೧೮

[ಸಾಮಾಜಿಕ ಕಾದಂಬರಿ ಪುಟ ೧೩೬]

- ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೨ನೆಯ ಸಾಲಿಯ ೪ನೆಯ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.
- ಎಪ್ರೆಲದಿಂದ ಎಪ್ರೆಲಕ್ಕೆ ಒಂದು ವರುಷ ಬಿಡಿ ಕುಸುಮ ಚಂದಾದಾರರಿಗೆ ೩/೪ ಬೆಲೆಯಲ್ಲಿ [ಅಂಚೆಖರ್ಚ
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅತ್ಯಲ್ಪ ಹಣ ತಪ್ಪು ಶಿಕ್ಷಕ ಮಿತ್ರ ಎಳ್ಳಿಗೆ ಮೀಸಲು. ಚಂದಾದಾರರ ಹೆಸರು ಪುಸ್ತಕದಲ್ಲಿ ಪ್ರಕಟಿಸುವದರಿಂದ ಪೂರ್ತಿ ಹೆಸರು – ವಿಳಾಸ ಬರೆಯಬೇಕು.

★ **ನಾವು ನಮ್ಮವರು—** ಪ್ರಾಥಮಿಕ [೧ರಿಂದ ೭ ವರ್ಗಗಳ ಶಾಲೆಯ] ಶಿಕ್ಷಕರ ಕಥೆ ಕವನಗಳನ್ನು ಆಯಾ ಲೇಖ ಫೋಟೊ ಪರಿಚಯದೊಂದಿಗೆ ಹೊರಡಿಸುವ ಪುಸ್ತಕ. ಕೃತಿಕಳಿಸುವ ಶಿಕ್ಷಕರು ವಿವರವಾದ ಪ್ರಕಟಣೆಗೆ ಬರೆಯಬೇಕು. ಪ್ರೋತ್ಸಾಹಿಸಲಾಗುವದು.

ಈಶ್ವರಚಂದ್ರ ಚಿಂತಾಮಣಿಯವರ **ಪಾಪಪುಣ್ಯ** ಮೂರಂಕಿನ ನಾಟಕ **ಬೆಲೆ** ೧=೫೦

(ಚಂದಾದಾರರಿಗೆ ೧=೨೦ ನ.ಪೈ. ಅಂಚೆಸೇರಿ. ಕೆಲವೇ ಪ್ರತಿ ಉಳಿದಿವೆ)

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

Printed by Shri S. F. Kattimani, at Manohar Power Printing Press, Hubli. Edited and Published by Sjts. S. P. Patil, B. M. Shintri, S. R. Tatti & Smti. P. A. Bhaskar, at the Kannada Jeevan Shikshan Office, Govt. Training College for Men, Dharwar.



Principal,
Training College fo

Recd on 29-7-1955

STUDIES IN EDUCATION AND PSYCHOLOGY

UNDERSTANDING BASIC EDUCATION

Principal,
Govt. Training College for Men,
Dharwar.

By

T. S. AVINASHILINGAM

Founder - Director

Sri Ramakrishna Mission Vidyalaya
Coimbatore District, Madras

1-8-55

सत्यमेव जयते

Ministry of Education Government of India

1954

Publication No. 10

Price As. 14 or 1s. 3d.

National Printing Works, Delhi (India)

DEDICATED TO

MAHATMA GANDHI

FATHER OF BASIC EDUCATION

PREFACE

Basic education was first discussed by Gandhiji in 1937 in a Conference of Educationists at Wardha and ever since 1946, it has been accepted as the policy of State and Central Governments in India. But it is strange that many, even in high quarters, do not have a proper understanding of its implications. This made me wonder whether something could not be done to remove these misunderstandings.

I have had the rare good fortune of moving closely with Mahatma Gandhi and participating in the Wardha Education Conference of 1937. I was one of the members of the first Hindustani Talimi Sangh constituted by Gandhiji immediately after the Conference. I also happened to be the first Minister of Education of the Madras State in Free India. As such I have had the honour and privilege of introducing Basic education in that State and reorganising Secondary education. Many of the chapters in this book are talks delivered to students in colleges or conferences of teachers and administrative staff. They have now been edited to suit the present purpose.

I am grateful to Dr. M. Cornelius for helping to edit the manuscript and to Sri K. Arunachalam for his suggestions with regard to documenting the book. I must express my gratitude to Dr. Rajammal Devadas for her help and very valuable suggestions. I am also thankful to the Ministry of Education, Government of India, for their kindly offering to publish the book.

This is by no means an exhaustive treatise on Basic education. I shall consider myself amply rewarded, if it will help to clear the misunderstandings about it.

T.S. Avinashilingam

Sri Ramakrishna Mission Vidyalaya,
Coimbatore District, Madras.
October 12, 1954.

CONTENTS

		Page
Introduction		
Chapter		
I.	Historical Background	1
II.	Some Misunderstandings	8
III.	Psychological Background	14
IV.	The Philosophy of Basic Education	19
V.	The Technique of Basic Education	26
VI.	The Problem of Self-support	32
VII.	Utilising Festivals	39
VIII.	Food and Basic Education	46
IX.	Teacher Training in Basic Education	52
X.	The Future	58

INTRODUCTION

"I came not to destroy but to fulfil", said the Great Messiah. That is the spirit with which we should be inspired in these times when we are planning for the future of this great country. What we want is not mere destructive criticism but constructive suggestions; we should not stop with suggestion, but cultivate the ability, devotion and perseverance to put these constructive suggestions into practice. This is true of all aspects of our life today and it is especially true with respect to education which has to be planned with vision.

Mahatma Gandhi gave considerable thought to the problems of education. For nearly 50 years, he had worked unceasingly for the uplift of our people in various ways. He saw that mere political propaganda would not lay the foundations for our future. He wanted a social revolution, and food for the millions of our fellow-countrymen who had not even one meal a day. With that end in view, he started the Khadi, the Harijan and the Village Industries Movements. But he found that these movements tackled the problems only superficially. If they were to be tackled efficiently on a national scale, he came to the conclusion, that the education of our schools and colleges must be reorganised on a sounder footing. He wanted our children and our people to be trained for the highest ideals in life. And to that end, he desired to found a society based on self-discipline, love and service in which there would be no exploitation of one by another but all would do their allotted work. In such a set-up, work would have to be respected and the dignity of human labour raised. Love for oneself should be trained to expand into love for one's village, one's country and sympathy for all human beings. At the same time, he wanted a method of education in which children could be cheerful and learn by doing. He loved our children as he loved our country passionately and out of this love and devotion to the child and country arose Basic education.

The principles of Basic education have been accepted all over the world. Education through crafts and other activities is no longer a disputed educational principle. In advanced countries like America and England, this principle has been accepted. Classroom teaching has given way to various activities in schools

in the west and farm work and crafts are also followed as part of school curricula. Mahatmaji wanted to take up those crafts that would be useful to ordinary men and women. Care was taken to see that those crafts were rich in providing educational opportunities. Such crafts should find natural points of correlation with important human activities. They should also have the possibilities of combining within themselves many activities which could be correlated with knowledge in life. Secondly, the craft produce must be something which was necessary for human life so that it might be profitably utilised. Food and clothing are the most important necessaries of life. Fortunately, the crafts of Agriculture, spinning and weaving also supplied educational possibilities in a large measure. For these reasons these crafts have been chosen as the basic crafts in Basic education.

I would appeal to all teachers, parents and others interested in education to study this great scheme of education given by the Father of our Nation. As in everything else, mere intellectual study will not lead to efficient understanding. We must learn these crafts and other activities and we must learn them efficiently, for efficiency in these activities is the very foundation of Basic education. Creating habits of efficiency in our children is the best way of raising the capacity of the nation for work and achievement. God willing, this scheme of education will usher in a new era of prosperity for our great people.*

---

* Extract from the speech delivered at the opening of the Basic Education Block on 11th December, 1948, at the Madras Lady Willingdon Training College.

CHAPTER I

HISTORICAL BACKGROUND

Those who want to understand Basic education should know something about the experiences of the Great Soul, which led to the inculcation of these new theories of education. Mahatma Gandhi had led the nation for nearly half a century. In the course of this period of nearly five decades, he had led many movements for raising the spiritual, moral, material and social life of the people. He began the Champaran Satyagraha in 1917. He began the Non-cooperation Movement in 1920. The Khadi Movement was inaugurated at the same time, and he went on the famous tour throughout India in 1927 to preach the message of Khadi. After the Salt Satyagraha in 1930 and the Civil Disobedience Movement in 1932, he began a great campaign against untouchability. He undertook a whirlwind tour in 1934 for the eradication of this great social evil. After some years the All-India Village Industries Movement was inaugurated for the economic regeneration of the people. With all the richness of this experience, he found that the final solution of the ills of our people could be achieved only through a proper type of education. Basic education was his last and most precious gift to the nation. Anyone who wants to understand the full implications of this scheme of education should try to understand at least in broad measure, the experiences and circumstances which made the Father of our Nation advocate this method of education.

It was during the Orissa famine that he had a strange experience. As one who responded to the call of suffering humanity in any part of the country, he went to Orissa to give whatever relief was possible. People were hungry and naked. They had no work to do, and they were starving. In order to organise relief, Gandhiji collected funds, got food and clothes and distributed them free. The poor and indigent rushed to have them. But the more he gave them, the more they asked, gradually losing their ability and willingness to work. In the course of time, they lost their confidence in themselves and also their self-respect. Instead of helping them, he saw that he was really sabotaging their strength and self-confidence. It was then he found that such

charity instead of building them up, destroyed their personality; instead of strengthening them weakened their lives, and finally did them more harm than good. He found that the proper thing to give them was not food, clothes or money, but work, through which they could get all these. This work in its turn gave them also strength, self-confidence and self-respect. He then began thinking about the work that could be given to these people. Such work should have the qualities of simplicity and availability. It should require only a little technical training, that can be acquired within a few days or weeks and it should fulfil a great and abiding need of the people. Besides, if it were to be widely adopted by large masses of people, it should not involve a large investment of money. He found after much thought that hand-spinning and weaving fulfilled all these qualifications as nothing else did. The *charkha* was cheap, spinning was easy and the production of cloth fulfilled next only to food, the most important need of all people.

To put it in his own words, "The disease of the masses is not want of money so much as want of work. Labour is money. He who provides dignified labour for the millions in their cottages, provides food and clothing".[1] "It is not even poverty that matters so much as idleness, which was at first enforced due to lack of work and now has become a habit, that matters. Idleness is the root of all evil and if that root can be destroyed, most of the evils can be remedied".[2] "Through chronic famine conditions, the people of Orissa have been reduced to beggary. It is a very difficult thing to make them work. Revival of spinning is their only hope".[3] It was thus that the message of khadi began.

This experience which was the beginning of khadi, was also the beginning of Basic education. Here we are, a nation of nearly 400 millions of people, nearly one-fifth of the population of the world, but helpless in almost every aspect of our life—in food, clothing, and all other aspects of life. Worse than the material poverty was the poverty of the spirit, as was seen in our want of confidence in ourselves and in our own culture and in the glorification of everything that came from the west. Was not our abject poverty of material wealth, an indication of our want of faith in ourselves and in our work? It was in large measure due to our laziness and want of application on the one hand, and, on

1. Page 129
2. Page 141
3. Pages 93 & 94

(1–3) Economics of Khadi by Mahatma Gandhi.

the other, to labelling manual work as inferior to be relegated to a lower caste of humanity. Owing to the incrustation of centuries, our social structure degenerated and reflected an ideology which was the negation of respect for work by hand. The man who worked with his hands and produced wealth by dint of his work, night and day, was relegated to the lowest social cadre. The merchant who acted as the middle-man was deemed higher. The people who fought with the sword and did no productive work themselves were placed higher, and highest of all came the priest, who did no work at all. The result was that the lower classes always copied the ways of the upper ones, so that in course of time work was considered derogatory and everyone aspired to lead a life free of manual labour. Our political and social degradation, our poverty and subjection can be directly traced to this mental and social degeneration. If India is to rise again, we must create a new type of society in which everyone will work. Work, by its nature, will inspire confidence and strength. Thus Gandhiji found work to be the basic foundation of the social structure of a good life. Any education which should pave the way for such a society must accept this fundamental view of life and the essential place of work in society. This, in short, is the most essential principle of Basic education.

Gandhiji must have thought about these great national problems for many decades before he formally mentioned them at a conference of educationists, summoned in Wardha in 1937. The writer was one of them and remembers well, how he placed the problem of education before those assembled at that conference. It was agreed on all hands that a new type of national education was necessary for our people. Such an education should be made universally available to all the boys and girls of schools-going age in the country. Where can we get the immense amount of money required for the purpose? It was to solve this problem that he came forward with a revolutionary solution. If work is to be the main instrument and basis of education, cannot this work be utilised in the learning and doing of a continuous craft, which, in its turn, is capable of creating wealth capable of being measured in terms of money? Ours is a poor country. We may have to wait for many, many decades to provide education for all, if we are to do it after finding the money for it. And so, he declared that the only practical and possible way of making educa-

tion available to all is to make students earn through their work and help to maintain the school. This has been called the principle of self-sufficiency in Basic education. This has been misunderstood and misrepresented in many places. We shall deal with this aspect later.

Thus, it was at this conference, that his views on education, which were based on nearly half a century of devoted service to the nation, took shape in a concrete form. He called upon the educationists present to consider his proposals dispassionately. The conference also consisted of Education Ministers of provinces. To them, he said, that this was the only constructive way in which the problem of education could be solved. A large portion of the provincial finances came from the excise on liquor which the Congress had resolved to prohibit. This would involve the dwindling of the already meagre resources of the provincial governments. In these circumstances, he suggested that they should consider how best they would meet the needs of spreading a national system of education throughout the country. He added that he was a layman, and that they should accept his suggestions only if they agreed with him and to the extent that they could agree with his views.

After the preliminary general discussions, proceedings continued on the following propositions originally formulated by Gandhiji.

1. The present system of education does not meet the requirements of the country in any shape or form. English, having been made the medium of instruction in all the higher branches of learning, has created a permanent gulf between the highly educated few and the uneducated many. It has prevented knowledge from percolating to the masses. The absence of vocational training has made the educated class unfit for productive work and harmed them physically. Money spent on Primary education is a waste of expenditure inasmuch as what little is taught is soon forgotton and has little or no value in terms of the villages or cities. Such advantage as is gained by the existing system of education is not gained by the chief tax-payer, his children obtaining the least.

2. The course of Primary education should be extended at least to seven years and should include general knowledge gained up to the matriculation standard, less English and plus a vocation.

1— 3 years		900
3— 5 "		1,200
5— 7 "		1,400
7— 9 "		1,700
9—12 "		2,000
Adolescents		
12—15 years		2,400
15—21		2,400

Then comes, 'How to get the caloric and other requirements of the body?' This leads us to the very important subject of 'Balanced Diet'. A diet composed largely of rice with little milk, vegetables or fruits is an ill-balanced diet. To make it balanced, additions of milk, vegetables and fruits should be made. But this will make our food more expensive and place it beyond the reach of ordinary families. If milk cannot be afforded, butter milk or skimmed milk reconstituted from skimmed milk powder, which are much cheaper than milk, may be used, and the diet improved. If the cereal consumed is milled rice, an improvement in the nutritive value of the diet (and in the health of those consuming it) can

* A Calorie in Nutrition is the heat unit that is required to raise 1 kg. of water by 1°c.

The term "net calories" refers to the amount of energy available from the calories actually assimilated.

be brought about by wholly or partially substituting hand-pounded rice, whole wheat, or one of the millets, particularly *ragi*. If milled rice remains the basis of the diet, it should be realised that the milled rice-eater needs more "protective" foods such as milk, green vegetables, fruits, etc., than the consumer of whole wheat or *ragi*. When the diet is almost wholly composed of rice—when people are so poor that they cannot afford to buy other foods except in minute quantities— then the state in which the rice is eaten becomes of paramount importance. Parboiled rice, even when milled, is superior in nutritive value (particularly as regards the antiberiberi vitamin) to raw rice milled to the same degree*.

Food is not generally eaten raw but cooked. This naturally leads to the history of cooking from the ancient times. The effects of cooking on the nutritive value of food is an interesting subject. Cooking is of two kinds: the wet one like boiling and steaming, and the dry processes like frying, roasting and baking. Washing prior to cooking causes a loss of certain amount of minerals, when the wash water is discarded. In our houses, it is a common practice to wash rice three or four times with large amounts of water before cooking. By this process a considerable amount of minerals passes into the water and is wasted. Vitamins are also lost during cooking. The addition of soda (sodium bicarbonate) to cooking water to facilitate cooking leads to even greater losses. But tamarind and lime juice with their high acidity values have a preservative effect on vitamins, particularly if food is not cooked too slowly.

In spite of these losses by cooking, why do we still cook and eat? It is that food may be digestible, may look well, taste well and that

---

* The ordinary diet of the rice-eater in India and well-balanced diet as given on page 17 of the Health Bulletin No. 28, Govt. of India Press.

(Ozs. per adult man daily)

Food	*Ordinary Diet*	*Well-balanced Diet*
Rice	15-25	15
Pulses	0.5-1.5	3
Milk	None or negligible	8
Leafy vegetables	0.5-1.0	4
Non-leafy vegetables	2.0-5.0	6
Vegetables fats & oils	less than 1.0	2
Fruits	Negligible	2
Fish, meat and eggs	0.5-1.5	3 (when milk is absent from diet or taken in negligible quantities)

harmful bacteria may be killed. This leads us to 'Who cooks our food ?' The answer, 'Our mother, aunt or sister', opens the discussion of the whole field of social and family relationships and our duties towards one another and the division of labour in the family.

Now we are led to the question, 'Who produces our food ?' The answer is self-evident. The farmers produce the basic products which are the very basis of life. The earth does not yield without labour. It must also be intelligent labour. The farmer is supported by the cattle, which are the true companions of man in his life on this earth. A small kitchen garden attached to the school should provide interesting experiences of work on the land such as the preparation of the field, the various seasons and their influence on agriculture, the various soils and the manures which will improve them, the selection of seed, the amount of watering to be done, the time of weeding, protection from intruders, such as insects, cattle and human tresspassers, the daily watching and the joy of harvesting. This may also lead to the question of where food grains are sold—namely, the *shandy* and the markets which will lead to an understanding of the elements of economics.

'What happens to the food we eat ?' is another aspect that can also be dealt with. The physiology of digestion and the anatomy of the digestive tract can be explained. What will happen if we eat too much or too little, can be explained and will be heard with a great deal of interest. It must be explained to the children that we eat to live and do not live to eat. Healthy living should be the sign of normal existence, and one should feel ashamed to fall sick as sickness is often the direct result of one's own transgression. Food is better digested when joyfully consumed. Temper-tantrums and depressive minds disturb digestion. The connection between emotional conditions and health should be explained, so that children should learn when still young to have a balanced mind with a balanced body.

Art in presenting food can be an enticing subject for children and even for adults. The colour combinations in the preparation of various items of food, the various beautiful forms into which they can be made, are of never-ending interest. *Murukku*, *Jelabi*, various forms of cakes, etc., are some examples. "Food and Festivals" is another interesting subject of study. Certain types

of food are associated with some festivals, like *Kolukkattai* for Vinayaka Chathurthi, *Pongal* during the Pongal festival, etc. And these naturally lead us to our many social habits and customs. And, above all, they suggest to us our custom of offering food to God and how the idea of offering to God purifies our minds and consecrates the food.

There are many more things that can be taught through food, such as various kinds of food for various kinds of people as young, adolescents and adults, food for the sedentary man and heavy worker, food for ordinary women and child-bearing mothers, the kind of food that should be given to the sick and the convalescent. Cooking with various fuels such as firewood, charcoal, coal, kerosene and electricity can be considered in relation to time, money and nutritive value. In the same way, various kinds of ovens and cooking utensils can also be studied. Thus, there seems to be a vast body of knowledge that can be taught through correlation with food. But this must depend in a large measure on the age of the children, their capacity to understand, and the equipment of the teacher.

CHAPTER IX

TEACHER TRAINING IN BASIC EDUCATION

The best scheme of education can become a bad scheme if the teachers handling it are bad; even so a bad scheme can, in practice, be made a good one if the teachers are good. The quality of an educational system depends in a large measure on our securing a fair number of well-educated, well-equipped and contented teachers. We must be able to attract to the teaching profession talented and well-balanced young men and women who will take up their work with zeal, devotion and enthusiasm. Discontented teachers, who have no interest in their work and who do it haphazardly are a danger to the nation. For they will also inject their sourness, want of enthusiasm and inefficient ways into the millions of our children, thus, affecting the national cheer and efficiency. Therefore, every thing possible should be done, to attract good men and women to the teaching profession and retain them in contented service.

Basic education is education through craft and other activities and experiences. And so it goes without saying that provision should be made to teach the basic crafts efficiently to the prospective teachers. In course of time, it is expected that the crafts introduced into Basic schools will be continued in the higher classes through related crafts suited to the age of the children. When such craft training has already been undergone by the students, the necessity for elaborate craft teaching may not exist in the Training schools and colleges. But till such conditions are obtained, a good portion of the time of the trainees in Training schools and colleges should be devoted to the learning of a craft, viz., spinning, weaving, dyeing and printing or carpentry, agriculture or any other suitable craft which is rich in educational possibilities. It is not merely learning about the crafts, but actually doing them with their own hands; and doing them efficiently, with the least wastage, with a thorough understanding of the various processes involved in the crafts.

What is important is not just learning the craft, but following the educational possibilities in the craft. Herein lies the technique

of Basic education, which must be understood, planned and achieved by the prospective teachers. Correlation of the processes in the craft and the other experiences of the child, in teaching the various subjects is something which each pupil-teacher has to work out himself in practice. The teacher in the Training school can teach him the general principles of correlation and guide him in their applications, but it is only with constant thought, practice and effort, that the pupil-teacher can understand and learn to perfect the technique. In this consists the importance of practice teaching. Thus, the essence of training in Basic education is that the prospective teacher should master all the details of the contents of the subjects he is expected to teach, should be an expert in the craft and other activities through which he is expected to teach and lastly that he should be well-versed in the technique of correlated teaching.

Besides these, there are certain objectives in teacher training in general, which apply also to teachers in Basic education. Since the personality of the teacher is bound to have a great effect upon the students, it is important that our scheme of training should help the prospective teachers to develop into balanced personalities. They should gain a broad understanding of our culture, in order to give a cultural background to their pupils. In the modern age, when our society is based on a democratic set-up and when our existence depends upon a right understanding of good democratic principles by every man and woman in the country, it is necessary that the schools should become the exponents of this democratic background to our children even while young. To achieve this end, it is essential that our teachers should not only study the social, political and economic bases of democracy, but should also have worked and lived it during the course of their training. Prospective teachers should also be provided with an adequate understanding of the processes of human development and growth at all age levels, so that they may be competent to guide our young in and outside school.

This training will naturally consist of both academic and practical sides. The academic portion will consist of a grasp of the subject-matter, which the teacher is expected to teach. It will also consist of courses in Education intended to give him an acquaintance with educational problems, such as Educational Philosophy, Principles and History of Education, Educational

Psychology, Methods of Teaching, School Organisation and Hygiene. This is, usually, done in all training schools and colleges in varying degrees according to the educational background previously attained by pupil-teachers. What should be provided in addition is good community life, giving daily experiences of democratic living and self-management. The candidates in training institutions should attain experience in sharing all work, and doing it with devotion and without a sense of high or low. They must learn to organise themselves in teamwork in harmony, learn to make rules, administer and obey them and above all, cultivate a social sense, which will make them realise that what is good for the community is good for themselves as well. This will naturally involve the development of social habits such as keeping themselves and their surroundings clean and healthy. These objectives in educational training cannot be achieved through mere theoretical instruction, but only by an organised hostel life. Therefore, for efficient training in Basic education, a good hostel-community life is a *sine qua non*.

In addition, schools should keep in touch with the people around and become community centres. The pupil-teachers should be taken out for service in the villages. They must learn to observe the weekly *shandy* village festivals, the neighbouring temples where large numbers of people gather on occasion, activities changing with the seasons, and explore the possibilities of serving the village people in all possible ways. These are not to be taken merely as extra-curricular activities, but as an integral part of the educational curricula.

Cultivation of a common prayer is an essential aspect of a higher cultural life and so of Basic education. Fanaticism in religion is a disease, which should be avoided. It is a sign of intellectual intolerance and immaturity. While everyone is free to follow his own religion as something good for him, he must regard other religions as equally good for those who follow them. In this connection, we should understand that social habits and practices should not be confused with religion. Untouchability is a vicious social custom and should be avoided by all means. So also are early marriage and the system of dowry. Such customs exist amongst the followers of all religions. These should not be confused with the fundamental principles of those religions.

Tolerance of religions other than our own is an essential requisite of culture and a fundamental necessity to the working of a democratic society. To create a sense of unity, love and respect for one another, it is necessary that we should gather together in common prayer. This is even more important for teachers who are expected to teach the children of all communities and religions that come to the school. And so, the community life in our Basic Training Schools and Colleges should include morning and evening gatherings in common prayer and devotion. This should also be accompanied by a sympathetic and respectful understanding of the teachings of all religions. Such festivals as Christmas, Mohammad's and Buddha's Birthdays, the Birthdays of Sri Rama, Sri Krishna, Sri Ramakrishna and others will give ample opportunity for such studies.

Strengthening our cultural background will naturally imply a more intensive study of our languages. It is a strange phenomenon, perhaps only in India, that while every graduate can teach a foreign language, namely English, for teaching Tamil or Telugu, his own mother tongue, he is not considered to be qualified. A Tamil or Telugu pandit is required for the purpose. In the same way even in Middle schools, while every Secondary grade trained teacher can teach English in Middle schools, pandits are required for the purpose of teaching Tamil or Telugu. What does this imply ? The presumption is, that while the graduate or the Secondary grade trained teacher has the necessary equipment in English, a foreign language, he does not possess the requisite standard of knowledge in his mother tongue. This is an indication of the low standard of our own languages in our schools and colleges. The institution of the Tamil pandit with an inferior status is a relic of a slavish past and the sooner it goes the better. Every teacher should have the necessary minimum attainment in his own language to teach that language, except in the highest classes where intensive study is required. This will help our students and teachers to attain a higher cultural background.

It should not be imagined that all teacher training is complete when one has passed out of the Training school or college. Just as one does not finish learning with graduation, (for learning continues as long as one lives) even so the teacher's training improves with experience and study throughout life. Education is an ever-growing practical science ; new factors, new methods

and new approaches to the upbringing of the child are being daily discovered. And unless one keeps abreast of such knowledge and information, one is apt to become inefficient and ineffective. For this purpose, it is necessary that opportunities should be provided for in-service education for our men and women in the teaching profession. Some of the common means of in-service education are visits to model institutions, meetings of teachers where common problems are raised and discussed, summer classes in higher institutions, seminars, short courses, research work, writing and speaking on professional topics. One of the latest means of in-service education is what is called 'Teachers' Workshops'.

Summer courses in higher institutions are one of the most popular and important methods of professional growth for teachers in service. It is unfortunate that many of our universities and our Teachers' colleges have not yet provided for them. It is necessary that regular provision should be made for such courses so that earnest teachers desiring professional advancement may take advantage of them during the long summer vacation. While the Summer Courses generally consist of lectures, the Teachers' Workshop is a group of experienced persons who take up definite problems. The characteristics of the Teachers' Workshop are its informality and flexibility and its dealing with specific tasks which the members wish to learn to do more skilfully. It usually consists of a small group of 20-25 persons. Freedom and confidence are the usual results of the workshop. In it, each member finds he is valued, his problem is considered worth attention and his experience is taken as the starting point of discussion. The benefits of the Workshop are not only a clearer understanding of the problems as a result of the discussions, but the common life and activities which provide opportunities for the discovery of unsuspected talents amongst the members. I had occasion to visit such a literary workshop organised by the Government of India at Alipore near Delhi for the purpose of training teachers for writing adult education literature and I was impressed by the technique employed and the results obtained.

To induce teachers to go in for in-service training, it is necessary to provide encouragement for them. In many departments of Government, opportunities are provided for those on the lower rungs to appear for progressive tests to qualify themselves for higher posts. It is surprising that there is no such provision

in the educational field. This in-service training should mean something in terms of increment or for qualifying these candidates for higher posts. Unless such opportunities are provided, there will not be the requisite urge among teachers to take advantage of further training.

Teacher training is essentially a training in leadership, to guide and help our young to grow in the best manner possible. Education as the mere imparting of knowledge in certain matters is a narrow view. It is really helping each child to grow according to his or her own genius, to understand their difficulties and help to solve their individual problems so that the impediments to their growth can be removed, and each may be given a chance to develop in the best manner possible. To help the child in this way is real education. To do this requires high intelligence, initiative, self-restraint, kindliness, tact, fair play and energy. Training schools and colleges should be so organised as to bring out these qualities in their trainees. When we observe the quality of our present training and the human material that we are offered for the profession, we are bound to take a rather pessimistic view of the future. But if we are to improve the quality of our educational system, this problem must be faced squarely and steps should be taken to solve it.

CHAPTER X

THE FUTURE

When Basic education was first propounded before the country in 1937, many of the orthodox pandits in education pooh-poohed the idea. The very notion of combining education with work was strange and even obnoxious to them. They went so far as to say that education through work would result in slave labour of school children. But after nearly 15 years, this has been accepted as salutary, something that should be absorbed in our educational curricula. The recent Commission on University Education presided over by Dr. S. Radhakrishnan has warmly welcomed and approved this idea, " as a fundamental concept which is steadily gaining support and application, in the educational world ". Even the more recent Secondary Education Commission said: " From the point of view of the individual, real education consists in planning, executing and finally achieving something of which he can feel satisfied. It is in *doing* that ingenuity develops."* They went so far as to say that ' the workshop is undoubtedly a character-building institution '.*

The spirit of Basic education has considerably permeated society. We see today everywhere emphasis being laid on the importance of work involving manual labour. We see the National Cadet Corps digging many furlongs of drains, students building school houses, college boys and girls laying roads, constructing latrines, urinals, etc., and educated men and women organising cleaning campaigns in the villages. These would have been unheard of in a previous generation and are in a large measure due to the message of Gandhiji. But these tendencies, good as they are, are not enough. The future of any country depends upon the quality of the work of its ordinary man and the technical ability which he brings to bear on his daily duties, in whatever sphere he may be placed. Besides individual excellence, the quality to work together, in harmony with others for a common objective, is of the utmost importance. In the present age, success comes to those who can organise and inspire

* Page 40—Secondary Education Commission Report, 1952-53.

large masses of men for a common purpose. Such qualities are acquired only by long training. Our educational institutions should adapt themselves to a type of education which will evoke these qualities.

Basic education has been worked in a countrywide scale only in the Junior and Senior Basic stages. There are only a few schools in the country working the Post-Basic Courses. Barring some schools in Bihar and the one at Sevagram, there are hardly any in the States. Recently, permission has been given to only two institutions to start Post-Basic classes in the State of Madras. It will be clear that the pace of progress in the application of Basic education has been slow and must be quickened; in the field of Higher education, it is almost nil. As has been observed by the University Education Commission, " there is a tendency in university circles to look upon alternating work and study, and also upon ' practical ' courses, especially those calling for manual craftsmanship, as suited to inferior minds, while the professional courses are for intellectuals. This separation of skill of hand from skill of mind has greatly retarded the mastery of the physical world and has been a major cause of poverty, especially, in India. Practical work should not leave the worker in a blind alley without continued opportunity for advancement. Like scholarship, it should be recognised with ascending grades of achievement and opportunity, so that a man who develops high ability with hand and eye may have scope to advancement equal to that of the purely intellectual worker "*. Our university courses must be reorganised to provide these opportunities.

In addition, courses of higher learning should be such as will offer opportunities for physical labour in crafts which would help in the study of those subjects. To illustrate, Engineering is Applied Physics, Agriculture is Applied Organic Chemistry, Tanning and other crafts are applications of chemical principles. It will be a great advantage both from the point of view of academic understanding and the development of industry to establish close contact between the Colleges and the Workshops. It is not suggested that everyone should be made to undergo many hours of compulsory craft work. There are always in society a few distinguished individuals who may have an aptitude for scholastic study and fundamental research, who should be given oppor-

* Page 576—University Education Commission Report, 1948-49.

tunities for academic study involving high specialisation. But the number of such persons cannot be large. Apart from those few, the large number of students undergoing collegiate education should be given opportunities to combine manual work with intellectual study. This will have the additional advantage of making Higher education more purposeful.

Basic education has passed the stage of experimentation. It has been accepted as the educational policy of the Governments in the Centre and in the States. But it is strange that it has not yet been integrated in our educational system. Basic schools and Basic Training institutions still exist as islands amidst a large number of different types of schools. This situation by its very nature is not helpful to the growth of Basic education. If we are convinced about the effectiveness and the merits of Basic education, it is necessary that we should take immediate steps to reorientate all our schools in that spirit. There may be administrative difficulties in introducing crafts and such other activities in all these schools immediately. But certainly there are other aspects such as cleaning, gardening, etc., which can be introduced without delay. The slow pace of Basic education is an indication of lethargy which is the enemy of all progress in the educational field. Such activities as are possible should be immediately integrated in all our Elementary schools ; the same thing should be done also in our Secondary schools. Universities should be induced to introduce this spirit and programme in colleges also as an integral part of their curricula. What we want is a dynamic programme of reorientation of all our educational institutions bringing them in line with the principle of education through work.

If Basic education should serve the needs of the nation in all its aspects, we should take care constantly to explore the present and future needs of our national life. It is undoubtedly true that the Great Father of our Nation was constantly thinking about the millions of our poor men and women in the villages in which the large majority of our people live. But it should be recognised that Basic education is an instrument of uplift for all people, wherever they might be. And so, the programme of Basic education should include plans to meet the conditions of today and tomorrow, of the villages and towns, and men and women in various positions in life. Flexibility and freedom should be given

to individual institutions to work out the details suitable to the people and the place in which they are situated.

Basic education is the last and perhaps the greatest gift of the Father of our Nation. It is the final result of his devoted service to the country extending over half a century. It is also the expression of his deep and innate love for the child, so that it may be allowed freedom and opportunity to grow in fulfilment of its own genius. The future of our country depends upon our providing these facilities for our children.

1959

81

ಸ್ಥಾಪನೆ : ೧೮೬೫

ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯ

ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೮೯

ಡೆ. ಚನ್ನಬಸಪ್ಪನವರು
(೧೮೩೩-೧೮೮೧)

ಶತಮಾನೋತ್ತರ ಬೆಳ್ಳಿ ಹಬ್ಬ
(ಏಪ್ರಿಲ್ ೧೯೮೯ ರಿಂದ)

ವರ್ಷ / 1959

ನೆಯ ಸಂಪುಟ

ಜೀವನ ಶಿಕ್ಷಣ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚನ್ನಬಸಪ್ಪ ವೃತ್ತ, ರೊದ್ದರಸ್ತೆ, ಧಾರವಾಡ - ೧

ಜೀವನ ಶಿಕ್ಷಣ

ಪ್ರಧಾನ ಸಂಪಾದಕರು : ಜಿ. ಎಂ. ಜೋಶಿ

ಸೆಪ್ಟೆಂಬರ

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಎಮ್. ಜಿ. ಹಂದ್ರಾಳ, ಬಿ.ಎ.(ಆನರ್ಸ),ಎಮ್.ಈಡಿ.,ಡಿ.ಬಿ.ಈಡಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ

ಪ್ರಧಾನ ಸಂಪಾದಕರು : ಶ್ರೀ ಜಿ. ಎಸ್. ಜೋಶಿ, ಬಿ. ಎ., ಬಿ. ಇಡಿ.
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾ (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೫ — ಡಿಸೆಂಬರ ೧೯೫೯ — ಸಂಚಿಕೆ ೭

— ಪರಿವಿಡಿ —

೧. ಸಂಪಾದಕೀಯ ೩

೨. ನಮ್ಮ ನೂತನ ಸಂಪಾದಕರು .... ಶ್ರೀ. ಎಚ್. ಜಿ. ಜೋಶಿ. ೪

೩. ಮಕ್ಕಳ ಹಸಿವು .... ಶ್ರೀ. ಎಸ್. ಆರ್. ಮಕರಿ, ಧಾರವಾಡ. ೫

೪. ಶಿಕ್ಷಣದಲ್ಲಿ ನಾಟಕಗಳ ಸ್ಥಾನ .... ಶ್ರೀ ಮ. ಗು. ಘೀವಾರಿ, ಬೆಳಗಾವ. ೭

೫. ಶಿಕ್ಷಣದಲ್ಲಿ ಪ್ರವಾಸ ಪದ್ಧತಿ .... ಶ್ರೀ. ಮ. ಬಿ. ಶ್ಯಾಡಗುಪ್ಪಿ ದೇವಿಹೊಸೂರ. ೯

೬. ಕತ್ತಲೆಯಿಂದ ಬೆಳಕಿನೆಡೆಗೆ .... ಶ್ರೀ. ಬಿ. ವ್ಹಿ. ಮಡಿವಾಳರ ಕುಮಟಾ ೧೦

೭. ಮಕ್ಕಳಲ್ಲಿ ಶಿಸ್ತನ್ನು ಬೆಳೆಸುವದು .... ಶ್ರೀ. ರಾ. ಲಿಂ. ಕರಿಗಾರ ೧೩

೮. ಜೀವನ ಶಿಕ್ಷಣ ಶಾಲೆಗಳಲ್ಲಿ ಪಠ್ಯೇತರ ಚಟುವಟಿಕೆಗಳ ಸ್ಥಾನ .... ಶ್ರೀ. ಬಿ. ಎ. ನಾಯಕ, ಕಾರವಾರ. ೧೫

೯. ಜೀವನ ಶಿಕ್ಷಣದಲ್ಲಿ ಶಿಕ್ಷಕ .... ಶ್ರೀ. ಎಸ್. ಎಸ್. ಭೂಸರಡ್ಡಿ, ಕುಮಟಾ. ೧೬

೧೦. ಪ್ರಾಥಮಿಕ ಮಟ್ಟದಲ್ಲಿ ಈಗಿನ ಮಕ್ಕಳಲ್ಲಿ ಶಿಕ್ಷಣದ ಮಟ್ಟವನ್ನು ಎತ್ತರಿಸುವ ಬಗೆ .... ಶ್ರೀ. ಶಿವಪ್ಪ ಮುದುಕಪ್ಪ ಜಾಪಾಲಿ, ಅಂಚಟಗೇರಿ. ೧೮

೧೧. ರವೀಂದ್ರರು ಹಾಗು ರಾಷ್ಟ್ರೀಯತೆ .... ಶ್ರೀ. ಶಂ. ರಾ. ಮಕರಿ. ಧಾರವಾಡ. ೨೧

೧೨. ವ್ಯಕ್ತಿತ್ವ ವಿಕಾಸದ ಸಾಧನ ಮಾರ್ಗ .... ಶ್ರೀ. ಅನ್ನದಾನೀಶ್ವರ ವಿರಕ್ತಮಠ, ಹುಬ್ಬಳ್ಳಿ. ೨೩

೧೩. ಇಂಗ್ಲೀಷ ಶಬ್ದಗಳಲ್ಲಿಯ ಅಕ್ಷರ ಜೋಡಣೆಯ ವೈಚಿತ್ರ್ಯ .... ಶ್ರೀ. ತಟ್ಟಿ ಶಾಮರಾಯರು, ಹುಬ್ಬಳ್ಳಿ. ೨೫

೧೪. ಹಿಂದಿ ಶಿಕ್ಷಣ .... ಶ್ರೀ. ಸಿ. ಶಿ. ನರೇಗಲ್ಲ, ಬದಾಮಿ. ೪೮

SCHEDULE

FORM OF DECLARATION FORM I. (SEE RULE) 3

I, GUNDE RAO M. JOSHI, Declare that I am the publisher of the newspaper, entitled JEEVAN SHIKSHANA, Office Dharwar and that particulars in respect of the said Newspaper given here under are true to the best at my knowledge and belief.

(1) Tittle of the Newspaper.	...	Jeevana Shikshana.
(2) Language in which it is (to be) published.	...	Kannada.
(3) Perioclicity at its publication.		
(a) Whether a daily, tri-weekly, bi-weekly, weekly, fortnightly, or otherwise.	...	Monthly.
(b) In the case of a daily please state whether it is a morning or evening newspaper.	...	———
(c) In the case of a newspaper other than a daily please state the day (s)/ date (s) which it is (to be) Published.	...	15th of Month.
(4) Retail selling price of the newspaper per Copy.	...	37 N. P.
(a) If the newspaper is for free distribution please state that it is " for free distribution ".	...	———
(b) If it has only annual subscription and no retail price, please state the annual subscription.	...	Rs. 4 Per Year.
(5) Publisher's name.	...	Shri Gunde Rao M. Joshi.
Nationality.	...	Indian.
Address.	...	Principal Govt. Training College for Men, Dharwar.

(6) **Place at publication (please give the complete Postal Address).**	...	**Jeevana Shikshana Office Govt. Training College for Men Dharwar.**
(7) **Printer's Name.**	...	**Shri S. F. Kattimani.**
Nationality.	...	**Indian.**
Address.	...	**Manager Manohar Power Printing Press, Belgaum Galli, Hubli.**
(8) Name (s) of the printing press (es) where printing is to be conducted and the true and precise-description at the premises on which the Press (es) is/are installed.	...	Manohar Power Printing Press Belgaum Galli, Hubli.
(9) Editor's Name.	...	Shri Gunde Rao M. Joshi.
Nationality.	...	Indian.
Address.	...	Principal Govt. Training College For Men, Dharwar.
(10) Owner's Name (s)		
(a) please state as individual or as the firm, joint stock company, trust, cooperative society or association which owns the newspaper.	...	**Editorial.**
(b) Please state whether the owner owns any other newspaper and if so its name periodicity language & place of publication.	...	**No.**
(11) Please state whether the declaration is in respect of.	...	
(a) a new newspaper or.	...	
(b) an existing newspaper.	...	Existing Monthly Magazine.
(c) in case the declaration falls item (b) the reason for filing the fresh declaration.	...	Due to Transfer of the Principal Govt. Training College for Men, Dharwar.

GUNDE RAO M. JOSHI
Signature

Date 1—12—1959.

ಸಂಪಾದಕೀಯ

೧. ಸುಪ್ರಸಂಗ:— ಜೀವನ ಶಿಕ್ಷಣದ ನವ್ಹಂಬರ ಸಂಚಿಕೆಯಲ್ಲಿ ಸನ್ಮಾನ್ಯ ರ್‍ಯಾಂಗ್ಲರ ಪಾವಟೆಯವರ ಬಗ್ಗೆ ಹಲವಾರು ಲೇಖಗಳನ್ನು ಪ್ರಕಟಿಸಲಾಗಿದೆ. ಶ್ರೀ ದಾದಾ ಸಾಹೇಬ ಪಾವಟೆಯವರ ವಜ್ರಮಹೋತ್ಸವದ ಕಾಲಕ್ಕೆ ಅವರ ಜೀವನ ಮತ್ತು ವ್ಯಕ್ತಿತ್ವಗಳ ಬಗ್ಗೆ ಲೇಖಗಳನ್ನು ಪ್ರಕಟಿಸಿ ತಮ್ಮ ಕೃತಜ್ಞತೆಗಳನ್ನು ಅರ್ಪಿಸಬೇಕೆಂದು ಜೀವನ ಶಿಕ್ಷಣ ಪತ್ರಿಕೆಯ ಸಂಪಾದಕ ಮಂಡಲದವರು ಇಚ್ಛೆಯನ್ನು ವ್ಯಕ್ತಪಡಿಸಿದರು. ಆ ಪ್ರಕಾರ ಆ ಇಚ್ಛೆಯು ಕಾರ್ಯರೂಪಕ್ಕೂ ಬಂದಿತು. ದಿನಾಂಕ ೧೫-೧೧-೧೯೫೯ ರಂದು ಮುಂಜಾವಿನ ೧೦ ಘಂಟೆಯ ಸಮಯ "ಜೀವನ ಶಿಕ್ಷಣ"ಕ್ಕೆ ಒಂದು ಸುಪ್ರಸಂಗ.

"ಜೀವನ ಶಿಕ್ಷಣ" ಪತ್ರಿಕೆಯ ಸಂಪಾದಕ ಮಂಡಲವನ್ನು ಮೊದಲಿಗೆ ರಚಿಸಿದವರು ಶ್ರೀ ಪಾವಟೆ ದಾದಾ ಸಾಹೇಬರು. ಆ ಕಾಲಕ್ಕೆ ಪತ್ರಿಕೆಯ ಸ್ವರೂಪದ ಬಗ್ಗೆಯೂ ಅವರು ಅಮೌಲ್ಯ ಸೂಚನೆಗಳನ್ನು ಕೊಟ್ಟಿದ್ದಾರೆ. ಈ ಪ್ರಕಾರ ಅವರು ತೋರಿಸಿಕೊಟ್ಟ ಮಾರ್ಗವಲ್ಲಿ ಹೆಜ್ಜೆ ಹಾಕುತ್ತಿರುವ "ಜೀವನ ಶಿಕ್ಷಣ"ವು ಅವರ ವಜ್ರಮಹೋತ್ಸವ ಸಮಾರಂಭದಲ್ಲಿ ಅವರ ಬಗ್ಗೆ ಹಲವು ಲೇಖಗಳನ್ನು ಪ್ರಕಟಿಸಿ ಅವರಿಗೆ ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದೆ.

ದಿನಾಂಕ ೧೫-೧೧-೧೯೫೯ ರಂದು ಮುಂಜಾನೆ ಹತ್ತು ಘಂಟೆಯ ಸಮಯಕ್ಕೆ ಸಂಪಾದಕ ಮಂಡಲದವರು ಶ್ರೀ ಎಸ್. ವ್ಹಿ. ಜೇವೂರವರ ನೇತೃತ್ವದಲ್ಲಿ ಶ್ರೀ ಪಾವಟೆಯವರ ಮನೆಗೆ ಹೋದರು. ಶ್ರೀ ತಟ್ಟಿ ಶ್ಯಾಮರಾಯರು ಶ್ರೀ ಪಾವಟೆಯವರಿಗೆ ಹಾರತುರಾಯಿಗಳನ್ನು ಅರ್ಪಿಸಿ, ಜೀವನ ಶಿಕ್ಷಣದ ನವ್ಹಂಬರ ಸಂಚಿಕೆಯನ್ನು ಅವರ ಕೈಯಲ್ಲಿ ಇತ್ತರು. ಶ್ರೀಮತಿ ಭಾಸ್ಕರಬಾಯಿಯವರು ಶ್ರೀಮತಿ ಗಿರಿಜಾದೇವಿ ಪಾವಟೆಯವರಿಗೆ ಹಾರತುರಾಯಿಗಳನ್ನು ಅರ್ಪಿಸಿದರು. ನಂತರ ಶ್ರೀ ಶಿಂತ್ರಿಯವರು ಶ್ರೀ ಪಾವಟೆ ದಾದಾಸಾಹೇಬರು ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ವಿವಿಧ ಕಾರ್ಯಗಳ ಮಹತ್ವವನ್ನು ವಿವರಿಸುತ್ತ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಶ್ರೀ ಪಾವಟೆಯವರು ಜೀವನ ಶಿಕ್ಷಣ ಪತ್ರಿಕೆಯು ಶಿಕ್ಷಣದ ಸೇವೆಯನ್ನು ಮಾಡಲು ತನ್ನ ಸಾಮರ್ಥ್ಯವನ್ನು ಬೆಳಿಸಿಕೊಳ್ಳಲೆಂದು ಆಶೀರ್ವದಿಸಿದರು.

ನವ್ಹಂಬರ ಸಂಚಿಕೆಯನ್ನು ಪ್ರಕಟಿಸುವ ಕಾರ್ಯದಲ್ಲಿ ಶ್ರೀ ಎಸ್. ವ್ಹಿ. ಜೇವೂರ, ಡೆ. ಡಾಯರೆಕ್ಟರ ಶಿಕ್ಷಣ ಶಾಖೆ, ಧಾರವಾಡ ವಿಭಾಗ, ಮತ್ತು ಶ್ರೀ ಎಮ್. ಜಿ. ಹಂದ್ರಾಳ, ಶಿಕ್ಷಣಾಧಿಕಾರಿಗಳು, ಜಿಲ್ಹಾ ಧಾರವಾಡ ಇವರಿಬ್ಬರೂ ಸಕಾಲಕ್ಕೆ ಸೂಚನೆಗಳನ್ನು ಮತ್ತು ಸಹಾಯವನ್ನೂ ಕೊಟ್ಟಿದ್ದಾರೆ. ಈ ಬಗ್ಗೆ ಸಂಪಾದಕ ಮಂಡಲದವರು ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾರೆ. ಒಟ್ಟಿನಲ್ಲಿ ಹದಿನಾಲ್ಕು ಲೇಖಗಳನ್ನು ಪ್ರಕಟಿಸಲಾಗಿದೆ. ಈ ಲೇಖಗಳನ್ನು ಸಕಾಲಕ್ಕೆ ಬರೆದುಕೊಟ್ಟ ಎಲ್ಲ ಲೇಖಕರಿಗೂ ಸಂಪಾದಕ ಮಂಡಲದವರು ಕೃತಜ್ಞತೆಗಳನ್ನು ಸಲ್ಲಿಸುತ್ತಾರೆ. ಈ ಸಂಚಿಕೆಯನ್ನು ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಎಸ್. ಎಫ್. ಕಟ್ಟೀಮನಿಯವರಿಗೂ ಸಂಪಾದಕ ಮಂಡಲದವರು ಕೃತಜ್ಞತೆಗಳನ್ನು ಸಲ್ಲಿಸುತ್ತಾರೆ.

೨. ಶ್ರೀ ರಾಜೇಂದ್ರ ಪ್ರಸಾದರ ಜಯಂತಿ :— ದಿನಾಂಕ ೩-೧೨-೫೯ಕ್ಕೆ ಶ್ರೀ ರಾಜೇಂದ್ರ ಪ್ರಸಾದರು ತಮ್ಮ ಜೀವನದಲ್ಲಿ ೭೫ ವರ್ಷಗಳನ್ನು ಪೂರ್ತಿಗೊಳಿಸಿ, ೭೬ನೆಯ ವರ್ಷಕ್ಕೆ ಕಾಲಿಡುತ್ತಾರೆ. ಈ ಮಹನೀಯರು ಹಲವಾರು ರೀತಿಗಳಿಂದ ಭಾರತ ಮಾತೆಯ ಸೇವೆಯನ್ನು ಸಲ್ಲಿಸಿ ಅವಳ ನಿರ್ಮಲಾಂತಃಕರಣದಿಂದ ಹೊರಸೂಸುವ ಆಶೀರ್ವಾದಗಳನ್ನು ಪಡೆದಿದ್ದಾರೆ. ಇಂದು ಶ್ರೀ ರಾಜೇಂದ್ರ ಪ್ರಸಾದರು ಭಾರತದ ರಾಷ್ಟ್ರಪತಿಗಳು. ಅವರಲ್ಲಿ ವಿದ್ಯೆ, ಅಂತಃಕರಣ ಮತ್ತು ನಿಷ್ಠೆಗಳು ಪರಿಶುದ್ಧ ಸ್ವರೂಪದಲ್ಲಿ ನೆಲೆಸಿವೆ. ಈ ಮಹನೀಯರ ಹುಟ್ಟು ಹಬ್ಬವನ್ನು ಶಾಲೆಗಳಲ್ಲಿ ಬಾಲಕರು ಆಚರಿಸುವದು ಬಹಳ ಸ್ತುತ್ಯವಾದುದು. ಈ ಮಹನೀಯರ ಮಾರ್ಗದರ್ಶನದಲ್ಲಿ ನಮ್ಮ ದೇಶವು ಉತ್ಕರ್ಷವನ್ನು ಹೊಂದಲೆಂದು ಆ ದಯಾಘನನಾದ ಪರಮಾತ್ಮನನ್ನು ಪ್ರಾರ್ಥಿಸೋಣ.

೩. ಶಾಲೆಗಳಲ್ಲಿ ಬಾಲಕರ ವಾಚನಾಲಯಗಳು:— ವಾಚನಾಲಯಗಳು ಶಿಕ್ಷಣದ ಬೆಳವಣಿಗೆಗೆ

ಬಹಳ ಸಹಾಯಕಾರಿಯಾಗಿವೆ. ಆದ್ದರಿಂದ ಪ್ರತಿಯೊಂದು ಶಾಲೆಯಲ್ಲಿ ಬಾಲಕರಿಗಾಗಿ ವಾಚನಾಲಯವನ್ನು ಸ್ಥಾಪಿಸುವದು ಅವಶ್ಯವಾದುದು. ವಾಚನಾಲಯಗಳನ್ನು ಸದುಪಯೋಗವಾಗುವಂತೆ ಚನ್ನಾಗಿ ವ್ಯವಸ್ಥಿತ ರೀತಿಯಲ್ಲಿ ನಡೆಯಿಸುವದೂ ಶಿಕ್ಷಕರ ವ್ರತಗಳಲ್ಲಿ ಒಂದು ಮುಖ್ಯ ವ್ರತವಾಗಿದೆ. ಬಾಲಕರ ಶಿಕ್ಷಣದ ಬೆಳವಣಿಗೆಗೆ ಪೋಷಕವಾಗುವಂತಹ ಪುಸ್ತಕಗಳನ್ನು ವಾಚನಾಲಯದಲ್ಲಿ ಸಂಗ್ರಹಿಸಿಡಬೇಕು. ಬಾಲಕರಲ್ಲಿ ಓದುವ ಅಭಿರುಚಿಯನ್ನು ಬೆಳೆಯಿಸಬೇಕು. ಯೋಗ್ಯ ಸಂಘಟನೆಯಿಂದ ಪುಸ್ತಕಗಳನ್ನು ಬಾಲಕರಲ್ಲಿ ಹಂಚಿ ಅವುಗಳನ್ನು ನಿಯತಕಾಲಕ್ಕೆ ತಿರುಗಿ ತೆಗೆದುಕೊಳ್ಳಬೇಕು. ವಾಚನಾಲಯದಿಂದ ಬೆಳೆಯಿಸಿಕೊಂಡ ಶಕ್ತಿಯನ್ನು ಪ್ರಕಟಗೊಳಿಸಲಿಕ್ಕೆ ಕಾಲಕಾಲಕ್ಕೆ ನಿಬಂಧ ಸ್ಪರ್ಧೆಯನ್ನೂ ಮತ್ತು ವಾಕ್ ಸ್ಪರ್ಧೆಗಳನ್ನೂ ಇಡಬೇಕು. ಪುಸ್ತಕಗಳನ್ನು ಕೊಳ್ಳಲಿಕ್ಕೆ ನಿಧಿಯನ್ನು ಶಿಕ್ಷಣಾಭಿಮಾನಿಗಳಾದ ಪುರವಾಸಿಗಳಿಂದ ಕೂಡಿಸಬೇಕು. ವಾಚನಾಲಯಕ್ಕೆ ದೈನಂದಿಕ, ಸಾಪ್ತಾಹಿಕ ಮತ್ತು ಮಾಸಿಕ ಪತ್ರಿಕೆಗಳನ್ನು ತರಿಸಬೇಕು. ರಾತ್ರಿ ಸಮಯದಲ್ಲಿ ಸಹ ಓದಲಿಕ್ಕೆ ಶಾಲೆಯಲ್ಲಿ ಸ್ಥಳ ಮತ್ತು ದೀಪಗಳ ವ್ಯವಸ್ಥೆಯನ್ನು ಮಾಡಬೇಕು.

ಮುಖ್ಯ ಸಂಪಾದಕರು.

ನಮ್ಮ ನೂತ್ನ ಸಂಪಾದಕರು

ಪರಿಚಯಕಾರರು:— **ಎಚ್. ಜಿ. ಜೋಶಿ.**

ಗುಲಬುರ್ಗಾ ಜಿಲ್ಲೆಯಲ್ಲಿಯ ಗಾಣಗಾಪುರವು ಪವಿತ್ರ ಪುಣ್ಯಕ್ಷೇತ್ರವೆನಿಸಿದೆ. ದತ್ತಾತ್ರೇಯನ ನಿವಾಸವೇ ಗಾಣಗಾಪುರದ ಕೀರ್ತಿಗೂ ಪಾವಿತ್ರ್ಯಕ್ಕೂ ಕಾರಣವು. ಈ ಕ್ಷೇತ್ರದ ಅಳವಿನಲ್ಲಿ ಬರುವ **ಅಳಂದವೇ** ನಮ್ಮ ನೂತ್ನ ಸಂಪಾದಕರ ಮಾತೃಭೂಮಿಯು.ತಮ್ಮ ಎಳೆವಯದಲ್ಲಿಯೇ (ಮೂರು ವರುಷದ ಮಗುವಿರುವಾಗಲೇ) ತಂದೆಯನ್ನು ಕಳೆದುಕೊಂಡು ಅನಾಥರಾದರು. **अरक्षितं तिष्ठति दैवरक्षितम्** ಎಂಬ ಸುಭಾಷಿತದಂತೆ ದೈವವೇ ಮುಂದೆ ಬಂದು ಇವರ ರಕ್ಷಣೆಯ ಕಾರ್ಯಭಾರವನ್ನು ವಹಿಸಿತು. ಮಾತೃಪ್ರೇಮವೆಂಬ ಅಮೃತದ ಗುಟುಕು ಕೂಡಾ ಇವರ ಪಾಲಿಗೆ ಅರೆಗುಟುಕು ಆಯಿತು. ಶ್ರೀಯುತರು ಅದೇ ಮ್ಯಾಟ್ರಿಕ್ ಪಾಸಾಗಿ ಮುಂದೆ ವಿದ್ಯಾಭ್ಯಾಸವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ತವಕಿಸುತ್ತಿರುವಷ್ಟರಲ್ಲಿಯೇ ತಾಯಿಯೂ ಇಹಲೋಕದ ಯಾತ್ರೆಯನ್ನು ಮುಗಿಸಿದರು.

ಬಾಲ್ಯದಲ್ಲಿ ಶ್ರೀಯುತರ ಪಾಲಿಗೆ ಅನಾಥ ವಿದ್ಯಾರ್ಥಿ ಗೃಹವೇ ಇವರ ನಿಲಮನೆಯಾಯ್ತು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಅನಾಥ-ವಿದ್ಯಾರ್ಥಿ ಗೃಹದಲ್ಲಿ ಇದ್ದುಕೊಂಡೇ ಮುಗಿಸಿದರು. ಮುಂದೆ ಹೈದ್ರಾಬಾದದಲ್ಲಿರುವ "ವಿವೇಕ ವರ್ಧಿನಿ ಹೈಸ್ಕೂಲ"ವೆಂಬ ಮಾಧ್ಯಮಿಕ ಶಾಲೆಯನ್ನು ಸೇರಿ ಅಲ್ಲಿ ತಮ್ಮ ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿಕೊಂಡರು. ಶಾಲೆಯು ತನ್ನ ಹೆಸರಿಗೆ ತಕ್ಕಂತೆ ಇವರಲ್ಲಿ ವಿವೇಕವನ್ನು ವರ್ಧಿಸಿ ಜೀವನದಲ್ಲಿ ಪಡೆಯಬೇಕಾದ ವಿದ್ಯೆಯ ಧ್ಯೇಯವನ್ನು ತೋರಿಸಿಕೊಟ್ಟಿತು. ಮುಂದೆ ಹೈದ್ರಾಬಾದ ನಿಜಾಮು ಕಾಲೇಜದದಿಂದ "ಇಂಟರಮಿಡಿಯೇಟ್" ಪರೀಕ್ಷೆಯನ್ನು ಪಾಸಾಗಿ ಸರಕಾರಿ ನೌಕರಿಯಲ್ಲಿ ಸೇರಿಕೊಂಡರು. ವಿದ್ಯೆಯ ಹಸಿವು ಇನ್ನೂ ಹಿಂಗಿರಲಿಲ್ಲ; ಆದರೆ ಹೊಟ್ಟೆಯ ಹಸಿವನ್ನು ಮೊದಲು ತಣಿಸಬೇಕಾದುದರಿಂದ, ಕೆಲ ಕಾಲ ಅದನ್ನು ಮುಂದೂಡಿದರು. ಸ್ವಲ್ಪ ಸಮಯ ಕಳೆದ ನಂತರ ನೌಕರಿಯನ್ನು ಮಾಡುತ್ತಲೇ ವಿದ್ಯಾಭ್ಯಾಸವನ್ನು ಮುಂದುವರಿಸಿ ಹೈದ್ರಾಬಾದದ ಉಸ್ಮಾನಿಯಾ ವಿಶ್ವವಿದ್ಯಾಲಯದ ಪದವೀಧರರಾದರು. ಅದೇ ವಿಶ್ವವಿದ್ಯಾಲಯದ ಬಿ. ಈಡಿ. ಪದವಿಯನ್ನೂ ಕಾಲಾಂತರದಲ್ಲಿ ದೊರಕಿಸಿಕೊಂಡರು. ಹೈದ್ರಾಬಾದ ವಿಭಾಗದಿಂದ ಇಂದು ಮೈಸೂರು ರಾಜ್ಯದಲ್ಲಿ ಸಮಾವೇಶಗೊಂಡ ಬೀದರ, ಗುಲಬುರ್ಗಾ ಹಾಗು ರಾಯಚೂರ ಜಿಲ್ಹೆಗಳಲ್ಲಿಯ ಬೇರೆ ಬೇರೆ ಹೈಸ್ಕೂಲುಗಳಲ್ಲಿ ಅಸಿಸ್ಟಂಟ ಮಾಸ್ತರರೆಂದು ಮುಖ್ಯಾಧ್ಯಾಪಕರೆಂದು ಕೆಲಸ ಮಾಡಿರುವರು. ೧೯೫೭–೫೮ರಲ್ಲಿ ಮೈಸೂರು ರಾಜ್ಯದ ದೊಡ್ಡಬಳ್ಳಾಪೂರದಲ್ಲಿಯ ಸ್ನಾತಕರ ಮೂಲಶಿಕ್ಷಣ ಕಾಲೇಜನ್ನು ಸೇರಿ ಜೀವನ ಶಿಕ್ಷಣದ ದೀಕ್ಷೆಯನ್ನೂ ಪಡೆದುಬಂದವರಾಗಿರುವರು.

ಇಂತು ಅನಾಥರಾಗಿ ಬೆಳೆದು ಕಷ್ಟಪರಂಪರೆಗಳಲ್ಲಿ ಸಿಲುಕಿ, ಜೀವನದ ಜಿಗಟುತನದಿಂದ ವಿದ್ಯಾಭ್ಯಾಸವನ್ನು

ಸಾಗಿಸಿಕೊಂಡು ಶಿಕ್ಷಣ ಕ್ಷೇತ್ರದಲ್ಲಿಯ ವಿವಿಧ ಸಂಸ್ಥೆಗಳಲ್ಲಿ ದುಡಿದು ೧೯೫೫ರ ಅಕ್ಟೋಬರ ೧೫ ನೆಯ ದಿನಾಂಕ ಧಾರವಾಡದ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರೆಂದು ಅಧಿಕಾರವಹಿಸಿಕೊಂಡರು. ಅದರ ಜೊತೆಗೆ ಈ ಜೀವನ ಶಿಕ್ಷಣದ ಸಂಪಾದಕತ್ವದ ಕಾರ್ಯವನ್ನು ವಹಿಸಿಕೊಂಡಿರುವರು.

ಶ್ರೀಯುತರಿಗೆ ಕನ್ನಡ, ಮರಾಠಿ, ಉರ್ದು, ಹಿಂದಿ, ಆಂಗ್ಲವೆಂಬ ಪಂಚ ಭಾಷೆಗಳ ಪರಿಚಯವಿದೆ. ಉರ್ದು ಭಾಷೆಯಲ್ಲಂತೂ ಪರಿಣತರೇ ಆಗಿರುವರು. ಉತ್ತರ ಕರ್ನಾಟಕದ ಉರ್ದು ಮಾತೃಭಾಷೆಯುಳ್ಳ ಪದವೀಧರರ ಮುಖಕಮಲಗಳು ಇವರ ಆ ಭಾಷೆಯ ಪ್ರಭುತ್ವ ಪ್ರಕಾಶದೆದುರು ಬಾಡುವವು. ಇಷ್ಟೊಂದು ಆ ಭಾಷೆಯ (ಉರ್ದು) ಮೇಲೆ ಹಿಡಿತವಿದೆ.

ಶ್ರೀಯುತರು ನಿರಾಡಂಬರ ಜೀವಿಗಳು. ಹಿತಮಿತ ಭಾಷಿಗಳು. "ಸತ್ಯಂಬ್ರೂಯಾತ್ ಪ್ರಿಯಂಬ್ರೂಯಾತ್ ನಬ್ರೂಯಾತ್ ಸತ್ಯಮಪ್ರಿಯಂ" ಎಂಬ ಸೂತ್ರವನ್ನು ಅನುಸರಿಸಿಕೊಂಡು ಹೋಗುವ ಸ್ವಭಾವದವರು. ಬಾಲ್ಯದಲ್ಲಿ ಬಡತನದಲ್ಲಿ ಬೆಳೆದಿರುವದರಿಂದಲೋ ಏನೋ ಬಡವರ ಕೈವಾರಿಗಳಾಗಿದ್ದಾರೆ. ದಯಾರ್ದ್ರ ಹೃದಯಿಗಳು. ವ್ಯಕ್ತಿಗತ ಪ್ರಚಾರ ಪ್ರಸಾರಗಳೇಕೆ? ಎಂದು ಹಿಂಜರಿಯುವ ಸ್ವಭಾವದವರು. **ಗುಂಡೇರಾವ್ ಎಮ್. ಜೋಶಿ.** ಎಂಬುದು ಶ್ರೀಯುತರ ಪೂರ್ಣ ಹೆಸರು. ಜೀವನದಲ್ಲೊಮ್ಮೆ 'ಹಾ ಹತ ವಿಧಿಯೇ' ಎಂದು ಅಂದಿದ್ದರೂ, ಇಂದು ಅವನ್ನೇ 'ಎಲೆ ರಸ ನಿಧಿಯೇ' ಎಂದು ಕರೆಯುವಂತಾಗಿದೆ. ಜೀವನದುದ್ದಕ್ಕೂ ಅದು ರಸನಿಧಿಯಾಗಿರಲೆಂದು ಹಾರೈಸಿ 'ಜೀವನ ಶಿಕ್ಷಣ' ವಾಚಕರಿಗೆ ಅವರ ಈ ಅಲ್ಪ ಪರಿಚಯವನ್ನು ಮಾಡಿಕೊಟ್ಟು ವಿರಮಿಸುವೆ.

ಮಕ್ಕಳ ಹಸಿವು

ಲೇಖಕರು:— **ಎಸ್. ಆರ್. ಮಕರಿ,** ಗಂ. ಸ. ಟ್ರೇ. ಕಾ. ಧಾರವಾಡ

ನವ್ಹಂಬರ ೧೪ ಭಾರತದ ಪ್ರಧಾನ ಮಂತ್ರಿಗಳಾದ ಜವಾಹರರ ಹುಟ್ಟುಹಬ್ಬ. ಅವರು ಈ ಯುಗದ ಮಹಾನುಭಾವರೆನಿಸಿದ್ದಾರೆ. ತಮ್ಮ ಹುಟ್ಟುಹಬ್ಬವನ್ನು "ಮಕ್ಕಳ ದಿನ"ವನ್ನಾಗಿ ಆಚರಿಸಲು ಅವರು ಜನತೆಗೆ ಕರೆಕೊಟ್ಟಿರುವದರಲ್ಲಿ ಒಂದು ವೈಶಿಷ್ಟ್ಯವಿದೆ. ಭಾರತದ ಶ್ರೇಷ್ಠ ಪುತ್ರರೆನಿಸಿದ ಅವರು ರಾಷ್ಟ್ರದ ಶ್ರೇಷ್ಠ ಪುತ್ರರ ನಿರ್ಮಾಣಕ್ಕೆ ಚಿಂತಿಸುವದರಲ್ಲಿ ಆಶ್ಚರ್ಯವೇನು? ಅಂತೆಯೇ ಜವಾಹರರ ಹುಟ್ಟುಹಬ್ಬವು ಮಕ್ಕಳ ದಿನವಾಗಿ ಆಚರಣೆಗೆಬಂದಿದೆ.

ಮಕ್ಕಳೇ ರಾಷ್ಟ್ರದ ನೈಜ ಸಂಪತ್ತು. ಇಂದಿನ ಮಕ್ಕಳೇ ನಾಳಿನ ರಾಷ್ಟ್ರ ನಿರ್ಮಾಪಕರು. ಆದುದರಿಂದ ರಾಷ್ಟ್ರೀಯ ಹಿತದ ದೃಷ್ಟಿಯಿಂದ ಇಂದಿನ ಮಕ್ಕಳ ಸ್ಥಿತಿಗತಿ, ಆಶೆ, ಆಕಾಂಕ್ಷೆ ಹಾಗೂ ಒಲವು ನಿಲವುಗಳನ್ನು ಬಾಲ್ಯದಲ್ಲಿಯೇ ಅರಿತು, ಅವುಗಳಿಗೆ ಪೂರಕವಾಗಿ ಯೋಗ್ಯ ವ್ಯವಸ್ಥೆ ಮಾಡುವದು, ಪ್ರತಿಯೊಬ್ಬ ತಂದೆ ತಾಯಿಗಳ ಕರ್ತವ್ಯವು. ಅವರು ಈ ವಿಷಯವಾಗಿ ಮಾಡುವಚಿಂತನೆ ವ್ಯಕ್ತಿಗತವೆನಿಸಿದರೂ ರಾಷ್ಟ್ರವನ್ನು ಗಂಡಾಂತರದಿಂದ ಪಾರುಮಾಡುವದೆಂಬದನ್ನು ಯಾರೂ ಮರೆಯಬಾರದು.

ತಮ್ಮ ಮಕ್ಕಳ ಪಾಲನೆ ಪೋಷಣೆಯನ್ನೂ ಎಲ್ಲ ತಂದೆ-ತಾಯಿಗಳೂ ಮಾಡುತ್ತಾರೆ. ಇದನ್ನು ರಾಷ್ಟ್ರ ಮಟ್ಟದಲ್ಲಿ ಗಂಭೀರವಾದ ಸಮಸ್ಯೆಯೆಂದು ತಿಳಿದು, ವಿಚಾರಿಸುವದರಲ್ಲೇನಿದೆ? ಎಂದು ಕೆಲವರು ಈ ಪ್ರಶ್ನೆಯನ್ನು ಗೌಣವಾಗಿ ಕಾಣಬಹುದು. ಆದರೆ ಇಂದಿನ ಏರಿಕೆಯ ತುಟಾಗ್ರತೆಯ ದಿನಮಾನಗಳು, ನಾಗರಿಕನನ್ನು ಸುವ್ಯವಸ್ಥಿತವಾಗಿ ಜೀವನ ನಿರ್ವಹಿಸಲು ಅಸಮರ್ಥನನ್ನಾಗಿ ಮಾಡಿವೆ. ತನ್ನ ಮಕ್ಕಳ ಹಾಗೂ ಕುಟುಂಬದ ಪೋಷಣೆಯು ತುಂಬಾ ನೀಗಲಾಗದ ಕಾರ್ಯವಾಗಿದೆ. ಇದಕ್ಕೆ ಕಾರಣಗಳಿಲ್ಲದೆ ಇಲ್ಲ. ನಮ್ಮ ದೇಶದಲ್ಲಿ ಇಂದು ಮನುಷ್ಯನ ದುಡಿಮೆ, ಜೀವನಾವಶ್ಯಕತೆಯನ್ನು ಪೂರೈಸಲಾರದಾಗಿದೆ. ದಿನದಿನಕ್ಕೂ ಬೆಳೆಯುತ್ತಿರುವ ಜನಸಂಖ್ಯೆ, ನಿರುದ್ಯೋಗದ ತಾಂಡವ ನೃತ್ಯ, ಸೃಷ್ಟಿಯ ಪ್ರಕೋಪದಿಂದ ಉಂಟಾಗುತ್ತಿರುವ ಅಪಾರ ಹಾನಿ, ಹಾಗೂ ರಾಷ್ಟ್ರ ರಾಷ್ಟ್ರಗಳಲ್ಲಿಯ ಶೀತಲ ಯುದ್ಧದ ಪರಿಣಾಮಗಳೂ ಕುಟುಂಬ ಜೀವನದ ಸ್ವಾಸ್ಥ್ಯವನ್ನೇ ಹದಗೆಡಿಸಿವೆ.

ಈ ಎಲ್ಲ ಸಮಸ್ಯೆಗಳ ಪರಿಣಾಮ, ನಮ್ಮ ದೇಶದ ಚಿಕ್ಕಮಕ್ಕಳ ಮೇಲೆ ಬಹಳ ಕೆಟ್ಟ ಪರಿಣಾಮವನ್ನುಂಟು ಮಾಡುತ್ತಲಿದೆ. ಸಕಾಲಿಕವಾಗಿ ರಾಷ್ಟ್ರ ಧುರೀಣರು ಇದನ್ನು ಎದುರಿಸದೇ ಹೋದರೆ ರಾಷ್ಟ್ರದ ಅಧಃಪತನವನ್ನು ಯಾರೊಬ್ಬರೂ ತಡೆಯಲಾರರು. ಮಕ್ಕಳ ಆವಶ್ಯಕತೆಗಳು ಯಾವವು? ನಮ್ಮ ದೇಶದಲ್ಲಿ ಆ ಆವಶ್ಯಕತೆಗಳನ್ನು ಪೂರೈಸಲು ನಾವು ಅನುಸರಿಸಬೇಕಾದ ಮಾರ್ಗಗಳು ಯಾವವು? ಇವುಗಳ ಚಿಂತನೆಯನ್ನು ಮಾಡಲು "ಮಕ್ಕಳ ದಿನ" ಒಂದು ಸುಅವಸರವೆಂದು ಹೇಳಬೇಕು.

ನಮ್ಮ ದೇಶದ ಮಕ್ಕಳಿಗೆ ಬೆಳವಣಿಗೆಗೆ ಅನುಕೂಲವಾಗಬಹುದಾದ ಪೌಷ್ಟಿಕ ಆಹಾರ ದೊರೆಯುತ್ತಿರುವದಿಲ್ಲ. ಮಕ್ಕಳ ಸರ್ವಾಂಗಗಳ ಬೆಳವಣಿಗೆಗೆ ಹೊಟ್ಟೆ ತುಂಬ ಆಹಾರವೇ ದೊರೆಯುದಿದ್ದಾಗ, ನಿರ್ಬಲ ಮಕ್ಕಳು ಏನು ತಾನೇ ಮಾಡಿಯಾರು? ಸರಕಾರ ಹಾಗೂ ಸಮಾಜ ಮಕ್ಕಳಿಗೆ ಆಹಾರದ ಕೊರತೆಯಾಗದಂತೆ ದಕ್ಷತೆ ವಹಿಸಬೇಕು. ಈ ದಿಶೆಯಲ್ಲಿ ಶಾಲಾ ಮಕ್ಕಳಿಗೆ ಒಪ್ಪತ್ತಿನ ಊಟದ ಯೋಜನೆ, ಉಪಹಾರದ ಹಂಚಿಕೆ, ಹಾಗೂ ಹಾಲು ಕೊಡುವದು ಮುಂತಾದ ಕಾರ್ಯಗಳು ಅಲ್ಲಲ್ಲಿ ನಡೆದಿವೆ. ಇವು ಬಲಗೊಳ್ಳಬೇಕು. ಮತ್ತು ಸಾರ್ವತ್ರಿಕವಾಗಿ ಇವರ ಲಾಭ ಮುಟ್ಟಬೇಕು. "ಯಾವ ಮಗುವೂ ಹಸನೆಯಿಂದ ಸಾಯುವದನ್ನು ನಾವು ಸಹಿಸಲಾರೆವು" ಇದು ರಾಷ್ಟ್ರದ ಪ್ರಥಮ ಘೋಷಣೆಯಾಗಲಿ.

ಮಕ್ಕಳ ಆರೋಗ್ಯ ಸಂವರ್ಧನೆಯೂ ಬಹು ಮುಖ್ಯ ವಿಷಯ. ಮಕ್ಕಳನ್ನು ಕಾಲ ಕಾಲಕ್ಕೆ ಪರೀಕ್ಷಿಸಿ, ವೈದ್ಯಕೀಯ ನೆರವು ಕೊಡಬೇಕು. ಅಂಗವಿಕಲ ಮಕ್ಕಳ ಪಾಲನೆ, ನಿರ್ಬಲ ಮಕ್ಕಳ ಪೋಷಣಾ ಕಾರ್ಯಗಳು ಅವಿರತವಾಗಿ ಸಾಗಬೇಕು. ಪ್ರತಿ ಹಳ್ಳಿಗೂ ಮಕ್ಕಳ ಕಲ್ಯಾಣ ಕೇಂದ್ರ ತೆರೆಯಬೇಕು. ಅದಕ್ಕೆ ಸಮಾಜದಲ್ಲಿಯ ಶೆಟ್ಟಿ, ಸಾಹುಕಾರರು, ದಾನಿಗಳು, ಮುಂದೆ ಬಂದು ಬೆನ್ನೆಲುವಾಗಿ ನಿಲ್ಲಬೇಕು. ಸರಕಾರ ಕೈಕೊಳ್ಳುವ ಮಕ್ಕಳ ಕಲ್ಯಾಣ ಕಾರ್ಯದಲ್ಲಿ ಸಮಾಜವು ನೆರವು ನೀಡಿ ಸಹಕರಿಸಬೇಕು.

ಮಗುವಿನ ಹಸಿವು ಬಹುಮುಖವಾದುದು. ಹೊಟ್ಟೆ ಬಟ್ಟೆಯ ಚಿಂತೆಯಷ್ಟೇ ಅದರ ಬೇಡಿಕೆಗಳಲ್ಲ. ಮಗುವಿನ ಮೂಲ ಬೇಡಿಕೆಗಳಲ್ಲಿ ೧) ಶಾರೀರಿಕ ೨) ಮಾನಸಿಕ ೩) ಸಾಮಾಜಿಕ ಹೀಗೆ ನಾವು ವಿಭಾಗ ಮಾಡಬಹುದು. ಅನ್ನ, ನೀರು, ವಿಶ್ರಾಂತಿ, ಇವು ಶಾರೀರಿಕ ಬೇಡಿಕೆಗಳು. ಆಸರ (Security), ಸಾಹಸ (Adventure), ಒಡೆತನ, ಹಾಗೂ ಹೊಸ ಜ್ಞಾನ ಪಿಪಾಸೆಗಳು ಮಾನಸಿಕ ಬೇಡಿಕೆಗಳೆಂದೆನಿಸುವವು. ಇವು ಅಲ್ಲದೆ ಪ್ರೇಮ, ಪ್ರಶಂಸೆ, ಜನಮೆಚ್ಚುಗೆ ಮೊದಲಾದ ಸಾಮಾಜಿಕ ಹಸಿವೆಯಿಂದಲೂ ಮಕ್ಕಳು ಪರಿತಪಿಸುತ್ತವೆ.

ಸರ್ವರಿಗೂ ಹವೆ ಮೂಲ್ಯರಹಿತವಾಗಿಯೂ, ಸ್ವಾಭಾವಿಕವಾಗಿಯೂ ದೊರೆಯುವಂತೆ ಮಕ್ಕಳಿಗೆ ಶಿಕ್ಷಣವು ಸಿಕ್ಕುವಂತಾಗಬೇಕು. ಮನುಷ್ಯನಿಗೆ ಜ್ಞಾನದ ಹಸಿವೆಗಿಂತ ಬಲವತ್ತರ ಹಸಿವು ಯಾವದೂ ಇಲ್ಲ. ಪಶುವಾಗಿರುವ ಮಗು ಮಾನವನಾಗಬೇಕಾದರೆ ಶಿಕ್ಷಣ ಪಡೆಯಲೇಬೇಕು. ಆದುದರಿಂದ ನಮ್ಮ ದೇಶದ ಪ್ರತಿ ಮಗುವಿಗೂ ಪುಕ್ಕಟೆಯಾಗಿ ಶಿಕ್ಷಣ ದೊರೆಯುವಂತೆ ಪ್ರತಿ ಹಳ್ಳಿ ಪಟ್ಟಣಕ್ಕೂ ವಿದ್ಯಾಕೇಂದ್ರಗಳು ತೆರೆಯಬೇಕು.

ಮಕ್ಕಳನ್ನು ನಿರ್ಲಕ್ಷಿಸಲಿಕ್ಕೆ ಪಾಲಕರಿಗೆ ಕೆಲವೊಂದು ಅನಿವಾರ್ಯ ಸಮಸ್ಯೆಗಳು ತಲೆ ತಿನ್ನುತ್ತಿವೆ. ದಿನದಿನಕ್ಕೂ ರಾಷ್ಟ್ರದ ಜನಸಂಖ್ಯೆ ಮಿತಿಮೀರುತ್ತಿರುವದು ಇದಕ್ಕೆ ಬಹು ಮುಖ್ಯಕಾರಣವಾಗಿದೆ. ಇದಕ್ಕಾಗಿ "ಕುಟುಂಬಯೋಜನೆ" ಯಲ್ಲಿ ಪ್ರಜೆಗಳು ಸಹಕರಿಸಿದರೆ ಇಂದಿನ ಮಕ್ಕಳನ್ನು ದುರ್ಲಕ್ಷಿಸುತ್ತಿರುವ ಪ್ರಮಾಣ ಕಡಿಮೆಯಾಗಿ ದೇಶದ ಕಲ್ಯಾಣವಾಗುವದು. ಪ್ರಜೆಗಳು ಅನಾವಶ್ಯಕವಾಗಿ, ದುಂದು ವೆಚ್ಚಮಾಡುವ ಅಪಾರ ಹಣವನ್ನು ಉಳಿಸಿ, ಚಿಕ್ಕ ಉಳಿತಾಯ ಯೋಜನೆ, ಜೀವವಿಮೆ, ಮುಂತಾದವುಗಳಲ್ಲಿ ವಿನಿಯೋಗಿಸಿ; ತಮ್ಮ ಮಕ್ಕಳ ಕಲ್ಯಾಣವನ್ನೂ ಅವರ ಉಜ್ವಲ ಭವಿಷ್ಯತ್ತನ್ನೂ ಕಾಣಲು ಸಾಧ್ಯವಿದೆ.

ಈ ಸ್ಪುಟ್ನಿಕ್ ಯುಗದಲ್ಲಿ ಜೀವನಾವಶ್ಯಕ ಬೇಡಿಕೆಗಳಾವವು? ಗೌಣ ಬೇಡಿಕೆಗಳಾವವು? ಎಂಬುದನ್ನು ಎತ್ತಿ ತೋರಿಸುವದೇ ಕಷ್ಟದ ಕಾರ್ಯವಾಗಿದೆ. ಹೀಗಿದ್ದರೂ ಮಕ್ಕಳ ತಂದೆ ತಾಯಿಗಳು, ಶಾಲಾ ಗುರುಗಳು, ಸಮಾಜ ಸೇವಕರು ಹಾಗೂ ಸರಕಾರ ಮಕ್ಕಳ ಹಸಿವನ್ನು ಹಿಂಗಿಸಲು ತಕ್ಕ ಕಾರ್ಯ ಮಾಡಲು ಪ್ರತಿಜ್ಞಾಬದ್ಧರಾಗಬೇಕು.

ಮಕ್ಕಳ ಹಿತಚಿಂತನೆಗಾಗಿ ತಮ್ಮ ಹುಟ್ಟುದಿನವನ್ನೇ ಸರ್ವಕಾಲವನ್ನಾಗಿ ಮಾಡಿದ ಪಂ. ಜವಾಹರರ ಸೇವೆ ನಮ್ಮ ದೇಶಕ್ಕೆ ಅನಂತಕಾಲ ದೊರೆಯಲಿ ಎಂದು ಪರಮಾತ್ಮನನ್ನು ಪ್ರಾರ್ಥಿಸೋಣ.

ಶಿಕ್ಷಣದಲ್ಲಿ ನಾಟಕಗಳ ಸ್ಥಾನ

ಲೇಖಕರು:— **ಮ. ಗು. ಛವಾರಿ, (ಟಿಳಕವಾಡಿ ಬೆಳಗಾವಿ) ಅ. ಮಾ. ಕ. ಶಾ. ನಂ. ೫ ಬೆಳಗಾವಿ**

ನೋಡಿ ಕಲಿ, ಮಾಡಿ ಕಲಿ, ಆಡಿ ಕಲಿ ಅಥವಾ ಅನುಭವಿಸಿ ಕಲಿಯೆಂದು ಶಿಕ್ಷಣ ತಜ್ಞರೆಲ್ಲರು ನಮ್ಮೆಲ್ಲರಿಗೆ ಸಾರಿ ಸಾರಿ ಹೇಳಿದುದನ್ನು ಶಿಕ್ಷಕರಾದ ನಾವೆಲ್ಲರು ಅರಿತಿರಲು ಸಾಕು.

ನೋಡಿ ಕಲಿತದ್ದು ಶಾಶ್ವತವಲ್ಲವೆಂಬುದು ನಮ್ಮೆಲ್ಲರ ಅನುಭವಕ್ಕೆ ಬಂದ ಸಂಗತಿ. ಅದಕ್ಕಾಗಿಯೇ ಶಿಕ್ಷಣ ತಜ್ಞರು ಮಾಡಿ ಕಲಿಯೆಂದು ಹೇಳಿದರೆನ್ನುವ ಮಾತು ನಮ್ಮೆಲ್ಲರಿಗೆ ಅನುಭವವೇದ್ಯವಾಗಿರಲು ಸಾಕು. ಮಾಡಿ ಕಲಿತದ್ದು, ನೋಡಿ ಕಲಿತದ್ದಕ್ಕಿಂತ ಬಹು ಕಾಲ ನಮ್ಮ ಚಿತ್ತದಲ್ಲಿ ಮೂಡಿ ನಿಲ್ಲುತ್ತದೆಯಲ್ಲವೇ? ಕೇವಲ ಮಾಡಿ ಕಲಿತದ್ದಕ್ಕಿಂತ ಆಡಿ ಅನುಭವಿಸಿ ಕಲಿತದ್ದೇ ಮಿಗಿಲಾದುದೆಂದು ಇತ್ತೀಚಿನ ಶಿಕ್ಷಣ ತಜ್ಞರೆಲ್ಲರ ಅಭಿಪ್ರಾಯವಾಗಿದೆಯಲ್ಲವೆ?

ಆಡಿ ಅನುಭವಿಸಿ ಕಲಿಯುವದರಲ್ಲಿ ಒಂದು ಅನಿರ್ವಚನೀಯ ಆನಂದವಿದೆ. ಅಂಥ ಮಹದಾನಂದವನ್ನು ನೀಡಿ ನಮ್ಮೆಲ್ಲರ ಚಂಚಲ ಚಿತ್ತವನ್ನು ಸ್ಥಿರಗೊಳಿಸಿ, ನಮ್ಮಲ್ಲಿಯ ಭಾವ ಬುದ್ಧಿಗಳನ್ನು ಉದ್ರೇಕಿಸಿ, ಮನಸ್ಸಿನ ಮೇಲೆ ಎಂದೂ ಅಳಿಸಿಹೋಗದ ಪರಿಣಾಮವನ್ನುಂಟು ಮಾಡಿ ನಮಗೆ ಶಿಕ್ಷಣವೀಯುವ ಮಹತ್ವಿಧಾನ ಯಾವುದಾದರೂ ಇದ್ದರೆ, ಅದು ನಾಟಕವೆಂದೇ ಹೇಳಬೇಕು.

ನಾಟಕವು ಸಾಹಿತ್ಯದ ವಿವಿಧಾಂಗಗಳಾದ ಕಥೆ, ಕಾದಂಬರಿ, ಕಾವ್ಯ ಮತ್ತು ಪ್ರಬಂಧ ಇವುಗಳೆಲ್ಲಕ್ಕಿಂತ ಒಳ್ಳೆಯ ಪ್ರಭಾವಿಯಾದುದು. ಸಾಹಿತ್ಯವೆಂದರೆ, ಆದರ್ಶ ಜೀವನದ ನೈಜ ಚಿತ್ರಣವೆಂದು ಸಾಹಿತಿಗಳು ಹೇಳುವದುಂಟು. ಸಾಹಿತ್ಯವು ಆದರ್ಶ ಜೀವನವನ್ನು ಪ್ರತಿಬಿಂಬಿಸುವ ನಿಲುಗನ್ನಡಿಯಾದರೂ ಅದು ವಾಸ್ತವ ಜೀವನದಲ್ಲಿ ಬಂದೊದಗುವ ಅಡ್ಡಿ ಆತಂಕಗಳನ್ನು, ಲೋಪ-ದೋಷಗಳನ್ನು ಇದ್ದಕ್ಕಿದ್ದಂತೆ ಕಲೆಗೆ ವ್ಯತಿರಿಕ್ತವಾಗದ ರೀತಿಯಲ್ಲಿ ಎತ್ತಿ ತೋರಿಸಬಲ್ಲದು. ಆದುದರಿಂದ ಶಿಕ್ಷಣ ಕ್ರಮದಲ್ಲಿ ಸಾಹಿತ್ಯಕ್ಕೊಂದು ವಿಶಿಷ್ಟವಾದ ಸ್ಥಾನವಿದೆ.

ಸಾಹಿತ್ಯದ ಯಾವುದೇ ಅಂಗವನ್ನು ತಕ್ಕೊಂಡು ಅವಲೋಕಿಸಿದರೂ ಆ ಸಾಹಿತ್ಯಾಂಗಕ್ಕೊಂದು ವಿಶಿಷ್ಟವಾದ ಘಟನೆ, ಘರ್ಷಣೆ ಕಾರಣೀಭೂತವಾಗಿದ್ದುದು ಕಂಡುಬಾರದಿರದು. ನಾಟಕವು ನಡೆದ, ನಡೆಯುತ್ತಿರುವ ಘಟನೆಯ ಇಲ್ಲವೆ ಘರ್ಷಣೆಯ ಸರ್ವಾಂಗಗಳನ್ನು ಬಿಡಿ ಬಿಡಿಯಾಗಿ ನಮ್ಮ ಮುಂದಿಟ್ಟು ನಮ್ಮ ಗಮನವನ್ನು ಸೆರೆಹಿಡಿದು ನಮ್ಮನ್ನು ಕಲ್ಪನಾ ಪ್ರಪಂಚಕ್ಕೆ ಕರೆದೊಯ್ಯುತ್ತದೆ. ಬಳಿಕ ಅದು ನಮ್ಮ ನಮ್ಮ ಒಲುವು ನಿಲುವುಗಳಿಗನುಸರಿಸಿ ನಮ್ಮ ಮನಸ್ಸಿನ ಮೇಲೆ ಚಿರಕಾಲ ಉಳಿಯುವಂಥ ಪರಿಣಾಮವನ್ನುಂಟು ಮಾಡುತ್ತದೆ. ಈ ರೀತಿಯಾಗಿ ನಾಟಕವು ಇನ್ನುಳಿದ ಸಾಹಿತ್ಯಾಂಗಗಳು ಮಾಡಲಾರದ ಮಹತ್ಪರಿಣಾಮವನ್ನು ಮಾಡಿ ತೋರಿಸಿ ಪ್ರಭಾವಶಾಲಿಯಾಗಿದೆ.

ಗಾಂಧಿಯವರು ಹುಡುಗರಿದ್ದಾಗ ತಂದೆಯೊಡನೆ ಒಂದು ದಿನ ಹರಿಶ್ಚಂದ್ರ ನಾಟಕ ನೋಡಲು ಹೋಗಿದ್ದರಂತೆ, ಆ ದಿನ ನಾಟಕ ನೋಡಿ ಎಂದಿಗಿಂತಲೂ ಅತಿಯಾಗಿ ಕಣ್ಣೀರು ಕರೆದರಂತೆ, ಆ ನಾಟಕದ ಪರಿಣಾಮವು ಅವರ ನಿಷ್ಕಲ್ಮಷವಾದ ಮನಸ್ಸಿನ ಮೇಲೆ ಕೂಡಲೆ ಮೂಡಿ ನಿಂತಿದ್ದಲ್ಲದೆ ಅದು ಅವರ ಜೀವನದುದ್ದಕ್ಕೂ ಅವರ ಕೈ ಬಿಡದೆ ನಡೆಸಿಕೊಂಡು ಹೋಯಿತೆಂದೂ ಅವರನ್ನು ಜಗದ್ವಿಖ್ಯಾತ ಸತ್ಯಸಂಧರನ್ನಾಗಿ ರೂಪಿಸಲು ನೆರವು ನೀಡಿತೆಂದೂ ಮಹಾತ್ಮಾ ಗಾಂಧಿಯವರೇ ಒಂದೆಡೆಗೆ ಹೇಳಿದ್ದನ್ನು ನೆನೆಸಿಕೊಂಡರೆ ನಾಟಕದ ಮಹತಿಯು ಮನದಟ್ಟಾಗದಿರದು.

ಮಕ್ಕಳ ಮನಸ್ಸು ನಿಷ್ಕಲ್ಮಷವಾದುದು. ಅವರ ಮನಸ್ಸು ಬೆಣ್ಣೆಯ ಮುದ್ದೆಯ ಹಾಗೆ ಮೃದುವಾದುದು. ಅವರು ಬೆಳೆಯುತ್ತ ಹೋದ ಹೋದಂತೆ ಸುತ್ತಲಿನ ಪರಿಸರದ ಮೂಲಕ ಮೊದಲಿನ ಅವರ ಮನಸ್ಸಿನ ಪರಿಶುದ್ಧತೆ ಹಾಗೂ ಕೋಮಲತ್ವಗಳು ಕ್ರಮೇಣ ಮಾಯವಾಗುತ್ತ ಹೋಗುವ ಸಂಭವವೇ ಹೆಚ್ಚಾಗಿರುತ್ತದೆ. ಆದುದರಿಂದ ಮಕ್ಕಳ ಪಾಲಕರು— ವಿಶೇಷವಾಗಿ ಶಿಕ್ಷಕರು, ಶಿಕ್ಷಣ ಪ್ರೇಮಿಗಳು ಈ ಕಡೆಗೆ ತಮ್ಮ ವಿಶೇಷ ಗಮನ ಕೊಡುವದು ಹೆಚ್ಚು ಒಳಿತು.

ಮಕ್ಕಳನ್ನು ಸಚ್ಛೀಲರನ್ನಾಗಿ ಮಾಡುವದೇ ಶಿಕ್ಷಣದ ಪರಮೋಚ್ಚ ಗುರಿಯಾಗಿರುವದು. ಅದು ಕಾರಣ ಅವರಲ್ಲಿ ಶೀಲ ಸಂವರ್ಧನೆಯಾಗುವಂತೆ ನೋಡಿ ಕೊಳ್ಳುವದೇ ಶಿಕ್ಷಕರ ಆದ್ಯ ಕರ್ತವ್ಯವಾಗಿರುವದು. ಮಕ್ಕಳಲ್ಲಿ ತಿಳುವುಂಟಾಗಿ ಶೀಲಸಂವರ್ಧನೆಯಾಗುವದಕ್ಕಾಗಿ ಶಾಲೆಯಲ್ಲಿ ತಕ್ಕ ಏರ್ಪಾಡು ಮಾಡಬೇಕಾಗುತ್ತದೆ. ಈ ಕಾರ್ಯಕ್ಕಾಗಿ ಶಾಲೆಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಲ್ಲಡಕವಾಗುವ ನಾಟಕಗಳ ನೆರವು ತಕ್ಕೊಳ್ಳಲೇಬೇಕಾಗುತ್ತದೆ.

ಇತ್ತಿತ್ತಲಾಗಿ ಶಾಲೆಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರಾಶಸ್ತ್ಯ ದೊರೆಯುತ್ತಿರುವದೊಂದು ಸಮಾಧಾನದ ಸಂಗತಿಯಾಗಿದೆ. ಆದರೆ ಮಕ್ಕಳ ಅನುಭವ, ವಿಚಾರಸರಣಿಗಳಿಗೆ ನಿಲುಕುವ ನಾಟಕವನ್ನಾಗಲಿ, ಪ್ರಹಸನವನ್ನಾಗಲಿ ಆರಿಸಿಕೊಳ್ಳುವದು ಶಿಕ್ಷಕರಿಗೆ ಸಮಸ್ಯೆಯಾಗಿ ಕುಳಿತಿದೆ. ಕನ್ನಡದಲ್ಲಿ ಮಕ್ಕಳ ದೃಷ್ಟಿಯಿಟ್ಟುಕೊಂಡು ಬರೆದ ನಾಟಕಗಳಾಗಲಿ ಪ್ರಹಸನಗಳಾಗಲಿ ದೊರೆಯುವದು ತೀರ ವಿರಳವೆಂದು ಹೇಳಿದರೆ ತಪ್ಪಾಗಲಾರದು. ಶ್ರೀ ಬೆಟಗೇರಿ ಕೃಷ್ಣಶರ್ಮರು ('ಜಯಂತಿ' ಸಂಪಾದಕರು) ಈ ದಿಶೆಯಲ್ಲಿ ಪ್ರಯತ್ನ ಮಾಡಿ ಶಾಲಾ ಮಕ್ಕಳಿಗೆ ಅಭಿನಯಿಸಲು ಉಪಯೋಗವಾಗುವಂತೆ ಕೆಲವು ಪ್ರಹಸನಗಳನ್ನು ಬರೆದುದುಂಟು. ಅವುಗಳಲ್ಲಿ ಅವರು ಬರೆದ 'ಹುಡುಗಾಟ' ಎಂಬ ಪ್ರಹಸನವು ಒಳ್ಳೆಯ ಮಾರ್ಮಿಕವಾಗಿರುವದಲ್ಲದೆ ಹುಡುಗರ ಮನಸ್ಸನ್ನು ಸೆಳೆಯುವಂತಾಗಿದೆ.

ನಮ್ಮಲ್ಲಿ ಪ್ರತಿಭಾವಂತ ಶಿಕ್ಷಕರೂ ಇದ್ದಾರೆ. ಆದರೆ ಅವರಿಗೆ ಈ ದಿಶೆಯಲ್ಲಿ ಕಾರ್ಯಮಾಡುವ ಮನಸ್ಸಿಲ್ಲ. ಮತ್ತೆ ಕೆಲವರಿಗೆ ಮನಸ್ಸಿದ್ದ ಹಾಗೆ ತೋರಿದರೂ ಅವರಿಗೆ ನಾಟಕದ ತಂತ್ರದ ಪರಿಜ್ಞಾನವಿಲ್ಲ. ಕೇವಲ ನಾಟಕ ತಂತ್ರದ ಪರಿಜ್ಞಾನವಿದ್ದರೂ ಸಾಲದು. ಆಳವಾದ ಲೋಕಾನುಭವವೂ ನಾಟಕ ನಿರ್ಮಾತೃವಿಗೆ ಬೇಕಾಗುತ್ತದೆ. ಹೀಗೆ ಪ್ರತಿಭೆ, ಲೋಕಾನುಭವ ಮತ್ತು ನಾಟಕ ತಂತ್ರದ ಪರಿಜ್ಞಾನ ಇವೆಲ್ಲ ಮುಪ್ಪುರಿಗೊಂಡಾಗ ಸಾಹಿತ್ಯ ಕೃತಿಯು ಮೂಡಿ ನಿಲ್ಲುವದು. ಆಗ ನಾವು ಬಯಸುವ ನಾಟಕ, ಪ್ರಹಸನಗಳ ಕೊರತೆಯು ಹಿಂಗುವದು.

ನಾಟಕಗಳ ಕೊರತೆಯಿದೆಯೆಂದು ಅವು ಮೂಡಿ ಬರುವ ವರೆಗೆ ಕಾಯಬೇಕಿಲ್ಲ. ಶಿಕ್ಷಕರು, ಶಿಕ್ಷಣ ಪ್ರೇಮಿಗಳು ಮತ್ತು ನಾಟ್ಯ ಪ್ರೇಮಿಗಳು ಈ ದಿಶೆಯಲ್ಲಿ ಉತ್ಸಾಹದಿಂದ ಕಾರ್ಯಪ್ರವೃತ್ತರಾಗಬೇಕು. ಈಗಿನ ಪಠ್ಯಪುಸ್ತಕಗಳಲ್ಲಿ ಸೇರಿಸಲ್ಪಟ್ಟಿರುವ ಅನೇಕ ಸಾಹಿತ್ಯ ಕೃತಿಗಳು ಮಕ್ಕಳಿಗೆ ಅಭಿನಯಿಸಲು ಬರುವಂತಹವಿವೆ. ಶಿಕ್ಷಕರು ಅಂಥವುಗಳನ್ನು ಆಯ್ದುಕೊಂಡು ಮಕ್ಕಳಿಗೆ ಅಭಿನಯಿಸಲು ಮಾರ್ಗದರ್ಶನ ಮಾಡಬೇಕು. ಉದಾಹರಣಾರ್ಥವಾಗಿ, ಮಕ್ಕಳ ಪುಸ್ತಕದಲ್ಲಿಯ "ದೇವರ ಬಂಗಾರದ ಕುದುರೆ" ಈ ಶಿಶು ಗೀತವನ್ನು ವರ್ಗದ ಮಕ್ಕಳೆಲ್ಲ ಕೂಡಿ ಸಾಭಿನಯವಾಗಿ ಹಾಡಿ ತೋರಿಸಬಹುದಾಗಿದೆ. ಅದರಂತೆ "ಗಿಡಗಳ ಮೇಲಾಟ"ವೆಂಬ ಪಾಠವನ್ನೂ ಅಭಿನಯಿಸಿ ತೋರಿಸುವಂತಿದೆ. ಕೆಲವೊಂದು ಸಂಗತಿ, ವ್ಯಕ್ತಿ ಮತ್ತು ಪ್ರಾಣಿಗಳ ಕುರಿತು ಶಿಕ್ಷಕರೇ ಮಕ್ಕಳ ಭಾಷೆಯಲ್ಲಿ ಸರಸವಾಗಿಯೂ, ಸುಂದರವಾಗಿಯೂ ಸಂಭಾಷಣೆಗಳನ್ನು ರಚಿಸಿಕೊಳ್ಳಬಹುದು. ಅಂಥ ಕೃತಿಗಳನ್ನು ಮಕ್ಕಳಿಗೆ ಹೇಳಿಕೊಟ್ಟು ಅಭಿನಯಿಸಲು ಹಚ್ಚಬೇಕು.

ಮೈಸೂರ ರಾಜ್ಯ ಸರಕಾರ ಶಿಕ್ಷಣ ಖಾತೆ

ಪ್ರಕಟನೆ

ನಂ. ಇಡಿ. ೩೧. S. ಎಮ್‌ಸಿ. ೫೮ ಬೆಂಗಳೂರ
ದಿನಾಂಕ:— ೩೧ ಅಕ್ಟೋಬರ ೧೯೫೮.

ಪರೀಕ್ಷೆಗಳ ಕಮಿಶನರು ಕಳಿಸಿದ ಸೂಚನೆಗೆ ಮಂಜೂರ ಕೊಡಲಾಗಿದೆ. ಹಳೇ ಮೈಸೂರ ವಿಭಾಗದಲ್ಲಿ ಶಿಕ್ಷಣ ಖಾತೆಯಿಂದ ನಡೆಸಲ್ಪಟ್ಟ ಸಾರ್ವಜನಿಕ ಪರೀಕ್ಷೆಗಳಿಗೆ ಕೂಡ್ರುವ ಸೆಡ್ಯೂಲ್ಡ ಜಾತಿಗಳ ಮತ್ತು ಸೆಡ್ಯೂಲ್ಡ ಟ್ರಾಯಿಬಗಳ ಉಮೇದುವಾರರಿಗೆ ಪರೀಕ್ಷೆ ಫೀಯಿಂದ ಮುಕ್ತಮಾಡಲಾಗಿದೆ. ಅವಧಿ ಮೂರು ವರ್ಷ—೧೯೫೮ ಸಪ್ಟೆಂಬರದಿಂದ ೧೯೬೧ ಪೂರ್ಣ. ಇದೇ ಪ್ರಕಾರ ನವ ಮೈಸೂರ ರಾಜ್ಯಕ್ಕೆ ಸೇರಿಸಲ್ಪಟ್ಟ ಬೇರೆ ವಿಭಾಗಗಳಲ್ಲಿಯು, ಇಂಥ ಉಮೇದವಾರರಿಗೂ ಈ ನಿಯಮವು ೧೯೬೦ನೆಯ ಮಾರ್ಚದಿಂದ ಅನ್ವಯಿಸಲ್ಪಡುವದು.

ಮೈಸೂರ ರಾಜ್ಯದ ರಾಜ್ಯಪಾಲರ ಆದೇಶದ ಮೇರೆಗೆ,

ಸಹಿ : Sd– ಅಹಮ್ಮದ ಅಬ್ದುಲ್ ಅಜಿ

ಮೈಸೂರ ಸರಕಾರ ಶಿಕ್ಷಣ ಖಾತೆಯ ಅಂಡರ ಸೆಕ್ರೇಟರಿ

" ಶಿಕ್ಷಣದಲ್ಲಿ ಪ್ರವಾಸ ಪದ್ಧತಿ "

ಲೇಖಕರು:— ಶ್ರೀ ಮ. ಬ. ಶ್ಯಾಡಗುಪ್ಪಿ, ಅ. ಮಾ. ದೇವಿಹೊಸೂರ

ಶಾಲೆಯು ಒಂದು ಸಾಮಾಜಿಕ ಸಂಸ್ಥೆ. ಅಲ್ಲಿ ಕೂಡಿ ಬಾಳುವ ಕಲೆಯನ್ನು ಮಕ್ಕಳು ಪ್ರತ್ಯಕ್ಷ ಜೀವನದ ಮುಖಾಂತರ ಅರಿತುಕೊಳ್ಳುವರು. ಮಕ್ಕಳ ಜೀವನಕ್ಕೆ ಸಂಬಂಧಿಸಿದ ಎಷ್ಟೋ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ವಿಷಯಗಳೂ, ಚಟುವಟಿಕೆಗಳೂ ಅಭ್ಯಾಸ ಪತ್ರಿಕೆಯಲ್ಲಿ ನಮೂದಿಸಲ್ಪಟ್ಟಿವೆ. ಇಂದ್ರಿಯ ಗೋಚರವಾದ ಬಾಹ್ಯ ವಸ್ತುಗಳನ್ನು ತಿಳಿದುಕೊಳ್ಳುವಾಗ ಅವುಗಳ ಪ್ರತ್ಯಕ್ಷ ಅನುಭವ ಬೇಕು, ಅಂದಲೇನೆ ಜ್ಞಾನದ ವಿಕಾಸವಾಗುವದು. ಪಂಚೇಂದ್ರಿಯಗಳೇ ಸರ್ವ ಜ್ಞಾನಕ್ಕೆ ಆಧಾರಗಳು, ಇಂದ್ರಿಯಗಳು ಜ್ಞಾನದ ದ್ವಾರಗಳು, ಪಂಚೇಂದ್ರಿಯಗಳನ್ನು ಏಕಕಾಲಕ್ಕೆ ಉಪಯೋಗಿಸುವದರಿಂದ ವಸ್ತುವಿನ ಸಂಪೂರ್ಣ ಜ್ಞಾನವು ಉಂಟಾಗುತ್ತದೆ. ಅಂತೆಯೇ ಶಿಕ್ಷಣ ಪ್ರಪಂಚದಲ್ಲಿ ಮಾಂಟೇಸರಿ ಪದ್ಧತಿ, ಬಾಲೋದ್ಯಾನ ಪದ್ಧತಿ, ಡಾಲ್ಟನ್ ಪದ್ಧತಿ ಮುಂತಾದವುಗಳಿಗೆ ಅಗ್ರಸ್ಥಾನ ದೊರೆತಿದೆ. ಕಾರಣ ಈ ನಮ್ಮ ಹೊಸ ಶಿಕ್ಷಣದಲ್ಲಿ ಚಟುವಟಿಕೆಗಳೇ ಶಿಕ್ಷಣದ ಮಾಧ್ಯಮಗಳಾಗಿವೆ. ಈ ಚಟುವಟಿಕೆಗಳಲ್ಲಿ ಪ್ರವಾಸವೂ ಒಂದು ಉತ್ತಮ ಚಟುವಟಿಕೆಯಲ್ಲಿದೆ; ಒಂದು ಪದ್ಧತಿಯೂ ಆಗಿದೆ.

ಆಯಾ ಹಳ್ಳಿಗಳ ನೆರೆಹೊರೆಯಲ್ಲಿರುವ ಗುಡ್ಡಗಳು, ಹೊಳೆ-ಹಳ್ಳಗಳು, ಕೆರೆ-ಹೊಂಡಗಳು, ಕೋಟೆ-ಕೊತ್ತಳಗಳು ಮುಂತಾದವುಗಳನ್ನು ನಿರೀಕ್ಷಿಸಲು ಚಿಕ್ಕ ಚಿಕ್ಕ ಪ್ರವಾಸಗಳನ್ನು ಅನುಕೂಲವಿದ್ದಲ್ಲೆಲ್ಲ ಕೈಕೊಳ್ಳಬಹುದು. ಇಂಥ ಪ್ರವಾಸಗಳಿಂದ ಜೀವನದ ಎಲ್ಲ ವಿಷಯಗಳ ಜ್ಞಾನವನ್ನು ಮಾಡಿಕೊಳ್ಳಬಹುದು. ಉದಾಹರಣೆಗಾಗಿ ಚಿಕ್ಕ ಮಕ್ಕಳಿಗೆ ಭೂಗೋಲ ವಿಷಯದ ಜ್ಞಾನ ಮಾಡಿಕೊಡುವದಿದೆ ಎಂದು ತಿಳಿದರೆ, ಒಂದು ದೊಡ್ಡ ಮಳೆ ಬಿದ್ದಮೇಲೆ ಮಕ್ಕಳನ್ನು ಊರ ಹೊರಗೆ ಕರೆದುಕೊಂಡು ಹೋಗಿ ಭೂಮಿಯ ಏರಿಳಿತದ ಕಲ್ಪನೆಯನ್ನು ತಂದು ಕೊಟ್ಟು ಮಳೆಯ ಪರಿಣಾಮವೇನಾಯಿತೆಂಬುದನ್ನು ಹೇಳಬಹುದು. ಸಮೀಪದ ಕೆರೆಗೆ ಪ್ರವಾಸ ಇಟ್ಟುಕೊಂಡಿದ್ದರೆ ಮಧ್ಯಾಹ್ನದ ಊಟವಾದ ಮೇಲೆ ಎಲ್ಲ ಮಕ್ಕಳಿಗೆ ಒಂದು ಕಾಲನ್ನು ನೀರಿನಲ್ಲಿ ಮತ್ತೊಂದು ಕಾಲನ್ನು ನೆಲದ ಮೇಲೆ ಇಟ್ಟು ನೀರು-ನೆಲಗಳ ಮೇಲಿನ ಉಷ್ಣತೆಯಲ್ಲಿ ಅವರು ಅನುಭವಿಸಿದ ಹೆಚ್ಚು ಕಡಿಮೆಯನ್ನು ಕಂಡುಹಿಡಿಯಲು ಹೇಳಬಹುದು. ಇದರ ಪರಿಣಾಮದಿಂದ ಕೆಳಗಿನ ವರ್ಗದ ಮಕ್ಕಳಿಂದ ಹಿಡಿದು ಮೇಲಿನ ವರ್ಗದ ಮಕ್ಕಳವರೆಗೂ ನೀರು-ನೆಲಗಳು ಕಾಯುವದು, ಆರುವದು ಇವುಗಳ ಹೆಚ್ಚು ಕಡಿಮೆಯ ಮೇಲೆಯೇ ಮಳೆಗಾಳಿಗಳು ಅವಲಂಬಿಸಿವೆ. ಮತ್ತು ಮಳೆಗಾಳಿಗಳ ಮೇಲೆಯೇ ನಮ್ಮ ಅನ್ನ, ವಸ್ತ್ರ, ಆಸರ, ಉದ್ಯೋಗ ಮೊದಲಾದವುಗಳೆಲ್ಲ ನಿಂತಿವೆ ಎಂಬ ವಿಷಯಗಳನ್ನು ಸಮನ್ವಯಗೊಳಿಸಿ ಹೇಳಬಹುದು. ಮತ್ತು ಕೆರೆಯಲ್ಲಿಯ ಜಲಚರ ಪ್ರಾಣಿಗಳ ಸಮಗ್ರ ಪರಿಚಯವನ್ನು ಮಕ್ಕಳ ಗಮನಕ್ಕೆ ತಂದುಕೊಡಬಹುದು. ಅವುಗಳ ಈಜುವಿಕೆ, ಉಸಿರಾಟ, ಆಹಾರ-ವಿಹಾರಗಳ ಬಗ್ಗೆ ಕಲ್ಪನೆ ಮಾಡಿಕೊಡಬಹುದು. ನೀರಿನಲ್ಲಿ ಬೆಳೆಯುವ ವನಸ್ಪತಿಗಳ ಬಗ್ಗೆಯೂ ಸಂಪೂರ್ಣ ಜ್ಞಾನವನ್ನು ನಿದರ್ಶನಕ್ಕೆ ತರಬೇಕು. ಅಪ್ರತ್ಯಕ್ಷ ರೀತಿಯಿಂದ ಕೆರೆಯಲ್ಲಿಯ ನೀರಿನ ಸಂಗ್ರಹದ ಹೆಚ್ಚು ಕಡಿಮೆಯಿಂದ ಬಾಷ್ಪವಾಗುವ ಕ್ರಮ ಹೇಳಿ; ಮಳೆ ಬೀಳುವ ರೀತಿಯನ್ನು ಸ್ಥೂಲಮಾನ ದೃಷ್ಟಿಯಿಂದ ಮಕ್ಕಳ ಕಲ್ಪನೆಗೆ ತಂದುಕೊಡಲು ಸಹಾಯವಾಗುವದು.

ಸಮೀಪದ ಒಂದು ಗುಡ್ಡಕ್ಕೆ ಚಿಕ್ಕದೊಂದು ಪ್ರವಾಸವನ್ನು ಇಟ್ಟುಕೊಂಡಿದ್ದೇವೆಂದು ತಿಳಿದರೆ ಗುಡ್ಡವನ್ನು ಹತ್ತುವಾಗ ಸ್ವಲ್ಪ ಮುಂದಕ್ಕೆ ಬಾಗಬೇಕಾಗುವದು; ಇಳಿಯುವಾಗ ಸ್ವಲ್ಪ ಹಿಂದಕ್ಕೆ ಬಾಗಬೇಕಾಗುವದು. ಈ ಹೆಚ್ಚು ಕಡಿಮೆಯೇ ಪೃಥ್ವಿಯ ಗುರುತ್ವಾಕರ್ಷಣವನ್ನು ಅರಿಯಲು ಯೋಗ್ಯ ಸಮಯವಾಗಿದೆ. ಇದೇ ವೇಳೆಯಲ್ಲಿ ಪೃಥ್ವಿಯು ಸೂರ್ಯನ ಸುತ್ತಲೂ, ಚಂದ್ರನು ಪೃಥ್ವಿಯ ಸುತ್ತಲೂ ಏಕೆ ತಿರುಗುತ್ತಿವೆ ಎಂಬುದನ್ನು ಅಪ್ರತ್ಯಕ್ಷ ರೀತಿಯಿಂದ ಮಕ್ಕಳಿಗೆ ತಿಳಿಸಲು ಸಹಾಯವಾಗುತ್ತವೆ. ಸೃಷ್ಟಿಯ ನಿರೀಕ್ಷಣೆಯಿಂದಲೇ ನಮ್ಮ ಮಕ್ಕಳೆಲ್ಲ ಶಕ್ಯವಿದ್ದಷ್ಟು ಭೌಗೋಲಿಕ ಜ್ಞಾನವನ್ನು ಪಡೆಯುವದು ಒಳಿ

ತಲ್ಲವೇ? ಸ್ವತಂತ್ರ ಅನುಭವದಿಂದ ಪಡೆದ ಜ್ಞಾನವು ಶಾಶ್ವತವಲ್ಲವೇ?

ಇನ್ನು ಪ್ರವಾಸದಿಂದಲೂ, ವ್ಯಕ್ತಿ ಸಂಪರ್ಕದಿಂದಲೂ ಒಬ್ಬರಿಗೊಬ್ಬರ ಅನುಭವ ದೊರೆತು ಒಂದು ರಾಷ್ಟ್ರದ, ಒಂದು ನಾಡಿನ, ಒಬ್ಬ ವ್ಯಕ್ತಿಯ ಸಂತತಿಯ ಕಲೆ, ಸಂಸ್ಕೃತಿ, ಸಾಹಿತ್ಯ, ಸಂಪ್ರದಾಯ, ದೃಷ್ಟಿ, ಧ್ಯೇಯ ಇವು ಮತ್ತೊಂದು ರಾಷ್ಟ್ರದ, ನಾಡಿನ, ವ್ಯಕ್ತಿಯ ಸಂತತಿ, ಸಂಪ್ರದಾಯದವರಿಗೆ ಪರಿಚಯವಾಗುತ್ತವೆ. ನಮ್ಮ ಹಿಂದಿನವರ ಕಲಾಕೃತಿ, ಸಾಹಿತ್ಯ, ಸಂಸ್ಕೃತಿ, ಸಂಘ ಸಂಸ್ಥೆಗಳನ್ನು ನೋಡಿ ಅನುಭವ ಪಡೆಯುತ್ತೇವೆ. ಇದಲ್ಲದೆ ನಮ್ಮ ಪೂರ್ವಜರಿಂದ ನಿರ್ಮಾಣಗೊಂಡ ಗುಡಿ ಗೋಪುರ, ಕೋಟಿಕೊತ್ತಲಗಳಲ್ಲಿ ಹುದುಗಿದ ವಾಸ್ತವ ಕಲೆಯ ಅದ್ಭುತ ಚಿತ್ರದ ಪ್ರತ್ಯಕ್ಷ ಜ್ಞಾನ ಉಂಟಾಗುತ್ತದೆ. ಹಾಗೂ ಜನರು ಮಾತನಾಡುವ ರೀತಿ-ನೀತಿ, ಆಹಾರ-ವಿಹಾರ, ಉಡುಪು-ತೊಡುಪು ಮುಂತಾದ ಜೀವನದ ಪದ್ಧತಿಗಳ ಅನುಭವ ಹೊಂದಿ ಒಂದು ಸಮಾಜದಿಂದ ಇನ್ನೊಂದು ಸಮಾಜಕ್ಕೂ, ಇಂದಿನ ಜನಾಂಗದಿಂದ ಮುಂದಿನ ಜನಾಂಗಕ್ಕೂ ಹರಿದು ಬರುವ ಅನುಭವ ಶ್ರೇಣಿಯ ನಿರ್ಮಾಣದಲ್ಲಿ ಸಮಕಾಲೀನ ವ್ಯಕ್ತಿಗಳ ವಯಸ್ಸಿನ ಹಾಗೂ ಮನಸ್ಸಿನ ಭಿನ್ನತೆಯ ಸಂಗಮಕ್ಕೆ ಬಹುವಾಗಿ ನೆರವಾಗುತ್ತದೆ. ಪ್ರತಿಯೊಬ್ಬರ ಜೀವನದಲ್ಲಿಯೂ ಹಳೇ ಅನುಭವಗಳ ಪರಿಚಯವೂ ಹೊಸ ಅನುಭವಗಳ ಸೃಷ್ಟಿಯೂ ಸಮರಸವಾಗುತ್ತವೆ. ಮತ್ತು ಮೇಲ್ಕಾಣಿಸಿದ ನೈಸರ್ಗಿಕ ಚಟುವಟಿಕೆಗಳಿಂದ ಭೂ-ಗಾಳಿಗಳ ವಸ್ತುಸ್ಥಿತಿಯ ಪರಿಚಯವಾಗಿ ಮನಸ್ಸು ಆನಂದಗೊಳ್ಳುತ್ತದೆ. ಮತ್ತು ಅವುಗಳನ್ನು ಮಾನವನ ಕಲ್ಯಾಣಕ್ಕಾಗಿ ಪರಿವರ್ತಿಸುವ ಸಂಶೋಧನ ಪ್ರವೃತ್ತಿಯು ಉಗಮಗೊಳ್ಳುತ್ತದೆ. ಮಾನವನಲ್ಲಿ ಸಾಮುದಾಯಿಕ ಮಹತ್ವದ ತತ್ವಗಳನ್ನು ಈಗಿನಿಂದಲೇ ಎಳೆಯ ಮಕ್ಕಳಲ್ಲಿ ಬಿತ್ತಿದಂತಾಗುತ್ತದೆ. ಇಂಥ ಉದಾತ್ತ ತತ್ವಗಳು ಮನುಷ್ಯನಲ್ಲಿ ನೆಲೆಸಬೇಕಾದರೆ ಅದರ ಹದಗಾಲವು ಬಾಲ್ಯಾವಸ್ಥೆಯಲ್ಲವೇ? ಇಂದಿನ ಬಾಲಕರು ನಾಳಿನ ನಾಗರಿಕರಲ್ಲವೇ? ಅದನ್ನು ತಂದುಕೊಡುವದು ಶಿಕ್ಷಕರಾದವರ ಕರ್ತವ್ಯ. ಆದ್ದರಿಂದ ಪ್ರವಾಸವು ಒಂದು ಮನರಂಜನೆಯಾಗಿರದೆ ಉತ್ತಮ ಚಟುವಟಿಕೆಯೂ ಹಾಗೂ ಶಿಕ್ಷಣ ಪದ್ಧತಿಯೂ ಆಗಿದೆ.

—ಜೈ ಹಿಂದ—

ಕತ್ತಲೆಯಿಂದ ಬೆಳಕಿನೆಡೆಗೆ!

ಲೇಖಕರು :— ಶ್ರೀ ಬಿ. ವ್ಹಿ. ಮಡಿವಾಳರ, ಕನ್ನಡ ಸ. ಟ್ರೇ. ಕಾ ಕುಮಟಾ

ಅಸತೋಮಾ ಸದ್ಗಮಯ |
ತಮಸೋಮಾ ಜ್ಯೋತಿರ್ಗಮಯ ||

ಇದು ವಿಚಾರಕ್ರಾಂತಿಯ ಯುಗ. ನಿತ್ಯವೂ ನವೀನತಮ ಶೋಧಗಳು ನಡೆಯುತ್ತಲಿವೆ. ಜಗತ್ತು ಪ್ರಗತಿಯ ಮಾರುಕಟ್ಟೆಯಲ್ಲಿ ನಿಂತಿದೆ. ಜಗತ್ತಿನ ಬಹು ಭಾಗ ಉನ್ನತಿಯ ಸೋಪಾನ ಏರಿ ಸೌಖ್ಯದ ಸಗ್ಗವನ್ನು ಪಡೆಯಲು ಯತ್ನಿಸುತ್ತಿದೆ. ಹಳತನ್ನೆಲ್ಲ ಹೋಳಿಯಾಡಿ ಹೊಸತನ್ನು ಬರಮಾಡಿಕೊಂಡು ವ್ಯಕ್ತಿ ಹಾಗೂ ಸಮಾಜ ಜೀವನದಲ್ಲಿ ನವ ನವಾನ್ವೇಷಶಾಲಿಯಾಗಿ ವಸಂತಗಾನವನ್ನು ಮಾಡಲು ಯತ್ನಿಸುತ್ತಲಿದೆ; ಆ ದಿಶೆಯಲ್ಲಿ ಸಫಲತೆಯನ್ನೂ ಪಡೆಯುತ್ತಲಿವೆ. ದೇಶದ ರಾಜಕೀಯ, ವೈಚಾರಿಕ, ವೈಜ್ಞಾನಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ರಂಗಗಳಲ್ಲಿ ವೈವಿಧ್ಯಪೂರ್ಣ ಬದಲಾವಣೆಗಳನ್ನು ಮಾಡಿಕೊಂಡಿದೆ, ದೇಶದ ವಿವಿಧ ಸಮಸ್ಯೆಗಳಲ್ಲಿ ಶೈಕ್ಷಣಿಕ ಸಮಸ್ಯೆ ಮಹತ್ವದ್ದಾಗಿದೆ. ಶಿಕ್ಷಣ ಪ್ರಗತಿ ಇರುವ ದೇಶವು ಪ್ರಗತಿಪರ ರಾಷ್ಟ್ರವೆಂದು ಕರೆಸಿಕೊಳ್ಳಲ್ಪಡುತ್ತದೆ. ಶೈಕ್ಷಣಿಕ ಸಮಸ್ಯೆಗಳ ಯಶಸ್ವಿ ಪರಿಹಾರವೇ ರಾಷ್ಟ್ರದ ಎಲ್ಲ ಸಮಸ್ಯೆಗಳ ಪರಿಹಾರವಾಗಿದೆ; ಹಾಗೂ ಸರ್ವಾಂಗೀಣ ಉನ್ನತಿಯ ಸಾರವಾಗಿದೆ! ಈ ಕಾರಣದಿಂದ ಭಾರತವೂ ಪುರಾತನ ಸಂಸ್ಕೃತಿಯ ತಳಹದಿಯ ಮೇಲೆ ಆಧುನಿಕ ಜಗತ್ತಿಗೆ ಹೊಂದಿಕೊಳ್ಳುವಂತಹ ಮಹತ್ವದ ಮಾರ್ಪಾಟುಗಳನ್ನು ಶಿಕ್ಷಣ ರಂಗದಲ್ಲಿ ಮಾಡಿ

ಕೊಂಡಿದೆ. ಹಾಗೆ ಮಾಡುವದು ಅನಿವಾರ್ಯವಾಗಿತ್ತು. ಸ್ವಾತಂತ್ರ್ಯನಂತರ ಅದರ ಅವಶ್ಯಕತೆ ಇನ್ನೂ ಹೆಚ್ಚಿ ನಿರ್ಧಾರದ ಅಡಿ ಇಡಬೇಕಾಯಿತು. ಇದಕ್ಕೆ ಸಬಲ ಕಾರಣಗಳಿಲ್ಲದಿಲ್ಲ.

ಸುಮಾರು ೨೦೦ ವರ್ಷಗಳಿಗಿಂತಲೂ ಹೆಚ್ಚುಕಾಲ ಹಿಂದುಸ್ತಾನದಲ್ಲಿ ರಾಜ್ಯವಾಳಿದ ಆಂಗ್ಲರ ಕಾಲದ ಶಿಕ್ಷಣದಲ್ಲಿ ಮಾನವೀಯತೆಯನ್ನಾಗಲೀ, ರಾಷ್ಟ್ರ ಗೌರವವನ್ನಾಗಲಿ ಮತ್ತು ಆತ್ಮಾಭಿಮಾನವನ್ನಾಗಲಿ ತುಂಬಿ ಜೀವನವು ಚೈತನ್ಯಯುಕ್ತವಾಗುವಂತಹ ಏರ್ಪಾಡುಗಳಿರಲಿಲ್ಲ. ಕೇವಲ ಮಗು ಪುಸ್ತಕದ ಕ್ರಿಮಿಯಾಗಿ ಜ್ಞಾನ ಸಂಪಾದನೆ ಮಾಡಿದರೆ ಸಾಕು; ಶಿಕ್ಷಕರು ಹೇಳಿದಷ್ಟು ಕೇಳಲೂ ಬೇಕು. "ಮಗುವಿನ ಮನಸ್ಸು ತೆರೆದ ಮನಸ್ಸು, ಅದು ಶುಭ್ರ ವಸ್ತ್ರ, ಬರಿದಾದ ಘಟ" ಅದರಲ್ಲಿ ನಾವೇನು ತುಂಬ ಬಹುದು ಎಂಬ ಭಾವನೆ ಪ್ರಬಲವಾಗಿತ್ತು. ಶಿಕ್ಷಕರೇ ಪ್ರಧಾನ ಘಟಕಗಳಾಗಿ ಮಗುವನ್ನು ಯಂತ್ರದಂತೆ ನಡೆಸಿಕೊಳ್ಳಬಲ್ಲವರಾಗಿದ್ದರು. ಈ ಕಾರಣದಿಂದ ಮಗುವಿನ ಅಂತಶ್ಶಕ್ತಿಗೆ ಬೆದರಿಕೆಯ ಸಂಕೋಲೆ ಬಿಗಿದು, ವಿಶಾಲ ವೈಚಾರಿಕ ರಚನಾತ್ಮಕ ಕೃತಿಗೆ ಆತಂಕ ಉಂಟಾಗಿತ್ತು. ಮಗುವಿನ ಸುಪ್ತ ಶಕ್ತಿಗೆ ಚಾಲನೆ ಕೊಟ್ಟು ಮಾನವೀಯ ಮೌಲ್ಯಗಳನ್ನು ಉದ್ದೀಪನಗೊಳಿಸಿ ಸಮಾಜಕ್ಕೆ ಆದರ್ಶ ನಾಗರಿಕರನ್ನಾಗಿ ಮಾಡುವ ಶಿಕ್ಷಣದ ಧ್ಯೇಯ ಆಗಿರಲಿಲ್ಲ. ಮಗು ತಾಯಿಯ ಗರ್ಭದಲ್ಲಿರುವಾಗಲೇ ಸಂಸ್ಕಾರಹೊಂದುತ್ತದೆ. ನಿಸರ್ಗದೊಡನೆ ಕೂಡಿ ಅಮೂಲ್ಯ ಸಂಗತಿಗಳನ್ನು ಕಲಿತುಕೊಳ್ಳುತ್ತದೆ. ಸಮಾಜದಲ್ಲಿ ಸೇರಿ ಆಚಾರ ವಿಚಾರಗಳ ಪಾಠ ಕಲಿಯುತ್ತದೆ; ಎಂಬ ಮಾತಿನ ಕಲ್ಪನೆ ಕಾರ್ಯರೂಪದಲ್ಲಿರಲಿಲ್ಲ. ಶಿಕ್ಷಣವು ಅಖಂಡವಾಗಿದೆ. ಅದು ಜೀವನದ ತುಂಬ ಹರಿಯುತ್ತದೆ. ಅದಕ್ಕೆ ಬೇಕಾಗುವ ಆಶೆ ಆಕಾಂಕ್ಷೆಗಳ ಆಸಕ್ತಿಯನ್ನು ಜಾಗೃತಗೊಳಿಸಬೇಕಾಗುತ್ತದೆ. ಇಲ್ಲಿ ಮಗುವೇ ಪ್ರಧಾನ. ಮಗುವಿನ ಅಭಿರುಚಿ ಮನದ ಸ್ಥಿತಿಯನ್ನು ಅರಿತು ತಕ್ಕ ಚಾಲನೆ ಕೊಡಬೇಕಾಗುತ್ತದೆ. ಇಂಥ ವೈಶಿಷ್ಟ್ಯ ಇಂದಿನ ಶಿಕ್ಷಣದಲ್ಲಿದೆ. ಮಗು ನಾಲ್ಕು ಗೋಡೆಗಳ ಆವರಣದ ಮಧ್ಯದಲ್ಲಿ ಶಿಕ್ಷಕರು ಮಾಡಿದ ಸುಗ್ರೀವಾಜ್ಞೆಗಳನ್ನು ಪಾಲಿಸುವ ಪ್ರಮೇಯವೇ ಈಗಿಲ್ಲ. ಕೇವಲ ಬೌದ್ಧಿಕ ವಿಕಾಸವಷ್ಟೇ ಜೀವನಕ್ಕೆ ಪರಿಪೋಷಕ ಆಗಲಾರದು. ಬೆದರಿಕೆಯಿಂದ ಕಲಿಸಿದ ವಿದ್ಯೆ ಬಹು ದಿನ ಚಿತ್ತಪಟಲದಲ್ಲಿ ಉಳಿಯಲಾರದು. ಮಗುವಿಗೆ ಸ್ವಾತಂತ್ರ್ಯವಿತ್ತು, ಅವನ ರಚನಾತ್ಮಕ ಪ್ರವೃತ್ತಿಗೆ ಯೋಗ್ಯ ಮಾರ್ಗದರ್ಶನ ಮಾಡಿ 'ಮಾಡಿ ಕಲಿಯುವ' ಮೂಲ ಮಂತ್ರ ಇಂದಿನ ಶಿಕ್ಷಣದಲ್ಲಿ ಹಾಸುಹೊಕ್ಕಾಗಿದೆ. ಅದು ಬಹುಕಾಲ ಬಾಳಬಲ್ಲದು. ಸ್ವಾನುಭವದ ಶಕ್ತಿಯ ಬಗ್ಗೆ ಬೇರೆಹೇಳಬೇಕಾಗಿಲ್ಲ. ಸಾಂಪ್ರದಾಯಿಕವೆಂದು ಚಿಕಿತ್ಸಕ ಬುದ್ಧಿಗೆ ಜಾಡ್ಯದ ಪರದೆ ಎಳೆಯುವ ಪ್ರಸಂಗವೇ ಈಗಿಲ್ಲ. ಸಾಂಪ್ರದಾಯಿಕ ಸ್ಥಾನದಲ್ಲಿ ಸಂಶೋಧನಾತ್ಮಕ ಕ್ರಿಯೆ ನಿಂತಿದೆ. ಯಾಂತ್ರಿಕತೆಗೆ ಇಂಬಿಲ್ಲ.

ಶಾಲೆ, ಮನೆ, ಸಮಾಜಗಳು ಬೇರೆ ಬೇರೆಯಾಗಿ ತೋರಬಾರದು. ನಿತ್ಯಜೀವನಕ್ಕೆ ಸಂಬಂಧಿಸಿದ ಅನೇಕ ಸನ್ನಿವೇಶ, ಘಟನೆ, ಸಂಗತಿಗಳಿಗೂ ಶಾಲೆಯ ವಾತಾವರಣಕ್ಕೂ ನೆಲದಾಗಸದ ಅಂತರವಿರಕೂಡದು. ಮಗು ಮನೆಯಲ್ಲಿದ್ದಂತೆ, ತನ್ನ ತಾಯಿಯೊಂದಿಗೆ ಸಲುಗೆಯ ಮಾತುಗಳನ್ನಾಡುವಂತೆ ಶಾಲೆಯಲ್ಲಿಯೂ ಆಡುತ್ತಿರಬೇಕು, ಮಾತಾಡುತ್ತಿರಬೇಕು. ಆಗ ಮಗುವಿನ ಆಸಕ್ತಿ ಕಂಡುಹಿಡಿದು ಶಿಕ್ಷಕನು ಯೋಗ್ಯ ನಿರೂಪಣೆ ಮಾಡಬೇಕು. ಅಂದಾಗ ಮಾತ್ರ ಸಮಾಜ ಜೀವನ, ಶಾಲೆ ವಾತಾವರಣಗಳ ಭಿನ್ನತೆ ಕಡಿಮೆಯಾಗಬಲ್ಲದು. ಈ ತತ್ವ ಇಂದಿನ ಶಿಕ್ಷಣದಲ್ಲಿ ಒಳಗೊಂಡಿದೆ. ಆದುದರಿಂದ ಶಾಲೆ ಭೀತಿಯ ಭವನವಲ್ಲ; ಅದು ಮಾತು ಕೃತಿ ಮೇಳದ ಮಹಾ ಮಂದಿರ! ಎನ್ನುವದು ಸ್ಪಷ್ಟವಾಗಿದೆ. ಈ ಕಾರಣದಿಂದ ಮಗು ಸಮಾಜ ಜೀವನದ ಅನೇಕ ಸಂಗತಿಗಳನ್ನು ಸುಸಂಬದ್ಧ ರೀತಿಯಲ್ಲಿ ಕಲಿತುಕೊಳ್ಳಬಲ್ಲ, ವಿಕಸನ ಮಾಡಿಕೊಳ್ಳಬಲ್ಲ, ಸಮಾಜದ ಪರಿಸರಕ್ಕೆ ಹೊಂದಿಕೊಂಡು ಪೋಷಕನಾಗಿ ನಿಲ್ಲಬಲ್ಲ!

ಭಾರತವು ಕೃಷಿಪ್ರಧಾನ ದೇಶ. ಇಂದಿನ ಏರುತ್ತಿರುವ ಜನಸಂಖ್ಯೆ ನಾಡಿನ ನಾಯಕರಿಗೆ ಮಹಾ ಸಮಸ್ಯೆಯಾಗಿದೆ. ಎಷ್ಟೇ ಕಾರಖಾನೆ, ಕಾಮಗಿರಿ ಕಚೇರಿಗಳನ್ನು ಪ್ರಾರಂಭಿಸಿದರೂ ನೌಕರಿಗಾಗಿ ಅಲೆಯುವ ಜನರ ಸಂಖ್ಯೆ ದಿನೇ ದಿನೇ ಬೆಳೆಯುತ್ತಲಿದೆ. ಆಹಾರದ ಸಮಸ್ಯೆ ಜಟಿಲವಾಗುತ್ತಲಿದೆ. ತನ್ನ ಅನ್ನವನ್ನು ತಾನೇ ದೊರಕಿಸುವ ಕೃತಿಸಾಹಸ ಉಳಿದಿಲ್ಲ. ನೌಕರಿಯೊಂದನ್ನು ದೊರಕಿಸುವದೇ ಮೂಲಧ್ಯೇಯವಾಗಿದೆ. ಈ ಕಾರಣದಿಂದ ಸನಾತನ ಧರ್ಮದ ಕಾಯಕದ

ಮಹತ್ವ, ಹಿರಿಯರ ಶ್ರಮ ಗೌರವಗಳು ಕನಸಿನ ಗಂಟುಗಳಾದವು. ಸಾಂಪ್ರದಾಯಿಕ ಶಿಕ್ಷಣವು ಕಲಿತವನನ್ನು ನೌಕರಿ ಮಾಡುವ 'ಗುಲಾಮ'ನನ್ನಾಗಿ ಮಾಡಿತೇ ವಿನಃ ಕುಲಕಸಬು ಗುಣ ಹಾಗೂ ಶ್ರಮಗೌರವಗಳ ಹಿರಿಮೆ ಹೇಳಿ ಸ್ವಾವಲಂಬಿಯಾಗುವಂತೆ ಮಾಡಲಿಲ್ಲ. ಕಲಿತವ, ಕಲಿಯದವ ಎಂಬ ವರ್ಗಗಳ ನಿರ್ಮಾಣವಾಯ್ತು. ಕಲಿಯದವರನ್ನು ಕೀಳಾಗಿ ಕಾಣುವ ದುಷ್ಟ ಮನೋವೃತ್ತಿ ಬೆಳೆಯಿತು. ಕಲಿತವ ತಾನೊಬ್ಬ ದೇವ ಮಾನವನೆಂದು ಮೆರೆದಾಡಹತ್ತಿದ. ಸನಾತನ ಸಂಸ್ಕೃತಿ ಮರೆತು ಪಾಶ್ಚಿಮಾತ್ಯರ ತಳುಕು ಬೆಳಕಿನಲ್ಲಿ ತನ್ನ ಬಣ ಜಂಭಕೊಚ್ಚಿಕೊಂಡು ಬಿರುದಿನ ಬಂಟನಾಗಿ ಜನ್ಮಭೂಮಿ ಆತ್ಮಗೌರವ ಸಾಮರ್ಥ್ಯವನ್ನು ಉಳಿಸಿಕೊಳ್ಳಲಾಗಲಿಲ್ಲ. ತನ್ನ ನೀತಿ, ಶೀಲಗಳನ್ನು, ಸಮಾಜಕ್ಕೆ ಸಲ್ಲಿಸಬೇಕಾದ ಋಣವೇನು? ಎಂಬುದನ್ನು ಮರೆತು ತಾನೇ ತಾನಾಗಿ ಮೆರೆದ. ಹಾಗಾಗುವಂತೆ ಅಂದಿನ ಶಿಕ್ಷಣ ಪರಿಸರಗಳೇ ಉಂಟುಮಾಡಿದವು. ಈಗ ಅದಿಲ್ಲ. ಅಧಿಕಾರ–ಜಂಭಗಳ ತಾಂಡವ ನೃತ್ಯದ ಸ್ಥಳದಲ್ಲಿ ತ್ಯಾಗ, ಪ್ರೀತಿಗಳು ನೆಲಸಿವೆ.

ಜೀವನಕ್ಕೂ ಶಿಕ್ಷಣಕ್ಕೂ ನಿಕಟವಾದ ಸಂಬಂಧವಿದೆ. ಅವು ಒಂದೇ ನಾಣ್ಯದ ಎರಡು ಮುಖಗಳು. ಶಿಕ್ಷಣವು ಜೀವನವನ್ನು ವಿಕಾಸಮಾರ್ಗದತ್ತ ಎಳೆಯುವಂತಹದಾಗಿರಬೇಕು. ಅದು "ಸತ್ಯದ ಅಡಿಪಾಯದ ಮೇಲೆ ಕಾಯಕದ ಮಹಾಮಂದಿರವನ್ನು ನಿರ್ಮಿಸಿ ಅದರ ಮೇಲೆ ಮಾನವತೆಯ ಕಳಸ ಕೂಡಿಸುವಂತಹದು ಆಗಿರಬೇಕು" ಎಂಬ ಸುಂದರ ಸಿದ್ಧಾಂತ ತತ್ವ ಜೀವನ ಶಿಕ್ಷಣದಲ್ಲಿ ಬೆರೆತುಕೊಂಡಿದೆ. ಮಗುವಿನ ಭಾವನೆ, ಕಾರ್ಯ, ಜ್ಞಾನಗಳನ್ನು ಜಾಗೃತಗೊಳಿಸಿ ಮನೋವೈಜ್ಞಾನಿಕ ಸತ್ಯಾಂಶಗಳ ಹಿನ್ನೆಲೆಯ ಮೇಲೆ ಜೀವನ ಶಿಕ್ಷಣ ಸುಸಂಬದ್ಧವಾದ ಮೆಟ್ಟಿಲುಗಳ ಮುಖಾಂತರ ಕೊಡಲ್ಪಡುತ್ತಿದೆ. ಇದರಿಂದ ಮಗುವಿನ ರಚನಾತ್ಮಕ ಪ್ರವೃತ್ತಿಗೆ ಎಡೆಯಿದೆ. ಪೂಜ್ಯ ಬಾಪೂಜಿಯವರ 'ಕನಸಿನ ಭಾರತ'ದ ನನಸಾಗಿಸುವ ಮಂಗಲಗೀತೆಯಿದೆ.

ಜೀವನ ಶಿಕ್ಷಣವು ಸಂಘ ಜೀವನಕ್ಕೆ ವಿಶೇಷ ಮಹತ್ವವನ್ನಿತ್ತಿದೆ. ವರ್ಗರಹಿತ ಸಮಾಜದ, ಸರ್ವೋದಯ ಸಮಾಜದ ಮೂಲಭೂತ ಧಾರ್ಮಿಕ ವಿಚಾರಗಳು ಅದರಲ್ಲಿ ಅಡಕವಾಗಿವೆ. ರಾಷ್ಟ್ರಾಭಿಮಾನ ಆತ್ಮಗೌರವ ಶ್ರಮಗೌರವ ಸ್ವಾವಲಂಬನಗಳೊಂದಿಗೆ ನೈತಿಕ, ಬೌದ್ಧಿಕ, ಶಾರೀರಿಕ ಗುಣಗಳನ್ನು ವಿಕಾಸಮಾಡುವದಾಗಿದೆ. ಅಖಂಡಭಾರತದ ಐಕ್ಯದ ಸುಂದರ ವಿಚಾರ ನಮಗೆ ಗೋಚರವಾಗುತ್ತದೆ. ಇದರಲ್ಲಿ 'ಸತ್ಯಂ, ಶಿವಂ, ಸುಂದರಂ' ಎಂಬ ತ್ರಿಕಾಲ ಸತ್ಯ ಅದರ ಮೂಲ ಮಂತ್ರವಾಗಿದೆ. ಸನಾತನ (ಧರ್ಮ) ಸಂಸ್ಕೃತಿಯು ಪುನರುಜ್ಜೀವನ ಇದಾಗಿದೆ.

ಈ ಜೀವನ ಶಿಕ್ಷಣವು ಯಶಸ್ವಿಯಾಗುವದು ಶಿಕ್ಷಕರನ್ನೇ ಅವಲಂಬಿಸಿದೆ. ಶಿಕ್ಷಕನು ತನ್ನ ಗುರುತರ ಹೊಣೆಯರಿತು ತಾನು ಮೊದಲು ಆ ಶಿಕ್ಷಣವನ್ನು ಜೀವನದಲ್ಲಿ ತನ್ನದಾಗಿ ಮಾಡಿಕೊಂಡು ಆಚಾರ ವಿಚಾರಗಳ ಮೇಳ ಮಾಡಿಕೊಂಡಿರಬೇಕು. ಅಂದರೆ ಮಾತ್ರ ಜೀವನ ಶಿಕ್ಷಣದ ಯಶಸ್ಸು ಆದೀತು! ಸಂಘ ಜೀವನದಲ್ಲಿ ವ್ಯಕ್ತಿ ಜೀವನ ಸೇರಿ, ನಾಗರಿಕತೆಯ ಮಾಂಗಲ್ಯ ಶಿಖರವನ್ನೇರಿ ತನ್ನ ಧವಲಕೀರ್ತಿಯನ್ನು ಬೆಳಗೀತು!!

ಮಕ್ಕಳಲ್ಲಿ ಶಿಸ್ತನ್ನು ಬೆಳೆಸುವದು

ಲೇಖಕರು :— ಶ್ರೀ ರಾ. ಲಿಂ. ಕರಿಗಾರ, ಜೀ. ಶಿ. ಶಾಲೆ, ಯಾದವಾಡ

ಮಾನವನ ಜೀವನವು ಸುಖದಿಂದ ಬಾಳಬೇಕಾದರೆ ಶಿಸ್ತು ಬೇಕು. ಶಿಸ್ತು ಅಂದ ಕೂಡಲೇ ಬಟ್ಟೆ-ಬರೆಗಳನ್ನು ನೈರ್ಮಲ್ಯವಾಗಿಟ್ಟುಕೊಳ್ಳುವದಲ್ಲ. ಶಿಸ್ತು ಮಾನವನಿಗೆ ನಡೆಯುವದು, ನುಡಿಯುವದು ಮತ್ತು ಕೂಡ್ರುವದು, ಆಡ್ಡಾಡುವದು ಹೀಗೆ ಪ್ರತಿಯೊಂದು ಕಾರ್ಯದಲ್ಲಿಯೂ ಇರಬೇಕು. ಯಾವ ಮನುಷ್ಯನು ಅಶಿಸ್ತಿನಿಂದ ನಡೆಯನ್ನೋ ಅವನ ಜೀವನವು ಸುಖದಿಂದ ಇರಲಾರದು. ಅಂಥ ಮನುಷ್ಯನು ಒಂದಿಲ್ಲೊಂದು ಕಠಿಣ ಪ್ರಸಂಗಗಳಿಗೆ ಎರವಾಗುವನು.

ನಮ್ಮ ಸ್ವತಂತ್ರ ಭಾರತವು ಪರದೇಶಗಳ ಹಾಗೆ ಮುಂದುವರಿಯ ಬೇಕಾದರೆ ಭಾರತೀಯರಲ್ಲಿ ಶಿಸ್ತು ಬೇಕು. ಈ ಶಿಸ್ತು ಚಿಕ್ಕಂದಿನಲ್ಲಿಯೇ ಬೆಳೆಯಬೇಕಾಗುವದು. " ಎಳೆಯದಿದ್ದಾಗ ಬಾಗದ್ದು ಮರವಾದಾಗ ಬಗ್ಗೀತೆ " ಎಂಬ ನಾಣ್ಣುಡಿಯಂತೆ ನಾವು ಚಿಕ್ಕಮಕ್ಕಳಿದ್ದಾಗಲೇ ಶಿಸ್ತನ್ನು ಬೆಳೆಸಬೇಕು. ಇದರಿಂದ ಶೀಲ ಸಂವರ್ಧನೆ ಬೆಳೆಯುವದಲ್ಲದೆ ಸತ್ಯ, ನ್ಯಾಯ ಮತ್ತು ಸಹಕಾರ ಮುಂತಾದ ಸದ್ಗುಣಗಳು ತಮ್ಮಿಂದ ತಾವೇ ಬಂದು ಮುಸುಕುವವು.

ನಾವು ಪ್ರಾಥಮಿಕ ಶಿಕ್ಷಣದ ಶಿಕ್ಷಕರು. ನಮ್ಮ ಹತ್ತಿರ ಎಲ್ಲ ಮಕ್ಕಳೂ ಇರುವರು. ಈಗಿನ ಕಾಲದಲ್ಲಿ "ಶಿಕ್ಷಕರೇ ದೇಶದ ಅಡಿಗಲ್ಲು" ಎಂಬುವ ಮಾತನ್ನು ಮರೆಯುವಂತಿಲ್ಲ. ಅದಕ್ಕಾಗಿ ಮಕ್ಕಳಿಗೆ ಪ್ರತಿಯೊಂದು ಚಟುವಟಿಕೆಯಲ್ಲಿಯೂ ವಿಷಯಗಳಲ್ಲಿಯೂ ಶಿಸ್ತನ್ನು ಬೆಳೆಸಲು ಅನುಕೂಲವಾಗುತ್ತದೆ. ಈ ಶಿಸ್ತನ್ನು ಬೆಳೆಸಬೇಕಾದರೆ ಪಾಲಕರೂ, ಶಿಕ್ಷಕರೂ ಕೂಡಿಯೇ ಸಹಕರಿಸಬೇಕಾಗುವದು. ಅಂದರೇನೇ ಮಕ್ಕಳಲ್ಲಿ ಶಿಸ್ತು, ಮುತ್ತಿಸ್ಟು ಉತ್ತೇಜನಗೊಳ್ಳುವುದು.

ಪಾಲಕರ ಹೊಣೆ :– ಮಕ್ಕಳಿಗೆ ಶಾಲೆಯಲ್ಲಿ ಜ್ಞಾನಸಿಗುವದಕ್ಕಿಂತ ಮುಂಚೆಯೇ ಮನೆಯೇ ಅವರ ಪಾಠಶಾಲೆಯಾಗಿರುತ್ತದೆ. ಮನೆಯಲ್ಲಿ, ಸಮಾಜದಲ್ಲಿ ಹೀಗೆ ಎಲ್ಲೆಲ್ಲೂ ಅವರಿಗೆ ಜ್ಞಾನ ಸಿಕ್ಕುವದು. ಆ ಜ್ಞಾನವನ್ನು ಸ್ವೀಕರಿಸುವಾಗ ಮಕ್ಕಳು ಅನೇಕ ತಪ್ಪನ್ನು ಮಾಡುವದುಂಟು. ಆಗ ಪಾಲಕರು ಒಮ್ಮಿಂದೊಮ್ಮೆಲೇ ಸಿಟ್ಟುಮಾಡದೆ ಆ ತಪ್ಪಿನ ಕಾರಣವನ್ನು ಕಂಡುಹಿಡಿಯಬೇಕು. ಇನ್ನೊಮ್ಮೆ ಹಾಗಾಗದಂತೆ ಯೋಗ್ಯರೀತಿಯಲ್ಲಿ ಮಾರ್ಗದರ್ಶನ ಮಾಡಬೇಕು. ಮೇಲಿಂದ ಮೇಲೆ ಶಾಲೆಗೆ ಭೆಟ್ಟಿಯನ್ನು ಕೊಟ್ಟು ತಮ್ಮ ಮಕ್ಕಳ ಶೀಲ-ಸಂವರ್ಧನೆಯ ಬಗ್ಗೆ ವಿಚಾರಿಸಬೇಕು. ಮತ್ತು ಮಕ್ಕಳು ಶಾಲೆಯಲ್ಲಿ ಹೇಗೆ ಇರುವರೋ ಅದರಂತೆ ತಾವೂ ತಮ್ಮ ಮನೆಯಲ್ಲಿಯೂ, ಸಮಾಜದಲ್ಲಿಯೂ ಇರುವಂತೆ ಕಲ್ಪಿಸಿ ಕೊಡಬೇಕು. ಹೀಗೆ ಅನೇಕ ರೀತಿಯಿಂದ ಪಾಲಕರು ತಮ್ಮ ಮಕ್ಕಳ ರೀತಿ-ನೀತಿಗಳ ಕಡೆಗೆ ಗಮನ ಕೊಟ್ಟಿದ್ದಾದರೆ ಮಕ್ಕಳು ಪಾಠಶಾಲೆಗೆ ಕಾಲಿಟ್ಟ ಕೂಡಲೇ ಒಂದು ಶಿಸ್ತಿನ ವಾತಾವರಣದಲ್ಲಿ ಬೆಳೆಯಲು ಅನುಕೂಲವಾಗುವದು. ಶಿಕ್ಷಕರಿಗೆ ಇದರಲ್ಲಿ ಎಷ್ಟೋ ಸಹಾಯ ಮಾಡಿದಂತಾಗುವದು.

ಶಿಕ್ಷಕರ ಹೊಣೆ:- ಶಿಕ್ಷಕರ ಕಾರ್ಯವು ಯಶಸ್ವಿಯಾಗಬೇಕಾದರೆ ವರ್ಗದಲ್ಲಿ ಶಿಸ್ತು ಬೇಕು. ವರ್ಗದ ಶಿಸ್ತಿನ ಮೇಲಿಂದ ಶಿಕ್ಷಕರ ಯೋಗ್ಯತೆಯನ್ನು ತಿಳಿಯಬಹುದು. ಆದರೆ ಶಿಸ್ತನ್ನು ಕಾಯಲು ಶಿಕ್ಷಕರು ಏನು ಮಾಡುವರು? ಮಾತಾಡಬಾರದು, ಗೊಂದಲ ಹಾಕಬಾರದು, ಸುಮ್ಮನೆ ಕೂಡ್ರಿ ಎಂದು ಮಕ್ಕಳಿಗೆ ಹೇಳಬಹುದು. ಕೈ ಚಪ್ಪಾಳೆ ಹಾಕಿ,ಛಡಿ ಮೇಜಿಗೆ ಬಡಿದು ಶಾಂತತೆ ಕಾಯಲು ಯತ್ನಿಸುವ ಶಿಕ್ಷಕರನ್ನು ನೋಡಬಹುದು. ಆದರೆ ಇವು ನಿಜವಾದ ಶಿಸ್ತಿನ ಲಕ್ಷಣಗಳಲ್ಲ. ಹೀಗೆ ಮಾಡಿದಲ್ಲಿ ತೋರಿಕೆಯ ಶಿಸ್ತು ಉಂಟಾಗಬಹುದು. ಇಂಥವುಗಳಿಂದ ಶಿಕ್ಷಕರ ಯಾವ ಕಾರ್ಯವೂ ಸರಿಯಾಗಿ ನಡೆಯಲಾರದು. ಭಯೋತ್ಪಾದಕ ವಾತಾವರಣದಲ್ಲಿ ಮಕ್ಕಳ ಸ್ವಪ್ರಕಾಶನಕ್ಕೆ ಅವಕಾಶ ದೊರೆಯುವುದಿಲ್ಲ. ಅದಕ್ಕಾಗಿ "ಮಕ್ಕಳು ಮಕ್ಕಳಾಗಿಯೇ ಬೆಳೆಯಲಿ" ಎಂದು ಶಿಕ್ಷಣ ತಜ್ಞರಾದ 'ರೂಸೋ' ಹೇಳಿದ್ದಾರೆ. "ಪ್ರೇಮವೇ ಶಿಸ್ತಿಗೆ ತಳಹದಿ" ಅದುವೇ ಶಿಸ್ತನ್ನು ನಿಯಂತ್ರಿಸುವುದು, ಎಂದು ಪೆಸ್ತಾಲಜಿಯವರು ಹೇಳಿದ್ದಾರೆ. ಎಲ್ಲ ಶಿಕ್ಷಣ ತಜ್ಞರೂ ಇದನ್ನು

ಒಪ್ಪಿದ್ದಾರೆ. ಜೀವನ ಶಿಕ್ಷಣ ಶಾಲೆಯಲ್ಲಿ ಪ್ರೇಮಮಯ ವಾತಾವರಣವನ್ನು ತುಂಬುವದು. ಗುರುಗಳು ಮಕ್ಕಳ ಹಿರಿಯ ಗೆಳೆಯರಾಗಿ ದುಡಿದು ಮಕ್ಕಳ ವಿಶ್ವಾಸಕ್ಕೆ ಪಾತ್ರರಾಗಬೇಕು. ಗುರುಗಳ ಆದರ್ಶ ಜೀವನವೇ ಅವರ ಶಿಸ್ತಿನ ಪ್ರತೀಕವಾಗಿ ಪರಿಣಮಿಸುವದು. ಮಕ್ಕಳು ಸಹಜ ವಾಗಿ ತಪ್ಪನ್ನು ಮಾಡುವರು. ಆಗ ಅವರಿಗೆ ಗದ್ದರಿಸ ಬಾರದು. ತಪ್ಪಿನ ಕಾರಣವನ್ನು ಕಂಡು ಹಿಡಿಯ ಬೇಕು. ಅವರಿಗೆ ವಿವಿಧ ಚಟುವಟಿಕೆಗಳನ್ನು ಕಲ್ಪಿಸಿಕೊಡ ಬೇಕು. ಶಾಲೆಯಲ್ಲಿ ಶಾಲೆಯ ಆಡಳಿತೆ, ಮಂತ್ರಿ ಮಂಡಲ ರಚನೆ, ತಾವೇ ನಿರ್ವಹಿಸುವಂತೆ ವ್ಯವಸ್ಥೆಮಾಡಿ ಕೊಡಬೇಕು.

ಈಗಿನ ಜೀವನ ಶಿಕ್ಷಣ ಶಾಲೆಗಳಲ್ಲಿ ಯಾವದಾದ ರೊಂದು ಮೂಲೋದ್ಯೋಗವು ಇದ್ದೇ ಇರುತ್ತದೆ. ಮೂಲೋದ್ಯೋಗ ಚಟುವಟಿಕೆಯನ್ನು ಕೊಡುವಾಗ-ತೆಗೆದುಕೊಳ್ಳುವಾಗ ಮಕ್ಕಳ ಗದ್ದಲವಾಗುತ್ತದೆ. ಅದು ಸ್ವಾಭಾವಿಕ. ಆಗ ನಾವು ಮಕ್ಕಳಿಗೆ ಸರಿಯಾಗಿ ತಿಳಿಸಿಹೇಳಿ ಮೂಲೋದ್ಯೋಗ ಮಂತ್ರಿಯ ಮುಖಾಂತರವಾಗಲಿ ಇಲ್ಲವೇ ಸರತಿಯಂತೆ ಒಬ್ಬೊಬ್ಬರೇ ತೆಗೆದುಕೊಂಡು ಹೋಗುವಂತೆ ಏರ್ಪಾಟು ಮಾಡಬೇಕು. ಆಗ ಗದ್ದಲವಾಗ ದಂತೆ ನಮ್ಮ ಚಟುವಟಿಕೆಯಾಗುವುದು. ಯಾವುದೇ ಚಟು ವಟಿಕೆ ಮಾಡುವಾಗ ಮಕ್ಕಳಲ್ಲಿ ಜ್ಞಾನಾರ್ಜನೆಯ ಲಾಲ ಸೆಯು ತಾನಾಗಿಯೇ ಹುಟ್ಟುವದು. ಶೋಧಕ ಪ್ರವೃತ್ತಿಯು ಸ್ಫುಟವಾದಂತೆ ಅವರಲ್ಲಿ ಆತ್ಮಾನಂದವುಂಟಾಗುವದು. ಇಂತಹ ಸನ್ನಿವೇಶದಲ್ಲಿ ಉಂಟಾದದು ನಿಜವಾದ ಶಿಸ್ತು; ಇಲ್ಲಿ ಕಾರ್ಯತತ್ಪರತೆಯಿದೆ. ಬೇರೊಬ್ಬರ ಒತ್ತಾಯ ವಿಲ್ಲ. ಇದರಿಂದ ನೈಜವಾದ ಶಿಸ್ತು ಕೆಲಸದ ಮುಖಾಂತ ರವೇ ಹೊರಬೀಳುವದು. ಹೀಗೆ ಕ್ರಿಯೆಗಳ ಮೂಲಕ ಹೊರಡುವ ಸಹಜ ಶಿಸ್ತಿಗೆ ಕ್ರಿಯಾತ್ಮಕ ಶಿಸ್ತು ಎಂದು ಅನ್ನುವರು.

ಶಿಸ್ತು ಎಂದರೆ ಸಾಮಾನ್ಯವಾಗಿ ಅಚ್ಚುಕಟ್ಟುತನ, ನಿಯಮಿತತನ, ಕಾರ್ಯದಕ್ಷತೆ ಮೊದಲಾದ ಸದ್ಗುಣಗಳ ಸಮಾಗಮವೆಂದು ಹೇಳಬಹುದು. ಮಕ್ಕಳ ದೇಹ-ಮನ-ನೀತಿಗಳ ಸಮವಾಯ ವಿಕಾಸದಿಂದ ಮಾತ್ರ ಮಕ್ಕಳಲ್ಲಿ ಸ್ವಶಿಸ್ತು ನೆಲೆಗೊಳ್ಳುವದು. ಶಿಸ್ತು ನೆಲೆಗೊಳ್ಳಬೇಕಾದರೆ ಸ್ಫುಟಗೊಳಿಸಬೇಕಾದರೆ ಕ್ರಿಯೆ ಇರಬೇಕು. ನಿಷೇಧ ಇರಬಾರದು. ಬಾಲಕರು ಏಕಾಗ್ರ ಚಿತ್ತದಿಂದ, ಆತ್ಮೀಯ ಭಾವದಿಂದ ಕೆಲಸದಲ್ಲಿ ತೊಡಗಿರುವದರಿಂದ ವರ್ಗದ ಶಿಸ್ತು, ಸಂವಿಧಾನ ಮುಂತಾದವುಗಳ ಬಗೆಗೆ ಶಿಕ್ಷಕರು ಕಾತುರ ರಾಗುವ ಪ್ರಸಂಗಗಳೇ ಬರುವದಿಲ್ಲ. ಇದರಂತೆ ವಿಷಯಗ ಳನ್ನು ಕೊಟ್ಟಾಗಲೂ ಮತ್ತು ಸಭೆ, ಸಮ್ಮೇಲನದಲ್ಲಾಗಲಿ ಮಕ್ಕಳು ತಮ್ಮ ಆತ್ಮ ಪ್ರತಿಷ್ಠೆಯಿಂದ ಶಿಸ್ತಿಗೆ ಭಂಗ ತರುವದುಂಟು. ಆಗ ಅಂಥ ಮಕ್ಕಳಿಗೆ ಸರಿಯಾದ ಮಾರ್ಗ ದರ್ಶನ ಮಾಡಿ ಶಿಸ್ತಿನಿಂದಲೇ ಯಾವುದೊಂದು ಕಾರ್ಯವಾಗಲಿ, ವಿಷಯವಾಗಲಿ ಸಾಗುವವೆಂಬ ಕಲ್ಪ ನೆಯನ್ನುಂಟು ಮಾಡಬೇಕು. ಹೀಗೆ ಮಾಡುವದರಿಂದ ಶಿಸ್ತು ಮಕ್ಕಳಿಗೆ ಚಿಕ್ಕಂದಿನಲ್ಲಿಯೇ ಬೆಳೆದು ಮುಂದೆ ದೊಡ್ಡವರಾದ ಬಳಿಕ ಶಿಸ್ತು ತನ್ನಷ್ಟಕ್ಕೆ ತಾನೇ ಊರ್ಜಿತ ಗೊಳ್ಳುತ್ತದೆ. ಹೀಗೆ ಶಿಸ್ತನ್ನು ಬೆಳೆಸಬೇಕಾದರೆ ಶಿಕ್ಷಕರೂ ಪಾಲಕರೂ ಕೂಡಿಯೇ ಅವರನ್ನು ತಿದ್ದಬೇಕು.

ಒಟ್ಟಿನಲ್ಲಿ ಶಿಸ್ತಿನಿಂದ ಸರ್ವಕಾರ್ಯಗಳು ಸುಗಮ ವಾಗುವಷ್ಟು ಇನ್ನೇತರಿಂದಲೂ ಆಗುವದಿಲ್ಲ. ಕಾರಣ ಮಕ್ಕಳಲ್ಲಿ ಆಡುವಾಗ, ಕೂಡ್ರುವಾಗ, ಓಡುವಾಗ, ಊಟ ಮಾಡುವಾಗ ಮುಂತಾದ ಸರ್ವಕಾರ್ಯಗಳಲ್ಲಿಯೂ ಶಿಸ್ತು ಬರುವಂತೆ ಶಿಕ್ಷಕರು ಬಹಳಷ್ಟು ಪ್ರಯತ್ನಮಾಡಿದರೆ ಅಸಾಧ್ಯವಾದ ಕಾರ್ಯಗಳು ಸಾಧ್ಯವಾಗುವವು ಎಂಬು ದನ್ನು ಸರ್ವರೂ ಒಪ್ಪತಕ್ಕ ಮಾತಾಗಿದೆ. ಕಾರಣ ಶಿಸ್ತನ್ನು ಸರ್ವರೂ ಸರಿಯಾಗಿ ಸಾಗಿಸಿಕೊಂಡು ಶಿಸ್ತಿನ ಸವಿ ಫಲಗಳನ್ನು ಸವಿಯಲೆಂದು ಹಾರೈಸುವೆನು.

ಜೀವನ ಶಿಕ್ಷಣ ಶಾಲೆಗಳಲ್ಲಿ ಪಠ್ಯೇತರ ಚಟುವಟಿಕೆಗಳ ಸ್ಥಾನ

ಬರೆದವರು:— **ಶ್ರೀ ಬಿ. ಎ. ನಾಯಕ,** ಮುಖ್ಯಾಧ್ಯಾಪಕ, ಜೀ. ಶಿ. ಶಾಲೆ, ಭಗತವಾಡಾ, ಕಾರವಾರ

ರಾಷ್ಟ್ರಪಿತ ಮೋಹನದಾಸ ಗಾಂಧೀಜಿಯವರು ತಮ್ಮ ಜೀವಮಾನದಲ್ಲಿ ದೇಶದಲ್ಲಿ ನಡೆಯುತ್ತಿರುವ ಶಿಕ್ಷಣ ವಿಧಾನಗಳನ್ನು ಮನವಾರೆ ಕಂಡು, ಜೀವನಕ್ಕೆ ಬೇಕಾದಂತಹ ಶಿಕ್ಷಣವು ದೊರೆಯದಿದ್ದುದನ್ನು ತಮ್ಮ ಮನಸ್ಸಿಗೆ ಖಾತ್ರಿಮಾಡಿಕೊಂಡು, ಕೂಡಲೆ ದೇಶದ ಪರಿಸ್ಥಿತಿಗೆ ಹೊಂದಿಕೊಳ್ಳುವ ಮತ್ತು ದೇಶದ ಏಳ್ಗೆಯನ್ನು ಸಾಧಿಸಬಲ್ಲ "ಜೀವನ ಶಿಕ್ಷಣ"ವನ್ನು ಶೋಧಿಸಿ ಅದನ್ನು ಕೃತಿಯಲ್ಲಿ ತಂದರು. ಈ ಜೀವನ ಶಿಕ್ಷಣವು ನಮ್ಮ ದೇಶದಲ್ಲಿ ಕಳೆದ ಇಪ್ಪತ್ತು ವರುಷಗಳಿಂದ ಕ್ರಾಂತಿಯನ್ನುಂಟು ಮಾಡುತ್ತಿದ್ದು ಈಗ ತನ್ನ ಗುರಿಯ ಅರ್ಧಕ್ಕೆ ಮುಟ್ಟಿದೆಯೆನ್ನಬಹುದು.

ಸಾಕ್ಷರತೆಯೇ ಶಿಕ್ಷಣದ ಗುರಿಯಲ್ಲ, ಜೀವನದಲ್ಲಿಯ ನಾನಾಬಗೆಯ ಸನ್ನಿವೇಶಗಳನ್ನು ಒದಗಿಸಿಕೊಂಡು ಜೀವನದ ಕಲೆಗಳನ್ನು ಕಲಿಸುವದೇ ಶಿಕ್ಷಣದ ಗುರಿಯೆನಿಸುವದು. ಶಾಲೆಯ ಪಠ್ಯಪುಸ್ತಕಗಳ ಹೊರಗಿನ ಇಂತಹ ಪಠ್ಯೇತರ ಚಟುವಟಿಕೆಗಳ ಸನ್ನಿವೇಶಗಳು ಜೀವನ ಕಲೆಯ ಸಾಧನಗಳು. ತಮ್ಮ ಸ್ವಂತ ಅನುಭವಗಳಿಂದಲೇ ಕಲಿಯುವ ವೃತ್ತಿಗೆ ಪಠ್ಯೇತರ ಚಟುವಟಿಕೆಗಳು ಅವಶ್ಯವಾಗಿವೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಪಠ್ಯೇತರ ಚಟುವಟಿಕೆಗಳಲ್ಲಿ ಹಲವು ಬಗೆಗಳಿವೆ ಅವುಗಳಲ್ಲಿ ಮುಖ್ಯವಾದ ಕೆಲವು ಚಟುವಟಿಕೆಗಳನ್ನು ಕೆಳಗೆ ಕೊಡಲಾಗಿದೆ:—

೧. ಮಕ್ಕಳ ವಾಚನಾಲಯ:— ಪಠ್ಯೇತರ ಪುಸ್ತಕಗಳನ್ನು ಓದುವದರಿಂದ ವ್ಯಾವಹಾರಿಕ ಜ್ಞಾನವು ಬೆಳೆಯುವದಲ್ಲದೆ ವಿಷಯ ಸಂಗ್ರಹವೂ ಅನಾಯಾಸವಾಗಿ ಲಭಿಸುತ್ತದೆ. ಶಾಲೆಯಲ್ಲಿ ಮಕ್ಕಳ ವಾಚನಾಲಯವನ್ನು ಸ್ಥಾಪಿಸಿ ಮಕ್ಕಳ ಸಂಕುಚಿತ ಬುದ್ಧಿಗೆ ನಿಲುಕುವಂತಹ ಪುಸ್ತಕಗಳನ್ನು ಇರಿಸಬೇಕು. ಮತ್ತು ಮಕ್ಕಳ ವಯೋಮಾನ, ಮಾನಸಿಕ ಹಿನ್ನೆಲೆಗಳನ್ನು ಪರಿಶೀಲಿಸುವಂತಹ ಪುಸ್ತಕಗಳಿರಬೇಕು. ವಾಚನಾಲಯಗಳು ಜೀವನವನ್ನು ಉದಾತ್ತಗೊಳಿಸುವ ಸ್ಥಳವಾಗಿರುವದರಿಂದಲೂ, ವೃತ್ತಪತ್ರಿಕೆಗಳು ಹಾಗೂ ಇನ್ನಿತರ ಪುಸ್ತಕಗಳು ಜ್ಞಾನವಿಕಾಸದ ಸಾಧನಗಳಾಗಿರುವದರಿಂದಲೂ ವಾಚನಾಲಯಗಳಲ್ಲಿ ವಿವಿಧತೆಯ ಏರ್ಪಾಡಾಗುವದು ಅವಶ್ಯ.

೨. ಶಿಕ್ಷಕರ ವಾಚನಾಲಯ:— ಶಾಲೆಯಲ್ಲಿ ಗುರೂಜಿಯವರಿಗಾಗಿಯೇ ಒಂದು ವಾಚನಾಲಯವಿರುವದು ಒಳಿತು. ಕಲಿಸುವ ಶಿಕ್ಷಕರ ಜ್ಞಾನವನ್ನು ವಿಕಾಸಗೊಳಿಸುವದು, ಶಿಕ್ಷಕನು ತನ್ನ ಸ್ವಂತ ಜ್ಞಾನದ ಮೇಲೆಯೇ ಅವಲಂಬಿಸಿರದೆ ಆತನು ಅನೇಕ ಸಾಧನಗಳಿಂದ ತನ್ನ ಜ್ಞಾನವನ್ನು ಬೆಳೆಸಿಕೊಳ್ಳಬೇಕಾಗುತ್ತಿರುವದರಿಂದ ಈ ಹೊತ್ತಿಗೆಗಳು ತಾನು ಮಕ್ಕಳಿಗೆ ಕಲಿಸಬೇಕಾಗಿರುವ ವಿಷಯಗಳಲ್ಲಿ ಹಲವು ಬಗೆಯಿಂದ ಸಹಾಯವಾಗುವವು.

೩. ಕೈ ಬರೆಹದ ಪತ್ರಿಕೆ:— ವಾರ ಪತ್ರಿಕೆ, ಪಕ್ಷ ಪತ್ರಿಕೆ, ಮಾಸಿಕ ಪತ್ರಿಕೆ, ತ್ರೈಮಾಸಿಕ ಪತ್ರಿಕೆ ಹಾಗೂ ವಾರ್ಷಿಕ ಸಂಚಿಕೆಗಳಲ್ಲಿ ಕನಿಷ್ಠ ಒಂದನ್ನಾದರೂ ಶಾಲೆಯಿಂದ ಹೊರಡಿಸುತ್ತಿರಬೇಕು. ಆ ಸಂಚಿಕೆಗಳಲ್ಲಿ ಹುಡುಗರೇ ತಮ್ಮ ಸ್ವಂತ ಅನುಭವದಿಂದ ಬರೆದ ಲೇಖ, ಚಿತ್ರ ಮುಂತಾದವುಗಳಿರಬೇಕು. ಇದರಿಂದ ಮಕ್ಕಳ ಪ್ರತಿಭೆಗೆ ಉತ್ತೇಜನ ದೊರೆಯುತ್ತದೆ. ಮತ್ತು ಮಕ್ಕಳಿಂದ ಉತ್ತಮವಾದ ಮಾದರಿ ಕೃತಿ ತಯಾರಾಗುತ್ತಿರುವದರಿಂದ ಮಕ್ಕಳ ಸಮಯೋಚಿತ ಒಲವುಗಳಿಗೆ ಉತ್ತೇಜನ ಕೊಟ್ಟಂತಾಗುತ್ತದೆ. ನಾಳಿನ ನಾಗರಿಕರಾಗಲಿರುವ ಇಂದಿನ ಮಕ್ಕಳಲ್ಲಿ ಈ ಲೇಖನ ಕಲೆಯು ಒಡಮೂಡಿಬರಬೇಕಾಗಿದ್ದರೆ ಗುರೂಜಿಗಳು ಪ್ರಯತ್ನಮಾಡಿ ಶಾಲೆಯಲ್ಲಿ ಮಕ್ಕಳಿಗೆ ಕೈ ಬರೆಹದ ಪತ್ರಿಕೆ ಹೊರಡಿಸಲು ಅನುವುಮಾಡಿಕೊಡಬೇಕು.

೪. ಚರ್ಚಾಕೂಟ.— ಶಾಲೆಯಲ್ಲಿ ಒಂದು "ವಕ್ತೃತ್ವ ಸಂಘ"ವನ್ನು ಸ್ಥಾಪಿಸಿ ವಾರಕ್ಕೊಮ್ಮೆ ಪಕ್ಷಕ್ಕೊಮ್ಮೆ ಇಲ್ಲವೆ ತಿಂಗಳಿಗೊಮ್ಮೆ ಯಾವದಾದರೊಂದು ವಿಷಯದ ಮೇಲೆ ಮಾತನಾಡಲು ಮಕ್ಕಳಿಗೆ ಅನುವುಮಾಡಿಕೊಡಬೇಕು. ಸ್ವಂತ ವಿಷಯಗಳ ಆಯುಷ್ಕರಣವು ಪ್ರಜಾಪ್ರಭುತ್ವದ ತಳಹದಿ ಹಾಕಿದಂತಾಗಿರು

ವದರಿಂದ ಸ್ವಾಭಾವಿಕವಾಗಿಯೇ ಮಕ್ಕಳಲ್ಲಿ ಧೈರ್ಯ ಮತ್ತು ಆತ್ಮವಿಶ್ವಾಸಗಳು ಬರುವವು. ಇದರಿಂದ ಮಾತನಾಡಲು (ಸಭೆಯಲ್ಲಿ) ಹಿಂಜರಿಯದೆ ತಮ್ಮ ಧೈರ್ಯ ಮತ್ತು ಆತ್ಮವಿಶ್ವಾಸಗಳಬಲದಿಂದ ಮುಂದುವರಿಯುವರು.

೫. **ಮನರಂಜನ ಸಮಿತಿ:—** ಶಿಕ್ಷಣವು ಕ್ರೀಡಾಪದ್ಧತಿ ಮತ್ತು ಮನರಂಜನ ಪದ್ಧತಿಯಲ್ಲಿ ಸಾಗಬೇಕು. ಇದರಿಂದ ಮಕ್ಕಳಿಗೆ ಸಾಲೆಯು ಮನೆಯಂತೆಯೇ ಭಾಸವಾಗಿ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮುಂದೆ ಬರುತ್ತಾರೆ. ಅನುಕರಣ ಪದ್ಧತಿಯು ಚಿಕ್ಕಮಕ್ಕಳಿಗೆ ಸೇರುತ್ತಿರುವದರಿಂದಲೂ ತಮ್ಮ ವಿಚಾರಗಳನ್ನು ಮಂಡಿಸುವದು ಮಕ್ಕಳ ಸ್ವಾಭಾವಿಕ ಲಕ್ಷಣವಾದ್ದರಿಂದಲೂ ಆರಂಭದಿಂದಲೇ ಮಕ್ಕಳನ್ನು ಏಕಾಂಕ ನಾಟಕ, ಚಿತ್ರಪ್ರದರ್ಶನ, ಶಾರೀರಿಕ ಚಟುವಟಿಕೆ, ಸಾಂಘಿಕ ನೃತ್ಯ ಮೊದಲಾದ ಮನರಂಜನೆಯಲ್ಲಿ ಭಾಗವಹಿಸುವಂತೆ ಗುರೂಜಿಯವರು ಪ್ರಯತ್ನಿಸಬೇಕು. ಈ ಚಟುವಟಿಕೆಗಳು ಮಕ್ಕಳ ಉತ್ತಮ ಅನುಕರಣಕ್ಕೆ ಯೋಗ್ಯ ಸ್ಥಾನವಾಗಿರುವವು.

೬. **ಸಹಕಾರಿ ಅಂಗಡಿ:—** ಮಕ್ಕಳ ಸವಲತ್ತಿನ ದೃಷ್ಟಿಯಿಂದ ಸಾಲೆಯಲ್ಲಿ ಸಹಕಾರಿ ಅಂಗಡಿ ಸ್ಥಾಪಿಸುವದರ ಕುರಿತು ಯೋಗ್ಯ ಹಾಗೂ ಪ್ರಾಮಾಣಿಕ ಉಮೇದವಾರರನ್ನು ಚುನಾವಣೆಗೆ ನಿಲ್ಲಿಸಿ ಓರ್ವನನ್ನು ಆರಿಸಿ ತಂದು ಸಹಕಾರಿ ಅಂಗಡಿಯ ಯಾವತ್ತೂ ಕೆಲಸಗಳನ್ನು ಆರಿಸಿ ಬಂದ ಉಮೇದವಾರ (ಸೆಕ್ರೆಟರಿ) ನ ತಾಬಾಕ್ಕೆ ಕೊಟ್ಟು ಗುರೂಜಿಯವರು ಮಾರ್ಗದರ್ಶನಮಾಡಬೇಕು· ಪಾಟಿ, ಪುಸ್ತಕ, ಎಕ್ಸರಸಾಯಿಜ, ಫೂಟಪಟ್ಟಿ, ಸೀಸಪೆನ್ಸಿಲ ಕಡ್ಡಿ, ಕಾಗದ, ಹೆಂಡ್ಲು, ನಿಬ್ಬು, ಶಾಯಿ, ಬೌತಿ ಹಾಗೂ ಇನ್ನಿತರ ಸಾಮಾನುಗಳನ್ನು ಸಹಕಾರಿ ಅಂಗಡಿಯಿಂದಲೇ ಮಕ್ಕಳು ತಕ್ಕೊಳ್ಳುವ ವ್ಯವಸ್ಥೆಯಿರಬೇಕು. ಮತ್ತು ಈ ಸಾಮಾನುಗಳ ಬೆಲೆಯು ಪಟ್ಟಿಯನ್ನು ತಯಾರಿಸಿ ಗೋಡೆಗೆ ಇಲ್ಲವೆ ಕಪಾಟಿಗೆ ಅಂಟಿಸುವದರಿಂದ ಪ್ರತಿಸಾಮಾನುಗಳ ಬೆಲೆಯು ಮಕ್ಕಳಿಗೆ ಗೊತ್ತಾಗುತ್ತದೆ. ಸಾಮಾನುಗಳನ್ನು ಮೂಲ ಬೆಲೆಯಕಿಂತ ಸ್ವಲ್ಪ ಹೆಚ್ಚು ಹಾಗೂ ಬಾಜಾರದ ಬೆಲೆಗಿಂತ ಸ್ವಲ್ಪ ಅಗ್ಗ ದರದಲ್ಲಿ ಹುಡುಗರಿಗೆ ಕೊಡಬೇಕು. ಬಂದ ಲಾಭವನ್ನು ವರ್ಷದ ಕೊನೆಗೆ ಶೇಅರದಾರರಿಗೆ ಹಂಚಬೇಕು.

೭. **ನ್ಯಾಯ ಸಭೆ:—** ಒಳ್ಳೆಯ ಪಂಚರಾಗಿ ಕಾರ್ಯಮಾಡುವ ಶಕ್ತಿ, ನ್ಯಾಯಪ್ರಿಯತೆ ಮತ್ತು ಹಕ್ಕುಗಳ ಜ್ಞಾನ ಇವು ನಾಳಿನ ನಾಗರಿಕರಾಗಲಿರುವ ಇಂದಿನ ಮಕ್ಕಳಲ್ಲಿ ಒಡಮೂಡಿ ಬರಬೇಕಾಗಿದ್ದರೆ ಶಿಸ್ತುಭಂಗದ ಹೊಣೆಗಾರಿಕೆಗಳನ್ನು ಮಕ್ಕಳೇ ಸರಿಪಡಿಸಿಕೊಳ್ಳುವ ಯೋಜನೆಯಿರಬೇಕು. ಮೇಲಿನ ವರ್ಗದ ಐದು ಮಂದಿ ಯೋಗ್ಯ ಉಮೇದವಾರರನ್ನು ಆರಿಸಿ ಶಾಲಾ ಪಂಚಾಯತಿ (ನ್ಯಾಯಸಭೆ) ನೇಮಿಸಬೇಕು. ಸಾಲೆಯ ಅವಧಿಗಳಲ್ಲಿ ನಡೆಯುವ ಮಕ್ಕಳ ಒಳಜಗಳಗಳನ್ನು ತೀರಿಸುವ ಹೊಣೆಗಾರಿಕೆಯು ಈ ನ್ಯಾಯಸಭೆಯ ಕರ್ತವ್ಯವಾಗಬೇಕು. ಗುರೂಜಿಗಳು ಮಾರ್ಗದರ್ಶನ ಮಾಡುತ್ತಿದ್ದಲ್ಲಿ ಈ ಮೇಲಿನ ಎಲ್ಲ ಚಟುವಟಿಕೆಗಳು ಸುಸೂತ್ರವಾಗಿ ನಡೆಯಲು ಏನೂ ತೊಂದರೆಯಾಗಲಾರದು.

ಜೀವನ ಶಿಕ್ಷಣದಲ್ಲಿ ಶಿಕ್ಷಕ

ಲೇಖಕರು:— **ಶ್ರೀ ಎಸ್. ಎಸ್. ಭೂಸರಡ್ಡಿ,** ಶಿ. ವಿದ್ಯಾರ್ಥಿ T. C. M. Kumata

ಇಂದು ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ನಡೆದಿವೆ. ಜೀವನ ಶಿಕ್ಷಣವು ರಾಷ್ಟ್ರೀಯ ಶಿಕ್ಷಣವಾಗಿ ೬ ರಿಂದ ೧೧ ವಯಸ್ಸಿನ ಮಕ್ಕಳಿಗೆ ಕಡ್ಡಾಯವಾಗಿ, ಪುಕ್ಕಟೆಯಾಗಿ, ಒತ್ತಾಯದಿಂದ ಸಾರ್ವತ್ರಿಕ ರೀತಿಯಿಂದ ಯಾವ ಭೇದ-ಭಾವವಿಲ್ಲದೆ ಕೊಡುವ ಮಹಾಯೋಜನೆ ಕಾರ್ಯಗತವಾಗುವ ಶುಭ ಪ್ರಸಂಗ ಬಂದಿದೆ. ಇದು ಫಲಕಾರಿಯಾಗಿ, ಪರಿಣಾಮಕಾರಿಯಾಗಿ ಯಶಸ್ವಿಯಾಗಬೇಕಾದರೆ ಸರ್ವರ ಸಹಕಾರ ಅತ್ಯಾವಶ್ಯವಾಗಿದೆ. ಅದಕ್ಕಾಗಿ ಮಕ್ಕಳ ಪ್ರೋತ್ಸಾಹನೆಗಾಗಿ ಬಡಮಕ್ಕಳಿಗೆ ಮಧ್ಯಾಹ್ನದ ಊಟದ ಯೋಜನೆ, ವಿದ್ಯಾರ್ಥಿನಿಯರಿಗಾಗಿ ಹಾಜರೀ ಸುಧಾರಣಾ ಶಿಷ್ಯವೇತನ ಮೊದಲಾದ ಕಾರ್ಯಗಳನ್ನು ಸರಕಾರ ಕೊಡಮಾಡಿದೆ. ಈ ಮಹಾಯೋಜನೆಯ ಸಾಧನೆಗಾಗಿ ಮೇಲಿಂದ ಮೇಲೆ ಶಿಕ್ಷಣತಜ್ಞರ ಮತ್ತು ಶಿಕ್ಷಕರ ವಿಚಾರ

ಸಂಕಿರಣ, ಚರ್ಚಾ ಗೋಷ್ಠಿಗಳನ್ನು ನಡೆಯಿಸುತ್ತಿದೆ. ಮುಖ್ಯವಾಗಿ ಈ ಯೋಜನೆಯನ್ನು ಕಾರ್ಯಗತಮಾಡುವ ಹೊಣೆ ಶಿಕ್ಷಕನ ಮೇಲೆ ಬಿದ್ದಿದೆ ಎಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದ ಶಿಕ್ಷಕನ ಬಗ್ಗೆ ಎರಡು ಮಾತುಗಳನ್ನು ಈ ಪ್ರಸಂಗದಲ್ಲಿ ಬರೆಯುವ ಪ್ರಯತ್ನ ಮಾಡಿದ್ದೇವೆ. ಭವ್ಯಭಾರತದ ಭದ್ರ ಪ್ರಜೆಗಳನ್ನು ರೂಪಿಸುವ ಮಹಾ ಪವಿತ್ರ ಕರ್ತವ್ಯವನ್ನು ಶಿಕ್ಷಕನು ಮಾಡಬೇಕಾಗಿದೆ.

ಮುಖ್ಯವಾಗಿ ಶಿಕ್ಷಕನು ತನ್ನ ಶ್ರದ್ಧೆ, ಆತ್ಮವಿಶ್ವಾಸ, ನಿಷ್ಠೆ, ಪಾಂಡಿತ್ಯ, ಅನುಭವ, ಜಾಣ್ಮೆ–ತಾಳ್ಮೆಯಿಂದ ಜನತೆಯಲ್ಲಿ ಮೂಡಿದ ಜೀವನ ಶಿಕ್ಷಣದ ಬಗೆಗಿರುವ ತಪ್ಪು ಕಲ್ಪನೆಗಳನ್ನು ದೂರಮಾಡಬೇಕಾಗಿದೆ. ಜೀವನ ಶಿಕ್ಷಣದ ಲಾಭಗಳನ್ನು, ವೈಶಿಷ್ಟ್ಯಗಳನ್ನು ಜನಮನದ ಮೇಲೆ ಬಿಂಬಿಸಬೇಕಾದರೆ, ಆತನಲ್ಲಿ ಹೊಸ ಶಿಕ್ಷಣದ ಬಗೆಗೆ ಅಪರಿಮಿತ ಶ್ರದ್ಧೆ, ಅಭಿಮಾನ, ಉತ್ಸಾಹಪೂರ್ಣ ಜ್ಞಾನ, ಭಕ್ತಿ ಬೇಕು. ಅವನಲ್ಲಿ ಕಾರ್ಯತತ್ಪರತೆ, ಕಾರ್ಯತಲ್ಲೀನತೆ, ಪ್ರಚಾರಕ ಶಕ್ತಿ, ಕಾರ್ಯಪ್ರೇರಕ ಶಕ್ತಿ ಮೊದಲಾದ ಸದ್ಗುಣಗಳು ಒಡಮೂಡಬೇಕು. ಶಿಕ್ಷಕನು ಉತ್ಸಾಹದ ಮೂರ್ತಿ, ಚೇತನದ ಚಿಲುಮೆ, ಸ್ಫೂರ್ತಿಯ ಸೆಲೆಯಾಗಿ ಸ್ವಯಂ ಮುಂದೆ ಬಂದು ದುಡಿದರೆ ಹೊಸ ಶಿಕ್ಷಣದ ಹೊಸ ಬೆಳಕು ಪ್ರಕಾಶಮಾನವಾಗಿ ಬೆಳಗಲು ಯಾವ ಅಡ್ಡಿ ಆತಂಕಗಳಿಲ್ಲ. ಆಗ ಮಾತ್ರ ರಾಷ್ಟ್ರಪಿತ ಪೂಜ್ಯ ಗಾಂಧಿಯವರ ಅಮೂಲ್ಯವಾದ ಕೊನೆಯ ಕಾಣಿಕೆಯಾದ ಜೀವನ ಶಿಕ್ಷಣದ ಪ್ರತಿಭೆ, ಪ್ರಭಾವ, ಅದರಲ್ಲಿ ಹುದುಗಿದ ತತ್ವಗಳ ಪರಿಚಯವಾಗದೆ ಇರಲಾರದು. ಆದ್ದರಿಂದ ಶಿಕ್ಷಕನು ಸದಾ ಅಭ್ಯಾಸಿಯಾಗಿ ಹೊಸ ಶಿಕ್ಷಣದ ತತ್ವಗಳನ್ನು ಚೆನ್ನಾಗಿ ಮನನ ಮಾಡಿಕೊಂಡು ಮಗುವಿನ ಹಸನಾದ, ಹದವಾದ ಮನಸ್ಸಿನ ಮೇಲೆ ಮೂಡಿಸುವ ಶಿಲ್ಪಿಯ ಕಾರ್ಯ ಶಿಕ್ಷಕನದಾಗಿದೆ. ರಾಷ್ಟ್ರೀಯ ಶಿಕ್ಷಣದ ವಿವಿಧ ಅಂಗಗಳನ್ನೂ ರೂಪರೇಷೆಗಳನ್ನೂ, ಗೊತ್ತುಗುರಿಗಳನ್ನೂ, ಧ್ಯೇಯ–ಧೋರಣೆಗಳನ್ನೂ ಚೆನ್ನಾಗಿ ಅಭ್ಯಸಿಸುವದು ಶಿಕ್ಷಕನ ಆದ್ಯಕರ್ತವ್ಯವಾಗಿದೆ.

ಯಾವದೇ ರಾಷ್ಟ್ರದ ಯಾವದೇ ಶಿಕ್ಷಣ ಪದ್ಧತಿಯು ಹಾಳಾಗಲು ಮೂಲಕಾರಣವೆಂದರೆ ಆ ಶಿಕ್ಷಣ ಪದ್ಧತಿಯ ದೋಷಗಳಲ್ಲ, ಆ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವ ಕಾರ್ಯಕರ್ತರ ನಿರುತ್ಸಾಹ ಹಾಗೂ ನೈಗಳ್ಳತನ ಇವೇ ಮುಖ್ಯವಾಗಿವೆ. ಪ್ರಜಾಪ್ರಭುತ್ವದ ಮಹಾಸಾಧನೆಯ ಪ್ರಯೋಗ ನಡೆದಿರುವ ಭಾರತದಲ್ಲಿ ಶಿಕ್ಷಕನು ದಕ್ಷತೆಯಿಂದ, ಜಾಗ್ರತೆಯಿಂದ ತನ್ನ ಕರ್ತವ್ಯಪರಿಪಾಲನೆ ಮಾಡಿದರೆ ಮಾತ್ರ ಭಾರತದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಬಹುದು. ಯೋಗ್ಯ ಶಿಕ್ಷಣವಿಲ್ಲದೆ ಯೋಗ್ಯ ನಾಗರಿಕರಾಗರು. ಬುದ್ಧಿ, ಮನಸ್ಸು, ಹೃದಯಗಳ ಸಮನ್ವಿತ ವಿಕಾಸ, ಶೀಲ ಚಾರಿತ್ರ್ಯಗಳ ಸಂವರ್ಧನೆಗಳ ಯೋಗಸಂಸ್ಕಾರ, ರಾಷ್ಟ್ರೀಯ ಶಿಕ್ಷಣದಲ್ಲಿ ಹುದುಗಿದೆ. ಆದ್ದರಿಂದ ಭಾರತೀಯ ಜನಮನೋರಂಗದ ಮೇಲೆ ಹೊಸ ಶಿಕ್ಷಣದ ಯೋಗ್ಯ ತಿಳುವಳಿಕೆಯನ್ನು ಪ್ರತ್ಯಕ್ಷ ಪ್ರಯೋಗಗಳಿಂದ, ಆಚರಣೆಗಳಿಂದ ಸಿದ್ಧಮಾಡಿ ತೋರಿಸುವದು ರಾಷ್ಟ್ರೀಯ ಶಿಕ್ಷಕನ ಪರಮ ಪವಿತ್ರ ಕರ್ತವ್ಯವಾಗಿದೆ.

ಶಿಕ್ಷಕನಿಗೆ ತನ್ನದೇ ಆದ ಅನೇಕ ಸಮಸ್ಯೆಗಳು ತಲೆ ತಿನ್ನುತ್ತಿವೆ. ಆತನಿಗೆ ಸಾಕಷ್ಟು ವೇತನವಿಲ್ಲ, ಹೋದ ಹೋದಲ್ಲೆಲ್ಲ ಯೋಗ್ಯ ವಸತಿ ಸೌಕರ್ಯಗಳಿಲ್ಲ, ಇತ್ತಿತ್ತಲಾಗಿ ಸಮಾಜದಲ್ಲಿ ಆತನಿಗೆ ಯೋಗ್ಯ ಸ್ಥಾನಮಾನಗಳಿಲ್ಲ. ಗೌರವ ಕಡಿಮೆಯಾಗತೊಡಗಿವೆ. ಆತನ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಬೇಕಾಗಿದೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಶಿಕ್ಷಕನು ಧೃತಿಗೆಡದೆ, ನಿರುತ್ಸಾಹನಾಗದೆ ತನ್ನ ಪಾಲಿನ ಕರ್ತವ್ಯವನ್ನು ಚನ್ನಾಗಿ ಮಾಡಬೇಕು. ರಾಷ್ಟ್ರೀಯ ಶಿಕ್ಷಣದ ಯಶಸ್ಸಿಗೆ ಕಾರಣೀಭೂತನಾಗಬೇಕು. ಪ್ರತಿಯೊಬ್ಬ ಶಿಕ್ಷಕನು ತನ್ನ ಜೀವಮಾನದಲ್ಲಿ ಸಾವಿರಾರು ರಾಜಕಾರಣ ಪಟುಗಳನ್ನು, ಪ್ರತಿಭಾವಂತ ಕವಿಗಳನ್ನು, ತೇಜಸ್ವಿಯಾದ ಯೋಗಿಗಳನ್ನು, ವೀರಮಾತೆಯರನ್ನು ನಿರ್ಮಾಣ ಮಾಡಬಲ್ಲನು. ಒಬ್ಬ ಜಾಗೃತ ಶಿಕ್ಷಕನು ಮನಸ್ಸುಮಾಡಿದರೆ ಇಡೀ ಸಾಮಾಜಿಕ ತಳಹದಿಯನ್ನೇ ಬದಲಿಸಬಹುದು.

ಇಂದು ಭರತಖಂಡದ ಮೂಲೆ ಮೂಲೆಗಳಲ್ಲಿಯೂ ಚಾಪೆಯ ಗುಡಿಸಲುಗಳಲ್ಲಿಯೂ ಕೂಡ ಶಿಕ್ಷಣ ಭಾಸ್ಕರನ ಕಿರಣಗಳು ಪಸರಿಸಬೇಕಾಗಿವೆ. ಈ ಮಹಾ ಕಾರ್ಯವನ್ನು ಫಲದಾಯಕವಾಗಿ, ಪ್ರಗತಿಪರವಾಗಿ, ಕ್ರಾಂತಿಕಾರಕವಾಗಿ ಯಶಸ್ವಿಯಾಗಿ ಮಾಡುವದು ಪ್ರತಿಯೊಬ್ಬ ಶಿಕ್ಷಕನ ಹೊಣೆಯಾಗಿದೆ. ಪ್ರತಿಯೊಬ್ಬ ಶಿಕ್ಷಕನು ಸತ್ಯದ ಬೀಜಗಳನ್ನು ಬಿತ್ತಿ ಅಮೃತ ಫಲಗಳನ್ನು ಹೊರ

ಹೊಮ್ಮಿಸಬೇಕು. ಶಿಕ್ಷಕನು ಸತ್ಯೋಪಾಸಕನಾಗಬೇಕು, ವೃಥಾ ಮತಾಭಿಮಾನವನ್ನು ತ್ಯಜಿಸಬೇಕು, ಸಂಕುಚಿತ ಮನೋಭಾವನೆಗಳನ್ನು ಹರಿದೊಗೆಯಬೇಕು, ಹರಿಜನೋದ್ಧಾರ ಕಾರ್ಯವನ್ನು ರಚನಾತ್ಮಕ ವಿಧಾಯಕ ರೀತಿಯಲ್ಲಿ ಕೈಕೊಳ್ಳಬೇಕು, ಪರಧರ್ಮ ಸಹಿಷ್ಣುತೆ ಪ್ರತಿಯೊಬ್ಬ ರಾಷ್ಟ್ರೀಯ ಶಿಕ್ಷಕನ ಉಸಿರಾಗಬೇಕು. ಶಿಕ್ಷಕನು ಹರಿಶ್ಚಂದ್ರನಂತೆ ಸತ್ಯೋಪಾಸಕನೂ, ಅಲ್ಲಮ ಪ್ರಭುವಿನಂತೆ ಜ್ಞಾನೋಪಾಸಕನೂ, ಬಸವಣ್ಣನವರಂತೆ ಕಾಯಕದಲ್ಲಿ ತತ್ಪರನೂ ವಿವೇಕಾನಂದರಂತೆ ವೀರವ್ರತನೂ ಆಗಿ ಶಿಕ್ಷಣ ಕಲೋಪಾಸಕನಾಗಬೇಕು.

ಒಟ್ಟಿನಲ್ಲಿ ಗಾಳಿ, ಮಳೆ, ಚಳಿ, ಬಿಸಲುಗಳನ್ನು ಸಹಿಸಿ ಗಿಡಬಳ್ಳಿಗಳು ಹೂ-ಹಣ್ಣುಗಳನ್ನು ನೀಡುವಂತೆ ಶಿಕ್ಷಕನು ಮಕ್ಕಳ ಸರ್ವತೋಮುಖ ಕಲ್ಯಾಣಕ್ಕಾಗಿ ಶ್ರಮಪಟ್ಟು ಅವರು ಸುಸಂಸ್ಕೃತರೂ, ಗುಣವಂತರೂ, ಸ್ವಾವಲಂಬಿಗಳೂ, ಸಮಾಜ ಸೇವಕರೂ ಆಗಿ ಪರಿಣಮಿಸುವಂತೆ ತರಬೇತುಗೊಳಿಸುವದೇ ಶಿಕ್ಷಕನ ಜೀವನದ ಜೀವಾಳವಾಗಬೇಕು. ಅಂದೇ ಭಾರತ ನಂದನವನವಾದೀತು, ಉಜ್ವಲವಾದೀತು, ರಾಷ್ಟ್ರೀಯ ಶಿಕ್ಷಣದ ಪ್ರಭಾವ ಜಾಜ್ವಲ್ಯಮಾನವಾಗಿ ಬೆಳಗೀತು.

ಪ್ರಾಥಮಿಕ ಮಟ್ಟದಲ್ಲಿ ಈಗಿನ ಮಕ್ಕಳ ಶಿಕ್ಷಣದ ಮಟ್ಟವನ್ನು ಎತ್ತರಿಸುವ ಬಗೆ

ಲೇಖಕರು:— **ಶ್ರೀ ಶಿವಪ್ಪ ಮುದಕಪ್ಪ ಜಾಪಾಲಿ,** (ಅ. ಮಾ. ಅಂಚಟಗೇರಿ)

ಶಿಕ್ಷಣವು ಮನುಷ್ಯನ ಮೂಲಭೂತ ಬೇಡಿಕೆಗಳಲ್ಲಿ ಒಂದಾಗಿದೆಯಲ್ಲದೆ ಅದು ಮನುಷ್ಯನನ್ನು ಸುಸಂಸ್ಕೃತನನ್ನಾಗಿ ಮಾಡುವ ಸಾಧನಗಳಲ್ಲೆಲ್ಲ ಅತಿ ಮಹತ್ವದ್ದು ಆಗಿದೆ. ಭಾರತವು ಪ್ರಜಾಪ್ರಭುತ್ವ ಪದ್ಧತಿಯ ಆಡಳಿತ ಕ್ರಮವನ್ನು ಒಪ್ಪಿಕೊಂಡಿದ್ದರಿಂದ ಶಿಕ್ಷಣದ ಮಹತ್ವವು ಇನ್ನೂ ಹೆಚ್ಚಾಗಿದ್ದು ಶಿಕ್ಷಣದ ಮಟ್ಟವು ಕಡಿಮೆಯಾಗದಂತೆ ಕಾಯ್ದುಕೊಂಡು ಹೋಗುವಲ್ಲಿ ಜಾಗ್ರತೆಯಿಂದ ಇರುವದೂ ಅವಶ್ಯವಾಗಿದೆ. ಯಾಕಂದರೆ ಪ್ರಜೆಗಳು ಅರ್ಥಾತ್ ನಾಗರಿಕರು ಸುಸಂಸ್ಕೃತರೂ ರಾಷ್ಟ್ರೀಯ ಸಮಸ್ಯೆಗಳನ್ನು ತಿಳಿದುಕೊಂಡು ಅವುಗಳನ್ನು ಯೋಗ್ಯ ಮಾರ್ಗಗಳಿಂದ ಪರಿಹರಿಸುವಂಥ ಸಾಮರ್ಥ್ಯವುಳ್ಳವರೂ ಇದ್ದರೇನೇ ಪ್ರಜಾಪ್ರಭುತ್ವ ಪದ್ಧತಿಯು ಯಶಸ್ವಿಹೊಂದಬಲ್ಲದು. ಆದರೆ ಶಿಕ್ಷಣದಿಂದಲೇ ಈ ಬೇಡಿಕೆಯು ಪೂರೈಸಲ್ಪಡುವದರಿಂದಲೂ ಮತ್ತು ಇಂದಿನ ವಿದ್ಯಾರ್ಥಿಯೇ ನಾಳಿನ ನಾಗರಿಕನಿರುವದರಿಂದಲೂ ಈಗ ಸರಕಾರದವರು ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವಲ್ಲಿ ಹಾಗೂ ಹಂತ ಹಂತಗಳಲ್ಲಿ ಅದರ ಮಟ್ಟವನ್ನು ನಿರ್ಧರಿಸಿ ಅದು ಕಡಿಮೆಯಾಗದಂತೆ ನೋಡಿಕೊಳ್ಳುವಲ್ಲಿ ಅಪಾರವಾಗಿ ಶ್ರಮಿಸುತ್ತಿದ್ದಾರೆ; ಹಾಗೂ ಹಣವನ್ನೂ ವೆಚ್ಚ ಮಾಡುತ್ತಿದ್ದಾರೆ. ಈ ದೃಷ್ಟಿಯಿಂದ ಈಗ ಹತ್ತು ವರ್ಷಗಳ ಹಿಂದಿನ ಶಿಕ್ಷಣದ ಪರಿಸ್ಥಿತಿ ಮತ್ತು ಈಗಿನ ಶಿಕ್ಷಣದ ಪರಿಸ್ಥಿತಿ ಇವುಗಳನ್ನು ಒಂದಕ್ಕೊಂದು ಹೋಲಿಸಿದರೆ ಈಗ ನಾವೆಷ್ಟೋ ಶಿಕ್ಷಣದಲ್ಲಿ ಮುಂದುವರಿದಿದ್ದೇವೆಯಲ್ಲದೆ ಮಟ್ಟದಲ್ಲಿಯೂ ಹಿಂದೆ ಬಿದ್ದಿಲ್ಲವೆಂದು ಉದಾಹರಣೆಗಳಿಂದ ವ್ಯಕ್ತಗೊಳಿಸಬಹುದು. ಆದರೂ ಕೇವಲ ಇತ್ತೀಚಿನ ದಿನಗಳಲ್ಲಿ ಶಿಕ್ಷಣದ ಮಟ್ಟವು ಕಡಿಮೆಯಾಗಹತ್ತಿದೆ ಎಂಬ ಕೂಗು ಕೇಳಿಬರುತ್ತಿದೆ. ಈ ಕೂಗು ಪ್ರಾಥಮಿಕದಿಂದ ಹಿಡಿದು ಉಚ್ಚಶಿಕ್ಷಣ ಕ್ಷೇತ್ರದಲ್ಲಿಯೂ ಇದ್ದು ಅದರಲ್ಲಿಯೇ ಉಚ್ಚ ಹಾಗೂ ಮಾಧ್ಯಮಿಕ ಕ್ಷೇತ್ರಗಳಲ್ಲಿ ಹೆಚ್ಚಾಗಿದೆ. ಆದರೆ ಅಲ್ಲಿ ಶಿಕ್ಷಣದ ಮಟ್ಟ ಕಡಿಮೆಯಾಗಬೇಕಾದರೆ ಇಲ್ಲಿ ಪ್ರಾಥಮಿಕ ಮಟ್ಟದಲ್ಲಿಯೂ ಅದರ ದೋಷವು ಇದ್ದಿರಲೇಬೇಕೆಂದು ಅರ್ಥವಾಗುವದು. ಆದ್ದರಿಂದ ಪ್ರಾಥಮಿಕ ಮಟ್ಟದಲ್ಲಿ ಶಿಕ್ಷಣ ಮಟ್ಟವನ್ನು ಎತ್ತರಿಸುವ ಬಗೆ ಹೇಗೆ? ಎಂಬುದರ ಬಗ್ಗೆ ಇಲ್ಲಿ ನನ್ನ ಅನುಭವಕ್ಕೆ ಬಂದ ಮೇರೆಗೆ ವಿವರಿಸುವ ಪ್ರಯತ್ನ ಮಾಡುತ್ತಿದ್ದೇನೆ.

ಶಿಕ್ಷಣದ ಮಟ್ಟವು ಕಡಿಮೆಯಾಗಲು ಈ ಕೆಳಗಿನಂತೆ ನಾವು ಕಾರಣಗಳನ್ನು ಕೊಡಬಹುದು:—

೧) ಶಿಕ್ಷಣದ ಬಗ್ಗೆ ಪಾಲಕರು ತಳೆದಿರುವ ಸಹಾನುಭೂತಿ

ಹಾಗೂ ಸಂಪರ್ಕ ೨) ಶಿಕ್ಷಕರ ಯೋಗ್ಯತೆ ಹಾಗೂ ಅವರ ಪರಿಸ್ಥಿತಿ ೩) ಶಾಲಾ ಕಟ್ಟಡಗಳು ೪) ಉಪಕರಣಗಳು ೫) ಮೂಲೋದ್ಯೋಗ ದ್ವಾರ ಶಿಕ್ಷಣವು ಕೊಡಲ್ಪಡುವಲ್ಲಿ ಸಾರ್ವಜನಿಕರಲ್ಲಿ ಇರುವ ಅಭಿಪ್ರಾಯ ಇವಿಷ್ಟಲ್ಲವೆ ಇನ್ನೂ ಬೇರೆ ಬೇರೆ ಕಾರಣಗಳಿರಬಹುದು. ಆದರೆ ಇವಿಷ್ಟರಲ್ಲಿ ಉಳಿದವೂ ಸಮಾವೇಶಗೊಳ್ಳಬಹುದಾಗಿವೆಯಾದ್ದರಿಂದ ಇವನ್ನೆ ಇಲ್ಲಿ ಚರ್ಚಿಸಿ, ಅವುಗಳನ್ನು ನಾವು ಹೇಗೆ ಯಶಸ್ವಿಯಾಗಿ ಎದುರಿಸಬಲ್ಲೆವು (ಅಥವಾ ಎದುರಿಸಲಿಕ್ಕೆ ಹತ್ತಿದ್ದೇವೆ) ಎಂಬುದನ್ನು ನೋಡೋಣ.

ಶಿಕ್ಷಣದ ಬಗ್ಗೆ ಪಾಲಕರು ತಳೆದಿರುವ ಸಹಾನುಭೂತಿ ಹಾಗೂ ಸಂಪರ್ಕ. ಪ್ರಾಥಮಿಕ ಮಟ್ಟದಲ್ಲಿ ವಿದ್ಯಾರ್ಥಿಗಳು ೬ ರಿಂದ ೧೨ ಅಥವಾ ೧೩ ವರ್ಷದ ವರೆಗಿನವರು ಇರುವರು. ಈಗ ೫ ರಿಂದ ೭ ನೆಯ ಇಯತ್ತೆಯ ವರೆಗೆ ಲೋಅರ ಸೆಕೆಂಡರೀ (Lower Secondary) ಎಂದು ಮಾಡಿದ್ದರಿಂದ ನಿಜವಾದ ಪ್ರಾಥಮಿಕ ವಿದ್ಯಾರ್ಥಿಗಳೆಂದರೆ ೬ ರಿಂದ ೯ ಅಥವಾ ೧೦ ವರ್ಷದ ವರೆಗಿನ ವಿದ್ಯಾರ್ಥಿಗಳು ಇರುವರು. ಇಷ್ಟು ಸಣ್ಣ ವಯಸ್ಸಿನ ಬಾಲಕರು ಸಂಪೂರ್ಣವಾಗಿ ತಮ್ಮ ಪಾಲಕರ ಆಶ್ರಯದಲ್ಲಿಯೇ ಇರುವದು ಸಹಜವಾದ್ದರಿಂದ ಪಾಲಕರು ಬಾಲಕರ ಬಗ್ಗೆ ವಹಿಸುವ ಧೋರಣೆಯು ಆಯಾ ಬಾಲಕರ ಶಿಕ್ಷಣದ ಮೇಲೆ ಅಳವಾದ ಪರಿಣಾಮ ಮಾಡುವದು. ಪಾಲಕರ ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದು ಅವರು ಶಿಕ್ಷಣ ಪ್ರೇಮಿಗಳಾಗಿದ್ದರೆ ಪಾಲಕರು ಬಾಲಕರ ಶಿಕ್ಷಣದ ಬಗ್ಗೆ ಉದಾರ ಧೋರಣೆ ತಾಳುತ್ತಾರೆ. ಅಂಥಲ್ಲಿ ಬಾಲಕರು ನಿಯಮಿತವಾಗಿ ಶಾಲೆಗೆ ಬರುವವರಾಗಿದ್ದು ಶಿಕ್ಷಣದ ಬಗ್ಗೆ ಬರುವ ಅಲ್ಪ ಸ್ವಲ್ಪ ಖರ್ಚನ್ನು ತೊಂದರೆಯಿಲ್ಲದೆ ನಿರ್ವಹಿಸಿ ತಮ್ಮ ದಾರಿಯಲ್ಲಿ ಪ್ರಗತಿ ಹೊಂದುತ್ತಿರುತ್ತಾರೆ. ಪರಿಸ್ಥಿತಿ ಹೀಗೆ ಸರಳವಾಗಿದ್ದರೆ ಅಲ್ಲಿ ಶಿಕ್ಷಣ ಮಟ್ಟವು ಕಡಿಮೆಯಾಗುವ ಸಂದರ್ಭವೇ ಕಡಿಮೆ. ಯಾಕಂದರೆ ನಿಯಮಿತವಾಗಿ ಮಕ್ಕಳು ಶಾಲೆಗೆ ಬಾರದಿರುವದೇ ಬಹುಮಟ್ಟಿಗೆ ವಿದ್ಯಾಮಟ್ಟವು ಕಡಿಮೆಯಾಗುವದಕ್ಕೆ ಕಾರಣವಾಗಿದೆ. ಮಕ್ಕಳು ನಿಯಮಿತರಾಗಿದ್ದರೆ ಹೊಣೆಯರಿತ ಹಾಗೂ ವಿಷಯಗಳ ಪರಿಜ್ಞಾನವುಳ್ಳ ಶಿಕ್ಷಕರು ಹಂತ ಹಂತಗಳಲ್ಲಿನ ಮಕ್ಕಳ ವಿದ್ಯಾಮಟ್ಟವನ್ನು ಕಾಯ್ದುಕೊಳ್ಳುವ ತಮ್ಮ ಕರ್ತವ್ಯವನ್ನು ಮಾಡಿಯೇ ಮಾಡುವರು. ಆದರೆ ದುರ್ದೈವದಿಂದ ನಮ್ಮ ನಾಡಿನ ಹಳ್ಳಿಗಳಲ್ಲಿ (ಅಂದರೆ ಈ ಸಮಸ್ಯೆಯನ್ನು ನಾವು ಹೆಚ್ಚಾಗಿ ಹಳ್ಳಿಗಳಲ್ಲಿಯೇ ಎದುರಿಸಬೇಕಾಗಿದ್ದದರಿಂದ) ಬಡತನ ಮತ್ತು ಅಜ್ಞಾನಗಳು ತಾಂಡವವಾಡುತ್ತವೆ. ಹಳ್ಳಿಗಳಲ್ಲಿ ಬಡ ರೈತರೇ ಅಥವಾ ರೈತ ಕೂಲಿಕಾರರೇ ನಮ್ಮ ಪ್ರಾಥಮಿಕ ಮಕ್ಕಳ ಪಾಲಕರು. ಇವರು ಬಡವರೂ ಶಿಕ್ಷಣದ ಬಗ್ಗೆ ಖಚಿತವಾದ ಹಾಗೂ ಸ್ಪಷ್ಟವಾದ ತಿಳುವಳಿಕೆಯಿಲ್ಲದವರೂ ಆಗಿರುವದರಿಂದ ಈ ಬಡ ಹಾಗೂ ಅಜ್ಞಾನೀ ಪಾಲಕರು ಮಕ್ಕಳ ಶಿಕ್ಷಣಕ್ಕಿಂತಲೂ ಕುಟುಂಬದ ಉದರಪೋಷಣೆಯ ಕೆಲಸಕ್ಕೆ ಹೆಚ್ಚು ಮಹತ್ವಕೊಡುವರು. ಮತ್ತು ಮಕ್ಕಳನ್ನು ತಮ್ಮ ಕೆಲಸದಲ್ಲಿ ಸಹಾಯಕರಂತೆ ಉಪಯೋಗಿಸಿಕೊಳ್ಳತೊಡಗುವರು. ಆಗ ಮಕ್ಕಳು ಅನಿವಾರ್ಯವಾಗಿ ಅನಿಯಮಿತರಾಗುವರು. ಮಕ್ಕಳು ಹೀಗೆ ಅನಿಯಮಿತರಾಗಿ ಉಳಿದರೆ ಅಲ್ಲಿ ಹೇಗೆ ತಾನೇ ಶಿಕ್ಷಣದ ಮಟ್ಟವು ಕಾಯ್ದುಕೊಳ್ಳಲ್ಪಡಬಹುದು? ಅಲ್ಲಿ ವಿಷಯಗಳೇ ಸರಿಯಾಗಿ ಸಾಗುವದಿಲ್ಲ. ಹೀಗಾಗಿ ಶಿಕ್ಷಣದ ಮಟ್ಟವು ಕಡಿಮೆಯಾಗಲು ಕಾರಣವಾಗುತ್ತದೆ. ಎಲ್ಲ ಮಕ್ಕಳು ಅನಿಯಮಿತರಿರುವದಿಲ್ಲ; ಕೆಲಮಕ್ಕಳಾದರೂ ನಿಯಮಿತರಿರುವರು ಎಂಬ ಸತ್ಯ ಸಂಗತಿಯನ್ನು ಇಲ್ಲಿ ಗಮನಿಸಿದರೂ ಅನಿಯಮಿತ ಬಾಲಕರು ಶಾಲೆಗೆ ಬಂದಾಗ ಅವರಿಗಾಗಿ ವಿಷಯಗಳನ್ನು ಹಿಂದಿನಿಂದ ತೆಗೆದುಕೊಳ್ಳಬೇಕಾಗುವದರಿಂದ ಮತ್ತು ಇದು ಮೇಲಿಂದ ಮೇಲೆ ಒದಗುತ್ತಿರುವದರಿಂದ ಮೊದಲಿಗೆ ಕಲಿತ ವಿದ್ಯಾರ್ಥಿಗಳು ವಿಷಯಗಳ ಬಗ್ಗೆ ಬರಬರುತ್ತ ಬೇಜಾರು ಭಾವನೆಯುಳ್ಳವರಾಗುವರು. ಈಗ ಅವರಲ್ಲಿ ವಿಷಯಗಳ ಬಗ್ಗೆ ಸರಿಯಾದ ಜ್ಞಾನವಿಲ್ಲದಂತಾಗಿ ಮಟ್ಟದಲ್ಲಿ ಕಡಿಮೆಯಾಗತೊಡಗುವರು. ಇನ್ನು ಇಷ್ಟೂ ಅಲ್ಲದೆ ಶಿಕ್ಷಣದ ಬಗ್ಗೆ ಪ್ರೀತಿಯಿದ್ದ ಅಥವಾ ಶಿಕ್ಷಕನ ಒತ್ತಾಯದಿಂದ ನಿಯಮಿತವಿದ್ದ ಮಕ್ಕಳ ಜೊತೆಗೆ ಉದ್ಯೋಗಕ್ಕೆ ಹೋಗುವಾಗ ಸಣ್ಣ ಸಣ್ಣ ಕೂಸುಗಳನ್ನು ಕೊಟ್ಟು ಕಳಿಸುವರು. ವಿಷಯನಡೆದಾಗ ಈ ಕೂಸುಗಳು ತಮ್ಮ ಸ್ವಭಾವಕ್ಕನುಸರಿಸಿ ಕೀಟಲೆಗಳನ್ನು ಎಬ್ಬಿಸುತ್ತವೆ. ಹೀಗೆ ಎಷ್ಟೆಷ್ಟೋ ಕಾರಣಗಳಿಂದ ಆಗಬೇಕಾಗಿದ್ದ ಶಿಕ್ಷಣ ಮಟ್ಟವು ಕಡಿಮೆಯಾಗ ತೊಡಗುವದು. ಆದರೆ ಪಾಲಕರು ಮಕ್ಕಳ ಶಿಕ್ಷಣದ ಬಗ್ಗೆ ಉದಾರ ಧೋರಣೆ ವಹಿಸದಂತಾಗಿದ್ದ ಈ ಸಮಸ್ಯೆಯು ಸುಲಭವಾಗಿ ಬಗೆಹರಿಯದ ಸಮಸ್ಯೆಯಾಗಿದೆ. ಯಾಕಂದರೆ ಇದು ಇಡಿಯ ದೇಶಕ್ಕೇ ಸಂಬಂಧಿಸಿದ ಆರ್ಥಿಕ ಸಮಸ್ಯೆಗೆ ಸಂಬಂಧಿಸಿದ

ಸಮಸ್ಯೆಯಾಗಿದೆ. ಆದರೂ ಶೈಕ್ಷಣಿಕ ದೃಷ್ಟಿಯಿಂದ ಈ ಸಮಸ್ಯೆ ಬಿಡಿಸಲು ಅಂದರೆ ಶಿಕ್ಷಣ ದೃಷ್ಟಿಯಿಂದಾದರೂ ಪಾಲಕರು ಆರ್ಥಿಕ ಪ್ರಶ್ನೆಗಳನ್ನು ಸುಲಭಗೊಳಿಸಿ ಮಕ್ಕಳನ್ನು ಅವರು ನಿಯಮಿತವಾಗಿ ಶಾಲೆಗೆ ಕಳಿಸುವಂತೆ ಸರಕಾರದವರು ಸಕ್ತಿಶಿಕ್ಷಣಯೋಜನೆ, ಬಡ ಹಾಗೂ ಹಿಂದುಳಿದ ಮಕ್ಕಳಿಗೆ ಪಾಟಿ ಪುಸ್ತಕಗಳನ್ನು ಹಂಚುವ ಯೋಜನೆ, ಫೀ-ಮಾಫೀ, ಅಲ್ಲದೆ ಮುಖ್ಯವಾಗಿ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟದಯೋಜನೆ ಇವುಗಳ ಮುಖಾಂತರ ಮನಮುಟ್ಟಿ ಪ್ರಯತ್ನಿಸುತ್ತಿದ್ದಾರೆ. ಆದರೆ ಸದರ ಯೋಜನೆಗಳು ಪೂರ್ಣಾವಸ್ಥೆಗೆ ಮುಟ್ಟಿ ಸುಫಲಗಳನ್ನು ನೀಡಹತ್ತಿದವೆಂದರೆ ನಮ್ಮ ದಾರಿಯಲ್ಲಿನ ಒಂದು ದೊಡ್ಡ ಬಂಡೆಗಲ್ಲು ಮಾಯವಾದಂತಾಗಿ, ಆಗ ಮಕ್ಕಳು ನಿಯಮಿತವಾಗಿ ಶಾಲೆಗೆ ಬರುತೊಡಗುವರು. ಮತ್ತು ಅವರ ಶಿಕ್ಷಣ ಮಟ್ಟವನ್ನು ಎತ್ತರಿಸುವಲ್ಲಿ ನಾವು ಯಶಸ್ಸನ್ನೂ ಪಡೆಯಬಹುದು.

ಮೇಲಿನ ಯೋಜನೆಗಳಲ್ಲಿ ಶಾಲಾ ಮಕ್ಕಳ ಮಧ್ಯಾಹ್ನದ ಊಟದ ಯೋಜನೆಯು ಬಹಳ ಮಹತ್ವದ್ದು. ಆದರೆ ಇದು ಈಗ ತೀರ ಪರಿಮಿತ ವಾದದ್ದಿದೆ. ಈ ಯೋಜನೆ ತೀವ್ರವಾಗಿ ಎಲ್ಲೆಡೆಗಳಲ್ಲಿಯೂ ಜಾರಿಯಲ್ಲಿ ಬರುವಂತಾಗಬೇಕು. ಅಂದರೆ ಪಾಲಕರಿಗೆ ಮಕ್ಕಳ ಪೋಷಣೆಯ ಭಾರವು ಸ್ವಲ್ಪಕಡಿಮೆ ಯಾಗುವದಲ್ಲದೆ ಮಕ್ಕಳೂ ಇದರಿಂದ ಆಕರ್ಷಿತರಾಗಿ ನಿಯಮಿತರಾಗುವರು. ಮಕ್ಕಳು ನಿಯಮಿತರಾದರೆಂದರೆ ತೀರಿತು, ನಮ್ಮ ಕೆಲಸ ದಲ್ಲಿ ಬಹಳಷ್ಟನ್ನು ನಾವು ಸಾಧಿಸಿದಂತೆಯೇಸರಿ.

ಫೀ-ಮಾಫೀ ಯೋಜನೆಯ ಬಗೆಗೆ ಎಂದರೆ ಫೀ ಮಾಫೀ ಸವಲತ್ತು ಎಲ್ಲ ಬಡ ಮಕ್ಕಳಿಗೂ ಅಥವಾ ಇಡಿಯ ಪ್ರಾಥಮಿಕ ಮಟ್ಟದಲ್ಲಿಯೇ ಇರಬೇಕು ಎಂದು ಬೇಡಿಕೆಯಿತ್ತು. ಆದರೆ ಇನ್ನುಮುಂದೆ ತೀವ್ರ ದಲ್ಲಿಯೇ ಪ್ರಾಥಮಿಕ ಶಿಕ್ಷಣದಲ್ಲಿ ಫೀ ರದ್ದತಿಯನ್ನು ಸರಕಾರದವರು ಸಾರಲಿರುವದರಿಂದ ಆದರೆ ಬಗೆಗೆ ನಮ್ಮ ತೊಂದರೆಯು ನೀಗಲಿದೆ ಎಂದೂ ಮತ್ತು ಅದು ಶಿಕ್ಷಣ ಮಟ್ಟವನ್ನು ಎತ್ತರಿಸುದಲ್ಲಿ ಸಹಾಯಕವಾಗುವದೆಂದೂ ಸಮಾಧಾನ ತಾಳಬಹುದಾಗಿದೆ.

ಇನ್ನು ಬಡ ಹಾಗೂ ಹಿಂದುಳಿದ ಮಕ್ಕಳಿಗೆ ಪಾಟಿ ಪುಸ್ತಕಗಳನ್ನು ಹಂಚುವ ಯೋಜನೆಯ ಬಗೆಗೆ ಎಂದರೆ ಈ ಯೋಜನೆಯು ಇನ್ನಷ್ಟು ವ್ಯಾಪಕವಾಗಿ ಎಲ್ಲ ಬಡ ಮಕ್ಕಳಿಗೂ ಪಾಟಿ ಹಾಗೂ ವರ್ಗದ ಎಲ್ಲ ಪುಸ್ತಕಗಳೂ ಸಿಗುವಂತಾಗಬೇಕು. ಅಂದರೆ ಅದಷ್ಟು ತೊಂದರೆಯು ತಪ್ಪಿ ಅದು ನಮ್ಮ ಕೆಲಸಕ್ಕೆ ಸಹಾಯಕ ವಾಗುವದು.

ಹೀಗೆ ಒಟ್ಟಾಗಿಯೇ ಈ ಸಮಸ್ಯೆಯನ್ನು ಬಿಡಿಸುವಲ್ಲಿ ಅಂದರೆ ಊಟ ಹಾಗೂ ಪುಸ್ತಕಗಳನ್ನುಕೊಟ್ಟು ಫೀಯನ್ನು ಮಾಫೀಮಾಡಿ ಸಕ್ತಿ ಶಿಕ್ಷಣವನ್ನು ಅಮಲಿನಲ್ಲಿ ತರುತ್ತಿದ್ದೇವೆ ಎಂದು ಇಟ್ಟುಕೊಂಡಲ್ಲಿ ಆಗ ಪಾಲಕರು ಬಾಲಕರನ್ನು ಶಾಲೆಗೆ ನಿಯಮಿತವಾಗಿ ಕಳಿಸದಿರುವ ಬಗೆಗೆ ಕಾರಣಗಳೇ ಸಿಗಲಾರವು. ನಿಯಮಿತ ಮಕ್ಕಳಲ್ಲಿ ಶಿಕ್ಷಣದ ಮಟ್ಟವನ್ನು ಕಾಯ್ದುಕೊಳ್ಳುವದು ಸುಲಭವೇ ಇರುವದು. ಒಂದು ವೇಳೆ ಆಗಲೂ ಪಾಲಕರಲ್ಲಿ ಏನಾದರೂ ಶಿಕ್ಷಣದ ಬಗೆಗೆ ಮಾತನಾಡುವದಿದ್ದರೆ ಆಗ ಶಿಕ್ಷಣದ ಧೋರಣೆಯ ಬಗೆಗೆ ಭಿನ್ನಾಭಿಪ್ರಾಯಗಳನ್ನು ಹೇಳಬಹುದು. ಆದರೆ ಅವು ಮಕ್ಕಳನ್ನು ಶಾಲೆಗೆ ಕಳಿಸದಿರುವ ಬಗೆಗೆ ಅನ್ವಯಿಸಲಾರವು.

ಹೀಗೆ ಶಿಕ್ಷಣ ಮಟ್ಟವನ್ನು ಎತ್ತರಿಸುವಲ್ಲಿ ಪಾಲಕರ ಆರ್ಥಿಕ ಪರಿಸ್ಥಿತಿಯ ಪ್ರಶ್ನೆಯಿದ್ದು ಅದು ಶಿಕ್ಷಣದ ಬಗೆಗೆ ಅವರ ಸಹಾನುಭೂತಿ ಹಾಗೂ ಸಂಪರ್ಕವನ್ನು ಪಡೆಯುವ ಈ ಪ್ರಶ್ನೆಯು ಬೇಗನೇ ಬಿಡಿಸಲ್ಪಡಲಿ. ಮತ್ತು ಈ ಪ್ರಯತ್ನದಲ್ಲಿರುವ ಅಂದರೆ ಆರ್ಥಿಕ ಮುಂತಾದ ವಿಷಯಗಳ ವಿಕೇಂದ್ರೀಕರಣ ಸಾಧಿಸಿ ಬಡವ ಹಾಗೂ ಶ್ರೀಮಂತ ಇವರಲ್ಲಿನ ಅಂತರವು ಇಲ್ಲದಂತಾಗಿ ಸಮಸ್ತ ನಾಗರಿಕರಿಗೂ ಅನ್ನ, ವಸ್ತ್ರ, ಆಶ್ರಯ, ಔಷಧ, ಹಾಗೂ ಶಿಕ್ಷಣದಂಥ ಮೂಲಭೂತ ಅವಶ್ಯಕತೆಗಳಾದರೂ ಸಿಗುವಂತಾಗಲಿ ಎಂದು ಪ್ರಯತ್ನಿಸುತ್ತಿರುವ ಸರಕಾರಕ್ಕೆ ದೇವರು ಯಶಸ್ಸು ಕೊಡಲಿ ಎಂದು ಹಾರೈಸೋಣ.

[ಮುಂದುವರೆಯುವದು.]

ಸೂಚನೆ:— ಮುಂದಿನ ಪುಟ ಸಂಖ್ಯೆ ೪೧—೪೮ ಇವನ್ನು ೨೧—೨೮ ಎಂದು ತಿದ್ದಿ ಓದಿಕೊಳ್ಳಬೇಕು. [ಸಂ.]

ರವೀಂದ್ರರು ಹಾಗು ರಾಷ್ಟ್ರೀಯತೆ

ಶ್ರೀ ಶಂ. ರಾ. ಮಳಕರಿ, ಶಿ. ವಿ. ಗ. ಸ. ಟ್ರೇ. ಕಾ. ಧಾರವಾಡ

ವಿಶ್ವಕವಿ ರವೀಂದ್ರನಾಥ ಠಾಕೂರರ ಪುಣ್ಯ ದಿನಾಚರಣೆಯ ನಿಮಿತ್ತವಾಗಿ ಸೇರಿದ ಈ ಸಂದರ್ಭದಲ್ಲಿ ನಾನು 'ರವೀಂದ್ರನಾಥ ಠಾಕೂರರ ರಾಷ್ಟ್ರೀಯತೆ' ಈ ವಿಷಯವಾಗಿ ಮಾತನಾಡುತ್ತಿದ್ದೇನೆ. ಹತ್ತೊಂಬತ್ತನೆಯ ಶತಮಾನದ ಅಂತ್ಯ ಭಾಗದಲ್ಲಿ ಹಾಗೂ ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಭಾರತದಲ್ಲಿ ರಾಷ್ಟ್ರೀಯ ಭಾವನೆಯು ಜಾಗ್ರತವಾಯಿತು. ಜನತೆಯಲ್ಲಿಯ ರಾಷ್ಟ್ರೀಯ ಭಾವನೆಯ ಕೆರಳಿಕೆಗೆ ಭಾರತದ ಹಲವಾರು ರಾಷ್ಟ್ರ ಪುರುಷರು ವಿವಿಧ ರಂಗಗಳಲ್ಲಿ ಕಾರ್ಯಮಾಡಿ ಶ್ರಮಿಸಿದ್ದಾರೆ. ಆಳರಸರ ವಿರುದ್ಧವಾಗಿ ಬಂಡು ಹೂಡಿ, ಪ್ರತ್ಯಕ್ಷವಾಗಿ ಅವರ ಆಳಿಕೆಯನ್ನು ವಿರೋಧಿಸಿದವರು ಟಿಳಕ, ಗಾಂಧೀ ಮುಂತಾದವರು. ಆದರೆ ರವೀಂದ್ರನಾಥ ಠಾಕೂರರವರು ತಮ್ಮ ಅಪ್ರತಿಮವಾದ ಕಾವ್ಯಗಳಿಂದ, ನಾಟಕಗಳಿಂದ, ಕಥೆಗಳಿಂದ ಸಾಹಿತ್ಯ ವಾಹಿನಿಯ ಮುಖಾಂತರವಾಗಿ ಜನತೆಯಲ್ಲಿ ರಾಷ್ಟ್ರೀಯತ್ವವನ್ನು ಉದ್ದೀಪನಗೊಳಿಸಿದರು.

ರವೀಂದ್ರನಾಥರಂಥ ರಾಷ್ಟ್ರ ಪುರುಷರನ್ನು ಪೆತ್ತ ಬಂಗಾಲವೇ ಧನ್ಯವು. ರಾಜಾ ರಾಮಮೋಹನರಾಯರ ಸಂಪೂರ್ಣ ಪ್ರಭಾವವು ರವೀಂದ್ರನಾಥರಿಗೆ ಸಂಸ್ಕಾರ ರೂಪವಾಗಿ ಬಂದುದು. ರವೀಂದ್ರರು ಬೆಳೆದ ವಾತಾವರಣವೂ ಅಂತಹದೇ. ಬಾಲ್ಯದಿಂದಲೇ ರವೀಂದ್ರರು ಪ್ರತಿಭಾವಂತರು. ಅವರು ಸೃಷ್ಟಿಯ ಮಗು. ಪಾರತಂತ್ರ್ಯವು ಅವರಿಗೆ ವೈರಿಯು. ಅಂತೆಯೇ ಅವರು ವಿಶ್ವಬಂಧುತ್ವದ ತಳಹದಿಯ ಮೇಲೆಯೇ ಯಾವಾಗಲೂ ವಿಚಾರಿಸುವವರು. ರವೀಂದ್ರರು ಪ್ರತ್ಯಕ್ಷವಾಗಿ ರಾಜಕೀಯದಲ್ಲಿ ಧುಮುಕಿದುದು ಕ್ರಿ. ಶ. ೧೯೦೫ರಿಂದ ನಾಲ್ಕು ವರುಷಗಳ ಕಾಲ. ಕ್ರಿ. ಶ. ೧೯೦೫ರಿಂದ ೧೯೦೮ರ ವರೆಗೆ ರಾಜಕೀಯದಲ್ಲಿ ಶ್ರದ್ಧೆಯಿಂದ ಕೆಲಸ ಮಾಡಿದರು. ಬಂಗಾಲದ ವಿಭಜನೆಯನ್ನು ಅವರು ಸಹಿಸಲಾರದವರಾದರು. ಜನತೆಯ ಮಧ್ಯದಲ್ಲಿ ನಿಂತು ತಾಸುಗಟ್ಟಲೇ ವ್ಯಾಖ್ಯಾನ ಮಾಡಿದರು. ತಮ್ಮ ಕಾವ್ಯಗಳನ್ನು ಸುಶ್ರಾವ್ಯವಾಗಿ ಹಾಡಿ ಭಾರತೀಯರಲ್ಲಿ ಬ್ರಿಟೀಶರ ಆಳಿಕೆಯ ವಿರುದ್ಧವಾಗಿ ರಾಷ್ಟ್ರೀಯ ಭಾವನೆಯನ್ನು ಪ್ರೇರೇಪಿಸಿದರು. ಆದರೆ ಜನತೆ ಅನುಸರಿಸುತ್ತಿರುವ ವಾಮ ಮಾರ್ಗವನ್ನು ಅವರು ಸಹಿಸಲಿಲ್ಲ; ಮತ್ತು ಅದರಿಂದ ಅವರು ಖಿನ್ನರಾಗಿ ೧೯೦೭ರಿಂದ ರಾಜಕೀಯದಿಂದ ಹೊರಗುಳಿದರು; ಭಾರತದ ಸೇವೆ ಮಾಡುವ ಜನಗಳಿಗೆ ಜನರ ಮಧ್ಯದಲ್ಲಿ ನಿಂತು ಅವರ ಬಡತನ, ನಿರಕ್ಷರತೆ, ರೋಗರುಜೆಗಳಿಂದ ನೀವು ಅವರನ್ನು ಮುಕ್ತ ಮಾಡಿರಿ ಎಂದು ಉಪದೇಶಿಸಿದರು. ರವೀಂದ್ರರಿಗೆ ಜನತೆಯ ಪ್ರತ್ಯಕ್ಷ ಸೇವೆ ಮಾಡುವಲ್ಲಿ ಬಹಳ ಆನಂದ. ತಮ್ಮ ಹೊಲ-ಮನೆ-ಗದ್ದೆಗಳ ಮೇಲ್ವಿಚಾರಣೆಗಾಗಿ ಹಳ್ಳಿಗಳಿಗೆ ಹೋಗುತ್ತಿದ್ದ ಅವರು ಹಳ್ಳಿಗರ ಮಧ್ಯದಲ್ಲಿ ನಿಂತು ಅವರ ಜನಜೀವನವನ್ನು ಸುಧಾರಿಸಲು ಪ್ರಯತ್ನಿಸಿದರು.

ಅವರ ಸೇವೆಯು ಕೇವಲ 'ಬಂಗಾಲದ ಮಟ್ಟಿಗೆ ಇಲ್ಲವೆ ಭಾರತದ ಮಟ್ಟಿಗೆ' ಎಂದು ಮರ್ಯಾದಿತವಾದುದಲ್ಲ. ವಿಶ್ವವೇ ತಮ್ಮ ಕಾರ್ಯಕ್ಷೇತ್ರವೆಂದು ಅವರು ಬಗೆದಿದ್ದರು. ಅವರು ಭಾರತದ ರಾಜಕಾರಣದ ಬಗೆಗೆ ಮಾತನಾಡುವಾಗ ಅವರ ರಾಷ್ಟ್ರೀಯತೆಯ ಅರಿವು ನಮಗಾಗುತ್ತದೆ. ಭಾರತದಲ್ಲಿ ಕಾಂಗ್ರೆಸ್ಸು ಮೊದಮೊದಲು ಸ್ವಾತಂತ್ರ್ಯ ಭಿಕ್ಷೆ ಬೇಡಿತು, ಮುಂದೆ ಆಳರಸರ ವಿರುದ್ಧವಾಗಿ ನಿಂತು ಸ್ವಾತಂತ್ರ್ಯವನ್ನು ಹಕ್ಕು ಎಂದು ಬೇಡಿತು. ಆದರೆ ರವೀಂದ್ರರ ದೃಷ್ಟಿಯಲ್ಲಿ ಸ್ವಾತಂತ್ರ್ಯದ ಅರ್ಥವೇಬೇರೆ. ಸ್ವಾತಂತ್ರ್ಯವೆಂದರೆ "ಕೆಲವು ಶ್ರೇಷ್ಠ ಸದ್ಗುಣಗಳನ್ನು ಪಡೆದುಕೊಳ್ಳುವದಾಗಿದೆ. ನಿರ್ಭಯ, ವಿಶಾಲವಾದ ದೃಷ್ಟಿ, ಉದಾತ್ತವಾದ ಮನಸ್ಸು, ಸತ್ಯದ ಬಗೆಗೆ ಪ್ರೇಮ, ಪರಿಪೂರ್ಣತೆಗಾಗಿ ಅವಿರತ ಹೋರಾಟ, ಸ್ವತಂತ್ರವಾಗಿ ವಿಚಾರ ಮಾಡುವ ಚಟ, ಉದಾತ್ತ ಆಚಾರ ವಿಚಾರಗಳಿಗಾಗಿ ದೈವಿಕ ಮಾರ್ಗ ದರ್ಶನ" ಇವು ಸ್ವಾತಂತ್ರ್ಯದ ಲಕ್ಷಣಗಳೆಂದು ರವೀಂದ್ರರ ಮತ.

ಗಾಂಧೀ-ಟಿಳಕರಂತೆ ರವೀಂದ್ರರಿಗೂ ಭಾರತವು ಪರಕೀಯರ ಆಳಿಕೆಯಿಂದ ಮುಕ್ತವಾಗಬೇಕೆಂಬ ಬಲವಾದ ಆಕಾಂಕ್ಷೆ ಇತ್ತು; ಆದರೆ ಅವರು "ನಾವು ಭಾರತೀಯರೆಲ್ಲ ಒಂದು ಜನಾಂಗ; ಇಲ್ಲಿ ಸ್ಪೃಶ್ಯಾಸ್ಪೃಶ್ಯ ಇಲ್ಲವೇ

ವರ್ಣದ್ವೇಷದ ಯಾವ ಭೇದವೂ ಬೇಡ. ಮೊದಲು ಸ್ವಾತಂತ್ರ್ಯ ಸಂಪಾದನೆಯ ಪೂರ್ವದಲ್ಲಿ ನಾವು ರಾಷ್ಟ್ರಕ್ಕಿರಬೇಕಾದ ಮಟ್ಟವನ್ನು ಗಳಿಸಿಕೊಳ್ಳೋಣ! ಸ್ವಾತಂತ್ರ್ಯ ಎನ್ನುವದು ರಾಷ್ಟ್ರಜೀವನದಲ್ಲಿ ಸಕಾಲದಲ್ಲಿ ಬರುವ ಹೂ ಎಂದು ಅವರು ಪ್ರತಿಪಾದಿಸಿದರು.

ಮಹಾತ್ಮಾ ಗಾಂಧೀ ಹಾಗೂ ರವೀಂದ್ರರ ಗುರಿ ಒಂದೇ. ಆದರೆ ಮಾರ್ಗದಲ್ಲಿ ಭಿನ್ನತೆ ಕಂಡು ಬರುತ್ತದೆ. ಗಾಂಧೀಜೀಯವರು ಪ್ರಾರಂಭಿಸಿದ ಅಸಹಕಾರ ಅಂದೋಲನವು ಇವರಿಗೆ ಸಮ್ಮತವಾಗಲಿಲ್ಲ, ಕಾರಣ ಇಷ್ಟೇ! ಅಹಿಂಸೆ ಅಸಹಕಾರ ಈ ಮಹಾ ಅಸ್ತ್ರಗಳನ್ನು ಭಾರತೀಯರು ಇಂದಿನ ಸಮಯದಲ್ಲಿ ಉಪಯೋಗಿಸುವಷ್ಟು ವೈಚಾರಿಕ ರೀತಿಯಿಂದ ಪ್ರಬುದ್ಧರಾಗಿಲ್ಲ. ಅಹಿಂಸೆಯು ಹಿಂಸಾಮಯವಾಗಿ ಕಾರ್ಯಪ್ರವೃತ್ತವಾದೀತು. ಅಸಹಕಾರವು ನೀತಿಯ ಒರೆಗಲ್ಲಿಗೆ ಹತ್ತಲಾರದು, ರಾಷ್ಟ್ರಕ್ಕಾಗಿ ನೀತಿಯನ್ನೂ ಬದಿಗಿರಿಸುವಹಾದರೆ ನನಗೆ ಅಂಥ ರಾಷ್ಟ್ರೀಯತೆ ಬೇಕಾಗಿಲ್ಲ; ಎಂದು ಖಂಡಿತವಾಗಿ ಠಾಕೂರರು ಗಾಂಧೀಜೀಗೆ ತಿಳಿಸಿದರು. ಗಾಂಧೀಜೀಯವರಾದರೂ ಠಾಕೂರರವರ ಮಾತುಗಳನ್ನು ಆಸ್ಥೆಯಿಂದ ಕೇಳಿದರು. ಕೊನೆಗೆ ಒಪ್ಪಿಕೊಂಡದ್ದುಂಟು. ವಂಗ-ಭಂಗದ ಚಳವಳಿಯಲ್ಲಿ ಜನತೆ ಹಿಂಸೆಯ ಮಾರ್ಗಕ್ಕೆ ಇಳಿದಿದ್ದರಿಂದಲೇ ಇವರು ೧೯೦೭ರಲ್ಲಿ ರಾಜಕೀಯದಿಂದ ವಿಮುಕ್ತರಾದುದು. ಗಾಂಧೀಜೀ ಹಾಗೂ ಠಾಕೂರರವರಲ್ಲಿ ಪರಸ್ಪರ ಅಪಾರ ಶ್ರದ್ಧೆ-ವಿಶ್ವಾಸಗಳಿದ್ದವು.

೧೯೧೩ರಲ್ಲಿ ಠಾಕೂರರ ಗೀತಾಂಜಲಿಯು 'ನೋಬೆಲ್' ಪಾರಿತೋಷಕವನ್ನು ಪಡೆಯಿತು. ಇದರಿಂದ ಇವರು ವಿಶ್ವಮಾನ್ಯರಾದರು. ಜಗತ್ತಿನ ಮುಂದುವರೆದ ರಾಷ್ಟ್ರಗಳೆಲ್ಲವೂ ಇವರಿಗೆ ಆದರದ ಆಮಂತ್ರಣವನ್ನು ಕೊಟ್ಟು ಬರಮಾಡಿಕೊಂಡವು. ಆಗ ಠಾಕೂರರು ಭಾರತದ ಅನಭಿಷಿಕ್ತ ಸಾಂಸ್ಕೃತಿಕ ಹಾಗೂ ರಾಷ್ಟ್ರೀಯ ಪ್ರತೀಕರಾಗಿ ಫ್ರಾನ್ಸ; ಅಮೇರಿಕಾ, ಇಂಗ್ಲಂಡ, ಜಪಾನಗಳಲ್ಲಿ ಸಂಚರಿಸಿ ರಾಯಭಾರಿ ಕಾರ್ಯಮಾಡಿದರು. ಯಾವ ರಾಷ್ಟ್ರಗಳು ಭಾರತೀಯರನ್ನು ಸೋತ, ಹಿಂದುಳಿದ ಜನಾಂಗದವರೆಂದು ದೂಷಿಸುತ್ತಿದ್ದರೋ ಅವರೇ ರವೀಂದ್ರರನ್ನು ಗೌರವಿಸಿ ಭಾರತೀಯರ ಬಗೆಗೆ ತಮಗಾಗಿರುವ ತಪ್ಪು ಕಲ್ಪನೆಯನ್ನು ಹೋಗಲಾಡಿಸಿಕೊಂಡರು. ರವೀಂದ್ರರಾದರೂ ನಾನು, ನನ್ನದು ಎಂದು ಹೆಮ್ಮೆ ಪಡದೆ ನನಗೆ ದೊರೆತ ಮಾನ ಭಾರತೀಯರ ವಾಣಿಗೆ ದೊರೆತಿದೆ ಎಂದು ಹೇಳಿ ತಮ್ಮ ರಾಷ್ಟ್ರೀಯತೆಯನ್ನು ವ್ಯಕ್ತ ಪಡಿಸಿದ್ದಾರೆ.

ರಾಜಕೀಯ ಸ್ವಾತಂತ್ರ್ಯಕ್ಕಿಂತ ಸಾಮಾಜಿಕ ಸುಧಾರಣೆಗಾಗಿ ರಾಷ್ಟ್ರೀಯ ಚಳುವಳಿಗೆ ಠಾಕೂರರು ಬೆಂಬಲವಿತ್ತರು. ಭಾರತೀಯರು ಜಗತ್ತಿನ ನಾಗರಿಕರಾಗಬೇಕು ಎಂದು ಇವರ ಅಭಿಲಾಷೆ. "ಸಹನಾವವತು ....ಶಾಂತಿಃ'' ಎಂಬ ಶ್ಲೋಕವು ವಿಶ್ವಬಂಧುತ್ವದ ಪ್ರತೀಕವೇ ಆಗಿರುವದಿಲ್ಲವೇ! ೧೯೧೫ರಲ್ಲಿ ಠಾಕೂರರಿಗೆ ಬ್ರಿಟೀಶರು ಅವರ ಕವಿತ್ವಕ್ಕೆ ಮೆಚ್ಚಿ "ನೈಟ" ಪದವಿಯನ್ನು ಕೊಟ್ಟರು. ಆದರೆ ೧೯೧೯ರಲ್ಲಿ ಜಾಲಿಯನ್ ವಾಲಾ ಬಾಗದಲ್ಲಿಯ (ಅಮೃತಸರ) ಅಮಾನುಷೀಯ ಕಗ್ಗೊಲೆಗೆ ಅತೀವ ದುಃಖಿತರಾಗಿ ಇವರು ವ್ಹಾಯ್ಸರಾಯರೆಗೆ ಪ್ರತಿಭಟನೆ ಸೂಚಿಸಿ ಪತ್ರ ಬರೆದು ನೈಟ ಪದವಿಯನ್ನು ತಿರಸ್ಕರಿಸಿದರು. ಅವರ ಪ್ರತಿಭಟನಾ ಪತ್ರವು ಅವರ ರಾಷ್ಟ್ರೀಯತೆಯು ಎಂತಹ ಪರಾಕಾಷ್ಟತೆಯನ್ನು ಮುಟ್ಟಿತ್ತೆಂಬುದರ ಪ್ರತೀಕವಾಗಿರುತ್ತದೆ.

ರವೀಂದ್ರರ ರಾಷ್ಟ್ರೀಯ ಪ್ರೇಮವನ್ನು ನಾವು ಕಾಣಬೇಕಿದ್ದರೆ ಅವರ ಕಾವ್ಯ, ನಾಟಕ, ಕಥೆ, ವಿಮರ್ಶೆಗಳಲ್ಲಿ ಕಾಣಬಹುದು. ಅವರ ಕವಿತೆಯಾದ 'ಜನಗಣಮನ' ರಾಷ್ಟ್ರೀಯಗೀತೆಯಾಗಿರುವಾಗ ಅದರ ನಿರ್ಮಾಣಕನ ರಾಷ್ಟ್ರೀಯತೆಯನ್ನು ಅಳೆಯಲು ಯಾವ ಮಾನದಂಡ ಯೋಗ್ಯವಾದೀತು! ಇವರು ರಜಪುತ್ರ, ಸಿಕ್, ಹಾಗೂ ಮಹಾರಾಷ್ಟ್ರೀಯ ವೀರಗತ ಯೋಧರ ಕವನ ಚಿತ್ರಗಳನ್ನು ಹಾಡಿ ಭಾರತೀಯ ತರುಣರ ರಕ್ತದಲ್ಲಿ ರಾಷ್ಟ್ರೀಯ ಹೊಸ ಪ್ರವಾಹವನ್ನು ಹರಿಸಿದರು. ಇವರು ಬರೆದ ಗೋರಾ ಕಥೆ ಬ್ರಿಟೀಶರ ವಿರುದ್ಧ ಅಪ್ರತ್ಯಕ್ಷವಾಗಿ ಬರೆದ ರಾಜಕೀಯ ಟೀಕೆಯೇ ಆಗಿದೆ. ಪಂಜರದ ಪಕ್ಷಿ, ರಾಜಾರಾಣಿ ನಾಟಕ, ಮುಕ್ತದ್ವಾರಾ ಕಥೆ ರಾಷ್ಟ್ರೀಯತೆಯ ಕೆಚ್ಚಿನ ಉದಾಹರಣೆಗಳು. ಇವರ ಕೊನೆಯುಸಿರು ವಿಶ್ವ ಭಾರತಿ ಶಾಂತಿ ಶಬ್ದಗಳಿಂದಲೇ ಇಂತಹ ವಿಶಿಷ್ಟ ರಾಷ್ಟ್ರೀಯ ಪುರುಷನು ಮತ್ತೊಬ್ಬನಿಲ್ಲವೆಂದೇ ಹೇಳಬಹುದು.

ರವೀಂದ್ರರು ಮಹಾತ್ಮಾ ಗಾಂಧೀಜೀಯವರ ಬಗೆಗೆ ತುಂಬಾ ಆದರ ಉಳ್ಳವರಾಗಿದ್ದರು. ಗಾಂಧೀಜೀಯವರು ೨೧ ದಿನಗಳ ಅನಶನ ವ್ರತವನ್ನುಯರವಡಾ ಜೇಲಿನಲ್ಲಿ ಕೈಕೊಂಡಾಗ್ಗೆ ೭೦ ವರುಷದ ವೃದ್ಧ ಠಾಕೂರರು ಅವರನ್ನು ಪ್ರತ್ಯಕ್ಷವಾಗಿ ಭೆಟ್ಟಿಯಾಗಿ ಅವರ

ಕಾರ್ಯಕ್ಕೆ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ರವೀಂದ್ರರ ಒಂದು ಕವನವೇ ಗಾಂಧೀಜೀಯವರು ಧರಿಸುತ್ತಿದ್ದ ಪಗಡಿಯನ್ನು ಬಿಚ್ಚಿ ಚಡ್ಡಿ ಧರಿಸುವಂತೆ ಮಾಡಿತು.

ರವೀಂದ್ರನಾಥ ಠಾಕೂರರಲ್ಲಿ ನೆಹರೂರವರಿಗೆ ತುಂಬಾ ಶ್ರದ್ಧೆಯು. ನೆಹರೂರವರು ಭಯ ಭಕ್ತಿಯಿಂದ ರವೀಂದ್ರರನ್ನು 'ಗುರುದೇವಾ' ಎಂದು ಸಂಬೋಧಿಸುತ್ತಿದ್ದರು. ನೆಹರೂರವರ ಪ್ರತಿಕಾರ್ಯದ ಬಗೆಗೂ ಠಾಕೂರರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ೧೯೩೭ರಲ್ಲಿಯೇ ನೆಹರೂರವರೇ ಸ್ವತಂತ್ರ ಭಾರತದ ಪ್ರಧಾನ ಮಂತ್ರಿಯ ಗದ್ದುಗೆಗೆ ಹಕ್ಕುದಾರರು ಎಂದು ಕವಿ ಭವಿಷ್ಯ ನುಡಿದಿದ್ದಾರೆ. ನೆಹರೂರವರ ಮಗಳು ಇಂದಿರಾ ಗಾಂಧೀ ರವೀಂದ್ರರ ಶಾಂತಿನಿಕೇತನದಲ್ಲಿಯೇ ಶಿಕ್ಷಣ ಪಡೆದವಳು. ಠಾಕೂರರು ಅವಳ ಶಿಕ್ಷಣದ ಬಗೆಗೆ ನೆಹರೂರವರಿಗೆ ಬರೆದ ಪತ್ರದಲ್ಲಿ ನೆಹರೂರ ಹಾಗೂ ಅವರ ಮಗಳ ಗುಣಗಾನದ ವರ್ಣನೆ ಬರುತ್ತದೆ. ಇಂದು ಭಾರತದ ರಾಷ್ಟ್ರೀಯ ಮಹಾ ಸಂಸ್ಥೆಯಾದ ಕಾಂಗ್ರೆಸ್ಸಿನ ಅಧ್ಯಕ್ಷಣಿ ಯಾಗಿರಬಲ್ಲ ವ್ಯಕ್ತಿಯ ಗುರು ರವೀಂದ್ರನಾಥ ಠಾಕೂರರು ಎಂಬುದನ್ನು ಮನಗಂಡರೆ ವಿಶ್ವಕವಿಗಳ ರಾಷ್ಟ್ರೀಯತೆಯ ಆಳ ತಿಳಿದೀತು.

ಠಾಕೂರರು ಗೀತೆ, ಕವನಗಳನ್ನು ರಚಿಸುವವರಷ್ಟೇ ಆಗಿರಲಿಲ್ಲ. ರಾಜಕಾರಣಿ, ಅಪ್ರತಿಮ ರಾಷ್ಟ್ರ ಪುರುಷ, ಶ್ರೇಷ್ಠ ಮೇಧಾವಿ. ವಿಶ್ವವೇ ನನ್ನ ಮನೆ, ಮಾನವ ಕುಲವೇ ನನ್ನ ಕುಟುಂಬ ಎಂದು ಇವರ ಘೋಷಣೆಯಾಗಿದೆ.

೮೦ ವರುಷಗಳ ವೃದ್ಧಾಪ್ಯದಲ್ಲಿಯೂ ಭಾರತೀಯ ಸಂಸ್ಕೃತಿ ಹಾಗೂ ಭಾರತೀಯ ಕಲೆಗಳ ಪುನರುಜ್ಜೀವನಕ್ಕಾಗಿಯೇ ತೆರೆದ ಶಾಂತಿನಿಕೇತನ, ವಿಶ್ವಭಾರತಿ ವಿಶ್ವವಿದ್ಯಾಲಯಗಳ ಸಂಚಾಲನ ಕಾರ್ಯ ಮಾಡುತ್ತಲೇ ಇದ್ದರು.

ರವೀಂದ್ರರ ವಾಣಿ ಯುಗವಾಣಿ, ರವೀಂದ್ರರು ವಿಶ್ವಕವಿಗಳು, ರವೀಂದ್ರರ ರಾಷ್ಟ್ರೀಯತೆ ಅಪ್ರತಿಮವಾದುದು. ಕವಿ ರವೀಂದ್ರರು ಭಾರತ ಮಾತೆಯ ಶ್ರೇಷ್ಠ ಪುತ್ರರು.

(ವಿ. ಸೂ. ರವೀಂದ್ರನಾಥ ಠಾಕೂರರ ಪುಣ್ಯ ತಿಥಿಯ ನಿಮಿತ್ತ ಏರ್ಪಡಿಸಿದ ವಿಚಾರ ಸಂಕಿಣದಲ್ಲಿ ಮಾಡಿದ ಭಾಷಣದ ಸಾರವು.)

ವ್ಯಕ್ತಿತ್ವ ವಿಕಾಸದ ಸಾಧನ ಮಾರ್ಗ

ಲೇಖಾಂಕ ೪

ಬರೆದವರು : **ಶ್ರೀ ಅನ್ನದಾನೀಶ್ವರ ವಿರಕ್ತಮಠ,** ಹೆಡ್‌ಮಾಸ್ತರ ಮಹಿಳಾ ವಿದ್ಯಾಪೀಠ ಹಾಯಸ್ಕೂಲ, ಹುಬ್ಬಳ್ಳಿ.

"ನೀವು ಬರೆಯುವಾಗ ಕರಿ ಹಲಿಗೆಗೆ ತೋಳು ತಾಕುವದು. ನಿಮ್ಮ ಶರ್ಟಿನ ಕಾಲರು ಒಂದು ಉದ್ದ, ಒಂದು ಗಿಡ್ಡವಿವೆ. ನಿಮ್ಮ ಧೋತರ ಕಸಗುಡಿಸುವದು. ನಿಮ್ಮ ಹೊಲಸು ಟೊಪ್ಪಿಗೆಯನ್ನು ನೋಡಿ ಮಕ್ಕಳು ನಗುವರು. ಮುಖ ಕಿವುಚಿಕೊಂಡು ಪಾಠಕೊಡಬೇಡಿರಿ. ಪ್ರಸನ್ನ ವದನವಿರಲಿ."

ಬಾಗಲಕೋಟಿ ಟ್ರೇನಿಂಗ ಕಾಲೇಜಿನಲ್ಲಿ ಒಂದು ಮೋಜಿನ ಪ್ರಸಂಗ. ಒಬ್ಬ ಶಿಕ್ಷಕ–ವಿದ್ಯಾರ್ಥಿಯು ಪ್ರ್ಯಾಕ್ಟಿಸಿಂಗ ಸ್ಕೂಲಿನಲ್ಲಿ ೩ನೆಯ ವರ್ಗಕ್ಕೆ ಪಾಠ ಕೊಡುತ್ತಿದ್ದ. ನಾನು ನಿರೀಕ್ಷಣೆ ಮಾಡಲಿಕ್ಕೆ ಹೋಗಿದ್ದೆ. ಆಗ ಮೇಲಿನಂತೆ ಆ ಶಿಕ್ಷಕನಿಗೆ ತಿಳಿಸಿದೆ ಮತ್ತು ಪಾಠದ ಟಿಪ್ಪಣಿಯಲ್ಲಿ ಹಾಗೆ ಬರೆದೆ. ಪಾಠ ನಡೆದಾಗ ಮಕ್ಕಳು ಹೀಗೆ ಮಾತಾಡುತ್ತಿದ್ದರು:—

"ಮಾಸ್ತರ ಟೊಪ್ಪಿಗೆಗೆ ಯಾರೋ ಬಣ್ಣ ಹಾಕಿರುವರು. ಧೋತರ ಎಳೆಯುತ್ತಿದೆ. ಶರ್ಟಿನ ತೋಳಿನಿಂದ ಅಕ್ಷರ ಅಳಿಸಿದವು, ಮೋರೆ ನೋಡು, ಹೇಗೆ ಮಾಡಿರುವರು!" ಹೀಗೆ ಮಾತಾಡುತ್ತ ತಮ್ಮೊಳಗೇ ಹುಡುಗರು ನಗುತ್ತಿದ್ದರು. ಮಕ್ಕಳ ಲಕ್ಷ್ಯವು ಪಾಠದಕಡೆಗೆ ಇರಲಿಲ್ಲ. ಶಿಕ್ಷಕನ ದುರ್ಮುಖ ಮತ್ತು ಬಟ್ಟೆಯ ಕಡೆಗೇನೇ ಅವರ ಅವಧಾನವು ಕೇಂದ್ರೀಕೃತವಾಗಿತ್ತು. ಪಾಠ ಮುಗಿದಮೇಲೆ ಶಿಕ್ಷಕನು ತನ್ನ ಟಿಪ್ಪಣಿಯನ್ನು ಪ್ರಿನ್ಸಿಪಲ್‌ರಿಗೆ ತೋರಿಸಿದನು. ಪ್ರಿನ್ಸಿಪಲ್ಲರ ಅಪ್ಪಣೆಯಾಯಿತು. ಹೋದೆ.

ಪ್ರಿನ್ಸಿಪಲ್ : ಹೀಗೇಕೆ ಬರೆದಿರುವಿರಿ ?

ನಾನು : ನಿರೀಕ್ಷಿಸಿದ್ದನ್ನು ಬರೆದಿರುವೆನು.

ಪ್ರಿನ್ಸಿಪಲ್ : ಯಾರೂ ಹೀಗೆ ಬರೆಯುವದಿಲ್ಲ.

ನಾನು : ಅವರು ವ್ಯಕ್ತಿತ್ವದ ಕಡೆಗೆ ಲಕ್ಷ್ಯ ಕೊಡುತ್ತಿರಲಿಕ್ಕಿಲ್ಲ.

ಪ್ರಿನ್ಸಿಪಲ್ : ಪಾಠದ ಬಗ್ಗೆ ಬರೆಯಿರಿ, ಡ್ರೆಸ್ಸಿನ ಬಗ್ಗೆ ಮತ್ತು ದೇಹದ ಬಗ್ಗೆ ಬರೆಯಬೇಡಿರಿ.

ನಾನು : ಡ್ರೆಸ್ಸು ಮತ್ತು ದೇಹದ ರೀತಿ ನಡಾವಳಿಗಳು ಶಿಕ್ಷಕನ ವ್ಯಕ್ತಿತ್ವಕ್ಕೆ ಕಳೆತರುತ್ತವೆ. ಡ್ರೆಸ್ಸು ಸ್ವಚ್ಛವಾಗಿರಬೇಕು. ಶಿಕ್ಷಕನು ಅಚ್ಚುಕಟ್ಟಾಗಿ ಧರಿಸಿರಬೇಕು. ನಡಿಗೆ, ನಿಲ್ಲುವದು, ನೋಡುವದು, ವಿಚಿತ್ರವಾಗಿರಬಾರದು. ಮುಖದ ಡೊಂಕು ಮನದ ಡೊಂಕನ್ನು ತೋರಿಸುವದು ಅಲ್ಲವೇ ?

ಪ್ರಿನ್ಸಿಪಲ್ : ಪಾಠಕ್ಕೂ ಇದಕ್ಕೂ ಸಂಬಂಧವಿಲ್ಲ.

ನಾನು : ಸಂಬಂಧವಿದೆ. ಶಿಕ್ಷಕನ ಪಾಠದಕಡೆಗೆ ಮಾತ್ರ ಮಕ್ಕಳು ನೋಡುತ್ತಿರುವದಿಲ್ಲ. ಶಿಕ್ಷಕನನ್ನೂ ನೋಡುತ್ತಿರುವರು. ಅವನ ವ್ಯಕ್ತಿತ್ವದ ಪ್ರಭಾವವು ಅವರ ಮೇಲೆ ಬೀಳುವದು. ದೇಹ ಬಟ್ಟೆಗಳ ಸ್ವಚ್ಛತೆ ಮತ್ತು ಶಿಕ್ಷಕನ ಹಾವಭಾವ, ಶಿಸ್ತುಗಳು ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಮಾಡುತ್ತವೆ. ಶಿಕ್ಷಕನ ಚಟ ಅಥವಾ ರೂಢಿಗಳನ್ನೇ ಅವರು ಅನುಕರಣ ಮಾಡುವರು. ಅವಧಾನ—ಅಭಿರುಚಿಗಳೂ ಶಿಕ್ಷಕನ ವ್ಯಕ್ತಿತ್ವದಿಂದ ಹೆಚ್ಚಬಲ್ಲವು.

ಪ್ರಿನ್ಸಿಪಲ್ : ಹೀಗೆ ಯಾರು ಹೇಳುವರು ?

ನಾನು : ಆಧುನಿಕ ಶಿಕ್ಷಣದ ಮನೋವಿಜ್ಞಾನಿಗಳು ಹೇಳುವರು.

ಪ್ರಿನ್ಸಿಪಲ್ಲರು ಮನಸ್ಸಿನಲ್ಲಿ ಒಪ್ಪಿರಬಹುದು. ಆದರೆ ಹೊರಗೆ ಅಭಿಮಾನದಿಂದ ಒಪ್ಪಲಿಲ್ಲ. ನನ್ನ ವಿಚಾರಗಳು ಇಂದಿಗೂ ಹಾಗೇ ಉಳಿದಿವೆ.

ಜಾನ್‌ಡ್ಯುಯಿ ಎಂಬ ಸುಪ್ರಸಿದ್ಧ ಅಮೇರಿಕನ್ ಶಿಕ್ಷಣ ಶಾಸ್ತ್ರಜ್ಞರು ಹೇಳಿರುವದೇನಂದರೆ:—

"ಮಕ್ಕಳ ಮಧ್ಯದಲ್ಲಿ ತೋರುವ ಶಿಕ್ಷಕನ ನಡೆನುಡಿ, ಭಾವಭಂಗಿ, ರೀತಿನೀತಿಗಳು ಅವನ ಭಾವೀ ಜೀವನವನ್ನು ರೂಪಿಸಲು ಹೆಚ್ಚಾಗಿ ಸಹಾಯ ಮಾಡುತ್ತವೆ."

ಗ್ರಾಹಾಮ ಎಂಬ ಮತ್ತೊಬ್ಬ ಸಾಹಿತಿಯು ಹೀಗೆ ಹೇಳಿರುವನು:—

"ಮನುಷ್ಯನ ಮಾತು, ನಡತೆ ಮತ್ತು ಬಟ್ಟೆಗಳು ಅವನ ವ್ಯಕ್ತಿತ್ವವನ್ನು ಎತ್ತಿ ತೋರಿಸುತ್ತವೆ ?

ಲಾರ್ಡ ಚೆಸ್ಟರ ಫೀಲ್ಡನು ತನ್ನ ಮಗನಿಗೆ ಬರೆದ ಪತ್ರದಲ್ಲಿ ಹೀಗೆ ಉಪದೇಶ ಮಾಡಿರುವನು:—

"ಮಗನೇ, ಚನ್ನಾಗಿ ಅಚ್ಚುಕಟ್ಟಾಗಿ ಬಟ್ಟೆಯನ್ನು ಧರಿಸು. ನಿನ್ನ ಯುಗದ ವಿಚಾರವಂತ ಮನುಷ್ಯರು ಧರಿಸುವಂತೆ ಧರಿಸು, ದೇಶಕಾಲ-ಪರಿಸ್ಥಿತಿಗಳಿಗನುಸರಿಸಿ ಬಟ್ಟೆ ಧರಿಸು. ಬಟ್ಟೆಗೆ ಅತಿ ಮಹತ್ವವನ್ನೂ ಕೊಡಬೇಡ. ಕೊಡದೇ ಇರಬೇಡ. ಅತಿ ಡೌಲುಮಾಡಿ ಜಂಬದ ಕೋಳಿಯಾಗಬೇಡ. ಅತಿ ತಿರಸ್ಕರಿಸಿ ಹೀನನಾಗಬೇಡ. ಆದರೆ ವಿಚಾರದಿಂದ, ಎಚ್ಚರಿಕೆಯಿಂದ ಸ್ವಚ್ಛ ಬಟ್ಟೆಯನ್ನು ಅಚ್ಚುಕಟ್ಟಾಗಿ ಧರಿಸು."

ಜೇಮ್ಸ್ ಬೆಂಡರನು ಹೇಳಿರುವದೇನಂದರೆ:—

"ಬಟ್ಟೆಗಳು ಮನುಷ್ಯನ ಶೀಲಕ್ಕೂ ವ್ಯಕ್ತಿತ್ವಕ್ಕೂ ಕಳೆಕಟ್ಟುತ್ತವೆ. ನಿನ್ನ ಬಟ್ಟೆಗಳು ಬಹು ಚೆಂದವಿವೆ ಎಂದು ಅನ್ನುವದಕ್ಕಿಂತಲೂ ಈ ಬಟ್ಟೆಗಳಿಂದ ನೀನು ಸೊಗಸಾಗಿ ಕಾಣುತ್ತಿರುವಿ ಎಂದು ವಿಚಾರವಂತರು ಅನ್ನಬೇಕು. ಹಾಗೆ ಬಟ್ಟೆಧರಿಸು."

ಶೇಕ್ಸಪಿಯರ್ ಮಹಾ ಕವಿಯು ಹ್ಯಾಮಲೆಟ್ ನಾಟಕದಲ್ಲಿ ಹೇಳಿರುವದೇನಂದರೆ:—

"ಬಟ್ಟೆಗಳು ಒಳ್ಳೆಯವು ಇರಲಿ. ಜಂಬದ ಬಟ್ಟೆಗಳು ಬೇಡ. ನಿನ್ನ ಆರ್ಥಿಕ ಸ್ಥಿತಿಗೆ ಅನುಗುಣವಾಗಿ ಬಟ್ಟೆ ಧರಿಸು. ಅನೇಕ ಸಾರೆ ಬಟ್ಟೆಗಳು ಮನುಷ್ಯನ ವ್ಯಕ್ತಿತ್ವವನ್ನು ಕುರಿತು ಕೂಗಿ ಕೂಗಿ ಸಾರುತ್ತವೆ."

"ಕೂಡ್ರುವದು, ನಿಲ್ಲುವದು, ನಡೆಯುವದು ದರಿದ್ರವಿದ್ದರೆ ಸಿರಿವಂತ ಬಟ್ಟೆಗಳೂ ಕೂಡ ಮನುಷ್ಯನಿಗೆ ವ್ಯಕ್ತಿತ್ವದ ಸಂಪತ್ತನ್ನು ದೊರಕಿಸಿ ಕೊಡಲಾರವು. ಸೀದಾ ಕೂಡ್ರು. ಸೀದಾ ನಡೆ. ಸೀದಾ ನಿಲ್ಲು. ಅಂದರೆ ಶರೀರಕ್ಕೆ ಕಳೆ ಬರುವದು." ಎಂದು ಡೇಲ ಕಾರ್ನೇಗಿ ಎಂಬ ಅಮೇರಿಕನ್ ಬಹುಶ್ರುತ ವ್ಯವಹಾರ ಜ್ಞಾನಿಯು ಹೇಳಿರುವನು.

ಶಿಕ್ಷಕರು ಮತ್ತು ಶಿಕ್ಷಕಿಯರು ಇತ್ತ ಗಮನ ಕೊಡಬೇಕು. ಅಂದರೆ ಅವರ ವ್ಯಕ್ತಿತ್ವಕ್ಕೆ ಶೋಭೆಯೂ ಸುಭಗತೆಯೂ ಉಂಟಾಗದೇ ಇರಲಾರವು.

ಇಂಗ್ಲಿಷ ಶಬ್ದಗಳಲ್ಲಿಯ ಅಕ್ಷರಜೋಡಣೆಯ ವೈಚಿತ್ರ್ಯ

ಲೇಖಕರು : **ಶ್ರೀ ಶಟ್ಟಿ ಶಾಮರಾಯರು,** ಎಮ್.ಎ.,ಎಸ್.ಟಿ.ಸಿ.ಡಿ.

ಇಂಗ್ಲಿಷು ವರ್ಣಮಾಲೆಯಲ್ಲಿಯ ೨೬ ಅಕ್ಷರಗಳಲ್ಲಿ C. Q. X. ಈ ಅಕ್ಷರಗಳ ಕೆಲಸವನ್ನು K. S. KS. ಈ ಅಕ್ಷರಗಳು ಮಾಡುವದರಿಂದ ಅವುಗಳನ್ನು ಬಿಟ್ಟರೆ ೨೩ ಧ್ವನಿಗಳು ಅಥವಾ ಉಚ್ಚಾರಣೆಗಳು ಉಳಿದವು. ಇವುಗಳಲ್ಲಿ F. V. Z. ಈ ಧ್ವನಿಗಳು ನಮ್ಮ ದೇಶೀಯ ಭಾಷೆಗಳಲ್ಲಿ (ಉರ್ದು ಬಿಟ್ಟು) ಇಲ್ಲ; ಇಂಗ್ಲಿಷಿಗೆ ಸ್ವಾಭಾವಿಕವಾದವೇ. ಹೀಗೆ ಉಳಿದ ೨೦ ವರ್ಣಗಳಲ್ಲಿ ೫ ಸ್ವರಗಳೂ, ೨ ಅರ್ಧ ಸ್ವರಗಳೂ (ಸೆಮಿವ್ಹಾವೆಲ್ಸ್) ಇವೆ. ಇವು ಹೋಗಿ ಉಳಿದ **ವ್ಯಂಜನಗಳು** ಇವು:—

Ke, Gue, Je, } (1)
ಕ, ಗ, ಜ,

Re, Le, Se, He, } (4)
ರ, ಲ, ಸ, ಹ,

Te, De, Ne, } (2)
ತ, ದ, ನ,
ಟ, ಡ, ಣ,

Pe, Be, Me, } (3)
ಪ, ಬ, ಮ,

ಇನ್ನು ಸ್ವರಗಳು : A, E, I, O, U,
ಅ, ಎ, ಇ, ಒ, ಉ,

ಅರ್ಧ ಸ್ವರಗಳು : Y, W,
ಯ್, ವ್,

ಸ್ವರಗಳ ಸಹಾಯವಿಲ್ಲದೆ ವ್ಯಂಜನಗಳನ್ನು ಉಚ್ಚರಿಸಲು ಬರುವದಿಲ್ಲ. ಆದ್ದರಿಂದ Ke, Gue.... ಹೀಗೆ ವರ್ಣಗಳ ಕೊನೆಗೆ ' e ' ಎಂಬ ಸಂವೃತ ಸ್ವರವನ್ನು ಜೋಡಿಸಲಾಗಿದೆ. ಇದರ ಉಚ್ಚಾರಣೆಯು ಕನ್ನಡದಲ್ಲಿಯ ತರು, ಬರು, ಎಂಬ ಶಬ್ದಗಳಲ್ಲಿಯ ' ಅ ' ಕಾರದ ಉಚ್ಚಾರಣೆಯಂತೆ ಲಘುವಾಗಿದೆ; ತಂದೆ (ಪಿತಾ)ಎಂಬ ಶಬ್ದದಲ್ಲಿಯ ಅಕಾರದ ಉಚ್ಚಾರಣೆಯಲ್ಲ. ' Gue ' (= ಗ್) ದ ಉಚ್ಚರಣೆಯು GUEST, (ಗೆಸ್ಟ್) GUIDE, (ಗೈಡ್) GUARD, (ಗಾರ್ಡ್) ಈ ಶಬ್ದಗಳಲ್ಲಿ ಕೇಳಬರುತ್ತದೆ. ಶಬ್ದದ ಕೊನೆಯಲ್ಲಿ G ದ ಮುಂದೆ E, (-GE) ಬಂದರೆ ಅದರ ಉಚ್ಚಾರಣೆ–' ಜ ' ಆಗುವದು. ಇಂಗ್ಲಿಷು ಶಬ್ದಗಳ ಕೊನೆಯಲ್ಲಿ ಮೇಲಿನ (1), (2), (3), (4), ಈ ಉಚ್ಚಾರಣೆಗಳು ಬಂದರೆ ಮರಾಠಿಯಲ್ಲಿಯ 'ಶೌಕ', 'ರೀತ', 'ತಾಪ' ಮುಂತಾದ ಶಬ್ದಗಳಲ್ಲಿ ಉಚ್ಚರಿಸುವಂತೆ ಅವನ್ನು ಉಚ್ಚರಿಸಬೇಕು.

ಉದಾಹರಣೆಗಳು :

BAKE (ಬೇಕ್), PLAGUE (ಪ್ಲೇಗ್),
PAGE (ಪೇಜ್), RATE (ರೇಟ್),
SPADE (ಸ್ಪೇಡ್), CANE (ಕೇನ್),
CAPE (ಕೇಪ್), ROBE (ರೋಬ್),
HOME (ಹೋಮ್), CARE (ಕೇರ್),
SALE (ಸೇಲ್), CASE (ಕೇಸ್),

ಕೊನೆಗೆ He ಬರುವ ಉದಾಹರಣೆ ಇಲ್ಲ. ಈ ಎಲ್ಲ ಶಬ್ದಗಳಲ್ಲಿ ' A ' ದ ಉಚ್ಚಾರಣೆ ಕನ್ನಡದಲ್ಲಿಯ ಏದಂತೆಯೇ; ಮತ್ತು O ದ ಉಚ್ಚಾರಣೆ ಓದಂತೆ. DAY, (ಡೇ) GAY, (ಗೇ) HAY, (ಹೇ) LAY, (ಲೇ) MAY (ಮೇ) ಇತ್ಯಾದಿ ಶಬ್ದಗಳಲ್ಲಿದ್ದಂತೆ ಕೊನೆಯಲ್ಲಿ–Ay ಬಂದರೆ ' A ' ಉಚ್ಚಾರ ಮೇಲಿನಂತೆ ' ಏ ' ಆಗುವದು. ಕೊನೆಯ ' Y ' ಈ ಅರ್ಧಸ್ವರದ ಉಚ್ಚಾರಣವು ಇದ್ದರೂ ಇಲ್ಲದಂತೆಯೇ.

ಇನ್ನು E ದ ಉಚ್ಚಾರಣೆಯನ್ನು ತಿಳಿದುಕೊಳ್ಳೋಣ. ಇಂಗ್ಲಿಷ್ ಶಬ್ದಗಳ ಪ್ರಾರಂಭದಲ್ಲಿ ಅದು ' ಇ ' ಎಂದು ಉಚ್ಚರಿಸಲ್ಪಡುವದು. ಉದಾ: EVENT (ಇವ್ಹೆಂಟ್); ELECTRIC (ಇಲೆಕ್ಟ್ರಿಕ್), EGO (ಇಗೋ) ಶಬ್ದಗಳ ನಡುವೆ ' E ' ದ ಉಚ್ಚಾರಣೆಯು ' ಎ 'ದಂತೆಯೇ. ಅಪವಾದ: E ದ ಉಚ್ಚಾರವು ಬೇರೆ ಬೇರೆ ಶಬ್ದಗಳಲ್ಲಿ ' ಅ ' ' ಇ ' ' ಎ ' ಎಂದು ಮೂರು ವಿಧವಾಗಿ ಆಗುವದು. ಉದಾ: HER (ಹರ್), ME (ಮಿ), END (ಎಂಡ್). ಹೀಗೆಯೇ ' O ' ದ ಉಚ್ಚಾರವು ಇಂಗ್ಲಿಷು ಶಬ್ದಗಳಲ್ಲಿ ಅ. ಉ, ಒ,–ಎಂದು ಒಂದೊಂದರಲ್ಲಿ ಒಂದೊಂದು ವಿಧವಾಗಿ ಆಗುವದು. ಉದಾ: SON (ಸನ್), DO (ಡು), GO (ಗೋ) ದ ಉಚ್ಚಾರಣೆಯು ಸಾಮಾನ್ಯವಾಗಿ

‘ ಇ ’ ಆಗುವದು.ಆದರೆ ಶಬ್ದದ ಆದಿಯಲ್ಲಿ I ಬಂದು ಶಬ್ದದ ಕೊನೆಯಲ್ಲಿ ಮೇಲೆ (1), (2), (3), (4), ಗಳಲ್ಲಿ ತೋರಿಸಿದಂತೆ ವ್ಯಂಜನಗಳು ಬಂದರೆ–ಅಂದರೆ E ಕೂಡಿಕೊಂಡು–I ದಉಚ್ಚಾರಣ ಐ ಆಗುವದು.

ಉದಾಹರಣೆಗಳು: ICE (ಐಸ್), RICE (ರೈಸ್), RIDE (ರೈಡ್), SIDE (ಸೈಡ್) ಇತ್ಯಾದಿ. RATE, ROBE ಮುಂತಾದ ‘ Eಕಾರಾಂತ ’ ಶಬ್ದಗಳಲ್ಲಿ ‘ A ’ದ ಉಚ್ಚಾರಣೆ ಎ ದಂತೆ ಆದರೂ RAT, ROB ಎಂಬ ಶಬ್ದಗಳಲ್ಲಿ ‘ A ’ ದ ಹಾಗೂ ‘ O ’ ದ ಉಚ್ಚಾರವು ಇಂಗ್ಲಿಷ್ ಭಾಷೆಗೆ ವಿಶಿಷ್ಟವಾಗಿದೆ. ಕನ್ನಡದಲ್ಲಿ ಅದನ್ನು ಬರೆಯಲಾಗುವದಿಲ್ಲ. ಆದರೂ ಅವನ್ನು ಹೀಗೆ ‘ ರಟ್ ’, ‘ ರಾಬ್ ’ ಎಂದು ಬರೆದು ತೋರಿಸುವ ರೂಢಿ ಇದೆ.

U ದ ಉಚ್ಚಾರಣೆ ಹೆಚ್ಚಾಗಿ ಇಂಗ್ಲಿಷ್ ಶಬ್ದಗಳಲ್ಲಿ ‘ ಅ ’ ಆಗುವದು. ಒಂದೊಂದು ಸಲ ‘ ಉ ’ ಆಗುವದು.

ಉದಾ : UP (ಅಪ್), US (ಅಸ್), CUP (ಕಪ್), NUT (ನಟ್), MUCH (ಮಚ್); ಇದಕ್ಕೆ ಪ್ರತಿಯಾಗಿ PUT (ಪುಟ್), PULL(ಪುಲ್)= ಈ ಉದಾಹರಣೆಗಳಿವೆ.

ಶಬ್ದದಲ್ಲಿ ‘ Y ’ ಎಂಬ ಒಂದೇ ಕೊನೆಯ ಸ್ವರ (ಅರ್ಧಸ್ವರ) ವಿದ್ದರೆ ಆದರ ಉಚ್ಚಾರಣೆ ‘ ಅಯ್ ’ ಎಂದು ಆಗುವದು. ಉದಾ : ಸ್ಕೈ (SKY), ಡ್ರೈ (DRY), ಹೆಚ್ಚು ಸ್ವರಗಳಿದ್ದರೆ ಕೊನೆಯ ‘Y ’ದ’ ಉಚ್ಚಾರ ‘ ಇ ’ ಆಗುವದು. ಉದಾ: UNITY (ಯುನಿಟಿ)

ಶಬ್ದಗಳ ಕೊನೆಯಲ್ಲಿ ‘ F ’ ‘ Z ’ ಬಂದಾಗ ಹೆಚ್ಚಾಗಿ –‘ FF ’, –‘ ZZ ’ ಬರುವವು.

ಹೀಗೆಯೇ ಕೊನೆಯಲ್ಲಿ ‘ S ’ ‘ L ’ ಬಂದಾಗ —‘ SS ’, —‘ LL ’ ಬರುವವು.

ಉದಾ: PUFF (ಪಫ್), BUZZ (ಬಜ್), BILL (ಬಿಲ್), KISS (ಕಿಸ್) ಇಂ.

‘ U ’; ಇಂಗ್ಲಿಷಿನಲ್ಲಿ ಈ ಅಕ್ಷರದ ಹೆಸರು ‘ ಯು ’ ಅಥವಾ ‘ ಇಉ ’ (ಕೂಡಿ ಬೇಗನೆ ಉಚ್ಚರಿಸಿದ್ದು).

ಅದರ ಉಚ್ಚಾರವು ಒಮ್ಮೊಮ್ಮೆ ‘ ಯು ’ ಆಗುತ್ತದೆ. ಉದಾ : USE (ಯೂಸ್), UNIT (ಯುನಿಟ್).

ಮೇಲೆ ಹೇಳಿದ ನಿಯಮಗಳಿಗೆ ಅಪವಾದರೂಪವಾಗಿ GAS (ಗಸ್), NIL (ನಿಲ್), OF (ಆಫ್), ME (ಮಿ), DO (ಡು) SON (ಸನ್) ಇವೆ.

ಈ ಉಚ್ಚಾರಣೆಯ ವಿಷಯವನ್ನು ಬಿಟ್ಟು ಮಾತನಾಡಲಿಕ್ಕೆ ಬೇಕಾಗುವ ಅತ್ಯಂತ ಅವಶ್ಯವಿರುವ ಶಬ್ದಗಳೆಷ್ಟು? ಅವು ಯಾವವು? ಎಂಬ ಪ್ರಶ್ನೆಯು ಈಗಿನ ನಮ್ಮ ರಾಜಕೀಯ ವಾತಾವರಣದಲ್ಲಿ ಅತ್ಯಂತ ಮಹತ್ವದ್ದಾಗಿದೆ. ಇವುಗಳಲ್ಲಿ ಸರ್ವನಾಮಗಳು, ಉಪಸರ್ಗಗಳು, ಅವ್ಯಯಗಳು ಬಹಳ ಮುಖ್ಯವಾದವು. ವಸ್ತುಗಳ ಹೆಸರನ್ನು ಉಪಯೋಗಿಸಲಿಕ್ಕೆ ಕಲಿಯುವದು ಬಹಳ ಕಷ್ಟವಲ್ಲ; ಹೆಚ್ಚಾಗಿ ಬಳಕೆಯಲ್ಲಿದ್ದ ವಿಶೇಷಣಗಳೂ (ಹೆಚ್ಚು, ಅತಿ ಹೆಚ್ಚು, ಎಂಬ ತರ,–ತಮ ಅರ್ಥವನ್ನು ತೋರಿಸುವ ಶಬ್ದಗಳು) ಬಹಳ ಸ್ವಲ್ಪ. ಒಂದು ೫೦ ಕ್ರಿಯಾಪದಗಳೂ ಬಹಳ ಬೇಕಾಗುವವು. ಕೆಲವು ಆಂಗ್ಲ–ಅಮೇರಿಕನ್ ವಿದ್ವಾಂಸರು ‘ ಬೇಸಿಕ್ ಇಂಗ್ಲಿಷ್ ’ ಎಂಬ ೮೫೦ ಶಬ್ದಗಳಿಂದಲೇ ಬೇಕಾದ ಮಾತನ್ನು ಹೇಳಬಹುದಾದ ಒಂದು ಭಾಷೆಯನ್ನು ನಿರ್ಮಿಸಿದ್ದಾರೆ. ಇಂಗ್ಲಿಷಿನ ಪ್ರಥಮ ಪರಿಚಯ ಮಾಡಿಕೊಳ್ಳುವವರಿಗೆ ಅದು ಅತ್ಯಂತ ಉಪಯುಕ್ತವಾಗಿದೆ. ‘ ದಿ ಮರ್ಚಂಟ್ ಆಫ್ ವ್ಹೇನಿಸ್ ’, ‘ ಜೂಲಿಯಸ್ ಸೀಝರ್ ’ ‘ ಸ್ಟೋರೀಜ್ ಫ್ರಾಮ್ ದಿ ಬೈಬಲ್ ’ ಮುಂತಾದ ಎಷ್ಟೋ ಉತ್ತಮ ಪುಸ್ತಕಗಳನ್ನು ಈ ೮೫೦ ಶಬ್ದಗಳ ಇಂಗ್ಲಿಷಿಗೆ ಪರಿವರ್ತಿಸಲಾಗಿದೆ. ಸಾಧಾರಣವಾಗಿ ಇಂಗ್ಲಿಷಿನಲ್ಲಿ ಪ್ರತಿಯೊಂದು ವಸ್ತುವಿನ ಬಗ್ಗೆ ಇಲ್ಲವೆ ಪ್ರಾಣಿಯ ಅಥವಾ ವ್ಯಕ್ತಿಯ ಬಗ್ಗೆ ಮಾತನಾಡುವಾಗ ‘ ಒಂದು ’, ‘ ಒಬ್ಬ ’ (A, AN) ಅಥವಾ ‘ ಆ ’ (THE) ಎಂಬ ವಿಶೇಷಣಗಳಿರಲೇಬೇಕು. ಅವುಗಳ ಹಿಂದೆ ವಿಭಕ್ತಿಯ ಅರ್ಥವನ್ನು ಹೇಳಬೇಕಾದಾಗ, ಉಪಸರ್ಗಾವ್ಯಯಗಳನ್ನು ಹಚ್ಚಬೇಕು. ಉದಾ : ಆ ಬಟ್ಟಲಿನಿಂದ ಎಂದು

ನಾವು ನಮ್ಮ ಮಾತಿನಲ್ಲಿ ಹೇಳಿದರೆ, ಇಂಗ್ಲಿಷರು "ಇಂದ–ಆ–ಬಟ್ಟಲು" ಈ ಹೀಗೆ ವ್ಯತ್ಯಾಸ ಮಾಡಿ ಶಬ್ದಗಳನ್ನಾಡುವರು.

ಉದಾಹರಣೆಗಳು : ಆ ಬಟ್ಟಲಿನಿಂದ = WITH THE CUP; ಒಂದು ಬಟ್ಟಲಿನಿಂದ WITH A CAP.
ಆ ಬಟ್ಟಲಿಗೆ = ಗೆ–ಆ–ಬಟ್ಟಲು = TO THE CUP
ಆ ಬಟ್ಟಲಲ್ಲಿ = ಅಲ್ಲಿ–ಆ–ಬಟ್ಟಲು = IN THE CUP ಇತ್ಯಾದಿ.

ಬೇಸಿಕ್ ಇಂಗ್ಲಿಷಿನಲ್ಲಿ READING, WRITING ಮುಂತಾದ ಕ್ರಿಯಾನಾಮಗಳ ಸಹಾಯದಿಂದ ಹದಿನೆಂಟೇ ಕ್ರಿಯಾಪದಗಳಿಂದ ಎಲ್ಲ ಮಾತುಗಳನ್ನೂ ತಿಳಿಸಬಹುದು. ಇಂಗ್ಲಿಷ್ ವಾಕ್ಯರಚನೆಯಲ್ಲಿ ಸಾಮಾನ್ಯವಾಗಿ ಮೊದಲು ಕರ್ತೃ, ಆ ಮೇಲೆ ಕ್ರಿಯಾಪದ, ಆ ಮೇಲೆ ಕರ್ಮ ಅಥವಾ ಅರ್ಥಪೂರಕಗಳು ಬರುವವು. ಉದಾ : (ನನ್ನ ಆ) ಊಟವಾದ (ಆ) ಮೇಲೆ ನನ್ನ ಚೀಲದೊಳಗಿಂದ ಒಂದು ಪುಸ್ತಕವನ್ನು ತೆಗೆದು ಓದಿಷ್ಟು ಓದುತ್ತೇನೆ. ಇಂಗ್ಲಿಷಿಗೆ ಭಾಷಾಂತರಿಸುವಾಗ ಶಬ್ದಗಳ ಕ್ರಮವು ಹೀಗೆ ಬರಬೇಕು : ಆ ಮೇಲೆ–ಆ–ಊಟ; ನಾನು–ತಕ್ಕೊಳ್ಳುತ್ತೇನೆ–ಒಂದು–ಪುಸ್ತಕವನ್ನು, ಒಳಗಿಂದ–ನನ್ನ–ಚೀಲ; (ಮತ್ತು) (ನಾನು) ಮಾಡುತ್ತೇನೆ. ಓದಿಷ್ಟು–ಓದುವದನ್ನು.

AFTER THE MEAL, I TAKE A BOOK FROM MY BAG, AND DO SOME READING.

ಬೇಸಿಕ್ ಇಂಗ್ಲಿಷಿನಲ್ಲಿದ್ದ ೧೮ ಕ್ರಿಯಾ ವಾಚಕ ಶಬ್ದಗಳು ಇವು :

GO (ಹೋಗು), COME (ಬರು), GIVE (ಕೊಡು), GET (ದೊರಕಿಸು), TAKE (ತೆಗೆದುಕೊಳ್ಳು) BE (ಆಗು), HAVE (ಪಡೆ, ಉಳ್ಳವನಾಗು), DO (ಕೆಲಸ ಮಾಡು), MAKE (ವಸ್ತುವನ್ನು ಮಾಡು), SEE (ನೋಡು), SAY (ಅನ್ನು), SEND (ಕಳುಹಿಸು), PUT (ಹಾಕು), LET (ಬಿಟ್ಟುಕೊಡು), WILL (ಬಯಸು), SHOULD (ಬೇಕು), MUST (ಮಾಡಲೇಬೇಕು).

ಕೆಳಗಿನ ಕೆಲವು ವಸ್ತುಗಳ ಹೆಸರುಗಳನ್ನು ಮೊದಲು ಕಲಿಯಬಹುದು :

BALL, ಚೆಂಡು; STICK, ಬಡಿಗೆ; FLAG (ಧ್ವಜ), RING (ಉಂಗುರ), BOTTLE (ಬಾಟ್ಲಿ, ಸೀಸೆ), TRAY (ತಬಕ), TABLE (ಮೇಜು), BOARD (ಹಲಗೆ), WINDOW (ಕಿಡಿಕಿ), FRAME OF GLASS (ಕನ್ನಡಿಯ ಕಟ್ಟು), BOY (ಹುಡುಗ), GIRL (ಹುಡಿಗೆ), SUN (ಸೂರ್ಯ), MOON (ಚಂದ್ರ), STARS (ನಕ್ಷತ್ರಗಳು), KNEE (ಉಚ್ಚಾರ 'ನಿ' = ಮೊಳಕಾಲು), LEG (ಕಾಲು), MOUTH ('OU' ದ ಉಚ್ಚಾರ 'ಔ') ಬಾಯಿ; NECK (ಕೊರಳು); DOG (ನಾಯಿ), CAT (ಬೆಕ್ಕು), RAT (ಹೆಗ್ಗಣ), ANIMAL (ಪ್ರಾಣಿ), COW (ಆ = ಆವು, ಆಕಳು), MILK (ಹಾಲು), SHEEP (ಕುರಿ), WOOL ('OO' ದ ಉಚ್ಚಾರ 'ಊ') ಉಣ್ಣೆ, PIG (ಹಂದಿ), MEAT ('EA' ದ ಉಚ್ಚಾರ 'ಈ') (ಉದಾ : EAT (ಈಟ್) ತಿನ್ನು) ಮಾಂಸ, GOAT (ಆಡು, 'OA' ದ ಉಚ್ಚಾರ ಓ), HORSE (ಕುದುರೆ), MONKEY (ಮಂಗ), EGG (ತತ್ತಿ), FISH (ಮೀನು), SNAKE (ಹಾವು), WORM (ಹುಳು), BEE (ಜೇನ್ನೊಣ), ANT (ಇರುವೆ), FLY (ನೊಣ), MAN (ಮನುಷ್ಯ), FIELD (ಹೊಲ), GRASS (ಹುಲ್ಲು), GRAIN ('AI' ದ ಉಚ್ಚಾರ ಏ) ಧಾನ್ಯ, RICE (ಭತ್ತ), TREE (ಗಿಡ), LEAF (ಎಲೆ), STEM (ದೇಟು), FLOWER (ಹೂ = ಹೂವು), ROOT (ಬೇರು), BRANCH (ಟೊಂಗೆ, ರೆಂಬೆ), APPLE (ಸೇಬು ಹಣ್ಣು), ORANGE (ಕಿತ್ತಳೆ ಹಣ್ಣು), SKIN (ತೊಗಟೆ, ತ್ವಚ), HOUSE (ಮನೆ), GARDEN (ತೋಟ), ROOF (ಚಪ್ಪರ) DOOR (ಬಾಗಿಲು), BRICK (ಇಟ್ಟಿಗೆ), WALL (ಗೋಡೆ), STONE (ಕಲ್ಲು), BED (ಹಾಸಿಗೆ), ROOM (ಕೋಣೆ), FLOOR (ನೆಲ),

(ಮುಂದುವರಿಯುವದು.)

ಕನ್ನಡ ಶಾಲೆಗಳಲ್ಲಿ

ಹಿಂದಿ ಶಿಕ್ಷಣ

ಲೇಖಕ : **ಶ್ರೀ ಸಿ. ಶಿ. ನರೇಗಲ್ಲ,** "ಪ್ರವೀಣ" (ಮದ್ರಾಸ), ಪಾರಂಗತ (ಆಗ್ರಾ) ಸಾಹಿತ್ಯರತ್ನ (ಪ್ರಯಾಗ)
ಎಚ್.ಎಸ್.ಎಸ್.,ಎಸ್.ಟಿ.ಸಿ. ಕೆ. ಗಂ. ಮ. ಸಾಲೆ ಕೋಟಿಕಲ್ಲ. (ಬದಾಮಿ)

ಹಳೆಯ ಮುಂಬೈ ಸರಕಾರದ ಶಿಕ್ಷಣ ಶಾಖೆಯ ಆದೇಶದ ಮೇರೆಗೆ ಈಗಾಗಲೇ ಮುಂಬೈ ಕರ್ನಾಟಕದ ನಾಲ್ಕು ಜಿಲ್ಹೆಗಳಲ್ಲಿ ಕನ್ನಡ ಶಾಲೆಯ ಮೇಲಿನ ವರ್ಗಗಳಿಗೆ ಹಿಂದೀ ಭಾಷೆಯ ಶಿಕ್ಷಣವನ್ನು ಕೊಡಲಾಗುತ್ತಿದೆಯಷ್ಟೆ. ಅಲ್ಲದೆ ಈ ಸಲದ ಅಂದರೆ ೧೯೬೦ರಲ್ಲಿ ಜರುಗಲಿರುವ ಪಿ. ಎಸ್. ಸಿ. (ಮುಲ್ಕಿ) ಪರೀಕ್ಷೆಗೆ ಹಿಂದಿಯು ಒಂದು ಕಡ್ಡಾಯ ವಿಷಯವೆಂದು ಪರಿಗಣಿಸಲಾಗಿದೆ. ಆ ಕಾರಣದಿಂದ ಹಿಂದಿಯನ್ನು ಚಿಕ್ಕ ಬಾಲಕ-ಬಾಲಿಕೆಯರಿಗೆ ಕಲಿಸುವ ಗುರುತರವಾದ ಹೊಣೆಯು ಗುರುವರ್ಗದ ಮೇಲೆ ಬಂದಿದೆ.

ಶಿಕ್ಷಕನಿಗೆ ಕಲಿಸಬೇಕಾದ ವಿಷಯದಲ್ಲಿ ಪರಿಪೂರ್ಣ ಜ್ಞಾನಬೇಕು. ಜೊತೆಗೆ ಕಲಿಸುವ ಕಲೆಯನ್ನು ಸಾಧಿಸಿದಾಗಲೇ ಆತನ ವೃತ್ತಿಗೆ ರತ್ನಕ್ಕೆ ಕುಂದಣವಿಟ್ಟಂತಾಗುವದು. ಮಾತೃ ಭಾಷೆ ಹಾಗೂ ಇತರ ವಿಷಯುಗಳನ್ನು ಬೋಧಿಸುವ ಕಲೆಯಲ್ಲಿ ಪರಿಣತರಾದ ಶಿಕ್ಷಕ ಬಾಂಧವರು ಹಿಂದಿಯನ್ನೂ ಬೋಧಿಸುವಲ್ಲಿ ಸಮರ್ಥರಾಗಲಾರರೇ ? ಅವಶ್ಯವಾಗಿ ಈ ವಿಷಯದ (ಹಿಂದಿ) ಪರಿಪೂರ್ಣ ಪರಿಚಯ ಪಡೆದರೆ ಅದೇನು ಕಠಿಣ ಪ್ರಶ್ನೆಯಲ್ಲ.

ಹಿಂದೀ ವಿಷಯವೆಂದಕೂಡಲೇ ಎಷ್ಟೋ ಗುರುಗಳು ಮೂಗು ಮುರಿಯುವದುಂಟು. ಏಕೆಂದರೆ ಆ ವಿಷಯದ ಅಭಿರುಚಿಯು ಅವರಿಗೆ ಇಲ್ಲದುದೇ ಕಾರಣವಾಗಿರಬಹುದು ಅಥವಾ ಅದರ ಅಭ್ಯಾಸ ಮಾಡಿರದೇ ಇರಬಹುದು. ನಮ್ಮ ಶಿಕ್ಷಕ ಬಂಧು ಭಗಿನಿಯರಲ್ಲಿಯೇ ಎಷ್ಟೋ ಜನರು ಈ ವಿಷಯದಲ್ಲಿ ಅಗಾಧ ಪ್ರೌಢಿಮೆಯನ್ನು ಸಾಧಿಸಿರಬಹುದು. ಅವರನ್ನು ಉದ್ದೇಶಿಸಿ ನಾನು ಹೇಳಲಾರೆ. ಆದರೆ ಕೇವಲ ಕಾಲೇಜಿನಲ್ಲಿ ಹಿಂದಿಯನ್ನು ಕಲಿತು ಪಾಸಾದ ಎಷ್ಟೋ ಶಿಕ್ಷಕರಿಗೆ ಹಿಂದಿಯನ್ನು ಕಲಿಸುವದು ಕಠಿಣವಾಗಿದೆ. ಕಾರಣವೇನೆಂದರೆ ಕಾಲೇಜದಲ್ಲಿ ಅವರು ಹಿಂದೀ ವಿಷಯ ಕಲಿತರಷ್ಟೇ ವಿನಃ ಕಲಿಸುವ ಸಾಹಸ ಪಡಲಿಲ್ಲ.

ಹಿಂದೀ ಕಲಿಸುವಾಗ ಬರುವ ತೊಂದರೆಗಳೇನು ?

೧) ಅಕ್ಷರಾರಂಭದಿಂದಲೋ ಅಥವಾ ಸಂಭಾಷಣೆಯಿಂದೋ ?

೨) ಹಿಂದೀ ವ್ಯಾಕರಣವನ್ನು ವ್ಯಾಖ್ಯಾತ್ಮಕ ಹೇಳಬೇಕೇ ರಚನಾತ್ಮಕ ಹೇಳಬೇಕೆ ?

೩) ಹಿಂದೀ ಬರೆಹವನ್ನು ಸುಧಾರಿಸುವದೆಂತು ?

೪) ಹಿಂದೀ ಭಾಷೆಯ ವೈಶಿಷ್ಟ್ಯವಾದ ಲಿಂಗ ಭೇದ, ವಚನ ಹಾಗೂ ನೇ.ಕಾ.ಕೇ.ಕೀ ವಿಭಕ್ತಿ ಪ್ರತ್ಯಯಗಳ ಪ್ರಯೋಗಗಳನ್ನು ಹೇಗೆ ಕಲಿಸಬೇಕು ? ಎಂಬಿವೇ ಮುಂತಾದ ಪ್ರಶ್ನೆಗಳು ಶಿಕ್ಷಕರೆದುರಿಗೆ ಬಂದು ನಿಲ್ಲುವವು ಇವೇ ಪ್ರಶ್ನೆಗಳನ್ನು ನನ್ನ ಅನುಭವದ ಮೇರೆಗೆ ಕೆಳಗೆ ಚರ್ಚಿಸಿರುವೆ.

೧) ನಾಲ್ಕನೆಯ ವರ್ಗ ಪಾಸಾಗಿಬಂದ ಮಗುವಿಗೆ ಹಿಂದಿಯ ಜ್ಞಾನ ಮಾಡಿಕೊಡುವಾಗ ಕೂಡಲೇ ಅಕ್ಷರಗಳನ್ನು ಹಾಕಿಕೊಡದೆ ಮೊದಲಿನ ಒಂದು ತಿಂಗಳವರೆಗೆ ಮೌಖಿಕ (ತೋಂಡಿ)ವಾಗಿ ಚಿಕ್ಕ ಚಿಕ್ಕ ವಾಕ್ಯಗಳನ್ನು ಹಿಂದಿಯಲ್ಲಿ ಉಚ್ಚರಿಸಿ ಜೊತೆಗೆ ಬಾಲಕರೊಡನೆ ಸಂಭಾಷಣೆ ಮಾಡುತ್ತ ಹೋಗಬೇಕು. ಈ ಕ್ರಮದಲ್ಲಿ ಸುಲಭ ಹಾಗೂ ನಿತ್ಯ ಬಳಿಕೆಯ ವಸ್ತುಗಳ ಪರಿಚಯ ಮಾಡಿಕೊಡುತ್ತ ಹೋಗುವದು ಒಳಿತು. ನಂತರದ ತಿಂಗಳಲ್ಲಿ ಅಕ್ಷರಗಳ ಪರಿಚಯ ಮಾಡಿಕೊಡಬೇಕು.

೨) ಹಿಂದೀ ಎಂದಾಕ್ಷಣವೇ ಯಾವದಾದರೊಂದು ವ್ಯಾಕರಣ ಪುಸ್ತಕ ತೆಗೆದುಕೊಂಡು ಅದರಲ್ಲಿಯ ನಿಯಮಗಳನ್ನು ಬರೆಯಿಸಿ ಚಿಕ್ಕ ಮಕ್ಕಳಿಗೆ ಕಂಠ ಪಾಠ ಹೊಡೆಸುವದುಂಟು. ಈ ಪದ್ಧತಿಯು ನಿಜವಾಗಿ ಮಕ್ಕಳಿಗೆ ಅಪಕಾರಕವಾದದ್ದು. ಏಕೆಂದರೆ ನಿಯಮಗಳನ್ನು ಪಾಠ ಮಾಡುವರೇ ವಿನಃ ಭಾಷೆಯ ರಚನೆಯ ಕಡೆಗೆ ಗಮನಕೊಡುವದಿಲ್ಲ. ಪ್ರತಿಯಾಗಿ ಹಿಂದಿಯ ಬಗೆಗೆ ಬಾಲಕರಲ್ಲಿ ಅಂಜಿಕೆ ಹಾಗೂ ಅನಾದರ

ಗಳು ಮೂಡುವ ಭಯ ಉಂಟು. ಕಾರಣ ವ್ಯಾಕರಣವನ್ನು ಪ್ರತ್ಯೇಕವಾಗಿ ಬೋಧಿಸದೇ ರಚನೆಯ ಮೂಲಕ ಅಂದರೆ ಶುದ್ಧ ಪದ,-ವಾಕ್ಯಗಳ ಪ್ರಯೋಗದಿಂದ ರೂಢೀಕರಿಸುತ್ತ ಹೋಗುವದು ಒಳಿತು.

೩) ಹಿಂದೀ ಭಾಷೆಯ ಲಿಪಿಯು ದೇವನಾಗರಿ ಲಿಪಿಯಾದ್ದರಿಂದ ಕನ್ನಡದಂತೆ ವರ್ತುಳಾಕಾರದಲ್ಲಿ ಬರೆಯದೆ ವರ್ತುಳ ಮತ್ತು ಚೌರಸ, ಸರಳ ರೇಖೆಗಳಿಂದ ಮಿಶ್ರಿತವಾದ ಲಿಪಿಯಾಗಿದೆ. ಪ್ರಥಮ ಘಟ್ಟದಲ್ಲಿಯೇ ಬಾಲಕರಿಗೆ ಸುಂದರ ಅಕ್ಷರಗಳನ್ನು ಕರಿಹಲಿಗೆಯ ಮೇಲೆ ಬರೆದು ತೋರಿಸಬೇಕು, ಹಾಗೂ ಬರೆಯುವ ಸುಲಭ ಉಪಾಯ ಸೂಚಿಸಬೇಕು. ಈ ಬಗೆಗೆ ಹಿಂದಿಯ ಕಾಪಿ ಪುಸ್ತಕಗಳನ್ನು ಉಪಯೋಗಿಸಿದರೆ ಬಹಳೇ ಒಳ್ಳೆಯದು. ಲಿಪಿಯ ಬಗೆಗೆ ಲಕ್ಷ್ಯಕೊಡದೇ ಬಾಲಕರು ಬರೆದದ್ದೇ ಹಿಂದಿ ಲಿಪಿಯೆಂದರೆ ಗುರುಗಳಿಗೆ ಹಾಗೂ ಬರೆದ ಬಾಲಕರಿಗೂ ತಿಳಿಯಲಾರದಾದೀತು. ಕನಿಷ್ಠ ಬಾಲಕರು ಬರೆದ ಬರಹವು ಸರಾಗವಾಗಿ ಓದಲು ಬರುವಂತಿರಬೇಕು. ಇದಕ್ಕಾಗಿ ಬಾರಿಬಾರಿಗೆ ಹಿಂದೀಯಲ್ಲಿ ಶುದ್ಧಲೇಖನ, ಉಕ್ತಲೇಖನದ ಸ್ಪರ್ಧೆ ಏರ್ಪಡಿಸಬೇಕು.

೪) ಹಿಂದಿಯನ್ನು ಕಲಿಸುವವರಿಗೂ ಕಲಿಯುವವರಿಗೂ ಬರುವ ದೊಡ್ಡ ತೊಂದರೆ ಎಂದರೆ ಲಿಂಗಭೇದದ ನಿರ್ಣಯ ಕಾಲಗಳ ಪರಿಚಯ. ವಚನಗಳನ್ನು ಬದಲಿಸುವ ಕ್ರಮ ಹಾಗೂ ವಿಭಕ್ತಿ ಪ್ರತ್ಯಯಗಳ ಪ್ರಯೋಗ, ಅದರಲ್ಲೂ ನೆ ಮತ್ತು ಕಾ. ಕೆ. ಕೀ. ವಿಭಕ್ತಿಗಳ ಸರಿಯಾದ ಉಪಯೋಗ.

ಹಿಂದಿಯಲ್ಲಿ ಕೇವಲ ಸ್ತ್ರೀಲಿಂಗ, ಪುಲ್ಲಿಂಗ ಇರುವದರಿಂದ ಕನ್ನಡದಲ್ಲಿಯ ನಪುಂಸಕಲಿಂಗದ ಶಬ್ದಗಳೆಲ್ಲವೂ ಉಭಯ ಲಿಂಗಗಳಲ್ಲಿಯೇ ವಿಭಜಿಸಲಾಗಿವೆ. ಲಿಂಗಭೇದದ ಸಾಮಾನ್ಯ ನಿಯಮಗಳನ್ನು ಮೊದಲು ಗುರುಗಳು ಅರಿತುಕೊಂಡು ಅವುಗಳನ್ನು ಪ್ರಯೋಗದ ಮುಖಾಂತರ ಬಾಲಕರಿಗೆ ತಿಳಿಸಬೇಕು. ಕೇವಲ ೭ನೆಯ ವರ್ಗದ ಮಕ್ಕಳಿಗೆ ಪ್ರಯೋಗದ ಮುಖಾಂತರ ತಿಳಿಸಿದ ನಂತರ ನಿಯಮ ಬರೆಸಬಹುದು. ಇದರಂತೆ ಇನ್ನುಳಿದ ಕಾ. ಕೆ. ಕೀ. ಹಾಗೂ ನೆ. ಎಂಬ ಪ್ರತ್ಯಯಗಳನ್ನೂ ಕಲಿಸಬೇಕು. ಕಾಲದ ಪರಿಚಯ ಮಾಡಿಕೊಡುವಾಗ ಬೇರೆ ಬೇರೆ ಕಾಲಗಳ ಪ್ರತ್ಯಯಗಳನ್ನು ಸೂಚಿಸುವ ತುಲನಾತ್ಮಕವಾದ ಚಾರ್ಟನ್ನು ತಯಾರಿಸಬೇಕು ಇದರಿಂದ ಬಾಲಕರಿಗೆ ವಿಷಯದ ಸಹಜ ಕಲ್ಪನೆ ಮೂಡುವದು.

ಇವೆಲ್ಲವುಗಳ ಜೊತೆಗೆ ಶಬ್ದಗಳ ಉಚ್ಚಾರದಕಡೆಗೆ ಗಮನಿಸಬೇಕು. ಇದಕ್ಕಾಗಿ ಪ್ರತ್ಯ ಹಾಗೂ ಪತ್ರ್ಯೇತರ ಹಿಂದೀ ಕವನಗಳನ್ನು ಕಂಠ ಪಾಠ ಮಾಡಿಸಿದರೆ ಕ್ಷೇಮಕರವಾಗುವದು. ಒಟ್ಟಿನಲ್ಲಿ ಹಿಂದಿ ಭಾಷೆಯೂ ಕೂಡಾ ಒಂದು ಮಧುರವಾದ ಭಾಷೆ ಅಲ್ಲದೆ, ನಮ್ಮ ದೇಶದ ರಾಷ್ಟ್ರಭಾಷೆ (ರಾಜಭಾಷೆ), ಅಂತರ್ ಪ್ರಾಂತೀಯ ಭಾಷೆಯಾದ್ದರಿಂದ ಬಾಲಕರಲ್ಲಿ ಈ ಬಗೆಗೆ ಆದರ ಪ್ರೇಮ ಭಾವನೆಗಳನ್ನು ಜಾಗ್ರತಗೊಳಿಸಬೇಕು. ಇವರೇ ನಾಳಿನ ಭಾರತದ ನಾಗರಿಕರಲ್ಲವೇ ? ಕಾರಣ ಗುರುಗಳೆಲ್ಲರೂ ಹಿಂದಿಯ ಬಗೆಗೆ ವಿಶೇಷ ಧ್ಯಾನಾಸಕ್ತಿಗಳನ್ನು ವಹಿಸಿದಲ್ಲಿ ಹಿಂದೀಯು ಸಹ ಅವರಿಗೆ ಕರಗತವಾಗುವಲ್ಲಿ ಸಂದೇಹವಿಲ್ಲ.

ಜಯಹಿಂದ ! ಜಯಹಿಂದೀ !!

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಡ್ರಾಯಿಂಗ ಪರಿಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. ಬೆಲೆ ೧—೧೨—೦ ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.

ಭಾಗ ೧ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡೆ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧-೨ನೆಯ ಕುಸುಮ ಪಡೆಯಿ
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.
- ಆಗಸ್ಟ ದಿಂದ ಆಗಸ್ಟಕ್ಕೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ¾ ಬೆಲೆಯಲ್ಲಿ [ಅಂಚೆ
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳ್ಳಿವು ಬೆಳೆವಂತೆ ನೆರವಾಗಿರಿ. ಈ ಅಲ್ಪ ಹಣ ತಮ್ಮ ಶಿಕ್ಷಕ ಏಳ್ಗೆಗೆ ಮೀಸಲು. ಗೆಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! **ಸಚಿತ್ರ ಗ್ರಂಥ !!** **ಸುಂದರ ಮುದ್ರ**

“ ಶಿಕ್ಷಣ-ಶಿಕ್ಷಕ-ದರ್ಶನ ”

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನ ಕಣಿಸುವಂಥ, **ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲ ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆ ಪಡೆದ ಅಭಿಪ್ರಾಯಗಳುಳ್ಳಂಥ,** ಕನ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್‍ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆ ಅಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷ ಬಣ್ಣ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ **ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಆಗಸ್ಟ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಸಾದಾ ಪ್ರತಿ ೩ ರೂ.] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್. **[ಸುಂದರ ಪ್ರತಿ**

ವಿಳಾಸ :- **ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ಕಾಂಬಿ, ಜಿಲ್ಲಾ:—** ವಿಜಾಪುರ.

Printed by Shri S. F. Kattimani, at Manohar Power Printing Press, Hubli. Edited & Published by Sjts. G. M. Joshi, B. M. Shintri, S. R. Tatti & Smt. P. A. Bh at the Kannada Jeevan Shikshan Office, Govt. Training College for Men, Dha

ಜೀವನ ಶಿಕ್ಷಣ

ಪ್ರ[illegible] : ಎಂ. ಜಿ. ಶೆಟ್ಟಿ



ವಿಶೇಷ ಸಂಚಿಕೆ

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : **ಶ್ರೀ ಎಮ್. ಜಿ. ಹಂದ್ರಾಳ,** ಬಿ.ಎ.(ಆನರ್ಸ),ಎಮ್.ಈಡಿ.,ಡಿ.ಬಿ.ಈಡಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : **ಶ್ರೀ ಎಮ್. ಜಿ. ಕಟ್ಟಿ,** ಬಿ.ಎ.(ಆನರ್ಸ), ಬಿ.ಟಿ.,ಡಿ.ಬಿ.ಈ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೫ — ನವಂಬರ ೧೯೫೯ — ಸಂಚಿಕೆ ೬

— ಪರಿವಿಡಿ —

೧. ಸಂಪಾದಕೀಯ ೧
೨. ತಾಯಿಗೆ ನಿರಾಶೆಯನ್ನುಂಟು ಮಾಡಿದ ಕೂಸು ಕ. ವಿಶ್ವವಿದ್ಯಾಲಯದ ಉಪಕುಲಪತಿಯಾಯಿತು .... ಶ್ರೀ ಶಿಂತ್ರಿ ಬಸಪ್ಪನವರು ೨
೩. ಶ್ರೀ ಪಾವಟೆಯವರು .... ಶ್ರೀ ಮಿರ್ಜಿ ಅಣ್ಣಾರಾಯ ೫
೪. ರ್‍ಯಾಂಗ್ಲರ ದಾದಾಸಾಹೇಬ ಪಾವಟೆಯವರ ಅಲ್ಪಪರಿಚಯ .... ಶ್ರೀ ತಟ್ಟಿ ಶ್ಯಾಮರಾಯರು ೭
೫. ಲೇಖಕನ ಅಭಿನಂದನೆ .... ಶ್ರೀ ದ. ರಾ. ಬೇಂದ್ರೆ ೯
೬. ರ್‍ಯಾಂಗ್ಲರ ಡಿ. ಸಿ. ಪಾವಟೆಯವರ ಗೆಲವಿಗೆ ಯಾವ ಗುಟ್ಟು .... ಶ್ರೀ ಶಿಂಪಿ ಲಿಂಗಣ್ಣಾ ೧೦
೭. ಆದರ್ಶ ಆಡಳಿತಗಾರರಾದ ರ್‍ಯಾಂಗ್ಲರ ಡಿ. ಸಿ. ಪಾವಟೆಯವರು .... ಶ್ರೀ ಕೆ. ಎಸ್. ಪಾಟೀಲ ೧೧
೮. ಶ್ರೀ ಡಾ. ಚಿಂ. ಪಾವಟೆಯವರು .... ಶ್ರೀ ಆಯ್. ಎಸ್. ಬಿದರಿ ೧೩
೯. ಸ್ಮೃತಿ ಸುಮನೋಂಜಲಿ .... ಶ್ರೀ ಎಚ್. ಜಿ. ಜೋಶಿ ೧೫
೧೦. ಉಪಕುಲಗುರು ಡಾ. ಚಿಂ. ಪಾವಟೆ .... ಶ್ರೀ ಎಸ್. ವ್ಹಿ. ಜೇವೂರ ೧೮
೧೧. ಶಿಕ್ಷಣ ತಜ್ಞ ಶ್ರೀ ಪಾವಟೆಯವರು .... ಶ್ರೀ ಎಮ್. ಜಿ. ಹಂದ್ರಾಳ ೨೧
೧೨. ರ್‍ಯಾಂಗಲರ ಡಿ. ಸಿ. ಪಾವಟೆಯವರು .... ಶ್ರೀ ಶಿಂತ್ರಿ ಬಸಪ್ಪನವರು ೨೪
೧೩. ರ್‍ಯಾಂಗ್ಲರ ಪಾವಟೆಯವರು ಹಾಗು ಕರ್ನಾಟಕ ವಿಶ್ವವಿದ್ಯಾಲಯವು .... ಶ್ರೀ ಎಸ್. ಆರ್. ಮಳಗಿ ೨೭
೧೪. ರ್‍ಯಾಂಗಲರ ಪಾವಟೆ ಅವರು .... ಶ್ರೀ ಬಿ. ಎ. ದೊಡ್ಡಮನಿ ೨೯
೧೫. ಶ್ರೀ ಪಾವಟೆಯವರ ಜನ್ಮಕುಂಡಲಿ .... ಪಂ. ಕೇಶವಶರ್ಮಾ ಗಲಗಲಿ ೩೧

ಸನ್ಮಾನ್ಯ ರ್‍ಯಾಂಗ್ಲರ ಪಾವಟೆಯವರು



[illegible] ಕನ್ನಡಮಾತೆಯ ಪುತ್ರ
... . ಚಿರಕಾಲ

ಪದವೀಧರರ ಜೀವನ ಶಿಕ್ಷಣ ಕೇಂದ್ರದ ಪದವೀದಾನ ಸಮಾರಂಭಕ್ಕೆ
ಶ್ರೀ ಮತ್ತು ಶ್ರೀಮತಿ ಪಾವಟೆಯವರು ಆಗಮಿಸಿದಾಗ

ಸಂಪಾದಕೀಯ

೧. ಸನ್ಮಾನ್ಯ ರ್‍ಯಾಂಗ್ಲರ ದಾದಾಸಾಹೇಬ ಪಾವಟೆಯವರ ಷಷ್ಟ್ಯಬ್ದಿಪೂರ್ತಿ ಸಮಾರಂಭ (ವಜ್ರ ಮಹೋತ್ಸವ)

ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳೂ ಮುಂಬಯಿ ರಾಜ್ಯದ ಶಿಕ್ಷಣ ಖಾತೆಯ ನಿವೃತ್ತ ಡಾಯರೆಕ್ಟರರೂ ಕನ್ನಡ ಮಾತೆಯ ಪುತ್ರರತ್ನರೂ ಕನ್ನಡಿಗರ ಮಾರ್ಗದರ್ಶಕರೂ ಆದ ಶ್ರೀ ದಾದಾಸಾಹೇಬ ಪಾವಟೆಯವರ ವಜ್ರಮಹೋತ್ಸವದ ಹಬ್ಬವು ದಿನಾಂಕ ೭–೧೧-೧೯೫೫ ಶನಿವಾರ ಭಾರತದ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದರವರ ಹಿರಿತನದಲ್ಲಿ ಉನ್ನತವಾದ ಮತ್ತು ಪವಿತ್ರವಾದ ಸ್ಥಳದಲ್ಲಿ, ಶುಭ ಮುಹೂರ್ತದಲ್ಲಿ, ಮಹಾಜನರ ಸಮ್ಮುಖದಲ್ಲಿ, ಸಾಂಗವಾಗಲಿದೆ. ಸನ್ಮಾನ್ಯ ರ್‍ಯಾಂಗ್ಲರ ದಾದಾಸಾಹೇಬ ಪಾವಟೆಯವರ ಜೀವನವು ಬಹು ಮುಖವಾದುದು. ಈ ಮಹನೀಯರ ವಿಶಾಲ ವ್ಯಕ್ತಿತ್ವದ ಪರಿಚಯವು ಪ್ರಾಥಮಿಕ ಶಿಕ್ಷಣದಲ್ಲಿ ಕೆಲಸಮಾಡುತ್ತಿರುವ ಗುರುವರ್ಗಕ್ಕೆ ಚನ್ನಾಗಿ ಆಗಬೇಕೆಂಬ ಹೆಬ್ಬಯಕೆಯಿಂದ ಈ ವಿಶೇಷ ಸಂಚಿಕೆಯಲ್ಲಿ ಹಲವಾರು ಲೇಖಗಳನ್ನು ಕೊಡಲಾಗಿದೆ, ಈ ಲೇಖಗಳನ್ನು ತರಿಸಿಕೊಳ್ಳಲು ಸ್ಫೂರ್ತಿಯನ್ನು ಕೊಟ್ಟ ಮಹನೀಯರೆಲ್ಲರಿಗೂ ನಾನು ಚಿರುಋಣಿ. ಮೊದಲನೆಯ ಪುಟದಲ್ಲಿ ಮುದ್ರಿಸಲ್ಪಟ್ಟ ಶ್ರೀ ದಾದಾಸಾಹೇಬರ ಫೋಟೋವನ್ನು ಕೊಟ್ಟ ಶ್ರೀ ಜೇವೂರ ಸಾಹೇಬರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಶ್ರೀ ದಾ. ಚಿಂ. ಪಾವಟೆಯವರ ಬಗ್ಗೆ ಲೇಖಗಳನ್ನು ಕೊಟ್ಟ ಎಲ್ಲ ಮಹನೀಯರಿಗೂ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಕಾಲಕ್ಕೆ ಸೂಚನೆಗಳನ್ನು ಕೊಟ್ಟು ಮಾರ್ಗದರ್ಶನ ಮಾಡಿದ ಶ್ರೀ ಹಂದ್ರಾಳ ಸಾಹೇಬರಿಗೂ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

೨. ಸಮಾಜ ಶಿಕ್ಷಣದಲ್ಲಿ ತರಬೇತಿ ವರ್ಗಗಳು

ಈ ವರ್ಷದ ದಸರಾ ಬಿಡುವಿನ ದಿನಗಳಲ್ಲಿ ಸಮಾಜ ಶಿಕ್ಷಣದಲ್ಲಿ ತರಬೇತಿ ವರ್ಗಗಳನ್ನು ಹಲವಾರು ಕೇಂದ್ರಗಳಲ್ಲಿ ನಡೆಯಿಸಲಾಯಿತು, ಆಯಾ ಜಿಲ್ಹೆಗಳ ಶಿಕ್ಷಣಾಧಿಕಾರಿಗಳು ಸಂಚಾಲಕತ್ವವನ್ನು ವಹಿಸಿದ್ದರು. ಸಮಾಜ ಶಿಕ್ಷಣ ಕಾರ್ಯವನ್ನು ಮನಮುಟ್ಟಿ ಮಾಡಿ ಹಳ್ಳಿಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸುವದೇ ಈ ಯೋಜನೆಗಳ ಧ್ಯೇಯವಾಗಿದೆ. ಆದ್ದರಿಂದ ತರಬೇತಿಯನ್ನು ಪಡೆದ ಗುರುಗಳು ಈ ದಿಶೆಯಲ್ಲಿ ಕಾರ್ಯಗಳನ್ನು ಕೈಕೊಂಡು ಯೋಜನೆಗಳನ್ನು ಯಶಸ್ವಿಗೊಳಿಸಲು ಹಾತೊರೆಯುತ್ತಿರುವದು ಬಹು ಅಭಿನಂದನೀಯವಾದುದು.

೩. ಸಂಯುಕ್ತರಾಷ್ಟ್ರ ಸಂಘ ದಿನಾಚರಣೆ

೨೪—೧೦-೫೫ರಂದು ಯು. ಎನ್. ಓ. ದಿನಾಚರಣೆಯನ್ನು ಆಚರಿಸಿದುದು ಎಲ್ಲರಿಗೂ ಗೊತ್ತಿದೆ. ಜಗತ್ತಿನ ಕಲ್ಯಾಣಕ್ಕಾಗಿ, ಒಕ್ಕಟ್ಟಿಗಾಗಿ ವಿವಿಧರಾಷ್ಟ್ರಗಳಲ್ಲಿ ಸಮತೋಲನವನ್ನು ಕಾಯ್ದು ಶಾಂತತೆ ನೆಲಿಸುವದಕ್ಕಾಗಿ, ರಾಷ್ಟ್ರಗಳಲ್ಲಿ ಬಹುಮುಖ ಪ್ರಗತಿಯನ್ನು ಸಾಧಿಸುವದಕ್ಕಾಗಿ ಈ ಸಂಘವು ಪ್ರಯತ್ನಿಸುತ್ತಿರುವದು. ಈ ಸಂಘವು ಮಾಡುತ್ತಿರುವ ಕಾರ್ಯಗಳ ಬಗ್ಗೆ ಬಾಲಕವೃಂದಕ್ಕೆ ಪರಿಚಯ ಮಾಡಿಕೊಡಬೇಕೆಂದು ಗುರುವರ್ಗಕ್ಕೆ ಸೂಚಿಸುತ್ತೇನೆ.

೪. ಮಕ್ಕಳ ದಿನಾಚರಣೆ

೧೪-೧೧–೫೫ ದಿನ "ಚಿಲ್ಡ್ರನ್ಸಡೆ" ಎಂದು ನಾಮಾಂಕಿತವಾದ ಈ ದಿನಾಂಕದಲ್ಲಿ ಬಾಲಕರ ಉನ್ನತಿಗಾಗಿ ಕಾರ್ಯಕ್ರಮಗಳನ್ನು ಕೈಕೊಳ್ಳಲಾಗುವದು. ಮೈಸೂರ ರಾಜ್ಯ ಸರಕಾರದ ಆದೇಶಗಳ ಮೇರೆಗೆ ರಾಜ್ಯದ ಎಲ್ಲ ಊರುಗಳಲ್ಲಿ ಈ ಸಮಾರಂಭವು ನಡೆಯಲಿದೆ. ಈ ದಿನವು ಸನ್ಮಾನ್ಯ ಪಂಡಿತ ಜವಾಹರಲಾಲರ ಹುಟ್ಟು ಹಬ್ಬವನ್ನು ಆಚರಿಸಲು ಸುಪ್ರಸಂಗವನ್ನು ತರುತ್ತಿದೆ. ಪ್ರತಿಯೊಂದು ಜಿಲ್ಹೆಯಲ್ಲಿ ಆಯಾ ಜಿಲ್ಹೆಯ ಡೆ. ಕಮಿಶನರರ ಸಂಚಾಲಕತ್ವದಲ್ಲಿ ಮಕ್ಕಳ ದಿನವನ್ನು ಆಚರಿಸುವ ಬಗ್ಗೆ ರೂಪರೇಷೆಗಳನ್ನು ಗೊತ್ತುಪಡಿಸಲಾಗಿದೆ. ಮಕ್ಕಳ ಸರ್ವತೋಮುಖ ಬೆಳವಣಿಗೆಯನ್ನು ಮಾಡಲು ಕಟಿಬದ್ಧರಾದ ಗುರುವರ್ಗದವರು ಈ ಕಾರ್ಯವನ್ನು ಯಶಸ್ವಿಯಾಗಿ ಮಾಡಿ "ರಾಷ್ಟ್ರನಿರ್ಮಾಣಕ"ರೆಂಬ ಹೆಸರನ್ನು ಸಾರ್ಥಕಗೊಳಿಸಲು ಸುಸಂಧಿಗಳನ್ನು ಗುರುವರ್ಗವು ಈ ದಿನದಂದು ಪಡೆದಿದೆ.

೫. ಹಳ್ಳಿಯ ಸೇವೆ

ಈ ದಸರಾ ಬಿಡುವಿನಲ್ಲಿ ಹಳ್ಳಿಯ ಸುಧಾರಣಾ ಕಾರ್ಯಗಳನ್ನು ಕೈಕೊಂಡು ಶಿಬಿರಗಳನ್ನು ನಡೆಯಿಸುತ್ತಿರುವಂಥ ಭಾರತ ಸೇವಕ ಸಮಾಜವು ಅಭಿನಂದನೀಯವು. ಭಾರತದ ನಿಜವಾದ ಉದ್ಧಾರವು ಹಳ್ಳಿಗಳ ಮುಖಾಂತರ ಆಗಬೇಕಾಗಿದೆ. ಯೋಜನೆಗಳು ಫಲಕಾರಿಯಾಗಿ ಹಳ್ಳಿಗಳಲ್ಲಿ ಸಮೃದ್ಧಿ ನೆಲಿಸಿದಾಗ ಪಟ್ಟಣಗಳು ಸಮೃದ್ಧಿಯನ್ನು ಪಡೆಯುವದು ಸಾಧ್ಯವಿದೆ. ಆದ್ದರಿಂದ ಎಲ್ಲ ಸುಶಿಕ್ಷಿತರು ಹಳ್ಳಿಯ ಸರ್ವತೋಮುಖ ಬೆಳವಣಿಗೆಯ ದಿಶೆಯಲ್ಲಿ ತ್ರಿಕರಣ ಪೂರ್ವಕವಾಗಿ ದುಡಿಯಬೇಕು. ಈ ಕಾರ್ಯದಲ್ಲಿ ಬಾಲಕರೂ ಗುರುವರ್ಗದವರೂ ಆಸ್ಥೆಯಿಂದ ದುಡಿಯುತ್ತಿರುವದು ಅಭಿನಂದನೀಯವಾಗಿದೆ.

೬. ಶೈಕ್ಷಣಿಕ ಪ್ರವಾಸಗಳು

ಚಳಿಗಾಲವು ಶೈಕ್ಷಣಿಕ ಪ್ರವಾಸಗಳನ್ನು ಕೈಕೊಳ್ಳಲಿಕ್ಕೆ ಯೋಗ್ಯ ಸಮಯ. ಆದ್ದರಿಂದ ಶಾಲೆಗಳ ಮಂತ್ರಿಮಂಡಲವು ಗುರುಗಳ ಮಾರ್ಗದರ್ಶನದಲ್ಲಿ ಪ್ರವಾಸಗಳನ್ನು ಕೈಕೊಂಡು ಶೈಕ್ಷಣಿಕ ಲಾಭವನ್ನು ನೂರಕ್ಕೆ ನೂರರಷ್ಟು ಪಡೆಯಲು ಪ್ರಯತ್ನಿಸಬೇಕು. ಪ್ರವಾಸದಲ್ಲಿ ಶಿಕ್ಷಣವಿದೆ. ಪ್ರವಾಸದಲ್ಲಿ ಬಾಲಕರಿಗೆ ಅನುಭವದ ಸಂಸ್ಕಾರಗಳನ್ನು ಕೊಡಲು ಸುಸಂದರ್ಭಗಳು ಒದಗುವವು. ಪ್ರವಾಸದಲ್ಲಿ ಸಾಂಘಿಕ ಜೀವನವಿದೆ, ಸಹಕಾರವಿದೆ, ಸ್ವತಂತ್ರ ರೀತಿಯಲ್ಲಿ ವ್ಯವಹರಿಸಲು ಸಂದರ್ಭಗಳಿವೆ. ಒಲವನ್ನು ಬೆಳೆಯಿಸಲು ಸಂದರ್ಭಗಳಿವೆ. ಪ್ರವಾಸದಿಂದ ದೊರಕಿದ ಜ್ಞಾನವು ದೃಢವಾಗಿ ನೆಲಿಸುವದು; ಕಾರ್ಯಗಳನ್ನು ನೆರವೇರಿಸಲು ಸಾಧನವಾಗುವದು. ಪ್ರವಾಸದಲ್ಲಿ ವ್ಯಕ್ತಿತ್ವದ ಬೆಳವಣಿಗೆಯನ್ನು ಪಡೆಯಲು ಸಂದರ್ಭಗಳಿವೆ. ವಿವಿಧ ರೀತಿಯಲ್ಲಿ ಶೈಕ್ಷಣಿಕ ಲಾಭವನ್ನು ಕೊಡುವ ಪ್ರವಾಸಗಳನ್ನು ಶಿಕ್ಷಕರು ಕೈಕೊಂಡು ಬಾಲಕರ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಿ ಆನಂದ ಪಡೆಯುತ್ತಿರುವ ಗುರುವರ್ಗವೇ ಧನ್ಯವು !

೭. ಷಾಣ್ಮಾಸಿಕ ಪರೀಕ್ಷೆಗಳು

ಪರೀಕ್ಷೆಗಳು ಪ್ರಗತಿಯನ್ನು ಹೊಂದಲು ಸಾಧನ. ಆದ್ದರಿಂದ ಯೋಗ್ಯ ರೀತಿಯಲ್ಲಿ ಪ್ರಾಯೋಗಿಕವಾಗಿಯೂ ಬೇರೆ ಬೇರೆ ವಿಷಯಗಳ ಬಗ್ಗೆ ಬರೆಹದಲ್ಲಿಯೂ ಮತ್ತು ಮೌಖಿಕವಾಗಿಯೂ ಪರೀಕ್ಷೆಗಳನ್ನು ಕಾಲ ಕಾಲಕ್ಕೆ ನಡೆಯಿಸುವದು ಇಷ್ಟವಾದುದು. ಪರೀಕ್ಷೆಗಳು ಬಾಲಕರ ದೋಷಗಳನ್ನು ತಿದ್ದಲು, ಯೋಗ್ಯ ಶಕ್ತಿಗಳಿಗೆ ಚಲನೆ ಕೊಡಲು, ಅಂದಾಜು ಪತ್ರಿಕೆಯನ್ನು ಸರಿಪಡಿಸಿಕೊಳ್ಳಲು ಉಪಕರಣಗಳನ್ನು ತಯಾರಿಸಿಕೊಳ್ಳಲು ಬಾಲಕರ ಪ್ರಗತಿಯ ಬಗ್ಗೆ ಪಾಲಕರೆದುರಿಗೆ ಒಂದು ನಿದರ್ಶನವನ್ನು ಕೊಡಲು ಸಾಧನಗಳಾಗಿವೆ.

ಎಂ. ಜಿ. ಕಟ್ಟಿ
ಪ್ರ. ಸಂಪಾದಕರು

ತಾಯಿಗೆ ನಿರಾಶೆಯನ್ನುಂಟು ಮಾಡಿದ ಕೂಸು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಯಾಯಿತು

ಲೇಖಕರು : **ಶ್ರೀ ಶಿಂತ್ರಿ ಬಸಪ್ಪನವರು,** ಬಿ.ಎ.,ಬಿ.ಟಿ.

ಪ್ರಸ್ತಾವನೆ

ಕರ್ನಾಟಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವಲ್ಲಿ ಮುಖ್ಯ ಅಂಗವನ್ನು ವಹಿಸಿದವರು ಡ್ಯಾಂಗ್ಲರ ಪಾವಟೆಯವರು. ಅದನ್ನು ರೂಪಿಸಿದವರೂ ಅವರೇ. ಈಗ ಅದನ್ನು ತಮ್ಮ ಪೂರ್ವಯೋಜಿತ ಮತ್ತು ಸುಸಂಬದ್ಧ ಹಂಚಿಕೆಯಂತೆ ಭರದಿಂದ ಕಟ್ಟುವವರೂ ಅವರೇ. ನಿಸರ್ಗದ ಸೌಂದರ್ಯದಿಂದ ತುಂಬಿ ತುಳುಕುವ ಧೋಟಾ ಮಹಾಬಳೇಶ್ವರದಲ್ಲಿ ಸ್ವತಂತ್ರವಾದೊಂದು ನಗರವನ್ನೇ ನಿರ್ಮಿಸತೊಡಗಿದ್ದಾರೆ. ಡ್ಯಾಂಗ್ಲರರವರ ಆಡಳಿತಾವಧಿಯಲ್ಲಿ ಅವರು ಪ್ರಾಧ್ಯಾಪಕ-ವಿದ್ಯಾರ್ಥಿ ವೃಂದಕ್ಕೆ ಅವಶ್ಯವಿರುವ ವಸತಿ,

ಭೋಜನ ಮುಂತಾದ ಎಲ್ಲ ಸೌಕರ್ಯಗಳಿಂದೊಡಗೂಡಿದ ವಿಶ್ವವಿದ್ಯಾಲಯ (Residential University) ವಾಗಿಯೇ ತೀರುವದು. ಅವರ ವಜ್ರಮಹೋತ್ಸವವು ಇದೇ ನವ್ಹೆಂಬರ ತಿಂಗಳು ಏಳನೆಯ ದಿನಾಂಕದ ಶುಭಮುಹೂರ್ತದಲ್ಲಿ ರಾಷ್ಟ್ರಾಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರ ಘನ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ಜರುಗಿತಷ್ಟೇ. ಅಂತಹವರ ಬಾಲ್ಯ ಜೀವನದ ಬಗೆಗೆ ಅಲ್ಪ ಪರಿಚಯವನ್ನಿಲ್ಲಿ ಮಾಡಿಕೊಡಲು ಪ್ರಯತ್ನಿಸಲಾಗಿದೆ.

ಮನೆತನ ಹಾಗು ಪರಂಪರೆ

ಇವರ ಮನೆತನದ ಪೂರ್ವೇತಿಹಾಸವು ಓದುಗರ ಕೌತುಕವನ್ನು ಕೆರಳಿಸುವಂತಿದೆ. ಇವರ ಪೂರ್ವಜರು ಸೊಲ್ಲಾಪುರದ ಕಡೆಯವರು. ಸುಮಾರು ೨೦೦ ವರುಷಗಳ ಹಿಂದೆ ಅಥಣಿ, ಬನಹಟ್ಟಿ, ಮುಮುದಾಪುರಗಳತ್ತ ವಲಸೆ ಬಂದರು. ಸಾತಾರೆ–ಸೊಲ್ಲಾಪುರ ಜಿಲ್ಹೆಗಳ ಸರಹದ್ದಿನಲ್ಲಿ ಮಹಾದೇವರ ಗುಡ್ಡದಲ್ಲಿರುವ ರುದ್ರಪಶುಪತಿ ಮಠದಲ್ಲಿ ಅರ್ಚಕರಾಗಿದ್ದರೆಂದು ಹಲವು ಪ್ರಾಚೀನ ದಾಖಲೆಗಳಿವೆಯಂತೆ. ಸಾತಾರೆಯಲ್ಲಿಯ 'ಕಿಲ್ಲಿಗವಿ ಬಸವಣ್ಣ'ನು ಅವರ ಕುಲದೇವರು. ಸಂಗೋಲಾ ತಾಲೂಕಿನಲ್ಲಿ ಪಾವಟೆಯೆಂಬ ಹೆಸರಿನದೊಂದು ಹಳ್ಳಿಯಿದೆ. ಅದರ ಅರ್ಥವು ಮರಾಠಿಯಲ್ಲಿ ಕಾಯಿಪಲ್ಯವೆಂದಾಗುತ್ತಿದೆ. ಇಷ್ಟರ ಮೇಲಿಂದ ಅವರ ಪೂರ್ವಜರು ಮಹಾರಾಷ್ಟ್ರದವರೆಂದು ಸಿದ್ಧವಾಗುತ್ತಿದೆ.

ಜನನ ಮತ್ತು ಬಾಲ್ಯ

ಅವರ ತಂದೆಯವರ ಹೆಸರು ಶ್ರೀ ಚಿಂತಪ್ಪನವರು, ತಾಯಿಯವರ ಹೆಸರು ಶಾಂತವೀರಮ್ಮನವರು. ಅವರೀರ್ವರು ಆದರ್ಶ ದಂಪತಿಗಳಾಗಿದ್ದರು. ೧೮೯೯ನೆಯ ಇಸವಿ ಆಗಸ್ಟ ತಿಂಗಳು ೨ನೆಯ ದಿನಾಂಕ ಅವರ ಜನನವು ಸ್ವಗ್ರಾಮವಾದ ಮುಮುದಾಪುರದಲ್ಲಾಯಿತು, ಮತ್ತು ಅವರಿಗೆ ದಾದಪ್ಪನೆಂದು ನಾಮಕರಣವಾಯಿತು. ಇಲ್ಲಿ ಒಂದು ಸೋಜಿಗದ ಮಾತನ್ನು ಹೇಳಬಯಸುವೆವು. ಅವರ ತಾಯಿಯವರು ಇವರನ್ನ ಹಡೆಯುವದಕ್ಕಿಂತ ಮುಂಚೆ ಬಿಟ್ಟೂಬಿಡದೆ ಮೂರು ಗಂಡುಮಕ್ಕಳನ್ನು ಹಡೆದಿದ್ದರು. ಈ ಸಲ ಅವರು ಹೆಣ್ಣು ಕೂಸನ್ನು ಬಯಸಿದ್ದರು; ಮತ್ತು ಹಾಗೆ ಬಯಸಿದ್ದುದು ತಾಯಂದಿರಿಗೆ ಸ್ವಾಭಾವಿಕವೇ ಆಗಿದೆ. "ಮಾನವನು ಬಯಸುವದು ಒಂದು; ದೇವರು ಕೊಡುವದು ಮತ್ತೊಂದು" ಎಂಬ ನಾಣ್ಣುಡಿಯಂತೆ ಹೆಣ್ಣಿನ ಬದಲು ಗಂಡು ಹುಟ್ಟಿದ್ದರಿಂದ ಅತಿ ನಿರಾಶರಾಗಬೇಕಾದ ಪ್ರಸಂಗವು ಅವರ ಪಾಲಿಗೆ ಬಂದಿತು. ಹಡೆದ ತಾಯಿಯವರನ್ನು ನಿರಾಶರನ್ನಾಗಿ ಮಾಡಿದ ಮಗುವೇ ಈಗ ಕನ್ನಡಮ್ಮನ ಅಚ್ಚುಮೆಚ್ಚಿನ ಸುಕುಮಾರನಾಗಿ ಪ್ರಕಾಶಿಸುತ್ತಿದ್ದಾನೆ. ೧೯೦೧ರಲ್ಲಿ ಉಗ್ರಸ್ವರೂಪದ ಪ್ಲೇಗಿನ ಪಿಡುಗು ಪ್ರಥಮಸಲ ನಮ್ಮ ದೇಶವನ್ನೆಲ್ಲ ಆವರಿಸಿಕೊಂಡಿತಷ್ಟೇ. ಆಗ ಚಿಕ್ಕಮಗು ದಾದಪ್ಪನಿಗೂ ಆತನ ತಂದೆಯವರಿಗೂ ಏಕಕಾಲಕ್ಕೆ ಆ ಪಿಡುಗು ಬಡಕೊಂಡಿತು. ಅವರ ತಾಯಿಯವರ ತಂದೆಯವರು ಆಯುರ್ವೇದದಲ್ಲಿ ನುರಿತವರಿದ್ದುದರಿಂದ ರಕ್ತಾನುಗತವಾಗಿ ಅವರ ತಾಯಿಯವರಿಗೂ ಆ ಶಾಸ್ತ್ರವು ಅಲ್ಪಸ್ವಲ್ಪ ಗೊತ್ತಾಗಿದ್ದುದು ಅಚ್ಚರಿಯ ಮಾತೇನಲ್ಲ. ಆದುದರಿಂದ, ಅವರು ತಮ್ಮ ಪತಿ ಮತ್ತು ಮಗು ಈರ್ವರಿಗೂ ಔಷಧೋಪಚಾರವನ್ನು ತಾವೇ ಮಾಡಿದರೇನೋ ನಿಜ. ಆದರೆ, ಮಗುವಿಗೆ ಅಷ್ಟೊಂದು ಕಾಳಜಿ ಮಾಡದೆ ತಮ್ಮ ಪತಿಗೇ ವಿಶೇಷ ಕಾಳಜಿ ಮಾಡಿದರಂತೆ. ಹಾಗೆ ಮಾಡಿದ್ದಕ್ಕೆ ಕಾರಣವಿಲ್ಲದಿಲ್ಲ. ಹೆಣ್ಣು ಕೂಸನ್ನು ಬಯಸಿದ ತಾಯಿಗೆ ಈ ಗಂಡು ಮಗು ನಿರಾಶೆಯನ್ನುಂಟು ಮಾಡಿತ್ತಲ್ಲವೇ ? ಬಹಳಷ್ಟು ಕಾಳಜಿಯಿಲ್ಲದೆ ಈ ಗಂಡು ಮಗು, ವಿಶೇಷ ಕಾಳಜಿಯಿಂದ ಪತಿ ಈರ್ವರೂ ಗುಣಮುಖರಾದರು. ದುಃಖದ ಸಂಗತಿಯೆಂದರೆ, ಇವರೀರ್ವರ ಶುಶ್ರೂಷೆಯನ್ನು ಮಾಡುತ್ತಲೇ ಶಾಂತವೀರಮ್ಮನವರಿಗೆ ಆ ಅಂಟು ರೋಗವು ಬಡಕೊಂಡಿತು. ಪತಿ ಮತ್ತು ಮಗು ಇವರೀರ್ವರು ನೆಟ್ಟಗಾದ ಮೇಲೆ ಅದರ ಪ್ರೀತ್ಯರ್ಥವಾಗಿ ದೇವರಿಗೆ ಸಮಾರಾಧನೆಯನ್ನು ಮಾಡಿಸುವೆನೆಂದು ಹರಕೆಹೊತ್ತಿದ್ದರಂತೆ. ತಮ್ಮ ಮೈಯಲ್ಲಿ ಘೋರತರವಾದ ಅಂಟುರೋಗವಿದ್ದರೂ ಆ ಧಾರ್ಮಿಕ ವಿಧಿಯನ್ನು ಮಾಡಿಸಿಯೇ ತೀರಿದರು, ಮತ್ತು ಮರುದಿನ ಮುಂಜಾನೆ ಲಿಂಗದೊಳಗಾದರು ! ಇದು ಅವರಲ್ಲಿ ಹುದುಗಿದ್ದ ಮನೋನಿರ್ಧಾರ ಮತ್ತು ಧಾರ್ಮಿಕ ಸಂಸ್ಕೃತಿಗಳನ್ನು ಕೈಯೆತ್ತಿತೋರಿಸುತ್ತಿದೆ. ಪ್ರಾಣಬಿಡುವ ಮೊದಲು ತಮ್ಮ ಪತಿಯಿಂದ ಮೂರು ವಚನಗಳನ್ನು ಬೇಡಿದರು:— (೧) ತಮ್ಮ ಹೊಟ್ಟೆಯಿಂದ ಹುಟ್ಟಿದ ಮಕ್ಕಳಿಗೆ ಮುಂದೆ ಮಲತಾಯಿಯ ಕಾಟವಾಗಬಾರದೆಂಬ ಸದುದ್ದೇಶದಿಂದ ಪತಿಯು ಪುನರ್ವಿವಾಹವಾಗಬಾರದು. (೨) ಮಕ್ಕಳಿಗೆ ಶಿಕ್ಷಣವನ್ನು ಕೊಡಬೇಕು. (೩) ಆರೊಬ್ಬರಗೂಡ ಜಗಳಾಡಬಾರದು.

ಪ್ರಾಥಮಿಕ ಶಿಕ್ಷಣ

ಬಡತನದ ಮೂಲಕ ತಂದೆಯು ಮಕ್ಕಳೊಡನೆ ಹೊಲದಲ್ಲಿ ಕೆಲಸ ಮಾಡಬೇಕಾಗುತ್ತಿತ್ತು. ಹೀಗಾಗಿ ಜೀವನವನ್ನು ಸಾಗಿಸುವದು ತಂದೆಗೆ ಬಹಳ ಕಷ್ಟವಾಗಿತ್ತು. ಶಿಕ್ಷಣದ ಮಾತಂತೂ ದೂರೇ ಉಳಿಯಿತು. ಅವರ ನೆರೆ ಹೊರೆಯ ಗೃಹಸ್ಥನೋರ್ವನು: "ಮಕ್ಕಳಿಗೆ ಶಾಲೆಗೆ ಕಳಿಸಿರಿ" ಎಂದು ಒಂದೇಸವನೆ ಗಂಟುಬಿದ್ದಿದ್ದನಂತೆ. ಕರ್ಮಧರ್ಮ ಸಂಯೋಗದಿಂದ ಅವರ ಮನೆಯ ಹತ್ತರ ಇರಲು ಒಬ್ಬರು ಶಿಕ್ಷಕರು ಬಂದರು. ಅವರಪೊಂದು ಆಕಳವಿತ್ತು. ಅದಕ್ಕೆ ಮೇವನ್ನು ದಿನಾಲು ಪಾವಟೆಯವರ ಮನೆತನವು ಪೂರೈಸುತ್ತಿತ್ತು. ಪ್ರತ್ಯುಪಕಾರವಾಗಿ ಆ ಶಿಕ್ಷಕರು ಆ ಮನೆತನದ ಮಕ್ಕಳಿಗೆ ಕಲಿಸುತ್ತಿದ್ದರು. ಈ ಪ್ರಕಾರ ಅತ್ತ ಹೊಲದಲ್ಲಿ ಕಾಯಕಷ್ಟವೂ ಇತ್ತ ಮನೆಯಲ್ಲಿ ವಿದ್ಯಾರ್ಜನೆಯೂ ಸಾಗಿದವು. ೧೯೦೭ರಲ್ಲಿ ಬೆಳಗಾವಿ ಜಿಲ್ಲೆಯ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರವರು ಆ ಊರ ಸಾಲೆಗೆ ಸಂದರ್ಶನವನ್ನಿತ್ತರು. ಆಗ ಚಿಕ್ಕ ದಾದಪ್ಪನ ನಂಬರು ಕ್ಲಾಸಿನಲ್ಲಿ ಎಲ್ಲಕ್ಕೂ ಕೆಳಗೆ ಇತ್ತು. ಸಾಹೇಬರವರ ಎಲ್ಲ ಪ್ರಶ್ನೆಗಳಿಗೆ ಈ ಬಾಲಕನು ಸಮರ್ಪಕ ಉತ್ತರಗಳನ್ನು ಕೊಟ್ಟನು. ಈ ಹುಡುಗನ ನಂಬರು ಎಲ್ಲಕ್ಕೂ ಮೇಲೆ ಇರತಕ್ಕದ್ದು, ಎಲ್ಲಕ್ಕೂ ಕೆಳಗೆ ಏಕೆ ಎಂದು ಸಾಹೇಬರವರು ಶಿಕ್ಷಕರನ್ನು ಕೇಳಿದರು. ತಡ ಮಾಡಿ ಹೆಸರನ್ನು ಹಚ್ಚಿದ್ದರಿಂದ ಹಾಗಾಗಿದೆಯೆಂದು ಶಿಕ್ಷಕರು ಉತ್ತರಕೊಟ್ಟರು. ಸಾಹೇಬರವರು ಆ ಹುಡುಗನಿಗೆ ಡೆಪ್ಯೂಟಿ ಚನ್ನಬಸಪ್ಪನವರಿಂದ ಬರೆಯಲ್ಪಟ್ಟಿದ್ದ ಗಣಿತ ಪುಸ್ತಕವನ್ನು ಇನಾಮಾಗಿ ಕೊಟ್ಟರು. ಅಂದಿನಿಂದ ಗಣಿತಕ್ಕೆ ಆ ಬಾಲಕನಲ್ಲಿ ಆಸ್ಥೆಯು ಚಿಗುರಿ ದಿನಗಳೆದಂತೆ ಅದು ಬಿದಿಗೆ ಚಂದ್ರನಂತೆ ಬಲಿಯುತ್ತ ಸಾಗಿತು. ಅದುವೇ ಆತನನ್ನು ಕೊನೆಗೆ ರ್‍ಯಾಂಗಲರನನ್ನಾಗಿ ರೂಪಿಸಿ ಈಗ ಕನ್ನಡ ಜನತೆಯ ಕಣ್ಮಣಿಯನ್ನಾಗಿ ಮಾಡಿದೆ. ಈ ಸಂದರ್ಭದಲ್ಲಿ ನೆಪೋಲಿಯನ್ನನನ್ನು ಸೋಲಿಸಿದ ಇಂಗ್ಲಂಡದ ನಾಮಾಂಕಿತ ಸೇನಾನಾಯಕ ಡ್ಯೂಕ ಆಫ್ ವೆಲಿಂಗ್ಟನ್ನನ ಬಗೆಗೆ ಓರ್ವ ಇತಿಹಾಸಕಾರನು ಮಾರ್ಮಿಕವಾಗಿ ನಿರ್ಮಿಸಿದ ಮಾತೊಂದನ್ನು ಹೇಳಬಯಸುವೆವು. :— "The battle of waterloo was war on the play field of Eton." ಇದರ ಕನ್ನಡ ಅನುವಾದವಿಂತಿದೆ. :— "ವಾಟರ್ಲೂ ಯುದ್ಧವು ಈಟನ್ ಕಾಲೇಜದ ಆಟದ ಬೈಲಿನ ಮೇಲೆ ಗೆದೆಯಲ್ಪಟ್ಟಿತು." ಈಟನ್ ಕಾಲೇಜದ ಆಟದ ಬೈಲಿನಲ್ಲಿ ಡ್ಯೂಕರಿಂದ ಹೊರಹೊಮ್ಮಿದ ಶಿಸ್ತು, ಸಂಘಟನಾ ಶಕ್ತಿ, ಕಾರ್ಯಕುಶಲತೆ, ಮುಖಂಡತ್ವ ಮುಂತಾದವುಗಳು ಮುಂದೆ ಅವರನ್ನು ಇಂಗ್ಲಂಡದ ಮಹಾದಂಡನಾಯಕನನ್ನಾಗಿ ಮಾಡಿದವು. ಅದರಂತೆ ಮಮದಾಪುರ ಶಾಲೆಯಲ್ಲಿ ಚಿಕ್ಕದಾದಪ್ಪನು ತೋರ್ಪಡಿಸಿದ ಜಾಣ್ಮೆಯೂ ಕುಶಾಗ್ರಬುದ್ಧಿಯೂ ಮುಂದೆ ಆತನಿಗೆ ಗಣಿತ ಶಾಸ್ತ್ರದಲ್ಲಿ ಎಲ್ಲಕ್ಕೂ ಮಿಗಿಲಾದ ರ್‍ಯಾಂಗ್ಲರ ಪದವಿಯನ್ನು ತಂದುಕೊಟ್ಟವಲ್ಲದೆ ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಯನ್ನಾಗಿಯೂ ಮಾಡಿದವು. ಇಂತಹ ಬಾಲಕನನ್ನು ಪಡೆದುದು ನಿಜಕ್ಕೂ ಮಮದಾಪುರ ಶಾಲೆಯ ಸುದೈವವು. ಮಮದಾಪುರ ಸಾಲೆಯಲ್ಲಿ ೫ನೆಯ ಇಯತ್ತೆಯ ವರೆಗಿನ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿಕೊಂಡು ಮಾಧ್ಯಮಿಕ ಶಿಕ್ಷಣ ಕ್ಕೋಸ್ಕರ ರಬಕವಿಯತ್ತ ಚಿಕ್ಕದಾದಪ್ಪನು ಸಾಗಿದನು. ಇಲ್ಲಿಗೆ ರ್‍ಯಾಂಗಲರ ಪಾವಟೆಯವರ ಬಾಲ್ಯ ಜೀವನವು ಮುಗಿದಂತಾಯಿತು.

—: ಜಯ ಹಿಂದ :—

೧೯೫೭ನೆಯ ಇಸವಿಯಿಂದ ಪ್ರಾರಂಭವಾಗುವ ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]

೪ ರಿಂದ ೭ ನೇಯ ವರ್ಗದ ವರೆಗಿನ ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ: ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ:—

ಸಾಯಿ ಪಬ್ಲಿಶಿಂಗ್ ಹಾವುಸ್,
ವಿಜಯ ರೋಡ, ಧಾರವಾಡ.

ಶ್ರೀ ಪಾವಟೆಯವರು

[ಅಂದು—ಇಂದು]

ಲೇಖಕರು : **ಶ್ರೀ ಮಿರ್ಜಿ ಅಣ್ಣಾರಾಯರು,** ಶೇಡಬಾಳ

ಶ್ರೀ ಪಾವಟೆಯವರ ಹೆಸರು ಇಂದು ಕರ್ನಾಟಕದ ಮನೆ ಮನೆಗಳಲ್ಲಿ ಮುಟ್ಟಿದೆ. ಭಾರತದಲ್ಲಿ ಜನ-ಜನಿತವಾಗಿದೆ. ಅದಕ್ಕೆ ಕಾರಣ ಪಾವಟೆಯವರು ಇಂದು ಕರ್ನಾಟಕದ ವ್ಯಕ್ತಿಯಾಗಿ ಉಳಿದಿಲ್ಲ; ಶಕ್ತಿಯಾಗಿ ಬಾಳಿದ್ದಾರೆ. ಕನ್ನಡ ತಾಯಿ ಬಂಜೆಯಲ್ಲ; ಭಾರತದಲ್ಲೆಲ್ಲ ಬೆಳಗುವಂಥ ಸುಪುತ್ರರನ್ನು ಇಂದೂ ನೀಡಬಲ್ಲಳು—ಎಂಬುದಕ್ಕೆ ಪಾವಟೆಯವರ ಬಹುಮುಖ ಸೇವೆಯೇ ನಿದರ್ಶನ. 'ಕರ್ನಾಟಕದ ವ್ಯಕ್ತಿಗಳಿಗೆ ಅವಕಾಶ ಕೊಟ್ಟು ನೋಡಿ, ಅವರ ಶಕ್ತಿಯ ಆಳ ಹಿರಿಮೆಗಳನ್ನು !'— ಎಂದು ನಾವಿಂದು ಪಾವಟೆಯವರನ್ನು ತೋರಿಸಿ ಭಾರತೀಯರಿಗೆ ಹೇಳಲು ಸಮರ್ಥರಾಗಿದ್ದೇವೆ. ಆ ಆತ್ಮವಿಶ್ವಾಸವನ್ನು ಪಾವಟೆಯವರು ನಮಗೆ ಇಂದು ತಂದು ಕೊಟ್ಟಿದ್ದಾರೆ.

ಅಂದು— ಆ ಇಡಿಯ ಮೂರು ದಿನವೆಲ್ಲ ಮಾನ್ಯ ಪಾವಟೆಯವರನ್ನು ಕಾಣುವವರಿಗೆ ಲೆಕ್ಕವಿಲ್ಲ. ಯಾರ ಭೆಟ್ಟಿಗೂ ಅವರು ಒಲ್ಲೆನ್ನುತ್ತಿರಲಿಲ್ಲ. ಕಾಲೇಜುಗಳವರು ತಮ್ಮ ಹಿತಾ-ಹಿತಗಳನ್ನ ವಿಚಾರಿಸಿದರೆ ಕರ್ನಾಟಕ ವಿಶ್ವವಿದ್ಯಾನಿಲಯ ಸಂಘದವರು ವಿಚಾರ ವಿನಿಮಯ ಮಾಡಲು ಹೋಗುವವರು. ಎಲ್ಲರಿಗೂ ಸಮಾಧಾನದ ಉತ್ತರ ಪಾವಟೆಯವರದು. ಆ ಮೂರು ದಿನಗಳೆಂದರೆ ಧಾರವಾಡಕ್ಕೊಂದು ಕಾಮಧೇನವು ಬಂದಂತಾಗಿದ್ದಿತು. ಕರ್ನಾಟಕದ ಶಿಕ್ಷಣ ಕೇಂದ್ರವೆನಿಸಿಕೊಂಡ ಧಾರವಾಡಕ್ಕೆ ಕನ್ನಡಿಗರೊಬ್ಬರು ಡಾಯರೆಕ್ಟರರಾಗಿ—ಮುಂಬೈ ಇಲಾಖೆಯ ಅಧ್ಯಕ್ಷ ಶಿಕ್ಷಣಾಧಿಕಾರಿಗಳಾಗಿ—ಬಂದುದು ಅದೇ ಮೊದಲನೆಯದಾಗಿತ್ತು.

ಮುಂಜಾನೆ ಎಂಟು ಗಂಟೆಗೇನೇ ಪಾವಟೆಯವರು ಅಲ್ಲ ಡಾಯರೆಕ್ಟರರು ಟ್ರೇನಿಂಗ ಕಾಲೇಜಿನ ಆವಾರವನ್ನು ಪ್ರವೇಶಿಸಿದರು. ಒಂದು ಗಂಟೆಯಾಯಿತು, ಎರಡು ಗಂಟೆಯಾಯಿತು. ವರ್ಗದ ಕೋಣೆಗಳಿಗೆ ಪಾವಟೆಯವರು ಸುಳಿಲೇ ಇಲ್ಲ. ವಿದ್ಯಾರ್ಥಿಗಳಿಗೆ ಡಾಯರೆಕ್ಟರರನ್ನು— ಅಲ್ಲ—ಪಾವಟೆಯವರನ್ನು ಕಾಣುವದೆಂದರೆ ತುಂಬ ಉಬ್ಬು. ಹೊತ್ತೇರಿದಂತೆ ವಿದ್ಯಾರ್ಥಿಗಳ ಮುಖ ಮ್ಲಾನವಾಗುತ್ತ ನಡೆಯಿತು. ವರ್ಗದಲ್ಲಿ ಗುಜು ಗುಜು ಮಾತಿಗೆ ಆರಂಭವಾಯಿತು.

" ದೊಡ್ಡ ಅಧಿಕಾರಿಗಳು ! ವರ್ಗಗಳನ್ನೆಲ್ಲ ನೋಡುತ್ತ ಏಕೆ ತಿರುಗಾಡಿಯಾರು ? " ಒಬ್ಬ ಗೆಳೆಯ ದೊಡ್ಡಸ್ತನದಿಂದ ನುಡಿದ.

"ಆಫೀಸಿನ ಕೆಲಸ ಅಷ್ಟನ್ನು ನೋಡಿ ಹೋಗುವವರಾಯಿತು." ಇನ್ನೊಬ್ಬ ಅದಕ್ಕೆ ಸೋಗೊಟ್ಟ.

"ಹಾಗೆ ಮಾಡಲಿಕ್ಕಿಲ್ಲ..." ಎಂದ ಇನ್ನೊಬ್ಬ.

"ಹನ್ನೆರಡು ಸಂಸ್ಥೆಗಳಿಗೆ ಹೋಗಬೇಕಾಗತದ, ನಿಮ್ಮದೊಂದೇ ಅಲ್ಲ, ಅವರಿಗೆ ಕಾಲೇಜ..?" ಮೊದಲನೆಯವ ತಿರುಗಿ ಕೇಳಿದ.

"ಬಾರದೆ ಹೋಗಲಿ. ನಾನು ಅಡ್ಡಗಟ್ಟಿ ಕರತರುವೆ" ಇಲ್ಲಿಯವರೆಗೆ ಸುಮ್ಮನೆ ಕುಳಿತ ಇನ್ನೊಬ್ಬ ತರುಣ ಹುರುಪಿನಿಂದ ನುಡಿದ.

ಆ ಗೆಳೆಯ ಅಡ್ಡಗಟ್ಟಲಿಕ್ಕೇನೂ ಹೋಗಬೇಕಾಗಲಿಲ್ಲ. ಅವನ ಮಾತು ಮುಗಿಯುವಷ್ಟರಲ್ಲಿ ಅವರೇ ಬಂದು ವರ್ಗದ ಬಾಗಿಲಿಗೆ ನಿಂತಿದ್ದರು. ಡಾಯರೆಕ್ಟರರು ಬರುವರೆಂದೊಡನೆ ಏನೋ ಸ್ವಲ್ಪ ಭಯವು ತೋರಿತ್ತು. ನಮಗೆ—ಇವರು ಯುರೋಪಿಯನರಂತೆಯೇ ಏನೋ ಎಂದು. ಆದರೆ ಕೋಣೆಯೊಳಗೆ ಕಾಲಿಡುತ್ತಲೇ "ಸಾಗಲಿ ನಿಮ್ಮ ಪಾಠ ಹಾಗೇ...." ಎಂದು ಮುಗುಳು ನಗೆಯೊಡನೆ ಮುತ್ತಿನಂತಹ ಕನ್ನಡ ಮಾತುಗಳು ಅವರ ಬಾಯಿಂದ ಉದುರಲು—" ಓ ಹೊ, ಇವರು ನಮ್ಮವರೇ ! ನಮ್ಮಂತೆಯೇ ಇದ್ದಾರೆ ಇವರು !" ಎಂದು ಕೊಳ್ಳುವಂತೆ ಆದರ, ಪ್ರೇಮ ವಿಶ್ವಾಸಗಳು ನಮ್ಮಲ್ಲಿ ಮೂಡಿಬಂದುವು. ನಮಗಷ್ಟೇ ಅಲ್ಲ, ಎಲ್ಲರಿಗೂ ಪಾವಟೆಯವರು ಹಾಗೆಯೇ ಕಾಣುತ್ತಿದ್ದರು.

ಡಾಯರೆಕ್ಟರರೆಂದೊಡನೆ ಅದೇನೋ ಸಾಹೇಬರು ಹಾಕುವ ಸೂಟು, ಬೂಟು, ಬಗಲಲ್ಲಿ ಹ್ಯಾಟು, ಗಂಭೀರ ನಡಿಗೆ, ಭೀಕರನೋಟ ಎಂದೇನೇನೋ ಕಲ್ಪಿಸಿಕೊಂಡಿದ್ದೆವು. ಸಾದಾ ಒಂದು ಅರ್ಧ ತೋಳಿನ ಶರ್ಟನ್ನು ತೊಟ್ಟುಕೊಂಡು ಎದುರಿಗೆ ಬಂದು ಮುಗುಳು ನಗೆ ಬೀರುತ್ತ ನಿಂತ ಪಾವಟೆಯವರು ಇವರೆಯೋ....! ಎಷ್ಟು ಸರಳ ಜೀವನ ಇವರದು ! ಎಂದು ಕೆಲ ಹೊತ್ತು ದಂಗು ಬಡಿದೇ ಕುಳಿತಿದ್ದೆವು.

ಈ ವ್ಯಕ್ತಿತ್ವದಲ್ಲಿ ಅವರ ವಿದ್ವತ್ತೆಯೆಲ್ಲವೂ ಅಡಗಿ ಹೋಗುವಂತೆ ಇರುತ್ತಿದ್ದಿತು. ಕರ್ನಾಟಕ ಕಾಲೇಜಿನ ಮೆಟ್ಟಲುಗಳನ್ನೆಲ್ಲ ಒಂದನೆಯ ತರಗತಿಯಲ್ಲಿಯೇ ಏರಿ ಬಿ. ಎ. ಆಗಿ, ಯುರೋಪಕ್ಕೆ ಹೋಗಿ ಗಣಿತ ಶಾಸ್ತ್ರದಲ್ಲಿ ರ‍್ಯಾಂಗ್ಲರ ಆಗಿ ಬಂದವರೆಂದು ನಂಬುವದಕ್ಕೆ ಆಗುವದಿಲ್ಲ, ಇವರ ಸರಳತೆಯನ್ನು ನೋಡಿದರೆ. ಪ್ರ್ಯಾಕ್ಟಿಸಿಂಗ ಸ್ಕೂಲಿನ ಮಕ್ಕಳೊಡನೆ ಸಲಿಗೆಯಿಂದ ಇವರು ಮಾತ ನಾಡುವದನ್ನು ಕಂಡರೆ ಇವರ ನಡತೆಗೆ ಸರಳತೆಯ ಹಾಗೂ ಪ್ರೇಮದ ಒಪ್ಪವಿಟ್ಟಂತೆ ತೋರುವುದು.

ಶ್ರೀ ಡಿ. ಸಿ. ಪಾವಟೆಯವರು ಅಚ್ಚ ಕನ್ನಡ ನಾಡಿನವರು. ಬೆಳಗಾಂವಿ ಜಿಲ್ಲೆಯ ಮಮದಾಪುರಿನವರು. ಗಣಿತ ಶಾಸ್ತ್ರವೆಂದರೆ ಅವರಿಗೆ ಅಂಗೈನೆಲ್ಲಿ. ಮಹಾ ಮೇಧಾವಿಗಳು. ಅಂತಯೇ ಕನ್ನಡಿಗರಿಗೆ ಎಂದೂ ದೊರೆಯದ ಡಾಯರೆಕ್ಟರ ಸ್ಥಳ ಇವರಿಗೆ ಸಿಕ್ಕಿದು. ಡಾಯರೆಕ್ಟರರಲ್ಲಿಯೂ ಮೊದಲನೆಯ ಕನ್ನಡಿಗರು; ಎರಡನೆಯ ಭಾರತೀಯರು !

ರ‍್ಯಾಂಗ್ಲರ ಆದಾಗಲೇ ನೆಟ್ಟಗೆ ಕನ್ನಡ ನಾಡಿಗೇನೇ ಬಂದ ಕನ್ನಡ ಕುಲಪುತ್ರರಿವರು. ಬೆಳಗಾಂವಿಯಲ್ಲಿ ಕಾಲೇಜು ಸ್ಥಾಪಿಸಿ, ಕರ್ನಾಟಕ ವಿಶ್ವವಿದ್ಯಾನಿಲಯದ ಸ್ಥಾಪನೆಯ ಕಾರ್ಯಕ್ಕೆ ಅಂದೇ ಕೈಯಿಕ್ಕಿದ ಸಾಹಸಿಗಳು. ಇಂಥ ಅಸಮ ಸಾಹಸಿಗಳು ಶಿಕ್ಷಣಾಧಿಕಾರಿಗಳಿರುವಾಗಲೇ ವಿಶ್ವವಿದ್ಯಾನಿಲಯವು ಕರ್ನಾಟಕದಲ್ಲಿ ರೂಪುಗೊಂಡುದು ಒಂದು ದೈವಿಕ ಸಂಕೇತವೆಂದೇ ಹೇಳಬೇಕು. ಅಂದಿನ ಅಂತಃಕರಣಕ್ಕೆ ಈ ಯೋಗಾ–ಯೋಗ ಒಂದು ದಿವ್ಯ ಸಾಕ್ಷಿಯಾಗಿದೆ.

ಅಂದು ಕನ್ನಡಿಗರಿಗೆ ಪಾವಟೆಯವರನ್ನು ನಾಡಿನಲ್ಲಿ ಇಟ್ಟುಕೊಳ್ಳಲಿಕ್ಕೆ ಆಗಲಿಲ್ಲ. ಇಂದು ಅವರೇ ಅಗ್ರ ಪೀಠವನ್ನಿಟ್ಟು ವಜ್ರ ಮಹೋತ್ಸವವನ್ನು ಜರುಗಿಸುತ್ತಿದ್ದಾರೆ. ಅಂದು ಹೊಟ್ಟೆಯ ಪಾಡಿಗಾಗಿ ಎಲ್ಲೆಲ್ಲಿಯೋ ಅಲೆದುದಾಯಿತು. ಕಾಶಿಯ ವಿದ್ಯಾಲಯವಾಯಿತು. ಗಣಿತ ಶಿಕ್ಷಣ ಕೊಟ್ಟದ್ದಾಯಿತು. 'ಕ್ಯಾಲಿಕ್ಯುಲಸ್' ಗ್ರಂಥ ಹೊರಬಿದ್ದಿತು. ಮುಂಬೈ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದರು. ಅಲ್ಲಿಂದ ಮಧ್ಯ ಭಾಗಕ್ಕೂ ಪಾರಿದರು. ಮತ್ತೊಮ್ಮೆ ಇಂಗ್ಲಂಡು ಕಂಡು ಬಂದರು. ಅಂದು ಡಾಯರೆಕ್ಟರರಾಗಿ ಕನ್ನಡಿಗರನ್ನು ಕಂಡರು. ಇಂದು ಉಪಕುಲಪತಿಯಾಗಿ ಕನ್ನಡವನ್ನು ಆಳುತ್ತಿದ್ದಾರೆ. ಕನ್ನಡ ಜನತೆಯೂ ಇದನ್ನರಿತುಕೊಂಡಿದೆ. ಅವರ ನೇತೃತ್ವದಲ್ಲಿ ನಾಡನ್ನು ಪುನರುಜ್ಜೀವಿಸಲು ಮುಂದಾಗಿದೆ.

ಕಳೆದೆರಡು ತಿಂಗಳಲ್ಲಿ ಧಾರವಾಡಕ್ಕೆ ಬಂದಾಗ ಸಹಜ ಫೋಟೊ ಮಹಾಬಳೇಶ್ವರಕ್ಕೆ ಹೋಗಿದ್ದೆ. ಬಹಳ ದಿನಗಳಾಗಿತ್ತು, ವಿಶ್ವವಿದ್ಯಾನಿಲಯದೆಡೆಗೆ ಹೋಗಿ. ಹಿಂದೆ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ಅಡಿಗಲ್ಲನ್ನಿಡುವಾಗೊಮ್ಮೆ. ಉಪರಾಷ್ಟ್ರಪತಿ ಡಾ. ರಾಧಾಕೃಷ್ಣನ್‌ರು ಪದವೀದಾನ ಸಮಾರಂಭಕ್ಕೆ ಬಂದಾಗ ಒಮ್ಮೆ. ಆಗ ಇನ್ನೂ ವಿಶ್ವವಿದ್ಯಾನಿಲಯದ ಭವ್ಯತೆಯ ಕಲ್ಪನೆಯು ಬರುವಂತಿರಲಿಲ್ಲ. ಮೊನ್ನೆ ಸ್ನೇಹಿತರನ್ನು ಕಾಣಲೆಂದು ಸಹಜ ಹೋದಾಗ ವಿಶ್ವವಿದ್ಯಾನಿಲಯದ ವಿವಿಧ ಕಟ್ಟಡಗಳನ್ನೆಲ್ಲ ನೋಡಿದೆ. ಮುಂದಿನ ಯೋಜನೆ, ಹರವುಗಳನ್ನು ಗೆಳೆಯರು ವಿವರಿಸಿದರು. ಹಾಗೆಯೇ ಶ್ರೀ ಪಾವಟೆಯವರ ಸಾಹಸದ ಪ್ರತೀಕ ಇದೆಲ್ಲ ಎಂದರು. ಪಾವಟೆಯವರಿಂದ ಆ ಕಾಡು ನಾಡಾಗಲಿದೆ, ನಗರವಾಗಲಿದೆ. ನಿಜವಾಗಿಯೂ ಪಾವಟೆಯವರು ಕರ್ಮಯೋಗಿಗಳು ಎಂದುಕೊಂಡೆ.

"ನಿಜವಾಗಿಯೂ ಸರ್ವೀಸಿನಲ್ಲಿದ್ದಾಗ ವ್ಯಕ್ತಿಯ ಪ್ರತಿಭೆಯು ವ್ಯಕ್ತವಾಗಲಾರದು. ಅಂದು ಶ್ರೀ ಪಾವಟೆಯವರ ಈ ಕರ್ತೃತ್ವ ಶಕ್ತಿಯನ್ನು ಊಹಿಸಲು ನಮಗೆ ಸಾಧ್ಯವಿತ್ತೆ ?" ಎಂದರು ಆ ಸ್ನೇಹಿತರು.

ಅಂದೇ ಮಧ್ಯಾಹ್ನದಲ್ಲಿ ನಗರಸಭೆಯ ಅಟ್ಟದಮೇಲೆ ಗಾಂಧೀ ಸ್ಮಾರಕ ನಿಧಿಯ ಗ್ರಂಥ ಪ್ರಕಾಶನ ಕಾರ್ಯವಿತ್ತು. ಅದೂ ಪಾವಟೆಯವರ ಅಮೃತ ಹಸ್ತದಿಂದಲೇ ನಡೆಯುವದಿತ್ತು. ಶ್ರೀ ರಂಗನಾಥ ದಿವಾಕರರು ಅಧ್ಯಕ್ಷರು. ಸಹಜ ಭಾಷಣಗಳನ್ನು ಕೇಳಲು ಒದಗುವದೆಂದೂ ಅಲ್ಲಿಗೂ ತೆರಳಿದೆವು. ಸ್ವಾಭಾವಿಕವಾಗಿಯೇ ಪಾವಟೆಯವರ ದರ್ಶನವಾಗುವುದಲ್ಲ ಎಂಬ ಒಳಗಿನ ಬಯಕೆಯು ಒಂದಿತ್ತು.

ತಕ್ಕ ಸಮಯಕ್ಕೆ ಸಮಾರಂಭಕ್ಕೆ ಪಾವಟೆಯವರು ಆಗಮಿಸಿದರು. ಅಂದಿನ ಸರಳ ಹಾಗು ಸಾದಾ ವೇಷ-ಭಾಷಣಗಳೇ ಇಂದು. ಅಂದು ಡಾಯರೆಕ್ಟರರು, ಇಂದು ಉಪಕುಲಪತಿಗಳು. ಆದರೇನು ಪಾವಟೆಯವರು ಅಂದು ಇದ್ದಂತೆಯೇ ಇಂದೂ ಸರಳ ಹಾಗೂ ಸಾದಾ. ಯಾವಾಗಲೂ ಅವರು ಹಸನ್ಮುಖಿಗಳು. ಅಂದು ಅವರ ಭಾಷಣವೂ ಕೂಡ ಅಷ್ಟೇ ಸರಳ ಹಾಗೂ ಸ್ಪಷ್ಟವಿತ್ತು. ಆದರಿಂದ ನಮ್ಮ ಮನಸ್ಸು ಇನ್ನೂ ಅವರೆಡೆಗೆ ಹೆಚ್ಚು ಆಕರ್ಷಿಸುವಂತಾಯಿತು. ಇಂದು ನಾಡಿನ ಮನಸ್ಸೇ ಅವರೆಡೆಗೆ ಆಕರ್ಷಿಸಿರುವಾಗ ವ್ಯಕ್ತಿಗಳ ಮನಸ್ಸು ಆಕರ್ಷಿಸುವುದರಲ್ಲಿ ಆಶ್ಚರ್ಯವೇನಿದೆ ?

ರ್‍ಯಾಂಗ್ಲರ್ ದಾದಾಸಾಹೇಬ ಪಾವಟೆಯವರ ಅಲ್ಪ ಪರಿಚಯ

ಲೇಖಕರು : **ಶ್ರೀ ತಟ್ಟಿ ಶಾಮರಾಯರು,** ಎಮ್. ಎ., ಎಸ್. ಟಿ. ಸಿ. ಧಾರವಾಡ

ಆಗಸ್ಟ ತಿಂಗಳ " ಭಾರತವಾಣಿ "ಯಲ್ಲಿ ಬಂದ ಲೇಖದ ಆಧಾರದಿಂದ.

"ಇಂಗ್ಲಿಷ್ ಭಾಷೆ ಇಲ್ಲದಿದ್ದರೆ ನಮ್ಮ ಪ್ರಗತಿಯೇ ಆಗುತ್ತಿದ್ದಿಲ್ಲ ಎಂಬ ಮಾತನ್ನು ನಾನು ಒಪ್ಪಲಾರೆನು. ಸ್ವತಂತ್ರ ರಾಷ್ಟ್ರದಲ್ಲಿ ಈ ವಿದೇಶಿ ಭಾಷೆಗೆ ದೊರೆತ ಮಹತ್ವವು ಸರಿಯಾದುದಲ್ಲ. ಅದೊಂದು ವಿಶೇಷ ಭಾಷೆಯೆಂದು ಇಂಗ್ಲಿಷಿನ ಅಭ್ಯಾಸವು ಬೇಕಾದಷ್ಟು ನಡೆಯಬಹುದು; ಆದರೆ ವಿದ್ಯಾಭ್ಯಾಸದ ಮಾಧ್ಯಮವು ಮಾತೃಭಾಷೆಯೇ ಆಗಬೇಕು. ಈ ವಿಷಯದಲ್ಲಿ ಸಂಕುಚಿತ ದೃಷ್ಟಿಯಿಂದ ಇಲ್ಲದ ಅವಸರ ಮಾಡಿ ಪ್ರಯೋಜನವಿಲ್ಲ; ಬದಲಾವಣೆಯು ನಿಧಾನವಾಗಿ ಆಗಬೇಕು. ಇಂಗ್ಲಿಷ್ ಭಾಷೆಯು ನಮ್ಮ ಸಂಸ್ಕೃತಿಯ ಅಂಗವಲ್ಲವೆಂದ ಮೇಲೆ ಅದನ್ನು ಭಾರತದಲ್ಲಿ ಈಗಿದ್ದ ಸ್ಥಾನದಲ್ಲಿ, ಈಗಿದ್ದ ಸ್ಥಿತಿಯಲ್ಲಿ ಇಡಬೇಕೆಂಬ ರಾಜಾಜಿಯವರ ಮತವು ನನಗೆ ಅಸಂಮತ. ಜೊತೆಗೆ ಹಿಂದಿಯನ್ನು ಮಾಧ್ಯಮವಾಗಿ ಮಾಡುವದರಿಂದ ಹಾನಿ ಏನಿದೆ? ಸಿವ್ಹಿಲ್ ಸರ್ವ್ಹಿಸ್ ಪರೀಕ್ಷೆಗಳಲ್ಲಿ ಪ್ರಾದೇಶಿಕ ಭಾಷೆಗಳೊಂದಿಗೆ ಹಿಂದಿಯೂ ಇರಬೇಕೆಂದು ನನ್ನ ಖಂಡಿತವಾದ ಅಭಿಪ್ರಾಯವಿದೆ."

ಈ ವಿಚಾರ, ೫೯ ವರ್ಷಗಳ ಸಫಲಜೀವನವನ್ನು ಸಾಗಿಸಿ ದಿ. ೨-೮-೧೯೫೪ ದಿನ ತಮ್ಮ ೬೦ನೆಯ ವರ್ಷದಲ್ಲಿ ಪಾದಾರ್ಪಣ ಮಾಡಿದ ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ರ್‍ಯಾಂಗ್ಲರ್ ಪಾವಟೆಯವರದು ಆಗಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಅನನ್ಯ ಸೇವೆಯನ್ನು ಸಲ್ಲಿಸಿದ ಇವರ ಷಷ್ಟ್ಯಬ್ದಿ ಸಮಾರಂಭವನ್ನು ವೈಭವದಿಂದ ಆಚರಿಸುವದಕ್ಕಾಗಿ ದ. ಭಾ. ಹಿಂದೀ ಪ್ರಚಾರ ಸಭೆಯ ಉಪಾಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕರ್ನಾಟಕದ ಶಿಕ್ಷಣ ತಜ್ಞರ ಹಾಗು ಪ್ರತಿಷ್ಠಿತ ಸಜ್ಜನರ ಒಂದು ಸಮಿತಿಯು ರಚಿಸಲ್ಪಟ್ಟಿದೆ.

ದಾದಾಸಾಹೇಬರ ಜನ್ಮವು ಬೆಳಗಾವಿ ಜಿಲ್ಲೆಯ ಮುಮದಾಪುರದಲ್ಲಿ ದಿ. ೨-೮-೧೮೯೪ರಲ್ಲಿ ಆಯಿತು. ಶೈಶವಾವಸ್ಥೆಯಲ್ಲಿಯೇ ಅವರು ಮಾತೃವಿಯೋಗದ ದುಃಖವನ್ನು ಅನುಭವಿಸಬೇಕಾಯಿತು. ತಂದೆಯವರ ವಾತ್ಸಲ್ಯದಲ್ಲಿಯೇ ಇವರ ಸಂರಕ್ಷಣೆಯಾಯಿತು. ಆ ಊರಲ್ಲಿದ್ದ ಶೈಕ್ಷಣಿಕ ದುಃಸ್ಥಿತಿಯ ಮೂಲಕ ಪಾವಟೆಯವರು ಕೊಲ್ಹಾಪುರದ ರಾಜಾರಾಮ ಹೈಸ್ಕೂಲಿನಲ್ಲಿ ಸೇರಿದರು. ಕೊಲ್ಹಾಪುರದಲ್ಲಿದ್ದ ಲಿಂಗಾಯತ ಶಿಕ್ಷಣ ಸಂಘವು ಇವರಿಗೆ ಛಾತ್ರವೃತ್ತಿಯನ್ನು ದಯಪಾಲಿಸಿದ್ದಲ್ಲದೆ ಇವರ ಊಟದ ವ್ಯವಸ್ಥೆಯನ್ನು ಮಾಡಿತು. ಅಲ್ಲಿಯ ಶಾಲೆಯ ಶಿಕ್ಷಣ ಮಾಧ್ಯಮವು ಮರಾಠಿ ಇದ್ದುದರಿಂದ ಕನ್ನಡ ತಾಯ್ನುಡಿಯನ್ನಾಡುವ ಪಾವಟೆಯವರಿಗೆ ಒಂದಿಷ್ಟು ಕಷ್ಟವನ್ನು ಸಹಿಸಬೇಕಾಯಿತು. ಶಾಲೆಯಲ್ಲಿ ಸ್ಕಾಲರ್‌ಶಿಪ್ ಸಿಗಬೇಕೆಂದು ಅವರು ಆಸೆ ಇಟ್ಟುಕೊಂಡಿದ್ದರು. ಅದು ಸಿಕ್ಕಲಿಲ್ಲ; ಆಗ ಶಾಲೆಯ ಪ್ರಧಾನಾಧ್ಯಾಪಕರು ನೀವು ಹಿಂದುಳಿದ ಜಾತಿಯವರೆಂದು ಕಾರಣ ತೋರಿಸಿ ಸರಕಾರದಿಂದ ಛಾತ್ರವೃತ್ತಿಯನ್ನು ಕೇಳಿಕೊಳ್ಳಿರಿ ಎಂದು ಪಾವಟೆಯವರಿಗೆ ಸಲಹೆ ಕೊಟ್ಟರು. ಆದರೆ ದಾದಾಸಾಹೇಬರಿಗೆ ಈ ಮಾತು ಮನಸಿಗೆ ಬರಲಿಲ್ಲ. ಅವರ ದೃಷ್ಟಿಯಲ್ಲಿ ಲಿಂಗಾಯತ ಜನರು ಎಷ್ಟೇ ಹಿಂದುಳಿದವರಾಗಿದ್ದರೂ ಪಾವಟೆಯವರ ಸಂಬಂಧಿಕರು ಹಿಂದುಳಿದಿದ್ದಿಲ್ಲ. ಎರಡನೇ ವರ್ಷ ಶಾಲೆಯ ಛಾತ್ರವೃತ್ತಿಯನ್ನು ಪಡೆದರು.

ಹಾಯಿಸ್ಕೂಲಿನಲ್ಲಿ ಇಂಗ್ಲಿಷ ಹಾಗು ಸಂಸ್ಕೃತ ಎರಡೂ ಸಾವಟೆಯವರ ಪ್ರೀತಿಯ ವಿಷಯಗಳಾಗಿದ್ದವು. ರಘುವಂಶ ಮೊದಲಾದ ಮಹಾಕಾವ್ಯಗಳನ್ನು ಅವರು ಕಂಠಸ್ಥ ಮಾಡಿಟ್ಟುಕೊಂಡ. ಕಾರಣ ಸಂಸ್ಕೃತ ವ್ಯಾಕರಣ ದಲ್ಲಿ ಅವರಿಗೆ ನೂರಕ್ಕೆ ನೂರು ಗುಣಗಳು ಬೀಳುತ್ತಿದ್ದವು. ೧೯೧೯ರಲ್ಲಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಧಾರವಾಡ ಕೇಂದ್ರಕ್ಕೆ ಮೊದಲನೆಯ ನಂಬರು ಅವರದಾಗಿತ್ತು. ಆ ಮೇಲೆ ಕರ್ನಾಟಕ ಕಾಲೇಜ ಸೇರಿದರು. ಅಲ್ಲಿ ಇಂಟರ ಮಿಡಿಯಟ್ ಪರೀಕ್ಷೆಯಲ್ಲಿ ಗಣಿತ ವಿಷಯದಲ್ಲಿ ವಿಶ್ವವಿದ್ಯಾ ಲಯಕ್ಕೆ ಮೊದಲನೇ ನಂಬರು ಬಂದರು. ೧೯೨೩ ರಲ್ಲಿ ಬಿ. ಎ. ಪರೀಕ್ಷೆಯಲ್ಲಿ ಶ್ರೀ ಸಾವಟೆಯವರು ಗಣಿತದಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾದರು.

ಆಗ ಅವರು ಕರ್ನಾಟಕ ಕಾಲೇಜಿನ ಆಗಿನ ಪ್ರಿನ್ಸಿಪಾಲರಾದ ರಾಲಿನ್‌ಸನ್ನರ ಪ್ರೇರಣೆಯಿಂದ ಅವರು ಕೇಂಬ್ರಿಜ್ಜಿಗೆ ಹೋಗಿ ಅಲ್ಲಿ 'ಮ್ಯಾಥಮಟಿಕಲ್ ಟ್ರೈಪಾಸ್' ಪದವಿಯನ್ನು ಸಂಪಾದಿಸಿದರು. ಅಲ್ಲಿಯ ಅಧ್ಯಯನದ ಖರ್ಚನ್ನು ಶಿರಸಂಗಿ ಟ್ರಸ್ಟಿನವರು ಕೊಟ್ಟರು. ೧೯೨೪ರಲ್ಲಿ ಕೇಂಬ್ರಿಜ್ಜದ ಸಿಡ್ನಿ ಸಸೆಕ್ಸ ಕಾಲೇಜಿನಲ್ಲಿ ಭರ್ತಿಯಾದರು. ಅಲ್ಲಿಯೂ ಪರೀಕ್ಷೆಯಲ್ಲಿಯ ಫಲಿತಾಂಶದ ಮೇಲೆ ಅವರಿಗೆ ಛಾತ್ರವೃತ್ತಿಯು ಸಿಕ್ಕುತ್ತಿತ್ತು. ೧೯೨೬ರಲ್ಲಿ ಮ್ಯಾಥಮಟಿಕಲ್ ಟ್ರೈಪಾಸ್‌ನಲ್ಲಿ ಉತ್ತೀರ್ಣರಾಗಿ ರ್‍ಯಾಂಗ್ಲರ್ ಪದವಿಯನ್ನು ಪಡೆದರು. ಅದರಿಂದ ದೊರೆತ ಸಂಶೋಧನ ವಿದ್ಯಾರ್ಥಿವೇತನದಿಂದ ಪ್ರೊ. ಎಸ್. ಪೊಬಾರ್ಡ್ ಎಂಬ ಪ್ರೊಫೆಸರರ ನೇತೃತ್ವದಲ್ಲಿ 'ಸೂಟೆಬಿಲಿಟಿ ಆಫ್ ಡೈವ್ಹರ್ಜೆಂಟ್ ಸೀರಿಜ್' * ಎಂಬ ವಿಷಯದಲ್ಲಿ ಸಂಶೋಧನೆ ಮಾಡಿದರು.

೧೯೨೮ರಲ್ಲಿ ಶ್ರೀ ಸಾವಟೆಯವರು ಭಾರತಕ್ಕೆ ತಿರುಗಿ ಬಂದರು. ಆಗ ಅವರು ಬನಾರಸ ವಿಶ್ವವಿದ್ಯಾಲಯದಲ್ಲಿ ಗಣಿತದ ಪ್ರಾಧ್ಯಾಪಕರಾದರು; ಅಲ್ಲಿಯ ಪಂಡಿತ ಮದನ ಮೋಹನ ಮಾಲವೀಯರಿಗೆ ಅತ್ಯಂತ ಪ್ರೀತಿ ಪಾತ್ರರಾಗಿದ್ದರು. ಎರಡು ವರುಷಗಳು ಕಳೆದ ಮೇಲೆ ಮುಂಬಯಿ ಸರಕಾರದ ಶಿಕ್ಷಣ ಖಾತೆಯಲ್ಲಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿ ಕೆಲಸ ಮಾಡಿದರು. ೧೯೩೪ರಲ್ಲಿ ಅವರಿಗೆ ಅಸಿಸ್ಟಂಟ್ ಡಾಯರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ಇವರ ಅಧಿಕಾರ ಕೊಡಲಾಯಿತು, ಮುಂಬಯಿಯ ಮುಖ್ಯಮಂತ್ರಿಗಳಾದ ಕೈ. ವಾ. ಬಾಲಗಂಗಾಧರ ಖೇರರ ಸೂಚನೆಯ ಪ್ರಕಾರ ಶ್ರೀ ಸಾವಟೆಯವರು ಪ್ರಾಥಮಿಕ ಶಿಕ್ಷಣವನ್ನು ಸುಧಾರಿಸುವ ರೀತಿಯ ಬಗೆಗೆ ಒಂದು ಯೋಜನೆಯನ್ನು ಮಾಡಿಕೊಟ್ಟರು. ಆ ಮೇಲೆ ಡಿ. ಪಿ. ಆಯ್. (ಡಾಯರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್‌ಶನ್) ಯವರ ಅಧಿಕಾರ ಪಡೆದು ಕಡ್ಡಾಯದ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು ಆಚರಣೆಯಲ್ಲಿ ತಂದರು. ಶಿಕ್ಷಕರ ಪರಿಸ್ಥಿತಿಯನ್ನು ಮೇಲ್ಮಟ್ಟಕ್ಕೆ ತಂದರು.

೧೯೫೪ರಲ್ಲಿ ಡಿ. ಪಿ. ಆಯ್. ಪದದಿಂದ ನಿವೃತ್ತರಾದ ಮೇಲೆ ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಆರಿಸಲ್ಪಟ್ಟರು. ಅಂದಿನಿಂದ ಆ ಸ್ಥಾನದಲ್ಲಿದ್ದು ತಮ್ಮ ಪ್ರಗಮನಶೀಲ ಕಾರ್ಯಗಳಿಂದ ಲೋಕಪ್ರಿಯರಾಗಿದ್ದಾರೆ.

ಪಾಂಡಿತ್ಯ, ನಿಸ್ಪೃಹ ಭಾವನೆ, ಧಿರೋದಾತ್ತತೆ, ಕರ್ತವ್ಯನಿಷ್ಠೆ, ಸಮರ್ಥಕಾರ್ಯನಿರ್ವಹಣ ಶಕ್ತಿ, ಉಚ್ಚ ವಿಚಾರಪರತೆ ಮುಂತಾದ ತಮ್ಮ ವಿಶಿಷ್ಟ ಗುಣಗಳಿಂದ ಶ್ರೀ ಸಾವಟೆಯವರು ಬರಿಯ ಕರ್ನಾಟಕದಲ್ಲಷ್ಟೇ ಅಲ್ಲ ಆದರೆ ಅಖಂಡ ಶೈಕ್ಷಣಿಕ ಪ್ರಪಂಚದಲ್ಲಿ ಸುಪ್ರಸಿದ್ಧರೂ ಲೋಕಪ್ರಿಯರೂ ಆಗಿದ್ದಾರೆ.

ಅವರ ಷಷ್ಟ್ಯಬ್ದಿ ಪೂರ್ತಿಯ ಸುಸಮಯದಲ್ಲಿ ಅವರಿಗೆ ನಮ್ಮ ಹಾರ್ದಿಕ ಶುಭೇಚ್ಛೆಗಳನ್ನು ಸಮರ್ಪಿಸುವದಲ್ಲದೆ ಅವರು ದೀರ್ಘಾಯುಷಿಗಳಾಗಿ ಭಾರತದ ಮತ್ತು ಕರ್ನಾಟಕದ ಪ್ರಗತಿಗೆ ಕಾರಣರಾಗುವಂತೆ ತಮ್ಮ ಜೀವನದಲ್ಲಿ ಶಕ್ತಿಯನ್ನು ಪಡೆಯಲಿ ಎಂದು ಕೋರುತ್ತೇವೆ.

---

* $೧+\frac{೧}{೨}+\frac{೧}{೪}+\frac{೧}{೮}+\frac{೧}{೧೬}+\dots$ ಮತ್ತು $೧+\frac{೧}{೨}+\frac{೧}{೩}+\frac{೧}{೪}+\dots$ ಇಂತಹ ಗಣಿತ ಶ್ರೇಣಿಗಳಲ್ಲಿ ಎರಡು ಭಿನ್ನ ಭಿನ್ನ ಗುಣಗಳಿರುವವು. ಮೊದಲನೆಯ ಉದಾಹರಣೆಯಲ್ಲಿ ಹೆಚ್ಚೆಚ್ಚು ಪದಗಳನ್ನು ಕೂಡಿಸುತ್ತ ಹೋದ ಹಾಗೆ ಬೇರಿಜು ಒಂದು ಮಿತಿಯ ಒಳಗೆ ಬರತೊಡಗುವದು. (ಉದಾ : ಇದರಲ್ಲಿ ಎಷ್ಟು ಪದಗಳನ್ನು ತಕ್ಕೊಂಡು ಕೂಡಿಸಿದರೂ ೨ ಕ್ಕಿಂತ ಹೆಚ್ಚು ಉತ್ತರ ಬರುವದಿಲ್ಲ.) ಎರಡನೆಯ ಉದಾಹರಣೆಯಲ್ಲಿ ಮುಂದೆ ಮುಂದೆ ಹೋದಂತೆ ಬೇರೀಜು ಹೆಚ್ಚುತ್ತ ಅನಂತಾನಂತ ಮೌಲ್ಯವು ಎಂದು ಉತ್ತರ ಹೇಳಬೇಕಾಗುವದು. ಮೊದಲನೆಯ ಶ್ರೇಣಿಗೆ ಕಾನ್‌ವ್ಹರ್ಜಂಟ್ ಶ್ರೇಣಿ ಎಂದೂ ಎರಡನೆಯದಂತಹ ಶ್ರೇಣಿಗಳಿಗೆ ಡೈವ್ಹರ್ಜೆಂಟ್ ಶ್ರೇಣಿಗಳೆಂದು ಹೆಸರು.

'ಲೇಖಕನ-ಅಭಿನಂದನೆ'

ಲೇಖಕರು : ಶ್ರೀ ದ. ರಾ. ಬೇಂದ್ರೆ

ಶ್ರೀಮಾನ್ ಡಿ. ಸಿ. ಪಾವಟೆಯವರು ಅರುವತ್ತರ ಹೊಸ್ತಿಲ ದಾಟುವಾಗ ಇನ್ನೂ ತಮ್ಮ ಕರ್ತೃತ್ವದ ಪ್ರಾಯದಲ್ಲಿದ್ದಾರೆ. ರಾಷ್ಟ್ರಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಅವರ ಷಷ್ಟ್ಯಬ್ದಿ ಸಮಾರಂಭ ಜರುಗುತ್ತಿರುವದು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಶುಭವನ್ನೇ ಸೂಚಿಸುತ್ತಿದೆ. ಮೊನ್ನೆ ಮೊನ್ನೆ, ಶ್ರೀ ಚಿಂತಾಮಣಿ ದೇಶಮುಖರವರು ವಿಶ್ವ ವಿದ್ಯಾಲಯದವರು ವಿಶ್ವವಿದ್ಯಾಲಯದ ಹೊಸ ಕಟ್ಟಡದ ಉದ್ಘಾಟನೆಗೆ ಬಂದು ಧಾರವಾಡದ ಋತುಮಾನವನ್ನು ಮೆಚ್ಚುವದಲ್ಲದೆ, ಉಪಕುಲಪತಿಗಳ ಕಾರ್ಯಕ್ಷೇತ್ರದ ವಿಸ್ತಾರವನ್ನೂ ಕಂಡುಕೊಂಡುಹೋದರು. ಆ ಸಂದರ್ಭ ಬೆಂಬತ್ತಿಯೆ ಈ ಸುಯೋಗ ಬರುತ್ತಿದೆ. ಇದು ಕನ್ನಡ ಪೌರುಷದ ಮನ್ನಣೆ ಎಂದೂ ತಿಳಿಯಬಹುದು. ಗೋಕರ್ಣದ ಹಾದಿಯಲ್ಲಿರುವ ರಾಷ್ಟ್ರಾಧ್ಯಕ್ಷರಿಗೆ ಛೋಟಾ ಮಹಾಬಳೇಶ್ವರ ಗುಡ್ಡದ ಈ ಸ್ವಾಗತವೂ ಇಲ್ಲಿಯ ಜನತೆಯ ಸಾಂಸ್ಕೃತಿಕ ಪ್ರದರ್ಶನವಾಗಿ ತೋರುವದು ಯೋಗ್ಯವಾಗಿದೆ.

ಜಾತ್ಯಾ ಚುರುಕುಬುದ್ಧಿಯ ವಿದ್ಯಾರ್ಥಿಗಳಾದ ಪಾವಟೆಯವರು ಗಣಿತ ವಿದ್ಯೆಯಲ್ಲಿ ಪ್ರವೀಣರೆಂದೆನಿಸಿಕೊಂಡು, ರ್‍ಯಾಂಗ್ಲರ ಪದವಿಯನ್ನು ಸಲೀಲವಾಗಿ ಪಡೆದು, ಭಾರತೀಯ ಕ್ಷೇತ್ರದಲ್ಲಿ ಶಿಕ್ಷಕರಾಗಿ, ಶಿಕ್ಷಣ ಪ್ರಸಾರದ ವಿಷಯವಾಗಿ ಆದರ್ಶಭಾವವನ್ನು ತಾಳಿದವರಾದರು. ಅವರ ದೈವವು ಅವರನ್ನು ಮುಂಬಯಿ ಇಲಾಖೆಯ ಶಿಕ್ಷಣ ಖಾತೆಯಲ್ಲಿ ತಂದಿತು. ಪಾವಟೆಯವರಿಗೆ ಮಹಾರಾಷ್ಟ್ರ–ಕರ್ನಾಟಕಗಳು ಹುಟ್ಟಾ ಸಮತೂಕದವು. ನಾಲ್ಕೂನಿಟ್ಟಿಗೆ ನೋಡಿ ಸಮತೋಲ ಕಾಯುವ ಚಾತುರ್ಯವನ್ನು ಅವರು ಶಿಕ್ಷಣಾಧಿಕಾರಿಗಳಾಗಿ ಮೈಗೂಡಿಸಿಕೊಂಡಿದ್ದಾರೆ. ಅವರು ಡಿ. ಪಿ. ಆಯ್. ಅಧಿಕಾರ ಪದವಿಯಲ್ಲಿದ್ದಾಗ ಸೊಲ್ಲಾಪುರ ಅಕ್ಕಲಕೋಟೆಗಳಲ್ಲಿ ಅನ್ಯಾಯವಾಗಿ ತಗ್ಗಿಹೋಗಿದ್ದ ಕನ್ನಡದ ಉದ್ಧಾರ ಮಾಡುವ ಸ್ಫೂರ್ತಿಯನ್ನು ಅತ್ತಕಡೆಯ ಸಾಮಾಜಿಕ ಕಾರ್ಯಕರ್ತರಿಗೆ ನೀಡಿದರು. ಚಿತ್ತದ ಬೀಜವು ತೆನೆ ಹಿಡಿಯದಿದ್ದರೂ ಅದರ ದಂಟು ಬೆಂಡೊಡೆಯದೆ ಗಂಟು– ಕಟ್ಟಿಕೊಳ್ಳುತ್ತಿದೆ. ಕನ್ನಡ ಪ್ರಾಂತ್ಯದ ನಿರ್ಮಾಣ ಸಮಯದಲ್ಲಿಯೇ ಅವರು ಅಧಿಕಾರ ನಿವೃತ್ತರಾಗಿ, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಆಧಾರಸ್ತಂಭರಾಗಿ ಬಂದುದು ಉಚ್ಚಾಶ್ರಯಕರವಾಗಿ ಪರಿಣಮಿಸಿದೆ.

ಧಾರವಾಡ–ಹುಬ್ಬಳ್ಳಿಯ ಶಿವ–ಶಕ್ತಿ ವಿಜೃಂಭಣೆಗೆ ವಿದ್ಯಾಕ್ಷೇತ್ರವು ವಿಪುಲ ವಿಸ್ತಾರವನ್ನು ಒದಗಿಸಿಕೊಟ್ಟಿದೆ. ಇನ್ನು ಮುಂದಿನ ಚತುರಂಗ ಸಂಸ್ಕೃತಿಯ ಕಟ್ಟಡದ ಶಿಲ್ಪಕಾರರಾಗಿ ಶ್ರೀ ರ್‍ಯಾಂಗ್ಲರ ಪಾವಟೆಯವರಂಥವರು ಉಪಕುಲಪತಿಗಳಾಗಿ ನವೀನ ವಿದ್ಯೆಗೆ ತಳಹದಿ ಹಾಕುತ್ತಿರುವದು ಮುಂದಿನ ಭದ್ರತೆಯ ಲಕ್ಷಣವಾಗಿದೆ. ಮಾಡಿದರೆ ಸಾವಿರ ಕೈಗಳೂ ಸಾಲದ ಕಾರ್ಯಭಾರವನ್ನು ಸಂದರ್ಭ ಬಂದರೆ ಏಕಾಂಗಿಯಾಗಿ ನಿರ್ವಹಿಸುವ ಸರ್ವಾಧಿಕಾರಿ ಸಂಪನ್ನತೆಯಿಂದೊಡಗೂಡಿದ ಇವರ ಚತುರಸ್ರ ಧೋರಣೆಯು ಕೇಂದ್ರ ಸರಕಾರದಲ್ಲಿ, ನಮ್ಮ ಸಂಸ್ಥಾನದ ಶಿಕ್ಷಣ ಕ್ಷೇತ್ರದಲ್ಲಿ, ಎರಡು ವಿಶ್ವವಿದ್ಯಾಲಯಗಳ ಸಮರಸೀಕರಣದಲ್ಲಿ, ಸ್ವತಂತ್ರವಾದ ಗೌರವ ಕಾಯ್ದುಕೊಳ್ಳುವಲ್ಲಿ ಜಯಿಷ್ಣುವಾಗುವದೆಂದು ಆಶಿಸಲು ಅವಕಾಶವಿದೆ. ಹಿಂದಿನ ಉಪಕುಲಪತಿಗಳು ಹಾಕಿದ ವಿನ್ಯಾಸದಲ್ಲಿಯೆ ಮುಂಬರಿದು ತಲೆಯೆತ್ತಿನಿಂತ ವಿವಿಧ ವಿದ್ಯಾಮಂದಿರಗಳು ಪಾವಟೆಯವರ ಕಾರ್ಯಕೌಶಲ್ಯಕ್ಕೆ ಗೋಪುರಪ್ರಾಯವಾಗಿ ಮೆರೆಯುತ್ತಿರುವದು ಅವರ ವಿದ್ಯಾಂಗರೀತಿ–ನೀತಿಗೆ ಸಾಕ್ಷಿಯಾಗಿವೆ.

ಇಂಥ ಸಮರ್ಥ ವ್ಯಕ್ತಿಗಳಿಗೆ ವಿಶ್ವವಿದ್ಯಾಲಯದಂಥ ವಿಸ್ತಾರಕ್ಷೇತ್ರವೂ ಕಿರಿದೇ ಸರಿ. ಭಾರತ ದೇಶದ ಬಹುಮುಖವಾದ ಮುನ್ನಡೆಯಲ್ಲಿ ಧುರಂಧರರಾಗಿ ಶ್ರೀ ಪಾವಟೆಯವರು ದಿಗ್ವಿಜಯಿಗಳಾದರೆ ಆಶ್ಚರ್ಯವಲ್ಲ. ಅವರ ಅಭಿಮಾನ ದೈವತವು ಇತೋಪ್ಯತಿಶಯವಾದ ಕ್ಷೇತ್ರಗಳಲ್ಲಿ ಅವರು ಯಶಸ್ಸು ಪಡೆಯುವಂತೆ ಬೆಂಬಲವೀಯಲೆಂದು ಸಂಸ್ಕೃತಿ ಪ್ರೇಮಿಯಾದ ನನ್ನಂಥ ಲೇಖಕನು ಕೋರುವದು ಸಮುಚಿತವಾಗಿದೆ.

ರ್‍ಯಾಂಗ್ಲರ್ ಡಿ. ಸಿ. ಪಾವಟೆಯವರ ಗೆಲುವಿಗೆ ಯಾವ ಗುಟ್ಟು

ಲೇಖಕರು : ಶ್ರೀ ಶಿಂಪಿ ಲಿಂಗಣ್ಣ, ಚಡಚಣ

ದಾದಾ ಚಿಂತಾಮಣಿ ಪಾವಟೆ—ಎಂಬ ಹೆಸರು ಕೇಳಿದ ಕೂಡಲೇ ಅವರು ಕನ್ನಡಿಗರೆಂಬ ಕಲ್ಪನೆ ಬರುವುದು ದುಸ್ತರ. ಆದರೆ ಅವರು ಕನ್ನಡಿಗರಷ್ಟೇ ಅಲ್ಲ, ತಿರುಳು ಗನ್ನಡಿಗರೂ ಆಗಿದ್ದಾರೆಂದು ತಿಳಿದಾಗ ಬಹು ಆಶ್ಚರ್ಯವಾಗುವಂತಿದೆ. ಅವರನ್ನು ಮಾತಾಡಿಸಿ ನೋಡಿದರೂ ಮರಾಠಿಯ ಯಮುನಾನದಿ ಬೆರೆತ ಗಂಗಾನದಿಯಂತೆ ಅವರ ಕನ್ನಡವು ಕಂಡು ಬರುತ್ತದೆ. ಕನ್ನಡಿಗರಾಗಿದ್ದರೂ ಮಹಾರಾಷ್ಟ್ರದವರಂತೆ ಮಾತಾಡಬಲ್ಲರು. ಪುಣೆಯಲ್ಲಿಯೇ ಅರ್ಧ ಆಯುಷ್ಯ ಕಳೆದರೂ ಮರಾಠಿಯ ಕೆಚ್ಚಿಗೆ ಅವರ ಕನ್ನಡ ಕೊರಗಿಲ್ಲ, ಸೊರಗಿಲ್ಲ, ಇಂಗ್ಲಂಡಿನಲ್ಲಿ ಕಲಿತು ಬಂದರೂ ಭಾರತದ ಕೆಚ್ಚು ಕಳಕೊಂಡಿಲ್ಲ, ಗಣಿತ ಶಾಸ್ತ್ರದಲ್ಲಿ ತಜ್ಞತೆ ಸಂಪಾದಿಸಿದರೂ ಶಿಕ್ಷಣ ರಂಗದಲ್ಲಿ ತಮ್ಮ ಪ್ರಾಜ್ಞತೆಯನ್ನು ಮೆರೆಯಿಸಿದ್ದಾರೆ. ಗೋಕಾಕದಲ್ಲಿ ಮೊಳೆತು, ಪುಣೆಯಲ್ಲಿ ಮರವಾಗಿ, ಇಂಗ್ಲಂಡದ ಗಾಳಿ ಬೆಳಕುಗಳನ್ನುಂಡು, ಭಾರತದ ಮುಗಿಲೆಲ್ಲೆಲ್ಲ ಹರಡಿ ಕನ್ನಾಡಿನ ಸಫಲ ಪೈರಾಗಿ ನಿಂತಿದ್ದಾರೆ. ಅವರು ಶೈಕ್ಷಣಿಕ ಸೂಪಶಾಲೆಯಲ್ಲಿ ಸಿದ್ಧಪಡಿಸಿದ ಅವೆಷ್ಟೋ ಮಧುರ ಪಾಕಗಳಿಂದ ಭಾರತೀಯರೆಲ್ಲರೂ ತೃಪ್ತಿಪಡುವಂತಾಗಿದೆ, ಪಡುವಣದ ನಡುಮನೆಗೂ ಅವರ ಸ್ವಯಂಪಾಕದ ಕಂಪು ಸುಳಿದು ಬಾಯಿಗೆ ನೀರೊಡೆಸುತ್ತಿದೆ.

ಅವರು ತಮ್ಮ ಹಣೆಬರಹವನ್ನು ಗಂಧ-ವಿಭೂತಿಗಳಿಂದ ಬರಕೊಂಡಿಲ್ಲ. ಅವರ ಹಣೆಯ ಮೇಲೆ ಯಾವ ಚಿಹ್ನವನ್ನು ಕಾಣಲಾರೆವು. ಆದರೂ ಅವರು ತಮ್ಮ ಬಣ್ಣ ಕಳಕೊಂಡಿಲ್ಲ. ಸರಲವಾದ ಉಡುಪು-ತೊಡುಪುಗಳಿಂದ ಅವರು ತಮ್ಮ ಮೈಮುರಿಸಿಕೊಂಡರೇ ಹೊರತು ಮೈಮೇಲೆ ಧರಿಸಿದ ಜಾತಿ ಚಿಹ್ನವನ್ನು ಬಯಲಿಡಲಿಲ್ಲ, ಅವರು ಇಂಗ್ಲಂಡಿನಲ್ಲಿದ್ದರೂ, ಪುಣೆಯಲ್ಲಿದ್ದರೂ ಕನ್ನಡ–ಗೋಕಾವಿಯನ್ನು ಮರೆಯಲಿಲ್ಲ. ಜಾತಿಯನ್ನು ಸಾಯಗೊಡದೆ ಜಾತ್ಯತೀತತೆಯನ್ನು ಕಾಯ್ದುಕೊಳ್ಳುವ ಕಲೆಯು ಇವರಿಗೆ ಸಾಧಿಸಿದಷ್ಟು ಇನ್ನಾರಿಗೂ ಸಾಧಿಸಿಲ್ಲವೆನ್ನಬೇಕು. ಅದೇ ಅವರಿಗೆ ಸ್ವಭಾವವಾಗಿದೆ; ಧರ್ಮವಾಗಿದೆ.

ಉಪಜೀವನದ ದಾರಿಯಲ್ಲಿಯೇ ಜೀವನ ಮುಟ್ಟುಗಟ್ಟೆಯನ್ನು ಸಂಧಿಸಿದವರು ವಿರಳ. ಅಂ ವಿರಳವಾಗಿರುವವರಲ್ಲಿ ಇವರೊಬ್ಬರು, ಉಪಜೀವನ ದಾರಿಯನ್ನೇ ಸೇವಾ ಸಾಧನೆಯನ್ನಾಗಿ ಮಾರ್ಪಡಿ ಕೊಂಡವರು, ಸೇವಾ ಸಾಧನೆಯ ದಾರಿಯನ್ನೆ ಹಿಡಿದ ಆದೆಂಥ ಭವ್ಯಸಾಧನೆಯಾಗುವದಿಲ್ಲ? ಮೇಘರಾಜನಂ ಅವರ ಕೃಪಾದೃಷ್ಟಿ. ಇಡಿಯ ನೆಲವೇ ಕಾರ್ಯಕ್ಷೇತ್ರ ಗಿದ್ದರೂ ಮಳೆಯು ಸಮುದ್ರದ ಮೇಲೆ, ಪರ್ವತದ ಮೇ ಸುರಿಯುವುದೇ ಹೆಚ್ಚು. ಹಾಗೆ ಸುರಿದ ನೀರಿನ ಬಹ ಭಾಗವು ವ್ಯರ್ಥವಾಗಿ ಚೆಲ್ಲಾಡಿ—ತುಳುಕಾಡಿ ಹೋಗ ಹುದು. ಸಮುದ್ರದ ನೀರಲ್ಲಿ ಬೆರೆತು ಉಪ್ಪುನೀರಾ ನಿಲ್ಲಬಹುದು. ಆದರೆ ಪರ್ವತಗಳಿಂದ ನದಿಗಳು ಉಗಮ ಹೊಂದಿ ಬಯಲುನಾಡಿನ ಬವಣೆಯನ್ನು ಪರಿಹರಿಸಲು ಹಾತೊರೆಯುವುದು ಸುಳ್ಳಲ್ಲ. ಆಕರ್ಷಣೆಯಿರುವ ಮೇಘಗಳು ಸುವೃಷ್ಟಿಯನ್ನು ಸುರಿಸುವ ಸಹಜ ಧರ್ಮಕ್ಕೆ ಧರ್ಮವೇ ಅನ್ನಬೇಕಲ್ಲವೇ ?

ಭಾರತದ ಮಟ್ಟಕೇರಿದ್ದರೂ ಅವರಿಂದ ಕನ್ನಡಿಗ ದಷ್ಟು ಕಲ್ಯಾಣವು ಭಾರತಕ್ಕಾಗಿರಲಾರದು, ಒಂದ ರೀತಿಯಿಂದ ಭಾರತಾಂಗವಾದ ಕನ್ನಡಿಗಾದ ಕಲ್ಯಾಣವ ಭಾರತ ಕಲ್ಯಾಣವೆಂದೇ ಭಾವಿಸುವುದು ತೀರ ಒಳ್ಳೆಯದು ಅವರಿಂದ ಉತ್ತರ ಕರ್ನಾಟಕಕ್ಕೆ ಘಟಿಸಿದಷ್ಟು ದಟ್ಟವಾ ಉಪಕಾರವು ಉಳಿದ ಕರ್ನಾಟಕಕ್ಕೆ ಅಷ್ಟೊಂದ ದಟ್ಟವಾಗಿ ಘಟಿಸಿರಲಿಕ್ಕಿಲ್ಲ. ಉತ್ತರಕರ್ನಾಟಕದಲ್ಲಿಯ ಗೋಕಾಕ ಭಾಗದವರಿಗೆ ಅವರ ಪರಿಶ್ರಮವು ಇನ್ನೂ ಹೆಚ್ಚಾಗಿ ಒದಗಿರಬಹುದು. ಹಾಗೆ ಆಗುವದು ವಾಸ್ತ ಕವೂ ಕ್ರಮಪ್ರಾಪ್ತವೂ ಆಗಿದೆ. ಆದರೂ ಅವ ಕರ್ನಾಟಕಕ್ಕೆ ಅರ್ಥಾತ್ ಭಾರತಕ್ಕೆ ಒದಗಿದಂತೆಯೆ ಸರಿ. ಮಹಾಮರದ ಕೆಳಗೆ ಅಸಂಖ್ಯವಾದ ಅಗಿಗ ಹುಟ್ಟಿಕೊಂಡರೂ ಬೆಳೆದು ಸಾರ್ಥಕಗೊಳ್ಳುವ ಪುಣ್ಯ ಕೆಲವು ಅಗಿಗಳಿಗೆ ಮಾತ್ರ ಕಟ್ಟಿಟ್ಟಿರುತ್ತದೆ.

ಸೇವೆಯೊಂದು ಪ್ರವೃತ್ತಿ ಸಾದನೆಯಾದಂತೆ ನಿವೃತ್ತಿಯೂ ಒಂದು ನೈಜಸಿದ್ಧಿಯಾಗಿರುತ್ತದೆ. ಶಿಕ್ಷ

ಶಾಲೆಯಲ್ಲಿ ಡೈರೆಕ್ಟರ ವೃತ್ತಿಯೂ ಅವರಿಗೆ ಪ್ರವೃತ್ತಿ ಸಾಧನದಲ್ಲಿ ನಡೆಯಿಸಿದರೆ, ನಿವೃತ್ತಿಯು ಅವರ ಸಿದ್ಧಿಯನ್ನು ಕೈಗೂಡಿಸಿಕೊಟ್ಟಿತು. ಪಾವಟೆಯವರ ಸಿದ್ಧಿಯೆಂದರೆ ಕನ್ನಾಡಿನ ಸಿದ್ಧಿಯೇ. ಕರ್ನಾಟಕ ವಿಶ್ವವಿದ್ಯಾಲಯವು ತತ್ತಿಯೊಡದು ಹೊರಬಂದದ್ದು ಅವರ ಕಾವಿನಿಂದಲೇ, ಕನ್ನಾಡ ಬೆಳುವಲದ ಕಾಳುತಂದು ಮರಿಗೆ ಗುಟುಕುಕೊಟ್ಟದ್ದು ಪಾವಟೆಯೆಂಬ ತಾಯಿ ಹಕ್ಕಿಯೇ. ಮರಿಹಕ್ಕಿಗೆ ಥೋಟಾಮಹಾಬಳೇಶ್ವರದ ರಮ್ಯಕಾನನದಲ್ಲಿ ರಮಣೀಯ ಗೂಡು ಕಟ್ಟುವುದಕ್ಕೆ ಕನ್ನಡಿಗರ ಪುಣ್ಯವೇ ಖರ್ಚಾಗಿದ್ದರೂ ಕರ್ಮಕುಶಲದ ಕೈ ಪಾವಟೇಯವರದೇ.

ಕವಿಯ ಮರಣದಿಂದ ಅವನ ಜೀವನವು ಆರಂಭಗೊಳ್ಳುವದಂತೆ. ಪಾವಟೆಯವರ ನಿವೃತ್ತಿಯಿಂದ ಅವರಿಗೆ ಪುನರ್ಜನ್ಮವಾಯಿತೆನ್ನಬೇಕು, ಜೀವಿತದಲ್ಲಿಯೇ ಪುನರ್ಜನ್ಮಪಡೆದು, ಏಳೇಳು ಜನ್ಮದಲ್ಲಿಯೂ ಸಾಧಿಸಲಿಕ್ಕಾಗದ ಸಿದ್ಧಿಯನ್ನು ಅವರ ಕರ್ಮಯೋಗವು ಸಂಯೋಜಿಸಿತು, ನಿವೃತ್ತಿಗೂ ಆಚೆಗಿರುವ ಅರವತ್ತರ ಅರುವು-ಮರವು ಅವರ ಪಾಲಿಗೆ, ಕನ್ನಡಿಗರ ಪಾಲಿಗೆ ಅರುಹಿನ ಮರವಾಗಿ ಕೋಟಿ ಬೀಜಗಳನ್ನು ಕನ್ನಡಮ್ಮನ ಕಣಜದಲ್ಲಿ ಬಹುಕಾಲ ಸ್ಥಿರಗೊಳ್ಳುವಂತೆ ನಿಯೋಜಿಸುತ್ತಿದ್ದಾರೆ. ಅವರ ಪ್ರಾಣಶಕ್ತಿಯು ಮಾಗಿ, ದೇಹಶಕ್ತಿಯು ತೂಗಿ. ಬುದ್ಧಿಶಕ್ತಿಯು ಬೆಳಗಿ ಧರ್ಮಾರ್ಥಕಾಮಗಳ ಪುರುಷಾರ್ಥಗಳನ್ನು ಗಳಿಸಿ ಅವರ ಹೆಸರಿಗೆ ಸುವರ್ಣ ಲೇಪವನ್ನು ಬಳಿಯಿತು.

ಲಂಕೆಯಲ್ಲಿ ಹುಟ್ಟಿದವರೆಲ್ಲ ರಾವಣರೇ ಆಗಲಾರರು. ಅವರ ಆ ಎತ್ತರ, ಅವರ ಆ ದೃಷ್ಟಿ, ಅವರದೇ ಆದ ಆ ಶೂಕ, ಅವರದೇ ಆದ ಆ ಕುಶಲ ಹಸ್ತ ಇನ್ನಾರಿಗೂ ಬರಲಾರವು. ಅವರೊಬ್ಬ ನಿಪುಣ ಅಕ್ಕಸಾಲೆಯಿದ್ದ ಹಾಗೆ. ಮುರುವು ಚುಚ್ಚುವುದಕ್ಕೆ ಅವರದೇ ಹಗುರು ಕೈ, ಕಳೆ ನೋಡಿ ಕೇರುಹಾಕುವ ಚಳಕ ಅವರ ಕೈಗಿದೆ. ಅಂತೆಯೇ ಬಹುಮುಖದ ಕನ್ನಡಿಗರಲ್ಲಿಯೂ ಶಿಕ್ಷಣ ರಂಗದ ಮಟ್ಟಿಗಾದರೂ ಏಕಮುಖತೆಯನ್ನು ತಂದಿರಿಸಿದ ಉದಾಹರಣೆಯು ಇನ್ನುಳಿದ ರಂಗಗಳಲ್ಲಿ ಅಭಿನಯಿಸುತ್ತಿರುವವರಿಗೆ ಮಾರ್ಗದರ್ಶಕವಾಗಿದೆ. ಮಾರ್ಗವಿರುವಲ್ಲಿ ಮಾರ್ಗದರ್ಶನ ಸಿಕ್ಕೀತು.

ಪಾವಟೆಯವರನ್ನು ಕುರಿತು ಇಷ್ಟೊಂದು ಯೋಚಿಸಿದರೂ ಎಷ್ಟೂ ಯೋಚಿಸದಂತೆ ಅವರ ಗೆಲವಿಗೆ ಯಾವ ಗುಟ್ಟು-ಎನ್ನುವ ಪ್ರಶ್ನೆಯು ಗುಟ್ಟಿನಲ್ಲಿಯೇ ಉಳಿಯುವದು.

ಆದರ್ಶ ಆಡಳಿತಗಾರರಾದ ರ್ಯಾಂಗ್ಲರ ಡಿ.ಸಿ. ಪಾವಟೆಯವರು

ಶ್ರೀ ಕೆ. ಎಸ್. ಪಾಟೀಲ, ನಿವೃತ್ತ ಮುಖ್ಯಾಧ್ಯಾಪಕ ಪ್ರ್ಯಾ. ಸ್ಕೂ. ಗಂ. ಟ್ರೇ. ಕಾ. ಧಾರವಾಡ

ಮಾನ್ಯರಾದ ರ್ಯಾಂಗ್ಲರ ಡಾ. ಚಿಂ. ಪಾವಟೆ ಸಾಹೇಬರ ವ್ಯಕ್ತಿತ್ವವು ಸಹಸ್ರ ದಳದ ಕಮಲವಿದ್ದಂತೆ. ಅದರ ಸೌರಭವು ಸಾವಿರ ಮುಖವಾಗಿ ಹರಿದು ಭರತಖಂಡವನ್ನೆಲ್ಲ ವ್ಯಾಪಿಸಿದೆ. ಭಾರತವಷ್ಟೇ ಏಕೆ, ಸಮುದ್ರದಾಚೆಯ ದೇಶಗಳಲ್ಲಿಯೂ ಅವರ ಕೀರ್ತಿ ಪಸರಿಸದೆ ಇಲ್ಲ. ಕೆಂಬ್ರಿಜ್ ವಿಶ್ವವಿದ್ಯಾಲಯದ ಸ್ಟಾರ 'ರ್ಯಾಂಗ್ಲರ' ಪದವಿಯನ್ನು ಪಡೆದಂದು, ವಿಶ್ವದ ಶಿಕ್ಷಣ ಪರಿಷತ್ತಿಗೆ ಭಾರತದ ಪ್ರತಿನಿಧಿ ಮಂಡಲದ ಅಧಿನಾಯಕರಾಗಿ ಜಿನೀವಾಕ್ಕೆ ಹೋದಂದು, ಶಿಕ್ಷಣ ತಜ್ಞರಾಗಿ ಅಮೇರಿಕಾ ಖಂಡವನ್ನು ಸಂದರ್ಶಿಸಿದಂದು ಪಾವಟೆ ಸಾಹೇಬರು ತಮ್ಮ ಅಚ್ಚಳಿಯದ ಪ್ರಭಾವ ಮುದ್ರೆಯನ್ನು ಹೊರನಾಡಿನವರ ಮೇಲೆ ಬೀರದೆ ಇಲ್ಲ. ಅಂತೆಯೇ ಅವರ ಷಷ್ಟ್ಯಬ್ದಿಪೂರ್ತಿ ಸಮಾರಂಭವನ್ನು ನಾಡಿನ ಜನರು ಸಂಭ್ರಮದಿಂದ ನೆರವೇರಿಸುತ್ತಿರುವರು. ಈ ಉತ್ಸವವು ಇಂದು ಕೇವಲ ಕನ್ನಡ ನಾಡಿಗೆ ಮಾತ್ರ ಪರಿಮಿತವಾಗಿರದೆ ಅಖಿಲ ಭಾರತ ಮಟ್ಟದಲ್ಲಿ ಅದು ನೆರವೇರುತ್ತಲಿದೆ. ಭಾರತದ ರಾಷ್ಟ್ರಾಧ್ಯಕ್ಷರ ಘನವಾದ ಅಧ್ಯಕ್ಷತೆಯಲ್ಲಿ ನಾಡ ಹಾಗು ಭಾರತದ ಪ್ರಮುಖ ವ್ಯಕ್ತಿಗಳ ಸಮ್ಮುಖದಲ್ಲಿ ಈ ಸಮಾರಂಭವು ನೆರವೇರುತ್ತಿರುವದು ಅದರ ಘನತೆಯ ದಿವ್ಯ ದ್ಯೋತಕವಾಗಿದೆ. ಎಲ್ಲಂದದಿಂದಲೂ ಇಂತಹ ಗೌರವಕ್ಕೆ ಪಾತ್ರರಾದ ಶ್ರೀ ಪಾವಟೆ ಸಾಹೇಬರು ಇಂದು ಒಬ್ಬ ವ್ಯಕ್ತಿಗಳಾಗಿರದೆ ಒಂದು ಸಂಸ್ಥೆಯಾಗಿ ನಿಂತಿದ್ದಾರೆ. ಅಂತೆಯೇ ಅಲ್ಪಾವಧಿಯಲ್ಲಿ ನೂತನ ಸೃಷ್ಟಿಯನ್ನೇ ನಿರ್ಮಾಣ ಮಾಡಿದಂತೆ ಕರ್ನಾಟಕ ವಿಶ್ವವಿದ್ಯಾಲಯವನ್ನು ನಿರ್ಮಿಸಿರುವರು.

ಛೋಟಾ ಮಹಾಬಳೇಶ್ವರವು ಮಹಾಬಳೇಶ್ವರಕ್ಕಿಂತಲೂ ಪವಿತ್ರತಮವಾದ ಕ್ಷೇತ್ರವೆನ್ನುವಂತೆ ಅಲ್ಲಿ ವಿದ್ಯಾಮಂದಿರಗಳನ್ನು ನಿರ್ಮಿಸಿರುವರು. ಕರ್ನಾಟಕ ವಿಶ್ವವಿದ್ಯಾಲಯವು ತೀರ ಚಿಕ್ಕದಾದರೂ ಭಾರತದ ಖ್ಯಾತಿವೆತ್ತ ವಿಶ್ವವಿದ್ಯಾಲಯಗಳ ಸಾಲಿನಲ್ಲಿ ಅದಕ್ಕೆ ಗೌರವದ ಸ್ಥಾನ ಸಲ್ಲುವಂತೆ ಮಾಡಿದ ಶ್ರೇಯಸ್ಸು ಪಾವಟೆ ಸಾಹೇಬರಿಗೇ ಸಲ್ಲುತ್ತದೆ. ಇಂತಹ ಮಹಾನುಭಾವರ ಬಗೆಗೆ ಬರೆಯುವದು ಸಣ್ಣ ಮಾತಲ್ಲ. ಆದರೂ ಪ್ರಾಥಮಿಕ ಶಿಕ್ಷಣ ಮತ್ತು ಶಿಕ್ಷಕರ ವಿಷಯವಾಗಿ ಅವರು ಮಾಡಿದ ಘನವಾದ ಕಾರ್ಯವನ್ನು ಇಲ್ಲಿ ಸಂಸ್ಮರಣೆ ಮಾಡುವದು ವಿಹಿತವೆನಿಸಿದೆ; ಕರ್ತವ್ಯವೂ ಆಗಿದೆ.

ಸಾಹೇಬರು ಮುಂಬಯಿ ರಾಜ್ಯದ ಶಿಕ್ಷಣ ಶಾಖೆಯ ಮುಖ್ಯಾಧಿಕಾರಿಗಳಾಗಿ ಸತತ ೮ ವರ್ಷಗಳ ವರೆಗೆ ಕಾರ್ಯ ಮಾಡಿರುವರು. ಈ ಅವಧಿಯಲ್ಲಿ ಮುಂಬಯಿ ರಾಜ್ಯವು ಶಿಕ್ಷಣದ ಎಲ್ಲ ಅಂಗಗಳಲ್ಲಿಯೂ ಇತರ ರಾಜ್ಯಗಳಿಗಿಂತ ಹಿರಿಯ ಸ್ಥಾನವನ್ನು ಪಡೆಯಿತು. ಇದಕ್ಕೆ ಕಾರಣ— ಶ್ರೀ ಪಾವಟೆ ಸಾಹೇಬರೇ ಎಂದು ಜನರೆಲ್ಲ ಮುಕ್ತಕಂಠದಿಂದ ಹೇಳುತ್ತಿದ್ದರೆಂಬದು ಎಲ್ಲರೂ ಕೇಳಿ ತಿಳಿದ ವಿಷಯ. ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿಯಂತೂ ಸಾಹೇಬರು ಒಳ್ಳೆಯ ಆಸ್ಥೆಯನ್ನು ವಹಿಸಿದ್ದರೆಂಬುದಕ್ಕೆ ಈ ದಿಸೆಯಲ್ಲಿ ಮುಂಬಯಿ ರಾಜ್ಯವು ಪಡೆದ ಪ್ರಥಮ ಸ್ಥಾನವೇ ನಿದರ್ಶನ. ಮೂಲಶಿಕ್ಷಣದ ರಹಸ್ಯವನ್ನು ದಕ್ಷರಾದ ಶಿಕ್ಷಕರು ಅರಿತುಕೊಂಡು ಒಳ್ಳೆಯ ಯೋಗ್ಯ ರೀತಿಯಿಂದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರೆ ಶಿಕ್ಷಣದ ಪ್ರಗತಿಯಾಗುವದೆಂದು ಸಾಹೇಬರಿಗೆ ಮನವರಿಕೆಯಾಗಿದ್ದಿತು. ಆದರೆ ವಿದ್ಯಾರ್ಥಿಗಳ ಬುದ್ಧಿಶಕ್ತಿ ಹಾಗು ಕೃರ್ತತ್ವಶಕ್ತಿಗಳೆರಡೂ ಜೊತೆಜೊತೆಯಾಗಿಯೇ ಬೆಳೆಯಬೇಕೆಂದೂ ಮೂಲಶಿಕ್ಷಣದ ನೆವದಲ್ಲಿ ವಿದ್ಯಾರ್ಥಿಗಳ ಬುದ್ಧಿಶಕ್ತಿ ಕುಂಠಿತವಾಗಬಾರದೆಂದೂ ಅವರು ಆಗಾಗ ಉದ್ಗಾರತೆಗೆದುದುಂಟು. ಹಾಗೆ ಆಗದಂತೆ ಅವರು ನೋಡಿಕೊಂಡುದೂ ಉಂಟು. ಅಂತೆಯೇ ಮುಂಬಯಿ ರಾಜ್ಯದಲ್ಲಿ ಎಲ್ಲಿಹೋದರೂ ಪ್ರಾಥಮಿಕ ಶಿಕ್ಷಣದ ಯೋಗಕ್ಷೇಮವನ್ನು ನೋಡಿಕೊಳ್ಳದೆ ಬರುತ್ತಿರಲಿಲ್ಲ. ಪ್ರಾಥಮಿಕ ಶಿಕ್ಷಣದಲ್ಲಿ ಚೆನ್ನಾಗಿ ಪ್ರಗತಿಯಾದರೆ ನಾಡಿನ ವಿದ್ಯಾಮಂದಿರಕ್ಕೆ ಭದ್ರವಾದ ತಳಹದಿ ಪ್ರಾಪ್ತವಾಗಿ ದೇಶದ ಸರ್ವಾಂಗೀಣ ಉನ್ನತಿಯಾಗುವದೆಂದು ಪಾವಟೆ ಸಾಹೇಬರು ನಿರಂತರ ಪರಿಶ್ರಮಿಸಿದರು.

ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರ ಮಹತ್ಕಾರ್ಯವನ್ನು ಸಾಹೇಬರು ಚೆನ್ನಾಗಿ ಅರಿತಿದ್ದರು. ಹಸಿದ ಹೊಟ್ಟೆಯಿಂದ ಶಿಕ್ಷಕರು ಹಗಲಿರುಳು ದುಡಿಯುತ್ತಿರುವದನ್ನು ಕಂಡು ಅವರು ಕನಿಕರಪಡುತ್ತಿದ್ದರು. ಪ್ರಾಥಮಿಕ ಶಿಕ್ಷಕರ ವೇತನದಲ್ಲಿ ಹೆಚ್ಚಳವಾದುದು ಸಾಹೇಬರ ಆಡಳಿತೆಯಲ್ಲಿಯೇ ! ಸ್ವಭಾವತಃ ಉದಾರ ಮನಸ್ಸಿನವರಾದ ಶ್ರೀ ಪಾವಟೆಸಾಹೇಬರು ಶಿಕ್ಷಕರ ವೇತನದ ವಿಷಯದಲ್ಲಿಯೂ ಒಳ್ಳೆಯ ಉದಾರ ಭಾವನೆಯವರೇ ಆಗಿದ್ದರು. ಆದರೆ, ಶಿಕ್ಷಕರು ಒಳ್ಳೆಯ ಕರ್ತವ್ಯದಕ್ಷರಾಗಬೇಕೆಂದು ಅವರ ಆಶಯವಾಗಿದ್ದಿತು.

ತಾವು ಒಳ್ಳೆಯ ಉಚ್ಚ ಸ್ಥಾನದಲ್ಲಿದ್ದರೂ ಹಳ್ಳಿಯ ಬಡತನದ ಅರಿವು ಸಾಹೇಬರಿಗೆ ಸದಾ ಇರುತ್ತದೆ. ಶಿಕ್ಷಕರೂ ಪಾಲಕರೂ ಯಾರೇ ಆಗಲಿ ಯಾವುದಾದರೊಂದು ಸಮಸ್ಯೆಯನ್ನು ತೆಗೆದುಕೊಂಡು ಬಂದರೆ ಸಾಕು ಶಾಂತಚಿತ್ತರಾಗಿ ಕೇಳಿ ಸಮಸ್ಯೆಗೆ ತಕ್ಕ ಪರಿಹಾರವನ್ನು ಸೂಚಿಸಿ ಅವರಿಗೆ ಮಾರ್ಗದರ್ಶನ ಮಾಡುವರು. ಸಮಯವಿಲ್ಲ ಮತ್ತೆ ಕಾಣಿರಿ ಎಂಬ ಉತ್ತರ ಅವರ ಬಾಯಿಂದ ಬಂದುದನ್ನು ಯಾರೂ ಎಂದೂ ಕೇಳಲಿಕ್ಕಿಲ್ಲ. ಧಾರವಾಡಕ್ಕೆ ಆಗಮಿಸಿದರೆ ಅವರ ಬಂಗ್ಲೆಯ ಎದುರಿಗೆ ನೂರಾರು ಜನರು ಸಾಲುಗಟ್ಟಿಕೊಂಡು ನಿಂತಿರಬೇಕು. ನೌಕರಿ ಇದ್ದವರು ಇಲ್ಲದಿದ್ದವರು ಉಳಿಸಿಕೊಂಡವರು ಕಳೆದುಕೊಂಡವರು ಯಾರು ಬಂದರೂ ತಾಳ್ಮೆಯಿಂದ ಕೇಳಿಕೊಳ್ಳುವ ಅವರ ಸಹನಶೀಲತೆ ಅನ್ಯಾದೃಶವಾದುದು. ಒಮ್ಮೆ ಯಾರಾದರೂ ಯಾವದಾದರೊಂದು ಕಾರಣಕ್ಕೆ ಹೋಗಿ ಅರಿಕೆ ಮಾಡಿಕೊಂಡರೆ ಅವರನ್ನೂ ಆ ವಿಷಯವನ್ನೂ ಎಂದೂ ಮರೆಯದ ಸ್ವಭಾವ ಸಾಹೇಬರದು. ಅಂತೆಯೇ ಮುಂಬಯಿಯಂಥ ದೊಡ್ಡ ರಾಜ್ಯದ ಶಿಕ್ಷಣ ಶಾಖೆಯ ಆಡಳಿತೆಯನ್ನು ಒಳ್ಳೆಯ ದಕ್ಷತೆಯಿಂದ ನಡೆಸಿಕೊಂಡು ಹೋದರು. ಪ್ರಾಯಶಃ ಮುಂಬಯಿ ರಾಜ್ಯಕ್ಕೆ ಇಂತಹ ದಕ್ಷರೂ ಜನಪ್ರಿಯರೂ ಆದ ಆಡಳಿತಗಾರರು ಹಿಂದೆ ಎಂದೂ ದೊರೆತಿರಲಿಕ್ಕಿಲ್ಲ. ಅದರಂತೆ ಮುಂದೆ ಸಿಗುವದೂ ದುರ್ಲಭವೆಂದೇ ಹೇಳಬೇಕು.

ಡೈರೆಕ್ಟರ ಪದದಿಂದ ನಿವೃತ್ತರಾಗಿ ಉಚ್ಚಶಿಕ್ಷಣದ ಕ್ಷೇತ್ರದಲ್ಲಿ ಉಪಕುಲಗುರುಗಳಾಗಿ ಕೆಲಸ ಮಾಡುತ್ತಿದ್ದರೂ ಪ್ರಾಥಮಿಕ ಹಾಗು ಮಾಧ್ಯಮಿಕ ಶಿಕ್ಷಣಗಳ

ವಿಷಯವಾಗಿ ಮೊದಲಿನಂತೆಯೇ ಆಸ್ಥೆಯುಳ್ಳವರಾಗಿರುವರು. ಹೊಸರಾಜ್ಯದ ಎಲ್ಲ ವಿಧದ ಶಿಕ್ಷಣ ಕ್ರಮವನ್ನು ರೂಪಿಸುವ ಹಿರಿಯರಲ್ಲಿ ಅಗ್ರಗಣ್ಯರಾಗಿರುವರು. ಇವರ ನೇತೃತ್ವದಲ್ಲಿ ನಮ್ಮ ರಾಜ್ಯದ ಶಿಕ್ಷಣವು ಸರ್ವತೋಮುಖವಾಗಿ ಅಭಿವೃದ್ಧಿಹೊಂದುವದೆಂದು ನಮ್ಮೆಲ್ಲರ ಹಾರೈಕೆ. ಪರಮಾತ್ಮನು ಶ್ರೀ ಪಾವಟೆ ಸಾಹೇಬರಿಗೆ ಇತೋಪ್ಯತಿಶಯವಾದ ಆಯುರಾರೋಗ್ಯಗಳನ್ನು ದಯಪಾಲಿಸಲೆಂದು ಪ್ರಾರ್ಥನೆ.

ಶ್ರೀ ದಾ. ಚಿಂ. ಪಾವಟೆಯವರು

(ರ್‍ಯಾಂಗ್ಲರರಾಗಿ ಮರಳಿ ಬಂದ ನಂತರ)

ಲೇಖಕರು: **ಶ್ರೀ ಆಯ್. ಎಸ್. ಬಿದರಿ**, ಅಸಿ. ಲಕ್ಚರರ ಸೇಕಂಡರಿ ಟೀಚರ್ಸ ಟ್ರೇ. ಕಾಲೇಜ, ಬೆಳಗಾಂವ

೧೯೨೪ ಸಪ್ಟೆಂಬರ ತಿಂಗಳಿನ ಒಂದು ದಿನ ಸ್ವಗ್ರಾಮವಾದ ಮಮತೆಯಪುರ ಮಮದಾಪುರದಲ್ಲಿ ಎಂದಿಲ್ಲದ ಸಂಭ್ರಮ, ಸಂತೋಷ. ತನ್ನ ಪ್ರೀತಿಯ ಪುತ್ಥಳಿಯಾದ ದಾ. ಚಿಂ. ಪಾವಟೆಯವರು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ಹೊರಡುವ ದಿನ. ಗ್ರಾಮದಲ್ಲಿಯ ಆಬಾಲವೃದ್ಧರೆಲ್ಲರೂ ಅವರನ್ನು ಸತ್ಕರಿಸಿ ಅವರ ವಿದೇಶ ಜೀವನವು ಹರ್ಷದಾಯಕವಾಗಲಿ, ಪ್ರಗತಿದಾಯಕವಾಗಲಿ, ಸ್ವದೇಶಕ್ಕೆ ಶ್ರೇಷ್ಠ ಶಿಕ್ಷಣ ತಜ್ಞರಾಗಿ ಆಗಮಿಸಲಿ ಎಂದು ಹಾರೈಸಿ ಬೀಳ್ಕೊಡುವ ದಿನ. ಅವರ ಈ ಹಾರೈಕೆಯು ಫಲಿಸಲಿರುವದೋ ಎನ್ನುವಂತೆ ಅಂದು ಗೋಧೂಳಿಯ ಶುಭ ಮುಹೂರ್ತದಲ್ಲಿ ಪುಷ್ಪವೃಷ್ಟಿಯೋ ಎಂಬಂತೆ ದೊಡ್ಡ ಮಳೆಯಾಯಿತು. ಪಾವಟೆಯವರ ವಿದೇಶ ಸಂಚಾರವು ಉಜ್ವಲವಾಗುವದರಲ್ಲಿ ಸಂದೇಹವಿಲ್ಲ ಎಂಬ ಭವಿಷ್ಯವನ್ನು ನಿಸರ್ಗದೇವಿಯೇ ಅಂದು ಸೂಚಿಸಿದಳು. ಅಂದು ವಿದೇಶಕ್ಕೆ ತೆರಳಿದ ಶ್ರೀ ದಾ. ಚಿಂ. ಪಾವಟೆಯವರು ಇಂಗ್ಲಂಡಿನ ಖ್ಯಾತಿವೆತ್ತ ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಕಕ್ಷೆಯಲ್ಲಿ ಬರುವ ಸಸೆಕ್ಸ ಕಾಲೇಜನ್ನು ಸೇರಿ ೧೯೨೬ರ ಜೂನದ ವರೆಗೆ ವ್ಯಾಸಂಗ ಮಾಡಿ ಗಣಿತ ಟ್ರೈಪಾಸ ಎರಡನೆಯ ಭಾಗದಲ್ಲಿ ಒಂದನೆಯ ವರ್ಗದಲ್ಲಿ ಪ್ರಶಸ್ತಿಯೊಂದಿಗೆ ಉತ್ತೀರ್ಣರಾಗಿ ರ್‍ಯಾಂಗ್ಲರರಾದರು; ೧೦೦ ಪೌಂಡಿನ ಶಿಷ್ಯವೃತ್ತಿಯನ್ನು ಪಡೆದರು. ಮತ್ತೆ ಆರು ತಿಂಗಳು ಕೇಂಬ್ರಿಜ್‍ದಲ್ಲಿ ಉಳಿದು "Suitability of divergent series" ವಿಷಯವಾಗಿ ಸಂಶೋಧನೆ ನಡೆಸಿದರು. ಬೇಸಿಗೆ ಹಾಗೂ ಚಳಿಗಾಲದ ಬಿಡುವುಗಳಲ್ಲಿ ಫ್ರಾನ್ಸ ಮತ್ತು ಜರ್ಮನಿಗಳಿಗೆ ಹೋಗಿ ಅಲ್ಲಿಯ ಭಾಷೆಗಳನ್ನು ಕಲಿತು ಗಣಿತದಲ್ಲಿ ಹೆಚ್ಚಿನ ಜ್ಞಾನ ಸಂಪಾದಿಸಿದರು. ಸ್ವದೇಶಕ್ಕೆ ಮರಳುವ ಪೂರ್ವದಲ್ಲಿ ಯುರೋಪ ಖಂಡದ ದೇಶಗಳನ್ನೆಲ ಸುತ್ತಾಡಿ ಅಲ್ಲಿಯ ಶಿಕ್ಷಣ ಸಂಸ್ಥೆಗಳನ್ನು ಸಂದರ್ಶಿಸಿದರು.

೧೯೨೭ರ ಜನೆವರಿ ತಿಂಗಳು, ದಾದಾಸಾಹೇಬರು ರ್‍ಯಾಂಗ್ಲರರಾಗಿ ನಾಡ ಭಾಗ್ಯೋದಯವೇ ಮೂರ್ತಿವಂತಾಗಿ ಮೂಡಿ ಬಂದಂತೆ ಮಾತೃಭೂಮಿಗೆ ಮರಳಿದರು. ನಾಡಿಗೆ ನಾಡೇ ಅವರನ್ನು ಸಂಭ್ರಮದಿಂದ ಸ್ವಾಗತಿಸಿತು. ಸಿರಸಂಗಿ ಟ್ರಸ್ಟಿನವರು ಶ್ರೀ ಪಾವಟೆಯವರಿಗೆ ತಿಂಗಳೊಂದಕ್ಕೆ ೪೦೦ ರೂಪಾಯಿಗಳ ಶಿಷ್ಯವೇತನ ಕೊಟ್ಟು ರ್‍ಯಾಂಗ್ಲರರಾಗಿ ಬರಲು ಇಂಗ್ಲಂಡಿಗೆ ಕಳಿಸಿದ್ದರು. ಕೆ. ಎಲ್. ಇ. ಸೊಸಾಯಿಟಿಯವರು ಬೆಳಗಾಂವಿಯಲ್ಲಿ ತೆರೆಯಬೇಕೆಂದಿದ್ದ ಲಿಂಗರಾಜ ಕಾಲೇಜಕ್ಕೆ ಅವರನ್ನು ಪ್ರಿನ್ಸಿಪಾಲರನ್ನಾಗಿ ಮಾಡುವ ಸದುದ್ದೇಶವನ್ನು ಟ್ರಸ್ಟಿನವರು ಇಟ್ಟುಕೊಂಡಿದ್ದರು. ಆದರೆ ಆಗಿನ ಮುಂಬಯಿ ಸರಕಾರದವರು ಹೊಸ ಕಾಲೇಜುಗಳ ಪ್ರಾರಂಭಕ್ಕೆ ಒಪ್ಪಿಗೆ ಕೊಡದ್ದರಿಂದ ಲಿಂಗರಾಜ ಕಾಲೇಜು ಮೂಡಿಬರುವ ಲಕ್ಷಣಗಳು ಕಂಡು ಬರಲಿಲ್ಲ. ಅದರಿಂದ ರ್‍ಯಾಂಗ್ಲರ ಪಾವಟೆಯವರು ಬನಾರಸ ಹಿಂದು ವಿಶ್ವವಿದ್ಯಾಲಯದಲ್ಲಿ ಗಣಿತ ವಿಷಯದ ಮುಖ್ಯ ಪ್ರಾಧ್ಯಾಪಕರಾಗಿ ೧೯೨೭ ನೆಯ ಜುಲೈ ತಿಂಗಳಲ್ಲಿ ನೇಮಕ ಹೊಂದಿದರು. ಅಲ್ಲಿ ಅವರು ಆದರ್ಶ ಪ್ರಾಧ್ಯಾಪಕರಾಗಿ ಸಕಲರ ಪ್ರೀತ್ಯಾದರಗಳಿಗೆ ಪಾತ್ರರಾದರು. ವಿದ್ಯಾರ್ಥಿಗಳಿಗೆ ಆದರ್ಶ ಪ್ರಾಧ್ಯಾಪಕರಾಗಿ, ಸಹೋದ್ಯೋಗಿಗಳಿಗೆ ಅತ್ಯುತ್ತಮ ಸಹಕಾರಿಯಾಗಿ, ಅಲ್ಲಿ ಸಾಗುತ್ತಿದ್ದ ಶಿಕ್ಷಣ ಪ್ರಪಂಚಕ್ಕೆ

ಸೀಮಂತಮಣಿಯಾಗಿ ಶ್ರೀ ಪಾವಟೆಯವರು ಕಾರ್ಯ ಮಾಡಿದರಲ್ಲದೆ ಗಣಿತದ ಅಭ್ಯಾಸ ಪತ್ರಿಕೆಯನ್ನು ಸಂಪೂರ್ಣ ಸುಧಾರಿಸಿದರು. ಇವರ ಕಾರ್ಯದಕ್ಷತೆಯನ್ನು ವಿದ್ವತ್ತೆಯನ್ನು ಕಂಡುಂಡ ಪಂಡಿತ ಮದನ ಮೋಹನ ಮಾಲವಿಯಾ ಅವರು ಇವರನ್ನು ಅತ್ಯಂತ ಪ್ರೀತಿ ವಿಶ್ವಾಸಗಳಿಂದ ಕಾಣುತ್ತಿದ್ದರು. ಬನಾರಸದಲ್ಲಿ ಕೆಲಸ ಮಾಡುತ್ತಿದ್ದಾಗ "ಎಲಿಮೆಂಟ್ಸ್ ಆಫ್ ಕ್ಯಾಲಕ್ಯುಲಿಸ್" ಎಂಬ ಅತ್ಯುತ್ತಮವಾದ ಗಣಿತ ಪುಸ್ತಕವನ್ನು ಬರೆದರು. ಬಹುತರವಾಗಿ ಅನೇಕ ವಿಶ್ವವಿದ್ಯಾಲಯಗಳಲ್ಲಿ ಇಂಟರ ಕ್ಲಾಸಿಗೆ ಪಠ್ಯ ಪುಸ್ತಕವಾಗಿ ಇದು ಉಪಯೋಗಿಸಲ್ಪಡುತ್ತಿದೆ. ಇವರ ಉದ್ಯೋಗ ತತ್ಪರತೆ, ವಿದ್ಯಾರ್ಥಿಗಳ ಮೇಲಿನ ವಾತ್ಸಲ್ಯ, ಆಳವಾದ ಅಭ್ಯಾಸ, ಪ್ರತಿಭೆ-ಪಾಂಡಿತ್ಯಗಳನ್ನು ಕಂಡು ಕಾಶಿಯ ವಿಶ್ವೇಶ್ವರನು ಆಶೀರ್ವದಿಸಿದನೋ ಎನ್ನುವಂತೆ ಕಾಶಿಯಲ್ಲಿದ್ದಾಗಲೇ ಇವರಿಗೆ ಮುಂದೆ ತಮ್ಮಂತೆಯೇ ಭಾಗ್ಯಶಾಲಿಯಾಗಲಿರುವ ಗಂಡು ಮಗುವೊಂದು ಜನಿಸಿತು. ಕಾಶಿಯ ಅಧಿಪತಿಯ ದಕ್ಷಿಣಾಕ್ಷಿಯು ತಮ್ಮ ಈ ಜೇಷ್ಠ ಪುತ್ರನನ್ನು ಈಕ್ಷಿಸುತ್ತಿರಲಿ ಎಂಬ ಸದ್ಭಾವನೆಯಿಂದ ದಾದಾಸಾಹೇಬರು ತಮ್ಮ ಈ ಪ್ರಪ್ರಥಮ ಮಗುವಿಗೆ ಕಾಶಿನಾಥನೆಂದು ನಾಮಕರಣ ಮಾಡಿದರು.

ಇರಲಿ; ಇತ್ತ ಮುಂಬಯಿ ರಾಜ್ಯದ ಶಿಕ್ಷಣ ಶಾಖೆಯು ಅವರ ಪದವಿ, ಪಾಶ್ಚಾತ್ಯ ರಾಷ್ಟ್ರಗಳಲ್ಲಿಯ ಶಿಕ್ಷಣ, ಖಾತೆಗಳ ಅನುಭವ, ಆಡಳಿತದ ಬಗೆಗಿದ್ದ ಸ್ಪಷ್ಟವಾದ ಜ್ಞಾನ ಇವೆಲ್ಲವುಗಳನ್ನು ಕಂಡು ಅವರನ್ನು ತೆಗೆದುಕೊಳ್ಳಲು ಆತುರವಾಗಿತ್ತು. ಆದುದರಿಂದ ದಾದಾಸಾಹೇಬರು ಪ್ರಥಮ ದರ್ಜೆಯ ಅಧಿಕಾರಿಗಳಾಗಿ ಎಜ್ಯುಕೇಶನಲ್ ಇನಸ್ಪೆಕ್ಟರರೆಂದು ಮುಂಬಯಿ ಪ್ರಾಂತದ ಶಿಕ್ಷಣ ಶಾಖೆಯನ್ನು ಸೇರಿದರು. ಮುಂಬಯಿ ವಿಭಾಗದ ಹಾಗೂ ಮಧ್ಯವಿಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರೆಂದು, ಅಸಿಸ್ಟಂಟ ಹಾಗೂ ಡೆಪ್ಯುಟಿ ಡೈರೆಕ್ಟರರೆಂದು ಹುದ್ದೆಯಿಂದ ಹುದ್ದೆಗೆ ಏರುತ್ತ ೧೯೪೭ರ ಜನೆವರಿಯಲ್ಲಿ ಡೈರೆಕ್ಟರರಾದರು. ೧೯೪೭ ರಿಂದ ೧೯೫೪ರ ಜೂನ ತಿಂಗಳಿನ ವರೆಗೆ ಅಂದರೆ ತಾವು ನಿವೃತ್ತರಾಗುವವರೆಗೆ ಶ್ರೀ ಪಾವಟೆಯವರು ರಾಜ್ಯದ ಶಿಕ್ಷಣ ಶಾಖೆಯ ವರಿಷ್ಠಾಧಿಕಾರಿಗಳಾಗಿ ಅತ್ಯುತ್ತಮ ಸೇವೆ ಸಲ್ಲಿಸಿದರು. ಈ ಏಳು ವರ್ಷಗಳ ದೀರ್ಘಕಾಲಾವಧಿಯು ಮುಂಬಯಿ ರಾಜ್ಯದ ಶಿಕ್ಷಣ ಶಾಖೆಯಲ್ಲಿ ಸಂಕ್ರಾಂತಿಯ ಕಾಲವೆಂದೇ ಹೇಳಬಹುದು. ಅನೇಕ ಸುಧಾರಣೆಗಳು ಮೈದಾಳಿ ಬಂದವು; ಹೊಸ ಯೋಜನೆಗಳು, ಬದಲಾವಣೆಗಳು ಕಾರ್ಯರೂಪಕ್ಕಿಳಿದವು. ಸಕ್ತಿ ಶಿಕ್ಷಣ, ಸಮಾಜ ಶಿಕ್ಷಣ, ಜೀವನ ಶಿಕ್ಷಣ, ಸರತಿಯ ಪದ್ಧತಿ, ಅಭ್ಯಾಸ ಪತ್ರಿಕೆಯ ಪುನರ್ನಿರ್ಮಾಣ, ಪ್ರಾಥಮಿಕ ಶಾಲೆಗಳ ೧ ರಿಂದ ೪ನೇ ಇಯತ್ತೆಗಳ ಪಠ್ಯಪುಸ್ತಕಗಳ ರಚನೆ, ಟ್ರೇನಿಂಗ ಕಾಲೇಜುಗಳನ್ನು ಹೆಚ್ಚಿಸುವದು, ಪ್ರಾದೇಶಿಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವದು, ಪ್ರಾದೇಶಿಕ ಭಾಷೆಯನ್ನು ಪ್ರೋತ್ಸಾಹಿಸುವದು, ರಾಷ್ಟ್ರಭಾಷೆಯಾದ ಹಿಂದಿಯನ್ನು ಹಾಯಸ್ಕೂಲ ಹಾಗೂ ಟ್ರೇನಿಂಗ ಕಾಲೇಜುಗಳಲ್ಲಿ ಕಡ್ಡಾಯವಾಗಿ ಕಲಿಸುವದು ಇವೇ ಮೊದಲಾದ ಸುಧಾರಣೆಗಳು ರೂಪು ತಾಳಿದುದು ಶ್ರೀ ಪಾವಟೆಯವರು ವರಿಷ್ಠಾಧಿಕಾರಿಯಾಗಿದ್ದಾಗಿನ ಈ ಏಳು ವರ್ಷಗಳ ಅವಧಿಯಲ್ಲಿಯೇ. ಶಿಕ್ಷಣ ಖಾತೆಯ ಆಡಳಿತೆಯ ಹೊತ್ತಿಗೆ, ಪ್ರಾಥಮಿಕ ಶಿಕ್ಷಣ ಕಾಯಿದೆ ಹಾಗೂ ನಿಯಮಾವಳಿಗಳು ಸಹ ಇವರ ಆಡಳಿತದಲ್ಲಿಯೇ ಜನ್ಮತಾಳಿವೆ. ಈ ಎಲ್ಲ ಸುಧಾರಣೆಗಳನ್ನು, ಬದಲಾವಣೆಗಳನ್ನು, ಯೋಜನೆಗಳನ್ನು, ರಚನೆಗಳನ್ನು, ಒಳ್ಳೆಯ ಸಮತೋಲದಿಂದ, ಬುದ್ಧಿಮತ್ತೆಯಿಂದ ದಕ್ಷತೆಯಿಂದ, ಆಡಳಿತೆಯ ಸಾಮರ್ಥ್ಯದಿಂದ, ಸರಳತೆಯಿಂದ, ಪ್ರಾಮಾಣಿಕತೆಯಿಂದ ಕಾರ್ಯರೂಪಕ್ಕಿಳಿಸಿ ರಾಜ್ಯದ ಶಿಕ್ಷಣ ಖಾತೆಯ ಕೀರ್ತಿಗೆ ಕಾರಣರಾಗಿದ್ದಾರೆ.

ಶ್ರೀ ಪಾವಟೆಯವರು ಕಳೆದ ಆರು ವರ್ಷಗಳಿಂದ ಕರ್ನಾಟಕ ವಿಶ್ವವಿದ್ಯಾಲಯದ ಲೋಕನಿಯುಕ್ತ ಉಪಕುಲಗುರುಗಳಾಗಿ ಅದರ ಸೂತ್ರಗಳನ್ನು ವಹಿಸಿಕೊಂಡು ಕಾರ್ಯ ಮಾಡುತ್ತಿದ್ದಾರೆ. ವಿಶ್ವವಿದ್ಯಾಲಯದ ಪ್ರಾಂಗಣದಲ್ಲಿ ಮುಖ್ಯ ಕಟ್ಟಡ, ವಿದ್ಯಾರ್ಥಿಗಳ ವಸತಿಗೃಹ, ಪ್ರಾಧ್ಯಾಪಕರ ಮನೆಗಳು, ಅತಿಥಿಗೃಹ ಮೊದಲಾದವುಗಳನ್ನು ನಿರ್ಮಿಸಿ ಅದರ ಭೌತಿಕ ಪ್ರಗತಿಗೆ ಕಾರಣರಾಗಿರುವರಲ್ಲದೆ ಸ್ನಾತಕೋತ್ತರ ಶಿಕ್ಷಣವನ್ನು ನೇರವಾಗಿ ತೆಗೆದುಕೊಂಡು ಬೌದ್ಧಿಕ ಪ್ರಗತಿಗೂ ಕಾರಣರಾಗಿದ್ದಾರೆ.

ಹೆಚ್ಚಿನ ಶಿಕ್ಷಣಕ್ಕಾಗಿ ಇಂಗ್ಲಂಡಿಗೆ ಹೋಗಿ ಬಂದ ನಂತರ ಶ್ರೀ ಪಾವಟೆಯವರು ೧೯೩೭ರಲ್ಲಿ ಆರೋಗ್ಯ ಸುಧಾರಣೆಗಾಗಿ, ೧೯೫೫ರಲ್ಲಿ ಅಂತರ್ರಾಷ್ಟ್ರೀಯ ಶಿಕ್ಷಣ ಪರಿಷತ್ತಿಗೆ ಭಾರತದ ಶಿಷ್ಟಮಂಡಳದ ಧುರೀಣರಾಗಿ

ಮತ್ತು ೧೯೫೭ರಲ್ಲಿ ವಿದೇಶಗಳ ವಿಶ್ವವಿದ್ಯಾಲಯಗಳ ಸಂದರ್ಶನಕ್ಕಾಗಿ ಹೀಗೆ ಮತ್ತೆ ಮೂರು ಸಲ ವಿದೇಶ ಸಂಚಾರ ಮಾಡಿ ಬಂದಿದ್ದಾರೆ.

ಶಿಕ್ಷಣವು ಜೀವನದಲ್ಲಿ ಪ್ರತಿಬಿಂಬಿತವಾಗಬೇಕೆಂದು ನಂಬಿ ನಡೆದಿರುವ ಶ್ರೀ ಪಾವಟೆಯವರ ಜೀವನವು ನಾಡವರಿಗೆ ಒಂದು ಶ್ರೇಷ್ಠತಮ ಶಿಕ್ಷಣವಾಗಿದೆ. ೬೦ ವರುಷಗಳ ತುಂಬು ಜೀವನವನ್ನು ಮುಗಿಸಿ ೬೧ರಲ್ಲಿ ಕಾಲಿಟ್ಟಿರುವ ಅವರು ೧೬ರ ಎಳೆಯ ಯುವಕರಂತೆ ಯಾರಿಗಾದರೂ ಕಾಣಿಸುತ್ತಾರೆ. ಎಂತಹ ಪ್ರಸಂಗವೇ ಇರಲಿ, ನಿತ್ಯದ ಪ್ರಭಾತ ಸಮಯದ ತಮ್ಮ ವಾಯು ಸಂಚಾರವನ್ನು ಅವರು ಬಿಟ್ಟವರಲ್ಲ. ಬಾಲಸೂರ್ಯನ ಹೊಂಬಣ್ಣದ ಕಿರಣಗಳು ತಾಯಿ ವಸುಂಧರೆಯನ್ನು ಪೂಜಿಸುತ್ತಿರುವಾಗಿನ ಮಂಗಲ ಸಮಯದಲ್ಲಿ ಶ್ರೀ ಪಾವಟೆಯವರು ನಿಸರ್ಗ ದೇವಿಯ ಶ್ರೇಷ್ಠ ಪೂಜಾರಿಯೋ ಪಾದಿಯಲ್ಲಿ ನಿಸರ್ಗ ಸೌಂದರ್ಯದ ಮಧ್ಯದಲ್ಲಿ ಸಂಚರಿಸುತ್ತಿರುವದನ್ನು ದಿನಾಲು ಕಾಣಬಹುದು.

ಹೀಗೆ ದಕ್ಷ ಪ್ರಾಧ್ಯಾಪಕರೂ, ಸಮರ್ಥ ಆಡಳಿತೆಗಾರರೂ, ಉಜ್ವಲ ಮೇಧಾವಿಗಳೂ, ಕುಶಲ ಕಾರ್ಯಕರ್ತರೂ, ಅನುಪಮ ಲೋಕಪ್ರಿಯತೆಯನ್ನು ಸಂಪಾದಿಸಿದವರೂ, ಅಗಣಿತ ಪಾಂಡಿತ್ಯ-ಪ್ರತಿಭೆಯುಳ್ಳವರೂ, ಆದರ್ಶ ಜೀವಿಗಳೂ ಆದ ಶ್ರೀ ಡಾ. ಟಿ. ಪಾವಟೆಯವರ ವಜ್ರಮಹೋತ್ಸವವನ್ನು ನಾಡಜನರು ಒಂದಾಗಿ, ಮುಂದಾಗಿ, ಇಂದು ಆಚರಿಸಲಿದ್ದಾರೆ. ಪರಮಾತ್ಮನು ಅವರಿಗೆ ಇನ್ನೂ ಹೆಚ್ಚಿಗೆ ಆಯುರಾರೋಗ್ಯವನ್ನು ದಯಪಾಲಿಸಲೆಂದೂ, ನಮ್ಮ ನಾಡ-ನುಡಿ ರಾಷ್ಟ್ರಗಳ ಸೇವೆಯು ಅವರಿಂದ ಸಾಗಲೆಂದೂ ಪ್ರಾರ್ಥಿಸುವೆವು.

ಸ್ಮೃತಿ ಸುಮನೋಂಜಲಿ

ಲೇಖಕರು: **ಶ್ರೀ ಎಚ್. ಜಿ. ಜೋಶಿ,** ಬಿ. ಎ. (ಆನರ್ಸ) ಡಿ. ಬಿ. ಈ.

ಅಧ್ಯಾಪಕರು ಗಂ. ಸ. ಟ್ರೇನಿಂಗ ಕಾಲೇಜ, ಧಾರವಾಡ

೧೯೪೭ನೆಯ ಇಸ್ವಿಯ ಜುಲೈ ತಿಂಗಳು ಮುಂಬೈ ಸರಕಾರದವರು ಬೆಳಗಾವಿಯಲ್ಲೊಂದು ಸ್ನಾತಕರಿಗಾಗಿ ಮೂಲಶಿಕ್ಷಣ ತರಬೇತಿ ಕೇಂದ್ರವೊಂದನ್ನು ತೆರೆದಿದ್ದರು. ರಾಜ್ಯದಲ್ಲಿಯ ಪ್ರಥಮ ಸಂಸ್ಥೆಯದು. ಅಲ್ಲಿಯ ತರಬೇತಿಗಾಗಿ ನನ್ನ ಆಯ್ಕೆಯಾಗಿದ್ದಿತು. ನಾನಲ್ಲಿ ತರಬೇತಿ ಪಡೆಯುತ್ತಿರುವ ಸಮಯದಲ್ಲಿ ಮುಂಚಿತವಾಗಿ ಸರಕಾರಿ ಸೇವೆ ಮಾಡಿದಂಥವರಲ್ಲಿ ಪೂರ್ಣ ಸಂಬಳ ಕೊಟ್ಟು ತರಬೇತಿಗಾಗಿ ಆಯ್ಕೆ ಮಾಡುವ ನಾಲ್ಕೈದು ಸ್ಥಲಗಳು ಖಾಲಿ ಇವೆ ಎಂಬ ಸುದ್ದಿಯು ನನಗೆ ತಿಳಿದು ಬಂದಿತು. ತರಬೇತಿಗೆ ಬರುವ ಪೂರ್ವದಲ್ಲಿ ಏಳೆಂಟು ತಿಂಗಳು ನಾನು ಸರಕಾರಿ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದುದರಂದ ನಾನೊಬ್ಬ ಅಭ್ಯರ್ಥಿಯಾಗಿ ರಾಜ್ಯದ ವರಿಷ್ಠಾಧಿಕಾರಿಗಳ ಕಡೆಗೆ ಅರ್ಜಿಯೊಂದನ್ನು ಹಾಕಿದೆನು. ಅಷ್ಟರಲ್ಲಿ ನನ್ನ ಪೂಜ್ಯ ತಂದೆಯವರಿಂದ ನನಗೊಂದು ಕಾಗದ ಬಂದಿತು. "ಮುಂಬೈ ರಾಜ್ಯದ ಶಿಕ್ಷಣ ಶಾಖೆಯ ವರಿಷ್ಠಾಧಿಕಾರಿಗಳು ಕನ್ನಡಿಗರಿದ್ದು; ಕನ್ನಡ ನಾಡು ನುಡಿಗಳ ಬಗ್ಗೆ ಉಜ್ವಲ ಅಭಿಮಾನಿಗಳಾಗಿದ್ದಾರೆ, ದಯಾರ್ದ್ರಹೃದಯಿಗಳೂ, ಬಡವರನ್ನು ಸಹಾನುಭೂತಿಯಿಂದ ಕಾಣುವವರೂ ನ್ಯಾಯಪಕ್ಷಪಾತಿಗಳೂ ಆಗಿರುವರೆಂದು ಶ್ರೀಮಾನ್ ಬಸವನಾಳರ ಮುಖೇನ ಕೇಳಿ ತಿಳಿದಿದ್ದೇನೆ. ಆದಕಾಗಿ ನೀನು ಪುಣೆಯ ವರೆಗೆ ನೇರವಾಗಿ ಹೋಗಿ ಅವರನ್ನು ಪ್ರತ್ಯಕ್ಷ ಕಂಡು ವಿಜ್ಞಾಪಿಸಿಕೊಂಡು ಬಾ." ಎಂದು ಬರೆದಿದ್ದರು. ಅವರು ತಮ್ಮ ಪತ್ರದಲ್ಲಿ ಕೊನೆಯದಾಗಿ ಕಾಳಿದಾಸನ "याचा मोघा वरमधि गुणे नाधमे लब्ध कामा" ಉಕ್ತಿಯನ್ನು ಉದ್ಧರಿಸಿದ್ದರು.

ತಂದೆಯು ಕಾಗದವನ್ನು ಕಂಡು ಎರಡು ದಿನ ರಜೆ ಪಡೆದುಕೊಂಡು ಪುಣೆಯ ಪಟ್ಟಣಕ್ಕೆ ಹೊರಟೇಬಿಟ್ಟೆನು. ಆಗಷ್ಟ ತಿಂಗಳ ಕೊನೆಯ ವಾರವಿರಬಹುದು. ದಾರಿಯಲ್ಲಿ ಹೃದಯ ಗಾಬರಿಗೊಂಡಿತ್ತು, ಅವರು ರಾಜ್ಯದ ಉನ್ನ

ತಾಧಿಕಾರಿಗಳು. ನಾನಿನ್ನೂ ಸೇವಾದೀಕ್ಷೆ ಪಡೆದವರಲ್ಲಿ ಹೊಚ್ಚಹೊಸಬನು, ನನ್ನಂಥವನನ್ನು ಅವರು ಹೇಗೆ ಮಾತನಾಡಿಸಬಹುದು! ನನಗೆ ಸಂದರ್ಶನವನ್ನಾದರೂ ಹೇಗೆ ಕೊಡಬಹುದು? ಕೊಟ್ಟರೂ ಅವರು ಯಾವ ರೀತಿಯಾಗಿ ನನ್ನನ್ನು ಪ್ರಶ್ನಿಸಬಹುದು? ಅವರ ಪ್ರಶ್ನೆಗಳಿಗೆ ನಾನೆಂತು ಉತ್ತರ ಕೊಡಬೇಕು? ಎಂಬಿವೇ ವಿಚಾರಗಳಿಂದ ಅಧೈರ್ಯವು ಮೂಡಿಬಂದಿತು, ನನ್ನ ವಿಚಾರ ಸರಪಳಿ ಬಿಚ್ಚುತ್ತ ನಡೆದಿರುವಾಗಲೇ ನಸುಕು ಹರಿಯಿತು. ಪುಣೆಯ ನಿಲ್ದಾಣವು ಬಂದುಬಿಟ್ಟಿತು. ಮಳೆಗಾಲವಾದ್ದರಿಂದ ಮಳೆ ಇಲ್ಲದಿದ್ದರೂ ವಾತಾವರಣವು ಶೀತಲವಾಗಿದ್ದಿತು. "ಸೀತಕ್ ಸಕ್ತಿ ಉಡುಗೋದ್ಹಂಗೆ" ಎಂದು ಕವಿ ಹಾಡಿದಂತೆ ಅಲ್ಲಿಯ ಮುಂಜಾವಿನ ಚಳಿಗೂ, ಅಧೈರ್ಯದ ಒತ್ತಡಕ್ಕೂ, ನನ್ನ ಶಕ್ತಿ ಉಡುಗಿದಂತಾಗಿ ಬಿಟ್ಟಿತ್ತು. ಆದರೂ ತಂದೆಯವರ ಕಾಗದದಲ್ಲಿಯ ಮಾತುಗಳು ನನಗೆ ಸ್ಫೂರ್ತಿಯನ್ನು ತಂದುಕೊಟ್ಟವು. ಮೊದಲು ನನ್ನ ಬೀಗರ ಮನೆಗೆ ಹೋದೆ. ಪ್ರಾತರ್ವಿಧಿಗಳನ್ನು ಮುಗಿಸಿಕೊಂಡು ನಾನು ಬಂದ ಕಾರ್ಯವನ್ನು ವಿವರಿಸಿದೆ. ಶ್ರೀಮಾನ್ ಪಾವಟಿಯವರ ಮನೆಯನ್ನು ತೋರಿಸಿಕೊಡಲು ಅವರನ್ನು ಮುಂದೆ ಹಾಕಿಕೊಂಡು ಹೊರಟುಬಿಟ್ಟೆ.

ಮುಂಜಾನೆಯ ೯ ಗಂಟೆಯ ಸಮಯ ಸೇವಾಸದನಕ್ಕೆ ಬಸ್ಸು ಹತ್ತಿ ಡೆಕ್ಕನ್ ಜಮಖಾನೆಗೆ ಬಂದಿಳಿದೆವು. ಡೆಕ್ಕನ್ ಜಮಖಾನೆ ಶ್ರೀಮಂತರ ನಿವಾಸಸ್ಥಾನವು ಅದು ಕೆಲಮಟ್ಟಿಗೆ ಧಾರವಾಡದ ಮಾಳಮಡ್ಡಿಯನ್ನು ಹೋಲುತ್ತದೆನ್ನಬಹುದು. ಆದರೆ ಮಾಳ ಮರಡಿಯಂತೆ ಅಕ್ಕೊಂದು ಏರು ಪೇರುಗಳು ಅಲ್ಲಿರುವದಿಲ್ಲ. ನನ್ನ ಬೀಗರು ಶ್ರೀಮಾನ್ ಪಾವಟೆಯವರ ಮನೆಯನ್ನು ನೋಡಿದವರಾಗಿದ್ದರು. ಅವರು ಬೇಗ ಬೇಗ ನನ್ನನ್ನು ಅಲ್ಲಿಗೆ ಕರೆದೊಯ್ದರು ಪ್ರಶಾಂತವಾದ ಬೀದಿಯಲ್ಲಿಯ ಒಂದು ಮನೆಯ ಮುಂದೆ ತಂದು ನಿಲ್ಲಿಸಿ 'ಇದೇ ಅವರ ಮನೆ' ನೀವು ಹೋಗಿ ಬನ್ನಿ ನಾನು ಅಲ್ಲಿಯವರೆಗೆ ಆಚೆಗೆ ಕಾಣುವ ಗಿಡದಡಿಯಲ್ಲಿ ನಿಲ್ಲುವೆ" ಎಂದು ನಡೆದರು.

ಅವರ ಮನೆಯ ಅಂಗಳದಲ್ಲಿ ಕಾಲಿಡುತ್ತಲೇ ಎದೆ ಮತ್ತಷ್ಟು ಬಡಿದುಕೊಳ್ಳಲಾರಂಭಿಸಿತು. ಅದೇ ಸಂದರ್ಭದಲ್ಲಿ ನನ್ನೆದುರಿಗೆ ಮತ್ತೊಂದು ಸಮಸ್ಯೆಯುತ್ತೊಂದು ಬಂದು ನಿಂತಿತು. ಬಾಗಿಲಿನಲ್ಲಿ ಇದ್ದವರನ್ನು ಕನ್ನಡದಲ್ಲಿ ಮಾತನಾಡಿಸಬೇಕೇ? ಅಥವಾ ಮರಾಠಿಯಲ್ಲಿಯೋ? ಎಂಬ ಯೋಚನೆ. ನನಗೆ ಮರಾಠಿ ಅಷ್ಟು ಚೆನ್ನಾಗಿ ಮಾತನಾಡಲು ಬರುತ್ತಿರಲಿಲ್ಲ. ಕನ್ನಡದಲ್ಲಿ ಪ್ರಶ್ನಿಸಿದರೆ ಕನ್ನಡ ಬಾರದ ದ್ವಾರಪಾಲಕನಿದ್ದಲ್ಲಿ ಹೇಗೆ? ಎಂಬೀ ವಿಚಾರಗಳು ಕ್ಷಣಾರ್ಧದಲ್ಲಿ ಸುಳಿದು ಹೋದವು. ಅಷ್ಟರಲ್ಲಿಯೇ ಎಂಟೊಂಬತ್ತು ವರ್ಷದ ಬಾಲಿಕೆಯೋರ್ವಳು ಎದುರಿನಲ್ಲಿಯೇ ಬಂದು 'ಕೋಣ ಪಾಹಿಜೆ?" ಎಂದು ಕೇಳಿಯೇ ಬಿಟ್ಟಳು. ನನ್ನ ಹರಕು ಮುರುಕು ಮರಾಠಿಯಲ್ಲಿ ವ್ಯಾಕರಣ ದೋಷಗಳ ಭಯಕ್ಕೆ ಅಂಜುತ್ತ "ಪಾವಟೀ ಸಾಹೇಬ್ ಆಹೇ ಕಾಯ್ ಘರಾತ್! ಮೀ ಧಾರವಾಡಚೇ ಆಹೆ!" ಎಂದು ಉತ್ತರಿಸಿದೆ. ನನ್ನ ಮರಾಠಿ ಭಾಷೆಗೆ ನಾನೇ ಹೆಮ್ಮೆಪಟ್ಟುಕೊಂಡೆ ಪರೀಕ್ಷೆಯಲ್ಲಿ ಗೆದ್ದ ವೀರನಂತೆ. ಪಾಪ! ಆ ಮುಗ್ಧ ಬಾಲೆ ಏನೆಂದು ಬಗೆದಳೋ? ಅಂತೂ ಒಳಗೆ ಓಡಿದವಳೇ ಅಚ್ಚ ಕನ್ನಡದಲ್ಲಿ ನನಗೆ ಕೇಳಿಸುವಂತೆಯೇ 'ಧಾರವಾಡದವರು ಯಾರೋ ಬಂದಿದ್ದಾರೆ." ಎಂದು ಹೇಳಿದಳು. ಅವಳ ಮಾತುಗಳನ್ನು ಕೇಳಿ ನನಗೆ ತುಂಬಾ ಧೈರ್ಯಬಂದಿತಲ್ಲದೆ ಆನಂದ ತುಂದಿಲನಾದೆ. ಧಾರವಾಡದವರು ಎಂದೊಡನೆಯೇ ಶ್ರೀಮಾನ್ ಪಾವಟಿಯವರು 'ಯಾರು? 'ಏಕೆ?' ಎಂಬಯಾವ ಸಂಗತಿಗಳನ್ನೂ ವಿಚಾರಿಸದೆಯೇ ನೇರವಾಗಿ ಹೊರಬಂದರು. ಆಗ ಅವರ ಕೈಯಲ್ಲೊಂದು ಟಾವೆಲ್ ಇದ್ದಿತು. ಅದರಿಂದ ಮುಖವರಿಸಿಕೊಳ್ಳುತ್ತ ನಗುಮೊಗದಿಂದ ಹೊರಬಂದರು. ಅದುವೇ ನನ್ನ ಪ್ರಥಮ ದರ್ಶನವು. ಅವರ ವ್ಯಕ್ತಿತ್ವದ ಮಹೋನ್ನತಿಯ ಪರಿಣಾಮವು ಆಗಲೇ ನನ್ನ ಮೇಲಾಯ್ತು; ಮೌನವಾಗಿ ಮನದಲ್ಲಿಯೇ ಮಣಿದೆ. ಅವರ ಅಂದಿನ ಆ ರೂಪು, ನಗೆಮೊಗ, ಮನೆಗೆ ಬಂದವರನ್ನು ಬರಮಾಡಿಕೊಳ್ಳುವ ರೀತಿ ಇಂದಿಗೂ ನನ್ನ ಮನದ ಮೇಲೆ ಮೂಡಿ ನಿಂತಿವೆ. ಬಂದವರೇ 'ಬರ್ರಿ ಒಳಗೆ, ಯಾರು ನೀವು? ಏಕೆ ಬಂದಿರುವಿರಿ? ಎಂದು ಪ್ರಶ್ನಿಸಿದರು. ಹಾಗೆ ಪ್ರಶ್ನಿಸುತ್ತಲೇ ನನ್ನನ್ನು ಹಿಂಬಾಲಿಸಿಕೊಂಡೇ ಕೋಣೆಯಲ್ಲಿ ಪ್ರವೇಶಿಸಿ ಒಂದು ಖುರ್ಚಿಯ ಮೇಲೆ ಕುಳಿತುಕೊಂಡು ನನಗೂ ಇನ್ನೊಂದರಲ್ಲಿ ಕೂಡ್ರಲು ಹೇಳಿದರು. ನಾನು ದೂರದಲ್ಲಿ ನಿಂತುಕೊಂಡೇ ಮಾತನಾಡಲು ಯತ್ನಿಸಿದೆ. ಆದರೆ ಮೂರು ನಾಲ್ಕು ಸಲ ನನಗವರು ಕೂಡ್ರಲು ಹೇಳಿದುದರಿಂದ ಅನಿವಾರ್ಯವೆನಿಸಿ ಕುಳಿತುಕೊಂಡು ಸುಮಾರು ೧೦-೧೫ ನಿಮಿಷಗಳ ವರೆಗೆ ನನ್ನ ಪೂರ್ವಾಪರ ಪರಿಚಯವನ್ನು ನಾನೇ ಹೇಳಿಕೊಂಡು ಬಂದ ಉದ್ದೇಶ್ಯವನ್ನು

ವಿವರಿಸಿ ವಿಜ್ಞಾಪನೆಯನ್ನು ಮಾಡಿಕೊಂಡೆನು. ಶ್ರೀಮಾನ್ ಪಾವಟೆಯವರು ಶಾಂತ ಚಿತ್ತದಿಂದ ಎಲ್ಲವನ್ನೂ ಕೇಳಿಕೊಂಡು 'ಅರ್ಜಿಮಾಡಿರುವಿರಾ? ಹಾಗಾದರೆ ಸರಿಯಾಗಿ ೨ಗಂಟೆಗೆ ಆಫೀಸಿಗೆ ಬನ್ನಿ! ನೋಡಿ ಎಲ್ಲವನ್ನೂ ವಿಚಾರಿಸುವಾ" ಎಂದು ಹೇಳಿ ಮಾತು ಮುಗಿಸಿದರು. ಬೀಗರನ್ನು ಕೂಡಿಕೊಂಡೆ. ಮರಳಿ ಮನೆಗೆ ಬರಲು ಸನಿಹದಲ್ಲಿ ಬಸ್ಸು ಇಲ್ಲದ್ದರಿಂದ ನಡೆಯುತ್ತಲೇ ಸಾಗಿದೆವು. ದಾರಿಯುದ್ದಕ್ಕೂ ಶ್ರೀಮಾನ್ ಪಾವಟೆಯವರ ವ್ಯಕ್ತಿತ್ವವನ್ನು ಕುರಿತು ಮಾತನಾಡಿದೆವು. ನನ್ನ ಬೀಗರೂ ಅವರ ವಿಷಯದಲ್ಲಿ ಮಹಾರಾಷ್ಟ್ರೀಯ ಬಂಧುಗಳಿಂದ ಕೇಳಿ ತಿಳಿದ ಒಂದೆರಡು ಗುಣಗಳನ್ನು ವರ್ಣಿಸಿದರು. ಅವರು ಧಾರವಾಡದ ವಿಷಯದಲ್ಲಿ ತೋರಿದ ಪ್ರೀತಿ ಅಭಿಮಾನಗಳು ಅನುಕರಣೀಯವೆನಿಸಿದವು.

ಬೀಗರಲ್ಲಿ ಭೋಜನ ತೀರಿಸಿಕೊಂಡು ಒಂದುವರೆ ಗಂಟೆಗೇನೇ ಆಫೀಸಿಗೆ ಹೋದೆ. ಜವಾನನೊಬ್ಬನ ಕೂಡ ಚೀಟಿ ಕಳುಹಿ ಪ್ರವೇಶಕ್ಕೆ ಅನುಮತಿ ಕೋರಿದೆ. ಅರ್ಧ ತಾಸು ತಡೆಯಲು ಹೇಳಿ ಕಳುಹಿದರು. ಅವರ ಸಮಯ ನಿಷ್ಠೆಯನ್ನು ಆಗಲೇ ಸ್ಮರಿಸಿಕೊಂಡೆ. ಸರಿಯಾಗಿ ೨ ಗಂಟೆಗೆ " ಬೆಲ್ " ಬಾರಿಸಿ ನನಗೆ ಒಳಗೆ ಬರಲು ಹೇಳಿ ಕಳುಹಿದರು. ಅಷ್ಟರಲ್ಲಿ ಕರ್ಣಿಕರನ್ನು ಕರೆಯಿಸಿ ನನ್ನ ಅರ್ಜಿಯನ್ನು ತಮ್ಮ ಟೇಬಲ್ಲಿಗೆ ತರಿಸಿಕೊಂಡಿದ್ದರು. ಪಕ್ಕದಲ್ಲಿಯೇ ಡೆಪ್ಯೂಟಿ ಡೈರೆಕ್ಟರರಾದ ಶ್ರೀಮಾನ್ ನೂರುಲ್ಲಾರವರು ಆಶೀನರಾಗಿದ್ದರು. ಕರ್ಣಿಕರನ್ನು ಕರೆಯಿಸಿ ವಿದ್ಯಮಾನಗಳನ್ನು ತಿಳಿದುಕೊಂಡು ನೂರುಲ್ಲಾರವರನ್ನು ವಿಚಾರಿಸಿ ಸಾಧ್ಯವಿದ್ದುದನ್ನು ಮಾಡುವದಾಗಿ ಹೇಳಿದರು. ಅವರ ಧ್ವನಿಯಲ್ಲಿ ಆಶ್ವಾಸನದ ಸಂದೇಶವಿದ್ದಿತು. ನಿಂತಲ್ಲಿಯೇ, ಕೆಲಸದಲ್ಲಿಯ ಅವರ ಆಸ್ಥೆ, ಕಾರ್ಯತತ್ಪರತೆ, ಚಾಕಚಕ್ಯತೆ, ತರುಣರನ್ನು ನಾಚಿಸುವ ಉತ್ಸಾಹ ಆಡಳಿತದಲ್ಲಿಯ ಬಿಗುಹು, ದೂರದರ್ಶಿತ್ವ ಮೊದಲಾದ ಗುಣಗಳನ್ನು ಗುರುತಿಸಿಕೊಂಡೆ. ಹೊರಡುವ ಮುಂದೆ ನನಗೊಂದು ಮಾತು ಹೇಳಿದರು.

"ಮಿಸ್ಟರ ಜೋಶಿ, ಕಾಣಲು ನೀವು ಬಹಳ ಕೃಶವಾಗಿ ಕಾಣುವಿರಿ. ಇನ್ನೊಮ್ಮೆ ನೀವು ನನ್ನನ್ನು ಕಾಣುವದರೊಳಗಾಗಿ ನಿಮ್ಮ ತೂಕ ಕನಿಷ್ಠ ಹತ್ತು ಪೌಂಡುಗಳಷ್ಟಾದರೂ ಹೆಚ್ಚಾಗಿರಲೇಬೇಕು. ಅಂದರೇನೇ ನಾನು ನಿಮ್ಮನ್ನು ಈ ಖಾತೆಯಲ್ಲಿ ಇರಿಸಿಕೊಳ್ಳುವೆ; ಇರದಿದ್ದರೆ ನಿಮ್ಮನ್ನು ಕೆಲಸದಿಂದ ಮುಕ್ತ ಮಾಡುವೆ. ಬಿ. ಎ. ಪರೀಕ್ಷೆಗೆ ಸಂಸ್ಕೃತ ವಿಷಯವನ್ನು ತೆಗೆದು ಕೊಂಡಿರುವೆನೆಂದು ಹೇಳುವಿರಿ. ಓದಿಲ್ಲವೇ 'ಶರೀರಮಾದ್ಯಂ ಖಲುಧರ್ಮಸಾಧನಂ" ಎಂದು ಅವರ ವಾಣಿಯು ಪ್ರಭು ಸಮ್ಮಿತವಾಗಿರಲಿಲ್ಲ; ಅದರಲ್ಲಿ ತಂದೆಯ ಹಿತವಚನವಿದ್ದಿತು. ಅದರಿಂದ ನನಗೆ ಭಯವೆನಿಸಲಿಲ್ಲ. ನಗೆ ಬಂದಿತು. ನಕ್ಕೇಬಿಟ್ಟೆ. ಅದನ್ನು ಗುರುತಿಸಿದ ಶ್ರೀಮಾನ್ ಪಾವಟೆಯವರು ಮುಗ್ಗುಲಲ್ಲಿ ಕುಳಿತ ಶ್ರೀಮಾನ್ ನೂರುಲ್ಲಾರವರನ್ನು ಕುರಿತು "ನೋಡಿರಿ, " The young man laughs " ಎಂದು ಉದ್ಗಾರ ತೆಗೆದರು. ಕೈಮುಗಿದು ಹೊರಟು ಬಂದೆ.

ಮನೆಗೆ ಹಿಂದಿರುಗಲು ಬಸ್ಸಿಗಾಗಿ ಸಸೂನ್ ಹಾಸ್ಪಿಟಲ್ ಹತ್ತರ ಬಂದು ನಿಂತುಕೊಂಡೆ. ಜನರು ಬಹಳ ಇರದಿದ್ದರೂ ಚಿಕ್ಕ "ಕ್ಯೂ" ಒಂದು ಇದ್ದಿತು. ಅಲ್ಲಿಯೇ ಹೋಗಿ ನಾನು ನಿಂತು ಕೊಂಡೆ.

"ಕಾಯುವದರೊಳಗೂ ಸೊಗಸು ಉಂಟು" ಎಂದು ನಮ್ಮ ಗೊರೂರ ರಾಮಸ್ವಾಮಿಯವರು ಹೇಳುವಂತೆ ನಾನಲ್ಲಿ ಕಾಯುತ್ತ ನಿಂತ ಸಮಯದಲ್ಲಿ ನನಗೊಂದು ಸೊಗಸಾದ ಅನುಭವವು ಬಂದಿತು. ಕಾಯುತ್ತ ನಿಂತ ಈರ್ವರು ಸದ್ಗೃಹಸ್ಥರು ರಾಜ್ಯದ ಡಿ. ಪಿ. ಆಯ್. (ಶ್ರೀಮಾನ್ ಪಾವಟೆಯವರ ವಿಷಯದಲ್ಲಿ) ಅವರ ವಿಷಯದಲ್ಲಿ ಮಾತನಾಡುತ್ತಲಿದ್ದರು. ಕುತೂಹಲಿಯಾಗಿ ಅವರ ಮಾತುಗಳನ್ನು ಆಲಿಸಿದೆ. ಅವರು ತಮ್ಮ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದರು. "ಅವರು ಕನ್ನಡಿಗರಾದರೂ ಮಹಾರಾಷ್ಟ್ರೀಯರನ್ನೂ ಗುಜರಾಥಿಗಳನ್ನೂ ಸಮಭಾವದಿಂದ ಕಾಣುತ್ತಾರೆ. ಒಳ್ಳೇ ಚತುರ ಆಡಳಿತಗಾರರು" (Administrator) ಎಂದು ಮುಂತಾಗಿ ಹೇಳಿಕೊಳ್ಳುತ್ತಿದ್ದರು ಅವರ ಮಾತುಗಳನ್ನಾಲಿಸಿ ನನಗೆ ಒಳ್ಳೇ ಅಭಿಮಾನ ತುಂಬಿ ಬಂದಿತು. ಕನ್ನಡ ಪುತ್ರನು ಈ ತೆರನಾದ ಪ್ರಶಂಸೆಗೆ ಪಾತ್ರನಾದುದನ್ನು ಕೇಳಿ ಯಾವ ಕನ್ನಡಿಗನಿಗೆ ಆನಂದವಾಗಲಿಕ್ಕಿಲ್ಲ? ಬಸ್ಸು ಬಂದಿತು. ಅವರೊಡನೆಯೇ ಹತ್ತಿ ನಾನು ಸೇವಾ ಸದನಕ್ಕೆ ಇಳಿದೆನು. ದಾರಿಯುದ್ದಕ್ಕೂ ಆ ಈರ್ವರೂ ಅವರ ಗುಣಗಾನವನ್ನೇ ನಡೆಯಿಸಿದ್ದರು. ಅವರು ಮಹಾರಾಷ್ಟ್ರೀಯರೆಂಬ

ಸಂಗತಿಯ ಹೊರತು; ಅವರಾರೆಂಬುದು ನನಗೆ ತಿಳಿಯಲಿಲ್ಲ.

ಬೀಗರಿಂದ ನಿರೂಪಪಡೆದು ರಾತ್ರಿ ಗಾಡಿಗೆ ಬೆಳಗಾಂವಿಗೆ ಹೊರಟೆ. ದಾರಿಯುದ್ದಕ್ಕೂ ತಂದೆಯವರ ಪತ್ರದಲ್ಲಿಯ ‘ಪರಮಾರ್ದ್ರ ಹೃದಯಗಳು. ಬಡವರನ್ನು ಸಹಾನುಭೂತಿಯಿಂದ ಕಾಣುವವರು, ನ್ಯಾಯಪಕ್ಷಪಾತಿಗಳು” ಎಂಬ ಮಾತು ನೂರಕ್ಕೆ ನೂರರಷ್ಟು ಸತ್ಯವೆಂಬುದನ್ನು ನೆನೆಸಿಕೊಂಡೆ. ಗಾಡಿಯಿಂದ ಇಳಿಯುತ್ತಿರುವಂತೆಯೇ ಕಾಳಿದಾಸನ “ಲೇಸು ಒಳ್ಳೆವರ ಬೇಡಿಕೊಂಬುದೇ ವ್ಯರ್ಥವಾದರೂನೂ” ಎಂಬ ಉಕ್ತಿ ಸ್ಮೃತಿಪಥದಲ್ಲಿ ಪುನಃ ಹಾಯ್ದು ಹೋಯ್ತು. ಪಜ್ರಮಹೋತ್ಸವದ ಈ ಸಮಯದಲ್ಲಿ ಈ ಸ್ಮೃತಿ ಸುಮನೋಂಜಲಿಯನ್ನು ಭಕ್ತಿ ಭಾವದಿಂದ ತೆರೆದಿಟ್ಟಿದ್ದೇನೆ.

ಉಪಕುಲಗುರು ಡಾ. ಚಿ. ಪಾವಟೆ

ಲೇಖಕರು : ಶ್ರೀ ಎಸ್. ವ್ಹಿ. ಜೇವೂರ, ಎಮ್. ಇಡಿ., ಡಿ. ಡಿ. ಪಿ. ಆಯ್. ಧಾರವಾಡ



ರ್‍ಯಾಂಗ್ಲರ ಡಿ. ಸಿ. ಪಾವಟೆಯವರು ತಮ್ಮ ೬೦ನೆಯ ವಯಸ್ಸು ಮುಗಿಸಿದ್ದು ಅವರ ಷಷ್ಟ್ಯಬ್ದಿ ಸಮಾರಂಭವು ಡಾ. ರಾಜೇಂದ್ರ ಪ್ರಸಾದ ಅವರ ಅಧ್ಯಕ್ಷತೆಯಲ್ಲಿ ಒಳ್ಳೇ ವಿಜೃಂಭಣೆಯಿಂದ ಇದೇ ನವ್ಹಂಬರ ೭ ರಂದು ಕರ್ನಾಟಕ ವಿಶ್ವವಿದ್ಯಾಲಯದ ಪಟಾಂಗಣದಲ್ಲಿ ಜರುಗಿತು. ಅವರು ಸದ್ಯಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಗುರುಗಳಾಗಿ ವಿಶ್ವವಿದ್ಯಾಲಯದ ಪ್ರಗತಿಯನ್ನು ಭರದಿಂದ ಸಾಗಿಸುತ್ತಿದ್ದರೂ, ಅವರಿಗೆ ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ ಮತ್ತು ಸಮಾಜ ಶಿಕ್ಷಣ ಅಂದರೆ ಅಷ್ಟೇ ಮಮತೆ. ಶಿಕ್ಷಣದಲ್ಲಿಯೇ ಅವರು ತಮ್ಮ ಜೀವನದ ಹೆಚ್ಚಿನ ಸೇವೆ ಸಲ್ಲಿಸಿದ ಮೂಲಕ ಅವರಿಗೆ ಶಿಕ್ಷಣದ ಯಾವದೇ ಸಂಗಿತ ಬಹಳ ಒಲವಿನದು.

ಆದರ್ಶ ವಿದ್ಯಾರ್ಥಿ

ಬಡತನದಲ್ಲಿ ಬೆಳೆದು ಬಂದರೂ ಅವರಿಗೆ ಶಿಕ್ಷಣದಲ್ಲಿ ಸೇವೆ ಸಲ್ಲಿಸಬೇಕೆಂಬ ಅಭಿಲಾಷೆ ಮೊದಲಿನಿಂದಲೂ ಅಂಕುರಿಸಿ ಬಂದಿತ್ತು. ಅವರ ತಂದೆಯವರಿಗೆ ತಮ್ಮ ಚಿರಂಜೀವನು ಒಬ್ಬ ಶಾಲೆಯ ಗುರುವಾಗಿ ಬಿಟ್ಟರೆ ಸಾಕು ಎಂಬ ಅಭಿಲಾಷೆ ಇತ್ತೆಂದು ಅನ್ನುತ್ತಿದ್ದರು. ಸುದೈವದಿಂದ ಅವರ ತಂದೆಯವರು ಪರಲೋಕವಾಸಿಯಾಗುವ ಮೊದಲು ಡಾ. ಪಾವಟೆಯವರು ಇಡೀ ಹಳೆಯ ಮುಂಬಯಿ ರಾಜ್ಯದ ಸುಮಾರು ಅರ್ಧಲಕ್ಷಕ್ಕಿಂತ ಹೆಚ್ಚಾಗಿರುವ ಎಲ್ಲ ಪ್ರಾಥಮಿಕ ಶಿಕ್ಷಕರ ಮೇಲೂ (ಮಾಧ್ಯಮಿಕ ಮತ್ತು ಉಳಿದ ಶಿಕ್ಷಕರನ್ನು ಬಿಟ್ಟು) ಡಾಯರೆಕ್ಟರ ಆಫ್ ಎಜ್ಯುಕೇಶನ ಅಂದರೆ, ಎಲ್ಲಕ್ಕೂ ಹೆಚ್ಚಿನ ಗುರುವಾಗಿ ಇದ್ದದ್ದನ್ನು ನೋಡುವ ಸುಯೋಗವು ಅವರಿಗೆ ಒದಗಿತ್ತು. ಅವರೇ ಧನ್ಯರು ! ಅಂಥ ಹಿರಿಯರ ಸಾನ್ನಿಧ್ಯದಲ್ಲಿ ಬೆಳೆದು ತಮ್ಮ ವಿದ್ವತ್ತು, ನಮ್ರತನ, ಜಿಗುಟುತನ, ಕಷ್ಟಸಹಿಷ್ಣುತೆ ಮೊದಲಾದ ಉಚ್ಚಗುಣಗಳಿಂದ ಮಾಧ್ಯಮಿಕ ಶಿಕ್ಷಣವನ್ನು ಬೇರೆ ಬೇರೆ ಊರುಗಳಲ್ಲಿ ಮುಗಿಸಿದರು. ಅವರಿಗೆ ತಮ್ಮ ಮಾಧ್ಯಮಿಕ ಶಿಕ್ಷಣದ ಸಲುವಾಗಿ ಕೊಲ್ಹಾಪುರಕ್ಕೆ ಹೋಗಬೇಕಾಯಿತು. ಅಲ್ಲಿ ಮಾಧ್ಯಮ ವಿಶೇಷವಾಗಿ ಮರಾಠಿ ಇದ್ದರೂ, ಸಂಸ್ಕೃತದಲ್ಲಿ ತಮ್ಮ ವಿದ್ವತ್ತೆ ತೋರಿಸಿ ಶಿಷ್ಯವೃತ್ತಿಯನ್ನು ಪಡೆದದ್ದು ನೋಡಿದರೆ ಅವರಲ್ಲಿ ಬಡತನದಲ್ಲಿಯೂ ಮುಂದೆ ದುಡುಕಿ ಹೆಚ್ಚಿನ ಶಿಕ್ಷಣ ಪಡೆಯುವ ಹವಣಿಕೆ ಇತ್ತೆಂಬುದು ಸ್ಪಷ್ಟವಾಗುವದು. ಈಗಲಾದರೂ ಅವರು

ತಮ್ಮ ಹಿಂದಿನ ಕಷ್ಟದ ದಿನಗಳನ್ನು ಬಹಳೇ ತಮ್ಮ ಮನಸ್ಸಿಗ ಗದ್ಗದಿತ ಭಾವನೆಯಿಂದ ನೆನೆಯುತ್ತಾರೆ. ಅಂತೆಯೇ ಅವರಿಗೆ ಹಳ್ಳಿಯ ಬಡ ವಿದ್ಯಾರ್ಥಿಗಳೆಂದರೆ ಬಲು ಪ್ರೀತಿ. ಬಡತನದ ಬವಣೆಯಲ್ಲಿ ಶಿಷ್ಯವೃತ್ತಿಗಳಿಂದಲೇ ಅವರು ತಮ್ಮ ಉಜ್ವಲ ಭವಿತವ್ಯಕಟ್ಟಿಕೊಂಡರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಕರ್ನಾಟಕ ಕಾಲೇಜಿನಲ್ಲಿ ಇರುವಾಗಲೂ ಅವರಿಗೆ ಶಿಷ್ಯವೃತ್ತಿಯ ಸಹಾಯ ಸಿಗುತ್ತಿತ್ತು. ಅವರು ಬಿ. ಎ. ಪರೀಕ್ಷೆಯಲ್ಲಿ ಗಣಿತ ವಿಷಯದಲ್ಲಿ ಮೊದಲನೆಯ ವರ್ಗದಲ್ಲಿ ಮೊದಲನೆಯವರಾಗಿ ಕರ್ನಾಟಕ ಕಾಲೇಜಿನಿಂದ ಪಾಸಾದ ನಂತರ ಬೆಳಗಾಂವಿಯ ಶಿರಸಂಗಿ ಫಂಡಿನ ಸಹಾಯದಿಂದ ಹೆಚ್ಚಿನ ವಿದ್ಯಾಭ್ಯಾಸದ ಸಲುವಾಗಿ ಪರದೇಶಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿಯೂ ತಮ್ಮ ಕಾರ್ಯಕ್ಷಮತೆ ಮತ್ತು ವಿದ್ವತ್ತೆಯಿಂದ ರ್‍ಯಾಂಗಲರ ಪದವಿಯನ್ನು ಕೆಂಬ್ರಿಜ ವಿಶ್ವವಿದ್ಯಾಲಯದಲ್ಲಿ ಸಂಪಾದಿಸಿದರು. ಅವರ ವಿದ್ಯಾರ್ಥಿ ಜೀವನ ಹೀಗೆ ಕಷ್ಟದಲ್ಲಿ ಒಂದು ಧ್ಯೇಯವನ್ನು ಮುಟ್ಟಿದ ನೀಳ್ಗತೆಯಾಗಿದೆ.

ದಕ್ಷ ಆಡಳಿತಗಾರರು ಮತ್ತು ಸಲಹೆಗಾರರು

ಪರದೇಶದಿಂದ ತಿರುಗಿ ಬಂದಮೇಲೆ ಅವರಿಗೆ ಬೆಳಗಾಂವಿಯಲ್ಲಿ ಕರ್ನಾಟಕ ಲಿಬರಲ್ ಏಜ್ಯುಕೇಶನ ಸೊಸಾಯಿಟಿಯವರು ಆರಂಭಮಾಡುವ ಕಾಲೇಜಿನ ಪ್ರಿನ್ಸಿಪಾಲರಾಗುವ ವಿಚಾರವಿತ್ತು. ಆದರೆ ಅದು ಸಂಭವಿಸಲಿಲ್ಲಾದ ಮೂಲಕ ಬನಾರಸ ಹಿಂದೂ ವಿಶ್ವವಿದ್ಯಾಲಯದ ಗಣಿತ ವಿಭಾಗದ ಪ್ರಾಧ್ಯಾಪಕನಾಗಿ ಅಲ್ಲಿ ಸೇವೆ ಆರಂಭಮಾಡಿದರು. ಮುಂದೆ ಅಲ್ಲಿಂದ ಮುಂಬಯಿ ರಾಜ್ಯಕ್ಕೆ ಮುಂಬಯಿ–ಸಿಂಧ ಪಬ್ಲಿಕ ಸರ್ವಿಸದ ಮುಖಾಂತರ ಮೊದಲನೆಯ ವರ್ಗದ ಶಿಕ್ಷಣಾಧಿಕಾರಿಗಳೆಂದು ಬಂದರು. ಕ್ರಮೇಣ ಅವರು ಒಂದು ಹಂತಿನಿಂದ ಮತ್ತೊಂದು ಹಂತಕ್ಕೆ ತಮ್ಮ ದಕ್ಷ ಮತ್ತು ಧೂರ್ತ ವಿಚಾರದಿಂದ ಏರಿದರು. ೧೯೩೭ ನೆಯ ಇಸ್ವಿಯಲ್ಲಿ ಕಾಂಗ್ರೆಸ ಸರಕಾರದವರು ಅಧಿಕಾರದಲ್ಲಿ ಬಂದ ಮೇಲೆ ಅವರು ತಮ್ಮ ಎಷ್ಟೋ ಯೋಜನೆಗಳನ್ನು ದಿ. ಬಿ. ಜಿ. ಖೇರ, ದಿ. ಅಣ್ಣಾಸಾಹೇಬ ಲಠ್ಠೆ ಮೊದಲಾದ ಮಂತ್ರಿಗಳ ಮುಂದೆ ಮಂಡಿಸಿ ಶಿಕ್ಷಣದ ಸರ್ವತೋಮುಖ ಪ್ರಗತಿಯನ್ನು ಸಾಧಿಸಲಿಕ್ಕೆ ಹೆಣಗಿದರು. ಮುಂದೆ ಕೆಲವು ವರ್ಷಗಳಲ್ಲಿಯೇ ಡಾಯರೆಕ್ಟರ ಆಫ್ ಪಬ್ಲಿಕ ಇನ್‌ಸ್ಟ್ರಕ್ಶನ್ ಎಂಬ ಎಲ್ಲಕ್ಕಿಂತಲೂ ಹೆಚ್ಚಿನ ಪದವಿಗೆ ಏರಿದರು.

ಅವರ ಅಧಿಕಾರದ ಅವಧಿಯಲ್ಲಿ ಹಳೆಯ ಮುಂಬಯಿ ರಾಜ್ಯದಲ್ಲಿ ಎಷ್ಟೋ ಸುಧಾರಣೆಗಳು ಆಗಿ, ಶಿಕ್ಷಣಖಾತೆಯು ಒಂದು ಶಿಸ್ತಿನ ಮತ್ತು ಪ್ರಗತಿಪರ ಪರಂಪರೆಯನ್ನು ಬೆಳಿಸಿಕೊಂಡು ಬಂದಿತು. ಸ್ವತಃ ಬಹಳೇ ದುಡಿಯುವವರಿದ್ದ ಮೂಲಕ ಬೇರೆಯವರಿಗೆ ಕೆಲಸ ಮಾಡಲು ಅವರು ಪ್ರೋತ್ಸಾಹಕರಾಗಿದ್ದರು. ಯೋಗ್ಯವಾದದ್ದಕ್ಕೆ ಯೋಗ್ಯ ಅನ್ನುವ ಅವರ ಗುಣ ಎಲ್ಲರ ಪ್ರೀತಿ ಸಂಪಾದಿಸಿತು. ಪುಣೆಯ ಡಾಯರೆಕ್ಟರರ ಕಚೇರಿಯಲ್ಲಿಯ ಸಾವಿರಾರು ದಪ್ತರದ ಕಾಗದಗಳೆಲ್ಲ ಅವರಿಗೆ ಪೂರ್ಣಗೊತ್ತಿದ್ದವು. ಒಮ್ಮೊಮ್ಮೆ ಸರಕಾರಕ್ಕೆ ಕಳಿಸುವ ಮಹತ್ವದ ಕಾಗದಗಳನ್ನು ಯಾವದೇ ಹಿಂದಿನ ಕಾಗದಗಳನ್ನು ನೋಡದೇ, ಹಾಗೇ ತಮ್ಮ ಜ್ಞಾಪಕಶಕ್ತಿಯಿಂದ ಸಂಕ್ಷಿಪ್ತವಾಗಿ ಬರೆಯುವವನಿಗೆ ಬರೆದುಕೊಳ್ಳಲಿಕ್ಕೆ ಹೇಳುತ್ತಿದ್ದರು. ನಿಸ್ಪೃಹರು, ನಿಷ್ಪಕ್ಷಪಾತಿಗಳು, ಅವಶ್ಯವಿದ್ದಾಗ ಶಿಸ್ತಿಗಾಗಿ ಕಠೋರರು. ವಿಶಾಲ ದೃಷ್ಟಿಯವರು, ಕೋಮಲ ಹೃದಯರು, ಮುಚ್ಚುಮರೆ ಮಾಡದವರು, ಎಂದು ಮುಂತಾಗಿ ಹೆಸರು ಗಳಿಸಿಕೊಂಡರು. ಅವರ ಕಾರ್ಯಕ್ಷಮತೆ ಮತ್ತು ಸರಳ ಹೃದಯ ಕನ್ನಡ ಪ್ರಸಿದ್ಧ ಕವಿಗಳು ತಮ್ಮ ವರ್ಧಂತಿ ಉತ್ಸವದ ಕಾಲಕ್ಕೆ ಅಂದ ಮಾತುಗಳಿಂದ ಹೊಳೆಯದಿರಲಾರವು. ಬೇಂದ್ರೆಯವರು ಅಂದಿನ ಸಮಾರಂಭದಲ್ಲಿ ಅಂದಿದ್ದೇನಂದರೆ-ನಾವು ಒಂದು ಕೆಲಸದ ಸಲುವಾಗಿ ಡಾ. ಪಾವಟೆಯವರ ಹತ್ತರ ಹೋದ ಕಾಲಕ್ಕೆ ಅವರು ತಾವು ಪೂಜಾರಿಗಳು, ಮೇಲಿಂದ ವರ ಸಿಕ್ಕರೆ ದಯಪಾಲಿಸುವವರು ಎಂದು ಹೇಳಿ ತಮ್ಮ ವಿನಯ ಮತ್ತು ಕಳಕಳಿಯ ಮಾತುಗಳಿಂದ ಬೇಂದ್ರೆಯವರನ್ನು ಮುಗ್ಧರನ್ನಾಗಿ ಮಾಡಿದರೆಂದು ನೆನೆದುಕೊಳ್ಳುತ್ತಾರೆ. ಶ್ರೀ ಪಾವಟೆಯವರು ಡಾಯರೆಕ್ಟರರಿರುವಾಗಲೇ ಒತ್ತಾಯದ ಪ್ರಾಥಮಿಕ ಶಿಕ್ಷಣ, ಸಮಾಜ ಶಿಕ್ಷಣ, ಮೂಲ ಶಿಕ್ಷಣ, ತಾಂತ್ರಿಕ ಶಿಕ್ಷಣ, ಎಸ್. ಎಸ್. ಸಿ, ಬೋರ್ಡ, ಪ್ರಾದೇಶಿಕ ವಿಶ್ವವಿದ್ಯಾಲಯಗಳು ಮೊದಲಾದ ಪ್ರಗತಿಪರ ಸಂಗತಿಗಳು ಮುಂಬಯಿ ರಾಜ್ಯದಲ್ಲಿ ಕಾರ್ಯಗತವಾದವು, ಸ್ವಾತಂತ್ರ್ಯ ಸಿಕ್ಕ ಮೇಲೆ ನಮ್ಮ ನಾಡಿನ ಧುರೀಣರು ಶಿಕ್ಷಣದಲ್ಲಿ ಮತ್ತು ಶಿಕ್ಷಣದ ಮುಖಾಂತರ ಮಾಡಬೇಕಾದ ಎಲ್ಲ ಸುಧಾರಣೆಗಳನ್ನು ಜಾರಿಯಲ್ಲಿ ತರಲು ಶ್ರೀ ಪಾವಟೆಯ

ವರು ತಮ್ಮ ಅಮೋಘ ಸೇವೆ ಮುಂಬಯಿ ರಾಜ್ಯದಲ್ಲಿ ಸಲ್ಲಿಸಿವರು. ಈಗಲೂ ಸಲ್ಲಿಸುತಲಿದ್ದಾರೆ.

ಶಿಕ್ಷಣ ತಜ್ಞರು

ಇಷ್ಟೆಲ್ಲ ಕೆಲಸವಿದ್ದರೂ ಅವರು ತಮ್ಮ ಗಣಿತ ವಿಷಯದ ಅಭ್ಯಾಸ ಕಡೆಗಣಿಸಿಕೊಳ್ಳಲಿಲ್ಲ. ವೇಳೆ ಸಿಕ್ಕಾಗೆಲ್ಲ ಅವರು ಅದು ಒಂದು ಮನಸ್ಸಿನ ಬೇಜಾರ ಕಳೆದುಕೊಳ್ಳುವ ವ್ಯಾಸಂಗ ಎಂದು ಅದರಲ್ಲಿ ಅವರು ಮಗ್ನರಾಗುತ್ತಿದ್ದರು. ವಿದ್ವತ್‌ಪೂರ್ಣವಾದ ವಿಚಾರ ಅದರ ಬಗೆಗೆ ಮಾಡಿರುವರಲ್ಲದೆ ಗಣಿತ ವಿಷಯದಲ್ಲಿ ಎಷ್ಟೋ ಪಠ್ಯಪುಸ್ತಕಗಳನ್ನು ಬರೆದಿದ್ದಾರೆ. ಈ ಪಠ್ಯಪುಸ್ತಕಗಳು ಹಿಂದುಸ್ತಾನದ ಬಹುತರ ಎಲ್ಲ ಭಾಷೆಗಳಲ್ಲಿದ್ದು ಪ್ರಾಥಮಿಕ ಶಾಲೆಗಳಿಂದ ವಿಶ್ವವಿದ್ಯಾಲಯದ ಸಂಸ್ಥೆಗಳ ವರೆಗೆ ಉಪಯೋಗಿಸಲ್ಪಡುತ್ತವೆ. ಶಿಕ್ಷಣದ ಮೇಲೆ ಅವರ ಬರೆಹಗಳು ಮೇಲಿಂದ ಮೇಲೆ ಪ್ರಸಿದ್ಧ ನಿಯತಕಾಲಿಕೆಗಳಲ್ಲಿ ಪ್ರಸಿದ್ಧವಾಗುತ್ತಲಿವೆ. ಜಿನೀವಾದಲ್ಲಿ ಕೂಡಿದ ಶಿಕ್ಷಣ ತಜ್ಞರ ಅಧಿವೇಶನಕ್ಕೆ ಮತ್ತು ಸಂಯುಕ್ತ ಸಂಸ್ಥಾನಗಳಿಗೆ ವಿಶ್ವವಿದ್ಯಾಲಯಗಳ ಸಂದರ್ಶನಕ್ಕಾಗಿ ಅವರು ಕೆಲವು ತಿಂಗಳುಗಳ ಹಿಂದೆ ಹೋಗಿದ್ದರು.

ಜೀವನ ಶಿಕ್ಷಣದ ಬಗೆಗೆ ಹೇಳುವದಾದರೆ ತಮ್ಮ ಕೃತಿಯಿಂದ ಎಷ್ಟೋ ಜೀವನ ಶಿಕ್ಷಣದ ತತ್ವಗಳನ್ನು ರೂಢಿಯಲ್ಲಿ ತಂದಿದ್ದಾರೆ. ಯಾವದೇ ಕೈಕೆಲಸ ಅಥವಾ ದೇಹ ಶ್ರಮದ ಚಟುವಟಿಕೆ ಎಂದರೆ ಅವರು ಮೂಗು ಮುರಿಯುವದಿಲ್ಲ. ಪ್ರತಿ ದಿನ ಮುಂಜಾನೆ ಮತ್ತು ಸಂಜೆಗೆ ನಿಸರ್ಗದಲ್ಲಿ ತಿರುಗಾಡುವ ರೂಢಿ ಅವರಿಗೆ ಮೊದಲಿನಿಂದಲೂ ಇರುವದು. ರಜೆಯ ದಿನಗಳಲ್ಲಿ ತಮ್ಮ ಸ್ವಗ್ರಾಮವಾದ ಮಮದಾಪುರಕ್ಕೆ ಹೋದಾಗ್ಗೆ ಅವರು ತಮ್ಮ ಹೊಲದಲ್ಲಿ ಕೆಲಸ ಮಾಡಲು ಹಿಂಜರಿಯುವದಿಲ್ಲ. ತಾವು ಕೇಂಬ್ರಿಜ್‌ದಿಂದ ತಿರುಗುವ ಕಾಲಕ್ಕೆ ಅವರಿಗೆ ಘಟಿಸಿದ ಒಂದು ಪ್ರಸಂಗವು ಅವರ ನೆನಪಿನಲ್ಲಿ ಚೆನ್ನಾಗಿದೆ. ಸಾಮಾನುಗಳನ್ನು ಗಾಡಿಗೆ ಒಯ್ಯಲು ಯಾವ ಕೂಲಿ ಮಾಡುವವ ಸಮೀಪದಲ್ಲಿ ಇಲ್ಲದ್ದು ನೋಡಿ ಅಲ್ಲಿಯೇ ಇದ್ದ ಕೇಂಬ್ರಿಜ್ ವಿಶ್ವವಿದ್ಯಾಲಯದ ಉಪಕುಲಗುರುಗಳು ಮುಂದೆ ಬಂದು ಸ್ವತಃ ಸಾಮಾನು ಒಯ್ದದ್ದು ಒಳ್ಳೇ ಆತ್ಮೀಯತೆಯಿಂದ ಅವರು ಹೇಳುತ್ತಾರೆ. ಅವರ ಬಗೆಗೆ ಅವರಿಗೆ ಬಹಳ ಗೌರವವಿದೆ. ನಿರುತ್ಸಾಹಿ ಮತ್ತು ಹಿಂಜರಿಯುವ ಜನರನ್ನು ನೋಡಿದರೆ ಅವರಿಗೆ ಆಗದು. ಅವರ ಜೀವನ ಬಹಳ ಸಾದಾ ಇದ್ದು ಆಡಂಬರರಹಿತವಾಗಿರುವದು.

ಉತ್ತರ ಕರ್ನಾಟಕದಲ್ಲಿ ಶಿಕ್ಷಣದ ಸೇವೆಗಾಗಿ ದುಡಿದವರಲ್ಲಿ ಶ್ರೀ ಪಾವಟೆಯವರ ಸ್ಥಾನ ಬಹಳ ಮೇಲಿನದು ಇರುವದು. ಅವರು ಕಾಲ ಕಾಲಕ್ಕೆ ಸಿಕ್ಕ ಹೆಚ್ಚಿನ ಸ್ಥಾನದೊಂದಿಗೆ ವಿದ್ವತ್ತೆ, ಪರಿಶ್ರಮ ವಹಿಸುವ ಗುಣ, ಸದ್ಭಾವನೆ, ಕೆಲಸ ಮಾಡುವ ಕಳಕಳಿ ಇವೆಲ್ಲವುಗಳನ್ನು ಜೋಡಣೆಯಾಗಿ ಇಟ್ಟುಕೊಂಡಿದ್ದಾರೆ. ಎಲ್ಲ ಜನರ ಕೂಡ ಜಾತಿ-ಮತ-ಪಂಥ ಭೇದವಿಲ್ಲದೆ ನಡೆದುಕೊಂಡು ಎಲ್ಲರ ಆದರ್ಶಕ್ಕೆ ಪಾತ್ರರಾಗಿದ್ದಾರೆ. ಅಂತೆಯೇ ಅಂತರ ವಿಶ್ವವಿದ್ಯಾಲಯಗಳ ಮಂಡಲಿಯ ಅಧ್ಯಕ್ಷರೆಂದು ಮತ್ತು ನಾನಾ ರಾಷ್ಟ್ರೀಯ ಸಂಸ್ಥೆಗಳ ಸಭಾಸದರೆಂದು ಕೆಲಸ ಮಾಡುತ್ತಲಿದ್ದಾರೆ. ಉತ್ತರ ಕರ್ನಾಟಕಕ್ಕೆ ಬಂದ ಬಹುತರ ಎಲ್ಲ ಜಗದ್ವಿಖ್ಯಾತ ಮಹನೀಯರು ವಿಶ್ವವಿದ್ಯಾಲಯಕ್ಕೆ ಸಂದರ್ಶನವಿತ್ತು ಸಂತೋಷ ವ್ಯಕ್ತ ಮಾಡುತ್ತಾರೆ. ಶ್ರೀ ಪಾವಟೆಯವರ ವಿಚಾರಶಕ್ತಿ, ಅನುಭವ, ಮತ್ತು ಸಹೃದಯತೆ ಇನ್ನೂ ಅವರಿಂದ ಎಷ್ಟು ಸಾಧ್ಯವೋ ಅಷ್ಟು ದೇಶದ ಪ್ರಗತಿಗಾಗಿ ಅತ್ಯವಶ್ಯವಾಗಿ ಬೇಕಾಗಿವೆ. ಸದ್ಯದ ಸಂಧಿಕಾಲದಲ್ಲಂತೂ ಇಂಥ ಮಹನೀಯರಿಂದಲೇ ನಮ್ಮ ಭವಿತವ್ಯ ಹೆಚ್ಚು ಉಜ್ವಲವಾಗಬೇಕಾಗಿದೆ. ಇವೆಲ್ಲವುಗಳು ಅವರ ಮುಂದಿನ ದೀರ್ಘಕಾಲದ ಮತ್ತು ಆರೋಗ್ಯದ ಜೀವನದಿಂದ ಇನ್ನೂ ಹೆಚ್ಚಾಗಿ ದೊರೆಯಲೆಂದು ಪ್ರಾರ್ಥಿಸಿದರೆ ಸರ್ವರ ಪ್ರಾರ್ಥನೆಯೊಂದಿಗೆ ನಾವೂ ಧ್ವನಿಗೂಡಿಸಿದಂತೆ ಆಗುವದರಲ್ಲಿ ಸಂದೇಹವಿಲ್ಲ.

— ಬಿನ್ನಹ —

ಪ್ರತಿ ತಿಂಗಳ ೧೫ ನೆಯ ದಿನಾಂಕಕ್ಕೆ "ಜೀವನ ಶಿಕ್ಷಣ" ಪತ್ರಿಕೆಯ ಸಂಚಿಕೆಗಳನ್ನು ನಿಮ್ಮ ನಿಮ್ಮ ವಿಳಾಸಕ್ಕೆ ಕಳುಹಿಸಲಾಗುತ್ತಿದೆ. ಇದರಲ್ಲಿ ಏನೂ ವ್ಯತ್ಯಯ ಬರಲಾರದು. ಹೀಗಿದ್ದೂ ಪತ್ರಿಕೆಗಳು ನಿಮಗೆ ತಲುಪದಿದ್ದಲ್ಲಿ ಸ್ಥಳಿಕ ಅಂಚೆ ಅಧಿಕಾರಿಗಳಿಗೆ ತಪ್ಪದೇ ಬರೆದುಕೊಳ್ಳಬೇಕು.

—ಪ್ರಧಾನ ಸಂಪಾದಕರು

ಶಿಕ್ಷಣತಜ್ಞ ಶ್ರೀ ಪಾವಟೆಯವರು

ಲೇಖಕರು: ಶ್ರೀ ಎಂ. ಜಿ. ಹಂದ್ರಾಳ, ಬಿ. ಎ. (ಆನರ್ಸ) ಎಂ. ಎಡ್., ಇ. ಆಯ್. ಧಾರವಾಡ.

ಹೀಚಿನ ಗುಣವನ್ನು ಮೊಳಕೆಯಲ್ಲಿಯೇ ನೋಡು ಎನ್ನುವಂತೆ ಶಿಕ್ಷಣದ ಬಗ್ಗೆ ಆಸ್ಥೆ, ಅಭಿರುಚಿ ಹಾಗೂ ಪಾಂಡಿತ್ಯಗಳು ಶ್ರೀ ಪಾವಟೆಯವರಲ್ಲಿ ಅವರು ಚಿಕ್ಕವರಿರುವಾಗಲೇ ಕಂಡು ಬರುತ್ತಿದ್ದವು. ಅವರು ಹುಟ್ಟೂರಾದ ಮಮದಾಪುರದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಆರಂಭಿಸಿ, ರಬಕವಿ ಮತ್ತು ಗೋಕಾಕ ಮಾಧ್ಯಮಿಕ ಶಾಲೆಗಳಲ್ಲಿ ಶಿಕ್ಷಣವನ್ನು ಮುಂದುವರಿಸಿ, ಕೊಲ್ಹಾಪೂರ ರಾಜಾರಾಮ ಹಾಯಸ್ಕೂಲಿನಲ್ಲಿ ೫ನೇ ಇಯತ್ತೆ (ಇಂದಿನ ೯ನೆಯ ವರ್ಗ) ಸೇರಿ ಷಾಣ್ಮಾಸಿಕ ಪರೀಕ್ಷೆಯಲ್ಲಿ ೧೨೦ ವಿದ್ಯಾರ್ಥಿಗಳಲ್ಲಿ ಎರಡನೆಯವರಾಗಿ ಉತ್ತೀರ್ಣರಾದರು. ಮರುವರುಷ ವಾರ್ಷಿಕ ಪರೀಕ್ಷೆಯಲ್ಲಿ ಮೇಲ್ನಂಬರು ಪಡೆದು ಗುಣಾನುಕ್ರಮ ಶಿಷ್ಯವೃತ್ತಿಯನ್ನು ದೊರಕಿಸಿದರು. ಹಾಯಸ್ಕೂಲಿನಲ್ಲಿ ಇಂಗ್ಲೀಷ, ಸಂಸ್ಕೃತ, ಗಣಿತ ವಿಷಯುಗಳಲ್ಲಿ ಇವರದು ಮೇಲುಗೈಯಾಗಿತ್ತು. ಸಂಸ್ಕೃತ ವ್ಯಾಕರಣದಲ್ಲಿ ೪೦ಕ್ಕೆ ೪೦ ಗುಣಗಳನ್ನೇ ಅವರು ಪಡೆಯುತ್ತಿದ್ದರು. ತಮ್ಮ ಹದಿನಾಲ್ಕನೆಯ ವಯಸ್ಸಿನ ಮೊದಲು ಕನ್ನಡದಲ್ಲಿ ಕವನಗಳನ್ನು ರಚಿಸಲು ಯತ್ನಿಸುತ್ತಿದ್ದರು.

೧೯೧೯ರಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಇಡೀ ವಿಶ್ವವಿದ್ಯಾಲಯಕ್ಕೆ ಆರನೆಯವರಾಗಿ, ಧಾರವಾಡ ಕೇಂದ್ರಕ್ಕೆ ಮೊದಲಿಗರಾಗಿ ಉತ್ತೀರ್ಣರಾಗಿ ಧಾರವಾಡದಲ್ಲಿಯ ಕರ್ನಾಟಕ ಕಾಲೇಜನ್ನು ಸೇರಿದರು. ಕಾಲೇಜದ ಎಲ್ಲ ಪರೀಕ್ಷೆಗಳಲ್ಲಿ ಅವರು ಮೊದಲಿಗರಾಗಿಯೇ ಉತ್ತೀರ್ಣರಾಗುತ್ತಿದ್ದರು. ಕಾಲೇಜದ ಶಿಷ್ಯವೃತ್ತಿಗಳು ಹಾಗೂ ಶಿರಸಂಗಿ ಶಿಷ್ಯವೃತ್ತಿಯೂ ಇವರಿಗೆ ದೊರೆಯುತ್ತಲೇ ಇದ್ದವು. ಇಂಟರ ಮೀಡಿಯೇಟ ಪರೀಕ್ಷೆಯಲ್ಲಿ ಇವರು ಗಣಿತ ವಿಷಯದಲ್ಲಿ ಇಡೀ ವಿಶ್ವವಿದ್ಯಾಲಯಕ್ಕೇ ಪ್ರಥಮ ಸ್ಥಾನ ಪಡೆದರು. ಮುಂದೆ ಇದೇ ವಿಷಯವನ್ನು ತೆಗೆದುಕೊಂಡು ೧೯೨೩ರಲ್ಲಿ ಬಿ. ಎ. ಪರೀಕ್ಷೆಯಲ್ಲಿ ಮೊದಲನೆ ವರ್ಗದಲ್ಲಿ ಉತ್ತೀರ್ಣರಾದರು, ಆ ವರುಷ ಗಣಿತ ವಿಷಯದಲ್ಲಿ ಮೊದಲನೇ ವರ್ಗದಲ್ಲಿ ಪಾಸಾದವರು ಇವರೊಬ್ಬರೇ, ಕರ್ನಾಟಕ ಕಾಲೇಜ ಸ್ಥಾಪನೆಯಾದಂದಿನಿಂದ ಮೊದಲನೆಯ ವರ್ಗದಲ್ಲಿ ಈ ವರೆಗೆ ಯಾರೂ ತೇರ್ಗಡೆಯಾಗಿರಲಿಲ್ಲ. ಇವರೇ ಮೊದಲಿಗರಾಗಿದ್ದರು. ಕರ್ನಾಟಕ ಕಾಲೇಜ ಚರಿತ್ರೆಯಲ್ಲಿಯೇ ಹೊಸ ಹೆಜ್ಜೆಯನ್ನು ಹಾಕಿ, ಪ್ರತಿಭಾನ್ವಿತ ವಿದ್ಯಾರ್ಥಿಯೆಂದು ಹೆಸರಾದರು.

ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕೆಂಬ್ರಿಜ್‌ಕ್ಕೆ ಹೋದ ಮೇಲೆ ಸಹ ಮೊದಲನೆಯ ವರ್ಗವು ಇವರಿಗೇನೇ ಮೀಸಲಾಗಿತ್ತು. ೧೯೨೬ ರಲ್ಲಿ ಅಂತರ್ ಕಾಲೇಜ ಪರೀಕ್ಷೆಯಲ್ಲಿ ಮೊದಲನೆಯ ವರ್ಗದಲ್ಲಿ ಉಚ್ಚ ಸ್ಥಾನ ದೊರಕಿಸಿದ ಇವರು ೧೯೨೭ ರಲ್ಲಿ ಗಣಿತ ಟ್ರೈಪಾಸ ದ್ವಿತೀಯ ಭಾಗದಲ್ಲಿ ಮೊದಲನೆಯ ವರ್ಗದಲ್ಲಿ ಪ್ರಶಸ್ತಿಯೊಂದಿಗೆ ಉತ್ತೀರ್ಣರಾಗಿ ೧೦೦ ಪೌಂಡುಗಳ ಸಂಶೋಧನ ಶಿಷ್ಯವೃತ್ತಿಯನ್ನು ದೊರಕಿಸಿದರು. ಹೀಗೆ ಶ್ರೀ ಪಾವಟೆಯವರು ವಿದ್ಯಾರ್ಥಿಯಾಗಿದ್ದಾಗಲೇ ಅಸಾಧಾರಣ ಬುದ್ಧಿಮತ್ತೆಯನ್ನು ಪಡೆದಿದ್ದರು. ಅದಕ್ಕೆ ಒಪ್ಪವನ್ನಿಟ್ಟಂತೆ ಸತತ ಅಭ್ಯಾಸ, ಸಾದಾಜೀವನ, ಪರಿಶ್ರಮಗಳಿಂದ ವಿದ್ಯಾರ್ಥಿ ಜೀವನದಲ್ಲಿ ಪ್ರಥಮ ಸ್ಥಾನ ಪಡೆಯುತ್ತ ತಾವು ಕಲಿತ ವಿದ್ಯಾ ಸಂಸ್ಥೆಗಳಿಗೆ ಕೀರ್ತಿಯನ್ನು ತಂದು ಕೊಟ್ಟರು.

೧೯೨೮ ರಲ್ಲಿ ಕೆಂಬ್ರಿಜ್‌ದಿಂದ ಭಾರತಕ್ಕೆ ಮರಳಿ ಬಂದನಂತರ ಶ್ರೀ ಪಾವಟೆಯವರು ಬನಾರಸ ಹಿಂದೂ

ವಿಶ್ವವಿದ್ಯಾಲಯದಲ್ಲಿ ಗಣಿತದ ಪ್ರಾಧ್ಯಾಪಕರೆಂದು ಸೇರಿದರು. ಅಲ್ಲಿ ಅವರು ಗಣಿತದ ಅಭ್ಯಾಸ ಪತ್ರಿಕೆಯನ್ನು ಸಂಪೂರ್ಣವಾಗಿ ಸುಧಾರಿಸಿದರು. ಇವರ ಕಲಿಸುವ ಕಲೆ, ಆಳವಾದ ಅಭ್ಯಾಸ, ಗಣಿತ ವಿಷಯದಲ್ಲಿದ್ದ ಪಾಂಡಿತ್ಯ ಇವುಗಳನ್ನು ಕಂಡುಂಡ ಪಂಡಿತ ಮದನಮೋಹನ ಮಾಲವಿಯಾ ಅವರು ಇವರನ್ನು ತುಂಬಾ ಮೆಚ್ಚಿಕೊಂಡಿದ್ದರು. ಬನಾರಸದಲ್ಲಿದ್ದಾಗಲೇ ಇವರು ಎಲಿಮೆಂಟ್ಸ ಆಫ್ ಕ್ಯಾಲಕ್ಯುಲಸ್ (Alements of calculus) ಎಂಬ ಶ್ರೇಷ್ಠ ಗಣಿತ ಹೊತ್ತಿಗೆಯನ್ನು ಬರೆದಿದ್ದಾರೆ. ಬಹುತರವಾಗಿ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಇಂಟರ ಕ್ಲಾಸಿಗೆ ಪಠ್ಯ ಪುಸ್ತಕವಾಗಿ ಉಪಯೋಗಿಸಲ್ಪಡುತ್ತಿದೆ.

೧೯೩೧ರಲ್ಲಿ ಮುಂಬಯಿ ಸರಕಾರದವರು ಇವರನ್ನು ಶಿಕ್ಷಣ ಖಾತೆಯಲ್ಲಿ ಪ್ರಥಮ ದರ್ಜೆಯ ಅಧಿಕಾರಿಯನ್ನಾಗಿ ಮುಂಬಯಿ ವಿಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರೆಂದು ನೇಮಿಸಿದರು. ಮುಂದೆ ಮಧ್ಯವಿಭಾಗದ ಇನಸ್ಪೆಕ್ಟರರೆಂದು, ೧೯೪೨ ರಲ್ಲಿ ಡೆಪ್ಯೂಟಿ ಡಾಯರೆಕ್ಟರರೆಂದು ಕೊನೆಗೆ ೧೯೪೭ ರಲ್ಲಿ ಡೈರೆಕ್ಟರರೆಂದು ನೇಮಿಸಲ್ಪಟ್ಟರು. ೧೯೪೭ ನೆಯ ಜನೆವರಿಯಿಂದ ನಿವೃತ್ತಿಯಾಗುವ ವರೆಗೆ ಅಂದರೆ ೧೯೫೪ ಜೂನ ತಿಂಗಳಿನ ವರೆಗೆ ಮುಂಬಯಿ ರಾಜ್ಯದ ಶಿಕ್ಷಣ ಖಾತೆಯ ಅತ್ಯುನ್ನತ ಸ್ಥಾನದಲ್ಲಿದ್ದುಕೊಂಡು ಅತ್ಯುತ್ತಮ ಕಾರ್ಯ ಮಾಡಿದ್ದಾರೆ. ಈ ಏಳು ವರುಷಗಳ ಅವಧಿಯೆಂದರೆ ಶಿಕ್ಷಣ ಪ್ರಪಂಚದಲ್ಲಿ ಒಂದು ಸಂಕ್ರಾಂತಿಕಾಲ, ಮಿಂಚಿನ ವೇಗದಿಂದ ಅನೇಕ ಬದಲಾವಣೆಗಳೂ, ಮಾರ್ಪಾಡುಗಳೂ, ಸುಧಾರಣೆಗಳೂ ಬೆಳಕನ್ನು ಕಂಡವು. ೧೯೩೭ರಲ್ಲಿ ಪ್ರಾಂತಗಳಲ್ಲಿ ಕಾಂಗ್ರೆಸ ಸರಕಾರಗಳು ಅಧಿಕಾರಾರೂಢವಾಗಿ ಶ್ರೀ ಖೇರರು ಶಿಕ್ಷಣ ಖಾತೆಯ ಮಂತ್ರಿಗಳಿದ್ದಾಗ ಅಸಿ. ಡಿ. ಪಿ. ಆಯ್, ಆಗಿದ್ದ ಶ್ರೀ ಪಾವಟೆಯವರನ್ನು ಅವರು ಒಂದು ದಿನ ಕರೆಯಿಸಿಕೊಂಡರು. ಪ್ರಾಥಮಿಕ ಶಿಕ್ಷಣದಲ್ಲಿ ಸಾಕಷ್ಟು-ಸುಧಾರಣೆಯಾಗಬೇಕೆಂದಿದ್ದ ಶ್ರೀ ಪಾವಟೆಯವರು ವ್ಹಾಲಂಟರಿ ಪ್ರಾಥಮಿಕ ಶಾಲೆಗಳನ್ನು ತೆರೆಯುವ ತಮ್ಮ ಯೋಜನೆಯನ್ನು ಅವರಿಗೆ ವಿಶದಪಡಿಸಿದರು. ಅಲ್ಪವೆಚ್ಚದಲ್ಲಿ ತೀರ ಸಣ್ಣ ಹಳ್ಳಿಗಳಲ್ಲಿಯ ಬಾಲಕ ಬಾಲಕಿಯರಿಗೆ ಶಿಕ್ಷಣದ ಸೌಕರ್ಯವನ್ನು ದೊರಕಿಸಿಕೊಟ್ಟ ಶ್ರೇಯಸ್ಸು ಈ ರೀತಿಯಾಗಿ ಇವರಿಗೆ ಸಲ್ಲುತ್ತದೆ. ಎರಡನೆಯ ಸಲ ಕಾಂಗ್ರೆಸ್ ಸರಕಾರ ಬರುವ ಹೊತ್ತಿಗೆ ಶ್ರೀ ಪಾವಟೆಯವರು ಡಿ. ಪಿ. ಆಯ್. ಆಗಿದ್ದರು. ಅಷ್ಟರಲ್ಲಿ ಅವರು ಪ್ರಾಥಮಿಕ ಶಿಕ್ಷಣದ ಎಲ್ಲ ಯೋಜನೆಗಳನ್ನು ಸಿದ್ಧಪಡಿಸಿದ್ದರು.

ಶಿಕ್ಷಣದ ಅಭ್ಯುದಯಕ್ಕೆ ಸರಕಾರವು ತೊಡಗಿಸಿದ ಹಣದ ಸದ್ವಿನಿಯೋಗವಾಗಬೇಕಾದರೆ ಪ್ರಾಥಮಿಕ ಶಿಕ್ಷಣವು ಕಡ್ಡಾಯದ್ದಾಗಬೇಕೆಂದು ಶ್ರೀ ಪಾವಟೆಯವರ ಅಭಿಪ್ರಾಯ. ಶಿಕ್ಷಣ ಖಾತೆಯ ಆಗಿನ ಮಂತ್ರಿಗಳಾದ ಶ್ರೀ ಬಾಳಾಸಾಹೇಬ ಖೇರರಿಗೆ ಇದನ್ನೆಲ್ಲ ಮನಗಾಣಿಸಿಕೊಟ್ಟು ಕಡ್ಡಾಯದ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು ಜಾರಿಯಲ್ಲಿ ತಂದರು. ಈ ಯೋಜನೆಯ ಯಶಸ್ಸಿಗಾಗಿ ಅಟೆಂಡೆನ್ಸ ಆಫೀಸರ್ಸ, ಅಸಿ. ಆ್ಯಡ್ಮಿನಿಸ್ಟ್ರೇಟಿವ್ಹ ಆಫೀಸರ್ಸ ಮೊದಲಾದ ಅಧಿಕಾರಸ್ಥರನ್ನು ನೇಮಿಸಿದರು. ಹೀಗೆ ಪ್ರಾಥಮಿಕ ಶಿಕ್ಷಣದ ಬಗೆಗೆ ಅಮಿತ ಉತ್ಸಾಹವನ್ನು ತೋರಿದರು. ಇದರಂತೆ ಸಮಾಜ ಶಿಕ್ಷಣದ ಪ್ರಸಾರಕ್ಕೂ ಪ್ರೋತ್ಸಾಹವನ್ನು ನೀಡಿದರು. ೧೦೦ಕ್ಕೆ ಕೇವಲ ೧೭ ರಷ್ಟು ಸಾಕ್ಷರರಿರುವ ನಮ್ಮ ದೇಶವು ಪ್ರಗತಿ ಪಥದಲ್ಲಿ ಮುನ್ನಡೆಯಬೇಕಾದರೆ ಆಬಾಲವೃದ್ಧರೆಲ್ಲರೂ ಸಾಕ್ಷರರಾಗಬೇಕು; ಸುಶಿಕ್ಷಿತರಾಗಬೇಕು ಎಂಬುದು ಇವರ ಅಭಿಪ್ರಾಯ. ಅದಕ್ಕಾಗಿ ೧೪ ವರ್ಷದಿಂದ ಮೇಲ್ಪಟ್ಟ ಎಲ್ಲ ಪ್ರೌಢರಿಗೆ ಶಿಕ್ಷಣದ ಸೌಲಭ್ಯವನ್ನು ಒದಗಿಸುವ ಯೋಜನೆಯನ್ನು ಸಿದ್ಧಪಡಿಸಿದರು. ಇದರನ್ವಯ ಪ್ರಾದೇಶಿಕ ಸಮಾಜ ಶಿಕ್ಷಣ ಸಮಿತಿಗಳೂ, ಆ ಸಮಿತಿಯ ಕಾರ್ಯದರ್ಶಿ ಹುದ್ದೆಯೂ, ಸ. ಶಿ. ವಿಶೇಷಾಧಿಕಾರಿಗಳ ಸ್ಥಳಗಳೂ ನಿರ್ಮಿಸಲ್ಪಟ್ಟವು. ಮುಂಬಯಿ ರಾಜ್ಯದಲ್ಲಿ ಸಮಾಜ ಶಿಕ್ಷಣವು ಭರದಿಂದ ಮುನ್ನಡೆಯಲು ಅನುವಾಯಿತು. ಮುಂದೆ ಕೆಲ ವರುಷಗಳಲ್ಲಿ ಈ ಎಲ್ಲ ಕೆಲಸವು ಬೀಟ ಆಫೀಸರರಿಗೆ ಒಪ್ಪಿಸಲ್ಪಟ್ಟಿತು. ಆದರೆ ಪ್ರಾದೇಶಿಕ ಸಮಿತಿಯೂ, ಸೆಕ್ರೆಟರಿ ಸ್ಥಳವೂ ಇಂದಿಗೂ ಉಳಿದು ಬಂದಿವೆ. ೧೯೪೭ರ ಪ್ರಾಥಮಿಕ ಶಿಕ್ಷಣದ ಕಾಯಿದೆ ಮತ್ತು ಅದಕ್ಕೆ ಸಂಬಂಧಿಸಿದ ೧೯೪೯ ರ ಪ್ರಾಥಮಿಕ ಶಿಕ್ಷಣದ ನಿಯಮಾವಳಿಗಳು ಸಹ ಇವರ ಸಾಹಸದ ಅನುಭವದ ಫಲಗಳು. ಈ ರೀತಿಯಾಗಿ ಪ್ರಾಥಮಿಕ ಶಿಕ್ಷಣ ಹಾಗೂ ಸಮಾಜ ಶಿಕ್ಷಣ ಕ್ಷೇತ್ರಗಳಲ್ಲಿ ಮುಂಬಯಿ ರಾಜ್ಯವು ಮುನ್ನಡಿಇಡುವಂತೆ ಮಾಡಿದ ಶ್ರೇಯಸ್ಸು ಶ್ರೀಪಾವಟೆಯವರಿಗೇನೇ ಸಲ್ಲುತ್ತದೆ. ಭಾರತ ದೇಶದ ಮೂಲೆ ಮೂಲೆಗಳಲ್ಲಿರುವ ಹಳ್ಳಿಗಳ ಗುಡಿಸಲುಗಳಿಗೆ ಶಿಕ್ಷಣದ ಬೆಳಕು ಮುಟ್ಟಿದಾಗಲೇ ನಮ್ಮ ಜನತೆಯ ಅಭ್ಯುದಯವೆಂದು ಇವರು

ಇಟ್ಟುಕೊಂಡ ಬಲವಾದ ನಂಬಿಕೆಯೇ ಹಗಲಿರುಳು ದುಡಿಯುವಂತೆ ಇವರನ್ನು ಪ್ರೇರಿಸುತ್ತಿದೆ.

ಇದಲ್ಲದೆ ಜೀವನ ಶಿಕ್ಷಣ, ಶಿಷ್ಟ ಪದ್ಧತಿ, ಟ್ರೇನಿಂಗ ಕಾಲೇಜುಗಳನ್ನು ಹೆಚ್ಚಿಸಿ ಟ್ರೇಂಡ ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸುವದು, ವಿಭಾಗಗಳ ಇನಸ್ಪೆಕ್ಟರ ಹುದ್ದೆಗಳನ್ನು ಕಡಿಮೆ ಮಾಡಿ ಜಿಲ್ಲೆಗೊಬ್ಬರಂತೆ ಇನಸ್ಪೆಕ್ಟರರನ್ನು ನೇಮಿಸುವದು ಇವೇ ಮೊದಲಾದ ಸುಧಾರಣೆಗಳಿಗೆ ಇವರೇ ಕಾರಣೀಭೂತರಾಗಿದ್ದಾರೆ. ಪ್ರಾಥಮಿಕ ಶಾಲೆಗಳ ಅಭ್ಯಾಸ ಪತ್ರಿಕೆಯ ಪುನರ್ನಿರ್ಮಾಣ ಮತ್ತು ಅದಕ್ಕನುಗುಣವಾಗುವಂತೆ ೧ ರಿಂದ ೪ ನೆಯ ಇಯತ್ತೆಗಳ ಕ್ರಮಿಕವಾಚನದ ಪಠ್ಯಪುಸ್ತಕಗಳನ್ನು ರಚಿಸುವದು ಈ ಕಾರ್ಯಗಳಿಗೆ ಸಹ ಇವರೇ ಪುರಸ್ಕರ್ತರಾಗಿದ್ದಾರೆ. ಅದರಂತೆ ಮಾಧ್ಯಮಿಕ ಹಾಗೂ ಉಚ್ಚ ಶಿಕ್ಷಣದಲ್ಲಿಯೂ ಅನೇಕ ಸುಧಾರಣೆಗಳನ್ನು ಮಾಡಿದ್ದಾರೆ. ಇಂದು ಮಾಧ್ಯಮಿಕ ಶಿಕ್ಷಣದ ಕೊನೆಯ ಪರೀಕ್ಷೆಯನ್ನು ನಡೆಸುತ್ತಿರುವ ಎಸ್.ಎಸ್.ಸಿ. ಮಂಡಳದ ಪ್ರವರ್ತಕರು ಸಹ ಇವರೇ ಆಗಿರುವರು. ಪ್ರಗತಿಶೀಲ ಮುಂಬಯಿ ರಾಜ್ಯದ ಶೈಕ್ಷಣಿಕ ಆಡಳಿತವನ್ನು ಮಾದರಿ ಮಟ್ಟಕ್ಕೆ ಮುಟ್ಟಿಸಿದ ಶ್ರೇಯಸ್ಸು ಇವರದು.

ಸೇವಾ ನಿವೃತ್ತಿಯ ನಂತರವೂ ಶ್ರೀ ಪಾವಟೆಯವರ ಶಿಕ್ಷಣ ಕಾರ್ಯಕ್ಷೇತ್ರವು ಮತ್ತಿಷ್ಟು ವಿಶಾಲವಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಗುರುಗಳಾಗಿ ಕಳೆದ ಆರು ವರ್ಷಗಳಿಂದ ವಿಶ್ವವಿದ್ಯಾಲಯದ ಸರ್ವತೋಮುಖ ಏಳ್ಗೆಗಾಗಿ ಶಿಕ್ಷಣದ ಪ್ರಗತಿಗಾಗಿ ಶ್ರಮಿಸುತ್ತಿದ್ದಾರೆ. ವಿಶ್ವವಿದ್ಯಾಲಯದ ಬೌದ್ಧಿಕ ಪ್ರಗತಿಯನ್ನು ಸಾಧಿಸಬೇಕೆನ್ನುವ ಅವರು ಸ್ನಾತಕೋತ್ತರ ಶಿಕ್ಷಣವನ್ನೆಲ್ಲ ವಿಶ್ವವಿದ್ಯಾಲಯವೇ ಕೈಕೊಳ್ಳುವಂತೆ ಮಾಡಿದ್ದಾರೆ. ಅಂತರ-ವಿಶ್ವವಿದ್ಯಾಲಯಗಳ ಚೇರಮನ್‌ರಾಗಿ ಕಾರ್ಯ ಮಾಡುತ್ತಿದ್ದಾರೆ. ಜಿನೇವಾದಲ್ಲಿ ನಡೆದ ಅಂತರ ರಾಷ್ಟ್ರಗಳ ಪರಿಷತ್ತಿಗೆ ಭಾರತೀಯ ನಿಯೋಗದ ಧುರೀಣರಾಗಿ ಹೋಗಿ ಬಂದರು. ಅಲ್ಲದೆ ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿಯ ವಿಶ್ವವಿದ್ಯಾಲಯಗಳನ್ನು ಸಂದರ್ಶಿಸಿ ಬಂದಿದ್ದಾರೆ.

ಗಣಿತ ಶಾಸ್ತ್ರದಲ್ಲಿ ಪಾರಂಗತರಾದ ಶ್ರೀ ಪಾವಟೆಯವರು ಆರನೆಯ ಇಯತ್ತೆಯಿಂದ ಮೇಲಿನ ವರ್ಗಗಳಿಗೆ ಉಪಯುಕ್ತವಿರುವ ಗಣಿತ ಪುಸ್ತಕಗಳನ್ನು ಬರೆದಿದ್ದಾರೆ. ಅವರ ಈ ಪುಸ್ತಕಗಳು ಇಂಗ್ಲಿಷ, ಕನ್ನಡ, ಮರಾಠಿ, ಗುಜರಾಥಿ ಹೀಗೆ ಹಲವು ಭಾಷೆಗಳಲ್ಲಿ ಭಾಷಾಂತರ ಹೊಂದಿ, ಆಯಾ ಪ್ರದೇಶಗಳಲ್ಲಿ ಪಠ್ಯಪುಸ್ತಕಗಳೆಂದು ಖ್ಯಾತಿವೆತ್ತಿವೆ.

ಇತ್ತೀಚೆಗೆ ಧಾರವಾಡದಲ್ಲಿಯ ಕರ್ನಾಟಕ ಕಾಲೇಜನ್ನು ಉಚ್ಚ ಶಿಕ್ಷಣದ ಆದರ್ಶ ವಿದ್ಯಾನಿಲಯವೆಂದು ಮಾರ್ಪಡಿಸುವ ಘನ ಉದ್ದೇಶದಿಂದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರ್ಪಡೆ ಮಾಡಿದುದು ಮತ್ತು ಯಾವುದೇ ರಾಜ್ಯದ ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಯು (ಡಾಯರೆಕ್ಟರ) ಶಿಕ್ಷಣ ತಜ್ಞರೇ ಇರಬೇಕೆಂಬ ಇವರ ಸ್ಪಷ್ಟ ವಿಚಾರ ವಾದವು ಇವರ ವ್ಯಕ್ತಿತ್ವದ ಪ್ರತಿಭೆಯನ್ನೇ ಬೀರುತ್ತದೆ.

ಶ್ರೀ ಪಾವಟೆಯವರ ನಿತ್ಯದ ಜೀವನವೇ ಶಿಕ್ಷಣದ ತತ್ವದ ಸಾರವನ್ನು ಸಾರುತ್ತಿದೆ. ಬೆಳಗಿನ ಜಾವದಲ್ಲಿ ನಿಸರ್ಗದ ಸಂಚಾರವನ್ನು ಅವರು ಎಂದೂ ತಪ್ಪಿಸಿಕೊಳ್ಳುವದಿಲ್ಲ. ದೈಹಿಕ ಸ್ವಾಸ್ಥ್ಯದ ಬಗೆಗೆ ನಿಸರ್ಗ ಚಿಕಿತ್ಸೆಯಲ್ಲಿಯೇ ಅವರಿಗೆ ಅಪಾರವಾದ ಆಸ್ಥೆಯಿದೆ. ಈ ಸಂಚಾರದಲ್ಲಿ ಅವರು ಗಳಿಸಿದ ನಿಸರ್ಗ ಪ್ರೇಮವೂ ಅವರಲ್ಲಿ ಆಳವಾಗಿ ಅಳವಡಿಸಿಕೊಂಡು ಬಂದಿದೆ. ಅವರಲ್ಲಿ ಬೆಳೆದು ಬಂದ ನಿಸರ್ಗ ಪ್ರೇಮ, ಮಕ್ಕಳಲ್ಲಿರುವ ಮಮತೆ, ಶಿಕ್ಷಣವು ಜೀವನದುದ್ದಕ್ಕೂ ಸತತವಾಗಿ ಸಾಗುವ ಪ್ರವಾಹ ಎಂಬ ಸಂಗತಿಗಳನ್ನು ನೆನೆದಾಗ ಶಿಕ್ಷಣ ತಜ್ಞ ರೂಸೋನ ನೆನಪಾಗದಿರದು. ಬಿಡುವಿನ ಸಮಯದಲ್ಲಿ ಶ್ರೀ ಪಾವಟೆಯವರು ತಮ್ಮ ಮಕ್ಕಳಿಗೆ ಮನೆಯಲ್ಲಿ ಗಣಿತ ವಿಷಯದಲ್ಲಿ ಪಾಠ ಹೇಳುತ್ತಿರುವಾಗ ಅವರೊಡನೆ ಚರ್ಚಿಸುತ್ತಿರುವಾಗ ತತ್ವವೇತ್ತ ಪ್ಲೇಟೋನ ನೆನಪಾಗುತ್ತಿದೆ. ಶಿಕ್ಷಣದ ಆಡಳಿತದಲ್ಲಿ ಪ್ರಜಾಪ್ರಭುತ್ವದ ತಳಹದಿಯನ್ನು ಹಾಕಬೇಕೆನ್ನುವ ವಿಚಾರದಲ್ಲಿ ಮತ್ತು ಪ್ರತ್ಯಕ್ಷ ಜೀವಿಕೆಯ ಮುಖಾಂತರವೇ ಜೀವಿಯ ಶಿಕ್ಷಣ ಅರ್ಥಾತ್ ಸಂಸ್ಕಾರ ಉಂಟಾಗಬೇಕೆಂಬ ವಿಚಾರದಲ್ಲಿ, ಸತ್ಯವು ಸಪ್ರಮಾಣವಾದುದು ಎಂಬ ತಿಳಿವಿನ ತೊರೆಯಲ್ಲಿ ಶ್ರೀ ಪಾವಟೆಯವರನ್ನು ಕಂಡಾಗ ಅಮೇರಿಕೆಯ ಶಿಕ್ಷಣ ತಜ್ಞ ಜಾನಡ್ಯೂಯಿ ಅವರ ಜ್ಞಾಪಕವಾಗುತ್ತಿದೆ. ಶ್ರೀ ಪಾವಟೆಯವರು ಗಳಿಸಿದ ಅಗಾಧ ಜ್ಞಾನ-ಅನುಭವ, ಅವರು ಪಡೆದ ಅಸಾಧಾರಣ ಬುದ್ಧಿಮತ್ತೆ, ಅವರಿಗೆ ದೊರೆತ ಉಚ್ಚ ಸ್ಥಾನಮಾನ ಇವೆಲ್ಲ ಒಗ್ಗೂಡಿ ಅವರ ವ್ಯಕ್ತಿತ್ವ

ವನ್ನು ಅಖಂಡವಾಗಿ ಪೋಷಿಸಿವೆ. ಆದರ್ಶ ಜೀವಿಗಳೂ ಉಚ್ಚತಮ ವಿಚಾರಿಗಳೂ, ಪ್ರತಿಭಾನ್ವಿತ ವ್ಯಕ್ತಿಗಳೂ ಆಗಿ, ಉಚ್ಚ ಶ್ರೇಣಿಯ ಭಾರತೀಯ ಶಿಕ್ಷಣ ತಜ್ಞರಲ್ಲಿ ಶ್ರೀ ಪಾವಟೆಯವರು ಒಬ್ಬರಾಗಿದ್ದಾರೆಂಬ ಸಂಗತಿಯು ಕನ್ನಡಿಗರಿಗೆ ಹೆಮ್ಮೆಯ ಮಾತಾಗಿದೆ. ಅವರು ಇಂದು ೭೦ ರ ಎಲ್ಲೆಯನ್ನು ದಾಟಿ, ೭೧ ನೆಯ ವಯಸ್ಸಿನಲ್ಲಿ ಕಾಲಿಟ್ಟಿದ್ದಾರೆ. ಅವರ ಹಸನಾದ ಜೀವನವು ಹೆಚ್ಚಲಿ. ಅವರಿಂದ ಇನ್ನೂ ಹೆಚ್ಚಿನ ಸೇವೆಯು ರಾಷ್ಟ್ರಕ್ಕೆ ಸಲ್ಲುವಂತಾಗಲಿ ಎಂದು ಅವರ ವಜ್ರಮಹೋತ್ಸವದ ಈ ಶುಭ ಸಮಯದಲ್ಲಿ ಹಾರೈಸುವೆವು.

ರ್‍ಯಾಂಗಲರ ಡಿ. ಸಿ. ಪಾವಟೆಯವರು

ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳು

[ಬಹು ಮುಖ ವ್ಯಕ್ತಿತ್ವದ ಪರಿಚಯ]

ಲೇಖಕರು : **ಶ್ರೀ ಶಿಂತ್ರಿ ಬಸಪ್ಪನವರು,** ಬಿ.ಎ.,ಬಿ.ಟಿ.

ಮೊದಲ ಮಾತು

ಇದೇ ನವಂಬರ ತಿಂಗಳು ೭ನೆಯ ದಿನಾಂಕದ ಶುಭ ಮುಹೂರ್ತದಲ್ಲಿ ರ್‍ಯಾಂಗ್ಲರ ಡಿ. ಸಿ. ಪಾವಟೆಯವರ ವಜ್ರಮಹೋತ್ಸವವು ನಮ್ಮ ರಾಷ್ಟ್ರಾಧ್ಯಕ್ಷರಾದ ಡಾ. ಬಾಬು ರಾಜೇಂದ್ರ ಪ್ರಸಾದರವರ ಘನ ಅಧ್ಯಕ್ಷತೆಯಲ್ಲಿ ಘೋಟಾಮಹಾಬಳೇಶ್ವರದಲ್ಲಿ ಶೃಂಗರಿಸಲ್ಪಟ್ಟಿದ್ದ ಭವ್ಯ ಮಂಟಪದಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿತಷ್ಟೇ. ಅದೊಂದು ನಭೂತೋ ನಭವಿಷ್ಯಂತಿ ಸಮಾರಂಭವಾಗಿ ಪರಿಣಮಿಸಿತು. ಅದರ ಸವಿ ನೆನಹಿಗಾಗಿ ನಮ್ಮ ಸಂಪಾದಕ ಮಂಡಲವು ಈ ತಿಂಗಳ ನಮ್ಮ ಮಾಸಿಕದ ವಿಶೇಷ ಸಂಚಿಕೆಯೊಂದನ್ನು ಹೊರಡಿಸಲು ನಿರ್ಧರಿಸಿತು. ಈ ನಿರ್ಧಾರಕ್ಕನುಸರಿಸಿ ಪ್ರಸ್ತುತ ಲೇಖದಲ್ಲಿ ರ್‍ಯಾಂಗಲರರವರು ಮುಂಬಯಿ ರಾಜ್ಯದ ಡಾಯರೆಕ್ಟರರಾಗಿದ್ದಾಗಿನ ಮತ್ತು ಈಗ ಉಪಕುಲಪತಿಗಳಾಗಿದ್ದಾಗಿನಿಂದ ಇಲ್ಲಿಯ ವರೆಗೆ ಅವರಿಂದ ಜರುಗಿದ ಸುಧಾರಣೆಗಳನ್ನೂ ವಿಶಿಷ್ಟ ಕಾರ್ಯಗಳನ್ನೂ ನಮಗೆ ಗೊತ್ತಿದ್ದಷ್ಟರ ಮಟ್ಟಿಗೆ ಬರೆಯಲು ಪ್ರಯತ್ನಿಸಲಾಗಿದೆ. ಕೆಳಗೆ ನಮೂದಿಸಲ್ಪಟ್ಟವಷ್ಟೇ ಅವರಿಂದೆಸಗಲ್ಪಟ್ಟ ಕಾರ್ಯಕಲಾಪಗಳೆಂದು ಆರೂ ಭಾವಿಸಕೂಡದು. ಕಾರಣವೆಂದರೆ, ನಮ್ಮ ಜ್ಞಾಪಕಕ್ಕೆ ನಿಲುಕದೆ ಹಲವು ಉಳಿದಿರುವ ಸಂಭವವಿದೆ.

ಡಾಯರೆಕ್ಟರರಾಗಿ ಮಾಡಿದ ಸುಧಾರಣೆಗಳು

ರ್‍ಯಾಂಗಲರರವರು ಸುಮಾರು ೧೯೪೭ ನೆಯ ಜನೇವರಿ ತಿಂಗಳಿಂದ ಸುಮಾರು ೧೯೫೪ನೆಯ ಇಸವಿ ಅಗಸ್ಟ ತಿಂಗಳ ವರೆಗೆ ಅಂದರೆ ಸುಮಾರು ೭ ವರುಷ ೮ತಿಂಗಳುಗಳ ವರೆಗೆ ಮುಂಬಯಿ ರಾಜ್ಯದ ಶಿಕ್ಷಣ ಖಾತೆಯ ಅತ್ಯುನ್ನತ ಸ್ಥಾನ (Director of education) ದಲ್ಲಿದ್ದುಕೊಂಡು ತಮ್ಮ ಅತ್ಯಂತ ಹೊಣೆಗಾರಿಕೆಯ ಕಾರ್ಯಗಳನ್ನೆಲ್ಲ ತ್ರಿಕರಣಪೂರ್ವಕವಾಗಿಯೂ ಯಶಸ್ವಿಯಾಗಿಯೂ ಪೂರೈಸಿದರು. ನಮ್ಮ ಅನುಭವಕ್ಕೆ ಬಂದ ಒಂದು ಸಂಗತಿಯನ್ನು ಇಲ್ಲಿ ಹೇಳಿದರೆ ಅದು ತಪ್ಪಾದೀತೆಂದು ನಮಗನಿಸುವದಿಲ್ಲ. ಎಲ್ಲರ ಗೂಡ ಬೆಲ್ಲದಂತಿದ್ದುಕೊಂಡು ತಾವು ಸಾಧಿಸಬೇಕಾಗಿದ್ದ ಕೆಲಸಗಳನ್ನೆಲ್ಲ ಅತ್ಯಂತ ಧೂರ್ತತನದಿಂದಲೂ ಸದ್ದಿಲ್ಲದೆಯೂ ಮಾಡುವದು ಮತ್ತು ಮೇಲಿನವರಿಂದ ಮಾಡಿಸಿಕೊಳ್ಳುವದು ಅವರದೊಂದು ವಿಶಿಷ್ಟವಾದ ಹಿರಿಮೆಯೆಂದೇ ನಾವು ಹೇಳಬೇಕು. ಅವರ ಈ ಕೈಚಳಕವನ್ನು ಎಷ್ಟು ಬಣ್ಣಿಸಿದರೂ ಕಡಿಮೆಯೇ ಸೈ. ಮೇಲೆ ಹೇಳಿದ ಸುದೀರ್ಘಾವಧಿಯಲ್ಲಿ ಶಿಕ್ಷಣ ಪ್ರಪಂಚದಲ್ಲಿ ಮಿಂಚಿನ ವೇಗದಿಂದ ಜರುಗಿದ ಬದಲಾವಣೆಗಳು ಅಷ್ಟಿಷ್ಟಲ್ಲ. ಅವುಗಳನ್ನು ಒಂದೊಂದನ್ನಾಗಿ ನಮಗೆ ಗೊತ್ತಿದ್ದಷ್ಟರಮಟ್ಟಿಗೆ ಇಲ್ಲಿ ವಿವರಿಸಲಾಗಿದೆ. ರಾಷ್ಟ್ರಭಾಷೆಯು

ಹಾಯಸ್ಕೂಲ—ಟ್ರೇನಿಂಗ ಕಾಲೇಜುಗಳಲ್ಲಿ ಕಡ್ಡಾಯವಾಗಿ ಕಲಿಸಲ್ಪಡಲು ಪ್ರಾರಂಭವಾಯಿತು. ಮಾಧ್ಯಮಿಕ ಶಾಲೆಗಳಲ್ಲಿಯ ಇಂಗ್ಲಿಷ ಭಾಷೆಯ ಪ್ರಭಾವವನ್ನು ತಗ್ಗಿಸಲು ಪ್ರಾದೇಶಿಕ ಭಾಷೆಗಳನ್ನು ಪ್ರೋತ್ಸಾಹಿಸಿದರು. ರಾಜ್ಯದ ಸಾಕ್ಷರತೆಯನ್ನು ಹೆಚ್ಚಿಸಲು ಸಕ್ತಿ ಶಿಕ್ಷಣ, ಸಮಾಜ ಶಿಕ್ಷಣ (ಪ್ರೌಢರ ಶಿಕ್ಷಣ) ಗಳನ್ನು ಲೋಕಪ್ರಿಯವಾಗುವಂತೆ ಹೆಣಗಾಡಿದರು. ಬೇಸಿಕ್ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟು ಮುಂಬಯಿ ರಾಜ್ಯವು ಉಳಿದ ರಾಜ್ಯಗಳಿಗಿಂತ ಮುಂದಡಿಯಿಡುವಂತೆ ಮಾಡಿದರು. ಪ್ರಾಥಮಿಕ ಸಾಲೆಗಳಲ್ಲಿ ಸ್ಥಳಸಂಕೋಚವನ್ನು ನೀಗಿಸಲು ಶಿಫ್ಟ ಪದ್ಧತಿಯನ್ನು ಜಾರಿಯಲ್ಲಿ ತಂದರು. ಪ್ರಾಥಮಿಕ ಸಾಲೆಗಳ ಅಭ್ಯಾಸ ಪತ್ರಿಕೆಯ ಪುನರ್ನಿರ್ಮಾಣ ಮಾಡಿ ಅದಕ್ಕನುಗುಣವಾಗುವಂತೆ ಮೊದಲಿನ ನಾಲ್ಕು ಇಯತ್ತೆಗಳ ವಾಚನದ ಪಠ್ಯಪುಸ್ತಕಗಳನ್ನು ಬರೆಯಿಸಿದರು. ಸಕ್ತಿ ಶಿಕ್ಷಣಕ್ಕೋಸ್ಕರ ಹೆಚ್ಚಿನ ಪ್ರಮಾಣದಲ್ಲಿ ಬೇಕಾಗಿದ್ದ ಟ್ರೇನ್ಡ ಶಿಕ್ಷಕರ ಸಂಖ್ಯೆಯನ್ನು ಏರಿಸಲು ಸರಕಾರ ಹಾಗೂ ಸರಕಾರೇತರ ಟ್ರೇನಿಂಗ ಕಾಲೇಜುಗಳ ಸಂಖ್ಯೆಯನ್ನು ಸಾಕಷ್ಟು ಬೆಳೆಸಿದರು. ಇವರ ಸಲಹೆಯಂತೆ ಪ್ರಾದೇಶಿಕ ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡವು. ಶಿಕ್ಷಣ ಖಾತೆಯ ಕೆಲಸವು ತ್ವರಿತದಿಂದಲೂ ಪರಿಣಾಮಕಾರಿಯಾಗಿಯೂ ಆಗಬೇಕೆಂಬ ಸದುದ್ದೇಶದಿಂದ ವಿಭಾಗಗಳ ಇನ್‌ಸ್ಪೆಕ್ಟರರ ಜಾಗೆಗಳನ್ನು ಕಡಿಮೆ ಮಾಡಿ ಜಿಲ್ಹೆಗೊಬ್ಬರಂತೆ ಇನ್‌ಸ್ಪೆಕ್ಟರರನ್ನು ನೇಮಿಸಲಾಯಿತು. ಪ್ರಾಥಮಿಕ ಶಿಕ್ಷಣದ ನಿಯಮಾವಳಿಗಳೂ (Priamary Education Rules) ವಿದ್ಯಾ ಇಲಾಖೆಯ ಆಡಳಿತದ ಹೊತ್ತಿಗೆ (Education Manual) ಯೂ ಅವರಿಂದಲೇ ತಿದ್ದುಪಡಿ ಹೊಂದಿದವು. ಸುಧಾರಣೆಗಳನ್ನು ಯಶಸ್ವಿಯಾಗಿ ಕಾರ್ಯರಂಗಕ್ಕಿಳಿಸುವಾಗ ವರಿಷ್ಠಾಧಿಕಾರಿಯು ಆಡಳಿತ ಯಂತ್ರದಲ್ಲಿಯ ಸಿಬ್ಬಂದಿ, ಜನತೆ ಹಾಗೂ ಜನತೆಯ ಪ್ರತಿನಿಧಿಯಾದ ಮಂತ್ರಿ ಇವರೆಲ್ಲರಿಗೂ ಬೇಕಾಗಿಕೊಂಡು ಸಮತೂಕದಿಂದಲೂ ಜಾಣಾಕ್ಷತನದಿಂದಲೂ ಕೆಲಸ ಮಾಡಬೇಕಾಗುತ್ತಿದೆಯೆಂಬ ಮಾತನ್ನು ಓದುಗರು ಗಮನಿಸುವುದೊಳಿತು. ಅಂತಹ ಕಷ್ಟಕರವಾದ ಮುತ್ತುತಲೆ ತಿನ್ನುವ ಕೆಲಸಗಳನ್ನು ಅತ್ಯಂತ ಯಶಸ್ವಿಯಾಗಿ ಮಾಡಿದರೆಂಬುದು ಸರ್ವಶ್ರುತವಿದೆ. ಆ ಅನುಭವದ ಹಿನ್ನೆಲೆಯೇ ಅವರನ್ನು ಈಗ ಯಶಸ್ವೀ ಉಪಕುಲಪತಿಗಳನ್ನಾಗಿ ಮಾಡುತ್ತಲಿದೆ. ಈ ಮಾತು ಕಂಣಿದ್ದವರಿಗೆ ಕಂಡಿರಲು ಸಾಕು.

ಉಪಕುಲಪತಿಗಳಾಗಿ ಮಾಡಿದ ಸುಧಾರಣೆಗಳು

೧೯೫೪ ನೆಯ ಇಸವಿಯಲ್ಲಿ ಅವರು ನಿವೃತ್ತಿಯನ್ನು ಹೊಂದುವದಕ್ಕಿಂತ ಎರಡು ತಿಂಗಳು ಮೊದಲೇ ನಿವೃತ್ತಿಯನ್ನು ಹೊಂದಿ ವ್ಹಾಯಿಸ ಚಾನ್ಸೆಲರ ಚುನಾವಣೆಗೆ ಹುರಿಯಾಳಾಗಿ ನಿಂತು ಪ್ರಚಂಡ ಬಹುಮತದಿಂದ ಆಯ್ಕೆಯನ್ನು ಹೊಂದಿದರು. ಇವರು ಅಸಿಸ್ಟಂಟ ಡಾಯರೆಕ್ಟರ ಮತ್ತು ಡಾಯರೆಕ್ಟರರಾಗಿದ್ದಾಗ ತಮ್ಮ ಹುದ್ದೆಯ ಬಲದಿಂದಲೂ ಯೋಗ್ಯತೆಯಿಂದಲೂ ಸುಮಾರು ೨೦ ವರ್ಷಗಳವರೆಗೆ ಮುಂಬಯಿ ವಿಶ್ವವಿದ್ಯಾಲಯದ (ex-officio) ಸಿಂಡಿಕೇಟ ಮೆಂಬರರಾಗಿ ಕೆಲಸ ಮಾಡಿದರು. ಹೀಗಾಗಿ ಅವರಿಗೆ ವಿಶ್ವವಿದ್ಯಾಲಯಗಳ ಆಡಳಿತದ ಅನುಭವವು ಅಪಾರವಿದೆ. ಈಗ ಅವರು ತಮ್ಮ ಆ ಅಮೌಲ್ಯವಾದ ಅನುಭವದ ಫಲವನ್ನೇ ನಮ್ಮ ವಿಶ್ವವಿದ್ಯಾಲಯಕ್ಕೆ ನೀಡುತ್ತಲಿದ್ದಾರೆ. ಸ್ನಾತಕೋತ್ತರ ಅಧ್ಯಯನದಲ್ಲಿ ಒಂದೊಂದು ವಿಷಯಕ್ಕೆ ಒಂದೊಂದು ಫ್ಯಾಕಲ್ಟಿ ಅಥವಾ ಡಿಪಾರ್ಟಮೆಂಟ (ವಿಭಾಗ) ಎಂದು ಕರೆಯುತ್ತಾರೆ. ಇಂಗ್ಲೀಷ ಭಾಷೆಗೆ ಇಂಗ್ಲೀಷ ವಿಭಾಗ ಅಥವಾ ಶಾಖೆ, ಕನ್ನಡ ಭಾಷೆಗೆ ಕನ್ನಡ ವಿಭಾಗ ಅಥವಾ ಶಾಖೆ ಎಂದು ಕರೆಯುವ ವಾಡಿಕೆಯಿದೆ. ಇವರು ಅಧಿಕಾರವನ್ನು ವಹಿಸುವ ಮೊದಲು ೫ ಶಾಖೆಗಳಿದ್ದವು. ಇವರು ಅಧಿಕಾರವನ್ನು ವಹಿಸಿಕೊಂಡ ಮೇಲೆ ೩ ವಿಭಾಗಗಳು ೧೯೫೫—೫೬ ನೆಯ ಸಾಲಿನಲ್ಲಿ ತೆರೆಯಲ್ಪಟ್ಟವು. ೧೯೫೬ ನೆಯ ಇಸವಿ ಜುಲಾಯಿ ತಿಂಗಳ ೯ ನೆಯ ದಿನಾಂಕದಿಂದ ೧೭ ನೆಯ ದಿನಾಂಕದ ವರೆಗೆ ಜಿನೀವಾದಲ್ಲಿ ಕಲೆತ ಯುನೆಸ್ಕೋದ ಶಿಕ್ಷಣ ಸಮ್ಮೇಲನಕ್ಕೆ ಭಾರತ ಸರಕಾರದವರಿಂದ ಕಳುಹಲ್ಪಟ್ಟಿದ್ದ ನಿಯೋಗ (delegation) ದ ಧುರೀಣರಾಗಿ ಹೋಗಿದ್ದರು. ಪತ್ರಿಕೋದ್ಯಮ, ಶಿಕ್ಷಣ, ಶ್ರಮಜೀವನ, ಸಾಮಾಜಿಕ ಸೇವೆ, ಇವುಗಳ ಬಗೆಗಿನ ಸಮಸ್ಯೆಗಳನ್ನು ಕುರಿತು ಪರಸ್ಪರ ತಿಳಿವಳಿಕೆ ಮತ್ತು ವಿಚಾರವಿನಿಮಯಕ್ಕೋಸ್ಕರ ಭಾರತ ಸರಕಾರದವರು ಬ್ಯಾಂಗಲರರವರನ್ನು ೧೯೫೭ ನೆಯ ಇಸವಿ ಮಾರ್ಚ ತಿಂಗಳ ೨೬ ನೆಯ ದಿನಾಂಕದಿಂದ ಮೂರು ತಿಂಗಳುಗಳ ವರೆಗೆ ಯುನಾಯಟೆಡ್ ಸ್ಟೇಟ್ಸಕ್ಕೆ ಕಳಿಸಿದ್ದರು. ೧೯೫೭ ನೆಯ ಇಸವಿಯಲ್ಲಿ ವ್ಹಾಯಿಸ ಚಾನ್ಸೆಲರ ಜಾಗೆಯ ಸಲುವಾಗಿ ಪುನಃ ಚುನಾವಣೆಯಾಯಿತು. ಆ ಚುನಾವಣೆಯಲ್ಲಿ ಅವರು ಅವಿರೋಧವಾಗಿ ಆರಿಸಿ ಬಂದರು. ೧೯೫೭—೫೮ ನೆಯ ಸಾಲಿನಲ್ಲಿ ೪ ವಿಭಾಗಗಳನ್ನೂ ೧೯೫೮–೫೯ರಲ್ಲಿ ೩ ವಿಭಾಗಗಳನ್ನೂ ನಮ್ಮ ವಿಶ್ವ

ವಿದ್ಯಾಲಯದಲ್ಲಿ ಹುಟ್ಟಿಸಿದರು. ಹೀಗಾಗಿ, ಇಲ್ಲಿಯ ವರೆಗೆ ಇವರ ಕಾಲಾವಧಿಯಲ್ಲಿ ೧೦ ವಿಭಾಗಗಳು ಹೊಸದಾಗಿ ಪ್ರಾರಂಭವಾಗಿವೆ. ೧೯೫೮ ನೆಯ ಇಸವಿ ಸಪ್ಟೆಂಬರ ತಿಂಗಳು ೧೬ ನೆಯ ದಿನಾಂಕ ಕರ್ನಾಟಕ ಕಾಲೇಜವು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಲ್ಪಟ್ಟಿತು. ಅಂದು ಗಣೇಶ ಚತುರ್ಥಿಯ ಹಬ್ಬವಿದ್ದುದರಿಂದ ವಿಘ್ನೇಶ್ವರನ ಸ್ತೋತ್ರದಿಂದ ಸಮಾರಂಭವು ಪ್ರಾರಂಭವಾಯಿತು. ಆಗ ಶಿಕ್ಷಣ ಮಂತ್ರಿಗಳಾದ ಮಾನ್ಯ ಶ್ರೀ ಅಣ್ಣಾರಾವ ಗಣಮುಖಿಯವರು ತಮ್ಮ ಅಸ್ಖಲಿತ ವಾಣಿಯಿಂದ ಮಾಡಿದ ವಿಚಾರಪರಿಪ್ಲುತವಾದ ಭಾಷಣವನ್ನು ಓದು ಗರು ಮರೆತಿರಲಿಕ್ಕಿಲ್ಲವಷ್ಟೇ. ಮಾನ್ಯ ಮಂತ್ರಿಗಳ ಶಬ್ದ ಗಳಲ್ಲಿ ಹೇಳುವದಾದರೆ, 'ಕರ್ನಾಟಕ-ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಕಾಲೇಜುಗಳ ಹೃದಯಂಗಮ ಸಂಗ ಮವು ಗಂಗಾ ಯಮುನೆಯರ, ಕೃಷ್ಣಾ-ಮಲಾಪಹಾರಿಯರ ಮಂಗಲಮಯ ಸಂಗಮ' ದಂತೆ ಅಂದಿನಿಂದ ಕಂಗೊಳಿ ಸುತ್ತಿದೆ. ಅಲ್ಲಿಯ ಪುಸ್ತಕಾಲಯದ ಅಚ್ಚುಕಟ್ಟುತನ ವಂತೂ ಪಾಶ್ಚಿಮಾತ್ಯ ಪುಸ್ತಕಾಲಯಗಳ ಅಚ್ಚುಕಟ್ಟು ತನವನ್ನು ಹೋಲುತ್ತಿದೆ. ಇವರ ಕಾಲಕೀರ್ದಿಯಲ್ಲಿ ನಾನಾ ವಿಷಯಗಳಿಗೆ ಸಂಬಂಧಿಸಿದ ಅಸಂಖ್ಯ ಪುಸ್ತಕಗಳು ಸೇರಿಸ ಲ್ಪಟ್ಟಿವೆ; ಇನ್ನೂ ಸೇರಿಸಲ್ಪಡುವದರಲ್ಲಿವೆ. ಪತ್ರಿಕೆಗಳೂ ಹೇರಳವಾಗಿವೆ. ಫ್ಯಾಕಲ್ಟಿ ಕ್ಲಬ್ (ಬೇರೆ ಬೇರೆ ಶಾಖೆಗಳ ಪ್ರಾಧ್ಯಾಪಕರ ಸಂತೋಷಕೂಟದ ಮತ್ತು ವಿಶ್ರಾಂತಿಯ ಗೃಹ) ಮತ್ತು ಗೆಸ್ಟಹೌಸ (ಅತಿಥಿಗಳ ಗೃಹ) ಇವು ತಯಾರಾಗಿದ್ದು ಅವುಗಳ ಉದ್ಘಾಟನೆಯು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಬಿ. ಡಿ. ಜತ್ತಿಯವರ ಅಮೃತ ಹಸ್ತದಿಂದ ೧೦—೬—೧೯೫೯ ನೆಯ ದಿನಾಂಕ ಜರುಗಿತು. ಭವ್ಯವಾದ ಮುಖ್ಯ ಇಮಾರತಿ (Main Building) ಯು ಮುಕ್ತಾಯವನ್ನು ಹೊಂದುವದರ ಲ್ಲಿದೆ. ಅದರ ಪ್ರಾರಂಭೋತ್ಸವವು ಯುನಿವ್ಹರ್ಸಿಟಿ ಗ್ರಾಂಟ್ಸ ಕಮೀಶನ್ನದ ಕಾರಾಧ್ಯಕ್ಷರಾದ ಡಾ. ಸಿ. ಡಿ. ದೇಶಮುಖ ರವರ ಅಮೃತ ಹಸ್ತದಿಂದ ದಿನಾಂಕ ೧೯-೬-೧೯೫೯ ರಂದು ನೆರವೇರಿತು. ಆ ಭವ್ಯ ಇಮಾರತಿಯು ಪೂರ್ತಿ ಯಾದ ನಂತರ ಅದು ಧಾರವಾಡಕ್ಕೆ ಸಂದರ್ಶನವನ್ನೀಯುವ ಪ್ರವಾಸಿಕರನ್ನು ತನ್ನತ್ತ ಆಕರ್ಷಿಸದೆ ಬಿಡಲಾರದು. ವಿದ್ಯಾರ್ಥಿಗಳಿಗೋಸ್ಕರ ಹಾಸ್ಟೆಲ್ (ಬೋರ್ಡಿಂಗ) ಸಿದ್ಧ ವಾಗಿದೆ. ಅದರ ಪ್ರಾರಂಭೋತ್ಸವವನ್ನು ನಮ್ಮ ರಾಜ್ಯದ ಶಿಕ್ಷಣ ಮಂತ್ರಿ ಮಾನ್ಯ ಶ್ರೀ ಅಣ್ಣಾರಾವ ಗಣಮುಖಿಯ ವರು ೨೦—೬—೧೯೫೯ ನೆಯ ದಿನಾಂಕ ನೆರವೇರಿ ಸಿದರು. ಮೇಲೆ ಹೇಳಿದ ಇಮಾರತಿಗಳೆಲ್ಲ ಇವರ ಕಾಲ ಕೀರ್ದಿಯಲ್ಲಿಯೇ ರೂಪುಗೊಂಡು ಮುಗಿದಿವೆ ಮತ್ತು ಮುಗಿಯುತ್ತಲಿವೆ. ಇವಲ್ಲದೆ ಇನ್ನೂ ಎಷ್ಟೋ ಇಮಾರತಿ ಗಳು ಅತ್ತಿತ್ತ ತಯಾರಾಗಿವೆ ಮತ್ತು ತಯಾರಾಗುವದರ ಲ್ಲಿವೆ. ಮತ್ತೆ ಇನ್ನೂ ಏನೇನೋ ಹಂಚಿಕೆಗಳನ್ನು ರ್‍ಯಾಂಗ ಲರರವರು ತಮ್ಮ ಮನದಲ್ಲಿ ಮಾಡಿಟ್ಟುಕೊಂಡಂತೆ ತೋರು ತ್ತಿದೆ. ಛೋಟಾ ಮಹಾಬಳೇಶ್ವರವನ್ನು ಒಂದು ಪ್ರತ್ಯೇಕ ಆದರ್ಶ ನಗರವನ್ನೇ ಮಾಡಬೇಕೆಂಬುದು ಅವರ ಮನೀಷೆ ಯಿದ್ದಂತೆ ತೋರುತ್ತಿದೆ. ಅವರ ಈ ಬಯಕೆಯು ಬೇಗನೆ ಕೈಗೂಡಲೆಂದು ಹಾರೈಸುತ್ತೇವೆ. ನಮ್ಮ ವಿಶ್ವವಿದ್ಯಾಲಯ ವನ್ನು ಆದರ್ಶ ವಿಶ್ವವಿದ್ಯಾಲಯವನ್ನಾಗಿ ಮಾಡಲು ಅವ ರನ್ನು ಪುನಃ ಪುನಃ ವ್ಹಾಯಿಸ ಚಾನ್ಸೆಲರರನ್ನಾಗಿ ಆರಿಸಿ ಕನ್ನಡ ಜನತೆಯು ಅವರನ್ನು ಹುರಿದುಂಬಿಸುವದು ಲೇಸು. ಉತ್ತಮ ಕೆಲಸಗಾರರಿಗೆ ಬೆಂಬಲ ನೀಡುವದು ಜನತೆಯ ಧರ್ಮವಲ್ಲವೇ ? ಕಳೆದ ಮೇ ತಿಂಗಳಿಂದ ನಮ್ಮ ರಾಷ್ಟ್ರದ ಅಂತರ್ವಿಶ್ವವಿದ್ಯಾಲಯಗಳ ಉಪಕುಲಪತಿಗಳ ಸಂಘದ ಕಾರ್ಯಾಧ್ಯಕ್ಷರಾಗಿದ್ದಾರೆ. ಇದು ಅವರಲ್ಲಿ ಹುದುಗಿದ್ದ ಯೋಗ್ಯತೆಯನ್ನೂ ನಮ್ಮ ರಾಷ್ಟ್ರದ ಒಳಗೂ ಹೊರಗೂ ಅವರು ಬೀರಿದ ಪ್ರಭಾವವನ್ನೂ ಕೈಯೆತ್ತಿ ತೋರಿಸುತ್ತಿದೆ. ಕನ್ನಡಿಗರೆಲ್ಲರೂ ಹೆಮ್ಮೆಪಡತಕ್ಕ ಮಾತು ಇದಲ್ಲವೇ ? ಇಂತಪ್ಪ ರ್‍ಯಾಂಗಲರರವರಿಗೆ ಆ ದಯಾಘನನಾದ ಪರಮಾತ್ಮನು ಇನ್ನೂ ಹೆಚ್ಚಿನ ಆಯುರಾರೋಗ್ಯವನ್ನೂ ಸಂಪದಭಿವೃದ್ಧಿಯನ್ನೂ ದಯಪಾಲಿಸಲೆಂದು ಪ್ರಾರ್ಥಿ ಸುತ್ತೇವೆ,

—: ಜಯ ಹಿಂದ :—

ರ್‍ಯಾಂಗ್ಲರ ಪಾವಟೆಯವರು ಹಾಗು ಕರ್ನಾಟಕ ವಿಶ್ವವಿದ್ಯಾಲಯವು

ಲೇಖಕರು : **ಶ್ರೀ ಎಸ್. ಎಸ್. ಮುಕರಿ,** ಶಿ. ವಿ. ಗಂ. ಸ. ಟ್ರೇ. ಕಾ. ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ ಕನ್ನಡಿಗರಿಗೊಂದು ಹೆಮ್ಮೆಯ ವಿಷಯ. ಭಾರತದಲ್ಲಿ ಬೇರೆ ಬೇರೆ ಕಡೆಗೆ ವಿಶ್ವವಿದ್ಯಾಲಯಗಳು ತಲೆ ಎತ್ತಿ ನಿಂತು ಅದೆಷ್ಟೋ ವರ್ಷಗಳು ಗತಿಸಿ ಹೋಗಿದ್ದರೂ, ಕರ್ನಾಟಕಕ್ಕೆ ತನ್ನದೇ ಆದ ವಿಶ್ವವಿದ್ಯಾಲಯವು ಇರಲಿಲ್ಲ. ಉಚ್ಚ ಶಿಕ್ಷಣ ದೃಷ್ಟಿಯಿಂದ ಕನ್ನಡ ನಾಡು ಪರಾವಲಂಬಿಯಾಗಿಯೇ ಉಳಿದಿತ್ತು. ಆದರೆ ಕನ್ನಡಿಗರ ಅವಿರತ ಹೋರಾಟದ ಫಲವಾಗಿ ೧೯೫೦ನೆಯ ವರುಷ ಕರ್ನಾಟಕ ವಿಶ್ವವಿದ್ಯಾಲಯವು ಪ್ರಾರಂಭವಾಯಿತು. ವಿಶ್ವವಿದ್ಯಾಲಯದ ಕಾರ್ಯಕ್ಷೇತ್ರ ವಿಶಾಲವಾದುದು. ಪ್ರಾದೇಶಿಕ ಸಾಹಿತ್ಯ, ಇತಿಹಾಸ, ಸಂಸ್ಕೃತಿ, ಹಾಗೂ ಸಮಾಜ ಜ್ಞಾನ ಇವುಗಳ ಉಚ್ಚ ಅಭ್ಯಾಸ, ಅಭಿವೃದ್ಧಿಗಳ ಕಾರ್ಯಕ್ಕೆ ವಿಶ್ವವಿದ್ಯಾಲಯವು ತಕ್ಕ ಕಾರ್ಯಕ್ಷೇತ್ರವಾಯಿತು. ವಿದ್ಯಾಲಯದ ಕಾರ್ಯ ಬಹು ಮುಖವಾಗಿರುವದರಿಂದ ಅದರ ಸಂಚಾಲಕರು, ಮೇಧಾವಿಗಳೂ, ಕಾರ್ಯ ಸಂಘಟನಾ ತತ್ಪರರೂ ಉಚ್ಚ ವ್ಯಕ್ತಿತ್ವ ಉಳ್ಳವರೂ ಆಗಿರಬೇಕೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇದನ್ನರಿತೇ ವಿಶ್ವವಿದ್ಯಾಲಯದ ಸಿನೇಟ ಸದಸ್ಯರು ರ್‍ಯಾಂಗಲರ ಡಿ. ಸಿ. ಪಾವಟೆಯವರನ್ನು ೧೯೫೪ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳನ್ನಾಗಿ ಆಯ್ಕೆ ಮಾಡಿದರು.

ಶ್ರೀ ಡಿ. ಸಿ. ಪಾವಟೆಯವರು ರಾಜ್ಯ ಪುನರ್ಘಟನಾ ಪೂರ್ವದಲ್ಲಿಯ ಮುಂಬೈ ಪ್ರಾಂತದ ಶಿಕ್ಷಣ ಶಾಖೆಯಲ್ಲಿ ಬಹಳ ಕಾಲ ದುಡಿದವರು. ಅವರು ತಾವು ಸೇವಾ ನಿವೃತ್ತಿಯನ್ನು ಪಡೆಯುವ ಮುನ್ನ ೭ ವರುಷಗಳ ಕಾಲ ಶಿಕ್ಷಣ ಶಾಖೆಯ ಡಾಯರೆಕ್ಟರರಾಗಿ ಸೇವೆ ಸಲ್ಲಿಸಿದರು. ಕೋಲಂಬಿಯಾ ವಿಶ್ವವಿದ್ಯಾಲಯದಲ್ಲಿ ಉಚ್ಚ ಶಿಕ್ಷಣ ಪಡೆದು, ಗಣಿತ ವಿಷಯದಲ್ಲಿ ರ್‍ಯಾಂಗ್ಲರ ಉಪಾಧಿಯನ್ನು ಪಡೆದವರು. ಇಂಗ್ಲೀಷ ಭಾಷೆಯ ಮೇಲೆ ತುಂಬಾ ಪ್ರಭುತ್ವವನ್ನು ಸಂಪಾದಿಸಿದ್ದಾರೆ. ಮಾತೃಭಾಷೆಯಾದ ಕನ್ನಡಕ್ಕಿಂತಲೂ ಇಂಗ್ಲೀಷದಲ್ಲಿ ಅಸ್ಖಲಿತವಾಗಿ ಭಾಷಣ ಮಾಡಬಲ್ಲರು. ರ್‍ಯಾಂಗ್ಲರ ಪಾವಟೆಯವರು ಪ್ರಾಥಮಿಕ ವರ್ಗಗಳಿಂದ ಮೊದಲ್ಗೊಂಡು ಸ್ನಾತಕೋತ್ತರ ಶಿಕ್ಷಣ ವರ್ಗಗಳ ವರೆಗೂ ಗಣಿತ ವಿಷಯದ ಮೇಲೆ ಪುಸ್ತಕಗಳನ್ನು ಬರೆದಿರುತ್ತಾರೆ. ಅವುಗಳಲ್ಲಿ ಹಲವಾರು ಪುಸ್ತಕಗಳು ಪಠ್ಯಪುಸ್ತಕಗಳೆಂದು ಮಂಜೂರ ಆಗಿರುವದರಿಂದ ಗಣಿತ ವಿಷಯದಲ್ಲಿಯ ಅವರ ಪರಿಣತಿಯ ಅರಿವು ನಮಗೆ ಉಂಟಾಗುತ್ತದೆ. ರ್‍ಯಾ. ಪಾವಟೆಯವರು ತಮ್ಮ ವಿದ್ವತ್ತಿಯಿಂದ ಅಖಿಲ ಭಾರತದಲ್ಲಿಯ ನಾಲ್ವತ್ತು ವಿಶ್ವವಿದ್ಯಾಲಯಗಳ ಉಪಕುಲಪತಿಗಳ ಪ್ರಾತಿನಿಧಿಕ ಸಂಘದ ಅಧ್ಯಕ್ಷರಾಗಿಯೂ ಕೆಲಸ ಮಾಡುತ್ತಿರುವದು ಕನ್ನಡಿಗರಿಗೆ ತುಂಬಾ ಹೆಮ್ಮೆಯ ವಿಷಯ.

ಕರ್ನಾಟಕ ವಿಶ್ವವಿದ್ಯಾಲಯವು ಇನ್ನೂ ಶೈಶವಾವಸ್ಥೆಯಲ್ಲಿರುವದರಿಂದ ಹಲವಾರು ಸಮಸ್ಯೆಗಳನ್ನು ಅದು ಎದುರಿಸಬೇಕಾಗಿದೆ. ಕಟ್ಟಡ, ಪುಸ್ತಕ–ಭಾಂಡಾರ, ನುರಿತ ಪ್ರಾಧ್ಯಾಪಕ ವರ್ಗ, ನವ ಸಂಶೋಧನೆಗಳು ಮುಂತಾದ ನೂರೆಂಟು ಸಮಸ್ಯೆಗಳನ್ನು ಅದು ನಿರ್ವಹಿಸಬೇಕಾಗಿದೆ. ರ್‍ಯಾ. ಪಾವಟೆಯವರ ಕರ್ತವ್ಯ ದಕ್ಷತೆಯಿಂದ ನಿಸರ್ಗ ರಮಣೀಯವಾದ ಸುಂದರ ಬನಸಿರಿಯಿಂದ ಕೂಡಿದ ಧಾರವಾಡದ "ಛೋಟಾಮಹಾಬಳೇಶ್ವರದಲ್ಲಿ ವಿಶ್ವವಿದ್ಯಾಲಯದ ಭವ್ಯ ಕಟ್ಟಡವು ತಲೆ ಎತ್ತಿ ಕರ್ನಾಟಕದ ಸಂಸ್ಕೃತಿಯನ್ನು ಬೀರುವ ಸೂರ್ಯಸೋಪಾದಿಯಾಗಿ ನಿಂತಿದೆ.

ರ್‍ಯಾ. ಡಿ. ಸಿ. ಪಾವಟೆಯವರು ಎತ್ತರ ನಿಲುವಿಕೆಯುಳ್ಳವರಿರುವಂತೆ, ಎತ್ತರ ವಿಚಾರವುಳ್ಳವರೂ ಆಗಿರುತ್ತಾರೆ. ಕರ್ನಾಟಕ ವಿಶ್ವವಿದ್ಯಾಲಯವನ್ನು ಭಾರತದಲ್ಲಿಯೇ ಆದರ್ಶ ವಿದ್ಯಾಲಯವನ್ನಾಗಿ ಮಾಡುವ ಹಂಬಲ ಅವರಿಗೆ ವಿಶೇಷವಾಗಿ ಇದೆ. ತಮ್ಮ ಭಾಷೆಯವರೇ ಆದ ಉಪಕುಲಪತಿಗಳನ್ನು ಪಡೆದ ಪ್ರಾದೇಶಿಕ ವಿಶ್ವವಿದ್ಯಾಲಯಗಳು ಅತಿ ವಿರಳ. ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕನ್ನಡಿಗರೇ ಆದ ರ್‍ಯಾ. ಪಾವಟೆಯವರು ಉಪಕುಲಪತಿಗಳಾಗಿರುವದು ನಮ್ಮ ನಾಡಿನ ಪುಣ್ಯವೆಂದೇ ಹೇಳಬೇಕು.

೧೯೫೭ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸಿನೇಟು ರ್‍ಯಾ. ಪಾವಟೆಯವರ ಉಚ್ಚ ವಿಚಾರ, ಬೃಹತ್ ಕಾರ್ಯ ಸಂಘಟನೆ ಹಾಗೂ ವಿದ್ಯಾಲಯದ ಮೇಲೆ ಅವರಿಗೆ ಇರುವ ತುಂಬ ಆತ್ಮೀಯತೆಯನ್ನು ಅರಿತು ಪುನಃ ಅವರನ್ನೇ ಉಪಕುಲಪತಿಗಳನ್ನಾಗಿ "ಆಯ್ಕೆ" ಮಾಡಿತು. ಈ ಸಲ ಪಾವಟೆಯವರು ಅವಿರೋಧವಾಗಿ "ಆಯ್ಕೆ" ಹೊಂದಿದುದರಿಂದ ಅವರು ಕನ್ನಡಿಗರ ಹಾಗೂ ಆಡಳಿತ ವರ್ಗದ ಮೆಚ್ಚಿಗೆಗೆ ಹೇಗೆ ಕಾರಣರಾಗಿದ್ದಾರೆಂಬುದು ಸ್ಪಷ್ಟವಾಗುತ್ತದೆ.

ಬೆಂಗಳೂರಿನ 'ವಿಧಾನ ಸೌಧ'ವನ್ನು ನೋಡಿದಾಗ ಮೈಸೂರಿನ ಹಿಂದಿನ ಮುಖ್ಯ ಮಂತ್ರಿಗಳಾದ ಕೆ. ಹನುಮಂತಯ್ಯನವರ ಜ್ಞಾಪಕ ಬರುವಂತೆ, ಕರ್ನಾಟಕ ವಿಶ್ವವಿದ್ಯಾಲಯದ ಭವ್ಯ ಕಟ್ಟಡವನ್ನು ನೋಡಿದಾಗ ಉಪಕುಲಪತಿ ರ್‍ಯಾ. ಪಾವಟೆಯವರ ಸ್ಮರಣೆ ತಕ್ಷಣ ಉಂಟಾಗುತ್ತದೆ. ಕಟ್ಟಡದ ಕಾರ್ಯ ಇನ್ನೂ ನಡೆದಿದೆ. ಉಪಕುಲಪತಿಗಳು ದಿನವಹಿ ವಿಶ್ವವಿದ್ಯಾಲಯದ ಸುತ್ತಲೂ ಅಡ್ಡಾಡಿ ಸ್ವತಃ ಶಿಲ್ಪಿಗಳಿಗೆ ಸಲಹೆ ಸೂಚನೆಗಳನ್ನು ಕೊಡುತ್ತಿರುವದನ್ನೂ ನೋಡಿದರೆ ಅವರಿಗೆ ವಿದ್ಯಾಲಯದ ಬಗೆಗೆ ಇರುವ ಆತ್ಮೀಯತೆಯ ಕಲ್ಪನೆ ನಮಗೆ ಬರುವದು.

ವಿಶ್ವವಿದ್ಯಾಲಯವು ಒಂದು ಸ್ವಾಯತ್ತ ಸಂಸ್ಥೆ. ಸರಕಾರ ನಿರ್ದೇಶನ ಮಾಡಬಲ್ಲದೇ ವಿನಃ ದೈನಿಕ ಆಡಳಿತೆಯಲ್ಲಿ ಹಸ್ತಕ್ಷೇಪ ಮಾಡಲಾರದು. ಕೋಟಿಗಟ್ಟಲೆ ಹಣ ವಿನಿಯೋಗಿಸಿ, ರಾಷ್ಟ್ರದ ಹಣದ ಸದ್ವಿನಿಯೋಗ ಮಾಡಬಲ್ಲ ಸ್ವಾಯತ್ತ ಸಂಸ್ಥೆಗಳು ರಾಷ್ಟ್ರದಲ್ಲಿ ಎಷ್ಟು ಸಿಕ್ಕ ಬಲ್ಲವು ? ಸಾರ್ವಜನಿಕ ಕಾರ್ಯವೆನ್ನುವದು ಯಾವಾಗಲೂ ಟೀಕೆಗೆ ಗುರಿಯಾಗದೇ ಇರಲಾರದು. ಆದರೆ ನಮ್ಮ ಕರ್ನಾಟಕ ವಿಶ್ವವಿದ್ಯಾಲಯವು ರ್‍ಯಾ. ಡಿ.ಸಿ. ಪಾವಟೆಯವರ ಘನ ಸಂಚಾಲಕತ್ವದಲ್ಲಿ ಇಂಥ ದೋಷಾರೋಪಣೆಯಿಂದ ಸಂಪೂರ್ಣವಾಗಿ ನಿರ್ಲಿಪ್ತವಾಗಿದೆ.

ಭಾರತದ ವಿಶ್ವವಿದ್ಯಾಲಯಗಳ ಗ್ರ್ಯಾಂಟ್ಸ ಆಯೋಗದ ಕೇಂದ್ರ ಸಮಿತಿಯ ಅಧ್ಯಕ್ಷರೂ ಕೇಂದ್ರದ ಹಿಂದಿನ ಹಣಕಾಸಿನ ಮಂತ್ರಿಗಳೂ ಆದ ಶ್ರೀ ಸಿ. ಡಿ. ದೇಶಮುಖರವರು ನಮ್ಮ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪಾವಟೆಯವರನ್ನು ತುಂಬು ಮನಸ್ಸಿನಿಂದ ಶ್ಲಾಘಿಸಿದ್ದಾರೆ. ಪಾವಟೆಯವರ ಘನ ವ್ಯಕ್ತಿತ್ವದಿಂದಲೇ ಗ್ರ್ಯಾಂಟ್ಸ ಆಯೋಗದಿಂದ ಅದರ ಬೇಡಿಕೆಗಳಿಗೆಲ್ಲ ಸಾಕಷ್ಟು ಹಣ ಸಂದಾಯವಾಗುತ್ತಲಿದೆ.

ವಿಶ್ವವಿದ್ಯಾಲಯ ಹಾಗೂ ಸರಕಾರಗಳ ನಡುವೆ ಒಮ್ಮತಕ್ಕಿಂತ ಭಿನ್ನಾಭಿಪ್ರಾಯವೇ ಹೆಚ್ಚುತ್ತಿರುವ ಪ್ರಜಾಪ್ರಭುತ್ವೀ ಭಾರತದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸರಕಾರದೊಡನೆ ಸಂಪೂರ್ಣವಾಗಿ ಸಹಮತದಿಂದ ನಡೆದುಕೊಳ್ಳುತ್ತಿರುವದು ಪಾವಟೆಯವರ ವಿದ್ವತ್ತತೆಯ ಪ್ರತೀಕವಾಗಿದೆ. ಸಮರ್ಥ ಉಪಕುಲಪತಿಗಳ ಮಾರ್ಗದರ್ಶನದಲ್ಲಿ ನಮ್ಮ ವಿಶ್ವವಿದ್ಯಾಲಯವು ಸಾಯಿನ್ಸ, ಆರ್ಟ್ಸ, ಮೆಡಿಕಲ್ ಮತ್ತು ಎಂಜನೀಯರಿಂಗ ಮುಂತಾದ ೩೨ ಕಾಲೇಜುಗಳ ಆಡಳಿತವನ್ನು ನಡೆಸುತ್ತಿರುವದಲ್ಲದೆ ಸಂಶೋಧನೆ, ಉಪನ್ಯಾಸಮಾಲೆ, ಗ್ರಂಥಪ್ರಕಾಶನ ವಾಚನಾಲಯ ಮುಂತಾದ ಲೋಕ ಕಲ್ಯಾಣ ಕಾರ್ಯವನ್ನು ನಿತ್ಯ ನಡೆಸುತ್ತಲಿದೆ.

ಕನ್ನಡಿಗರಿಗೆಲ್ಲ ಅಭಿಮಾನಾಸ್ಪದರೂ, ಭಾರತದ ಹೆಮ್ಮೆಯ ಪುರುಷರೂ ಆದ ರ್‍ಯಾ. ಡಾ. ಡಿಂ. ಪಾವಟೆಯವರು ಇಂದಿಗೆ ೬೦ ವರುಷಗಳ ತುಂಬು ಜೀವನವನ್ನು ಪಡೆದವರಾಗಿದ್ದಾರೆ. ಇಂದು ಭಾರತದ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದರ ಘನ ಅಧ್ಯಕ್ಷತೆಯಲ್ಲಿ ಶ್ರೀ ಪಾವಟೆಯವರ ಷಷ್ಟ್ಯಬ್ದಿಪೂರ್ತಿ ಸಮಾರಂಭವು ಬಹು ವಿಜೃಂಭಣೆಯಿಂದ ನೆರವೇರುತ್ತಲಿದೆ. ಕೇವಲ ಕನ್ನಡಿಗರಿಷ್ಟೇ ಅಲ್ಲ, ಭಾರತದ ಭಿನ್ನ ಭಿನ್ನ ಭಾಗಗಳಿಂದ ನಾಮಾಂಕಿತ ಶಿಕ್ಷಣ ತಜ್ಞರೂ ಮೇಧಾವಿಗಳೂ, ರಾಜಕಾರಣಿಗಳೂ ಈ ಸಮಾರಂಭಕ್ಕೆ ಆಗಮಿಸಿ ರ್‍ಯಾ. ಪಾವಟೆಯವರಿಗೆ ತಮ್ಮ ಗೌರವವನ್ನು ವ್ಯಕ್ತಪಡಿಸಿದ್ದಾರೆ.

ರ್‍ಯಾ. ಪಾವಟೆಯವರ ವಜ್ರಮಹೋತ್ಸವದ ಸವಿನೆನಪಿಗಾಗಿ ಕನ್ನಡಿಗರು ೧|| ಲಕ್ಷ ರೂಪಾಯಿಗಳ ಹಮ್ಮಿಣಿಯನ್ನು ಉಪಕುಲಪತಿಗಳಿಗೆ ಅರ್ಪಿಸಿದ್ದಾರೆ. ಈ ಹಣವನ್ನು ಕರ್ನಾಟಕ ವಿಶ್ವವಿದ್ಯಾಲಯದ ಪುರೋಭಿವೃದ್ಧಿಗಾಗಿ ಅರ್ಪಿಸಿ, ರ್‍ಯಾ. ಪಾವಟೆಯವರು ತಮ್ಮ ಉದಾರತನವನ್ನು ವ್ಯಕ್ತಪಡಿಸಿರುತ್ತಾರೆ. ಇವರ ಸ್ಮರಣೆ ಸದಾವ

ಕಾಲ ಉಳಿಯಲು ಕನ್ನಡಿಗರು ಮಾಡಿದ ಈ ಕಾರ್ಯ ಅವರ ಸೇವೆಗೆ ಅಲ್ಪವೆಂದೇ ಹೇಳಬೇಕು. ಷಷ್ಟ್ಯಬ್ದಿಪೂರ್ತಿ ಸಮಾರಂಭದಲ್ಲಿ ಭಾರತದ ಗಣ್ಯ ಲೇಖಕರು ಬರೆದ ಉದ್ಗ್ರಂಥವನ್ನು ಪಾವಟೆಯವರಿಗೆ ಅರ್ಪಿಸುತ್ತಲಿರುವದು ಒಂದು ಸಂತೋಷದ ಸಂಗತಿ.

ಶ್ರೀ ಪಾವಟೆಯವರ ಸೇವೆ ಕರ್ನಾಟಕಕ್ಕೆ ಬಹು ಕಾಲ ದೊರೆಯಲಿ, ಹಾಗೂ ಪರಮಾತ್ಮನು ಲೋಕ ಕಲ್ಯಾಣ ಕಾರ್ಯದಲ್ಲಿ ನಿರತರಾದ ಪಾವಟೆಯವರಿಗೆ ಆಯುರಾರೋಗ್ಯ ಸಂಪದಭಿವೃದ್ಧಿಯನ್ನು ದಯಪಾಲಿಸ ಲೆಂದು ಪ್ರಾರ್ಥಿಸೋಣ.

ರ್‍ಯಾಂಗಲರ ಪಾವಟೆ ಅವರು

ಲೇಖಕರು : ಶ್ರೀ ಬಿ. ಎ. ದೊಡ್ಡಮನಿ, ಶಿ. ವಿ. ಗಂ. ಸ. ಟ್ರೇ. ಕಾ. ಧಾರವಾಡ

"ವಿದ್ಯಾ ವಿನಯೇನ ಶೋಭತೆ" ಎಂಬ ಮಾತನ್ನು ನಾನು ಶ್ರೀಯುತ ಡಿ. ಸಿ. ಪಾವಟೆಯವರ ವ್ಯಕ್ತಿತ್ವದಿಂದ ಮನಗಂಡೆನು. ರ್‍ಯಾಂಗ್ಲರ್ ಎಂಬ ಪದವಿ ಸಂಪಾದಿಸಿದ ಹರವಾದ ಹಣೆ, ಗಾತ್ರದೇಹವುಳ್ಳ, ಗಂಭೀರ ಸ್ವರೂಪವುಳ್ಳ ಕಾಂತಿಯುಕ್ತ ಕಣ್ಣುಗಳುಳ್ಳ ಅವರನ್ನು ಮನದಣಿಯೇ ನೋಡಬೇಕೆಂಬ, ಮಾತನಾಡಬೇಕೆಂಬ ಕುತೂಹಲವು ಪ್ರತಿಯೊಬ್ಬರಲ್ಲೂ ಮೂಡಿ ಬರುವದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಜಗತ್ತಿನಲ್ಲಿ ಅನೇಕ ಮೇಧಾವಿಗಳಿರುವದುಂಟು. ನಮ್ಮ ಭಾರತದಲ್ಲಿಯ ಗಣಿತ ಶಾಸ್ತ್ರಜ್ಞರಲ್ಲಿ ಶ್ರೀಯುತರು ಅಗ್ರಗಣ್ಯರು. ಗಣಿತ ಶಾಸ್ತ್ರಕ್ಕೂ ಪಾವಟೆಯವ ರಿಗೂ ನಿಕಟ ಸಂಬಂಧವಿದೆ. ಸರ್ವ ಶಾಸ್ತ್ರಗಳಲ್ಲಿ ಗಣಿತ ಶಾಸ್ತ್ರವು ಗಡುಚಾದುದು. ಕಹಿವಸ್ತುವನ್ನು ಸಿಹಿಯನ್ನಾಗಿ ಮಾರ್ಪಡಿಸುವಂತೆ ದಾದಾಸಾಹೇಬರು ಆ ಕಠಿಣ ಶಾಸ್ತ್ರ ವನ್ನೇ ಸುಲಭ ಶಾಸ್ತ್ರವನ್ನಾಗಿ ರೂಪಿಸಿರುವರು. ಭಾಷೆ, ಮತ್ತು ಗಣಿತ ವಿಷಯಗಳು ವ್ಯವಹಾರದಲ್ಲಿ ಹೆಚ್ಚು ಬಳಕೆ ಯಲ್ಲಿ ಬರುವದುಂಟು. ಅದಕ್ಕಾಗಿಯೇ ಗಣಿತಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಡುವದುಂಟು. ಪ್ರಾಥಮಿಕ ಶಿಕ್ಷಣದಿಂದ ಸ್ನಾತಕೋತ್ತರ ಶಿಕ್ಷಣದ ವರೆಗೆ ಗಣಿತ ಪಠ್ಯ ಪುಸ್ತಕ ಗಳನ್ನು ಬರೆದು ಸಕಲರಿಗೂ ಸಹಾಯ ನೀಡಿದ ಶ್ರೀ ಪಾವಟೆಯವರು ನಿಜವಾಗಿಯೂ ಶಾರದಾದೇವಿಯ ಸುಕುಮಾರರು. ಸರಸ್ವತಿಯು ಡಿ. ಸಿ. ಯವರ ಮೆದುಳಿನಲ್ಲಿಯೇ ವಾಸವಾಗಿರುವಳೋ ಏನೋ? ಅದೆಂತಹ, ಬುದ್ಧಿ ಶಕ್ತಿ! ಕ್ಷಣಾರ್ಧದಲ್ಲಿ ಕಠಿಣವಾದ ಗಣಿತಗಳನ್ನು ಬಿಡಿಸುವ ಅಗಾಧ ಶಕ್ತಿಯನ್ನು ದಾದಪ್ಪನ ವರು ಪಡೆದಿರುವರು ನಮ್ಮೆಲ್ಲರ ಸೌಭಾಗ್ಯ. ಅವರು ಬರೆದ ಅನೇಕಗಣಿತ ಪುಸ್ತಕಗಳು ಶ್ಲಾಘನೀಯವಾಗಿವೆ. ಅಂಕಗಣಿತ ಶಾಸ್ತ್ರವೇ ಅವರ ಪ್ರಭೆಯ ಪ್ರತೀಕಗಳಾಗಿ ಪ್ರಕಟವಾಗಿವೆ.

ಬೆಳಗಾಂವಿ ಜಿಲ್ಲೆಯ ಗೋಕಾಕ ತಾಲೂಕಿನ ಮಮದಾಪುರ ಗ್ರಾಮದಲ್ಲಿ ಕ್ರಿ. ಶ. ೧೮೯೯ ನೆಯ ಅಗಸ್ಟ ಎರಡನೆಯ ದಿನಾಂಕಕ್ಕೆ ಬಡ ಕುಟುಂಬದಲ್ಲಿ ಚಿಂತಪ್ಪನ ವರ ಸುಪುತ್ರರಾಗಿ ಜನಿಸಿದರು. ದಾದಾಸಾಹೇಬರು ಇಂಥ ವ್ಯಕ್ತಿಯು ಕೇವಲ ಕರ್ನಾಟಕ್ಕಲ್ಲ, ಭಾರತಕ್ಕಷ್ಟೇ ಅಲ್ಲ, ಇಂದು ವಿಶ್ವ ಮಾನವರಾಗಿದ್ದಾರೆ. ಪ್ರಾಥಮಿಕ ಶಿಕ್ಷಣ ವನ್ನು ಮಮದಾಪುರದಲ್ಲಿಯೇ ಪ್ರಾರಂಭಿಸಿದರು. ಮೊದ ಲಿನಿಂದಲೂ ಅವರದು ಚಿಕಿತ್ಸಕ ಬುದ್ಧಿ. ಪ್ರತಿಯೊಂದನ್ನು ಬುದ್ಧಿಯ ಒರೆಗಲ್ಲಿಗೆ ಹಚ್ಚಿ ನೋಡುವ ಸಾಹಸ! ಅಂತೆ ಯೇ ಅವರು ಮೊದಲಿನಿಂದಲೂ ಉಜ್ವಲ ಭವಿಷ್ಯದ ಬಗೆಗೆ ಭರವಸೆ ನೀಡುತ್ತ ಬಂದರು. ಪ್ರಾಥಮಿಕ ಶಿಕ್ಷಣ ಮುಗಿಸಿದ ಮೇಲೆ ಕೊಲ್ಲಾಪುರದ ರಾಜಾರಾಮ ಹೈಯ ಸ್ಕೂಲಿನಲ್ಲಿ ಸೇರಿ ಅಲ್ಲಿಂದಲೇ ೧೯೧೭ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಗುಣಗಳೊಂದಿಗೆ ತೇರ್ಗಡೆ ಹೊಂದಿದರು.

ಮಾಧ್ಯಮಿಕ ಶಿಕ್ಷಣ ಮುಗಿಸಿದ ಮೇಲೆ ಕನ್ನಡ ಗಂಡುಮೆಟ್ಟಿನ ನಾಡಾದ, ವಿದ್ಯೆಯ ತವರೂರಾದ, ಸೃಷ್ಟಿ ಸೌಂದರ್ಯದ ನೆಲೆವೀಡಾದ ಧಾರವಾಡಕ್ಕೆ ಬಂದು ಕರ್ನಾಟಕ ಕಾಲೇಜನ್ನು ಸೇರಿದರು. ಕ್ರಿ. ಶ. ೧೯೨೩ ರಲ್ಲಿ ಬಿ.ಎ. ಪರೀಕ್ಷೆಯಲ್ಲಿ ಗಣಿತ ವಿಷಯದೊಂದಿಗೆ ಪ್ರಥಮ ವರ್ಗದಲ್ಲಿ ಉತ್ತೀರ್ಣರಾದರು. ಆ ವರುಷ ಗಣಿತ ವಿಷಯ ತೆಗೆದುಕೊಂಡು ಮುಂಬಯಿ ವಿಶ್ವವಿದ್ಯಾಲಯಕ್ಕೆ ಪ್ರಥಮ ವರ್ಗದಲ್ಲಿ ಪಾಸಾದವರೆಂದರೆ ಶ್ರೀಯುತರೊಬ್ಬರೇ. ಅದೇ ವರುಷ ಕರ್ನಾಟಕ ಕಾಲೇಜಿನಲ್ಲಿ ಸೀನಿಯರ ದಕ್ಷಿಣಾ ಫೆಲೋ ಆಗಿದ್ದರು. ಬೂದಿಮುಚ್ಚಿದ ಕೆಂಡದಂತಿದ್ದ ಪಾವಟೆಯವರನ್ನು ಆಗ ಜನರು ನೋಡಿ ಅವರು ಸಂಪಾದಿಸಿದ ಅಪೂರ್ವ ಯಶಸ್ಸಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ೧೯೨೪ರಲ್ಲಿ ಇವರಿಗೆ ಕೆ. ಎಲ್. ಈ ಸಂಸ್ಥೆಯವರು ಹೆಚ್ಚಿನ ಅಭ್ಯಾಸಕ್ಕಾಗಿ ಇಂಗ್ಲಂಡಕ್ಕೆ ಕಳಿಸಿದರು. ಅವರು ಕೆಂಬ್ರಿಜ್‌ದಲ್ಲಿಯ ಸಿಡ್ನಿಸಸೆಕ್ಸ ಕಾಲೇಜ ಸೇರಿ ೧೯೨೬ ರಲ್ಲಿ ಒಂದನೂರು ಪೌಂಡಗಳ ರಿಸರ್ಚ ಸ್ಕಾಲರ್‌ಶಿಪ್ ಪಡೆದರು. ಅವರ ಅಗಾಧ ಪ್ರತಿಭೆಗೆ ಪಾಶ್ಚಿಮಾತ್ಯ-ರಾಷ್ಟ್ರ ಗೌರವ ಸಲ್ಲಿಸಿತು. ಬಿಡುವಿದ್ದಾಗಲ್ಲೆಲ್ಲ ಅವರು ಇನ್ನುಳಿದ ದೇಶಗಳ ಪರ್ಯಟನ ಕೈಕೊಂಡು ಅಲ್ಲಿಯ ಶಿಕ್ಷಣ ಸಂಸ್ಥೆಗಳಿಗೆಲ್ಲ ಹೋಗಿ ನೂರೊಂದು ಹೊಸ ಹೊಸ ಅನುಭವಗಳನ್ನು ಪಡೆದುಕೊಂಡು ೧೯೨೮ ರಲ್ಲಿ ಮಾತೃಭೂಮಿಗೆ ಮರಳಿದರು.

ಭಾರತಕ್ಕೆ ಬಂದೊಡನೆ ಬನಾರಸ ಹಿಂದೂ ವಿಶ್ವವಿದ್ಯಾಲಯದಿಂದ ಇವರಿಗೆ ಕರೆ ಬಂದಿತು. ಅದಕ್ಕಾಗಿ ಶ್ರೀಯುತರು ಅಲ್ಲಿಗೆ ಹೋಗಿ ಗಣಿತ ವಿಷಯದ ಮುಖ್ಯ ಪ್ರಾಧ್ಯಾಪಕರಾದರು. ಬನಾರಸದಲ್ಲಿ ಎರಡು ವರ್ಷ ತಮ್ಮ ಅಮೂಲ್ಯ ಸೇವೆ ಸಲ್ಲಿಸಿದರು. ೧೯೩೧ ರಲ್ಲಿ ಆಗಿನ ಸರಕಾರ ಮುಂಬಯಿ ವಿಭಾಗಕ್ಕೆ ಶ್ರೀಯುತ ಪಾವಟೆಯವರನ್ನು ಎಜ್ಯುಕೇಶನಲ್ ಇನಸ್ಪೆಕ್ಟರರನ್ನಾಗಿ ನಿಯಮಿಸಿತು. ತಾವು ಗಳಿಸಿದ ಉಚ್ಚ ಜ್ಞಾನ, ನಿಷ್ಪಕ್ಷಪಾತ ಬುದ್ಧಿ, ಅನುಭವಗಳಿಂದ ಇವರು ಶಿಕ್ಷಣ ಖಾತೆಯಲ್ಲಿ ೧೯೪೭ರಲ್ಲಿ ಡಿ. ಪಿ. ಆಯ್. ಆಗಿ ಸೇವೆ ಸಲ್ಲಿಸಿದರು.

ಪಾವಟೆಯವರು ಶಿಕ್ಷಣದ ಬೇರೆ ಬೇರೆ ಅಂಗಗಳಲ್ಲಿ ಕೆಲಸ ಮಾಡಿದರೂ ಅವರ ಹೆಸರು ಉಳಿಯುವದು ಒಂದು ಸಂಸ್ಥೆಯೊಂದರಿಂದಲೇ ಎಂದು ಹೇಳಬಹುದು. ಈ ಇಪ್ಪತ್ತನೆಯ ಶತಮಾತನದಲ್ಲಿ ಜ್ಞಾನದ ಹಸಿವೇ ಮಿಗಿಲಾದ ಹಸಿವು. ಈ ಹಸಿವನ್ನು ಹಿಂಗಿಸಲು ಪಾವಟೆಯವರು ತಮ್ಮ ಐವತ್ತೈದನೆಯ ವರುಷದಲ್ಲಿ ಡೈರೆಕ್ಟರ್ ಸ್ಥಾನದಿಂದ ನಿವೃತ್ತರಾಗಿ ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಅಪೂರ್ವ ಪ್ರಗತಿಯನ್ನು ತೋರಿಸಿರುವರು. ಅವರ ಅವಿಶ್ರಾಂತ ಪರಿಶ್ರಮದಿಂದ ವಿಶ್ವವಿದ್ಯಾನಿಲಯವು ದೇವ ಮಂದಿರವಾಗಿದೆ. ವಿದ್ಯಾರ್ಥಿಗಳ ಹಾಗೂ ಇಂದಿನ ತರುಣ ಜನಾಂಗದ ಬಗೆಗೆ ಪಾವಟೆಯವರು ಬಹು ಆಶಾವಾದಿಗಳಾಗಿದ್ದಾರೆ. ಈ ನಾಡಿನ ಸಾಹಿತ್ಯ, ಸಂಸ್ಕೃತಿ, ಉಜ್ವಲವಾದ ಪರಂಪರೆ ಹಾಗೂ ಇತಿಹಾಸದ ಬಗೆಗೆ ಪಾವಟೆಯವರಲ್ಲಿ ಅಪಾರವಾದ ಗೌರವವಿದೆ.

ಜೀವನಕ್ಕೆ ಶಿಕ್ಷಣವು ಅವಶ್ಯವಾದುದು. ಪರರಾಷ್ಟ್ರಗಳಲ್ಲಿ ಸಂಚರಿಸಿ ಸರ್ವ ವಿಷಯ ಜ್ಞಾನ ಮಾಡಿಕೊಂಡ ಪಾವಟೆಯವರು ಕರ್ನಾಟಕ ವಿಶ್ವವಿದ್ಯಾಲಯವನ್ನು ಒಂದು ಮಾದರಿಯ ವಿಶ್ವವಿದ್ಯಾಲಯ ಮಾಡಬೇಕೆಂದು ಬಯಸಿ ಈಗ ಉಚ್ಚ ವಿಶ್ವವಿದ್ಯಾಲಯವನ್ನಾಗಿ ಮಾಡಿದ್ದಾರೆ. ಇಂತಹ ಮಹಾನುಭಾವರ ವಜ್ರಮಹೋತ್ಸವವನ್ನು ಇಂದು ನಾವು ಅತೀವ ವೈಭವದಿಂದ ಆಚರಿಸುವ ಭಾಗ್ಯ ದೊರಕಿದುದು ಪುಣ್ಯ ವಿಶೇಷ.

ಶ್ರೀ ಪಾವಟೆಯವರ ಜನ್ಮಕುಂಡಲಿ

ಲೇಖಕರು : ಪಂಡಿತ ಕೇಶವ ಶರ್ಮಾ, ಗಲಗಲಿ

ಶಾಸ್ತ್ರಜ್ಞರು ಮಧ್ಯಾಹ್ನ ಕಾಲೀನ ಕುಂಡಲಿಯನ್ನು ಹಾಕುವ ಸಂಪ್ರದಾಯದಂತೆ ಮಧ್ಯಾಹ್ನ ಕಾಲೀನ ಕುಂಡಲಿಯನ್ನು ಹಾಕಿದೆ. ವೃಶ್ಚಿಕಲಗ್ನವು ಬರುವದು. ಮಂಗಳನ ಸದ್ಗುಣ, ನಿಗ್ರಹಶಕ್ತಿ ಮತ್ತು ಗಣಿತಪಟುತ್ವ ಇವುಗಳು ಅವರಲ್ಲಿ ಇರುವದರಿಂದ ಮತ್ತು ಅವರ ಆಕಾರ ಮಾನದಿಂದ **ಸಿಂಹ** ಅಥವಾ ವೃಶ್ಚಿಕ ಲಗ್ನವು ಇರಬೇಕೆಂದು ಪ್ರತೀತಿಗೆ ಬರುವದು. ಯಾವ ಲಗ್ನ ವಿದ್ದರೂ ರವಿ ಮಂಗಳರು ಸಾಹಸಪ್ರಿಯರು.

ಶುಭಯೋಗಗಳು.

ಬು. ★ ಗುರು

ರ. △ ಹ.

ರ. △ ಶ.

ಶ. ★ ಮಂ.

ಚ. ೬ ನೇ.

ನೇ. △ ಗು.

ಸಾಯನ

R ಶ೧೭-೨೨



ಚ. ೨೩-೩೦

ನೇ ೨೬-೮

ಮಂ. ೨೭-೪೨

ಬು. ೩-೨೦.

ಅಶುಭಯೋಗ

ಚಂದನೇ □ ಮಂ.

ಚ. ೦—೦ ಶನಿ.

ಶು. ೨೭-೪೦ ರ □ ಗು.

ಸೂ :— ಕುಂಡಲಿಯಲ್ಲಿ ಅನೇಕ ಸಂಕೇತಗಳಿದ್ದು ಸಾಧ್ಯವಿದ್ದಷ್ಟು ಸಂಕೇತಗಳನ್ನು ಮಾತ್ರ ಹಾಕಲಾಗಿದೆ.

ರವಿ ಹರ್ಶಲ △, ರವಿ ಶನಿ △ ಯೋಗಗಳು. ನಿಶ್ಚಿತವಾಗಿ ದೀರ್ಘಾಯುಷ್ಯವನ್ನು ಕೊಡುವವು. ರವಿ ಆಯುರ್ದಾಯಕಾರಕ ತನ್ನ ಸ್ವಕ್ಷೇತ್ರದಲ್ಲಿದ್ದು ಬೃಹಸ್ಪತಿಯೊಡನೆ ಶುಭಯೋಗ ಮಾಡುವನು.

೭೦–೭೧ ವರ್ಷಗಳಿಗೆ ಪುನಃ ಚಲಿತ ರವಿ ಶನಿ ಶುಭಯೋಗವಾಗುವದು. ಸುಮಾರು ೭೫ಕ್ಕಿಂತ ಹೆಚ್ಚಿಗೆ ಅವರ ಆಯುಷ್ಯವಿರುವದು.

ರವಿ ಸ್ವಕ್ಷೇತ್ರದಲ್ಲಿ ದಶಮದಲ್ಲಿ ಹರ್ಶಲನ △ ದಲ್ಲಿ ಅದ್ಭುತ ಆಕಸ್ಮಿಕ ಕೀರ್ತಿ ಗೌರವಗಳನ್ನು ಕೊಟ್ಟಿರುವವು. ೬೪-೬೬ನೇ ವರ್ಷಗಳಲ್ಲಿ ಪ್ರವಿಷ್ಟ ಗುರುವಿನ ದೃಷ್ಟಿ ಇತೋಪ್ಯಧಿಕ ಗೌರವ ಕೀರ್ತಿ.

ವಿದ್ಯಾಯೋಗ :– ಶ್ರೀ ಪಾವಟೆಯವರ ಕುಂಡಲಿಯಲ್ಲಿ ಬಲವತ್ತರ ವಿದ್ಯಾಯೋಗಗಳಿರುವವು. ವಿದ್ಯಾಕಾರಕರು ಬುಧನು ಉಚ್ಚರಾಶಿಯಲ್ಲಿ, ಗುರು ವೃಶ್ಚಿಕದಲ್ಲಿ ಉಚ್ಚಾಂಶದಲ್ಲಿ ಇವರೀರ್ವರಿಗೂ ಶುಭಯೋಗವಿರುವದು. ಶುಕ್ರನೂ ಭಾಗ್ಯದಲ್ಲಿ ಉಚ್ಚಾಂಶದಲ್ಲಿದ್ದು, ಗಣಿತಕಾರಕ ಮಂಗಳನ ಶುಭಯೋಗದಲ್ಲಿರುವನು. ಸಂಸಾರ ಸೌಖ್ಯ ಕಾರಕ ಶುಕ್ರ ಕಲತ್ರಕಾರಕ ಶುಕ್ರ ಉಚ್ಚಾಂಶದಲ್ಲಿರುವನು. ಸಂತಾನಕಾರಕ ಗುರು ಉಚ್ಚಾಂಶದಲ್ಲಿರುವನು. ಆದ್ದರಿಂದ ಪಂಡಿತರಾಜ ಜಗನ್ನಾಥನ ಉಕ್ತಿ ಇವರ ಜೀವನದಲ್ಲಿ ಸಾರ್ಥಕವಾಗಿರುವದು

"ಲಭ್ಯತೇ ಪುಣ್ಯೈಃ ಗೃಹಿಣೀ ಮನೋಜ್ಞಾ |
ತಯಾ ಸುಪುತ್ರಾಃ ಪರಿತಃ ಪವಿತ್ರಾಃ |
ಸ್ಫೀತಂ ಯಶಸ್ತೈಃ ಸಮುದೇತಿ ನೂನಂ |
ತೇನಾಸ್ಯ ನಿತ್ಯಃ ಖಲು ನಾಕಲೋಕಃ ||

ಇದು ಗುರು ಶುಕ್ರರ ಉಚ್ಚಾಂಶದ ಫಲ.

ಶುಕ್ರನು ೯ರಲ್ಲಿ ಜಲರಾಶಿಯಲ್ಲಿ ಮೀನ ಜಲನವಾಂಶದಲ್ಲಿ ಈತನು ದೂರ ಜಲ ಪ್ರವಾಸದ ಫಲವನ್ನೂ ಕೊಟ್ಟಿರುವನು. ನವಮಾಧಿಪತಿ ಚಂದ್ರನು ವರುಣ ಯುಕ್ತ ವಾಯು ರಾಶಿಯಲ್ಲಿ ವಾಯುಯಾನದ ಫಲದಾತಾರನೆಂದು ಕಾಲಮಾನಕ್ಕನುಸರಿಸಿ ಅರ್ಥ ಮಾಡಬಹುದು.

ಚಂದ್ರ ಮಂಗಳ ಕೇಂದ್ರ. ಚಂದ್ರ ಶನಿ ಪ್ರತಿಯೋಗ ಅನೇಕ ಸಾರೆ ಅವರ ಕೈಕೊಂಡ ಮಹಾಕಾರ್ಯಗಳಲ್ಲಿ ಮಾನಸಿಕ ತೊಂದರೆಗಳನ್ನುಂಟು ಮಾಡಿರಬಹುದು. ಆದರೆ ಲಗ್ನದಲ್ಲಿ ಗುರು ಇವುಗಳನ್ನು ಚೆದರಿಸಿ ಮಾನಸಿಕ ಸಮಾಧಾನವನ್ನುಂಟು ಮಾಡುವನು. ಇದಲ್ಲದೆ ಮಂಗಳನ ಓಜೋ ರಾಶಿಯಲ್ಲಿ ಹುಟ್ಟಿದವರಲ್ಲಿ, ವಿಘ್ನಗಳನ್ನು ಎದುರಿಸುವ ಧೈರ್ಯವಿರುವದು. ಸಿಂಹ ರವಿಯಲ್ಲಿ ಹುಟ್ಟಿದವರಲ್ಲಿ, ಸಿಂಹಸದೃಶ ಪರಾಕ್ರಮವಿರುವದು. ಅಂತೆಯೇ ಅವರು ವಿಶ್ವವಿದ್ಯಾಲಯದಂಥ ಮಹಾಸುಂದರ ಮಂದಿರ ನಿರ್ಮಾಪಕರೆಂಬ ಖ್ಯಾತಿ ಪಡೆದರು.

ಪಾವಟೆಯವರ ಕುಂಡಲಿಯ ಚತುರ್ಥಾಧಿಪತಿ ಶನಿ ಗುರುವಿನ ರಾಶಿಯಲ್ಲಿ ಶುಕ್ರನ ದೃಷ್ಟಿಯಲ್ಲಿರುವನು. ಶನಿ ಗಂಭೀರ ತ್ಯಾಗಿ, ಗುರು ಜ್ಞಾನಿ, ಉದಾರ, ಶುಕ್ರ ಕರುಣಾಳು, ಈ ಮೂವರ ಸದ್ಗುಣಗಳು ಅವರ ಹೃದಯದಲ್ಲಿರುವವು. ಚತುರ್ಥಭಾವ ಹೃದಯದ್ಯೋತಕ. ನಾನು ಅವರು ಡೈರೆಕ್ಟರರಿದ್ದಾಗ, ನಿವೃತ್ತರಾದ ಬಳಿಕ ೨-೩ ಸಾರೆ ಅವರಿಗೆ ಭೆಟ್ಟಿಯಾದಾಗ ಅವರ ಸಹಾನುಭೂತಿ ಪೂರ್ಣ ಹೃದಯವನ್ನು ಮನಗಂಡಿರುವೆನು. ದಿವಂಗತ ಬಸವನಾಳರು ನನಗೆ ಶ್ರೀ ಪಾವಟೆಯವರ ಪ್ರಥಮ ಪರಿಚಯ ಮಾಡಿ ಕೊಟ್ಟರು. ಅನವರತ ವಿದ್ಯಾವ್ಯಾಸಂಗಿಗಳಾದವರ ಬಗ್ಗೆ, ಪಾವಟೆಯವರಲ್ಲಿ ಆದರದ ಭಾವನೆಯಿರುವದು. ಬಡವರ ಬಗ್ಗೆ ಅವರ ಸಹಾನುಭೂತಿ, ಸಹಕಾರಗಳು ವಿಶ್ರುತವಿರುವವು ಕರ್ನಾಟಕ ಮಾತೆ ಅವರಿಗೆ ಮಾಂಗಲ್ಯವನ್ನುಂಟು ಮಾಡಲಿ.

ವಂಶೋ ವಿಸ್ತರತಾಂ ಯಾತು.
ಕೀರ್ತಿರ್ಯಾತು ದಿಗಂತರಂ |
ಆಯುರ್ವಿಪುಲತಾಂ ಯಾತು.
ಯಸ್ಯೈಷಾ ಜನ್ಮಕುಂಡಲೀ ||

ಇದು ಪ್ರಾಕ್ತನ ಪರಾಶರಾದಿ ಋಷಿಗಳ ಆಶೀರ್ವಾದ.

—: ಶುಭಂ ಭೂಯಾತ್ :—

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು
ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರಿಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧—೧೨—೦** ,
ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿತರಿಸಿ
ಕೊಳ್ಳುವರಿವಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ನಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.

Regd. No. B. 5375

ಭಾಗ ೧ ಕವಿತಾ ಸಂಕಲನ ೧೫೦

ನಾವು ನಮ್ಮವರು

ಭಾಗ ೨ ಕಥಾ ಸಂಕಲನ ೧೫೦

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡೆ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧-೨ನೆಯ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.
- ಅಗಸ್ಟ ದಿಂದ ಅಗಸ್ಟಕ್ಕೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ೩/೪ ಬೆಲೆಯಲ್ಲಿ [ಅಂಚೆಬೇರೆ]
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪ ಹಣ ತಮ್ಮ ಶಿಕ್ಷಕ ಮಿತ್ರರ ಏಳ್ಗೆಗೆ ಮೀಸಲು. ಗೆಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! **ಸಚಿತ್ರ ಗ್ರಂಥ!!** **ಸುಂದರ ಮುದ್ರಣ!!!**

“ಶಿಕ್ಷಣ-ಶಿಕ್ಷಕ-ದರ್ಶನ”

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮನ **ತಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ, ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆ ಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್‍ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂಥ, ಅಮೋಘ ಗ್ರಂಥ.**

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯರ **ಬಣ್ಣ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್,** ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರಂಥ. **ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಅಗಸ್ಟ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್ ದಳವಾಯಿ, ಎ. ಓ. ಸಾಹೇಬರ ಅಧ್ಯಕ್ಷತೆಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಸಾದಾ ಪ್ರತಿ ೩ ರೂ.] **ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್.** [**ಸುಂದರ ಪ್ರತಿ ೪ ರೂ**

ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬೆ, ಜಿಲ್ಲಾ:— ವಿಜಾಪುರ.

Printed by Shri S. F. Kattimani, at Manohar Power Printing Press, Hubli. Edited and Published by Sjts. M. G. Katti, B. M. Shintri, S. R. Tatti & Smti. P. A. Bhaskar, at the Kannada Jeevan Shikshan Office, Govt. Training College for Men, Dharwar.

ಜೀವನ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ ಎಮ್. ಜಿ. ಕಟ್ಟಿ



ಅಕ್ಟೋಬರ ವಿಶೇಷ ಸಂಚಿಕೆ ೧೯೬೯

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : **ಶ್ರೀ ಎಮ್. ಜಿ. ಹಂದ್ರಾಳ,** ಬಿ.ಎ.(ಆನರ್ಸ), ಎಮ್.ಈಡಿ., ಡಿ.ಬಿ.ಈಡಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : **ಶ್ರೀ ಎಮ್. ಜಿ. ಕಟ್ಟಿ,** ಬಿ.ಎ.(ಆನರ್ಸ), ಬಿ.ಟಿ., ಡಿ.ಬಿ.ಈ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ., ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೫ **ಅಕ್ಟೋಬರ ೧೯೫೯** **ಸಂಚಿಕೆ ೫**

— ಪರಿವಿಡಿ —

೧.	ಸಂಪಾದಕೀಯ	....	೧
೨.	ಜೀವನ ಶಿಕ್ಷಣಕ್ಕೆ ಪರಿವರ್ತನವು ಶೀಘ್ರಗತಿಯಿಂದ ಸಾಗಲಿ.	.... ಶ್ರೀ ಎಸ್. ವ್ಹಿ. ಜೇವೂರ	೨
೩.	ಶಿಕ್ಷಕನಿಗೆ ಮಹಾತ್ಮಾ ಗಾಂಧೀಜಿಯವರ ಕೊಡುಗೆ	.... ಶ್ರೀ ಸೀ. ಗು. ನಾಡಗೀರ	೩
೪.	ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮ	.... ಶ್ರೀ ವ್ಹಿ. ಎಸ್. ಭಟ್ಟ	೫
೫.	ಮಹಾತ್ಮಾ ಗಾಂಧೀಜಿಯವರ ವಿಚಾರ ಪ್ರಣಾಲಿ	.... ಶ್ರೀ ಈಶ್ವರಚಂದ್ರ ಚಿಂತಾಮಣಿ	೯
೬.	ಪ್ರಾಥಮಿಕ ಸಾಲೆಗಳೂ ಹಾಗೂ ಅವುಗಳನ್ನು ಜೀವನ ಶಿಕ್ಷಣ ಮಾದರಿಯ ಶಾಲೆಗಳಾಗಿ ಪರಿವರ್ತನೆ ಮಾಡುವದು.	.... ಶ್ರೀ ವ್ಹಿ. ಜಿ. ದೇಶಪಾಂಡೆ	೧೨
೭.	ಸಾದಾ ಪ್ರಾಥಮಿಕ ಶಾಲೆಗಳಿಗೆ ಜೀವನ ಶಿಕ್ಷಣದ ದೀಕ್ಷೆಯನ್ನೀಯುವ ವಿಧಾನ	.... ಶ್ರೀ ತಟ್ಟಿ ಶಾಮರಾಯರು	೧೪
೮.	ಗಾಂಧೀಜಿ ಹಾಗೂ ಶ್ರಮಗೌರವ	.... ಶ್ರೀ ಎಸ್. ವ್ಹಿ. ಘೊಬ್ಬಿ	೧೬
೯.	ಜೀವನ ಶಿಕ್ಷಣ ಶಾಲೆಗಳಲ್ಲಿ ಸಾಂಘಿಕ ಜೀವನದ ಮಹತ್ವ	.... ಶ್ರೀ ಎಸ್. ಎನ್. ಭೂಸರಡ್ಡಿ	೧೮
೧೦.	ಸಾದಾ ಪ್ರಾಥಮಿಕ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳ ದಿಶೆಯಲ್ಲಿ ಮಾರ್ಪಡಿಸುವದು.	.... ಜೀ. ಬಿ. ಟಿ. ಸಿ. ಕಾಲೇಜದಿಂದ	೧೯
೧೧.	ಗಾಂಧೀವಾಣಿ ಹಾಗೂ ಮೂಲ ಶಿಕ್ಷಣ ತತ್ವ ಪ್ರಣಾಲಿ	.... ಶ್ರೀ ಎಸ್. ಎಸ್. ನಾಡಕರ್ಣಿ	೨೮
೧೨.	ಸಮವಾಯ ಪಾಠ	.... ಶ್ರೀ ಸೀ. ಗು. ನಾಡಗೀರ	೩೩
೧೩.	ವ್ಯಕ್ತಿತ್ವವನ್ನು ಅರಳಿಸುವದು ಸಾಧ್ಯವಿದೆ	.... ಶ್ರೀ ಅನ್ನದಾನೀಶ್ವರ ವಿರಕ್ತಮಠ	೪೧
೧೪.	ಗುಡ್ಡಗಳಲ್ಲಿ ಕೊರೆದ ದೇವಾಲಯಗಳು	.... ಶ್ರೀ ಶಿಂತ್ರಿ ಬಸಪ್ಪನವರು	೪೩
೧೫.	ರಾಷ್ಟ್ರನಿರ್ಮಾಣ ಕಾರ್ಯ ಹಾಗೂ ಜೀವನ ಶಿಕ್ಷಣ	.... ಶ್ರೀ ಎನ್. ಆರ್. ಕುಲಕರ್ಣಿ	೪೫

ಸಂಪಾದಕೀಯ

೧. ಅಕ್ಟೋಬರ ೨.

ಭಾರತದಲ್ಲಿ ಅಕ್ಟೋಬರ ೨ನೆಯ ದಿನಾಂಕವು ಪವಿತ್ರವಾದುದು, ಚಿರಸ್ಮರಣೀಯವಾದುದು; ಮೂರುವರೆ ಮುಹೂರ್ತಗಳ ದಿನಗಳಂತೆ ಶೋಭಿಸುವಂತಹದು. ಇದು ಮಹಾತ್ಮಾಗಾಂಧೀಜಿಯವರ ಜನ್ಮ ದಿನವು. ಭಾರತದ ಎಲ್ಲ ಹಳ್ಳಿಗಳಲ್ಲಿ, ನಗರಗಳಲ್ಲಿ ಎಲ್ಲರೂ ಈ ದಿನವನ್ನು ಸಂಪೂರ್ಣ ಒಮ್ಮನಸ್ಸಿನಿಂದ, ಉತ್ಸಾಹದಿಂದ ಮತ್ತು ಸದ್ಭಾವನೆಯಿಂದ ಆಚರಿಸುವರು. ಈ ಕಾಲದಲ್ಲಿ ಒಂದು ವಾರವನ್ನೇ ಮಹಾತ್ಮಾಜಿಯವರು ಹಾಕಿಕೊಟ್ಟ ಹೆದ್ದಾರಿಯ ಮೇಲೆ ದೇಶೋದ್ಧಾರಕ್ಕಾಗಿ ದುಡಿಯಲು ಎಲ್ಲರೂ ಪ್ರಯತ್ನಿಸುವರು. ಈ ವಾರಕ್ಕೆ ಚರಖಾ ಜಯಂತಿ ಎಂದು ಕರೆಯುವರು. ಖಾದಿ ಉತ್ಪನ್ನವನ್ನು ಹೆಚ್ಚಿಸುವರು. ಹರಿಜನ ದಿನಾಚರಣೆಯೂ ಈ ವಾರದಲ್ಲಿಯೇ ನಡೆಯುವದು. ಗ್ರಾಮ ಸುಧಾರಣಾ ಸಪ್ತಾಹವನ್ನೂ ಈ ವಾರದಲ್ಲಿ ಆಚರಿಸುವರು. ಈ ವಾರದಲ್ಲಿ ವಿಧಾಯಕ ಕಾರ್ಯಗಳನ್ನು ಮಾಡುವರು. ಶ್ರಮದಾನದ ಕಾರ್ಯಗಳನ್ನು ಈ ವಾರದಲ್ಲಿ ಮಾಡುವರು. ಈ ವರುಷ ಪಾನ ಪ್ರತಿಬಂಧ ಸಪ್ತಾಹವೂ ಈ ವಾರದಲ್ಲಿಯೇ ಆಚರಿಸಲ್ಪಟ್ಟಿದೆ. ಇದಲ್ಲದೆ ಮಕ್ಕಳ ದಿನಾಚರಣೆಯನ್ನೂ ಅಕ್ಟೋಬರ ೨ನೆಯ ದಿನಾಂಕದಂದು ಇಟ್ಟುಕೊಂಡಿದ್ದಾರೆ. ಈ ಕಾರ್ಯಗಳಿಗೆ ಹೆಚ್ಚಿನ ಶೋಭೆಯನ್ನು ಕೊಡಲು ಈ ವರುಷ ನಾಡಹಬ್ಬವು ಇದೇ ವಾರದಲ್ಲಿ ಆಚರಿಸಲ್ಪಡುವದು. ಆದ್ದರಿಂದ ಈ ಕಾರ್ಯಕ್ರಮಗಳಲ್ಲಿ ದುಡಿದು ಆನಂದ ಪಡೆಯುವ ಭಾರತೀಯರು ನಿಜವಾಗಿಯೂ ಧನ್ಯರು.

೨. ಜೀವನ ಶಿಕ್ಷಣದ ವಿಶೇಷ ಸಂಚಿಕೆ.

ಇಂಥ ಪವಿತ್ರವಾದ ತಿಂಗಳದಲ್ಲಿ ಜೀವನ ಶಿಕ್ಷಣದ ಪ್ರಸಾರ ಮಾಡುವ ದೃಷ್ಟಿಯಿಂದಲೂ ಮತ್ತು ಸಾದಾ ಶಾಲೆಗಳಲ್ಲಿ ಸಹ ಜೀವನ ಶಿಕ್ಷಣದ ಕಾರ್ಯಕಲಾಪಗಳು ನಡೆಯಬೇಕಾದುದರಿಂದಲೂ, ಈ ದಿಶೆಯಲ್ಲಿ ಮಾರ್ಗದರ್ಶನ ಮಾಡುವ ಲೇಖಗಳನ್ನು ಈ ಸಂಚಿಕೆಯಲ್ಲಿ ಕೊಟ್ಟು ಶಿಕ್ಷಣದ ಸೇವೆಯನ್ನು ಮಾಡಬೇಕೆಂದು ಮೇ. ಡೆ. ಡಾಯರೆಕ್ಟರರಾದ ಶ್ರೀ ಎಸ್. ಪ್ಹಿ. ಜೇವೂರ ಸಾಹೇಬರು ಸೂಚಿಸಿದ ಪ್ರಕಾರ ವಿಶೇಷ ಸಂಚಿಕೆಯನ್ನು ಹೊರಡಿಸಲಾಗಿದೆ. ಶಿಕ್ಷಕರು ಈ ಲೇಖಗಳ ಉದ್ದೇಶಗಳನ್ನು ಚನ್ನಾಗಿ ತಿಳಿದುಕೊಂಡು ಜೀವನ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಸುಪರಿಣಾಮಗಳನ್ನು ಪಡೆಯುವಂತೆ ಕಾರ್ಯಗಳನ್ನು ಮಾಡಬೇಕೆಂದು ಸೂಚಿಸುತ್ತೇನೆ.

೩. ಬಿಡುವಿನ ಸದುಪಯೋಗ.

ಬಾಲಕರು ಬಿಡುವಿನ ಸದುಪಯೋಗವನ್ನು ಸರಿಯಾದ ರೀತಿಯಲ್ಲಿ ಮಾಡಿಕೊಳ್ಳುವದು ಅತ್ಯವಶ್ಯವಾದುದು. ದೇಹಾರೋಗ್ಯವನ್ನು ಹೆಚ್ಚಿಸುವದು, ಅಭ್ಯಾಸದಲ್ಲಿ ಪ್ರಗತಿಯನ್ನು ಪಡೆಯುವದು, ಪರಹಿತ ಕಾರ್ಯಗಳನ್ನು ಮಾಡುವದು, ಪ್ರವಾಸಗಳನ್ನು ಕೈಕೊಳ್ಳುವದು, ಕಲೆಗಳಲ್ಲಿ ಅಭಿರುಚಿಯನ್ನು ಹೆಚ್ಚಿಸುವದು, ಆತ್ಮವಿಕಾಸಕ್ಕೆ ಅನುಕೂಲವಾದ ಚಟಗಳನ್ನು ಬೆಳೆಯಿಸುವದು, ಇಂಥ ಹಿತಕರವಾದ ಕಾರ್ಯಗಳಲ್ಲಿ ಬಾಲಕರು ಆಸ್ಥೆಯಿಂದ ದುಡಿಯುವ ಪದ್ಧತಿಗಳನ್ನು ಶಿಕ್ಷಕರು ಮೊದಲೇ ಸೂಚಿಸಬೇಕು. ಬಾಲಕರು ಅವುಗಳನ್ನು ಸೂಟಿ ದಿನಗಳಲ್ಲಿ ಕಾರ್ಯಾಚರಣೆಯಲ್ಲಿ ತರಲು ಒಮ್ಮನಸಿನಿಂದ ಕೆಲಸಮಾಡಬೇಕು. ಶಿಕ್ಷಕರು ಬಾಲಕರಿಗೆ ಸಾಧ್ಯವಾದ ಮಟ್ಟಿಗೆ ಮಾರ್ಗದರ್ಶನಮಾಡಬೇಕು. ಇಂಥ ಕಾರ್ಯಗಳು ವ್ಯಕ್ತಿತ್ವ ನಿರ್ಮಾಣಕ್ಕೆ ಸಹಾಯಕಾರಿಯಾಗುವವು. ಇದೇ ಪ್ರಸಂಗದಲ್ಲಿ ವಿಶ್ರಾಂತಿಗೂ ಸ್ವಾತಂತ್ರ್ಯಕ್ಕೂ ತಕ್ಕ ಸ್ಥಾನವಿದೆಯೆಂಬುದನ್ನು ಮರೆಯಕೂಡದು.

೪. ನಾಡಹಬ್ಬ.

ಸರಸ್ವತೀದೇವಿಯ ಪೂಜೆ, ಕುಲದೇವರ ಪೂಜೆ, ದುರ್ಗಾದೇವಿಯ ಪೂಜೆ ಇತ್ಯಾದಿ ದೇವತೆಗಳ ಪೂಜೆಯನ್ನು ಈ ಕಾಲದಲ್ಲಿ ಆಚರಿಸುವರು. ಪೇಶ್ವೆಯವರಿಗೆ ಪ್ರಿಯಕರವಾದ ಹಬ್ಬವಿದು. ಮೈಸೂರ ಸರಕಾರಕ್ಕೆ ಪ್ರಿಯಕರವಾದ ಹಬ್ಬವಿದು. ವಿಜಯ ದಶಮಿಯು ಗೆಲುವನ್ನು ತರುವ ಶುಭದಿನವು. ಈ ನವರಾತ್ರಿಯ ದಿನಗಳಲ್ಲಿ, ಶಾಲೆಗಳಲ್ಲಿ, ವಿವಿಧ ಕ್ಷೇತ್ರಗಳಲ್ಲಿ ಸ್ಪರ್ಧೆಗಳು ನಡೆಯುವವು. ಊರ ಪ್ರಮುಖರೂ ಧನ ಸಹಾಯವನ್ನು ಮಾಡಿ, ಪ್ರತ್ಯಕ್ಷ ಭಾಗವಹಿಸಿ, ಬಾಲಕರಿಗೂ ಶಿಕ್ಷಕರಿಗೂ ಸಹಾಯಮಾಡುವರು. ಈ ಕಾರಣದಿಂದಲೇ ನವರಾತ್ರಿ ಹಬ್ಬಕ್ಕೆ ನಾಡಹಬ್ಬವೆಂದು ನಾಮಕರಣವಾಗಿದೆ.

— ಮುಖ್ಯ ಸಂಪಾದಕರು (ಎಂ. ಜಿ. ಕಟ್ಟಿ)

ಜೀವನ ಶಿಕ್ಷಣಕ್ಕೆ ಪರಿವರ್ತನವು ಶೀಘ್ರಗತಿಯಿಂದ ಸಾಗಲಿ

ಶ್ರೀ ಎಸ್. ವ್ಹಿ. ಜೇವೂರ, M. Ed.
ಡಿ. ಡಿ. ಪಿ. ಆಯ್., ಧಾರವಾಡ.

ಇದೇ ವರುಷ ಮೇ ತಿಂಗಳಲ್ಲಿ ಅಲಹಾಬಾದಿನಲ್ಲಿ ಸೇರಿದ ರಾಷ್ಟ್ರೀಯ ಮೂಲಶಿಕ್ಷಣ ವಿಚಾರಗೋಷ್ಠಿಯಲ್ಲಿ ಮುಖ್ಯವಾಗಿ ಪ್ರಾಥಮಿಕ ಶಿಕ್ಷಣದ ಅಭ್ಯಾಸಪತ್ರಿಕೆಯನ್ನು ಹೆಚ್ಚು ಸಫಲದಾಯಕವಾಗಿ ಮಾಡಿ ಅದಕ್ಕೆ ಇನ್ನೂ ಹೆಚ್ಚಿನ ಸಾಮಾಜಿಕ ತಳಹದಿಯ ರೂಪಕೊಡುವದಾಗಿ ಚರ್ಚಿಸಲಾಯಿತು. ಬಹುತರ ಎಲ್ಲ ರಾಜ್ಯಗಳ ಪ್ರತಿನಿಧಿಗಳು ಬರುವ ವರುಷದ ಕೊನೆಗೆ ಅಂದರೆ ೧೯೬೦–೧೯೬೧ರ ಕೊನೆಗೆ ಎಲ್ಲ ಸಾಲೆಗಳನ್ನು ಮೂಲಶಿಕ್ಷಣ ಸಾಲೆಗಳನ್ನಾಗಿ ಪರಿವರ್ತಿಸಲು ಆಶ್ವಾಸನ ಕೊಟ್ಟರು. ಇದರ ಅರ್ಥ ಎಲ್ಲ ಶಾಲೆಗಳಲ್ಲಿ ಅವಶ್ಯವಾಗಿ ಮೂಲೋದ್ಯೋಗದ ಉಪಕರಣಗಳು ಇರಲೇಬೇಕೆಂಬ ಅರ್ಥವಲ್ಲ. ಉಪಕರಣವಿರಲಿ ಅಥವಾ ಇರದೇ ಇರಲಿ, ಹಳೆಯ ಮುಂಬಯಿ ರಾಜ್ಯದವರು ಈಗಾಗಲೇ ನಿರ್ದೇಶಿಸಿದ ಪ್ರಕಾರ ಆದಷ್ಟು ಎಲ್ಲ ಜೀವನ ಶಿಕ್ಷಣದ ಅಂಶಗಳನ್ನು ಎಲ್ಲ ಶಾಲೆಗಳಲ್ಲಿ ಅಳವಡಿಸಿಕೊಳ್ಳುವದೇ ಇರುವದು. ಅಲಹಾಬಾದ ವಿಚಾರಗೋಷ್ಠಿಯನ್ನು ಉದ್ಘಾಟಿಸುವ ಕಾಲಕ್ಕೆ ಕೇಂದ್ರ ಸರಕಾರದ ಶಿಕ್ಷಣ ಮಂತ್ರಿಗಳಾದ ಶ್ರೀ ಕೆ. ಎಲ್. ಶ್ರೀಮಾಳಿಯವರು ಹೇಳಿದ ಪ್ರಕಾರ ನಮಗೆ ಈ ದಿಶೆಯಲ್ಲಿ ಎಷ್ಟು ಮಾಡಲಿಕ್ಕೆ ಸಾಧ್ಯವಿದೆಯೋ, ಸ್ವಲ್ಪವಿದ್ದರೂ ಅಡ್ಡಿಯಿಲ್ಲ, ಅದನ್ನು ಚನ್ನಾಗಿ ಮಾಡಬೇಕಾಗಿದೆ ಉದಾಹರಣಾರ್ಥವಾಗಿ— ಗಾಂಧೀ ಗ್ರಾಮದ ಶ್ರೀ ರಾಮಚಂದ್ರನ್ ಅವರು ಹೇಳಿದಂತೆ ಮಕ್ಕಳ ಆರೋಗ್ಯ ಸುಧಾರಿಸುವ ಕೆಲವು ಸಣ್ಣ ಚಟುವಟಿಕೆಗಳನ್ನಾದರೂ ನಾವು ಏಕೆ ಎಲ್ಲ ಶಾಲೆಗಳಲ್ಲಿ ಆರಂಭ ಮಾಡಿ ಯಶಸ್ಸು ದೊರಕಿಸಬಾರದು ಎಂದು ಕೇಳಿದರು. ಮೈಸೂರ ರಾಜ್ಯವು ಜೀವನ ಶಿಕ್ಷಣದ ಕ್ಷೇತ್ರದಲ್ಲಿ ತುಲನಾತ್ಮಕ ದೃಷ್ಟಿಯಿಂದ ಸಾಕಷ್ಟು ಪ್ರಗತಿ ಹೊಂದಿದೆ. ಅದರಲ್ಲೂ ಉತ್ತರ ಭಾಗವು ಮೊದಲಿನಿಂದಲೂ ಈ ದಿಶೆಯಲ್ಲಿ ಕೆಲಸಮಾಡಿದೆ. ಅದಕ್ಕಾಗಿ ಅಲಹಾಬಾದದಲ್ಲಿ ನಿರ್ಧರಿಸಿದ ಗುರಿಯನ್ನು ಸಾಧಿಸಲು ಕೆಳಗೆ ಕಾಣಿಸಿದ ಚಟುವಟಿಕೆಗಳನ್ನು ಸದ್ಯಕ್ಕೆ ನಾವು ತಿಳಿದ ಸಾದಾ ಶಾಲೆಗಳಲ್ಲಿ ಆರಂಭಿಸಿ ಅಥವಾ ಹೆಚ್ಚಾಗಿ ರೂಢಿಯಲ್ಲಿ ತಂದು ಎರಡನೆಯ ಪಂಚವಾರ್ಷಿಕ ಯೋಜನೆಯು ಮುಗಿಯುವದರೊಳಗಾಗಿ (ಅಂದರೆ ೧೯೬೦–೧೯೬೧ರ ಕೊನೆಗೆ) ಎಲ್ಲ ಸಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳಾಗಿ ಪರಿವರ್ತಿಸಲು ಹೆಣಗಬೇಕಾಗಿದೆ.

ಎಲ್ಲ ಶಾಲೆಗಳಲ್ಲಿ ಅನುಸರಿಸಲು ಸಾಧ್ಯವಾದ ಚಟುವಟಿಕೆಗಳನ್ನು ಕೆಳಗೆ ಕಾಣಿಸಲಾಗಿದೆ.

೧) ಆರೋಗ್ಯದಿಂದ ಇರಲು ಅವಶ್ಯವಾದ ಚಟುವಟಿಕೆಗಳು.

೨) ಸಾಮಾಜಿಕ ಮತ್ತು ನಾಗರಿಕತೆಯ ಜೀವನದ ತರಬೇತಿಯ ಕಡೆಗೆ ಎಳೆಯುವ ಚಟುವಟಿಕೆಗಳು.

೩) ಆವರಣದ ಜ್ಞಾನ ಹೆಚ್ಚು ಚನ್ನಾಗಿ ಆಗಬೇಕಾದ ಚಟುವಟಿಕೆಗಳು.

೪) ಸಾದಾ ಮೂಲೋದ್ಯೋಗಗಳಿಗೆ ಸಂಬಂಧಿಸಿದ ಉದ್ದೇಶಪೂರ್ಣ ಚಟುವಟಿಕೆಗಳು.

೫) ಮನರಂಜನೆಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು.

೬) ಸಾಲೆ ಮನೆ ಮತ್ತು ಸಮಾಜ ಇವುಗಳನ್ನು ಜೋಡಿಸುವ ಸಮಾಜ ಸೇವೆಯ ಚಟುವಟಿಕೆಗಳು.

ಈ ವರ್ಷದ ಗಾಂಧೀ ಸಪ್ತಾಹದಲ್ಲಿ "ಜೀವನ ಶಿಕ್ಷಣ" ಮಾಸಿಕ ಪತ್ರಿಕೆಯನ್ನು ಈ ದಿಶೆಯಲ್ಲಿ ಸಾಲೆಗಳು ಪರಿವರ್ತನವಾಗುವ ಬಗೆಗೆ ಪ್ರತ್ಯೇಕವಾಗಿ ಮೀಸಲಾಗಿಟ್ಟು ಪ್ರಸಿದ್ಧ ಮಾಡುವದು ಸ್ತುತ್ಯ. ಅದರಿಂದ ಮಹಾತ್ಮಾಜಿಯವರು ಬಯಸಿದ ರಾಜ್ಯವು ಶಿಕ್ಷಣದ ಮುಖಾಂತರ ಬೇಗನೇ ಪೂರ್ಣವಾಗಿ ರೂಪುಗೊಳ್ಳುವದೆಂದು ಆಶಿಸಲಾಗಿದೆ.

——

ಶಿಕ್ಷಕನಿಗೆ ಮಹಾತ್ಮಾ ಗಾಂಧೀಜಿಯವರ ಕೊಡುಗೆ

ಲೇಖಕರು: **ಶ್ರೀ ಸೀ. ಗು. ನಾಡಗೀರ,** ಅಸಿ. ಮಾ. ಪ್ರಾ. ಸ್ಕೂ. ಗವ್ಹ. ಟಿ. ಸಿ. ಎಂ., ಧಾರವಾಡ

ಮಹಾತ್ಮಾ ಗಾಂಧೀಜಿಯವರು, ಈ ಯುಗದ ಯುಗಪುರುಷರು. ಅವರು ತಾವು ಬದುಕಿದ ಜೀವನದಲ್ಲಿ ಅದ್ಭುತವಾದ ಪ್ರಯೋಗಗಳನ್ನು ನಡೆಯಿಸಿ ಜಗತ್ತಿಗೇ ಮಾರ್ಗದರ್ಶನ ಮಾಡಿದ್ದಾರೆ. ಆದರ್ಶ ಶಿಕ್ಷಕರೆನಿಸಿ ಕೊಂಡಿದ್ದಾರೆ. ಇದನ್ನು ಸಾಧಿಸುವಲ್ಲಿ ಸತ್ಯ ಮತ್ತು ಅಹಿಂಸೆಯ ಮಾರ್ಗಗಳನ್ನು ಬಿಟ್ಟು ಬೇರೆ ಮಾರ್ಗಗಳಿಲ್ಲ. ಎಂಬುದನ್ನು ತಾವು ಬದುಕಿದ ಪ್ರತ್ಯಕ್ಷ ಜೀವನದನುಭವ ದಿಂದ ಕಂಡುಕೊಂಡಿದ್ದರು. ಅಂತೆಯೇ ಅವರ ಜೀವನದಲ್ಲಿ ತತ್ವನಿಷ್ಠೆ, ಕರ್ತವ್ಯ ತತ್ಪರತೆ, ನಿಷ್ಠುರವಾದ ಸತ್ಯೋ ಪಾಸನೆ, ಈಶ್ವರಭಕ್ತಿ, ಮತ್ತು ಮಾನವ ಜನಾಂಗದ ಪ್ರೇಮಗಳು ಒಡೆದುಕಾಣುತ್ತದೆ.

ಮಹಾತ್ಮಾ ಗಾಂಧೀಜಿಯವರು ಶಿಕ್ಷಣಕ್ಕೊಂದು ಧ್ಯೇಯ, ರಾಜಕಾರಣಕ್ಕೊಂದು ಧ್ಯೇಯ ಮತ್ತು ಸಮಾಜ ಕಾರ್ಯಕರ್ತನಿಗಿನ್ನೊಂದು ಧ್ಯೇಯ—ಹೀಗೆ ಬೇರೆ ಬೇರೆ ಧ್ಯೇಯಗಳನ್ನಿಡಲಿಲ್ಲ. ಸತ್ಯ ಮತ್ತು ಅಹಿಂಸೆಗಳ ಮೇಲೆ ನಿಂತಂಥ ಸಹಕಾರ, ಸೌಹಾರ್ದ್ರಗಳಿಂದೊಡ ಗೂಡಿದ, ಶೋಷಣ ರಹಿತ ನವ ಸಮಾಜದ ರಚನೆಯೇ ಭಾರತದ ಧ್ಯೇಯವಿರಬೇಕೆಂದು ಸಾರಿದರು. ಈ ಧ್ಯೇಯವು ಎಲ್ಲ ರಂಗದಲ್ಲಿಯೂ ಒಳ್ಳೇ ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಸಹಾಯವಾಗುವದು. ಅರ್ಥಾತ್ ಮಾನವನ ಸರ್ವತೋಮುಖ ಕಲ್ಯಾಣ ಸಾಧಿಸುವದು. ಇಂಥ ಸರ್ವೋದಯ ಸಮಾಜ ನಿರ್ಮಾಣಕ್ಕಾಗಿ ಮಹಾತ್ಮಾ ಗಾಂಧೀಜಿಯವರು ಅನುಸರಿಸಿದ ಮಾರ್ಗದಲ್ಲಿ ಸತ್ಯ, ಅಹಿಂಸೆ ಮತ್ತು ಪ್ರೇಮ ಇತ್ಯಾದಿ ಸದ್ಗುಣಗಳು ಹೇಗೆ ಸಾಧನಗಳಾದವು, ಎಂಬುದನ್ನು ಕೆಳಗಿನ ಅವರ ಜೀವನದ ಸನ್ನಿವೇಶಗಳಿಂದ ಕಂಡುಕೊಳ್ಳಬಹುದು.

ಯಾವದೇ ಸಜೀವ ಅಥವಾ ನಿರ್ಜೀವ ವಸ್ತುವಿನಲ್ಲಿ ದೈವತ್ವವಿದೆ. ಯಾಕಂದರೆ ಆ ವಸ್ತುವಿನ ಅಸ್ತಿತ್ವವೇ ಇದಕ್ಕೆ ಸಾಕ್ಷಿಯಾಗಿದೆ. ಇಂಥಮೊಂದು ನಂಬಿಕೆಯನ್ನು ಮಹಾತ್ಮಾ ಗಾಂಧೀಜಿಯವರಿಟ್ಟುಕೊಂಡು, ಆಯಾ ವಸ್ತು ಇಲ್ಲವೆ ಜೀವಿಗಳೊಡನೆ ವರ್ತಿಸುತ್ತಿದ್ದರು. ಇದೇ ಅವರ ಸತ್ಯಪಾಲನೆಯಾಗಿತ್ತು. ಅಂತೆಯೇ ಅವರು, ಸತ್ಯವೇ ದೇವರು, ದೇವರೇ ಸತ್ಯ ಮತ್ತು ಸೌಂದರ್ಯವೇ ಸತ್ಯ, ಸತ್ಯವೇ ಸೌಂದರ್ಯವೆಂದೂ" ಅನ್ನುತ್ತಿದ್ದರು. ಎಂಥ ದೀನ-ದಲಿತರನ್ನೂ, ಒಳ್ಳೇ ಗೌರವಾದರಗಳಿಂದ ಕಾಣುತ್ತಿದ್ದರು. ಕುಷ್ಠರೋಗದಿಂದ ಬಳಲುತ್ತಿದ್ದ ಶ್ರೀ ಪರಚುರೆ ಶಾಸ್ತ್ರಿಗಳನ್ನು ಸ್ವತಃ ಉಪಚರಿಸಿದರು. ನಿತ್ಯವೂ ಅವರ ದೇಹವನ್ನು ಮುಟ್ಟಿ ತಿಕ್ಕುತ್ತಿದ್ದರು. ಅವರ ಚಿಕಿತ್ಸೆಯಲ್ಲಿ ತಲ್ಲೀನರಾಗುತ್ತಿದ್ದರು. ಇದೇ ಪ್ರಕಾರ ಬಾಪೂಜಿ ಮನಸ್ಸಿನಲ್ಲಿ, ಹಿರಿ-ಕಿರಿ, ಶ್ರೀಮಂತ-ದರಿದ್ರ, ಪಂಡಿತ-ಪಾಮರ ಎಂಬ ಭೇದಭಾವನೆಯೇ ಬರಲಿಲ್ಲ. ರೈತನ ಹುಲ್ಲುಮನೆಯಿಂದ ವ್ಹಾಯಿಸರಾಯರ ಅರಮನೆವರೆಗೆ ಸುತ್ತಾಡಿ, ಮಕ್ಕಳಿಂದ ಮಹಾನುಭಾವರ ವರೆಗೆ ಸಂಪರ್ಕ ಬೆಳೆಸಿದರೂ, ಎಲ್ಲರೊಡನೆಯೂ ಒಂದೇ ತೆರನಾದ ರೀತಿ, ಒಂದೇ ಬಗೆಯ ಮಾತು, ಯಾವದೇ ಬಗೆಯ ಅನ್ಯಾಯ ಬಾಪುವಿನ ಕಣ್ಣಿಗೆ ಬಿದ್ದಾಗ, ಅದನ್ನು ಮಾಡಿದವರು ತಾವಿದ್ದರೂ ಅಷ್ಟೇ ! ತಮ್ಮ 'ಬಾ'ರವ ರಿದ್ದರೂ ಅಷ್ಟೇ !! ಪಂಡಿತ ಜವಾಹರಲಾಲ ನೆಹರೂ ರವರಿದ್ದರೂ ಅಷ್ಟೇ !!! ತಪ್ಪಿಗೆ ತಕ್ಕ ಶಿಕ್ಷೆ ಆಗಲೇಬೇಕು. ಇದರಲ್ಲಿಯೇ ಅವರ ಸತ್ಯದ ಆಚರಣೆ ಹುದುಗಿದೆ.

ಸತ್ಯದ ಬಗೆಗೆ ಮಹಾತ್ಮಾ ಗಾಂಧೀಜಿಯವರ ವಿಚಾರ ಪ್ರಣಾಲಿಯು ಈ ತೆರನಾಗಿರುವಾಗ, ಶಿಕ್ಷಕನು ಅವರಿಂದ ಪಡೆಯಬೇಕಾದ ಕೊಡುಗೆ ಯಾವುದು ? ಚಿಕ್ಕಮಕ್ಕಳ ಅಸ್ತಿತ್ವದಲ್ಲಿ ಅದ್ಭುತಶಕ್ತಿ ಅಡಗಿವೆ ಎಂಬ ಮಾತಿನಲ್ಲಿ ಸಂಪೂರ್ಣ ಶ್ರದ್ಧೆಯನ್ನೀಡುವದೇ ಆ ಕೊಡುಗೆ ಯಾಗಿದೆ. ಚಿಕ್ಕ ಮಕ್ಕಳು ಸಣ್ಣವರಿರುವದರಿಂದ ಅವರಿಗೆ ಏನೂ ತಿಳಿಯುವದಿಲ್ಲ. ತಾನೇ ಎಲ್ಲವನ್ನೂ ಬಲ್ಲವನು ಹಾಗೂ ಕಲಿಸುವವನು ಎಂಬ ಅಸತ್ಯ ಮಾತಿನಲ್ಲಿ ನಂಬಿಗೆ ಯನ್ನಿಡಕೂಡದು. ಅಂದರೆ ಮಾತ್ರ ಚಿಕ್ಕಮಕ್ಕಳಲ್ಲಿ ಹುದು ಗಿದ ಸುಪ್ತಶಕ್ತಿಯ ವಿಕಾಸಕ್ಕೆ ಸಹಾಯಕಾರಿ ಆಗಬಲ್ಲ.

ಮಹಾತ್ಮಾ ಗಾಂಧೀಜಿಯವರ ಜೀವನದನುಭವ ದಿಂದ ಶಿಕ್ಷಕನು ಪಡೆಯಬೇಕಾದ ಇನ್ನೊಂದು ಕೊಡು

ಗೆಯೇ **ಅಹಿಂಸೆ.** ಅಂದರೆ ಪ್ರತಿಯೊಬ್ಬ ಮಾನವನು ತನ್ನ ಧರ್ಮಾಚರಣೆಯಲ್ಲಿ ಶ್ರದ್ಧೆಯುಳ್ಳವನೂ, ಪ್ರಾಮಾಣಿಕನೂ ಆಗಿರುವದೇ ಅಹಿಂಸೆಯಾಗಿದೆ. ಇಲ್ಲಿ ಧರ್ಮ ಅಂದರೆ ಕರ್ತವ್ಯಪಾಲನೆಯಾಗಿದೆ. ಪ್ರಾಣ ಹಿಂಡುವದೊಂದೇ ಬಾಪೂಜಿಯವರಿಗೆ ಹಿಂಸೆಯಾಗಿರಲಿಲ್ಲ. ಹೊಟ್ಟೆಕಿಚ್ಚು, ಕೋಪ ಹಾಗೂ ಅಸಹನೆಗಳು, ಅವರಿಗೆ ಹಿಂಸೆಯ ಅವತಾರಗಳೆನಿಸಿದ್ದವು. ಒಂದು ವ್ಯಕ್ತಿಗೆ ನೋವಾಗುತ್ತಿದ್ದರೆ, ಬಾಪೂಜಿ ಆ ನೋವನ್ನು ಹಿಂಸೆಯೆಂದು ಭಾವಿಸಿ ಅದರ ನಿವಾರಣೆಗೆ ತುಂಬಾ ಹೆಣಗುತ್ತಿದ್ದರು. ಒಮ್ಮೆ ಆಶ್ರಮದಲ್ಲಿ ಒಬ್ಬರು ಬೇವಿನೆಲೆ ತೆಗೆಯುವಾಗ, ಟೊಂಗೆಯನ್ನು ಮುರಿದರು. ಆಗ ಗಾಂಧೀಜಿ ಅವರಿಗೆ, "ಇದು ಹಿಂಸೆ" ಎಂದರು. ಪ್ಲೇಗಿನ ಇಲಿಗಳನ್ನು, ಹುಚ್ಚು ನಾಯಿಗಳನ್ನು ಹಾಗೂ ಬೆಳೆ ಹಾಳುಮಾಡುವ ಮಂಗಗಳನ್ನು ಕೊಲ್ಲಲು ತುಂಬಾ ವಿರೋಧಿಸುತ್ತಿದ್ದರು. ಆದರೆ ಅನ್ಯಾಯಕ್ಕಾಗಿ ಯುದ್ಧ ನಡೆದರೆ ಅದನ್ನು ಬಾಪೂಜಿ ಒಪ್ಪುತ್ತಿದ್ದರು. ಕಾಶ್ಮೀರಿಗಳು ತಮ್ಮ ಮನೆ ಮತ್ತು ಮಾನ ರಕ್ಷಣೆಗಾಗಿ ಹೋರಾಡಿ ಪ್ರಾಣ ತೆತ್ತರೆ ನನಗೇನೂ ದುಃಖವಾಗುವದಿಲ್ಲ ಎಂದು ಅನ್ನುತ್ತಿದ್ದರು.

ಒಮ್ಮೆ ಜರ್ಮನ್ನನು "ಅಹಿಂಸೆಯಿಂದ ಭಾರತಕ್ಕೆ ಸ್ವಾತಂತ್ರ್ಯ ಲಭಿಸದು, ಹಿಟ್ಲರನಂಥ ವ್ಯಕ್ತಿಯೇ ಭಾರತಕ್ಕೆ ಬೇಕು," ಎಂದು ಮಹಾತ್ಮಾ ಗಾಂಧೀಜಿಯೆದುರು ವಾದಿಸಿದರು. ಆಗ ಗಾಂಧೀಜಿ "ನಮಗೆ ಬೇಕಾದದ್ದು ಶಿಸ್ತು ಆದರೆ ಹಿಟ್ಲರನಂಥವರಲ್ಲ. ಅವನದು ಹಿಂಸೆ, ನನ್ನದು ಅಹಿಂಸೆ," ಎಂದು ಹೇಳಿದರಲ್ಲದೆ ತಮ್ಮ ಪ್ರವಾಸದುದ್ದಕ್ಕೂ ಅಹಿಂಸೆಯ ಮಹಿಮೆಯನ್ನು ತೋರಿಸಿಕೊಟ್ಟರು. ಬಂಗಾಲದ ೬ ಕೋಟಿ ಜನ ಒಮ್ಮೆ ಅಶಿಸ್ತಿನಿಂದ ವರ್ತಿಸಹತ್ತಿದರೆ, ಸಾವಿರಾರು ಹಿಟ್ಲರರು ಬಂದರೂ ಅವರ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಸಾಧ್ಯವಿಲ್ಲೆಂದು ಮನಗಾಣಿಸಿಕೊಟ್ಟರು.

ಅಹಿಂಸೆಯ ಬಗೆಗೆ ಗಾಂಧೀಜಿಯವರ ವಿಚಾರ ಈ ತೆರನಾಗಿರುವಾಗ, ಶಿಕ್ಷಕನು ತನ್ನ ಪಾಲಿನ ಕರ್ತವ್ಯವನ್ನು ಶ್ರದ್ಧೆಯಿಂದಲೂ, ಪ್ರಾಮಾಣಿಕತನದಿಂದಲೂ ಪಾಲಿಸಿದರೆ ಅಹಿಂಸೆಯ ಉಪಾಸಕನಾಗುವನು. ಇಲ್ಲದೇ ಹೋದರೆ ಶಿಕ್ಷಕನೂ ಹಿಂಸಾವಾದಿ ಆಗಿಬಿಡುತ್ತಾನೆ.

ಒಟ್ಟಿನ ಮೇಲೆ ಮಹಾತ್ಮಾ ಗಾಂಧೀಜಿಯವರು ಅಹಿಂಸಾಮಯ ಬಾಳನ್ನು ಬದುಕುವದರ ಜೊತೆಗೆ, ಪರರಿಗೂ ಅಹಿಂಸಾಮಯವಾಗಿ ಬಾಳಲು ಮಾರ್ಗದರ್ಶನ ಮಾಡಿದರು. ಪರರ ಜೀವನವನ್ನು ಸರ್ವಾಂಗ ಸುಂದರವನ್ನಾಗಿ ಮಾಡಲು ಹೆಣಗಿದರು.

ಒಮ್ಮೆ ಮ. ಗಾಂಧೀಜಿಯವರು ದಕ್ಷಿಣ ಆಫ್ರಿಕೆಯಲ್ಲಿರುವಾಗ ಅವರ ಬಳಿ ಮುಸಲ್ಮಾನ ಬಟ್ಲರ ಬಂದು "ನನಗೆ ಇಂಗ್ಲೀಷು ಬರುತ್ತಿದ್ದರೆ ನಾನೆಷ್ಟು ಹಣವನ್ನು ಗಳಿಸುತ್ತಿದ್ದೆ ಗೊತ್ತೇ? ನನ್ನ ಕೂಲಿಯಿಂದ ನನ್ನ ಹೊಟ್ಟೆ ಕೂಡಾ ತುಂಬದಾಗಿದೆ" ಎಂದನಂತೆ. ಆಗ ಗಾಂಧೀಜಿ, "ನನ್ನ ಬಳಿ ಬಾ, ಇಂಗ್ಲೀಷ ಕಲಿಸುವೆ" ಎಂದರು. ಈ ಮಾತನ್ನು ಕೇಳಿ ಕಲಿಯಲು, "ನಿಮ್ಮ ಬಳಿಗೆ ಬರಲು ತಂಬಾ ಕೆಲಸ. ಮುಂಜಾನೆಯಿಂದ ಸಂಜೆಯವರೆಗೆ ಒಂದು ನಿಮಿಷ ಸಹ ಸಿಗುವದಿಲ್ಲ ಏನು ಮಾಡಲಿ" ಅಂದಾಗ ಸ್ವತಃ ಮ. ಗಾಂಧೀಜಿ ಆ ಕೂಲಿಕಾರನಿರುವ ೪ ಮೈಲು ದೂರದ ಸ್ಥಳಕ್ಕೆ ಹೋಗಿ ಕಲಿಸಿ ಬರುತ್ತಿದ್ದರು. ಎಂಥ ಮಾನವ ಪ್ರೇಮ! ಬಾಪೂಜಿಗೆ ಸ್ನೇಹಿತರೆಂಬವರು ಹೆಚ್ಚಿನವರೇ ವಿನಃ, ಅವರಾರು? ಅವರ ವೃತ್ತಿಗಳೇನು? ಅವರ ಶಿಕ್ಷಣವೆಷ್ಟು? ಎಂಬುದು ಹೆಚ್ಚಿನದಾಗುತ್ತಿರಲಿಲ್ಲ.

ಇದೇ ಪ್ರಕಾರ ಮಹಾತ್ಮಾ ಗಾಂಧೀಜಿಯವರ ಜೀವನದುದ್ದಕ್ಕೂ ಅನೇಕ ಉದಾಹರಣೆಗಳು ನಮ್ಮ ಮಾರ್ಗದರ್ಶನಕ್ಕೆ ಸಿಗುತ್ತವೆ. ಅವರ ಜೀವನ ತತ್ವಗಳನ್ನು ಮಾನವ ಕೋಟಿಯ ಕಲ್ಯಾಣಕ್ಕೆ ಉಪಯೋಗ ಮಾಡಿಕೊಳ್ಳಬೇಕಾದರೆ, ಸಮಾಜದಲ್ಲಿಯ ಪ್ರತಿಯೊಂದು ವ್ಯಕ್ತಿಯು ಆ ತತ್ವದಾಚರಣೆಯಲ್ಲಿ ಶ್ರದ್ಧೆಯಿಟ್ಟು ಸಾಗಬೇಕಾಗುತ್ತದೆ. ಇಂಥ ತತ್ವದಾಚರಣೆಯು ಪ್ರತಿಯೊಬ್ಬನಲ್ಲಿ ರಕ್ತಗತವಾಗಬೇಕಾದರೆ, ಚಿಕ್ಕಂದಿನಿಂದಲೇ ರೂಢಿಯಾಗುವದೊಳಿತು. ಈ ತರಹದ ರೂಢಿಯನ್ನು ಹಾಕಿಕೊಡುವ ಹೊಣೆಯು ಶಿಕ್ಷಕನ ಮೇಲಿದೆ. ಯಾಕೆಂದರೆ ಚಿಕ್ಕಮಕ್ಕಳು ಶಿಕ್ಷಕನ ಮಾರ್ಗದರ್ಶನದಲ್ಲಿ ಕಲಿಯುತ್ತಿರುವರು. ಅವರೇ ದೊಡ್ಡವರಾಗಿ ಸಮಾಜದ ಘಟಕಗಳಾಗುವರು. ಆದ್ದರಿಂದ ಶಿಕ್ಷಕನು ಮ. ಗಾಂಧೀಜಿಯವರ ತತ್ವಗಳ ಮೇಲೆ ಶ್ರದ್ಧೆಯುಳ್ಳವನಾಗಿರಬೇಕು. ಅವರ ವ್ಯವಹಾರಿಕವಾದ ಆಚರಣೆಗಳನ್ನು ರೂಢಿ ಮಾಡಿ

ಕೊಳ್ಳಲು ಬಾಲಕರಿಗೆ ಅನುವು ಮಾಡಿಕೊಡಬೇಕು. ಒಳ್ಳೇ ಸಂದರ್ಭ ಸನ್ನಿವೇಶಗಳನ್ನು ಒದಗಿಸಿಕೊಡಬೇಕು. ಹೀಗೆ ಸಂದರ್ಭಗಳನ್ನು ಒದಗಿಸಿ ಕೊಡುವಲ್ಲಿ ಅನೇಕ ಅಡತಡೆಗಳು ಉದ್ಭೂತವಾಗಬಹುದು. ಅವೆಲ್ಲವುಗಳನ್ನು ನಿರ್ಮಲ ವಾತಾವರಣದಲ್ಲಿ ಶುದ್ಧ ಮನಸ್ಸಿನಿಂದಲೂ, ಶ್ರದ್ಧೆಯಿಂದಲೂ ನಿವಾರಿಸಲು ಪ್ರಯತ್ನ ಪಟ್ಟದ್ದೇ ಆದರೆ, ಆ ಪ್ರಯತ್ನದಿಂದ ಏನೋ ಒಂದು ಹೊಸದು ಹೊಳೆಯುತ್ತಿದೆ. ಇದರಿಂದ ಚಿಕ್ಕ ಮಕ್ಕಳಿಗೆ ಉಪಯೋಗವಾಗುತ್ತಿದೆ; ಲಾಭವಾಗುತ್ತಿದೆ; ಶಿಕ್ಷಕನಿಗೆ ಆನಂದವಾಗುತ್ತಿದೆ. ಇದೇ ಮಹಾತ್ಮಾ ಗಾಂಧೀಜಿಯವರಿತ್ತ ನಿತ್ಯ ನವೀನ ಶಿಕ್ಷಣ.

ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮ

ಲೇಖಕರು : **ಶ್ರೀ ವ್ಹಿ. ಎಸ್. ಭಟ್ಟ**

ಭಾರತದ ಬಂಧ ವಿಮೋಚನೆಗಾಗಿ ಭಾರತೀಯರು ಕ್ರಿ. ಶ. ೧೮೫೭ರಿಂದಲೇ ಒಂದಿಲ್ಲೊಂದು ಬಗೆಯಿಂದ ಸ್ವಾತಂತ್ರ್ಯ ಸಂಗ್ರಾಮವನ್ನು ಹೂಡಹತ್ತಿದ್ದರು. ಮಾನವ ಕುಲವನ್ನೇ ಸಂಹಾರ ಮಾಡಲು ಸಶಕ್ತರಾದ–ಸಶಸ್ತ್ರರಾದ, ಸೂರ್ಯಾಸ್ತವೇ ಇಲ್ಲದಷ್ಟು ವಿಶಾಲವಾದ ಸಾಮ್ರಾಜ್ಯವನ್ನು ಕಟ್ಟಿದ್ದ ಬ್ರಿಟಿಶರನ್ನು ನಿಶಸ್ತ್ರ ಭಾರತೀಯರು ೯೦ ವರುಷಗಳ ಅಹೋ ರಾತ್ರಿಯ ಹೋರಾಟದಲ್ಲಿ ಗೆದ್ದು ಸಾಮ್ರಾಜ್ಯಶಾಹಿಗಳ ಮೂಗಿನ ಮೇಲೆ ಬೆರಳಿಡುವಂತೆ ಮಾಡಿದರು. ಈ ಗೆಲವು ಸಿಕ್ಕಿದುದು ಕ್ರಾಂತಿಯ ಮಾರ್ಗದಿಂದಲ್ಲ; ಶಾಂತಿಯ ಮಾರ್ಗದಿಂದ, ಹಿಂಸೆಯಿಂದಲ್ಲ ಅಹಿಂಸೆಯಿಂದ, ದಾನವತೆಯಿಂದಲ್ಲ ಮಾನವತೆಯಿಂದ, ವಿಧ್ವಂಸಕ ಚಟುವಟಿಕೆಯಿಂದಲ್ಲ ವಿಧಾಯಕ ಕಾರ್ಯಕ್ರಮಗಳಿಂದ, ಭಾರತೀಯರಲ್ಲಿ ರಾಜಕೀಯ ನವಜಾಗ್ರತೆಯನ್ನುಂಟುಮಾಡಿ ಆರ್ಥಿಕ ಸ್ವಾತಂತ್ರ್ಯ–ಸ್ವಾವಲಂಬನಗಳನ್ನು ದೊರಕಿಸಿ ಕೊಟ್ಟ ಮಹಾತ್ಮಾಜೀಯವರ ವಿಧಾಯಕ ಕಾರ್ಯಕ್ರಮಗಳ ಮಹಾಪ್ರಭಾವದಿಂದ ಬ್ರಿಟಿಶರು ಭಾರತವನ್ನು ಬಿಟ್ಟು ಓಡಬೇಕಾಯಿತು.

ಕೇವಲ ರಾಜಕೀಯ ಸ್ವಾತಂತ್ರ್ಯವು ಸ್ವಾತಂತ್ರ್ಯವಲ್ಲ. ಆರ್ಥಿಕ–ಸಾಮಾಜಿಕ ಮೊದಲಾದ ಸಂಪೂರ್ಣ ಸ್ವಾತಂತ್ರ್ಯವು ಸಿಗಬೇಕು. ಸ್ವಾತಂತ್ರ್ಯ ಸಿಕ್ಕೊಡನೆ ಸುಖ ಸಿಗುತ್ತದೆಂದಲ್ಲ. ಸ್ವಾತಂತ್ರ್ಯ ರಾಜ್ಯವು ಸ್ವರಾಜ್ಯ ಅಂದರೆ ಸ್ವರ್ಗರಾಜ್ಯವಾಗಬೇಕೆಂಬುದೇ ಮಹಾತ್ಮಾಜಿಯವರ ಉದ್ದೇಶ. ಸತ್ಯ ಅಹಿಂಸೆಗಳ ಮಾರ್ಗದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಗಳಿಸಬೇಕೆಂಬುದೇ ಅವರ ಉಪದೇಶ.

ಸಂಪೂರ್ಣ ಸ್ವಾತಂತ್ರ್ಯವುಳ್ಳ ಸ್ವರಾಜ್ಯ ಮಂದಿರವನ್ನು ಕಟ್ಟಬಲ್ಲ ವಿಧಾಯಕ ಕಾರ್ಯಕ್ರಮವು ಪ್ರತಿಯೊಬ್ಬ ಮನುಷ್ಯನಿಗೂ ನಡೆಸಲು ಶಕ್ಯವಿದೆ. ಪ್ರತಿಯೊಬ್ಬ ಭಾರತೀಯನಿಗೂ ಈ ಕಾರ್ಯಕ್ರಮಗಳ ಜ್ಞಾನವಿರುವದು ಅವಶ್ಯ. ಅವು ಯಾವವೆಂದರೆ.

೧) ಜಾತಿಮತಗಳ ಐಕ್ಯ:–

ರಾಜ್ಯ ವಿಚ್ಛೇದನಕ್ಕೆ ಜಾತೀಯ ಭೂತ ಒಂದು ದೊಡ್ಡ ಕಾರಣ. ಯಾವದೇ ಮತದವನಿರಲಿ, ಹಿಂದುವಿರಲಿ, ಮುಸ್ಲಿಮನಿರಲಿ, ಕ್ರೈಸ್ತನಿರಲಿ, ಜೋರಸ್ತರನಿರಲಿ ಭಾರತದ ಕೋಟ್ಯನುಕೋಟಿ ಜನರಲ್ಲಿ ಪ್ರತಿಯೊಬ್ಬನನ್ನು ತನ್ನ ಸಮಾನನೆಂದು ತಿಳಿಯಬೇಕು. ತನ್ನ ಧರ್ಮದ ಮೇಲಿದ್ದಷ್ಟೇ ಪ್ರೇಮವನ್ನು ಉಳಿದ ಧರ್ಮಗಳ ಮೇಲೆ ಇಡಬೇಕು. ಜಾತಿಗಾಗಿ ಬೇರ್ಪಟ್ಟ ಭೂಮಿ, ಸಂಘ-ಸಂಸ್ಥೆ, ಶಾಲೆ-ಕಾಲೇಜುಗಳು ನಿರ್ನಾಮವಾಗಬೇಕು. ಭಾರತೀಯನು ರಾಜಕೀಯ ಉದ್ದೇಶವಿಲ್ಲದೆ ಶುದ್ಧನಾದ ನಡತೆ, ಜಾತೀಯ ಐಕ್ಯವನ್ನು ಸಾಧಿಸಿದರೆ ಜಾತೀಯ ಐಕ್ಯದ ಫಲಗಳು ಸ್ವಾಭಾವಿಕವಾಗಿಯೇ ಪ್ರಾಪ್ತವಾಗುವವು. ಮಹಾತ್ಮಾಜಿಯವರು ಜಾತೀಯ ಐಕ್ಯತೆಯನ್ನು ಅಭಿನ್ನವಾದ ಹೃದಯ ಬಂಧನವೆಂದು ಹೇಳಿದ್ದಾರೆ.

೨) ಅಸ್ಪೃಶ್ಯತಾನಿವಾರಣೆ:–

ಅಸ್ಪೃಶ್ಯತೆಯು ಹಿಂದೂ ಧರ್ಮದ ಒಂದು ಅಭಿಶಾಪ ಹಾಗೂ ದೊಡ್ಡ ಕಲಂಕ. ಅಸ್ಪೃಶ್ಯತೆಯ ನಿವಾರಣೆಯು ಸ್ವರಾಜ್ಯದ ಒಂದು ಮೆಟ್ಟಲು. ಗಾಂಧೀಜಿ

ಯವರು ಹೇಳಿದಂತೆ ಹಿಂದೂ ಸನಾತನಿಗಳೊಡನೆ ಪ್ರೇಮ ಹಾಗೂ ಅಹಿಂಸೆಗಳಿಂದ ನಡೆದುಕೊಂಡು ಅಸ್ಪೃಶ್ಯತೆಯ ಕಲಂಕವನ್ನು ಹೋಗಲಾಡಿಸಬೇಕು.

೩) ಮದ್ಯಪಾನ ಪ್ರತಿಬಂಧ:-

ಭಾರತದಲ್ಲಿ ಬಡತನ, ಆಲಸ್ಯ, ಅವಿವೇಕ, ಅನಾಚಾರಗಳಿಗೆ ದಾರಿಮಾಡಿಕೊಟ್ಟು ಕೋಟ್ಯನುಕೋಟಿ ಮನೆತನಗಳನ್ನು ನಾಶ ಮಾಡಿದ ಮದ್ಯಪಾನ ಚಟವು ನಿರ್ನಾಮವಾಗಬೇಕು. ವಿದ್ಯಾರ್ಥಿಗಳು, ಹೆಣ್ಣು ಮಕ್ಕಳು, ಡಾಕ್ಟರರು ತಮ್ಮ ದಯಾಪೂರ್ಣ ಕೃತಿಗಳಿಂದ ಈ ಚಟ ನಿವಾರಣೆಗೆ ನೆರವಾಗಬೇಕು. ಬಡವರಿಗೆ ಹಾಗೂ ಕೂಲಿಕಾರರಿಗೆ ವಿಶ್ರಾಂತಿ, ಮನೋರಂಜಕ ಸಾಧನಗಳು ಏರ್ಪಡಬೇಕು. ಸ್ವರಾಜ್ಯದ ಅಮೃತ ಫಲಗಳು ಸಿಗಬೇಕಾದರೆ ಈ ಕೆಟ್ಟ ಚಟ ನಿವಾರಣೆಯಾಗಿ ಎಲ್ಲರೂ ಪರಿಶುದ್ಧ ಜೀವನ ಕೈಕೊಳ್ಳಬೇಕು

೪) ಖಾದಿ:-

" ಖಾದಿಯೇ ಸ್ವರಾಜ್ಯದ ಹಾದಿ " ಎಂದು ಹೇಳಿದರೆ ಬಹು ಜನರಿಗೆ ಆಶ್ಚರ್ಯವೆನಿಸೀತು. ಖಾದಿ ಎಂದರೆ ಕೈನೂಲಿನಿಂದ ಕೈಮಗ್ಗದ ಮೇಲೆ ನೆಯ್ದ ಬಟ್ಟೆ. "ಕೈನೂಲಿನ ಬಟ್ಟೆ ಸಕಲರ ಹೊಟ್ಟೆಗೆ ನೀಕೊಟ್ಟೆ" ಎಂದು ಹೇಳಿದರೆ ಅತಿಶಯೋಕ್ತಿ ಆಗದು. ಖಾದಿಯನ್ನು ಉಪಯೋಗಿಸುವದರಿಂದ ಸ್ವದೇಶಿ ಮನೋವೃತ್ತಿ ಉಂಟಾಗಿ ಪರದೇಶಕ್ಕೆ ಹೋಗುವ ಕೋಟಿಗಟ್ಟಲೆ ಹಣ ಉಳಿದು ಬಡವರ ಹೊಟ್ಟೆಗೆ ಹಾಕಿದಂತಾಗುತ್ತದೆ. ಒಕ್ಕಲಿಗರಿಗೆ ಬಿಡುವಿನಲ್ಲಿ ಉದ್ಯೋಗ ಸಿಗುತ್ತದೆ. ನೂಲುವದು ಪವಿತ್ರ ಕಾರ್ಯ. ಅದರಿಂದ ಮನಸ್ಸು ಪ್ರಫುಲ್ಲಿತವಾಗುವದು. ಕಾರಣ ಪ್ರತಿಯೊಬ್ಬನೂ ಪ್ರತಿ ದಿವಸ ಒಂದು ತಾಸಾದರೂ ಸೂತ್ರಯಜ್ಞವನ್ನು ಜರುಗಿಸಬೇಕು. ಗಾಂಧೀಜಿಯವರೇ ಹೇಳಿದಂತೆ ಇದು ಆರ್ಥಿಕ ಸ್ವಾತಂತ್ರ್ಯವನ್ನು ಸಮಾನತೆಯನ್ನು ನೀಡುವದು.

೫) ಹಳ್ಳಿಯ ಕೈಗಾರಿಕೆ:-

ಹಳ್ಳಿಯಲ್ಲಿ ವಿಪುಲವಾಗಿ ಕಚ್ಚಾ ಸಾಮಗ್ರಿಗಳು ಸಿಗುವವು. ಅವುಗಳಿಂದ ಅಲ್ಲಿಯೇ ಬೀಸುವದು, ಕುಟ್ಟುವದು, ಕಾಗದ, ಸಬಕಾರ, ಕಡ್ಡೀಪೆಟ್ಟಿಗೆ ಮೊದಲಾದ ಕೈಗಾರಿಕೆಗಳು ಅಭಿವೃದ್ಧಿ ಹೊಂದುವದರಿಂದ ಹಳ್ಳಿಗಳ ಸಂಪತ್ತು ಬೆಳೆದು ಅವುಗಳು ಸ್ವಯಂಪೂರ್ಣವಾಗುವವು. ವಿದೇಶೀ ವಸ್ತುಗಳಿಗೆ ತಿರಸ್ಕಾರ, ಹಳ್ಳಿಯ ವಸ್ತುಗಳಿಗೆ ಪುರಸ್ಕಾರ ಪ್ರಾಪ್ತವಾದರೆ ಹಳ್ಳಿಯಲ್ಲಿ ಎಲ್ಲರಿಗೂ ಉದ್ಯೋಗ ದೊರೆತು ಹಳ್ಳಿಗಳಿಂದ ಭಾರತವು ಸಮೃದ್ಧಿ ರಾಷ್ಟ್ರವಾಗುವದು.

೬) ಆರ್ಥಿಕ ಸಮಾನತೆ:-

ಧನಿಕ, ಋಣಿಕರೆಂಬ ಭೇದವಳಿದು ಆರ್ಥಿಕ ಸಮಾನತೆ ಬರುವ ವರೆಗೆ ಎಲ್ಲರಿಗೂ ಸ್ವರಾಜ್ಯ ಸುಖವು ಸಾಧ್ಯವಿಲ್ಲ. ಸ್ವತಂತ್ರ ಭಾರತದಲ್ಲಿ ಇಂತಹ ಭೇದಗಳು ಇರಬಾರದು. ಅತಿ ಬಡವರೂ ಅತಿ ಶ್ರೀಮಂತರಷ್ಟೇ ಸುಖಿಗಳಾಗಿರಬೇಕು. ಅದಕ್ಕಾಗಿ ಶ್ರೀಮಂತರು ತಮ್ಮ ಸಂಪತ್ತನ್ನೂ ಅವರ ಲಾಭಗಳನ್ನೂ ಬಡವರಿಗೆ ತಾವಾಗಿಯೇ ಬಿಟ್ಟು ಬಿಡಬೇಕು.

೭) ಮೂಲಶಿಕ್ಷಣ:-

ಜೀವನದಲ್ಲಿ ಒದಗುವ ಎಲ್ಲ ಚಟುವಟಿಕೆಗಳ ಮುಖಾಂತರ ಜೀವನದ ಸಲುವಾಗಿ ಶಿಕ್ಷಣವು ಕೊಡಲ್ಪಡುವದರಿಂದ ಇದು ಅತ್ಯುಪಯುಕ್ತವಾದ ಜೀವನ ಶಿಕ್ಷಣವೆನಿಸಿಕೊಳ್ಳುವದು.

ಈ ಶಿಕ್ಷಣದಲ್ಲಿ ಬಾಲಕರ ಅವಯವಗಳಿಗೆ ಯೋಗ್ಯ ತರಬೇತಿಯು ಸಿಕ್ಕು, ಕಲಿತ ವಿಷಯವು ಮನಸ್ಸಿನಲ್ಲಿ ದೃಢವಾಗಿ ಉಳಿಯುತ್ತದೆ. ಈ ಮೊದಲು ಇದ್ದ ಶಿಕ್ಷಣವು ಮಕ್ಕಳ ಬುದ್ಧಿ ಬೆಳವಣಿಗೆಯನ್ನು ಮಾತ್ರ ಮುಖ್ಯವಾಗಿಟ್ಟುಕೊಂಡಿತ್ತು. ಆದರೆ ಈ ಶಿಕ್ಷಣದಿಂದ ಮಕ್ಕಳ ದೇಹ, ಮನಸ್ಸು, ಆತ್ಮಗಳ ಪರಿಪೂರ್ಣ ಬೆಳವಣಿಗೆ ಆಗಿ ಅವರ ಸರ್ವತೋಮುಖವಾದ ಪ್ರಗತಿಯಾಗಿ ಜೀವನದಲ್ಲಿ ಅವರು ಸ್ವಾವಲಂಬಿಗಳಾಗಿ ಬಾಳಬಲ್ಲರು. ನಮ್ಮ ಭಾರತದ ಭೂಗುಣ, ಸಂಸ್ಕೃತಿಗಳಿಗೆ ಯೋಗ್ಯವಾದ ಶಿಕ್ಷಣವೆಂದರೆ ಮೂಲಶಿಕ್ಷಣ.

೮) ಪ್ರೌಢ ಶಿಕ್ಷಣ:-

ಭಾರತದಲ್ಲಿ ಅನೇಕ ಪ್ರೌಢರು ನಿರಕ್ಷರಿಗಳೂ ಅಜ್ಞಾನಿಗಳೂ ಆಗಿದ್ದಾರೆ. ಅವರಿಗೆ ಅಕ್ಷರಜ್ಞಾನ ಮಾಡಿಕೊಡುವದಲ್ಲದೆ, ಅನೇಕ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಸಂಗತಿಗಳ ಜ್ಞಾನ ಮಾಡಿಕೊಡಬೇಕು. ತನ್ನ ಮತದಾನ ಮಾಡಬೇಕಾದ ಪ್ರತಿಯೊಬ್ಬ ಪ್ರೌಢನಿಗೆ ಸಾಕ್ಷರತೆಯೂ ರಾಜಕೀಯದ ಸಾಮಾನ್ಯ ಜ್ಞಾನವೂ ಅವಶ್ಯವಿದೆ. ವಿದ್ಯಾವಂತರು ತಮ್ಮ ನೆರೆಹೊರೆಯವರನ್ನು ಜ್ಞಾನವಂತರನ್ನಾಗಿ ಮಾಡಲು ಯತ್ನಿಸಿದರೆ ಈ ಕಾರ್ಯ ಸುಲಭವಾಗುವದು.

೯) ಸ್ತ್ರೀಶಿಕ್ಷಣ:–

ಸ್ತ್ರೀಯರನ್ನು ದಾಸ್ಯದಲ್ಲಿಡಬಾರದು. ಅವರು ತಮ್ಮ ಹಕ್ಕುಬಾಧ್ಯತೆಗಳನ್ನು ತಿಳಿದುಕೊಂಡು ಮುಂದೆ ಬರಬೇಕು. ಸ್ತ್ರೀಯರೂ ಪುರುಷರ ಸಮಾನರು; ಅವರಿಗೂ ಆತ್ಮ ವಿಕಾಸಕ್ಕೆ ಅವಕಾಶ ಸಿಗಬೇಕು. ಅವರು ಪುರುಷರ ವಿಲಾಸ ವಸ್ತುಗಳಲ್ಲ. ಅವರು ಭಾವೀ ಜನಾಂಗದ ಜನನಿಯರು; ಕಾರಣ ಭಾವೀ ಜನತೆಯ ಕಲ್ಯಾಣಕ್ಕಾಗಿ ಸ್ತ್ರೀಯರು ಸುಧಾರಿಸಬೇಕು. ಘೋಷಾ ಪದ್ಧತಿ, ಬಾಲ ವಿವಾಹ, ಬಹುಪತ್ನಿತ್ವ ನಿರ್ಮೂಲನವಾಗಬೇಕು. ಅವರಿಗೂ ಗಂಡು ಮಕ್ಕಳಂತೆ ವಿದ್ಯೆ ಕಲಿಸಬೇಕು. ವೈದ್ಯ ಶಿಕ್ಷಣ, ರೋಗಿಗಳ ಶುಶ್ರೂಷೆ ಇವು ಸ್ತ್ರೀಯರಿಗೆ ಹೆಚ್ಚು ಯೋಗ್ಯವಾದವುಗಳು.

೧೦) ಹಳ್ಳಿಯ ಸ್ವಚ್ಛತೆ:–

ಬುದ್ಧಿ ಬೇರೆ, ದೇಹದ ಶ್ರಮ ಬೇರೆ ಎಂದು ಭೇದ ಮಾಡಿ ಹಳ್ಳಿಗಳು ಹಾಳಾದವು. ಹಳ್ಳಿಗಳಲ್ಲಿ ಅಚ್ಚುಕಟ್ಟಾದ ಅಂದವಾದ ಸಣ್ಣಮನೆಗಳ ಬದಲು ಶಗಣಿಯ ತಿಪ್ಪೆಗಳೇ ಆಗಿವೆ. ಎಲ್ಲಿ ನೋಡಿದಲ್ಲಿ ಹೊಲಸು. ಹಳ್ಳಿಗಳಿಂದಲೇ ನಿರ್ಮಾಣವಾದ ಭಾರತದ ಸುಧಾರಣೆ ಆಗುವದೆಂದರೆ ಹಳ್ಳಿಗಳ ಸುಧಾರಣೆ. ಹಳ್ಳಿಗಳಿಗೆ ಮಲಮೂತ್ರಗಳ ಸದುಪಯೋಗ, ತಿಪ್ಪೆ, ಸ್ನಾನದ ಮನೆ, ದಡ್ಡಿ ಬಾವಿಗಳ ಸರಿಯಾದ ವ್ಯವಸ್ಥೆಯನ್ನು ಕಲಿಸಿಕೊಡಬೇಕು. ಹಳ್ಳಿಯ ಜನರು ಸ್ವಚ್ಛವಾದ ಬಟ್ಟೆ ಉಟ್ಟು ಆರೋಗ್ಯದಿಂದ ಇರುವಂತೆ ಮಾಡಬೇಕು.

೧೧) ಆರೋಗ್ಯ ಸ್ವಚ್ಛತೆಯ ಶಿಕ್ಷಣ:–

ನಮ್ಮ ದೇಶದ ಮರಣ ಸಂಖ್ಯೆಯು ಬೆಳೆಯಲು ಬಡವರ ಆಹಾರದ ಅಭಾವ, ಶ್ರೀಮಂತರ ಅಜೀರ್ಣದ ಪ್ರಭಾವ ಕಾರಣವಾಗಿದೆ. ಇಬ್ಬರಿಗೂ ಆರೋಗ್ಯದ ನಿಯಮ ಪಾಲನೆ ಅವಶ್ಯ. ಸುಖವಾಗಿ ಬಾಳಲಿಕ್ಕೆ ಆರೋಗ್ಯಬೇಕು. ಶುದ್ಧವಾದ ದೇಹದಲ್ಲಿ ಪರಿಶುದ್ಧವಾದ ಮನಸ್ಸಿರುವದೇ ಆರೋಗ್ಯವಂತನ ಲಕ್ಷಣ, ಇದೇ ಸತ್ಯ. ಆರೋಗ್ಯದ ಕೆಳಗಿನ ನಿಯಮುಗಳನ್ನು ಪಾಲಿಸಬೇಕು.

೧) ಮನಸ್ಸಿನಲ್ಲಿ ಯಾವಾಗಲೂ ಉತ್ತಮ ವಿಚಾರವಿರುವಂತೆ ಯತ್ನಿಸಬೇಕು.

೨) ಯಾವಾಗಲೂ ಪರಿಶುದ್ಧ ಹವೆಯನ್ನು ಉಸುರಾಡಿಸಬೇಕು.

೩) ದೈಹಿಕ ಶ್ರಮ, ಮಾನಸಿಕಶ್ರಮ ಸಮನಾಗಿರಬೇಕು.

೪) ಯಾವಾಗಲೂ ದೇಹವನ್ನು ನೀಟಾಗಿರಿಸಬೇಕು. ಬಾಗಿದ ಬೆನ್ನೇ ಬೇನೆಯ ತವರು.

೫) ಅಂತರಂಗವು ಯಾವಾಗಲೂ ಶುದ್ಧವಾಗಿರಬೇಕು.

೬) ಸಾದಾ ಮತ್ತು ಶುದ್ಧವಾದ ಆಹಾರ ಸೇವಿಸಬೇಕು.

೭) ಉತ್ತಮ ಗೆಳೆಯರ ಸಂಗತಿ ಹಿಡಿಯಬೇಕು. ಉತ್ತಮ ವಿಚಾರಗಳುಳ್ಳ ಪುಸ್ತಕ ಓದಬೇಕು.

೮) ಶುದ್ಧವಾದ ಜೀವನ, ಸಾದಾ ಆಹಾರ, ನಿಯಮಿತ ವ್ಯಾಯಾಮ, ಮತ್ತು ವಿಶ್ರಾಂತಿ ಅವಶ್ಯವಾಗಿರಬೇಕು.

೧೨) ಮಾತೃ ಭಾಷೆ:–

ಮಕ್ಕಳ ಶಿಕ್ಷಣವು ಸುಗಮವಾಗಿಸಾಗಬೇಕಾದರೆ ಮಾತೃಭಾಷೆಯ ಮಾಧ್ಯಮವು ತೀರ ಅವಶ್ಯ. ಪರನುಡಿಯನ್ನಪೇಕ್ಷಿಸಿ ತಾಯ್ನುಡಿಯನ್ನುಪೇಕ್ಷಿಸಿ ನಾವು ನಮ್ಮ ಸಾಹಿತ್ಯ ಸಂಸ್ಕೃತಿಗಳನ್ನು ಮರೆತಿದ್ದೇವೆ. ವಿದ್ಯಾವಂತರಿಗೂ ಹಳ್ಳಿಗರಿಗೂ ಸಂಬಂಧ ಕಡಿದಿದೆ. ಮಾತೃಭಾಷೆಯಲ್ಲಿ ಸುಲಭವಾಗಿ ವ್ಯಕ್ತ ಮಾಡುವ ವಿಚಾರವನ್ನು ಪರಭಾಷೆಯಲ್ಲಿ ವ್ಯಕ್ತ ಮಾಡಲು ಶಕ್ಯವಿಲ್ಲ. ಕಾರಣ ಮಾತೃಭಾಷೆಯನ್ನು ಅನಾದರ ಮಾಡಬಾರದು.

೧೩) ರಾಷ್ಟ್ರ ಭಾಷೆ:–

ಪ್ರಾಂತಕ್ಕೊಂದು ಮಾತೃಭಾಷೆ ಇಲ್ಲವೆ ಪ್ರಾಂತ ಭಾಷೆ ಅವಶ್ಯವಿದ್ದಂತೆ ಇಡೀ ರಾಷ್ಟ್ರಕ್ಕೆ ಎಲ್ಲರಿಗೂ ತಿಳಿಯುವಂತಹ ಒಂದು ಸಾಮಾನ್ಯ ಭಾಷೆ ಅವಶ್ಯ. ಅದು ಇಂಗ್ಲೀಷಲ್ಲ, ಹಿಂದುಸ್ತಾನಿ ಮಾತೃಭಾಷೆಯೊಡನೆ ರಾಷ್ಟ್ರ ಭಾಷೆಯನ್ನು ಕಲಿಯುವದರಿಂದ ನಾವು ಒಂದು ದೇಶದವರು, ಒಂದೇ ರಾಷ್ಟ್ರಭಾಷೆ ಉಳ್ಳವರು ಎಂಬ ಅಭಿಮಾನವು ಉಂಟಾಗಿ ರಾಷ್ಟ್ರನಿರ್ಮಾಣ ಕಾರ್ಯಕ್ಕೆ ಬಹಳ ಹಿತವಾಗುತ್ತದೆ.

೧೪) ರೈತರು:–

ಭಾರತವು ರೈತರನಾಡು, ೧೦೦ಕ್ಕೆ ೮೫ರಷ್ಟು ರೈತರಿದ್ದಾರೆ. ಅವರು ರಾಜಕೀಯದಲ್ಲಿ ಸೇರಿಸಲು ಯತ್ನಿಸಬೇಕು. ಹಿತ ಸಾಧಿಸಲು ಅವರು ಒಳಗೆ ಹೋಗಬೇಕು. ಜಮೀನದಾರರಿಂದ ಬಂದಿರುವ ಅವರ ತೊಂದರೆಗಳನ್ನು ನಿವಾರಿಸಿಕೊಳ್ಳಬೇಕು. ತಮ್ಮೊಳಗಿನ ತಂಟೆಗಳನ್ನು ಅವರೇ ತೀರಿಸಿಕೊಳ್ಳುವಂತೆ ಯೋಜಿಸಬೇಕು.

೧೫) ಕೂಲಿಕಾರರು:–

ರೈತರಿಗಿಂತ ತುಸು ಹೆಚ್ಚು ಬುದ್ಧಿವಂತರು ಅನೇಕ ಸಂಘಗಳನ್ನು ಕಟ್ಟಿಕೊಂಡರೂ ಸಂಪು ಹೂಡುವ ಪ್ರವೃತ್ತಿ ಬಹಳ. ಮಾಲಕರು ಇವರನ್ನು ಸರಿಯಾಗಿ ನಡಿಸಿ ಕೊಳ್ಳಬೇಕು, ಇವರ ಆದರ್ಶ ಸಂಘಗಳನ್ನು ಸ್ಥಾಪಿಸಿ ಇವರ ಬಗೆಗೆ ವೈದ್ಯಶಾಲೆ–ಪಾಠಶಾಲೆ ಮುಂತಾದವುಗಳ ವ್ಯವಸ್ಥೆ ಮಾಡಿಕೊಡಬೇಕು; 'ಅವರ ಯೋಗಕ್ಷೇಮದ ಹೊಣೆ ಹೊರಬೇಕು.

೧೬) ವಿದ್ಯಾರ್ಥಿಗಳು:–

ಮಹಾತ್ಮಾಜಿಯವರಿಗೆ ತೀರ ಸಮೀಪದ ಸಂಬಂಧದವರು, ಅಸಹಕಾರ ಚಳುವಳಿಯಲ್ಲಿ ದೇಶಸೇವೆ ಸಲ್ಲಿಸಿದ್ದಾರೆ. ವಿದ್ಯಾರ್ಥಿಗಳು ಪರಭಾಷೆಯ ವ್ಯಾಮೋಹವನ್ನು ಬಿಟ್ಟು ದೇಶೀಯ ಭಾಷೆಯಲ್ಲಿಯೇ ಜ್ಞಾನಾರ್ಜನೆ ಮಾಡಬೇಕು. ಅವರು ಅಹಿಂಸೆ ತತ್ವಗಳನ್ನು ಅಳವಡಿಸಿಕೊಂಡು ಭಾವೀನಾಗರಿಕರಾಗಲು ಯತ್ನಿಸಬೇಕು. ವಿದ್ಯಾರ್ಥಿಗಳು ಅನುಸರಿಸಬೇಕಾದ ನಿಯಮಗಳು:—

೧) ರಾಜಕೀಯ ಹರತಾಳವನ್ನು ಮಾಡಕೂಡದು, ಎರಡನೆಯ ವಿದ್ಯಾರ್ಥಿಗಳ ಮೇಲೆ, ತಮ್ಮ ಶಿಕ್ಷಕರ ಮೇಲೆ ಒತ್ತಾಯ ಹೇರಬಾರದು.

೨) ರಾಜಕಾರಣದಲ್ಲಿ ಭಾಗವಹಿಸಬಾರದು. ಜ್ಞಾನಾನ್ವೇಷಿಗಳು ಅವರು, ರಾಜಕಾರಣ ಪಟುಗಳಲ್ಲ.

೩) ನೂಲುವ ಕಲೆಯನ್ನು ಶಾಸ್ತ್ರೀಯ ರೀತಿಯಿಂದ ಕಲಿಯಬೇಕು. ಪ್ರತಿ ದಿನ ನಿಯಮದಿಂದ ನೂಲಬೇಕು. ರಾಜಕೀಯ–ಸಾಮಾಜಿಕ–ಆರ್ಥಿಕ ದೃಷ್ಟಿಯಿಂದ ಅದನ್ನು ಅಭ್ಯಾಸ ಮಾಡಬೇಕು.

೪) ಖಾದಿಯನ್ನು ಧರಿಸಬೇಕು, ಸ್ವದೇಶದಲ್ಲಿ ಸಿದ್ಧವಾದ ವಸ್ತುಗಳನ್ನೇ ಉಪಯೋಗಿಸಬೇಕು.

೫) ಅಸ್ಪೃಶ್ಯತೆಯ ನಿವಾರಣೆಗೆ ಯತ್ನಿಸಬೇಕು. ಜಾತಿ ಮತಗಳನ್ನು ಮರೆತು ಅನ್ಯರೊಡನೆ ಸಹಕಾರದಿಂದ ಪ್ರೇಮದಿಂದ ವರ್ತಿಸಬೇಕು.

೬) ಪ್ರಥಮೋಪಾಯ ಜ್ಞಾನವಿರಬೇಕು. ಹಳ್ಳಿಗಳ ಸ್ವಚ್ಛತೆ ಕಾಯಲು ಯತ್ನಿಸಬೇಕು.

೭) ರಾಷ್ಟ್ರ ಭಾಷೆಯನ್ನು ಅಭ್ಯಸಿಸಬೇಕು ಉರ್ದು, ದೇವನಾಗರಿ ಲಿಪಿ ಕಲಿಯಬೇಕು.

೮) ವಿದ್ಯಾರ್ಥಿನಿಯರ ಕೂಡ ಗಂಭೀರವಾಗಿ ಉದಾರರಾಗಿ ಸೌಜನ್ಯದಿಂದ ವರ್ತಿಸಬೇಕು.

೯) ಪರಿಶುದ್ಧ ಜೀವನದಿಂದ ಆತ್ಮ ಸಂತೋಷಿಗಳಾಗಿ ನಿರ್ಭಯದಿಂದ ಇರಬೇಕು.

೧೦) ತಮ್ಮ ಬಿಡುವಿನ ಸಮಯದಲ್ಲಿ ವಿಧಾಯಕ ಕಾರ್ಯಕ್ರಮಗಳನ್ನು ಕಾರ್ಯರೂಪದಲ್ಲಿ ಇಳಿಸಬೇಕು.

೧೭) ಆದಿವಾಸಿಗಳು:–

ಭಿಲ್ಲರು, ಗೊಂಡರು, ಸಂತಾಳರು ಸುಮಾರು ೨ ಕೋಟಿ ಜನರಿದ್ದಾರೆ. ಆಧುನಿಕ ಸುಧಾರಣೆ, ಸಾಂಸ್ಕೃತಿಕ ಸಂಪರ್ಕವಿಲ್ಲ. ಇವರ ಸೇವೆಯೂ ಒಂದು ಮಹತ್ವದ ಕಾರ್ಯ.

೧೮) ಮಹಾರೋಗಿಗಳು:–

ಕುಷ್ಟ ಮೊದಲಾದ ಮಹಾರೋಗಿಗಳು ಆಫ್ರಿಕೆಯ ನಂತರ ಭಾರತದಲ್ಲಿಯೇ ಬಹಳ. ಇವರೂ ಸಮಾಜದ ಒಂದು ಅಂಗ. ಒಬ್ಬ ರೋಗಿಯು ತಿರಸ್ಕೃತನಾಗದಿದ್ದರೆ ಅಹಿಂಸಾ ಮಾರ್ಗಕ್ಕೆ ಪುರಸ್ಕಾರ ಸಿಕ್ಕಂತೆ. ನಾವು ಮಹಾರೋಗಿಗಳನ್ನು ಕಾಣುತ್ತಿದ್ದಂತೆ ನಮ್ಮನ್ನು ಜಗತ್ತು ಕಾಣುತ್ತದೆ.

೧೯) ಗೋ ಸೇವೆ:–

ಹೈನದ ಪೂರೈಕೆ, ಒಕ್ಕಲುತನದಲ್ಲಿ ಹೋರಿಗಳ ಪೂರೈಕೆ, ಈ ಎಲ್ಲ ದೃಷ್ಟಿಯಿಂದ ಗೋ ಸೇವೆ ತೀರ ಅವಶ್ಯ. ಗೋಹತ್ಯೆ ಸಂಪೂರ್ಣ ನಿಲ್ಲಬೇಕು. ಆರೋಗ್ಯ ಮತ್ತು ಆರ್ಥಿಕ ದೃಷ್ಟಿಯಿಂದ ಅನೇಕ ಲಾಭ ಉಂಟು.

ಈ ರೀತಿ ಹತ್ತೊಂಬತ್ತು ವಿಧಾಯಕ ಕಾರ್ಯಕ್ರಮಗಳು ಭಾರತದ ಅಭಿವೃದ್ಧಿ ಕಾರ್ಯದ ಅಂಗಗಳಾಗಿವೆ. ಭಾರತದ ಸರ್ವತೋಮುಖ ಅಭಿವೃದ್ಧಿಯಾಗಿ ರಾಮರಾಜ್ಯ ನೆಲೆಗೊಳ್ಳಬೇಕಾದರೆ ಈ ಸರ್ವಾಂಗಗಳ ಪರಿಪೂರ್ಣ ವಿಕಾಸ ಅತ್ಯಗತ್ಯ. ಪ್ರತಿಯೊಬ್ಬ ಭಾರತೀಯನೂ ತನ್ನ ಆದ್ಯ ಕರ್ತವ್ಯವೆಂದು ತಿಳಿದು ಈ ವಿಧಾಯಕ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕಿಳಿಸಿ ಭಾರತದ ಸ್ವರಾಜ್ಯವನ್ನು ಉಳಿಸಿ ಬೆಳಿಸಿ ಸ್ವರಾಜ್ಯ ಮಂದಿರ ಕಟ್ಟಬೇಕು.

—ಸ್ವಸ್ತಿ.

ಮಹಾತ್ಮಾ ಗಾಂಧೀಜಿಯವರ ವಿಚಾರ ಪ್ರಣಾಲಿ

ಸಂಗ್ರಹ: ಶ್ರೀ ಈಶ್ವರಚಂದ್ರ ಚಿಂತಾಮಣಿ,

ಮುಖ್ಯ ಗುರುಗಳು, ಕಂ. ಗಂ. ಜೀ. ಶಿ. ಸಾಲೆ, ಜೈನಾಪುರ.

ಮಹಾತ್ಮಾ ಗಾಂಧೀಜಿಯವರ ಜೀವನವು ದೇಶಕ್ಕಾಗಿ, ಲೋಕಕ್ಕಾಗಿ, ಮಾನವಕೋಟಿಯ ಕಲ್ಯಾಣಕ್ಕಾಗಿ ಅರ್ಪಣವಾಯಿತು. ಭಾರತಕ್ಕೆ ಸತ್ಯ ಅಹಿಂಸೆಗಳ ಸೂತ್ರದಿಂದಲೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮರು ಭಾರತೀಯರೆಲ್ಲರ ಪ್ರಾಣವಾದರು; ರಾಷ್ಟ್ರದ ಪಿತಾಮಹರಾದರು. ಅವರುನಡೆದ ದಾರಿಯಲ್ಲಿ, ತೋರಿದ ಬೆಳಕಿನಲ್ಲಿ ಬದುಕಿ ಬಾಳವೆ ಹೋದರೆ ಲೋಕಕ್ಕೆ ಸಂಖವೆಂಬುದು ಸಿಗಲಾರದು. ಇಂದು ಜಗದ ತುಂಬ ಹುಟ್ಟಿಕೊಂಡಿರುವ—ಹುಟ್ಟುತ್ತಿರುವ ದ್ವೇಷ-ಅಸೂಯೆಗಳ ವೈರದ ವಿಷಮವಾತಾವರಣ ಪೂಜ್ಯ ಪಿತಾಮಹ ಗಾಂಧೀಜಿಯವರು ನಡೆದುಬಂದ—ಹೇಳಿದ ತತ್ವಗಳಿಗೆ ಸಲ್ಲದ ಸಂಗತಿ. ಈ ವಿಷಮ ವಾತಾವರಣದಲ್ಲಿ ಮಹಾತ್ಮರ ದಿವ್ಯವಾಣಿಯ ಸ್ಮರಣೆಯಿಂದ ನಮಗೆ ಅನುಪಮ ಆನಂದವಾಗಿ-ಕತ್ತಲೆಯು ದೂರಾಗಿ ಬೆಳಕು ಗೋಚರವಾಗುತ್ತದೆ. ಅವರ ದಿವ್ಯ ವಿಚಾರ ಪ್ರಣಾಲಿಯನ್ನು ಸಂಗ್ರಹಿಸಿ ಕೊಡಲಾಗಿದೆ.

ಇವು, ನಮ್ಮ ಗುರುಗಳಿಗೆ, ವಿದ್ಯಾರ್ಥಿಗಳಿಗೆ ನಿತ್ಯವೂ ಸ್ಫೂರ್ತಿದಾಯಕವಾಗಿ—ಬೆಳಕಿನೆಡೆಗೆ ಸಾಗಿಸಬಲ್ಲ ಅಮೃತೋಕ್ತಿಗಳು. ಗಾಂಧೀಜಿಯವರು ಹೀಗೆ ಹೇಳುತ್ತಿದ್ದರು :

"ನನಗೆ ತಪಸ್ವಿ ಎನ್ನುವದು ತಪ್ಪು; ನಾನು ಸಾಧುವಿನ ಸೋಗುಹೊತ್ತ ಮುತ್ಸದ್ದಿ ಅಲ್ಲ. ನಾನು ನನ್ನ ಧ್ಯೇಯಗಳನ್ನು ಜನ ಸಾಮಾನ್ಯರ ಸ್ವೀಕಾರಕ್ಕಾಗಿ ಅವರ ದುರು ಇಟ್ಟಿರುವೆ. ಪ್ರತಿಯೊಂದು ಹೆಜ್ಜೆಯನ್ನು ಅತ್ಯಂತ ವಿಚಾರ ಪೂರ್ವಕವಾಗಿ ಸಾವಧಾನತೆಯಿಂದ ಇಡುತ್ತ ಬಂದಿದ್ದೇನೆ. ಮನುಷ್ಯನಿಗೆ ತನ್ನ ತಪ್ಪುಗಳು ಹಾಗೂ ಹುಚ್ಚುತನ ಇವು ತಿಳಿಯಲಾರವು. ನಾನು ಹುಚ್ಚನೊ ಧಾರ್ಮಿಕನೊ ಎಂಬುದರ ನಿಜವಾದ ನಿರ್ಣಯ ನಾನು ಸತ್ತ ಬಳಿಕ ಆಗಬಲ್ಲದು.

ಇತರ ಜನರಂತೆ ತಪ್ಪು ಮಾಡಬಹುದಾದ ಒಬ್ಬ ಸಾಮಾನ್ಯ ಮಾನವನು ನಾನು.

ಈ ಜಗತ್ತೇ ಇಲ್ಲ ಎಂದು ಯಾರಾದರೂ ಹೇಳಿದರೆ ನಾನು ಒಂದೊಪ್ಪತ್ತು ಸಹಿಸಬಲ್ಲೆ. ಆದರೆ ದೇವರಿಲ್ಲ ಎಂದು ನಾನು ಅನ್ನುವದು ಮಾತ್ರ ಕಲ್ಪನಾ ಬಾಹ್ಯ.

ಸತತ ಕರ್ಮನಿರತನಿದ್ದು ಆನಂದಭರಿತನಾಗಿ ಇರುವದು ನನ್ನ ಜೀವನದ ಲಕ್ಷಣ.

ಮನುಷ್ಯನ ಲೋಪದೋಷಗಳನ್ನು ನಾನು ಪೂರ್ಣ ಬಲ್ಲವನಾದುದರಿಂದ ಇತರರ ತಪ್ಪುಗಳ ಬಗೆಗೆ ನಾನು ಕೋಪಿಸುವದಿಲ್ಲ. ತಪ್ಪುಗಾರನಿಗೆ ನೋವು ಆಗದಂತೆ ತಪ್ಪು ತಿದ್ದುವದೆ ನಾನು ಕೈಕೊಂಡ ಮಾರ್ಗ.

ಅಭಿಪ್ರಾಯಗಳ ಭಿನ್ನತೆ ಎಂದರೆ ವೈರವಲ್ಲ, ಹಾಗಿದ್ದರೆ ನಾನು ನನ್ನ ಹೆಂಡತಿ ಕಡು ವೈರಿಗಳಾಗಬಹುದಾಗಿತ್ತು, ಜಗತ್ತಿನಲ್ಲಿ ಭಿನ್ನಾಭಿಪ್ರಾಯವಿಲ್ಲದವರು ಇಬ್ಬರು ಕೂಡಾ ಇರಲಾರರು........

ನಾನೊಬ್ಬ ತಲೆತಿರುಕ ಇಲ್ಲವೆ ಹುಚ್ಚ ಎಂದು ಅನ್ನುವರು. ಈ ನನ್ನ ವರ್ಣನೆ ಯೋಗ್ಯವೆ ಸರಿ. ಯಾಕಂದರೆ ನಾನು ಹೋದಲ್ಲೆಲ್ಲ ತಲೆತಿರುಕರನ್ನು ಹುಚ್ಚರನ್ನು ಆಕರ್ಷಸುತ್ತೇನೆ; ಹಾಗೂ ಪ್ರೀತಿಸುತ್ತೇನೆ.

ನನ್ನ ಜೀವನವೆಂದರೆ ತೆರೆದಿಟ್ಟ ಪುಸ್ತಕ; ಗುಪ್ತವಾದುದೇನೂ ನನ್ನಲ್ಲಿಲ್ಲ. ಗೌಪ್ಯಕ್ಕೆ ನಾನೆಂದೂ ಉತ್ತೇಜನ ಕೊಡುವದಿಲ್ಲ.

ನನ್ನ ಬಾಂಧವರಲ್ಲಿ ನನಗಿಂತ ಕಿರಿಯರಿಲ್ಲವೆಂದು ಅಹಂಕಾರ ಶೂನ್ಯವಾಗುವವರೆಗೆ ನನ್ನ ಉದ್ಧಾರವಾಗಲಾರದು, ಇದು ಅಹಿಂಸೆಯ ಲಕ್ಷಣ; ಅಹಿಂಸೆಯ ನಮ್ರತೆಯ ಚರಮ ಸೀಮೆ.

ವ್ಯಕ್ತಿಯ ಸಾಮರ್ಥ್ಯಕ್ಕೆ ಸೀಮೆ ಇದೆ. ನಾನು ಎಲ್ಲವನ್ನು ಮಾಡಬಲ್ಲೆನು ಎಂದು ಜಂಭಕೊಚ್ಚಿಕೊಂಡರೆ ದೇವರು ಅವನ ಗರ್ವಭಂಗ ಮಾಡುತ್ತಾನೆ. ಸಾಗರದ ಒಂದು ನೀರಿನ ಹನಿಯಲ್ಲಿ ಆ ಸಾಗರದ ಶ್ರೇಷ್ಠತೆ ಅಡಕವಾಗಿರುವದು. ಆದರೆ ಅದನ್ನು ಆ ಹನಿ ಅರಿಯದು.

ನನ್ನ ಮಟ್ಟಿಗೆ ಕೂಸುಕುನ್ನಿಗಳಿಂದ ಸಹ ಸಹಾಯವನ್ನು ಅಪೇಕ್ಷಿಸುವಷ್ಟು ನಮ್ರತೆಯನ್ನು ದೇವರು ನನಗೆ ಕೊಟ್ಟಿದ್ದಾನೆ.........)

ನಾನೊಬ್ಬ ಮಹಾತ್ಮನಿರುವೆನೆಂದು ನನಗೆ ಎನಿಸುವದೇ ಇಲ್ಲ. ನಾನು ಪರಮಾತ್ಮನ ಪ್ರಾಣಿಗಳಲ್ಲೊಬ್ಬ ಅಲ್ಪಪ್ರಾಣಿ ಎಂಬುದನ್ನು ಬಲ್ಲೆ.

ಜನರ ವ್ಯಕ್ತಿ ಪೂಜೆಯನ್ನು ನೋಡಿ ನಿಜವಾಗಿಯೂ ನಾನು ಬೇಸತ್ತಿರುವೆನು. ನನಗೆ ಯಾವದೇ ಪ್ರತಿಷ್ಠೆಯ ಆಸೆ ಇಲ್ಲ. ಮಾಡಿದ ಒಳಿತನ್ನು ಮಾತಿನಿಂದ ಹೊಗಳದಿರುವುದೇ ಲೇಸು.

ನಾನೊಬ್ಬ ಖಲನೆಂದು ಭಾವಿಸಿ ಯಾರಾದರೂ ಈಗ ಗುಂಡಿಕ್ಕಿದರೆ ಅವರು ತಮ್ಮ ಕಲ್ಪನೆಯಲ್ಲಿಯ ಖಲನನ್ನು ಕೊಂದಂತಾಗುವದೇ ಹೊರತು ನಿಜವಾದ ಗಾಂಧಿಯನ್ನಲ್ಲ.

ನನ್ನಲ್ಲಿ ವಿನೋದವೃತ್ತಿ ಇಲ್ಲದಿದ್ದರೆ ನಾನು ಇಷ್ಟೊತ್ತಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆ.

ಜನರು ತಪ್ಪು ಮಾಡಿದಷ್ಟು ಸಾರೆ ನಾನು ಅವುಗಳನ್ನು ನನ್ನವೆಂದು ಒಪ್ಪುತ್ತ ಹೋಗುವೆ, ನನ್ನ ಅಂತಃಕರಣದಲ್ಲಿರುವ ಅಂತರ್ವಾಣಿಯನ್ನಲ್ಲದೆ ಇನ್ನಾರ ಸತ್ತೆಯನ್ನೂ ನಾನು ಒಪ್ಪಲಾರೆ. ದೋಷಗಳು ಕಂಡುಬಂದಾಗ ಅವುಗಳತ್ತ ಉದಾರಭಾವದಿಂದ ನೋಡಲು ನಾನು ಕಲಿತಿರುವೆ. ಅಪಾರವಾದ ಜನಪ್ರೇಮಕ್ಕೆ ನಾನು ಬೆಲೆಕೊಡುವೆ. ನನ್ನಲ್ಲಿರುವ ಒಂದೇ ಒಂದು ಗುಣವೆಂದರೆ ಸತ್ಯ ಮತ್ತು ಅಹಿಂಸೆ. ಮಾನವ ಕುಲದ ಅಪಾರ ಪ್ರೇಮವೇ ನನ್ನ ವಿವಿಧ ಕಾರ್ಯಕಲಾಪಗಳ ಮೂಲವಾಗಿರುತ್ತದೆ.

ಯಾವುದೇ ಬಗೆಯ ವಿಶೇಷಾಧಿಕಾರ ಇಲ್ಲವೆ ಗುತ್ತಿಗೆಯನ್ನು ನಾನು ತೀವ್ರವಾಗಿ ತಿರಸ್ಕರಿಸುವೆ. ಜನಸಾಮಾನ್ಯರಿಗೆ ಸಿಗದೆ ಇದ್ದುದು ನನಗೂ ಬೇಡ.

ನನ್ನ ಜೀವನದಲ್ಲಿ ಯಾವಾಗಲೂ ದರಿದ್ರರನ್ನು ಚೆನ್ನಾಗಿ ಪ್ರೀತಿಸುತ್ತ ಬಂದಿರುವೆ. ಇಂಥ ಪ್ರೀತಿ ನನ್ನ ಹುಟ್ಟುಗುಣವಾಗಿದೆ.........

ಸೋಲು ನನ್ನನ್ನು ಕುಗ್ಗಿಸಲಾರದು; ಅದು ನನ್ನನ್ನು ಶುದ್ಧೀಕರಿಸುವದು. ಜಗತ್ತಿನಲ್ಲಿ ಸುತ್ತಲೂ ಕತ್ತಲೆ ಮುಸುಕಿದ್ದರೂ ನಾನು ಬೆಳಕಿನತ್ತ ಹೋಗಲು ಯತ್ನಿಸುವೆನು.

ನನ್ನ ಅಂತರ್ವಾಣಿ ನನಗೆ ಹೇಳುವದೇ ನನ್ನ ಮಟ್ಟಿಗೆ ಸತ್ಯ. ಒಬ್ಬನಿಗೆ ಸತ್ಯವೆನಿಸಿದುದು ಇನ್ನೊಬ್ಬನಿಗೆ ಅಸತ್ಯವೆನಿಸಬಲ್ಲದು. ಸಾಕಷ್ಟು ನಮ್ರತೆ ಇಲ್ಲದವನಲ್ಲಿ ಸತ್ಯ ಪ್ರಕಟವಾಗಲಾರದು. ಸತ್ಯ ಸಾಗರದಲ್ಲಿ ವಿಹರಿಸಬೇಕಾದರೆ ನಿಮ್ಮ ಅಹಂಕಾರವನ್ನು ನಷ್ಟಗೊಳಿಸಲಿಕ್ಕೆಬೇಕು. ಸತ್ಯದಂಥ ಶ್ರೇಷ್ಠವಾದ ತತ್ವ ಮತ್ತೊಂದಿಲ್ಲ. ಸತ್ಯ ಶೋಧಕನು ಒಂದು ರಜಕಣಕ್ಕಿಂತ ನಮ್ರನಾಗಿರಬೇಕು. ನನ್ನಂಥ ನೂರಾರು ಜನ ಸಾಯಲಿ, ಆದರೆ ಸತ್ಯದ ಜಯವಾಗಲಿ.

ನಾವು ಸೃಷ್ಟಿಯಲ್ಲಿಯ ಅತ್ಯಂತ ಕೀಳು ಪ್ರಾಣಿಯನ್ನು ಸಹ ನಮ್ಮಷ್ಟೇ ಪ್ರೀತಿಸಲಿಕ್ಕೆಬೇಕು.

ಸತ್ಯವು ಪ್ರತಿಯೊಬ್ಬನ ಹೃದಯಾಂತರದಲ್ಲಿ ವಾಸಿಸುವದು. ಅದನ್ನು ಅಲ್ಲಿಯೆ ಶೋಧಿಸಬೇಕಾಗುವದು

ಈ ವಿಶ್ವಕ್ಕೆ ಪ್ರೇಮವೇ ಆಧಾರವೆಂಬುದು ನನ್ನ ಅಚಲ ವಿಶ್ವಾಸ. ಪ್ರೇಮವಿದ್ದಲ್ಲಿಯೇ ಜೀವನ ವಿರಬಲ್ಲುದು. ಪ್ರೇಮವಿಲ್ಲದ ಜೀವನ ಮರಣಪ್ರಾಯ. ಸತ್ಯ ಮತ್ತು ಪ್ರೇಮ ಇವು ಒಂದು ನಾಣ್ಯದ ಎರಡು ಮುಖಗಳು.

ನನ್ನಂತಹ ಸತ್ಯ ಶೋಧಕನಿಗೆ ಮೌನವು ಬಹಳ ಸಹಾಯಕ. ಮೌನದಿಂದ ಆತ್ಮದ ದಾರಿಯು ಬೆಳಗುತ್ತದೆ.

ನಾವು ಮಾಡುವ ಎಲ್ಲ ಕಾರ್ಯಗಳಿಗೂ ಸತ್ಯವೇ ಕೇಂದ್ರವಾಗಬೇಕು. ಸತ್ಯವೇ ನಮ್ಮ ಜೀವನದ ಉಸಿರಾಗಬೇಕು.

ನಮ್ರತೆ ಇಲ್ಲದ ಸತ್ಯ ಅಹಂಭಾವದಿಂದ ಕೂಡಿದ ಹಾಸ್ಯಾಸ್ಪದವಾದ ಆಭಾಸವಾಗಿ ಪರಿಣಮಿಸುವದು. ಈ ಪ್ರಪಂಚದಲ್ಲಿ ಸತ್ಯ—ಅಹಿಂಸೆಗಳಿಗಿಂತಲೂ ಪುರಾತನ ವಸ್ತುಗಳು ಬೇರೊಂದಿಲ್ಲ.

ದೇಹಕ್ಕೆ ಅನ್ನವು ಅವಶ್ಯವಿದ್ದಂತೆ ಆತ್ಮನಿಗೆ ಪ್ರಾರ್ಥನೆಯು ಅವಶ್ಯ. ಅಂತಃಕರಣಪೂರ್ವಕವಾಗಿ ಮಾಡಿದ ಪ್ರಾರ್ಥನೆಯು ನಿಸ್ಸಂಶಯವಾದ ಹೇಡಿತನ ಮತ್ತು ದುಷ್ಟ ಹಳೆಯ ಮನೋರೂಢಿಗಳನ್ನು ಹೋಗಲಾಡಿಸಲು ಅತ್ಯಂತ ಸಮರ್ಥ ಸಾಧನವೆಂದು ನಾನು ನನ್ನ ಸ್ವಂತ ಸಾಕ್ಷಿ ಕೊಡಬಲ್ಲೆನು.

ನಾವು ನಮ್ಮ ಅಹಂಕಾರವನ್ನು ಪೂರ್ಣ ನಷ್ಟ ಪಡಿಸುವವರೆಗೆ ನಮ್ಮಲ್ಲಿಯ ಕೆಡುಕನ್ನು ನಾವು ಗೆಲ್ಲಲಾರೆವು.

ಪವಿತ್ರ ಕಾರ್ಯದಲ್ಲಿ ಸೋಲನ್ನು ಒಪ್ಪಬೇಡಿರಿ; ಅಂತಃಕರಣಗಳನ್ನು ಶುದ್ಧಗೊಳಿಸುವ ನಿರ್ಧಾರ ಮಾಡಿರಿ.

ಧರ್ಮಸಂಕಟದಲ್ಲಿ ಸಿಲುಕಿದಾಗ ಅಂತರ್ವಾಣಿಯ ಆದೇಶವೇ ಕೊನೆಯ ಮಾತು. ನನ್ನ ಮಟ್ಟಿಗೆ ಅಂತರ್ವಾಣಿ ಹಾಗು ದೇವವಾಣಿ ಒಂದೇ.

ನಿಜವಾದ ಕಲೆ ಎಂಬುದು ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳಲು ಸಹಾಯಕನಾಗಲಿಕ್ಕೇಬೇಕು. ಸತ್ಯದಲ್ಲಿ ಹಾಗು ಸತ್ಯದ ಮುಖಾಂತರ ನಾನು ಸೌಂದರ್ಯವನ್ನು ಕಾಣುವೆ; ಗುರುತಿಸುವೆ.

ಸತ್ಯರಹಿತ ಸೌಂದರ್ಯಕ್ಕೆ ಅಸ್ತಿತ್ವವೇ ಇರುವದಿಲ್ಲ.

ಉಪವಾಸ ವನವಾಸವಿರುವ ಕೋಟ್ಯಂತರ ಜನರಿಗೆ ಯಾವುದು ಉಪಯುಕ್ತವೋ ಅದೇ ನನ್ನ ದೃಷ್ಟಿಯಿಂದ ಸುಂದರವೂ ಮೊಟ್ಟಮೊದಲು ಜೀವನಕ್ಕೆ ಅವಶ್ಯವಿದ್ದ ವಸ್ತುಗಳನ್ನು ಪೂರೈಸುವದು. ಬಳಿಕ ಒಡವೆ ಒಯ್ಯಾರಗಳು ತಾವಾಗಿಯೇ ಬರುವವು.

ಕೋಟ್ಯಂತರ ಜನರ ಹೃದಯಕ್ಕೆ ತಟ್ಟುವಂಥ ಮುಟ್ಟುವಂಥ ಕಲೆ ಹಾಗೂ ಸಾಹಿತ್ಯ ನನಗೆ ಬೇಕು.

ಮುಯ್ಯಕ್ಕೆ ಮುಯ್ಯ ತೀರಿಸುವ ಘೋರಣವು ಎಂದಿಗೂ ಹಿತಕಾರಿಯಾಗಲಾರದು. ಪ್ರಾಚೀನ ಕಾಲದಿಂದ ನಡೆಯುತ್ತಾ ಬಂದುದನ್ನೆ ನಾನು ಹೇಳಿರುವೆನು.

ಅಹಿಂಸೆಯ ಸಂದೇಶವನ್ನು ಮಾನವ ಕುಲಕ್ಕೆ ಬೀರುವದು ಹಿಂದುಸ್ತಾನದ ಭವಿತವ್ಯವಿರುವದೆಂಬುದು ನನ್ನ ಅಚಲ ವಿಶ್ವಾಸವಾಗಿದೆ.

ಸತ್ಯ ಮತ್ತು ಅಹಿಂಸೆ ಈ ತತ್ವಗಳ ಸಂಯುಕ್ತ ಶಕ್ತಿಯು ಜಗತ್ತನ್ನೇ ಮಣಿಸಲು ಸಮರ್ಥವಾಗಿದೆ.

ಎಲ್ಲರೊಡನೆ ಪ್ರೇಮದಿಂದ ನಡೆಯುವದರಲ್ಲಿಯೆ ನಮ್ಮ ದೇವರ ಜ್ಞಾನ ವ್ಯಕ್ತವಾಗುತ್ತದೆ. ಪ್ರೇಮವಿದ್ದಲ್ಲಿ ಜೀವನವಿದೆ. ದ್ವೇಷವು ಯಾವಾಗಲೂ ನಮ್ಮನ್ನು ಘಾತಕ್ಕಿಳಿಸುವದು.

ನನ್ನ ಸೇವೆಯು ನಿಮಗೆ ಅವಶ್ಯವಿದ್ದರೆ ನನ್ನನ್ನು ದೂರ ನೂಕಬೇಡಿರಿ.

ಇನ್ನೊಬ್ಬರ ಮೇಲೆ ಅಧಿಕಾರನಡೆಸಲು ನನ್ನ ಹತ್ತಿರ ಪ್ರೇಮದ ಹೊರತು ಬೇರೊಂದಿಲ್ಲ.

ನನ್ನಿಂದ ಸಹಾಯ ಮಾಡುವದು ಸಾಧ್ಯವಾಗದಿದ್ದರೆ ಇತರರಿಗೆ ನನ್ನಿಂದ ಅಡ್ಡಿ ಮಾತ್ರ ಆಗಬಾರದು.

ನನ್ನಲ್ಲಿರುವ ಸಕಲ ಸದ್ಗುಣಗಳನ್ನು ನಾನು ನನ್ನ ತಾಯಿಯಿಂದ ಪಡೆದಿರುವೆನು.

ನಾನು ಹೆಣ್ಣಾಗಿ ಹುಟ್ಟಿದ್ದರೆ, ಹೆಣ್ಣೆಂಬುದು ಗಂಡಿನ ಆಟಿಕೆ, ಜೀತದಾಳು ಎಂಬ ಕಲ್ಪನೆಯ ವಿರುದ್ಧ ಬಂಡಾಯವನ್ನೇ ಹೂಡುತ್ತಿದ್ದೆ.

ಹೆಣ್ಣು ಸ್ವಾರ್ಥತ್ಯಾಗದ ಪ್ರತ್ಯಕ್ಷ ಅವತಾರ; ತಾಳ್ಮೆಯ ಖನಿ.

ಅಂತಃಕರಣವನ್ನು ಕರಗಿಸುವ ಸಾಮರ್ಥ್ಯವು ಸ್ತ್ರೀಯಲ್ಲಿರುವಷ್ಟು ಇನ್ನಾರಲ್ಲಿಯೂ ಇಲ್ಲ !

ಕಾಯಕವಿಲ್ಲದೆ ಕೂಳು ತಿನ್ನುವವರು ಕಳ್ಳರು ಎಂಬುದು ಪರಮಾತ್ಮನ ವಚನವಿರುವದು.

ಲಕ್ಷಾಂತರ ಉಪವಾಸ ಬಳಲುತ್ತಿರುವ ಜನರಿಗೆ ದೇವರ ಸಂದೇಶವನ್ನು ಹೇಳುವುದೆಂದರೆ, ಆಕೋ ಆ ನಾಯಿಯ ಮುಂದೆ ಗೀತೆ ಓದಿದಂತೆ. ಅವರ ಕಣ್ಣಲ್ಲಿ ತೇಜವಿಲ್ಲ; ಅವರಿಗೆ ಅನ್ನವೇ ಬ್ರಹ್ಮ. ಪವಿತ್ರವಾದ ಕೆಲಸವನ್ನು ಅವರಿಗೆ ಕೊಡುವುದೇ ದೇವರ ಸಂದೇಶ ಕೊಟ್ಟಂತೆ.

ಕಾಯಕವಿಲ್ಲದೆ ನಾನು ಬದುಕಿರಲಾರೆ. ರಾಟಿಯನ್ನು ತಿರುವುತ್ತಿರುವಾಗಲೆ ಸಾಯಬೇಕೆಂಬುದು ನನ್ನ ಇಚ್ಛೆ.

“ ಪ್ರಾಥಮಿಕ ಶಾಲೆಗಳೂ ಹಾಗೂ ಅವುಗಳನ್ನು ಜೀವನ ಶಿಕ್ಷಣ ಮಾದರಿಯ ಸಾಲೆಗಳಾಗಿ ಪರಿವರ್ತನೆ ಮಾಡುವದು ”

ಸಂಗ್ರಹಕಾರರು : ಶ್ರೀ ವ್ಹಿ. ಜಿ. ದೇಶಪಾಂಡೆ, ಎ. ಡಿ. ಈ. ಆಯ್., ಬೆಳಗಾಂವ.

[**ಡಾ. ಜಿ. ಕೆ. ಶುಕ್ಲ,** ಡಾಯರೆಕ್ಟರ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಬೇಸಿಕ್ ಎಜ್ಯುಕೇಶನ್ ನ್ಯೂ ದಿಲ್ಲಿ, ಇವರ ಲೇಖನವನ್ನು ಆಧರಿಸಿ ಬರೆದದ್ದು]

ನಮ್ಮ ದೇಶವು ಸ್ವತಂತ್ರವಾದ ದಿವಸದಿಂದ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ಕೈಕೊಳ್ಳಲಾಗುತ್ತಿದ್ದು, ಜೀವನ ಶಿಕ್ಷಣವು, ರಾಷ್ಟ್ರೀಯ ಸ್ವರೂಪದ ಶಿಕ್ಷಣವೆಂದು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಒಪ್ಪಿಕೊಂಡಿವೆ. ರಾಷ್ಟ್ರದಲ್ಲಿ ಜೀವನ ಶಿಕ್ಷಣದ ಅನೇಕ ಪ್ರಯೋಗಗಳು ಕಂಡು ಬರುತ್ತಿವೆ.

೧೯೫೭ನೆಯ ಮೇ ೧೧ನೆಯ ತಾರೀಖಿನಿಂದ ಅಲಹಾಬಾದಿನಲ್ಲಿ ಸೇರಿದ ಮೂರು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವು ಪ್ರಾಥಮಿಕ ಶಾಲೆಗಳನ್ನು ಜೀವನ ಶಿಕ್ಷಣ ದಿಶೆಯಲ್ಲಿ ರೂಪಾಂತರ ಹೊಂದುವ ಹಾಗೂ ಪರಿವರ್ತನೆಗೊಳ್ಳುವ ವಿಷಯವಾಗಿ ನಡೆಸಿದ ಶೈಕ್ಷಣಿಕ ಚರ್ಚೆಯ ವಿಷಯವಾಗಿ ಕೈಕೊಂಡ ವಿಚಾರ-ವಿನಿಮಯದ ಸಾರಾಂಶವನ್ನು ಸ್ಥೂಲವಾಗಿ ಸಂಗ್ರಹಿಸಿ ಕೊಡಲಾಗಿದೆ.

ಈಗಿದ್ದಂತೆ ಎರಡನೆಯ ಪಂಚವಾರ್ಷಿಕ ಯೋಜನೆಯ ಗುರಿಯನ್ನು ಸಾಧಿಸಿದರೆ, ಒಟ್ಟು ಶಾಲೆಗಳಲ್ಲಿ ನೂರಕ್ಕೆ ೨೦ರಷ್ಟು ಪ್ರಾಥಮಿಕ ಶಾಲೆಗಳು ಜೀವನ ಶಿಕ್ಷಣ ಸಾಲೆಗಳಾಗಿ ಪರಿವರ್ತನ ಹೊಂದುವವು. ರಾಷ್ಟ್ರದಲ್ಲಿಯ ಸಮಗ್ರ ಪ್ರಾಥಮಿಕ ಸಾಲೆಗಳು, ಜೀವನ ಶಿಕ್ಷಣ ಸಾಲೆಗಳಾಗಿ ಪರಿವರ್ತನ ಹೊಂದಲು ವಿಶೇಷ ಸಮಯವೂ, ಹಣಕಾಸಿನ ಹೆಚ್ಚಿನ ಸಹಾಯವೂ, ಆಡಳಿತದ ತೊಂದರೆಗಳ ನಿವಾರಣೆಯೂ ಹಾಗೂ ಸಂಘಟನೆಗಳೂ ಬೇಕಾಗುವದರಿಂದ, ರಾಷ್ಟ್ರದ ತ್ವರಿತ ಬೇಡಿಕೆಯನ್ನು ಪೂರೈಸಲು "The Re-Orientatron Programme" ಅಂದರೆ ಸಾದಾ ಸಾಲೆಗಳನ್ನು ಜೀವನ ಶಿಕ್ಷಣ ಮಾದರಿಯ ಸಾಲೆಗಳನ್ನಾಗಿ ಪರಿವರ್ತಿಸುವ ಕಾರ್ಯವನ್ನು ಸರಕಾರವು ತನ್ನ ಮುಂದಿಟ್ಟುಕೊಂಡಿದ್ದು ಅದರ ವಿಚಾರವು ಈ ರೀತಿಯಾಗಿದೆ.

ಸಾದಾ ಸಾಲೆಗಳ ಪರಿವರ್ತನೆಯ ಯೋಜನೆ

ರಾಷ್ಟ್ರಾದ್ಯಂತ ನಡೆದ ನಾಲ್ಕು ರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ನಿಯೋಜಿಸಿದಂತೆ ಜೀವನ ಶಿಕ್ಷಣ ಸಾಲೆ ಹಾಗೂ ಸಾದಾ ಸಾಲೆಗಳ ನಡುವಿನ ಅಂತರವನ್ನು ಕಡಿಮೆ ಮಾಡಲು, ಸಾದಾ ಸಾಲೆಗಳಲ್ಲಿ ಕಡಿಮೆ ವೆಚ್ಚದಿಂದ, ವಿಶಿಷ್ಟ ತರಬೇತಿ ಹೊಂದಿದ ಶಿಕ್ಷಕರ ಸಹಾಯವಿಲ್ಲದೆ, ಎಲ್ಲ ಸಾದಾ ಸಾಲೆಗಳಲ್ಲಿ ಸುಲಭವಾಗಿ ಕೈಕೊಳ್ಳಬಹುದಾದ ಸಾಮಾನ್ಯ ರಾಷ್ಟ್ರೀಯ ಶಿಕ್ಷಣದ ಅಂಶಗಳನ್ನು ಸ್ವೀಕರಿಸಬಹುದಾದ ಯೋಜನೆಯನ್ನು ಕಾರ್ಯಗತಗೊಳಿಸುವದು.

ಸಾದಾ ಸಾಲೆಗಳನ್ನು ಜೀವನ ಶಿಕ್ಷಣ ಮಾದರಿಯ ಸಾಲೆಗಳಾಗಿ ಪರಿವರ್ತಿಸುವ ಅಂಶಗಳು ಇಲ್ಲಿ ಗೊತ್ತುಪಡಿಸಿದಂತೆ ಇರುವವು :—

೧) ಆರೋಗ್ಯಮಯ ಜೀವನ ಕ್ರಮವನ್ನು ಸಾಗಿಸಲು ಸಹಾಯಕವಾದ ಹಾಗೂ ಮಾರ್ಗದರ್ಶಕವಾದ ಚಟುವಟಿಕೆಗಳು.

೨) ನಾಗರಿಕತೆಯ ತರಬೇತಿ, ಹಾಗೂ ಸಾಮೂಹಿಕ ಜೀವನಕ್ಕೆ ಪೋಷಕವಾದ ಚಟುವಟಿಕೆಗಳು.

೩) ಸಾಮಾಜಿಕ ಪರಿಸರದ ಒಳ್ಳೆಯ ಜ್ಞಾನ ಮಾಡಿಕೊಡುವಂಥ ಚಟುವಟಿಕೆಗಳು.

೪) ಸುಲಭವಾಗಿ ಕೈಕೊಳ್ಳಲ್ಪಡುವ ಉದ್ದೇಶಪೂರಿತ ಚಟುವಟಿಕೆಗಳು.

೫) ಮನೋರಂಜಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು.

೬) ಸಮಾಜಸೇವೆಯು—ಮನೆ ಹಾಗೂ ಸಾಲೆ ಮತ್ತು ಸಮಾಜಗಳ ನಡುವೆ ಸುಮಧುರ ಸಂಬಂಧವನ್ನಿಡಲು ಅವಕಾಶವೀಯುವ ಚಟುವಟಿಕೆಗಳು.

ಈ ವಿಷಯವಾಗಿ ಕೇಂದ್ರ ಶಿಕ್ಷಣ ವಿಭಾಗವು ಕೆಳಗೆ ನಮೂದಿಸಿದ ಎರಡು ಪುಸ್ತಕಗಳನ್ನು ಪ್ರಕಟಿಸಿದೆ.

1) Orienting the Primary School into Basic pattern.

2) Basic activities for Non-Basic Schools by the National Institue of Basic Education.

ರಾಷ್ಟ್ರೀಯ ವಿಚಾರ ಸಂಕಿರಣಗಳು ತಳೆದ ಧೋರಣೆಯು ಶೈಕ್ಷಣಿಕವಾಗಿ ಬಹಳೇ ಸ್ಪಷ್ಟವಾಗಿವೆ. ಹಾಗೂ ಅವು ಈ ರೀತಿಯಾಗಿವೆ.

ಅ) ಮಕ್ಕಳಿಗೆ ಸ್ವಾವಲಂಬನೆಯ ಹಾಗೂ ಕಾರ್ಯ ಗೌರವದ ವಿಚಾರವನ್ನು ತಂದುಕೊಡುವದು.

ಬ) ಮಕ್ಕಳಿಗೆ ಆರೋಗ್ಯಕರವಾದ ಜೀವನವನ್ನು ಸಾಗಿಸಲು ಅವಕಾಶವನ್ನು ಕಲ್ಪಿಸಿಕೊಡುವದು.

ಕ) ಮಕ್ಕಳಿಗೆ ತಮ್ಮ ಕೈಗಳ ಮುಖಾಂತರ ತಮ್ಮಲ್ಲಿದ್ದ ಅವಿಕಸಿತ ವಿಚಾರ ಶಕ್ತಿಯನ್ನು ಸ್ಫುಟಗೊಳಿಸಲು ಸುಲಭ ಕಸಬುಗಳ ಮುಖಾಂತರ ವೆಚ್ಚರಹಿತ ಚಟುವಟಿಕೆಗಳನ್ನು ಮಾಡಿಸುವದು.

ಡ) ಮಕ್ಕಳಿಗೆ ಹೊಣೆಗಾರಿಕೆಯ ಹಾಗು ಸಹಕಾರ ಯುಕ್ತ ಜೀವನದ ಪ್ರಾತ್ಯಕ್ಷಿಕ ತರಬೇತಿಯನ್ನು, ಶಾಲಾ ಸಮಾಜದ ಹಾಗೂ ಶಾಲೆಯ ಸಂಸತ್ತಿನ ಮುಖಾಂತರ ಮಾಡಿಕೊಡುವದು.

ಇ) ಮಕ್ಕಳಲ್ಲಿ ಜೀವನದ ಯೋಗ್ಯ ಮೌಲ್ಯಮಾಪನದ ಬಗೆಗೆ ಅಭಿರುಚಿ, ಹಾಗೂ ವಿರಾಮದ ಸದುಪಯೋಗ ಮಾಡಿಕೊಳ್ಳುವ ಲವಲವಿಕೆಯನ್ನು ಕುದುರಿಸುವದು.

ಫ) ನೈಸರ್ಗಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಶಾಲಾ ಸಮಾಜದ ಮುಖಾಂತರ ಕೈಕೊಳ್ಳುವ ಕಾರ್ಯಕ್ರಮದಲ್ಲಿ ಅಭಿರುಚಿಯನ್ನುಂಟು ಮಾಡುವದು.

ಮೇಲೆ ಕಾಣಿಸಿದ ರೀತಿಯಲ್ಲಿ ಸಾದಾ ಸಾಲೆಗಳನ್ನು ಜೀವನ ಶಿಕ್ಷಣ ಮಾದರಿಯ ಸಾಲೆಗಳಾಗಿ ರೂಪಿಸಲು, ಮೇ ೧೧, ೧೯೫೬ಕ್ಕೆ ಅಲಹಾಬಾದಿನಲ್ಲಿ ಸೇರಿತು. ಕೇಂದ್ರ ಶಿಕ್ಷಣ ವಿಭಾಗದವತಿಯಿಂದ ಸೇರಿದ ಈ ರಾಷ್ಟ್ರೀಯ ಶಿಕ್ಷಣ ವಿಚಾರ ಸಂಕಿರಣವು ರಾಷ್ಟ್ರಕ್ಕೆ ಮಾರ್ಗದರ್ಶನ ಮಾಡಿದೆ. ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವ ನನ್ನ ಅನೇಕ ಬಂಧು-ಭಗಿನಿಯರಿಗೆ ಮೇಲಿನ ಲೇಖನದಿಂದ ಸಾಮಾನ್ಯ ಮಾರ್ಗದರ್ಶನವಾಗಬಹುದೆಂಬ ವಿಚಾರದಿಂದ ಈ ಲೇಖನವನ್ನು ಮುಗಿಸುತ್ತೇನೆ.

೧೯೫೭ನೆಯ ಇಸವಿಯಿಂದ ಪ್ರಾರಂಭವಾಗುವ ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]

೪ ರಿಂದ ೭ ನೇಯ ವರ್ಗದ ವರೆಗಿನ ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ: ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ:—

ಸಾಯಿ ಪಬ್ಲಿಶಿಂಗ್ ಹಾವುಸ್,
ವಿಜಯ ರೋಡ, ಧಾರವಾಡ.

ಪ್ರಾಥಮಿ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರಿಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧—೧೨—೦** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಇದು ಕನ್ನಡದಲ್ಲಿಯೂ ಸಿಗುತ್ತದೆ,

ಜಿ. ವಾಯ್. ರಾಣೆ

ಪ್ರಕಾಶಕರು, ೨೪೩, ಕಸಬಾ ಪೇಟ ಪುಣೆ.

ಸಾದಾ ಪ್ರಾಥಮಿಕ ಶಾಲೆಗಳಿಗೆ ಜೀವನ ಶಿಕ್ಷಣದ ದೀಕ್ಷೆಯನ್ನೀಯುವ ವಿಧಾನ

ಲೇಖಕರು : **ಶ್ರೀ ತಟ್ಟಿ ಶಾಮರಾಯರು,** ಎಮ್. ಎ., ಎಸ್. ಟಿ. ಸಿ. ಡಿ.

ಗಾಂಧಿಜಿಯವರು ತಮ್ಮ ಜೀವಮಾನದಲ್ಲಿ ದೇಶದಲ್ಲಿ ನಡೆಯುತ್ತಿದ್ದ ಶಿಕ್ಷಣ ಕ್ರಮವನ್ನು ನೋಡಿ ಅಸಮರ್ಪಕತೆಯ ಬಗ್ಗೆ ಖಾತ್ರಿಮಾಡಿಕೊಂಡು ತತ್ಕಾಲೀನ ದೇಶದ ಪರಿಸ್ಥಿತಿಗೆ ಹೊಂದಿಕೊಳ್ಳುವ ಮತ್ತು ರಾಷ್ಟ್ರದ ಪುನರುಜ್ಜೀವನವನ್ನು ಸಾಧಿಸಬಲ್ಲ ಹಾಗು ಮನೋವಿಜ್ಞಾನತತ್ವಗಳಿಗೆ ಅನುಗುಣವಾದ ಜೀವನ ಶಿಕ್ಷಣ ವ್ಯವಸ್ಥೆಯನ್ನು ಪ್ರಾರಂಭಿಸಿದರು; ಅದಕ್ಕೆ ಇಂದಿಗೆ ೨೨ ವರ್ಷಗಳಾಗಿವೆ. ಆದರೂ ೬ ರಿಂದ ೧೧ ವರ್ಷದ ಮಕ್ಕಳಿಗೆ ಸಾರ್ವತ್ರಿಕವಾಗಿ ಉಚಿತವಾದ ಕಡ್ಡಾಯದ ಶಿಕ್ಷಣವನ್ನು ಕೊಡುವದು ಸಾಧ್ಯವಾಗಿಲ್ಲ. ಎಲ್ಲಾ ಸಾದಾ ಶಾಲೆಗಳನ್ನು ಆದಷ್ಟು ಬೇಗ ಜೀವನ ಶಿಕ್ಷಣ ಶಾಲೆಗಳ ದಿಶೆಯಲ್ಲಿ ಮಾರ್ಪಡಿಸುವ ಉದ್ದೇಶದಿಂದ ಸಾದಾ ಶಾಲೆಗಳಲ್ಲಿ ಕೂಡಲೇ ಆಚರಣೆಯಲ್ಲಿ ತರಬಹುದಾದ ಜೀವನದ ವೈಶಿಷ್ಟ್ಯಗಳು ಇಂತಿವೆ.

೧. ಸಫಾಯಿ ಮಂತ್ರಿ ಮಂಡಳದ ರಚನೆ ಇತ್ಯಾದಿ ಚಟುವಟಿಕೆಗಳೂ ಮಕ್ಕಳಲ್ಲಿ ಸ್ವಾವಲಂಬನ ಹಾಗೂ ಸ್ವಯಂಪೂರಿತ ಹೊಣೆಗಾರಿಕೆಗಳ ಅರಿವನ್ನುಂಟು ಮಾಡುವದು.

೨. ಪ್ರಾರ್ಥನೆ, ಪ್ರವಾಸ, ನಿರೀಕ್ಷಣೆ ಇತ್ಯಾದಿ ಚಟುವಟಿಕೆಗಳು ಉದ್ದೇಶಪೂರ್ವಕವಾದವಿದ್ದು ಆ ಉದ್ದೇಶಗಳು ಹೆಚ್ಚಾಗಿ ಕೈಗೂಡುವವು.

೩. ಮುಂದಾಳುಗಳನ್ನು ಆರಿಸುವದು, ಗುಂಪುಗಳನ್ನು ರಚಿಸುವದು, ಧ್ವಜವಂದನೆ ಇತ್ಯಾದಿ ಚಟುವಟಿಕೆಗಳು ಸ್ವಾತಂತ್ರ್ಯ ಸ್ವಾಭಿಮಾನದ ಭಾವನೆಗಳನ್ನು ಬೆಳಸಿ ವ್ಯಕ್ತಿವಿಕಾಸಕ್ಕೆ ಮಾರ್ಗಮಾಡುವವು.

೪. ಸ್ಥಾನಿಕ ಹಾಗು ರಾಷ್ಟ್ರೀಯ ಹಬ್ಬಗಳ ಆಚರಣೆ— ಈ ಚಟುವಟಿಕೆಗಳು ಸಾಮಾಜಿಕ ಜೀವನ ಹಾಗು ರಾಷ್ಟ್ರ ಜೀವನದ ಕೂಡ ಸಂಪರ್ಕವನ್ನು ಹೆಚ್ಚಿಸುವವು.

೫. ಕೊನೆಯದಾಗಿ ಪಂದ್ಯಾಟಗಳು, ಸ್ನೇಹ ಸಮ್ಮೇಲನಗಳು, ಪಾಲಕರ ದಿನಾಚರಣೆ, ಶಾಲೆಯ ಹುಟ್ಟುಹಬ್ಬ ಇತ್ಯಾದಿ ಚಟುವಟಿಕೆಗಳು ಮನರಂಜನೆಯ ಮುಖಾಂತರ ರಾಷ್ಟ್ರದ ಸನಾತನ ಸಂಸ್ಕೃತಿಯ ಅರಿವನ್ನುಂಟು ಮಾಡಿ ಮಕ್ಕಳ ಸುಖವನ್ನು ಹೆಚ್ಚಿಸುವವು.

ಮೇಲಿನ ಚಟುವಟಿಕೆಗಳ ಹೆಚ್ಚು ಸ್ಪಷ್ಟವಾದ ವಿವರಣೆಯನ್ನು ಕೆಳಗೆ ಕೊಡಲಾಗಿದೆ:—

೧) ದೈನಂದಿನ:- ಸಾಮೂಹಿಕ ಪ್ರಾರ್ಥನೆ, ಸ್ವಚ್ಛತೆ, ಪಂಚಾಂಗ ಪಠನ, ಅಮರನುಡಿ, ವಾರ್ತಾ ವಾಚನ, ಆರೋಗ್ಯ ಪರೀಕ್ಷೆ, ಕುಡಿಯುವ ನೀರಿನ ವ್ಯವಸ್ಥೆ. ೨) ಸ್ವಯಂಶಾಸಿತ ಆಡಳಿತ:- ವಿದ್ಯಾರ್ಥಿ-ಮಂತ್ರಿ ಮಂಡಲಗಳ ರಚನೆ ಮತ್ತು ಅವುಗಳ ಕಾರ್ಯ. ೩) ಸಂಘ ಸಂಸ್ಥೆಗಳು:- ಸಹಕಾರಿ ಸಂಘ, ಚರ್ಚಾಕೂಟ, ಕೈಬರಹ ಪತ್ರಿಕೆ ಸಮಿತಿ, ಸ್ವಯಂಸೇವಕ ಪಥಕ, ಬಾಲವೀರ ಮತ್ತು ಬಾಲಿಕೆಯರ ಪಥಕಗಳು. ಪ್ರದರ್ಶನ ಮಂಡಲಗಳು, ಅಭ್ಯಾಸ ಮಂಡಲ, ಪಂದ್ಯಾಟ ಸಮಿತಿ-ಇತ್ಯಾದಿ. ೪) ದಿನಾಚರಣೆಗಳು ಹಾಗು ಸಪ್ತಾಹಗಳು:- ಸ್ವಾತಂತ್ರ್ಯದಿನ, ಪ್ರಜಾರಾಜ್ಯದಿನ, ಗಾಂಧಿ ಜಯಂತಿ, ಬಸವ ಜಯಂತಿ, ಮಹಾವೀರ ಜಯಂತಿ, ಬುದ್ಧಜಯಂತಿ, ಜಾಗತಿಕ ಆರೋಗ್ಯದಿನ, ಸಂಯುಕ್ತ ರಾಷ್ಟ್ರಸಂಘದಿನ, ಧ್ವಜದಿನ, ರೆಡ್ ಕ್ರಾಸ್ ದಿನ, ಮಕ್ಕಳ ಸಪ್ತಾಹ, ಸಮಾಜ ಶಿಕ್ಷಣ ಸಪ್ತಾಹ, ಜೀವನ ಶಿಕ್ಷಣ ಸಪ್ತಾಹ-ಮುಂ. ೫) ರಾಷ್ಟ್ರೀಯ ಉತ್ಸವಗಳು:- ಮೊಹರಮ್, ಕ್ರಿಸ್‌ಮಸ್ (ನಾತಾಳಿ), ದಸರಾ, ಗಣೇಶ ಚತುರ್ಥಿ, ವನಮಹೋತ್ಸವ. ೬) ಸಾಂಸ್ಕೃತಿಕ ಚಟುವಟಿಕೆಗಳು:- ಐತಿಹಾಸಿಕ, ನೈಸರ್ಗಿಕ ಸ್ಥಳಗಳ ಸಂದರ್ಶನ, ಪ್ರವಾಸ, ವನವಿಹಾರ, ವನಭೋಜನ ಶಿಬಿರಗಳು. ೭) ಗ್ರಾಮಸುಧಾರಣಾ ಕಾರ್ಯ:- ಶ್ರಮದಾನ, ಗ್ರಾಮಸಫಾಯಿ, ಜಾತ್ರೆ, ಉತ್ಸವಗಳ ಕಾರ್ಯದಲ್ಲಿ ಭಾಗವಹಿಸುವದು, ಹಳ್ಳಿಯ ಪರಿಶೀಲನೆ, ಸಮಾಜ ಶಿಕ್ಷಣ ಕಾರ್ಯ, ಹಳ್ಳಿಗಳ ಮೂಲ ಹಾಗು ಪೂರಕ ಉದ್ಯೋಗಗಳಲ್ಲಿ ಭಾಗ ವಹಿಸುವದು.

೮) ಮನರಂಜನೆಯ ಕಾರ್ಯಕ್ರಮ:- ಏಕಾಂಕ ನಾಟಕಗಳು, ಬೈಲಾಟ, ಚಿತ್ರ ಪ್ರದರ್ಶನ, ಶಾರೀರಿಕ ಕಸರತ್ತುಗಳು, ಸಾಂಘಿಕ ನೃತ್ಯಗಳು. ಸಾಂಘಿಕ ಆಟಗಳು, ಕವನಗಳು, ಜಾನಪದ ಗೀತೆಗಳು, ಅಣಕಗಳು, ಮುಂ. ೯) ಆರೋಗ್ಯ ಚಟುವಟಿಕೆಗಳು:- ಮೂತ್ರಕುಣಿ, ಇಂಗುಬಚ್ಚಲ, ಹರಿಸಾಯಿಖಾನೆ, ಹೊಗೆರಹಿತ ಒಲೆ ಮುಂತಾದವುಗಳ ರಚನೆ, ಹರಿಜನ ಕೇರಿಯ ಸ್ವಚ್ಛತೆ, ಊರಿನ ಕುಡಿಯುವ ನೀರಿನ ಸ್ವಚ್ಛತೆ, ಆರೋಗ್ಯ ಸಪ್ತಾಹ ಮುಂತಾದವುಗಳನ್ನು ಕೈಕೊಳ್ಳುವದು.

ಈ ಚಟುವಟಿಕೆಗಳಿಂದ ಸಾಧಿಸುವ ಉದ್ದೇಶಗಳ ಸ್ಪಷ್ಟೀಕರಣ:—

೧) ಬಾಲಕನು ಸ್ವಾವಲಂಬಿ ಹೊಣೆಗಾರ ನಾಗರಿಕನಾಗಬೇಕು. ೨) ಸಂಘಜೀವನವನ್ನು ಯಶಸ್ವಿಯಾಗಿ ಸಾಗಿಸಲು ಅವಶ್ಯಕವಾದ ಸಹಕಾರ, ಪ್ರಾಮಾಣಿಕತೆ, ವಿಧೇಯತೆ, ತ್ಯಾಗಬುದ್ಧಿ, ಸಮಭಾವನಾವೃತ್ತಿ ಮುಂತಾದವುಗಳನ್ನು ಅಳವಡಿಸಿಕೊಳ್ಳಬೇಕು. ೩) ಸಂಘಟನಾ ಚಾತುರ್ಯ ಬರಬೇಕು. ೪) ಮುಂದಾಳುವಿನ ಯೋಗ್ಯ ತರಬೇತಿ ಸಿಕ್ಕಬೇಕು. ೫) ಶ್ರಮಗೌರವದ ಭಾವನೆಯು ಬೆಳೆಯಬೇಕು. ೬) ಯೋಗ್ಯ ಹೊಣೆಗಾರಿಕೆಯಿಂದ ಕರ್ತವ್ಯಪಾಲನೆಯಲ್ಲಿ ರೂಢಿಯಾಗಬೇಕಲ್ಲದೆ ಸ್ವಯಂ ಶಾಸಿತ ಸಂಘ-ಸಂಸ್ಥೆಗಳಲ್ಲಿ ಯೋಗ್ಯರೀತಿಯಿಂದ ಕಾರ್ಯ ನಿರ್ವಹಿಸಲು ಅರ್ಹರನ್ನಾಗಿ ಮಾಡುವದು. ೭) ಬಾಲಕರಲ್ಲಿ ಮಾನವೀಯತೆಯ ಭಾವನೆಯನ್ನು ಒಡಮೂಡಿಸುವದು. ೮) ಸಮಾಜ ಕಲ್ಯಾಣಕ್ಕಾಗಿ ಬಾಲಕನಲ್ಲಿ ಹುದುಗಿಕೊಂಡಿರುವ ಕಲೆಗಳನ್ನು ಪ್ರದರ್ಶಿಸಿ ಬೆಳೆಸುವದು. ೯) ನಾಳಿನ ನಾಗರಿಕನಾಗುವ ಬಾಲಕನೂ ಸುಸಂಸ್ಕೃತನಾಗಿ ಬಾಳಲು ತನ್ನ ಶಾಲೆ, ಊರು, ಸಮಾಜ, ದೇಶಗಳ ಸಲುವಾಗಿ ಮನಃಪೂರ್ವಕವಾಗಿ ಶ್ರಮಿಸಿ ಸೇವೆಸಲ್ಲಿಸುವ ರೂಢಿಯಾಗಬೇಕು. ೧೦) ಬಾಲಕರ ಸರ್ವಾಂಗೀಣ, ಅಂದರೆ, ದೈಹಿಕ, ಬೌದ್ಧಿಕ, ಮಾನಸಿಕ ಹಾಗೂ ನೈತಿಕ ಬೆಳವಣಿಗೆಗೆ ಅವಕಾಶ ಕಲ್ಪಿಸಿ, ಸಚ್ಛೀಲರಾದ ಬಂಧುಭಾವವುಳ್ಳ, ದೇಶಾಭಿಮಾನಿಗಳ ನೂತನ ಸಮಾಜದ ಘಟಕಗಳನ್ನಾಗಿ ಬೆಳೆಸುವದು.

ಜೀವನ ಶಿಕ್ಷಣ ದಿಶೆಯಲ್ಲಿ ಹೊಸದಾಗಿ ಮಾರ್ಪಟ್ಟ ಶಾಲೆಯು ಸಮಾಜದ ಕೇಂದ್ರವಾಗಿರಬೇಕಾದುದರ ಉದ್ದೇಶಗಳನ್ನು ಮರೆಯಬಾರದು. ಹಳ್ಳಿಗರ ಹಾಗೂ ವಿದ್ಯಾರ್ಥಿಗಳ ಜೀವನ ಮಟ್ಟವನ್ನು ಎತ್ತರಿಸಬೇಕು. ಜಾತ್ಯತೀತ, ವರ್ಗರಹಿತ (ವರ್ಗಗಳಿದ್ದರೂ ಬೇಕಾದ ವರ್ಗದಲ್ಲಿ ಬೇಕಾದ ವ್ಯಕ್ತಿಯು ಸೇರಲಿಕ್ಕೆ ಹಕ್ಕು ಇರುವಂತೆ) ಶೋಷಣರಹಿತ ಸಮಾಜರಚನೆಯಾಗಬೇಕು. ನಮ್ಮ ಹೊಣೆಗಾರಿಕೆಯನ್ನು ಯೋಗ್ಯರೀತಿಯಲ್ಲಿ ನಿರ್ವಹಿಸಬೇಕು. ವ್ಯಕ್ತಿಯ ಉನ್ನತಿಯು ಸಮಾಜದ ಉನ್ನತಿಗೆ ಪೋಷಕವಾಗಿರಬೇಕು. ಸ್ವಾವಲಂಬನ, ಸಹಕಾರ, ಸಹಜೀವನ, ರಾಷ್ಟ್ರೀಯತ್ವ, ಶ್ರಮಗೌರವ, ತ್ಯಾಗ, ಸೇವೆ, ಆತ್ಮಗೌರವ ಮುಂತಾದ ಗುಣಗಳಿಗೆ ಅವಕಾಶ ಕೊಡಬೇಕು. ಮಾನವ ಸಂಸ್ಕೃತಿಯ ಸಂವರ್ಧನೆಯಾಗಬೇಕು. ವೈಜ್ಞಾನಿಕ ಮನೋವೃತ್ತಿಯನ್ನು ಬೆಳೆಯಿಸಬೇಕು. ಜೀವನಾವಶ್ಯಕತೆಗಳನ್ನಂತೂ ಪೂರೈಸಲೇಬೇಕು.

ಜೀವನ ಶಿಕ್ಷಣದ ಬಗ್ಗೆ ಹಳ್ಳಿಗರಲ್ಲಿ ಕಂಡುಬರುವ ತಪ್ಪುಕಲ್ಪನೆಗಳನ್ನು ದೂರಮಾಡಬೇಕು. ಅವರಿಗೆ ಶಿಕ್ಷಣದ ಹೊಸ ವಿಚಾರಗಳನ್ನು ಹೀಗೆ ಬಿಂಬಿಸಲು ಯತ್ನಿಸಬೇಕು; ಮೂಲೋದ್ಯೋಗವು ಉಪಯುಕ್ತವಾದದ್ದಿದೆ. ಜೀವನಕ್ಕೆ ಅವಶ್ಯವಾದದ್ದು ಹಾಗು ಅದರಲ್ಲಿ ಶ್ರಮಗೌರವ ಮತ್ತು ಶೈಕ್ಷಣಿಕ ವಿಚಾರ ಹುದುಗಿರುವದು. ಜಿಗುಟುತನ, ವೈಜ್ಞಾನಿಕ ದೃಷ್ಟಿಕೋನ ಸಹಕಾರ ಭಾವನೆ, ಹಸ್ತಕೌಶಲ್ಯ, ಆತ್ಮವಿಶ್ವಾಸ, ಪ್ರಮಾಣಿಕತನ ಮುಂತಾದ ಒಳ್ಳೇ ಗುಣಗಳು ನೆಲೆಗೊಳ್ಳುವವು. 'ಮಾಡುತ್ತ ಕಲಿ' ಈ ಶಿಕ್ಷಣ ತತ್ವಕ್ಕೆ ಜೀವನ ಶಿಕ್ಷಣವು ಪುಷ್ಟಿಯನ್ನು ಕೊಡುತ್ತದೆ. ತಾವು ಕಲಿತದ್ದು ತಮ್ಮ ಜೀವನದಲ್ಲಿ ಉಪಯೋಗಿಸಿಕೊಳ್ಳುವಂಥದಿರಬೇಕು. ಮಕ್ಕಳಲ್ಲಿ ಕೆಲಸ ಮಾಡುವ ಮನೋವೃತ್ತಿಯನ್ನು ಬೆಳೆಯಿಸುವದೇ ಉದ್ದೇಶವಾಗಿದೆ ಹೊರತು ನೇಕಾರರನ್ನಾಗಲಿ, ಬಡಿಗರನ್ನಾಗಲಿ ಇಲ್ಲವೆ ಒಕ್ಕಲಿಗರನ್ನಾಗಲಿ ಮಾಡುವ ಉದ್ದೇಶವಿಲ್ಲ. ಮಕ್ಕಳನ್ನು ದುಡಿಸಿ ಅವರ ದುಡಿಮೆಯ ಸುಲಿಗೆಯನ್ನು ಮಾಡುವ ವಿಚಾರವಿರದೆ ಅವರಿಗೆ ಜ್ಞಾನವನ್ನು ಮಾಡಿಕೊಡುವ ಹಾಗು ಅವರು ಶ್ರಮಜೀವಿಗಳೂ ಸ್ವಾವಲಂಬಿಗಳೂ ಆಗುವಂತೆ ಮಾಡುವ ಉದ್ದೇಶವಿದೆ. ದಿನಾಚರಣೆಗಳನ್ನು ಮಾಡುವದರಿಂದ ವಿಶಿಷ್ಟ ಪ್ರಕಾರದ ಜ್ಞಾನವನ್ನು ಮಾಡಿಕೊಡುವ ಉದ್ದೇಶವಿದೆ. ಇವೆಲ್ಲ ಸಂಗತಿಗಳನ್ನು ಮನವರಿಕೆ ಮಾಡಿಕೊಡಲು ಸಭೆ, ಸಮ್ಮೇಲನ, ಪ್ರದರ್ಶನ, ಸಂಭಾಷಣ, ನಾಟಕ ಇತ್ಯಾದಿ ಚಟುವಟಿಕೆಗಳನ್ನು ಏರ್ಪಡಿಸಿ ತನ್ಮೂಲಕ ಜನತೆಯಲ್ಲಿ ಜೀವನ ಶಿಕ್ಷಣದ ಬಗ್ಗೆ ನಂಬುಗೆಯನ್ನು ಹುಟ್ಟಿಸಬೇಕು.

ಗಾಂಧೀಜಿ ಹಾಗೂ ಶ್ರಮಗೌರವ

ಲೇಖಕರು. **ಶ್ರೀ ಎನ್. ವಿ. ಘೊಬ್ಬಿ,** B. Sc. (Hons.), M. Ed., D. B. E.
ಪ್ರಾಧ್ಯಾಪಕರು ಜಿ. ಬಿ. ಟಿ. ಸಿ. ಧಾರವಾಡ.

(ಕಳೆದ ಸಂಚಿಕೆಯಿಂದ ಬಂದದ್ದು)

" ನಾನೇ ಅಡಿಗೆಯ ಮುಖ್ಯಸ್ಥನಾಗಿದ್ದೆ. ಒಮ್ಮೊಮ್ಮೆ ಹುಳಿ ಬರೀ ನೀರಾಗಿ ಬಿಡುತ್ತಿತ್ತು, ಇಲ್ಲದಿದ್ದರೆ ಬೇಳೆಯೇ ಬೇಯುತ್ತಿರಲಿಲ್ಲ. ಒಂದೊಂದು ಸಲ ಅನ್ನವೂ ಕಾಯಿಪಲ್ಲೆಯೂ ಹೆಚ್ಚಾಗಿ ಬೆಂದು ಮುದ್ದಿಯಾಗುತ್ತಿದ್ದಿತು. ಇಂತಹ ಆಹಾರವನ್ನು ಗುಣಗುಟ್ಟದೆ ನಗುಮೊಗದಿಂದ ನುಂಗುವ ಬಹಳ ಜನರನ್ನು ನಾನು ಕಂಡಿಲ್ಲ; ಮಾತ್ರವಲ್ಲ, ವಿದ್ಯಾವಂತರೆನಿಸಿಕೊಳ್ಳುವ ಜನರೂ ಅಡಿಗೆ ಬೇಯುವದರಲ್ಲಿ ಹೆಚ್ಚು-ಕಡಿಮೆಯಾದರೆ ಆಸೆಗಿಂತ ಕಡಿಮೆ ಬಡಿಸಿದರೆ, ಬಡಿಸುವದರಲ್ಲಿ ಸ್ವಲ್ಪ ಮಟ್ಟಿಗೆ ತಡವಾದರೂ ರೇಗುವದನ್ನು ದಕ್ಷಿಣ ಆಫ್ರಿಕೆಯ ನೆರೆಮನೆಗಳಲ್ಲಿ ನೋಡಿದ್ದೇನೆ "........" ಅಡಿಗೆ ಮಾಡುವದಕ್ಕಿಂತ ಬಡಿಸುವದು ಇನ್ನೂ ಕಷ್ಟ. ಆ ಆಡಳಿತವೂ ನನ್ನವೇ, ಒಮ್ಮೊಮ್ಮೆ ಅಡಿಗೆ ತೀರ ಕಡಿಮೆಯಾಗಿದ್ದು ನಿರೀಕ್ಷೆಗಿಂತ ಹೆಚ್ಚು ಜನರು ಬರುತ್ತಿದ್ದರು. ಆಗ ಇದ್ದುದನ್ನೇ ಸ್ವಲ್ಪಸ್ವಲ್ಪವನ್ನೇ ಬಡಿಸಿ ಅವರನ್ನು ತೃಪ್ತಿಪಡಿಸುವ ಕೆಲಸವನ್ನು ನಾನು ಮಾಡಬೇಕಾಗುತ್ತಿತ್ತು. ತೀರಕಡಿಮೆ ಬಡಿಸಿದಾಗ ಆ ಅಕ್ಕ-ತಂಗಿಯರು ಕ್ಷಣಮಾತ್ರ ಕೆಂಗಣ್ಣಿನಿಂದ ನನ್ನನ್ನೇ ನೋಡಿದ ನೋಟ ಎಂದಿಗೂ ಮರೆಯುವಂತಿಲ್ಲ, ಆದರೆ ನಾನೇ ಆಯ್ದುಕೊಂಡ, ಯಾರೂ ಉಪಕಾರ ಸ್ಮರಿಸದ ಈ ಕೆಲಸದ ಅರಿವು ಬಂದೊಡನೆ ಆ ಸಿಟ್ಟು ಮುಗುಳು ನಗೆಯಾಗಿ ಜಾರುತ್ತಿದ್ದಿತು".

ಸಮಸ್ಯೆಯು ಎಂಥ ಕಠಿಣವಾಗಿದ್ದರೂ ಗಾಂಧೀಜಿಯವರು ತಮ್ಮ ಕಾರ್ಯ ಗೌರವದಿಂದ ಸಿಟ್ಟನ್ನು ಮುಗುಳು ನಗೆಯನ್ನಾಗಿ ಪರಿವರ್ತಿಸುತ್ತಿದ್ದರು. ಚಾರ್ಲಸ ಟೌನಿನಲ್ಲಿ ಜನರು ಸ್ವಚ್ಛವಾಗಿರುವಂತೆ ಮಾಡಲು ಗಾಂಧೀಜಿಯವರು ಬಹಳೇ ಕಷ್ಟಪಡಬೇಕಾಯಿತು. ಅಲ್ಲಿ ಗಾಂಧೀಜಿಯವರು ಸಾವಿರಾರು ಜನರ ಮುಖಂಡರಾಗಿದ್ದರು. ಆ ಸಾವಿರಾರು ಜನರು ಬಹಳಷ್ಟು ಅಶಿಕ್ಷಿತರಾಗಿದ್ದರು. ಇಂಥ ಕಷ್ಟ ಪ್ರಸಂಗದಲ್ಲಿ ಸುಸೂತ್ರವಾಗಿ ಗಾಂಧೀಜಿಯವರನ್ನು ಪಾರುಮಾಡಿದ್ದೆಂದರೆ ಸಫಾಯಿ ಕೆಲಸಕ್ಕಿರುವ ಅವರ ಗೌರವವೆಂದೇ ಹೇಳಬಹುದು. ಕಸಗೂಡಿಸುವದು, ಕಕ್ಕಸ ಬಳಿಯುವದು ಮೊದಲಾದ ಕೆಲಸಗಳಿಗೆ ಗಾಂಧೀಜಿಯವರು ತಾವೇ ಮೊದಲಿಗರಾಗಿ ಹೋಗುತ್ತಿದ್ದರು. ಈ ಸಂದರ್ಭದಲ್ಲಿ ಅವರು ಹೇಳಿದ ಮಾತು ಅತ್ಯಂತ ವ್ಯವಹಾರಿಕವೂ, ಬೋಧಕವೂ ಆಗಿದೆ. ಅವರು ಹೇಳಿದ್ದೇನಂದರೆ:—

" ಮುಂದಾಳು ಬರಿಯ ಅಪ್ಪಣೆ ಕೊಡುವ ಬದಲು ತಾನೇ ಕೆಲಸ ಮಾಡತೊಡಗಿದರೆ ಉಳಿದವರೂ ಅವನನ್ನು ಹಿಂಬಾಲಿಸುತ್ತಾರೆ. ತಾನು ಕೆಲಸಕ್ಕೆ ಹಿಂದೇಟು ಕೊಟ್ಟು, ಉಳಿದವರಿಗೆ ಅಪ್ಪಣೆಕೊಡುವದರಿಂದ ಪ್ರಯೋಜನವಿಲ್ಲ. ಎಲ್ಲರೂ ಮುಂದಾಳಾಗಿ ಇತರರಿಗೆ ಅಪ್ಪಣೆ ಕೊಡುತ್ತ ಹೋದರೆ ಕೆಲಸ ಕೊನೆಗೊಳ್ಳುವದಿಲ್ಲ. ನಾಯಕನೇ ಸೇವಕನಾದರೆ ಮುಂದಾಳುತನ ಮೇಲಾಟಕ್ಕೆ ದಾರಿಯೇ ಇಲ್ಲ".

ಇನ್ನೊಂದು ಗಾಂಧೀಜಿಯವರ ಕತೆಯು ಅವರ ಕಾರ್ಯಗೌರವದ ಪರಮಾವಧಿ ದ್ಯೋತಕನಾಗಿದೆ ಎಂದು ಹೇಳಬಹುದು. ಚಂಪಾರಣ್ಯದಲ್ಲಿ ಗಾಂಧೀಜಿ ಹೂಡಿದ ರೈತರ ಸತ್ಯಾಗ್ರಹದ ಗುಂಪಿನಲ್ಲಿ ಒಬ್ಬ ಮಹಾರೋಗಿ ಮನುಷ್ಯನಿದ್ದನು. ಅವನು ಕಾಲಿಗೆ ಚಿಂದಿಯನ್ನು ಸುತ್ತಿಕೊಂಡು ನಡೆಯುತ್ತಿದ್ದನು. ಅವನ ಚರ್ಮದಲ್ಲಿ ಸುಲಿದು ಮಾಂಸ ಹೊರಬೀಳುತ್ತಿತ್ತು. ಒಂದು ದಿನ ಗಾಂಧೀಜಿಯ ಪ್ರಾರ್ಥನಾ ಸ್ಥಳಕ್ಕೆ ಎಲ್ಲರೂ ತಿರುಗಿ ಬರುವಾಗ ಈ ಮಹಾರೋಗಿಗೆ ನಡೆಯಲು ಆಗದ್ದಕ್ಕೆ ಒಂದು ಗಿಡದ ಬುಡಕ್ಕೆ ವೇದನೆ ಪಡುತ್ತ ಕುಳಿತನು. ಉಳಿದೆಲ್ಲ ಸತ್ಯಾಗ್ರಹಿಗಳು ಗಾಂಧೀಜಿ ಸುತ್ತಲೂ ಪ್ರಾರ್ಥನೆಗೆ ಕುಳಿತರು. ಆಗ ಗಾಂಧೀಜಿ ಆ ಮಹಾರೋಗಿ ಅಲ್ಲಿ ಇಲ್ಲದ್ದನ್ನು ಕಂಡು ಆತನ ಬಗ್ಗೆ ವಿಚಾರಿಸಿದರು. ಆಗ ಅವರಲ್ಲಿ ಯಾರೋ ಒಬ್ಬರು "ಆತನಿಗೆ ಲಗುಬಗೆ

ಯಿಂದ ನಡೆಯಲು ಬರುತ್ತಿದ್ದಿಲ್ಲ. ದಣಿದದ್ದರಿಂದ ಅಲ್ಲಿಯೇ ಗಿಡದ ಬಳಿಯಲ್ಲಿ ಕುಳಿತಿದ್ದಾನೆ" ಎಂದರು. ಗಾಂಧೀಜಿ ಕೂಡಲೆ ಒಂದು ದೀಪ ತೆಗೆದುಕೊಂಡು ಹೋಗಿ ನೋಡುವಷ್ಟರಲ್ಲಿ ಆ ಮಹಾರೋಗಿಯು ಗಿಡದ ಬುಡದಲ್ಲಿ ವೇದನೆ ಪಡುತ್ತ ಕುಳಿತದ್ದು ಕಂಡರು. ಅವನ ಕಾಲಿನಲ್ಲಿಯ ಚಿಂದಿಯು ಎಲ್ಲಿಯೋ ಬಿದ್ದು ಹೋಗಿತ್ತು. ಕಾಲುಗಳು ರಕ್ತರಂಜಿತವಾಗಿದ್ದವು. ಎಲ್ಲ ಸತ್ಯಾಗ್ರಹಿಗಳು ಈ ದೃಶ್ಯ ನೋಡಿ ಕನಿಕರ ಪಟ್ಟರೂ ಅವನ ಶುಶ್ರೂಷೆ ಮಾಡಲು ಹೇಸಿಕೊಂಡರು. ಆದರೆ ಗಾಂಧೀಜಿಯವರು ತಮ್ಮ ಮೈಮೇಲಿನ ಶಾಲನ್ನು ಹರಿದು ಅವನ ಕಾಲಿಗೆ ಸುತ್ತಿದರು. ಹಾಗೂ ಅವನನ್ನು ಹಿಡಿದುಕೊಂಡು ತಮ್ಮ ಆಶ್ರಮಕ್ಕೆ ಕರೆದುಕೊಂಡು ಬಂದರು. ಅಲ್ಲಿ ಅವನ ಕಾಲನ್ನು ಚೆನ್ನಾಗಿ ತಿಕ್ಕಿ ತೊಳೆದು ಅಕ್ಕರತೆಯಿಂದ ತಮ್ಮ ಬಳಿಯಲ್ಲಿಯೇ ಮಲ್ಗಿಸಿಕೊಂಡರು. ಆ ಮಹಾ ರೋಗಿಗೆ ಅತ್ಯಂತ ಸಮಾಧಾನವಾಗಿರಲಿಕ್ಕೆ ಸಾಕು. ಗಾಂಧೀಜಿಯವರ ಈ ಕೃತಿಯು ಕಾರ್ಯಗೌರವದ ಪರಮಾವಧಿ ದ್ಯೋತಕವಲ್ಲದೆ ಮತ್ತೇನು?

ಗಾಂಧೀಜಿಯು ಬೌದ್ಧಿಕ ಶ್ರಮಕ್ಕಿಂತಲೂ ದೈಹಿಕ ಶ್ರಮಕ್ಕೆ ಹೆಚ್ಚಿನ ಸ್ಥಾನವನ್ನು ಕೊಟ್ಟಿದ್ದಾರೆ.

"ಬೌದ್ಧಿಕ ಕೆಲಸಕ್ಕೆ ಜೀವನದಲ್ಲಿ ತಕ್ಕ ಸ್ಥಾನ ವೇನೋ ಇದೆ. ಆದರೆ ಮಾನವನು ತನ್ನ ಮೂಲಭೂತ ಅವಶ್ಯಕತೆ ಎನಿಸಿದ ಆಹಾರ ಸಂಪಾದನೆಗಾಗಿ ತನ್ನ ಶರೀರವನ್ನು ದುಡಿಸಲೇ ಬೇಕಾಗುವದು. ಯಾರು ಕೆಲಸ ವಿಲ್ಲದೆ ಊಟ ಮಾಡುವರೋ ಅವರು ಕಳ್ಳರೆಂದೆನಿಸಿ ಕೊಳ್ಳುವರು. ಶಾರೀರಿಕ ಶ್ರಮವು ಬೌದ್ಧಿಕ ಮಟ್ಟವನ್ನು ಕೂಡ ಸುಧಾರಿಸುವದರಲ್ಲಿ ಸಂದೇಹವಿಲ್ಲ. ಕೈಯಿಂದ ಇಂದ್ರಿಯಗಳಿಗೆ, ಬುದ್ಧಿಯಿಂದ ಹೃದಯಕ್ಕೆ, ಶಾಲೆಯಿಂದ ಸಮಾಜಕ್ಕೆ ಹಾಗು ದೇವರೆಡೆಗೆ ಈ ಪ್ರಗತಿ ಕಾಯಕ ದಿಂದಲೇ ಸಾಗುವದು."

ಗಾಂಧೀಜಿಯವರು ಮೂಲೋದ್ಯೋಗಗಳಿಗೆ ಮಹತ್ವಸ್ಥಾನ ಕೊಟ್ಟಿದ್ದಾರೆ. ಅದರಲ್ಲಿ ಒಕ್ಕಲತನಕ್ಕಂತೂ ಬಹಳೇ ಮಹತ್ವವಿದೆ. ಪ್ರತಿಯೊಬ್ಬ ಹಿಂದಿಯನು ತಕ್ಕ ಕಾರ್ಯ ಗೌರವವನ್ನು ತಂದುಕೊಂಡು ಒಕ್ಕಲತನದ ಉತ್ಪಾದನೆ ಏಕೆ ಬೆಳೆಸಬಾರದು? ಅನೇಕ ಜನರು ಎಸ್. ಎಸ್. ಸಿ. ಇಲ್ಲವೆ ಪದವೀಧರರಾದರೆಂದರೆ ಕೈಯಲ್ಲಿ ಗುದ್ದಲಿ ಸಲಿಕೆ ಹಿಡಿದುಕೊಂಡು ಹೊಲದಲ್ಲಿ ಕೆಲಸ ಮಾಡುವದೆಂದರೆ ತಮ್ಮ ಮರ್ಯಾದೆಗೆ ಕುಂದು ಬರುವದೆಂದು ಭಾವಿಸುವರು. ಇಂಥ ದುರಭಿಮಾನ ದಿಂದಲೇ ನಮ್ಮ ಹಿಂದುಸ್ಥಾನದಲ್ಲಿ ಉತ್ಪಾದನೆ ಕಡಿಮೆಯಾಗಿ ಬಡತನವು ಬಲಿಯ ಹತ್ತಿದೆ. ನಿರುದ್ಯೋಗಿಗಳು ಹೆಚ್ಚಾಗ ಹತ್ತಿದ್ದಾರೆ. ರಾಷ್ಟ್ರವು ಬಲಹೀನವಾಗಹತ್ತಿದೆ. ನಮ್ಮ ರಾಷ್ಟ್ರದ ಇಂದಿನ ಸಮಸ್ಯೆಗಳು ದೂರಾಗಿ ಸುಖ-ಶಾಂತಿಗಳು ನೆಲೆಸಬೇಕಾದರೆ ಗಾಂಧೀಜಿಯು ಜೀವನದಲ್ಲಿ ಕೈಕೊಂಡ ಕೃತಿಗಳು ಅನುಕರಣೀಯವಾಗಿವೆ. ಅವರ ವ್ಯವಹಾರಿಕ ಸೂತ್ರಗಳು ಅಮರವಾಗಿವೆ. ಗಾಂಧೀಜಿಯವರು ಹೇಳಿದ ಮತ್ತೊಂದು ಮಾತು ನಮ್ಮ ಸ್ಮೃತಿಯ ಪಟಲದಲ್ಲಿ ಅಜರಾಮರವಾಗಿ ಉಳಿಯುವಂತಿದೆ.

ನಮ್ಮ ದೇಶದಲ್ಲಿ ನೆಲೆಸಿದ ಕಡುತರ ಬಡತನ ಮತ್ತು ನಿರುದ್ಯೋಗ ಇವುಗಳನ್ನು ಕಂಡು ಕಳವಳ ಗೊಂಡಿದ್ದೇನೆ. ಆದರೆ ಅವು ಹೆಚ್ಚಾಗಿ ನಮ್ಮ ಅಜ್ಞಾನ ಮತ್ತು ಅಲಕ್ಷತನಗಳಿಂದಲೇ ಉಂಟಾಗಿರುವವೆಂದು ಒಪ್ಪಲೇ ಬೇಕಾದ ಮಾತು. ನಮಗೆ ಶ್ರಮ ಗೌರವ ವೆಂದರೆ ಗೊತ್ತೇ ಇಲ್ಲ. ಒಬ್ಬ ಸಮಗಾರನು ಕಾಲ್ಮರಿ ಗಳನ್ನು ತಯಾರಿಸುವದನ್ನು ಬಿಟ್ಟು ಹೆಚ್ಚಿನ ಯಾವ ಕೆಲಸವನ್ನೂ ಮಾಡಬಯಸುವದಿಲ್ಲ. ಅವನು ಇತರ ಎಲ್ಲ ಕೆಲಸಗಳು ಅವನ ಗೌರವ ಭಂಗ ಮಾಡುವಂತಹ ವೆಂದು ಭಾವಿಸುವನು. ಈ ತಪ್ಪು ಭಾವನೆಯು ಬಯಲಾಗಬೇಕು. ಪ್ರಾಮಾಣಿಕತನದಿಂದ ಕೈಕಾಲು ಗಳನ್ನು ದುಡಿಸುವವರಿಗೆಲ್ಲ ಭಾರತದಲ್ಲಿ ಬೇಕಾದಷ್ಟು ಉದ್ಯೋಗ ದೊರೆಯುವದು. ಪ್ರತಿಯೊಬ್ಬ ಮಾನವನಿಗೆ ತನ್ನ ಅನುದಿನದ ಆಹಾರಕ್ಕಿಂತಲೂ ಹೆಚ್ಚು ಉತ್ಪಾದನೆ ಮಾಡಿಕೊಳ್ಳಲು ದುಡಿಯುವ ಸಾಮರ್ಥ್ಯವನ್ನು ದೇವರು ದಯಪಾಲಿಸಿದ್ದಾನೆ; ಮತ್ತು ಯಾರು ಆ ಸಾಮರ್ಥ್ಯ ವನ್ನು ಉಪಯೋಗಿಸುವರೋ ಅವರಿಗೆ ಖಂಡಿತವಾಗಿ ಉದ್ಯೋಗ ದೊರೆಯುವದು. ಪ್ರಾಮಾಣಿಕ ರೀತಿಯಿಂದ ದುಡ್ಡನ್ನು ಗಳಿಸಬೇಕೆನ್ನುವವನಿಗೆ ಯಾವ ಕೆಲಸವೂ ಕೀಳಲ್ಲ. ಆದರೆ ದೇವರು ನಮಗೆ ಕೊಟ್ಟ ಕೈಕಾಲುಗಳನ್ನು ಉಪಯೋಗಿಸುವ ಒಲವು ಮಾತ್ರ ಬೇಕು."

—: ಜಯ ಹಿಂದ :—

(ಧಾರವಾಡ ಬಾನುಲಿಯವರ ಕೃಪೆಯಿಂದ)

ಜೀವನ ಶಿಕ್ಷಣ ಶಾಲೆಗಳಲ್ಲಿ ಸಾಂಘಿಕ ಜೀವನದ ಮಹತ್ವ

ಲೇಖಕರು: **ಶ್ರೀ ಎಸ್. ಎಸ್. ಭೂಸರಡ್ಡಿ,** ಶಿಕ್ಷಕ ವಿದ್ಯಾರ್ಥಿ (ಧಾರವಾಡ ಬೋರ್ಡ)

T. C. M. Kumata.

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಅಪಾರ ಅನುಭವದ ಅಮೃತ ಸಿಂಚನದಿಂದ ಹೊರ-ಹೊಮ್ಮಿದ ಜೀವನ ಶಿಕ್ಷಣದಲ್ಲಿ, ಸಾಂಘಿಕ ಜೀವನದ ಮಹತ್ವವನ್ನು ತಿಳಿಸುವದೇ ಈ ಲೇಖನದ ಉದ್ದೇಶ. ಕಾಲ-ಮಾನ ಪರಿಸ್ಥಿತಿಗನುಸಾರವಾಗಿ ಮಹಾತ್ಮಾ ಗಾಂಧೀಜಿಯವರ ಆಧುನಿಕ ಶೈಕ್ಷಣಿಕ ವಿಚಾರ ಪ್ರಣಾಲಿಯು ಸರಿ ಎಂದು ಎಲ್ಲ ಶಿಕ್ಷಣ ತಜ್ಞರು ಒಪ್ಪಿಕೊಂಡಿದ್ದಾರೆ. ಆದ್ದರಿಂದಲೇ ಜೀವನ ಶಿಕ್ಷಣದ ವಿವಿಧ ಅಂಗಗಳನ್ನು ಸಂಪೂರ್ಣ ಅರಿತುಕೊಳ್ಳುವದು ಅತ್ಯವಶ್ಯವಾಗಿದೆ. ಮಾನವ ಹುಟ್ಟಿದಂದಿನಿಂದ ಸಾಯುವವರೆಗೂ ಕಲಿಯುತ್ತಾನೆ. ಅಖಂಡ ಜ್ಞಾನ ಸಂಗ್ರಹ ನಡೆಯುತ್ತಲೇ ಇರುವದು. ಈ ಖಂಡಗಳ ಜ್ಞಾನವನ್ನು ಸರಿಯಾದ ರೀತಿಯಲ್ಲಿ ಸುಸಂಘಟಿತವಾಗಿ ಹೊಂದಿಸುವದೇ ಹೊಸ ಶಿಕ್ಷಣದ ತಿರುಳು. ಆದ್ದರಿಂದ ಪ್ರಾರಂಭದಿಂದಲೇ ಸರಿಪಡಿಸುತ್ತ ಹೋದಲ್ಲಿ ಸಮಾಜದ ಸ್ಥಿತಿ–ಗತಿ–ರೀತಿ–ನೀತಿಗಳು ಸುಧಾರಿಸುತ್ತಿವೆ. ಭವ್ಯ ಭಾರತದ ಭದ್ರ ಅಡಿಗಲ್ಲನ್ನಿಟ್ಟಂತಾಗುತ್ತದೆ. ಬಾಲಕನು ಸದಾ ಸಂಘಜೀವಿ. ಸಮಾಜದಲ್ಲಿಯೇ ಬಾಳಿ ಬದುಕುತ್ತಾನೆ. ಸಮಾಜದ ಪರಿಸ್ಥಿತಿ, ವಾತಾವರಣ, ಸಂಸ್ಕಾರ, ಸ್ವರೂಪ ನೋಡಿ ಕಲಿಯುತ್ತಾನೆ. ವ್ಯಕ್ತಿ ಉತ್ತಮನಾದರೆ ಸಮಾಜ ಉತ್ತಮವಾಗುತ್ತದೆ. ಸಮಾಜ ಉತ್ತಮವಿದ್ದರೆ ವ್ಯಕ್ತಿ ಉತ್ತಮನಾಗುತ್ತಾನೆ. ಮಗುವು ತನ್ನ ಬಂಧು–ಬಳಗ ಗೆಳೆಯರೊಡನೆ ಕೂಡಿ ಆಡಿ ನಲಿದು ಆನಂದ ಪಡುತ್ತಾನೆ; ಹರುಷ ಪಡುತ್ತಾನೆ. ತನ್ನ ಬಾಳನ್ನು ಸುಖಮಯವಾಗಿ ಕಳೆಯುವ ಪ್ರಯತ್ನ ಮಾಡುತ್ತಾನೆ. ಈ ಪ್ರವೃತ್ತಿಯನ್ನು ಚಿಕ್ಕಂದಿನಿಂದಲೇ ಪೋಷಿಸಿ ಬೆಳೆಸುವದೇ ಸಾಂಘಿಕ ಜೀವನದ ತತ್ವಗಳಲ್ಲಿ ಅಡಕವಾಗಿದೆ.

ಮಗುವಿನ ಸ್ವಾಭಾವಿಕ ಸಹಜವಾದ ಒಲವು ನಿಲವುಗಳನ್ನು, ಆಸಕ್ತಿಗಳನ್ನು ಅರಿತು ಸಮಾಜದಿಂದ ಇವುಗಳನ್ನು ಪಡೆದು ಅನುಭವಿಸುವಂತೆ, ವಾತಾವರಣ ಕಲ್ಪಿಸಿ ಕೊಡುವದು ಅತ್ಯವಶ್ಯವಾಗಿದೆ. ಮಗುವು ಸಮಾಜದಲ್ಲಿ ಕಲಿತು, ಬೆರೆತು, ಸಮರಸ ಹೊಂದಿ ಸಹ-ಜೀವನ ಸಿಹಿಫಲಗಳನ್ನು ಪಡೆಯುವಂತೆ, ಯೋಗ್ಯ ಶೀಲ ಸಂವರ್ಧನೆಯಾಗುವಂತೆ ಮಾಡುವದೇ ಸಾಂಘಿಕ ಜೀವನದ ಗುಟ್ಟು. ಸತ್ಯ, ಪ್ರೇಮ, ಸಹಕಾರ, ಸಹಾನುಭೂತಿಗಳ ಜೋಡಣೆಯಿಂದ ವ್ಯಕ್ತಿ ತನ್ನ ಸಂಬಂಧವನ್ನು ಕಟ್ಟಿಕೊಳ್ಳಬೇಕು. ಎಲ್ಲರ ಹಿತದಲ್ಲಿ ತನ್ನ ಹಿತವಿದೆ. ಸಮಾಜದ ಉದ್ಧಾರದಿಂದ ತನ್ನ ಉದ್ಧಾರವಿದೆ ಎಂಬ ಭಾವನೆಯು ಮಗುವಿನ ಬುದ್ಧಿ, ಹೃದಯ, ಮನಸ್ಸುಗಳಲ್ಲಿ ಆಳವಾಗಿ ಬೇರೂರಬೇಕು.

ಮದ—ಮತ್ಸರ, ಕೋಪ—ತಾಪ, ದ್ವೇಷ—ಅಸೂಯೆಗಳನ್ನು ಹರಿದೊಗೆದು ಹರುಷದ ಹೊನಲಿನಲ್ಲಿ ಮಕ್ಕಳು ತಮ್ಮ ಭಾವನೆಗಳನ್ನು ಅರಳಿಸಬೇಕು. ವಿಶಾಲ, ಉದಾರ, ಉದಾತ್ತ ಮನೋಭೂಮಿಕೆ ರೂಪಗೊಳ್ಳಬೇಕು. ರಚನಾತ್ಮಕ ವಿಧಾಯಕ, ವಿವಿಧ ಕಾರ್ಯಕ್ರಮಗಳಲ್ಲಿ ಹುರುಪು ಉತ್ಸಾಹದಿಂದ ಭಾಗವಹಿಸಬೇಕು. ಈ ಎಲ್ಲ ತತ್ವಗಳನ್ನು ಮಕ್ಕಳ ಹದನಾದ ಪಕ್ವ ಮನಸ್ಸಿನ ಮೇಲೆ ಪ್ರತಿ ಬಿಂಬಿಸುವದಕ್ಕಾಗಿ ಮೂಲ–ಶಿಕ್ಷಣದಲ್ಲಿ ಸಾಂಘಿಕ ಜೀವನವನ್ನು ಸೇರಿಸಿದ್ದಾರೆ.

ಮಗುವು ಭಾವನಾ ಜೀವಿ. ಸಕಾಲಕ್ಕೆ ಸರಿಯಾದ ಸಾಂಘಿಕ ಜೀವನದ ಸಂಸ್ಕಾರ ವಾಗದಿದ್ದರೆ, ಸ್ವಾರ್ಥಪರನಾಗಿ, ಸಮಾಜ ಕಂಟಕನಾಗಿ, ರಾಷ್ಟ್ರದ್ವೇಷಿಯಾಗಿ ತನ್ನ ಜೀವನದ ಮೌಲ್ಯತೆಯನ್ನು ಕಳೆದುಕೊಳ್ಳುವನು. ಆತನ ಜೀವನದ ಪ್ರಗತಿ ಸರಿಯಾಗದೇ ಪಶು ಜೀವನ ಕಳೆಯ ಬೇಕಾಗುವದು. ಒಟ್ಟಿನಲ್ಲಿ ಮಗುವಿನ ಸರ್ವಾಂಗೀಣ, ಸರ್ವತೋಮುಖ, ಸರ್ವಾಂಗ ಸುಂದರ, ವ್ಯಕ್ತಿ ವಿಕಾಸ, ಶೀಲಸಂವರ್ಧನೆ, ಉತ್ತಮ ನಾಗರಿಕನಾಗುವ ಅನೇಕ ತತ್ವಗಳ ಸುಂದರ ಸಮನ್ವಯ ಸಾಂಘಿಕ ಜೀವನದಲ್ಲಿ ಒಡೆದು ಕಾಣುತ್ತಿದೆ. ಹೊಣೆಯರಿತು ಕೆಲಸಮಾಡುವ ಸದವಕಾಶ ದೊರೆಯುವದು. ಹಬ್ಬ, ಹುಣ್ಣಿವೆಗಳು, ಜಯಂತಿಗಳು, ಉತ್ಸವಗಳು, ದಿನಾಚರಣೆಗಳು, ಸಭೆ ಸಮಾರಂಭಗಳಲ್ಲಿ ಭಾಗವಹಿಸಲು

ಅವಕಾಶ ದೊರೆತು ಹೊಣೆಗಾರಿಕೆಯ ಅರಿವಾಗುವದು. ಶಾಲೆಯ ತೋಟ, ವಾಚನಾಲಯ, ಸಹಕಾರೀ ಸಂಘ, ಪ್ರವಾಸ ಮುಂತಾದವುಗಳ ನಾಯಕತ್ವ ವಹಿಸಿ ಅವರ ವಿವರವಾದ ಲೆಕ್ಕ-ಪತ್ರ ಇಡುವ ಮಾಹಿತಿ ದೊರಕುವದು. ಸಂಘಟನೆ, ಸಹಕಾರದ ಬೆಲೆ ತಿಳಿಯುವದು.

ಶಾಲೆಯು ಒಂದು ಸಂಸ್ಥೆ. ಅದರ ಆಗು-ಹೋಗುಗಳ ಜವಾಬ್ದಾರಿಯನ್ನು ವಿದ್ಯಾರ್ಥಿಗಳೇ ಹೊತ್ತುಕೊಂಡು ಯಶಸ್ವಿಯಾಗಿ ಸಾಗಿಸುವಂತೆ, ಶಿಕ್ಷಕರು ಮಾರ್ಗದರ್ಶನ ಮಾಡುವದು ಅವಶ್ಯವಾಗಿದೆ. ಇದರಿಂದ ಸಾಂಘಿಕಜೀವನದ ಬೆಲೆಯು ತಿಳಿದು ನಾಗರಿಕತ್ವದ ಕಲ್ಪನೆ, ಹಕ್ಕುಬಾಧ್ಯತೆಗಳ, ಕರ್ತವ್ಯ ಕರ್ಮಗಳ ಪ್ರಥಮ ಪಾಠದ ಪರಿಚಯವಾಗುವದು. ಶಾಲೆಯಲ್ಲಿ ಮಂತ್ರಿ ಮಂಡಳದ ಮುಖಾಂತರ ಶಾಲೆಯ ಆಡಳಿತ ಸಾಗಿಸುವ ತರಬೇತಿ ದೊರೆಯುವದು. ವಿವಿಧ ಚಟುವಟಿಕೆಗಳ ಗುಂಪುಗಳನ್ನಾಗಿ ಮಾಡಿ ಅವರಿಗೆ ಸೂಕ್ತ ಮಾರ್ಗದರ್ಶನ ಮಾಡಿದರೆ ಸಹಜವಾಗಿ ಎಲ್ಲ ಕೆಲಸಗಳನ್ನು ಉತ್ತಮ ರೀತಿಯಲ್ಲಿ ಯಶಸ್ವಿ ರೀತಿಯಾಗಿ ಮಾಡಬಲ್ಲರು. ಈ ರೀತಿಯಾಗಿ ಮಕ್ಕಳಿಗೆ ಸಾಂಘಿಕ ಜೀವನದ ಅರಿವು ತಿಳಿಯುವಂತೆ ತರಬೇತಿ ಕೊಡಬೇಕು.

ಒಟ್ಟಿನಲ್ಲಿ ಸಾಂಘಿಕ ಜೀವನದಿಂದ ಕಲೆ, ಸಂಸ್ಕೃತಿ, ಸಾಹಿತ್ಯಗಳ ಮೇಲೆ ಪ್ರೇಮಾಭಿಮಾನಗಳು ಮಕ್ಕಳಲ್ಲಿ ಮೂಡಿ ಅವರ ವಿಶಿಷ್ಟ ಶಕ್ತಿಗಳು ಪ್ರಕಾಶಕ್ಕೆ ಬಂದು, ಹಳಗಿ, ಬೆಳಗಿ ಈ ಮೂಲಕ ತಮ್ಮ ವಿಶಿಷ್ಟ ಕಾಣಿಕೆಯನ್ನು ಭರತ ಮಾತೆಯ ಅಡಿದಾವರೆಯಲ್ಲಿರಿಸಲು ಶಕ್ತರಾಗಿ ನಾಡು ನುಡಿಗಳ ಮಹೋನ್ನತಿಯ ಕಡೆ ಅಡಿಯಿಡುವಂತಾಗಬೇಕು. ಭಾರತ ಸ್ವಾವಲಂಬನ ಶಕ್ತಿಯನ್ನು ಪಡೆದು, ತನ್ನಷ್ಟಕ್ಕೆ ಕೀರ್ತಿ-ಗೌರವಗಳನ್ನು ಗಳಿಸಿ, ಜನತೆಯಲ್ಲಿ ಸುಖ-ಶಾಂತಿಗಳು ನೆಲೆಸುವಂತೆ ಮಾಡಲಿ, ಸಾಂಘಿಕ ಜೀವನದ ಮಹತ್ವ ತಿಳಿಯಲಿ, ಅರಿಯಲಿ.

ಜೀವನ ಶಿಕ್ಷಣದ ಪ್ರಸಾರ : ನಾಲ್ಕು ಲೇಖಗಳು

" ಸಾದಾ ಪ್ರಾಥಮಿಕ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳ ದಿಶೆಯಲ್ಲಿ ಮಾರ್ಪಡಿಸುವದು "

ಮ. ಗಾಂಧೀಜಿಯವರಿಂದ " ಪ್ರಯೋಗ "ವೆಂದು ಪ್ರಾರಂಭಿಸಲ್ಪಟ್ಟ ಜೀವನ ಶಿಕ್ಷಣವು ಈಗ ಪ್ರಸಾರ ಹೊಂದಿ ಪ್ರಗತಿಪಥದಲ್ಲಿ ಸಾಗಹತ್ತಿದೆ. ಆದ್ದರಿಂದ ಸಾದಾ ಶಾಲೆಗಳನ್ನು ಸಹ ತೀವ್ರದಲ್ಲಿಯೇ ಹೆಚ್ಚು ವೆಚ್ಚವನ್ನು ಮಾಡದೇ ಜೀವನ ಶಿಕ್ಷಣ ಶಾಲೆಗಳ ದಿಶೆಯಲ್ಲಿ ಮಾರ್ಪಡಿಸಬೇಕೆಂಬ ಕಾರ್ಯವನ್ನು ಮೈಸೂರ ರಾಜ್ಯ ಸರಕಾರದವರು ಕೈಕೊಂಡಿದ್ದಾರೆ. ಈ ಬಗ್ಗೆ ಕೇಂದ್ರ ಸರಕಾರದವರು ಎಲ್ಲ ರಾಜ್ಯಗಳಿಗೆ ಸೂಚನೆಗಳನ್ನು ಕೊಟ್ಟಿದ್ದಾರೆ. ಆ ಪ್ರಕಾರ ಮೈಸೂರ ರಾಜ್ಯ ಸರಕಾರದವರು ಶಿಕ್ಷಣ ಖಾತೆಯ ವರಿಷ್ಠ ಅಧಿಕಾರಿಗಳಿಗೆ ಆದೇಶಗಳನ್ನೂ ಕೊಟ್ಟಿದ್ದಾರೆ. ಅದಕ್ಕನುಗುಣವಾಗಿ ಸಾದಾ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳನ್ನಾಗಿ ಪರಿವರ್ತಿಸುವ ಕಾರ್ಯವು ಭರದಿಂದ ಸಾಗಿದೆ. ಈ ಕಾರ್ಯಕ್ಕೆ ಪ್ರಥಮ ಹೆಜ್ಜೆಯೆಂದು "ಮಾರ್ಪಡಿಸುವ" ಕಾರ್ಯವನ್ನು ಎಲ್ಲ ಸಾದಾ ಶಾಲೆಗಳಲ್ಲಿ ಎಷ್ಟೂ ವಿಲಂಬವಿಲ್ಲದೆ ಶಿಕ್ಷಣಾಧಿಕಾರಿಗಳು ಕೈಕೊಂಡಿದ್ದಾರೆ. ಆದ್ದರಿಂದ ಈ ಕಾರ್ಯದಲ್ಲಿ ಶಿಕ್ಷಕರಿಗೆ ಮಾರ್ಗದರ್ಶನವಾಗಲೆಂದು ಕೆಳಗೆ ಕಾಣಿಸಿದ ಲೇಖಗಳನ್ನು ಕೊಡಲಾಗಿವೆ.

[ಈ ಲೇಖಗಳನ್ನು ಮುದ್ರಿಸುವ ಬಗ್ಗೆ ಜಿ. ಬಿ. ಟಿ. ಸಿ. ಕಾಲೇಜದ ಪ್ರಿನ್ಸಿಪಾಲರ ಒಪ್ಪಿಗೆಯನ್ನು ಪಡೆಯಲಾಗಿದೆ]
—ಮುಖ್ಯ ಸಂಪಾದಕರು

ಸಾದಾ ಶಾಲೆಯನ್ನು ಸಂಪೂರ್ಣವಾಗಿ ಜೀವನ ಶಿಕ್ಷಣ ಶಾಲೆಯನ್ನಾಗಿ ಪರಿವರ್ತಿಸಲಿಕ್ಕೆ ಎರಡು ಸಂಗತಿಗಳು ಅವಶ್ಯ.

೧. ಮೂಲೋದ್ಯೋಗದ ಸಾಮಾನುಗಳನ್ನು ಕೊಳ್ಳುವದು.

೨. ಜೀವನ ಶಿಕ್ಷಣದಲ್ಲಿ ತರಬೇತಿಹೊಂದಿದ ಶಿಕ್ಷಕರನ್ನು ನಿಯಮಿಸುವದು.

ಆದ್ದರಿಂದ ಈ ಧ್ಯೇಯಕ್ಕೆ ಪ್ರಥಮ ಹೆಜ್ಜೆಯೆಂದು ಜೀವನಶಿಕ್ಷಣ ದಿಶೆಯಲ್ಲಿ ಸಾದಾಶಾಲೆಗಳನ್ನು ಹೇಗೆ ಮಾರ್ಪಡಿಸಬೇಕೆಂಬುದನ್ನು ಈ ಲೇಖಗಳಲ್ಲಿ ವಿವರಿಸಲಾಗಿದೆ.

೧

ಎಲ್ಲ ಸಾದಾ ಸಾಲೆಗಳನ್ನು ಆದಷ್ಟು ಬೇಗ ಜೀವನ ಶಿಕ್ಷಣ ಸಾಲೆಗಳ ದಿಶೆಯಲ್ಲಿ ಮಾರ್ಪಡಿಸುವ ಉದ್ದೇಶದಿಂದ ಸಾದಾ ಸಾಲಗಳಲ್ಲಿ ಕೂಡಲೆ ಆಚರಣೆಯಲ್ಲಿ ತರಬಹುದಾದ ಜೀವನ ಶಿಕ್ಷಣದ ವೈಶಿಷ್ಟ್ಯಗಳು :—

ಜೀವನ ಶಿಕ್ಷಣ ಸಾಲೆಗಳು ಮಕ್ಕಳ ವ್ಯಕ್ತಿತ್ವದ ವಿಕಾಸವನ್ನು ಸಾಧಿಸಲು ಅನುಕೂಲ. ಮಕ್ಕಳ ಸ್ವಾವಲಂಬನ, ಸಹಕಾರ ಹಾಗೂ ಶ್ರಮ–ಗೌರವ–ಇತ್ಯಾದಿ ಸದ್ಗುಣಗಳನ್ನು ಬೆಳಿಸಲು ಉತ್ತಮ ಕೇಂದ್ರಗಳಾಗಿವೆ.

ಪರಿಪೂರ್ಣ ಜೀವನ ಶಿಕ್ಷಣ ಸಾಲೆಗಳಲ್ಲಿ ಈ ಕೆಳಗಿನ ಅಂಶಗಳನ್ನು ನಾವು ಅಪೇಕ್ಷಿಸಿದ್ದೇವೆ.

೧) ಮೂಲೋದ್ಯೋಗ.
೨) ಅನುಭವತಂತ್ರ
೩) ಸಾಂಘಿಕ ಜೀವನ.
೪) ಮಕ್ಕಳ ಸ್ವಯಂಶಾಸ್ಸಿತ ಆಡಳಿತ.

ಶೀಘ್ರದಲ್ಲಿಯೇ ನಾಡಿನಲ್ಲಿಯ ಸಾದಾ ಸಾಲೆಗಳು ಜೀವನ ಶಿಕ್ಷಣ ಸಾಲೆಗಳಾಗಬೇಕೆಂಬ ಮಾತು ನಿರ್ವಿವಾದವಾಗಿದೆ. ಆದರೆ ಹಣದ ಅಭಾವ ಹಾಗೂ ಜೀವನ ಶಿಕ್ಷಣದಲ್ಲಿ ತರಬೇತಿ ಪಡೆದ ಶಿಕ್ಷಕರ ಸಂಖ್ಯೆ ಮೊದಲಾದ ಸಂಗತಿಗಳನ್ನು ಗಮನಿಸಿದರೆ ನಮ್ಮ ಎಲ್ಲ ಸಾಲೆಗಳು ಜೀವನ ಶಿಕ್ಷಣ ಸಾಲೆಗಳಾಗಿ ಮಾರ್ಪಾಡಾಗಲಿಕ್ಕೆ ಕಾಲಾವಧಿಬೇಕು. ಆದರೆ ಆದಷ್ಟು ಶೀಘ್ರದಲ್ಲಿಯೇ ಸಾದಾ ಸಾಲೆಗಳಿಗೆ ಜೀವನ ಶಿಕ್ಷಣ ದೀಕ್ಷೆಯನ್ನು ಕೊಡಬೇಕಾಗಿದೆ. ಈ ಆವಶ್ಯಕ ಮಾರ್ಪಾಡನ್ನು ಸಾಧಿಸಬೇಕಾದರೆ ಕೆಳಗೆ ಕಾಣಿಸಿದ ತತ್ವಗಳನ್ನು ಕಾರ್ಯಾಚರಣೆಯಲ್ಲಿ ತರಬೇಕು. ಈ ತತ್ವಗಳಿಗೆ ಅನುಗುಣವಾಗಿ ಚಟುವಟಿಕೆಗಳನ್ನು ಇಲ್ಲಿ ಕೊಡಲಾಗಿದೆ :—

ಅ. ನಂ.	ತತ್ವಗಳು	ಚಟುವಟಿಕೆಗಳು
೧)	ಮಕ್ಕಳಲ್ಲಿ ಸ್ವಾವಲಂಬನ ಹಾಗೂ ಸ್ವಯಂಪೂರಿತ ಹೊಣೆಗಾರಿಕೆಗಳ ಅರಿವನ್ನುಂಟು ಮಾಡುವದು.	ಮಂತ್ರಿ ಮಂಡಲದ ರಚನೆ. ಸಫಾಯಿ ಇತ್ಯಾದಿ.
೨)	ಉದ್ದೇಶಪೂರಿತ ಚಟುವಟಿಕೆಗಳನ್ನು ವೃದ್ಧೀಕರಿಸುವದು.	ಪ್ರಾರ್ಥನೆ, ಪ್ರವಾಸ, ನಿರೀಕ್ಷಣೆ ಇತ್ಯಾದಿ.
೩)	ವ್ಯಕ್ತಿ ಬೆಳವಣಿಗೆಗಾಗಿ ಸ್ವಾತಂತ್ರ್ಯ ಹೆಚ್ಚಿಸುವದು.	ಮುಂದಾಳುಗಳನ್ನು ಆರಿಸುವದು, ಗುಂಪುಗಳನ್ನು ರಚಿಸುವದು, ಧ್ವಜದಿನಾಚರಣೆ ಇತ್ಯಾದಿ.
೪)	ಸಾಮಾಜಿಕ ಜೀವನ, ರಾಷ್ಟ್ರ ಜೀವನದ ಕೂಡ ಸಂಪರ್ಕವನ್ನು ಹೆಚ್ಚಿಸುವದು.	ಸ್ಥಾನಿಕ ಹಾಗೂ ರಾಷ್ಟ್ರೀಯ ಹಬ್ಬಗಳ ದಿನಾಚರಣೆ.
೫)	ಮನರಂಜನೆ ಸಾಂಸ್ಕೃತಿಕ ಚಟುವಟಿಕೆ ಮುಖಾಂತರ ಮಕ್ಕಳ ಸುಖವನ್ನು ಹೆಚ್ಚಿಸುವದು.	ಪಂದ್ಯಾಟಗಳು, ಸ್ನೇಹಸಮ್ಮೇಲನಗಳು, ಪಾಲಕರ ದಿನಾಚರಣೆ, ಸಾಲೆಯ ಹುಟ್ಟು ಹಬ್ಬ ಇತ್ಯಾದಿ.

೧) ಮೇಲೆ ಕಾಣಿಸಿದ ಜೀವನ ವೈಶಿಷ್ಟ್ಯಗಳನ್ನು, ಸರಕಾರಕ್ಕೆ ಏನೂ ವೆಚ್ಚತಗಲದಂತೆ ಈಗಿದ್ದ ಶಿಕ್ಷಕರ ಹಾಗೂ ಉಪಕರಣಗಳ ಸಹಾಯದಿಂದ ಸಾದಾ ಸಾಲೆಗಳಲ್ಲಿ ತರಲು ಸಾಧ್ಯವಿದೆ.

೨) ಜೀವನ ಶಿಕ್ಷಣದಲ್ಲಿ ತರಬೇತಿ ಹೊಂದದೆ ಇದ್ದ ಶಿಕ್ಷಕರಿಗೆ ಜೀವನ ಶಿಕ್ಷಣದ ದೃಷ್ಟಿ ಕೋನವನ್ನು ಕೊಡುವ ಅಲ್ಪಾವಧಿ ತರಬೇತಿಯ ಯೋಜನೆಯು.

೨

ಸಾಂಘಿಕ ಜೀವನದ ಮುಖ್ಯ ಚಟುವಟಿಕೆಗಳು:

೧) ದೈನಂದಿನ:— ಸಾಮೂಹಿಕ ಪ್ರಾರ್ಥನೆ, ಸ್ವಚ್ಛತೆ, ಪಂಚಾಂಗ ಪಠಣ, ಅಮರ ನುಡಿ, ವಾರ್ತಾ ವಾಚನ, ಆರೋಗ್ಯ ಪರೀಕ್ಷೆ, ಕುಡಿಯುವ ನೀರಿನ ವ್ಯವಸ್ಥೆ.

೨) ಸ್ವಯಂ ಶಾಸ್ತ್ರಿತ ಆಡಳಿತೆ:— ವಿದ್ಯಾರ್ಥಿ–ಮಂತ್ರಿ – ಮಂಡಳಗಳ ರಚನೆ ಮತ್ತು ಅವುಗಳ ಕಾರ್ಯ.

೩) ಸಂಘ ಸಂಸ್ಥೆಗಳು:— ಸಹಕಾರಿ ಸಂಘ, ಚರ್ಚಾಕೂಟ, ಕೈಬರಹದ ಪತ್ರಿಕೆಯ ಸಮಿತಿ, ಸ್ವಯಂ ಸೇವಕ ಪಥಕ, ಬಾಲವೀರ ಮತ್ತು ಬಾಲಕಿಯರ ಪಥಕಗಳು, ಪ್ರದರ್ಶನ ಮಂಡಲಗಳು, ಅಭ್ಯಾಸ ಮಂಡಲ, ಪಂಡ್ಯಾಟ ಸಮಿತಿ–ಇತ್ಯಾದಿಗಳು.

೪) ದಿನಾಚರಣೆಗಳು ಹಾಗೂ ಸಪ್ತಾಹಗಳು:— ಸ್ವಾತಂತ್ರ್ಯದಿನ, ಪ್ರಜಾರಾಜ್ಯ ದಿನ, ಗಾಂಧೀಜಯಂತಿ, ಬಸವ ಜಯಂತಿ, ಮಹಾವೀರ ಜಯಂತಿ, ಬುದ್ಧ ಜಯಂತಿ, ಜಾಗತಿಕ ಆರೋಗ್ಯ ದಿನ, ಸಂಯುಕ್ತ ರಾಷ್ಟ್ರ ಸಂಘ ದಿನ, ಧ್ವಜದಿನ, ರೆಡ್‌ಕ್ರಾಸ್ ದಿನ, ಮಕ್ಕಳ ಸಪ್ತಾಹ, ಸಮಾಜ ಶಿಕ್ಷಣ ಸಪ್ತಾಹ, ಜೀವನ ಶಿಕ್ಷಣ ಸಪ್ತಾಹ ಮುಂತಾದವುಗಳು.

೫) ರಾಷ್ಟ್ರೀಯ ಉತ್ಸವಗಳು:— ಮೊಹರಮ್, ಕ್ರಿಸ್‌ಮಸ್ (ನಾತಾಳಿ), ದಸರಾ, ಗಣೇಶ ಚತುರ್ಥಿ, ವನಮಹೋತ್ಸವ.

೬) ಸಾಂಸ್ಕೃತಿಕ ಚಟುವಟಿಕೆಗಳು:— ಐತಿಹಾಸಿಕ, ನೈಸರ್ಗಿಕ ಸ್ಥಳಗಳ ಸಂದರ್ಶನ, ಪ್ರವಾಸ, ವನವಿಹಾರ, ವನಭೋಜನ ಶಿಬಿರಗಳು.

೭) ಗ್ರಾಮ ಸುಧಾರಣಾ ಕಾರ್ಯ:— ಶ್ರಮ ದಾನ, ಗ್ರಾಮ ಸಫಾಯಿ, ಜಾತ್ರೆ, ಉತ್ಸವಗಳ ಕಾರ್ಯದಲ್ಲಿ ಭಾಗವಹಿಸುವದು, ಹಳ್ಳಿಯ ಪರಿಶೀಲನೆ, ಸಮಾಜ ಶಿಕ್ಷಣಕಾರ್ಯ, ಹಳ್ಳಿಗಳ ಮೂಲ ಹಾಗೂ ಪೂರಕ ಉದ್ಯೋಗಗಳಲ್ಲಿ ಭಾಗವಹಿಸುವದು.

೮) ಮನೋರಂಜನೆಯ ಕಾರ್ಯಕ್ರಮ:– ಏಕಾಂಕ ನಾಟಕಗಳು, ಬೈಲಾಟ, ಚಿತ್ರ ಪ್ರದರ್ಶನ, ಶಾರೀರಿಕ ಕಸರತ್ತುಗಳು, ಸಾಂಘಿಕ ನೃತ್ಯಗಳು, ಸಾಂಘಿಕ ಆಟಗಳು, ಕವನಗಳು, ಜಾನಪದ ಗೀತೆಗಳು, ಅಣಕಗಳು ಮುಂತಾದವುಗಳು.

೯) ಆರೋಗ್ಯ ಚಟುವಟಿಕೆಗಳು:– ಮೂತ್ರಕುಣಿ, ಇಂಗುಬಚ್ಚಲ, ಹರಿ–ಪಾಯಖಾನೆ, ಹೊಗೆರಹಿತ ಒಲೆ ಮುಂತಾದವುಗಳ ರಚನೆ, ಹರಿಜನ ಕೇರಿಯ ಸ್ವಚ್ಛತೆ, ಊರಿನ ಕುಡಿಯುವ ನೀರಿನ ಸ್ವಚ್ಛತೆ, ಆರೋಗ್ಯ ಸಪ್ತಾಹ ಮುಂತಾದವುಗಳನ್ನು ಕೈಕೊಳ್ಳುವದು.

೩

ವಿಷಯ:– ಜೀವನ ಶಿಕ್ಷಣ ದಿಶೆಯಲ್ಲಿ ಪರಿವರ್ತನ ಹೊಂದಿದ ಸಾಲೆಗಳಲ್ಲಿ ಬರುವ ವಿಶಿಷ್ಟ ಅಡತಡೆಗಳು:—

ಉದ್ದೇಶ ಪೂರಿತ ಚಟುವಟಿಕೆಗಳನ್ನು ಸಾದಾ ಶಾಲೆಗಳಲ್ಲಿ ಆಚರಣೆಯಲ್ಲಿತರುವಾಗ ಎಷ್ಟೋ ಅಡತಡೆಗಳು ಬರುವವು; ಅವುಗಳನ್ನೆಲ್ಲ ಎದುರಿಸಲು ಈ ಕೆಳಗೆ ಕೊಟ್ಟ ಮಾರ್ಗದರ್ಶಕ ತತ್ವಗಳನ್ನು ಅವಲಂಬಿಸಲಾಗಿದೆ.

೧) ವಿದ್ಯಾರ್ಥಿಯು ಸ್ವಾವಲಂಬಿಯಾಗಿರಬೇಕು.

೨) ಅಡತಡೆಗಳನ್ನು ಬಿಡಿಸುವಾಗ ಒತ್ತಾಯಕ್ಕಿಂತ ಮನಸ್ಸಿನ ಒಲವುಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು.

೩) ಕಸವನ್ನು ರಸವನ್ನಾಗಿ ಮಾಡುವ ಕಲೆಯನ್ನು ಸಾಧಿಸಬೇಕು

ಅಡತಡೆಗಳು ಹಾಗು ಅವುಗಳ ಪರಿಹಾರಗಳು

೧. ಅಡತಡೆ:—

ಅ) ಹುಡುಗರ ಪ್ರಯಾಣಕ್ಕೆ ತಕ್ಕಂತೆ ಕುಡಿಯುವ ನೀರನ್ನು ಸಂಗ್ರಹಿಸುವ ಪಾತ್ರೆಗಳಿಲ್ಲದಿರುವದು.

ಪರಿಹಾರ:– ವರ್ಗಕ್ಕೊಂದರಂತೆ ಹರವಿ, ವಾಗ ಡೋಣಿ ಹಾಗೂ ವಾಟಿ ಇವುಗಳನ್ನು ಸಾಧ್ಯವಿದ್ದಲ್ಲಿ ಊರವರಿಂದ ಪೂರೈಸುವ ವ್ಯವಸ್ಥೆ ಮಾಡಿ ಕೊಳ್ಳಬೇಕು.

ಬ) ಅಡತಡೆ:– ಸಾಮೂಹಿಕ ಚಟುವಟಿಕೆಗಳನ್ನು ನಡೆಯಿಸುವಾಗ ಬರುವ ಅಡತಡೆಗಳು.

(i) ಸ್ಥಳಾಭಾವ.

ಪರಿಹಾರ:– ಹವೆ ಚನ್ನಾಗಿದ್ದಾಗ ಪ್ರಾರ್ಥನೆ, ಸಭೆಯ ಕಾರ್ಯಕ್ರಮಗಳು ಇತ್ಯಾದಿ ಚಟುವಟಿಕೆಗಳನ್ನು ಸಾಲೆಯ ಆವಾರ ಅಥವಾ ಸಾಲೆಗೆ ಸಮೀಪವಿರುವ ಅನುಕೂಲವಾದ ಬೈಲಿನಲ್ಲಿ ನಡೆಯಿಸಬೇಕು. ಹವೆ ಚನ್ನಾಗಿಲ್ಲದಿರುವಾಗ ಅವುಗಳನ್ನು ಪ್ರತ್ಯೇಕ ಯೋಗ್ಯ ಸ್ಥಳದಲ್ಲಿ ನಡೆಯಿಸಬೇಕು.

(ii) ಈ ಚಟುವಟಿಕೆಗಳನ್ನು ಆಚರಿಸುವ ವಿಧಾನ ಮತ್ತು ಸಾಹಿತ್ಯದ ಅಭಾವ.

ಪರಿಹಾರ:– ಒಂದು ಸಮಿತಿಯನ್ನು ರಚಿಸುವ ಯೋಗ್ಯ ಪುಸ್ತಕವನ್ನು ತಯಾರಿಸಿ ಪೂರೈಸತಕ್ಕದ್ದು.

ಕ) ಅಡತಡೆ:– ವರ್ಗ ಮತ್ತು ಶಾಲೆಗಳನ್ನು ಸಿಂಗರಿಸುವಾಗ ಬೇಕಾಗುವ ಸಾಮಗ್ರಿಗಳ ಅಭಾವ.

ಪರಿಹಾರ:– ಪರಪರೆ ಮಾಡಲು ಕಾಗದ ದೊರೆಯದಿದ್ದಾಗ ತಳಿರಿನಿಂದ ಸಿಂಗರಿಸಬಹುದು. ದೊಡ್ಡ ಎಲೆಗಳ ಅಭಾವವಿದ್ದಲ್ಲಿ ವಿವಿಧ ಬಣ್ಣಗಳ ಮಟ್ಟಿ ಕಲ್ಲುಗಳಿಂದ ಸಿಂಗರಿಸಬಹುದು.

ಖ) ಅಡತಡೆ:– ವಸ್ತು ಸಂಗ್ರಹಾಲಯಗಳನ್ನು ಏರ್ಪಡಿಸಲು ಸ್ಥಳಾಭಾವ.

ಪರಿಹಾರ:– ವರ್ಗದ ಕೋಣೆಯ ಗೋಡೆಗಳಿಗೆ ಹಲಗೆಗಳನ್ನು ಕೂಡ್ರಿಸಿ ಅವುಗಳ ಮೇಲೆ ಸಾಮಾನುಗಳನ್ನು ಇಡಬಹುದು. ಅಲ್ಲದೆ ಸಾಲೆಯ ಆವಾರದಲ್ಲಿ ಜನತೆಗಾಗಿ ಒಂದು ಸಣ್ಣ ವಸ್ತು ಸಂಗ್ರಹಾಲಯವನ್ನು ಏರ್ಪಡಿಸಬಹುದು.

ಇ) ಕೈತೋಟವನ್ನು ಮಾಡುವಾಗ ಬರುವ ಅಡತಡೆಗಳು:–

i) ಭೂಮಿಯ ಕೊರತೆ.

ಪರಿಹಾರ:– ವಿದ್ಯಾರ್ಥಿಯ ಮನೆಯಹತ್ತರ ಸ್ಥಳವಿದ್ದಲ್ಲಿ ಶಿಕ್ಷಕರ ಮಾರ್ಗದರ್ಶನದ ಮೇರೆಗೆ ಕೈತೋಟ ಸಾಗಿಸಬಹುದು; ಅಥವಾ ಅನುಕೂಲವಾದ ಒಕ್ಕಲಿಗನ ಕೆಲಸದಲ್ಲಿ ಭಾಗವಹಿಸಿ ಶೈಕ್ಷಣಿಕವಾಗಿ ಕೆಲಸ ಮಾಡಬಹುದು. ಯಾವದೂ ಸಾಧ್ಯವಿಲ್ಲದಾಗ (ಪಟ್ಟಣಗಳಲ್ಲಿ) ಹಳೆಯ ಮಡಿಕೆಗಳಲ್ಲಿ ತೊಪ್ಪಲ ಪಲ್ಲೆಗಳನ್ನು ಬೆಳೆದು ಅದರ ಅಭ್ಯಾಸ ಮಾಡಬಹುದು.

ii) ನೀರಿನ ಕೊರತೆ.

ಪರಿಹಾರ:– (ಅ) ಮಳೆಗಾಲದಲ್ಲಿ ಮಾತ್ರ ಕೈತೋಟ ಸಾಗಿಸಬಹುದು. (ಬ) ತಮ್ಮ ಮನೆಯ ಬಚ್ಚಲ ಹರಿಯ ನೀರನ್ನು ಉಪಯೋಗಿಸಬಹುದು.

iii) ಬೆಳೆಯ ರಕ್ಷಣೆಯ ಕೊರತೆ

ಅ) ದನಗಳಿಂದ.

ಪರಿಹಾರ:– ಸಾಧ್ಯವಿದ್ದ ಸಾಮಗ್ರಿಗಳಿಂದ ತೀರ ಕಡಿಮೆ ಬೆಲೆಯಲ್ಲಿ ಜೀವಂತ ಬೇಲಿಯನ್ನು ಹಾಕಿಸಬಹುದು.

ಬ) ಜನಗಳಿಂದ.

ಪರಿಹಾರ:– ಜನತೆಗೆ ಆಗಾಗ್ಗೆ ತಿಳಿ ಹೇಳುವದು.

ಫ) ಕೈಕೆಲಸವನ್ನು ಪ್ರಾರಂಭಿಸುವಲ್ಲಿ ಬರುವ ಅಡತಡೆಗಳು.

i) ಕಾಗದದ ಕೆಲಸ, ರಟ್ಟಿನ ಕೆಲಸಕ್ಕೆ ಬೇಕಾಗುವ ಸಾಧನ ಸಾಮಗ್ರಿಗಳ ಅಭಾವ.

ಪರಿಹಾರ:– ರದ್ದಿ ಕಾಗದಗಳನ್ನು ಉಪಯೋಗಿಸಬಹುದು. ಸಾಧ್ಯವಿದ್ದಲ್ಲಿ ಹಾಗೂ ಅಗತ್ಯವಿದ್ದಲ್ಲಿ ನೋಟಬುಕ್ಕು ಕಟ್ಟಿಸುವದು; ಪುಸ್ತಕಗಳಿಗೆ ಹೊದಿಕೆ ಹಾಕುವದು, ಹರಿದ ಪುಸ್ತಕಗಳ ರಿಪೇರಿ ಮಾಡುವದು.

ii) ನೂಲುವ ಕೆಲಸದಲ್ಲಿ ಸಾಧನ ಸಾಮಗ್ರಿಗಳ ಅಭಾವ.

ಪರಿಹಾರ:– ಹತ್ತಿ ಬೆಳೆಯುವ ಪ್ರದೇಶದಲ್ಲಿ ಬಿಡಿಸುವಾಗ ವರ್ಷಕ್ಕೆ ಸಾಕಾಗುವಷ್ಟು ಹತ್ತಿಯನ್ನು ಸಂಗ್ರಹಿಸಬೇಕು. ತಕಲಿಯಂಥ ತೀರ ಕಡಿಮೆ ಬೆಲೆಯುಳ್ಳ ಸಾಧನವನ್ನು ವಿದ್ಯಾರ್ಥಿಗಳು ಕೊಳ್ಳಬಹುದು. ಇಲ್ಲವೆ ಸರಕಾರವು ಪೂರೈಸಬಹುದು.

(ಗ) i) ಪೋಸ್ಟ ಆಫೀಸ, ರೇಲ್ವೆ ಸ್ಟೇಶನ್, ಬ್ಯಾಂಕ, ಸಹಕಾರಿ ಸಂಘ, ಆಸ್ಪತ್ರೆ ಮುಂತಾದವುಗಳ ಬಗೆಗೆ ಪರಿಚಯ ಮಾಡಿಕೊಡುವಾಗ ಯಾವ ಯಾವ ವರ್ಗಕ್ಕೆ ಎಷ್ಟು ಮತ್ತು ಯಾವ ಯಾವ ಜ್ಞಾನ ಕೊಡಬೇಕೆಂದು ಕೆಲವು ಶಿಕ್ಷಕರಿಗೆ ಸರಿಯಾಗಿ ತಿಳಿದಿರುವದಿಲ್ಲ.

ಪರಿಹಾರ:– ಅವಕ್ಕೆ ಅವಶ್ಯವಿರುವ ಸಾಹಿತ್ಯವನ್ನು ಪೂರೈಸಬೇಕು.

ii) ಆಸ್ಪತ್ರೆ, ಬ್ಯಾಂಕ, ರೇಲ್ವೆಸ್ಟೇಶನ್ ಮುಂತಾದವುಗಳು ಸಮೀಪದಲ್ಲಿ ಇಲ್ಲದಿರುವದು.

ಪರಿಹಾರ :– ಪ್ರವಾಸ ಕೈಕೊಂಡಾಗ ಅವುಗಳನ್ನು ಅವಶ್ಯವಾಗಿ ಸಂದರ್ಶಿಸಬೇಕು.

೨) ಜೀವನ ಶಿಕ್ಷಣದ ಬಗೆಗೆ ಜನತೆಯ ಅನಾದರ ಹಾಗು ವಿರೋಧ. ಇದಕ್ಕೆ ಅಜ್ಞಾನ ಅನಾದರ ಮತ್ತು ತಪ್ಪು ಕಲ್ಪನೆ ಮಾಡಿಕೊಳ್ಳುವದು ಇವೇ ಮುಖ್ಯ ಕಾರಣಗಳು.

ಪರಿಹಾರ :– ಪ್ರಚಾರ ಮಾಡುವದು.

ಪ್ರಚಾರದ ಸಾಧನಗಳು :– (ಅ) ಸಾಲೆಯ ಸಾಮಾನ್ಯ ಚಟುವಟಿಕೆಗಳಲ್ಲಿ ಉತ್ತಮ ಕೆಲಸವನ್ನು ಎತ್ತಿ ತೋರಿಸುವದು.

(ಬ) ಚಟುವಟಿಕೆಗಳ ಮುಖಾಂತರ ಶಿಕ್ಷಣವು ತ್ವರಿತಗತಿಯಿಂದ ಸಾಗುವದೆಂಬುದನ್ನು ಪಾಲಕರಿಗೆ ಮನಗಾಣಿಸಬೇಕು.

(ಕ) ಚಲಚಿತ್ರ ಹಾಗೂ ಭಾಷಣಗಳು.

(ಡ) ಸಾರ್ವಜನಿಕ ಕಾರ್ಯಗಳಲ್ಲಿ (ಜಾತ್ರೆ, ಹಬ್ಬ, ರೋಗ ನಿವಾರಣೆ ಹಾಗೂ ಪ್ರತಿಬಂಧ ಇತ್ಯಾದಿ) ಸಾಲೆಯು ಭಾಗವಹಿಸಬೇಕು.

೩) ಅಡತಡೆ :– ಕೆಲವು ತಪಾಸಣೆಯ ಅಧಿಕಾರಿಗಳು ಜೀವನ ಶಿಕ್ಷಣದ ಬಗೆಗೆ ಹೊಸಬರು ಇರುತ್ತಾರೆ.

ಪರಿಹಾರ :– ಅಲ್ಪಾವಧಿ ತರಬೇತಿಯನ್ನು ಕೊಡಬೇಕು.

೪) (ಅ) ಅಡತಡೆ :– ಸಂವಿಧಾನ ಸಭೆಗಳನ್ನು ಏರ್ಪಡಿಸುವ ಪದ್ಧತಿ, ಮಂತ್ರಿ ಮಂಡಳಗಳ ಕರ್ತವ್ಯ ಹಾಗೂ ಕಾರ್ಯವ್ಯಾಪ್ತಿ ಇವುಗಳ ಸರಿಯಾದ ಕಲ್ಪನೆ ಇಲ್ಲದಿರುವದು.

ಪರಿಹಾರ :– ವಿವಿಧ ತರಗತಿಯ ಶಾಲೆಗಳಿಗೆ ಅವಶ್ಯವುಳ್ಳ ಸಾಹಿತ್ಯದ ನಿರ್ಮಾಣವಾಗಬೇಕು. (ಸಭೆ ನಡೆಸುವ ವಿಧಾನ, ಸಂವಿಧಾನದ ಕರಡು ತಯಾರಿಸುವ ಬಗೆ, ಮಂತ್ರಿಮಂಡಲದಲ್ಲಿಯ ಪ್ರತಿಯೊಬ್ಬ ಮಂತ್ರಿಯ ಕರ್ತವ್ಯ ಹಾಗೂ ಕಾರ್ಯವ್ಯಾಪ್ತಿ ಇವುಗಳ ಬಗೆಗೆ).

(ಬ) ಅಡತಡೆ :– ಏಕಕಾಲಕ್ಕೆ ಎಲ್ಲ ಕಾರ್ಯಕ್ರಮಗಳನ್ನು ಆಚರಣೆಯಲ್ಲಿ ತರಬೇಕೆಂಬ ಆತುರ.

ಪರಿಹಾರ :– ಒಂದು ಕಾರ್ಯಕ್ರಮವು ಆಚರಣೆಯಲ್ಲಿ ಬಂದ ಮೇಲೆ ಇನ್ನೊಂದನ್ನು ಕೈಕೊಳ್ಳಬೇಕು. ಹಾಗೂ ಚಟುವಟಿಕೆಗಳನ್ನು ರೂಢಿಗೊಳಿಸುವ ನಿರ್ದಿಷ್ಟ ಕ್ರಮವನ್ನು ಗೊತ್ತುಪಡಿಸಬೇಕು.

ಉದಾಹರಣಾರ್ಥವಾಗಿ :– ಪ್ರಾರ್ಥನೆ, ವೈಯಕ್ತಿಕ, ವರ್ಗದ ಹಾಗೂ ಶಾಲೆಯ ಸ್ವಚ್ಛತೆ, ಸ್ವಯಂ ಆಡಳಿತ– ಇತ್ಯಾದಿ ಚಟುವಟಿಕೆಗಳು.

೪

ಜೀವನ ಶಿಕ್ಷಣ ದಿಶೆಯಲ್ಲಿ ಹೊಸದಾಗಿ ಪರಿವರ್ತಿಸಲ್ಪಟ್ಟ ಶಾಲೆಗಳಲ್ಲಿ ಉದ್ದೇಶ ಪೂರಿತ ಚಟುವಟಿಕೆಗಳನ್ನು ಹೆಚ್ಚಿಸುವ ಮತ್ತು ಸಂಘಟಿಸುವ ಯೋಜನೆ :—

ಜೀವನ ಶಿಕ್ಷಣದ ವಿಚಾರಗಳು ನಮ್ಮ ದೇಶದಲ್ಲಿ ಕಳೆದ ೨೦ ವರ್ಷಗಳಿಂದ ಪ್ರಚಾರದಲ್ಲಿವೆ. ನಮ್ಮ ದೇಶದ ಶಿಕ್ಷಣವನ್ನು ಈ ಹೊಸ ವಿಚಾರಗಳಿಗೆ ಅನುಸರಿಸಿ, ಮಾರ್ಪಡಿಸುವ ಅನೇಕ ಪ್ರಯತ್ನಗಳು ನಡೆದೇ ಇವೆ. ಆದರೆ ಈ ಪ್ರಯತ್ನಕ್ಕೆ ಪೂರ್ಣವಾಗಿ ಪ್ರತಿಫಲ ಸಿಕ್ಕಿಲ್ಲ. ಈ ವರೆಗೆ ಪ್ರಯತ್ನ ಮಾಡಿದ ಪದ್ಧತಿಗಳಲ್ಲಿ, ನೇಮಿತ ಕ್ಷೇತ್ರಗಳಲ್ಲಿ ಜೀವನ ಶಿಕ್ಷಣ ಶಾಲೆಗಳಲ್ಲಿ ಪ್ರಾರಂಭಿಸಿ ಅವುಗಳಿಂದ ಪ್ರಗತಿ ಸಾಧಿಸಬೇಕೆಂಬ ಉದ್ದೇಶವನ್ನು ಇಟ್ಟುಕೊಳ್ಳಲಾಗಿತ್ತು. ಆದರೆ ಈ ಪದ್ಧತಿಯಿಂದ ಸಾಗಿಸಿದಲ್ಲಿ ಇಡೀ ದೇಶದ ಮೂಲೆಮೂಲೆಗಳಲ್ಲಿ ಜೀವನ ಶಿಕ್ಷಣವು ಕಾರ್ಯಗತವಾಗಬೇಕಾದರೆ ಅವಧಿ ಬಹಳ ಬೇಕಾಗುತ್ತದೆ, ಎಂದು ಕಂಡುಬಂದಿದೆ. ಆದ್ದರಿಂದ ಶೀಘ್ರವಾಗಿ ಎಲ್ಲ ಶಾಲೆಗಳಲ್ಲಿ ಜೀವನ ಶಿಕ್ಷಣ ಶಾಲೆಯ ಲಕ್ಷಣಗಳನ್ನು ತರಲಿಕ್ಕೆ ಯಾವ ಕ್ರಮವನ್ನು ಕೈಕೊಳ್ಳಬೇಕೆಂಬುದನ್ನು ವಿಚಾರಿಸಬೇಕಾಗಿದೆ. ಪರಿಪೂರ್ಣವಾದ ಜೀವನ ಶಿಕ್ಷಣ ಶಾಲೆಗಳಲ್ಲಿ ಈಗ ಪ್ರಚಲಿತವಿದ್ದಂತೆ, ಮೂಲೋದ್ಯೋಗ ಮತ್ತು ಸಮವಾಯ ತಂತ್ರವನ್ನು ಎಲ್ಲ ಶಾಲೆಗಳಲ್ಲಿ ಸೇರ್ಪಡೆ ಮಾಡಲಿಕ್ಕೆ ಸ್ವಲ್ಪ ಅವಧಿಯಲ್ಲಿ ಸಾಧ್ಯವಿಲ್ಲ. ಆರ್ಥಿಕ ಅನಾನುಕೂಲತೆಗಳು ಮತ್ತು ಯೋಗ್ಯ ತರಬೇತಿ ಹೊಂದಿದ ಶಿಕ್ಷಕರ ಅಭಾವ ಇವು ಆ ಉದ್ದೇಶಕ್ಕೆ ಅಡ್ಡಿಯನ್ನುಂಟುಮಾಡುತ್ತವೆ. ಆದರೆ ಮೂಲೋದ್ಯೋಗ

ವನ್ನು ಬಿಟ್ಟು ಉಳಿದ ಅನೇಕ ಚಟುವಟಿಕೆಗಳನ್ನು ಮಕ್ಕಳ ರಚನಾತ್ಮಕ ಮತ್ತು ಕುತೂಹಲ ಪ್ರೇರಣೆಗಳ ಲಾಭವನ್ನು ತೆಗೆದುಕೊಂಡು ನೈಸರ್ಗಿಕವಾಗಿ ನಡೆಯಿಸಲಿಕ್ಕೆ ಬರುತ್ತದೆ. ಅಂಥ ಚಟುವಟಿಕೆಗಳನ್ನು ಮುಖ್ಯವಾಗಿ ಭೌತಿಕ ಮತ್ತು ಸಾಮಾಜಿಕ ಪರಿಸರಗಳಿಂದ ಆಯ್ದುಕೊಳ್ಳಲಿಕ್ಕೆ ಬರುತ್ತವೆ. ಅಂಥ ಚಟುವಟಿಕೆಗಳನ್ನು ಮಕ್ಕಳು ಅತ್ಯಂತ ಆನಂದದಿಂದ ಮತ್ತು ಸ್ವಯಂಸ್ಫೂರ್ತಿಯಿಂದ ಮಾಡುತ್ತಾರೆ. ಆದರೆ ಆ ಚಟುವಟಿಕೆಗಳು ಉದ್ದೇಶಪೂರಿತವಾಗಿರಬೇಕು ಇಷ್ಟೆ. ಅಂಥ ಚಟುವಟಿಕೆಗಳನ್ನು ನಡೆಯಿಸುವಾಗ ಸಮವಾಯ ತಂತ್ರದ ವಿಶೇಷ ಜ್ಞಾನವೂ ಶಿಕ್ಷಕನಿಗೆ ಅವಶ್ಯವಿಲ್ಲ. ಕೇವಲ ಆ ಚಟುವಟಿಕೆಗಳನ್ನು ಸರಿಯಾಗಿ ಮತ್ತು ಯೋಜನಾ ಬದ್ಧವಾಗಿ ಸಾಗಿಸುವುದರಿಂದ ಅವುಗಳಿಗೆ ಸಂಬಂಧಿಸಿದ ಅನುಭವಗಳು ಮಕ್ಕಳಿಗೆ ಉಂಟಾಗಿ ಅವರ ಜ್ಞಾನವು ಅಭಿವೃದ್ಧಿ ಹೊಂದುತ್ತದೆ.

ಧಾರವಾಡ ವಿಭಾಗದ ಎಲ್ಲ ಸಾದಾ ಪ್ರಾಥಮಿಕ ಶಾಲೆಗಳಲ್ಲಿ ಬಹುತರವಾಗಿ ಮೂಲೋದ್ಯೋಗವನ್ನು ಬಿಟ್ಟು ಉಳಿದ ಚಟುವಟಿಕೆಗಳನ್ನು ಈಗ ಮಾಡಲಾಗುತ್ತಿದೆ. ಆದ್ದರಿಂದ ಈ ವಿಭಾಗದಲ್ಲಿ ಮೇಲೆ ಹೇಳಿದ ಪ್ರಕಾರದ ಶಾಲೆಗಳಲ್ಲಿ ಚಟುವಟಿಕೆಗಳನ್ನು ನಡೆಯಿಸಲು ಯಾವ ತೊಂದರೆಯೂ ಉಂಟಾಗುವದಿಲ್ಲ. ಆದರೆ ಈಗ ನಡೆಯುತ್ತಿರುವ ಚಟುವಟಿಕೆಗಳಲ್ಲಿ ಇನ್ನಷ್ಟು ಸೇರಿಸಿ ಅವು ಕೇವಲ ತಾಂತ್ರಿಕವಾಗಿ ನಡೆಯದೆ ಶೈಕ್ಷಣಿಕ ಮೌಲ್ಯಗಳನ್ನೊಳಗೊಂಡಿರುವಂತೆ ನೋಡದರಾಯಿತು.

ಆದರೆ ಮೈಸೂರು ರಾಜ್ಯದ ಉಳಿದ ವಿಭಾಗದ ಸಾದಾ ಪ್ರಾಥಮಿಕ ಶಾಲೆಗಳಲ್ಲಿ ಇಂಥ ಚಟುವಟಿಕೆಗಳನ್ನು ಹೊಸದಾಗಿ ಪ್ರಾರಂಭಿಸಬೇಕಾಗಿದೆ. ಅಲ್ಲಿ ಕಾರ್ಯ ಮಾಡುವ ಶಿಕ್ಷಕರಿಗೆ ಅಲ್ಪಾವಧಿ ತರಬೇತಿ ವರ್ಗಗಳನ್ನು ತೆರೆದು ಜೀವನ ಶಿಕ್ಷಣ ಶಾಲೆಯ ವೈಶಿಷ್ಟ್ಯಗಳು, ವಿಶೇಷ ವೆಚ್ಚವಿಲ್ಲದೆ ಚಟುವಟಿಕೆಗಳನ್ನು ನಡೆಯಿಸುವ ವಿಧಾನ ಮತ್ತು ಸಮವಾಯ ತಂತ್ರದ ಸ್ಥೂಲ ಜ್ಞಾನ-ಈ ವಿಷಯಗಳ ಬಗೆಗೆ ಕಲ್ಪನೆ ಕೊಟ್ಟಿದ್ದಾದರೆ ಅವರು ಶಾಲೆಗಳಲ್ಲಿ ಚಟುವಟಿಕೆಗಳನ್ನು ನಡೆಯಿಸಲು ಸಮರ್ಥರಾಗುತ್ತಾರೆ.

ಮೇಲೆ ಹೇಳಿದ ಉದ್ದೇಶಗಳನ್ನು ಸಫಲಗೊಳಿಸಲಿಕ್ಕೆ ಸಾಧ್ಯವಾಗಬೇಕೆಂದು ಸಾದಾ ಶಾಲೆಗಳಲ್ಲಿ ಜೀವನ ಶಿಕ್ಷಣ ಶಾಲೆಯ ವೈಶಿಷ್ಟ್ಯಗಳನ್ನು ತರುವಂಥ ಉದ್ದೇಶಪೂರಿತ ಚಟುವಟಿಕೆಗಳ ಯಾದಿಯನ್ನು ಮತ್ತು ಅವುಗಳನ್ನು ಸಂಘಟಿಸುವ ವಿಧಾನಗಳ ಕೆಲವು ಉದಾಹರಣೆಗಳನ್ನು ಕೆಳಗೆ ಕಾಣಿಸಲಾಗಿದೆ.

ಸಾಮಾನ್ಯ ಉದ್ದೇಶಗಳು

೧) ಮಕ್ಕಳಸಹಜ ಪ್ರವೃತ್ತಿಗಳ ಉದಾತ್ತೀಕರಣ.

೨) ಮಕ್ಕಳಿಗೆ ಅವರ ಶಾಲೆಯ, ಮನೆಯ ಮತ್ತು ಸಮಾಜದ, ನೈಸರ್ಗಿಕ ಸುತ್ತಲಿನ ಆವರಣದ ಕಲ್ಪನೆ ಮಾಡಿಕೊಡುವದು.

೩) ಮುಂದಾಳುತನ, ಸಹಕಾರ, ಸಂಘಟನಾ ಶಕ್ತಿಗಳನ್ನು ಪ್ರೋತ್ಸಾಹಿಸುವುದು.

೪) ಮಕ್ಕಳ ಅನುಭವ ಶಕ್ತಿ, ವಿಚಾರ ಶಕ್ತಿ, ಸ್ಮೃತಿ ಶಕ್ತಿಗಳನ್ನು ಬೆಳೆಯಿಸುವುದು.

೫) ವೈಜ್ಞಾನಿಕ ದೃಷ್ಟಿಕೋನ ಬೆಳೆಯಿಸುವುದು.

೬) ಕೈ ಕುಶಲತೆಯನ್ನು ಪ್ರೋತ್ಸಾಹಿಸುವದು.

೭) ಉತ್ತಮ ನಾಗರಿಕರಾಗುವಂತೆ ಮಾಡುವುದು.

೮) ಕೇವಲ ಪುಸ್ತಕೀಯ ಜ್ಞಾನ ಮಾಡಿಕೊಡದೆ ಸಹಜವಾಗಿ ಚಟುವಟಿಕೆಗಳ ಮುಖಾಂತರ ಜ್ಞಾನ ಗಳಿಸುವಂತೆ ಮಾಡುವುದು.

೯) ಸ್ವಚ್ಛತೆ, ಶ್ರಮದಾನ, ಪ್ರಾಮಾಣಿಕತೆ, ತ್ಯಾಗ, ಸೇವಾ ಭಾವಗಳನ್ನು ಪ್ರೋತ್ಸಾಹಿಸುವುದು.

೧೦) ಪ್ರಜಾಪ್ರಭುತ್ವದ ಮನೋವೃತ್ತಿ ಬೆಳೆಯಿಸುವುದು.

೧೧) ಯೋಜನೆಯ ಮನೋವೃತ್ತಿ ಬೆಳೆಯಿಸುವುದು.

ಟೀಕೆ:— ಈ ಚಟುವಟಿಕೆಗಳನ್ನು ಯಾವಾಗ ಮಾಡಿಸಬೇಕೆಂಬ ಪ್ರಶ್ನೆ ಬರುವದುಂಟು. ಅಥವಾ ವೇಳಾ ಪತ್ರಿಕೆಯಲ್ಲಿ ಇವುಗಳ ಸ್ಥಾನವೆಲ್ಲಿ?

ಜೀವನ ಶಿಕ್ಷಣ ಶಾಲೆಗಳಲ್ಲಿ ಮೂಲೋದ್ಯೋಗಗಳಿಗೆ ಮೀಸಲಾಗಿಟ್ಟ ನಿರ್ದಿಷ್ಟ ವೇಳೆಯಲ್ಲಿ ಮಾಡಿಸಬಹುದು. ಕೆಲವು ಚಟುವಟಿಕೆಗಳನ್ನು ಮತ್ತು ಆಯಾ ಸಮಾರಂಭಗಳಲ್ಲಿ ಕೆಲವನ್ನು ನಿರ್ದಿಷ್ಟ ಋತುಗಳಲ್ಲಿ ಅಥವಾ ಶಿಕ್ಷಣ ಖಾತೆಯ ಮೇಲಧಿಕಾರಿಗಳ ಸೂಚನೆಗಳ ಪ್ರಕಾರ ಮಾಡಿಸಬೇಕಾಗುವುದುಂಟು. ಈ ಸೂಚನೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ಉದ್ದೇಶ ಪೂರಿತ ಚಟುವಟಿಕೆಗಳನ್ನು ಮಾಡಿಸುವ ಸ್ವಾತಂತ್ರ್ಯ ಶಿಕ್ಷಕರಿಗೆ ಇರಬೇಕು.

ಚಟುವಟಿಕೆಗಳ ಪಟ್ಟಿ:– ನಾವು ತಯಾರಿಸಿದ ಉದ್ದೇಶಪೂರಿತ ಚಟುವಟಿಕೆಗಳ ಮತ್ತು ಸಂಯೋಜನೆಗಳ ಪಟ್ಟಿಯು ಸಂಕ್ಷಿಪ್ತವಿದ್ದು ಸೂಚಕ ರೂಪದಲ್ಲಿ ಮಾತ್ರ ಅದನ್ನು ಕೊಡಲಾಗಿದೆ. ಇದನ್ನು ಆಯಾ ವರ್ಗಗಳ ಶಿಕ್ಷಕರು ತಮ್ಮ ಸ್ಥಳಿಕ ಮತ್ತು ಮಕ್ಕಳ ವಯೋಮಾನಕ್ಕನುಗುಣವಾಗಿ ಆಯ್ದುಕೊಳ್ಳಬಹುದು. ಅನೇಕ ಉಪಚಟುವಟಿಕೆಗಳನ್ನು ಕಲ್ಪಿಸಿ ಸಾಗಿಸಿಕೊಂಡು ಹೋಗಬಹುದು. ಆದರೂ ಇವನ್ನು ಕೆಳಗಿನಂತೆ ವರ್ಗಿಕರಿಸಲಾಗಿದೆ.

ಚಟುವಟಿಕೆಗಳ ವರ್ಗೀಕರಣ

೧) ಸಾಮಾಜಿಕ ಚಟುವಟಿಕೆಗಳು.

೨) ಆರ್ಥಿಕ ಚಟುವಟಿಕೆಗಳು.

೩) ನೈಸರ್ಗಿಕ ಚಟುವಟಿಕೆಗಳು.

ಈ ಚಟುವಟಿಕೆಗಳನ್ನು ವರ್ಗವಾರವಾಗಲೀ ಅಥವಾ ೧-೪ ಇಯತ್ತೆಯ ವರೆಗಿನ ಮಕ್ಕಳಿಗಾಗಿ ಮತ್ತು ೫–೭ ಇಯತ್ತೆ ಮಕ್ಕಳಿಗಾಗಿ ಹೀಗೆಯೂ ವಿಂಗಡಿಸಬಹುದು.

ಇದಲ್ಲದೆ ಶಹರಗಳಲ್ಲಿಯ ಮತ್ತು ಗ್ರಾಮೀಣ ಶಾಲೆಗಳಿಗಾಗಿ, ಗಂಡುಮಕ್ಕಳಿಗಾಗಿ ಮತ್ತು ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕವಾಗಿಯೂ ವರ್ಗೀಕರಿಸಬಹುದು. ಇನ್ನು ಚಟುವಟಿಕೆಗಳನ್ನು ಸಾಲೆಯಲ್ಲಿ ಹೇಗೆ ಸಂಘಟಿಸಬೇಕೆನ್ನುವದಕ್ಕಾಗಿ ಕೆಳಗಿನ ಉದಾಹರಣೆಗಳಿಂದ ಕಂಡು ಕೊಳ್ಳಬಹುದು.

ಆರ್ಥಿಕ ಪರಿಸ್ಥಿತಿಗೆ ಸಂಬಂಧಿಸಿದ ಚಟುವಟಿಕೆ:–

೧) ಚಟುವಟಿಕೆ:– ಪತಂಗ ಮಾಡುವದು.

ಉದ್ದೇಶ:– ಇದೊಂದು ರಚನಾತ್ಮಕ ಮತ್ತು ಮನೋರಂಜಕ ಹಾಗೂ ಲಾಭದಾಯಕ, ಉತ್ಪಾದಕ ಚಟುವಟಿಕೆ ಇರುವುದು. ಇದರಲ್ಲಿ ಬಾಲಕರ ಹಸ್ತ ಕೌಶಲ್ಯದ ಬೆಳವಣಿಗೆಗೆ ಆಸ್ಪದ ಉಂಟಾಗುತ್ತದೆ. ಮತ್ತು ಅವರಿಗೆ ಆನಂದ ಉಂಟಾಗುತ್ತದೆ.

ಕೊಡಬಹುದಾದ ಜ್ಞಾನ-ಗಾಳಿಯದಿಕ್ಕು, ಪತಂಗದ ಆಳತೆ, ಉದ್ದ ಅಗಲುಗಳ ಕಲ್ಪನೆ, ಕಾಗದದ ಪ್ರಕಾರಗಳು, ಬಣ್ಣಗಳ ಕಲ್ಪನೆ, ಆಕಾರಗಳು, ಬಿದಿರಿನ ಮಾಹಿತಿ, ಅಂಟಿನ ಬಗ್ಗೆ–ಸರಿ, ಪತಂಗ ಹಾರುವ ಕಾರಣಗಳು.

ಹಸ್ತ ಕೌಶಲ್ಯ– ಮಡಿಚುವುದು, ಕತ್ತರಿಸುವುದು, ಹರಿಯುವುದು, ಅಂಟು ಅಥವಾ ಸರಿ ತಯಾರಿಸುವದು, ಹಚ್ಚುವುದು. ಸೀಬನ್ನು ತಯಾರಿಸುವದು ಮತ್ತು ಹಚ್ಚುವದು, ಸೂತ್ರವನ್ನು ಕಟ್ಟುವದು.

೨) ನೈಸರ್ಗಿಕ– ಹಳ್ಳದ ನಿರೀಕ್ಷಣೆ, ನಿಸರ್ಗದಲ್ಲಿ ಆಗುವ ಬದಲಾವಣೆಗಳ ಕಾರಣಗಳನ್ನು ಕಂಡು ಹಿಡಿಯಲು ಮತ್ತು ಮನೋರಂಜನಕ್ಕಾಗಿ.

ಉದ್ದೇಶ– ಮನರಂಜನೆಗಾಗಿ ಊರಹೊರಗೆ ಊಟಕ್ಕೆಂದು ಅಥವಾ ಆಡಲಿಕ್ಕೆ ಸಮೀಪವಿದ್ದ ಹಳ್ಳದ ದಂಡೆಗೆ ಮಕ್ಕಳನ್ನು ಕರೆದುಕೊಂಡು ಹೋಗುವದು.

ಯೋಜನೆ– ಚರ್ಚಿಸಿ ಯೋಜನೆಯನ್ನು ಹಾಕಿಕೊಳ್ಳಬೇಕು. ಶಿಸ್ತಿನಿಂದ ಹೋಗಬೇಕು. ಸಾಂಘಿಕ ಗೀತೆಗಳನ್ನು ಅನ್ನುತ್ತ ಅಲ್ಲಿ ಹೋದನಂತರ ಶಿಕ್ಷಕರು ಯಾವರೀತಿಯಿಂದ ಏನನ್ನು ಮಾಡಬೇಕು. ಏನನ್ನು ನಿರೀಕ್ಷಿಸಬೇಕೆಂಬುದನ್ನು ಚರ್ಚಿಸಬೇಕು.

ಜ್ಞಾನ– ಹಳ್ಳಗಳು, ಹೊಳೆಗಳು, ಸರೋವರಗಳು ಮುಂತಾದ ಪ್ರವಾಹ, ಉಗಮ, ಹರಿಯುವ ದಿಕ್ಕು-ಪದ್ಯ.

ಸಂಯೋಜನೆಯ ಉದಾಹರಣೆ

೧) ಜೀವನ ಶಿಕ್ಷಣ ಸಪ್ತಾಹ:– ಈ ಸಪ್ತಾಹವು ರಾಜ್ಯದಲ್ಲಿ ಜನೆವರಿ ೨೦ ರಿಂದ ೨೬ರ ವರೆಗೆ ಆಚರಿಸಲ್ಪಡುತ್ತದೆ. ಈ ಸಪ್ತಾಹದ ಅಂಗವಾಗಿ ಇಡೀ ಶಾಲೆಯ ಎಲ್ಲ ವಿದ್ಯಾರ್ಥಿಗಳಿಗಾಗಿ ಮತ್ತು ವರ್ಗವಾರ ಯೋಜನೆಗಳನ್ನು ಹಾಕಬಹುದು. ಒಂದು ವಾರದವರೆಗೆ ಮಾಡಬೇಕಾದ ಚಟುವಟಿಕಗಳನ್ನು ಯೋಜಿಸಬಹುದು. ಈ ಸಂಯೋಜನೆಯಲ್ಲಿ ಅನೇಕ ಚಟುವಟಿಕೆಗಳು ಬರುತ್ತವೆ. ವರ್ಗವಾರ ಈ ಚಟುವಟಿಕೆಗಳನ್ನು ಹಂಚಿ–ಕೊಡಬೇಕು. ಮತ್ತು ಗುಣಗಳನ್ನು ಕೊಡಬಹುದು. ಸಪ್ತಾಹ ಮುಗಿದ ನಂತರವೂ ಚಟುವಟಿಕೆಗೆ ನೇರವಾಗಿ ಸಂಬಂಧಿಸಿ ಹಾಗೂ ಅದರಿಂದ ಸ್ವಾಭಾವಿಕವಾಗಿ ಉದ್ಭವಿಸಬಹುದಾದ ಸಮಸ್ಯೆಗಳನ್ನು ತೆಗೆದುಕೊಳ್ಳಬಹುದು.

೧) ಪ್ರಭಾತ ಫೇರಿ.

೨) ಪ್ರದರ್ಶನ.

೩) ಭಾಷಣಗಳು.

೪) ಸಂಭಾಷಣೆಗಳು.

೫) ವಿಶೇಷ ಸಂಚಿಕೆ ಹೊರಡಿಸುವದು.

೬) ಮನೋರಂಜನೆಯ ಕಾರ್ಯಕ್ರಮಗಳು.

೭) ಪಾಲಕರ ದಿನಾಚರಣೆ.

ಈ ಚಟುವಟಿಕೆಗಳನ್ನು ಮಾಡಿಸಿ ಸ್ವಾಭಾವಿಕವಾಗಿ ಹೊರಡುವ ಜ್ಞಾನ ಮಾಡಿಕೊಡುವದು.

೨) ದಸರಾ ಮಹೋತ್ಸವ– ಈ ಉತ್ಸವವನ್ನು ಎಲ್ಲ ಶಾಲೆಗಳಲ್ಲಿ ಆಚರಿಸುತ್ತಿದ್ದು ಇದನ್ನು ಸಂಯೋಜನೆಯನ್ನಾಗಿ ತೆಗೆದುಕೊಳ್ಳಬಹುದು.

ಉಪಕರಣಗಳು ಮತ್ತು ವೆಚ್ಚ– ಈ ಎಲ್ಲ ಚಟುವಟಿಕೆಗಳನ್ನು ಮಾಡಿಸಬೇಕಾದರೆ ಕೆಲವು ಉಪಕರಣಗಳು ಬೇಕಾಗುತ್ತವೆ.

ಉದಾ– ಕಾಗದ ಕೆಲಸ– ಚಾಕು, ಕತ್ತರಿ, ಪೆನ್ಸಿಲುಗಳು, ಕಾಗದಗಳು.

ಇಂಥ ಶಾಲೆಗಳಲ್ಲಿ ಸಾದಿಲವಾರ ಹಣ ಹೆಚ್ಚಿಸುವದು ಯೋಗ್ಯ. ಕೊನೆಯದಾಗಿ ಈ ಉದ್ದೇಶಪೂರಿತ ಚಟುವಟಿಕೆಗಳ ಯಾದಿಯು ಶಾಸ್ತ್ರೋಕ್ತವಾಗಿ ಪರಿಷ್ಕರಿಸಲ್ಪಟ್ಟು ಪರಿವರ್ತಿಸಲ್ಪಡುವ ಎಲ್ಲ ಸಾದಾ ಶಾಲೆಗಳಿಗೂ ಒಂದೇ ತರದ ಅಭ್ಯಾಸ ಪತ್ರಿಕೆ ಸ್ವೀಕೃತವಾಗಿದ್ದು ಆ ಅಭ್ಯಾಸ ಪತ್ರಿಕೆಯಲ್ಲಿಯ ಉದ್ದೇಶಗಳು, ಜ್ಞಾನಸಾಗುವಂತೆ ಈ ಚಟುವಟಿಕೆಗಳನ್ನು ಸಾಗಿಸಿಕೊಂಡು ಹೋಗಲು ಸಾಧ್ಯವಿದೆ.

ಉದ್ದೇಶಪೂರಿತ ಚಟುವಟಿಕೆಗಳು

ಆರ್ಥಿಕ ರಚನಾತ್ಮಕ–ಕಲಾತ್ಮಕ–ಸಾಹಿತ್ಯ	ಸಾಮಾಜಿಕ ಆರೋಗ್ಯ	ನೈಸರ್ಗಿಕ ನಿರೀಕ್ಷಣಾತ್ಮಕ
೧) ಆಲಬಮ್ (ಚಿತ್ರಸಂಗ್ರಹ) ತಯಾರಿಸುವದು.	೧) ವೈಯಕ್ತಿಕ ಸ್ವಚ್ಛತೆ	೧) ಸಂದರ್ಶನಗಳು
೨) ಅಡಿಗೆ ಮಾಡುವದು	೨) ನೀರಿನ ಪೂರೈಕೆ	೨) ಹಳ್ಳಿಗಳ ನಿರೀಕ್ಷಣೆ
೩) ಕೈತೋಟದ ಕೆಲಸ	೩) ಹೂವಿನ ಗುಚ್ಛ ತಯಾರಿಸುವದು. ವರ್ಗದಲ್ಲಿ ಇಡುವದು	ಹೊಳೆಗಳ ,,
೪) ನೀರುಣಿಸುವದು	೪) ಅಲಂಕಾರ	ಆಕಾಶ ,,
೫) ಕಸ ತೆಗೆಯುವದು	೫) ವಾರ್ತಾ ಫಲಕ	ಮೋಡಗಳ ,,
೬) ಮಡಿ ಮಾಡುವದು	೬) ವಸ್ತು ಸಂಗ್ರಹಾಲಯ	ಗಿಡಗಳ ,,
೭) ಮಣ್ಣಿನ ಕೆಲಸ	೭) ಮಧ್ಯಾಹ್ನದ ಊಟ	ಬಳ್ಳಿಗಳ ,,
೮) ಕಾಗದ ಕೆಲಸ	೮) ಸಾಂಘಿಕ ಗೀತೆಗಳು	ಪ್ರಾಣಿಗಳ ,,
೯) ಚಾಪಿ ಹೆಣೆಯುವದು	೯) ಸ್ಥಾನಿಕ ಹಬ್ಬಗಳ ಆಚರಣೆ	೩) ಕಮ್ಮಾರ ಶಾಲೆ
೧೦) ಹೂದೋಟ ತಯಾರಿಸುವದು	೧೦) ರಾಷ್ಟ್ರೀಯ ದಿನಾಚರಣೆ	೪) ಬಡಿಗ ಶಾಲೆ
೧೧) ಗಾಳಿಪಟ ತಯಾರಿಸುವದು	೧೧) ಪಂದ್ಯಾಟಗಳು	೫) ಕುಂಬಾರ ಮನೆ
		೬) ಕುರಿಗಳ ದಡ್ಡಿ

ಆರ್ಥಿಕ
ರಚನಾತ್ಮಕ-ಕಲಾತ್ಮಕ-ಸಾಹಿತ್ಯ

೧೨) ಗೊಬ್ಬರ ಕುಣಿಗಳು
೧೩) ಕೈಬರೆಹ ಪತ್ರಿಕೆಗಳು
೧೪) ಮಳೆ ಅಳೆಯುವ ಉಪಕರಣ
೧೫) ಗಾಳಿ ಕೋಳಿ
೧೬) ಕಸೂತಿ
೧೭) ಹೆಣಿಕೆ
೧೮) ಆಟಿಗೆ ಸಾಮಾನು
೧೯) ಮುಗನ್-ಚೂಲ್ಹಾ (ಒಲೆ)
೨೦) ಅಡಿಗೆ ಮಾಡುವದು
೨೧) ರಂಗವಲ್ಲಿ ಹಾಕುವದು
೨೨) ಅಕ್ಕನ ಬಳಗ ಸಂಘಟನೆ
೨೩) ಅಲಂಕಾರ
೨೪) ಪತಂಗ
೨೫) ಆಕಾಶ ಬುಟ್ಟಿ
೨೬) ಶಿವನ ಬುಟ್ಟಿ
೨೭) ರಟ್ಟಿನ ಸಾಮಾನು
೨೮) ಬುಕ್ ಬಾಯಿಂಡಿಂಗ
೨೯) ಗಣಪತಿ ಮಾಡುವದು
೩೦) ಊಟದ ಎಲೆ ಹಚ್ಚುವದು

ಸಾಮಾಜಿಕ
ಆರೋಗ್ಯ

೧೨) ಮನೋರಂಜನೆಯ ಕಾರ್ಯಕ್ರಮಗಳು
೧೩) ನೀರಿನ ಶುದ್ಧೀಕರಣ
೧೪) ಇಂಗು ಬಚ್ಚಲುಗಳ ತಯಾರಿಕೆ
೧೫) ಮೂತ್ರಿ ಮತ್ತು ಕುಣಿ ಪಾಯಖಾನೆಗಳು
೧೬) ಜಾನಪದ ಗೀತೆಗಳನ್ನು ಕಲೆಹಾಕುವದು
೧೭) ಗಾದೆಯ ಮಾತುಗಳನ್ನು ಕಲೆಹಾಕುವದು
೧೮) ಹಳ್ಳಿಯ ಕಥೆಗಳು
೧೯) ಉತ್ಸವ, ಜಾತ್ರೆಯಲ್ಲಿ ಸ್ವಯಂ ಸೇವಕರಾಗಿ ಕೆಲಸ ಮಾಡುವದು
೨೦) ಸಾಯಕಲ್ಲ ಕಲಿಯುವದು
೨೧) ಈಸುವದು
೨೨) ಸಹಕಾರ ಅಂಗಡಿಯ ಸಂಘಟನೆ

ನೈಸರ್ಗಿಕ
ನಿರೀಕ್ಷಣಾತ್ಮಕ

೭) ಕೋಳಿಗಳ ಗೂಡು
೮) ಪಾರಿವಾಳದ ಗೂಡು
೯) ಮೊಲಗಳ ಗೂಡು
೧೦) ಪ್ರಾಣಿ ಸಂಗ್ರಹಾಲಯ
೧೧) ಪೋಸ್ಟ ಆಫೀಸು
೧೨) ದವಾಖಾನೆ
೧೩) ರೇಲ್ವೆ ಸ್ಟೇಶನ್
೧೪) ಸಿಂಪಿಗನ ಮನೆ
೧೫) ಕಿರಾಣಿ ಅಂಗಡಿ
೧೬) ಛಾಪಖಾನೆ
೧೭) ನೇಕಾರರ ಮನೆ
೧೮) ಗುಡಿಗಳು
೧೯) ಮಸೀದ
೨೦) ಚರ್ಚ
೨೧) ಉಷ್ಣಮಾಪಕ ಯಂತ್ರದ ನಿರೀಕ್ಷಣೆ
೨೨) ಹೊಲಗಳ ಮೋಜಣಿ
೨೩) ನಕಾಶ ತಯಾರಿಸುವದು
೨೪) ನಕ್ಷತ್ರಗಳ ನಿರೀಕ್ಷಣೆ
೨೫) ಸೂರ್ಯನ „
೨೬) ಚಂದ್ರನ „

ಗಾಂಧೀವಾಣಿ ಹಾಗೂ ಮೂಲ ಶಿಕ್ಷಣ ತತ್ವಪ್ರಣಾಲಿ

ಲೇಖಕರು : ಶ್ರೀ ಎಸ್. ಎಸ್. ನಾಡಕರ್ಣಿ, ಬಿ.ಎಸ್‌ಸಿ. (ಆನರ್ಸ್), ಡಿ.ಇಡಿ.

ಶಿಕ್ಷಣದಲ್ಲಿ ಸ್ವರಾಜ್ಯದ ಕೀಲಿಕೈ ಇದೆ. ಈ ಶಿಕ್ಷಣದಲ್ಲಿ ನಾವು ಯಶಸ್ವಿಯಾದರೆ ನಮಗೆ ಎಲ್ಲ ಕಡೆಯಲ್ಲಿ ಯಶಸ್ಸೇ ಯಶಸ್ಸು.

—ಗಾಂಧೀಜಿ.

ಮಹಾತ್ಮಾ ಗಾಂಧೀಜಿಯವರಲ್ಲಿ ಶಿಕ್ಷಣದ ಬಗೆಗೆ ಇದ್ದ ಅಭಿಮಾನವು ಅವರಿಂದ ಈ ರೀತಿ ನುಡಿಸಿತು.

೧) ಶಿಕ್ಷಣದ ಅರ್ಥವು ಕೇವಲ ಅಕ್ಷರ ಜ್ಞಾನ ಆಗಿದ್ದರೆ ಅದು ಒಂದು ಶಸ್ತ್ರದಂತಾದೀತು. ಅದರಿಂದ ಉಪಯೋಗದಷ್ಟೇ ದುರುಪಯೋಗವೂ ತೆಗೆದುಕೊಳ್ಳಲ್ಪಡಬಹುದು.

೨) ನಿಜವಾದ ಶಿಕ್ಷಣವು ನೀತಿ ಮತ್ತು ಸದಾಚಾರ ನಿಯಮಗಳನ್ನು ಕಲಿಸುತ್ತದೆ.

೩) ಎಲ್ಲಿಯವರೆಗೆ ಸದ್ಗುಣಿಗಳಾದ ಶಿಕ್ಷಕರಿಂದ ಶಿಕ್ಷಣವು ಕೊಡಲ್ಪಡುವದಿಲ್ಲವೋ, ಎಲ್ಲಿಯವರೆಗೆ ಪ್ರತಿಯೊಬ್ಬ ಬಡಭಾರತೀಯನಿಗೂ ಕೂಡ ಶಿಕ್ಷಣದ ಹಕ್ಕು ದೊರೆಯಲಾರದೋ, ಎಲ್ಲಿಯವರೆಗೆ ಶಿಕ್ಷಣ ಮತ್ತು ಸದ್ಧರ್ಮದ ಸುಂದರ ಸಮನ್ವಯವಾಗುವದಿಲ್ಲವೋ, ಎಲ್ಲಿಯವರೆಗೆ ಶಿಕ್ಷಣವು ಮಗುವಿನ ಪರಿಸ್ಥಿತಿಗನುಗುಣವಾಗಿ ಸಾಗುವದಿಲ್ಲವೋ ಅಲ್ಲಿಯವರೆಗೆ ಜನಜೀವನವು ಸುಖಮಯವಾಗಲಾರದೆಂಬುದರಲ್ಲಿ ಸಂದೇಹವಿಲ್ಲ.

೪) ಶುದ್ಧ ರಾಷ್ಟ್ರೀಯ ಶಿಕ್ಷಣವು ಆಯಾ ಪ್ರಾಂತೀಯ ಭಾಷೆಯಲ್ಲಿಯೇ ಕೊಡಲ್ಪಡಬೇಕು.

೫) ಶಿಕ್ಷಣವು ಮನುಷ್ಯನ ಬಹು ಅಂಶ ಅವಶ್ಯಕತೆಗಳನ್ನು ಪೂರೈಸಬೇಕು.

೬) ಶಾಲೆ, ಸಮಾಜ ಹಾಗೂ ಮನೆ ಈ ಮೂರು ಸಂಗತಿಗಳ ಮೇಲೆ ಶಿಕ್ಷಣದ ಹೊಣೆ ಇದೆ.

೭) ಶಿಕ್ಷಿತ ಮನುಷ್ಯನು ಸ್ವಾವಲಂಬಿಯಾಗಬೇಕು.

೮) ಒಳ್ಳೆಯ ಶಿಕ್ಷಣವು ಹೃದಯ, ಬುದ್ಧಿ ಹಾಗೂ ಶರೀರದ ಸಮನ್ವಿತ ವಿಕಾಸವನ್ನು ಮಾಡುತ್ತದೆ.

೯) ಶಾರೀರಿಕ ಕಾರ್ಯಗಳನ್ನು ಶಿಕ್ಷಣದ ಅಂಗವೆಂದು ಬಗೆಯಬೇಕು.

೧೦) ಮಗುವು ಬರೆಯುವದಕ್ಕಿಂತ ಮೊದಲು ಓದು ಕಲಿಯಬೇಕು ಅಕ್ಷರಗಳನ್ನು ಗುರುತಿಸುವದನ್ನು ಕಲಿಯಬೇಕು.

೧೧) ಮಗುವಿಗೆ ಶಿಕ್ಷಣವು ಆಟದಂತೆ ಅನಿಸಬೇಕು.

೧೨) ಉತ್ತಮ ಹಾಗೂ ಸುಸಜ್ಜಿತ ಕಟ್ಟಡಗಳಲ್ಲಿಯೇ ಶಿಕ್ಷಣವು ನಡೆಯಬೇಕು. ಎಂಬ ಕಟ್ಟಾದ ನಿಯಮವಿಲ್ಲ.

೨

ಮೂಲೋದ್ಯೋಗವನ್ನು ಶಿಕ್ಷಣದಲ್ಲಿ ಸೇರಿಸುವ ವಿಚಾರವು ಗಾಂಧೀಜಿಯವರಿಂದ ಈ ರೀತಿ ನುಡಿಸಿತು.

೧) ಪ್ರತಿಯೊಂದು ಕೈಕೆಲಸವನ್ನು ಕೇವಲ ಯಾಂತ್ರಿಕವಾಗಿ ಕಲಿಸಬಾರದು. ಶಾಸ್ತ್ರೋಕ್ತವಾಗಿ ಕಲಿಸಬೇಕು.

೨) ಕೇವಲ ಉತ್ಪಾದನೆ ಮಾಡುವ ದೃಷ್ಟಿಯಿಂದಷ್ಟೇ ಕೈಕೆಲಸಗಳನ್ನು ಕಲಿಸಲಾಗದು. ಅವು ಬೌದ್ಧಿಕ ವಿಕಾಸದ ಸಾಧನಗಳೂ ಆಗಬೇಕು.

೩) ಯಾವದೊಂದು ಉದ್ಯೋಗವು ಮಗುವಿನ ಸರ್ವತೋಮುಖ ವಿಕಾಸವನ್ನು ಉಂಟುಮಾಡುವದರಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಅಂತೆಯೇ ಇಡೀ ಅಭ್ಯಾಸಪತ್ರಿಕೆಯು ಒಂದು ಮೂಲೋದ್ಯೋಗದ ಸುತ್ತಲೂ ಹೆಣೆಯಲ್ಪಡಬೇಕು.

೪) ಮಗುವಿನಲ್ಲಿಯ ಸುಪ್ತಚೇತನವನ್ನು ಉದ್ಯೋಗಗಳು ಜಾಗ್ರತಗೊಳಿಸುತ್ತವೆ. ಅಲ್ಲದೆ ಉದ್ಯೋಗವು ಮಗುವಿನ ಮನಸ್ಸನ್ನು ಹಸನಾಗಿಡುತ್ತದೆ.

೫) ನನ್ನ ಯೋಜನೆಯು ಇತರ ವಿಷಯಗಳೊಂದಿಗೆ ಮೂಲೋದ್ಯೋಗವನ್ನು ಕಲಿಸುವದಾಗಿರದೆ ಎಲ್ಲ ವಿಷಯಗಳನ್ನು ಉದ್ಯೋಗದ ಮೂಲಕವೇ ಕಲಿಸಬೇಕೆನ್ನುವದಾಗಿದೆ.

೩

ಉದ್ಯೋಗಪ್ರಿಯ ಗಾಂಧೀಜಿ ಈ ರೀತಿ ಹೇಳಿದರು

೧) ಪ್ರತಿಯೊಬ್ಬ ಮಾನವನು ದಿನಾಲು ಎಂಟು ಗಂಟೆಗಳ ಕಾಲ ದುಡಿಯಬೇಕು. ಅರ್ಥಾತ್ ಯಾವದೊಂದು ಉದ್ಯೋಗವನ್ನು ಮಾಡಬೇಕು.

೨) ನಾವು ದಿನಾಲು ೮ ತಾಸುಗಳ ಶರೀರ ಶ್ರಮವನ್ನು ತೆಗೆದುಕೊಂಡರೆ ನಮ್ಮ ಮನಸ್ಸು ಇಂದಿನಕ್ಕಿಂತ ಎಷ್ಟೋ ಸಾವಿರಪಟ್ಟು ಶುದ್ಧವಿರಬಹುದಾಗಿತ್ತು. ಒಂದಾದರೂ ದುಷ್ಟವಿಚಾರವು ನಮ್ಮ ಮನಸ್ಸಿನಲ್ಲಿ ಸುಳಿಯುತ್ತಿದ್ದಿಲ್ಲ.

೩) ಶರೀರ ಶ್ರಮವಿಲ್ಲದೆ ದೊರೆತಂಥ ಸಂಸ್ಕಾರವು ನಮ್ಮನ್ನು ವಿನಾಶದತ್ತ ಒಯ್ಯುತ್ತದೆ.

೪) ದಿನವಿಡೀ ಓದುತ್ತ, ಬರೆಯುತ್ತ ಅಥವಾ ಭಾಷಣ ಮಾಡುತ್ತ ನಾವು ಯಾವುದೇ ರೀತಿಯಲ್ಲಿ ಮನಸ್ಸಿನ ವಿಕಾಸವನ್ನು ಮಾಡಿಕೊಳ್ಳಲಾರೆವು.

೫) ಶ್ರಮಜೀವಿಗಳಿಗೆ ಸಮಾಜದಲ್ಲಿ ಅತಿ ಕೆಳಗಿನ ಸ್ಥಾನವನ್ನು ಕೊಟ್ಟದ್ದರಿಂದಲೇ ನಾವು ಇನ್ನೂ ಕಲಿಯುಗದಲ್ಲಿದ್ದೇವೆ.

೪

ಚರಖಾಧಾರಿ ಗಾಂಧೀಜಿ ಇಂತು ನುಡಿದರು

೧) ರಾಟೆಯು ನನ್ನ ಮೋಕ್ಷದ ಹಾದಿಯು. ರಾಟೆಯು ನನ್ನ ಕಾಮಧೇನು.

೨) ನೂಲುವ ಕ್ರಿಯೆಯೇ ಉತ್ತಮ ತಪಸ್ಸು, ಯಜ್ಞ ಮತ್ತು ಸಚ್ಚಿಂತನೆ ಅದರಲ್ಲಿಯೇ ಈಶ್ವರನಿದ್ದಾನೆ. ನೂಲಿನ ಪ್ರತಿಯೊಂದು ಎಳೆಯಲ್ಲಿಯೂ ನಾನು ಈಶ್ವರನನ್ನು ಕಾಣುತ್ತೇನೆ.

೩) ಭಾರತೀಯರ ಪ್ರಾಚೀನ ಕಲೆಯು ನಷ್ಟವಾಗುತ್ತಿದೆ. ನೂಲುವ ಕಲೆಯ ಪುನರುದ್ಧಾರದ ಮೇಲೆ ಅಪ್ರಾಚೀನ ಕಲೆಗಳ ಪುನರುದ್ಧಾರವು ಬಹಳೇ ಅವಲಂಬಿತವಾಗಿದೆ.

೪) ಕೇವಲ ಒಂದು ಉತ್ಪನ್ನದ ದೃಷ್ಟಿಯಿಂದಲೇ ನೂಲಬೇಕು ಎಂಬ ವಿಚಾರ ತಪ್ಪು. ಬಡವನೇ ಇರಲಿ, ಶ್ರೀಮಂತನೇ ಇರಲಿ ಸೂತ್ರಯಜ್ಞದಲಿ ಭಾಗವಹಿಸಬೇಕು.

೫) ಚಿಕ್ಕಂದಿನಿಂದಲೂ ನೂಲುವದನ್ನು ನೀವು ಮಾಡಿದ್ದಾದರೆ ನಿಮ್ಮಲ್ಲಿ ಪರೋಪಕಾರ ಮಾಡುವ ಬುದ್ಧಿಯು ತಾನಾಗಿಯೇ ಬರುತ್ತದೆ.

೬) ದಿನಾಲು ನಿಯಮಿತತನದಿಂದ ನೂತದ್ದಾದರೆ ಜೀವನದ ಇನ್ನಿತರ ಕ್ಷೇತ್ರದಲ್ಲಿಯೂ ಸಹ ನಿಯಮಿತತನವು ತಾನಾಗಿಯೇ ಬರುತ್ತದೆ.

೭) ಹಸ್ತಕಲಾಕೌಶಲ್ಯವು ಇದರಿಂದಲೇ ಬೆಳೆಯುವದು. ಅರೆಯುವದು, ಹಿಂಜುವದು, ಹಂಜಿ ಹಾಕುವದು, ನೂಲುವದು, ಸುತ್ತುವದು ಈ ಕ್ರಿಯೆಗಳು ಹಸ್ತಕೌಶಲ್ಯವಿಲ್ಲದೇ ಆಗಲಾರವು.

೮) ನಿಮಗೆ ಯಂತ್ರಗಳ ಸಾಮಾನ್ಯ ಜ್ಞಾನವು ಬರುವದು.

೯) ಈ ಕ್ರಿಯೆಯಲ್ಲಿಯ ಎಲ್ಲ ಉಪಕೃತಿಗಳನ್ನು ನೀವೇ ಸ್ವತಃ ಮಾಡಬೇಕು. ಉದಾಹರಣೆ:— ರಾಟೆ ಸ್ವಚ್ಛ ಮಾಡುವದು, ದುರಸ್ತಿ ಮಾಡುವದು, ಹಂಜಿ ಹಾಕುವದು ಇಂಥ ಕೆಲಸಗಳನ್ನು ಬೇರೆಯವರಿಂದ ಮಾಡಿಸಿಕೊಳ್ಳಬೇಡಿರಿ.

೧೦) ನಿಮಗೆ ರಾಟೆಯ ಮೇಲೆ ಶ್ರದ್ಧೆ ಇಲ್ಲದಿದ್ದರೆ ನೀವು ರಾಟೆಯನ್ನು ಸ್ವೀಕರಿಸಬೇಡಿರಿ. ರಾಟೆಯನ್ನು ಅಲ್ಲಗಳೆದರೆ ನೀವು ದರಿದ್ರ ನಾರಾಯಣನ ಸೇವೆಯನ್ನೂ ಸಹ ಅಲ್ಲಗಳೆದಂತಾಗುವದು.

೫

ಖಾದಿಯ ಬಗ್ಗೆ ಮಹಾತ್ಮಾಜಿಯವರು ಈ ರೀತಿ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ

೧) ಖಾದಿ ಕೇವಲ ಆರ್ಥಿಕ ದೃಷ್ಟಿಯಿಂದಷ್ಟೇ ಅಲ್ಲ, ವೈಜ್ಞಾನಿಕ ಮತ್ತು ಸಾಹಿತ್ಯಿಕ ದೃಷ್ಟಿಯಿಂದಲೂ ಲಾಭದಾಯಕವಾಗಿದೆ.

೨) ಇಡೀ ಭಾರತದಲ್ಲಿ ಹಬ್ಬಿದ ಮೈಗಳ್ಳತನ, ನಿರುದ್ಯೋಗ ಸಮಸ್ಯೆ ಮತ್ತು ಅವುಗಳ ಪರಿಣಾಮ ಸ್ವರೂಪವಾದ ಬಡತನದ ಬೇಗೆಯನ್ನು ಹಿಂಗಿಸುವ ಶಕ್ತಿ ಖಾದಿಯಲ್ಲಿದೆ.

೩) ಖಾದಿಯು ದೇಶದಲ್ಲಿಯ ಶ್ರೀಮಂತ ಮತ್ತು ಬಡ ಜನರಲ್ಲಿಯ ಭೇದವನ್ನು ಕಡಿಮೆ ಮಾಡುತ್ತದೆ.

೪) ಖಾದಿಯಲ್ಲಿರುವ ಈ ಶಕ್ತಿಯನ್ನು ನೀವು ಪ್ರಾಮಾಣಿಕತೆಯಿಂದ ಒಪ್ಪಿಕೊಳ್ಳಬೇಕು.

೫) ಖಾದಿಯಲ್ಲಿ ಯಾವನು ವಿಶ್ವಾಸವಿಡುವನೋ ಅವನು ಖಾದಿಗೆ ಸಂಬಂಧಿಸಿದ ಕ್ರಿಯೆಗಳ ಜ್ಞಾನ, ಪದ್ಧತಿ ಮತ್ತು ವೈಜ್ಞಾನಿಕ ತತ್ವಗಳನ್ನು ಮನಃಪೂರ್ವಕವಾಗಿ ಅಭ್ಯಸಿಸುವನು.

೬) "ಗಾಂಧೀಜಿಯ ಆಜ್ಞೆಯಾಗಿದೆ ನೀವು ಖಾದಿಯಲ್ಲಿ ವಿಶ್ವಾಸವಿಡಿರಿ." ಎಂದು ಮಕ್ಕಳಿಗೆ ಹೇಳಬೇಡಿರಿ. ಖಾದಿ ಮಹತ್ವವನ್ನು ಅವರಿಗೆ ಒಮ್ಮೆ ತಿಳಿಸಿಕೊಡಿರಿ. ಆಗ ಸ್ವತಃ ನಾನು ಮಹಾತ್ಮನಿಂದ ಅಲ್ಪಾತ್ಮ ಪದವಿಗೆ ಇಳಿದರೂ ಮಕ್ಕಳು ಖಾದಿಯನ್ನು ತಯಾರಿಸುವದನ್ನು ಬಿಡಲಾರರು.

೬

ಬೌದ್ಧಿಕ ವಿಕಾಸದ ಬಗ್ಗೆ ಗಾಂಧೀಜಿಯವರ ಹೇಳಿಕೆಗಳು

೧) ಕೈ, ಕಾಲು, ಕಿವಿ ಹಾಗೂ ಕಣ್ಣು ಮುಂತಾದ ಅವಯವಗಳ ಸರಿಯಾದ ಉಪಯೋಗವನ್ನು ತಕ್ಕೊಳ್ಳುವ ಸಾಮರ್ಥ್ಯವೇ ನಿಜವಾಗಿ ಬೌದ್ಧಿಕ ವಿಕಾಸವನ್ನು ಮಾಡುತ್ತದೆ.

೨) ಪರಮಾರ್ಥ ವೃತ್ತಿ (ಬೇರೆಯವರ ಹಿತಕ್ಕೋಸ್ಕರ ಮಾಡುವ ಉದ್ಯೋಗ) ಯ ಸಂಬಂಧವು ಹೃದಯ ಅಥವಾ ಆತ್ಮದ ಸಂಗಡವಿರುತ್ತದೆ. ಬೌದ್ಧಿಕ ವಿಕಾಸವಾಗಬೇಕಾದರೆ ಶರೀರ ಮತ್ತು ಆತ್ಮಗಳ ಸಮನ್ವಿತ ವಿಕಾಸವಾಗುವದು ಅನಿವಾರ್ಯವಾಗಿರುತ್ತದೆ.

೩) ಪ್ರಚಲಿತ ಶಿಕ್ಷಣದಲ್ಲಿ ಬೌದ್ಧಿಕ ವಿಕಾಸದ ಸಂಬಂಧವನ್ನು ಶಾರೀರಿಕ ವಿಕಾಸದೊಡನೆ ಇಟ್ಟುಕೊಂಡಿಲ್ಲ. ಅಂತೆಯೇ ಶಿಕ್ಷಿತ ಜನರು ಶರೀರ ಶ್ರಮಕ್ಕೆ ಹೆದರುತ್ತಾರೆ. ಹಾಗೂ ಗ್ರಾಮಜೀವಿಗಳನ್ನು ಹೀನ ದೃಷ್ಟಿಯಿಂದ ನೋಡುತ್ತಾರೆ.

೪) ಚಿಕ್ಕಂದಿನಲ್ಲಿಯೇ ಬಾಲಕರ ಹೃದಯದ ವೃತ್ತಿಗಳಿಗೆ ಯೋಗ್ಯ ಚಾಲನೆ ಸಿಕ್ಕಿದ್ದಾದರೆ ಅವರನ್ನು ಒಕ್ಕಲುತನ, ನೆಯಿಗೆ ಇತ್ಯಾದಿ ಉಪಯುಕ್ತ ಕೆಲಸಗಳಿಗೆ ಹಚ್ಚಿದ್ದಾದರೆ ಆ ಉದ್ಯೋಗಗಳ ಬಗ್ಗೆ ಸಂಪೂರ್ಣ ಜ್ಞಾನವನ್ನು ಅವರಿಗೆ ಮಾಡಿಕೊಟ್ಟದ್ದಾದರೆ ಅವರ ಬುದ್ಧಿಯು ತಾನಾಗಿಯೇ ವಿಕಸಿತವಾಗುವದು.

೭

ಶಾಲೆಗಳಲ್ಲಿ ಮಕ್ಕಳಿಗೆ ಕೊಡುವ ಶಿಕ್ಷೆಗಳನ್ನು ಗಾಂಧೀಜಿಯವರು ಈ ರೀತಿ ತಿಳಿದರು

೧) ನನ್ನ ಅಭಿಪ್ರಾಯವೆಂದರೆ ಮಕ್ಕಳಿಗೆ ಯಾವದೇ ತರಹದ ದಂಡ ಅಥವಾ ಶಿಕ್ಷೆವಿಧಿಸುವುದು ಶುದ್ಧ ತಪ್ಪು.

೨) ಶಿಕ್ಷೆಗಳಿಂದ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ನಡುವೆ ಇರಬೇಕಾದ ಪ್ರೇಮಮಯ ಸಂಬಂಧಕ್ಕೆ ಧಕ್ಕೆ ಬರುತ್ತದೆ.

೩) ಹುಡುಗರನ್ನು ಹೊಡೆಯುವ ಪ್ರಸಂಗ ಬಂದದ್ದಾದರೆ ಶಿಕ್ಷಕನ ಶಿಕ್ಷಣ ಕಲೆಯಲ್ಲಿ ಏನೋ ದೋಷವಾಗಿದೆಯೆಂದು ತಿಳಿಯಬೇಕು.

೪) ಕಠಿಣ ಶಿಕ್ಷೆಗಳನ್ನಷ್ಟೇ ಅಲ್ಲ, ಎದ್ದು ನಿಲ್ಲಿಸುವುದು, ಊಟಾಬಸಿ ತೆಗೆಯಿಸುವದು, ಕಿವಿಹಿಂಡುವದು,ಬೈಯ್ಯುವದು, ಇಂಥ ಸಣ್ಣ ಶಿಕ್ಷೆಗಳನ್ನೂ ಸಹಿತ ಶಿಕ್ಷಕರು ಉಪಯೋಗಮಾಡಬಾರದು.

೫) ಮಕ್ಕಳಿಗೆ ಶಿಕ್ಷೆ ಕೊಟ್ಟು ಅನಂತರ ಪಶ್ಚಾತ್ತಾಪ ಪಟ್ಟುಕೊಂಡರೆ ಶಿಕ್ಷಕನು ಪಾಪಮುಕ್ತನಾಗಲಾರನು.

೬) ಶಿಕ್ಷೆ ಅಥವಾ ಹಿಂಸೆಯಿಂದಲೇ ಸುಧಾರಣೆಯಾಗುವದೆಂಬ ಭಾವನೆಯು ಶಿಕ್ಷಕರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಇದ್ದರೆ ಕೊನೆಗೆ ಹಿಂಸೆಯು ಸಮಾಜದಲ್ಲಿಯೂ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುವದು.

೭) ತಿಳಿದೂ ತಿಳಿದೂ ಶಿಕ್ಷೆಗಳನ್ನು ಉಪಯೋಗಿಸುವ ಶಿಕ್ಷಕನು ತನ್ನ ಪ್ರತಿಜ್ಞೆಯನ್ನು ಭಂಗಗೊಳಿಸುತ್ತಾನೆ.

೮

ಸ್ವಾವಲಂಬಿ ಶಿಕ್ಷಣದ ಬಗ್ಗೆ ಗಾಂಧೀ ವಾಣಿ

೧) ಶಿಕ್ಷಣವು ಸ್ವಾವಲಂಬಿ ಜನರನ್ನು ತಯಾರಿಸಬೇಕು. ಅಲ್ಲದೇ ಸ್ವತಃ ಶಿಕ್ಷಣವೇ ಸ್ವಾವಲಂಬಿಯಾಗಿರಬೇಕು.

೨) ೧೪ ವರ್ಷ ವಯಸ್ಸಿನ ವರೆಗೆ ಕಲಿತಂಥ ಹುಡುಗನೊಬ್ಬನು ತನ್ನ ಜೀವನ ನಿರ್ವಹಣೆಗೆ ಸಾಕಾಗು ವಷ್ಟು ಗಳಿಸುವ ಶಕ್ತಿಯುಳ್ಳವನಾಗಬೇಕು.

೩) ಭಾರತದ ಹಳ್ಳಿಗಳಿಗೆ ಒಗ್ಗುವ ಒಂದೇ ಒಂದು ತರಹದ ಶಿಕ್ಷಣದ ಪದ್ಧತಿಯೆಂದರೆ ಉತ್ಪಾದಕ ಉದ್ಯೋಗದ ಮೂಲಕ ಶಿಕ್ಷಣ ಸಾಗಿಸುವದು.

೪) ಉತ್ಪಾದಕ ಉದ್ಯೋಗವುಳ್ಳ ಶಾಲೆಗಳಲ್ಲಿ ಹುಡುಗರು ಸಶಕ್ತರಾಗಿಯೂ, ಸಂತೋಷಭರಿತರಾಗಿಯೂ ಕಂಡು ಬರುತ್ತಾರೆ. ಯಾಕೆಂದರೆ ತಾವು ಒಂದು ಉತ್ತಮ ಕೆಲಸ ಮಾಡುತ್ತೇವೆಂಬ ಸ್ವಾಭಿಮಾನವು ಅವ ರನ್ನು ಹಾಗೆ ಮಾಡಿಸುತ್ತದೆ.

೯
ಸತ್ಯ-ಅಹಿಂಸೆ ಗಾಂಧೀಜಿಯವರ ಅಸ್ತ್ರಗಳು

೧) ನಮ್ಮಲ್ಲಿ ಜಾತೀಯತೆಗೆ ಸಂಬಂಧಿಸಿದ ಬಡೆ ದಾಟಗಳಿವೆ. ನಮ್ಮ ದೇಶದಲ್ಲಷ್ಟೇ ಅಲ್ಲ, ಎಲ್ಲ ದೇಶ ಗಳಲ್ಲಿಯೂ ಅವೆ. ಈ ಬಡೆದಾಟವನ್ನು ನಿರ್ಮೂಲಗೊಳಿಸ ಬೇಕಾದರೆ ಅಹಿಂಸೆಯ ತಳಹದಿಯ ಮೇಲೆ ನಿರ್ಮಿತವಾದ ಶಿಕ್ಷಣದಲ್ಲಿ ಸಣ್ಣ ಮಕ್ಕಳನ್ನು ತರಬೇತಿಗೊಳಿಸಬೇಕು.

೨) ಸತ್ಯವೇ ನನ್ನ ದೇವರು. ಆ ದೇವರನ್ನೇ ನಾನು ಆರಾಧಿಸುವುದು.

೩) ಈ ಜಗತ್ತು ಸತ್ಯದ ಗಟ್ಟಿಮುಟ್ಟಾದ ತಳ ಹದಿಯ ಮೇಲೆ ನಿಂತಿದೆ. ಅಸತ್ಯವೆಂದರೆ ಅನಸ್ತಿತ್ವ. ಸತ್ಯವೆಂದರೆ ಅವಿನಾಶತ್ವ.

೪) ಸತ್ಯವನ್ನೇ ದೇವರೆಂದು ನಾನು ಪೂಜಿಸು ತ್ತೇನೆ. ನಾನಿನ್ನೂ ದೇವರನ್ನು ಹುಡುಕಿಲ್ಲ. ಆದರೆ ಹುಡುಕುತ್ತಿದ್ದೇನೆ.

೫) ವೈರತ್ವ ಮತ್ತು ಹಿಂಸೆಯನ್ನು ಪ್ರೇಮ ಮತ್ತು ಅಹಿಂಸೆಯಿಂದಲೇ ಜಯಿಸಬೇಕು.

೬) ನನ್ನ ಅಹಿಂಸೆಯು ನಿಶ್ಶಕ್ತಿಯ ಮೂಲಕ ಹುಟ್ಟಿಲ್ಲ. ಅದು ನೈತಿಕ ಬಲದ ಮೂಲಕ ಹುಟ್ಟಿ ಕೊಂಡಿದೆ.

೧೦
ಪಠ್ಯಪುಸ್ತಕಗಳನ್ನು ಕುರಿತು ಗಾಂಧೀಜಿಯವರ ವಿಚಾರಗಳು

೧) ಶಾಲೆಯಲ್ಲಿಯ ಪಠ್ಯಪುಸ್ತಕಗಳು ವಿಶೇಷ ವಾಗಿ ಚಿಕ್ಕಮಕ್ಕಳ ಸಲುವಾಗಿ ಇದ್ದಂಥ ಪುಸ್ತಕಗಳು ಹಾನಿಕರವಿಲ್ಲದಿದ್ದರೂ ಸಾಕಷ್ಟು ಕೊರತೆಗಳಿಂದ ತುಂಬಿರುತ್ತವೆ.

೨) ಪಠ್ಯಪುಸ್ತಕಗಳು ಶಿಕ್ಷಕರಿಗೆ ಅವಶ್ಯವಿದ್ದರೂ ಮಕ್ಕಳ ದೃಷ್ಟಿಯಿಂದ ಅವಕ್ಕೆ ಅಷ್ಟು ಅವಶ್ಯಕತೆ ಇರುವದಿಲ್ಲ.

೩) ಪಠ್ಯಪುಸ್ತಕಗಳು ಇದ್ದರೂ ಸಹ ಮಕ್ಕಳಿಗೆ ಉತ್ತಮವಾಗಿ ಕಲಿಸಬೇಕೆಂಬ ವಿಚಾರವು ಶಿಕ್ಷಕನಲ್ಲಿದ್ದರೆ ಮಕ್ಕಳ ಅವಶ್ಯಕತೆಗನುಸಾರವಾಗಿ ಶಿಕ್ಷಕನು ದಿನಾಲು ಪಾಠಗಳ ರಚನೆಯನ್ನು ಮಾಡಿಕೊಳ್ಳಲೇಬೇಕು.

ಈರೀತಿ ಭಾರತದ ಪಿತಾಮಹ, ಅಮರ ಜ್ಯೋತಿ ಮಹಾತ್ಮಾ ಗಾಂಧೀಜಿಯವರು ಶಿಕ್ಷಣದ ಬಗ್ಗೆ ನಾನಾ ಮುಖಗಳ ಕುರಿತು ತಮ್ಮ ಅತ್ಯಮೂಲ್ಯ ವಿಚಾರಗಳನ್ನು ಭಾರತೀಯರೆದುರಿಗೆ ಇಟ್ಟರು. ಅಲ್ಲದೇ ಭಾರತೀಯ ಪರಿಸ್ಥಿತಿಗೆ ಅನುಕೂಲವಾಗುವಂತಹ ಅದಕ್ಕೆ ಹೊಂದಿ ಕೊಳ್ಳುವಂತಹ ಶಿಕ್ಷಣವು ಮೂಲಶಿಕ್ಷಣವೇ ಎಂದು ತಮ್ಮ ಖಚಿತವಾದ ಅಭಿಪ್ರಾಯವನ್ನು ಕೊಟ್ಟರು. ಈ ತೆರನಾಗಿ ಮೂಲಶಿಕ್ಷಣದ ವಿಚಾರವು ಅವರ ತಲೆಯಲ್ಲಿ ಹೇಗೆ ಸುಳಿಯಿತು ಎಂಬುದನ್ನು ನಾವು ಕೂಲಂಕಷವಾಗಿ ತಿಳಿದುಕೊಳ್ಳಬೇಕು. ಅವರು ಯಾವ ವಿಷಯವನ್ನೇ ಆಗಲಿ ಆಳವಾಗಿ ಅಭ್ಯಾಸಮಾಡಿಕೊಂಡು ಅವಿರತ ಶ್ರಮವಹಿಸಿ ಅದರ ಅನುಭವಗಳನ್ನು ಉಂಡು ಅದರ ಸಾರವನ್ನು ಜನತೆಯ ಮುಂದೆ ಜನಹಿತಕ್ಕಾಗಿ ಇಡುತ್ತಿದ್ದರು. ಬ್ರಿಟಿಶರ ಆಗಮನಕ್ಕಿಂತ ಮೊದಲು ಇದ್ದ ಭಾರತೀಯ ಸಂಸ್ಕೃತಿಯ ಬಗೆಗೆ ಅವರು ವಿವರವಾದ ಅಭ್ಯಾಸವನ್ನು ಮಾಡಿಕೊಂಡಿದ್ದರು. ಭಾರತೀಯ ಸಂಸ್ಕೃತಿಯಲ್ಲಿ ಸಣ್ಣ ಸಣ್ಣ ಗೃಹೋದ್ಯೋಗಗಳ ಮಹತ್ವದ ಪಾತ್ರವನ್ನು ಅವರು ಮನಗಂಡಿದ್ದರು. ಗೃಹೋದ್ಯೋಗಗಳೇ ಜನತೆಯಲ್ಲಿ ಸ್ವಾವಲಂಬತನ, ಸ್ವಾಭಿಮಾನ, ಸಮಾನತೆಯನ್ನು ತಂದುಕೊಡುತ್ತವೆಂಬ ವಿಶ್ವಾಸ ಅವರಲ್ಲಿದ್ದಿತು.

ಬ್ರಿಟಿಶರು ಮೊಟ್ಟ-ಮೊದಲು ರಾಜ್ಯದಾಡಳಿತೆ ಪ್ರಾರಂಭಿಸಿದೊಡನೆ ಇಲ್ಲಿಯ ಶಿಕ್ಷಣದಲ್ಲಿ ಕೈಹಾಕಿದರು. ಆ ಶಿಕ್ಷಣದ ತತ್ವ ಪ್ರಣಾಲಿಯನ್ನೇ ತಮ್ಮ ಹಿತಕ್ಕೋಸ್ಕರ ಬದಲಾಯಿಸಿಬಿಟ್ಟರು. ಭಾರತೀಯರು ಹೆಸರಿಗೆ ಶಿಕ್ಷಿತರಾಗಬೇಕು. ಆದರೆ ಶಿಕ್ಷಣ ಪಡೆದ ಭಾರತೀಯರಲ್ಲಿ ರಾಷ್ಟ್ರೀಯತೆ, ಶ್ರಮಗೌರವ, ಸ್ವಜನ ಪ್ರೇಮ ಇರಬಾರದು. ಈರೀತಿ ದ್ವಿಮುಖ ಉದ್ದೇಶಗಳನ್ನು ಇಟ್ಟುಕೊಂಡು ಶಿಕ್ಷಣದ ಕ್ರಮವನ್ನು ಜಾರಿಯಲ್ಲಿ ತಂದರು. ಅವರ ರೀತಿ ನೀತಿ ಹಾಗೂ ಇರುವಿಕೆಗಳನ್ನು ಕಂಡು ಅವರಿಗೆ ಮಾರು ಹೋದ ಭಾರತೀಯರು ಅವರು ಹಾಕಿಕೊಟ್ಟ ಶಿಕ್ಷಣ ಪದ್ಧತಿಯೇ ತಮ್ಮ ಸ್ವರ್ಗದ ಹಾದಿಯೆಂದು ತಿಳಿದು ಅದನ್ನನುಸರಿಸಿದರು. ಯಾಕೆಂದರೆ ಶಿಕ್ಷಣ ಹೊಂದಿದವರಿಗೆ ದೊಡ್ಡ ದೊಡ್ಡ ನೌಕರಿಗಳನ್ನು ದಯಪಾಲಿಸಿ ಸಮಾಜದಲ್ಲಿಯ ಉಚ್ಚ ವರ್ಗದಲ್ಲಿ ಅವರು ಇಡಲ್ಪಡುತ್ತಿದ್ದರು. ಅಲ್ಲದೇ ಬ್ರಿಟಿಶರು, ಮಾಡಿದ ಇನ್ನೊಂದು ಗಮನೀಯ ಕಾರ್ಯವೆಂದರೆ ಭಾರತದಲ್ಲಿ ದೊಡ್ಡ ಯಂತ್ರಗಳನ್ನು ತಂದು ಅವುಗಳ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಹುಟ್ಟುವಳಿಯನ್ನು ಪ್ರಾರಂಭಿಸಿದ್ದು ಇದು ನೇರವಾಗಿ ಭಾರತೀಯ ಸಂಸ್ಕೃತಿಯ ಬೆನ್ನೆಲುಬಾದ ಗೃಹೋದ್ಯೋಗಗಳಿಗೆ ಧಕ್ಕೆ ತಂದುಕೊಟ್ಟಿತು. ಗೃಹೋದ್ಯೋಗಗಳು ಕ್ರಮೇಣ ನಶಿಸತೊಡಗಿದವು. ಹಳ್ಳಿಯ ಜೀವನ ಹಳ್ಳಿಗರಿಗೇ ಬೇಸರವಾಗಿ ಅವರು ನಗರಾಭಿಮುಖರಾದರು. ಭಾರತೀಯ ಹಳ್ಳಿಗಳು ದುರ್ಬಲವಾದವು.ಇದುವೇ ಬ್ರಿಟಿಶರು ಬಯಿಸಿದ ಪರಿಸ್ಥಿತಿ. ಬ್ರಿಟಿಶರಿಗೆ ಮಾರುಹೋದ ಪ್ರತಿಯೊಬ್ಬ ಭಾರತೀಯನು ಇದನ್ನೂ ಕೂಡ ಬ್ರಿಟಿಶರ ಒಂದು ಉತ್ತಮ ಕಾಣಿಕೆ ಎಂದೆಣಿಸತೊಡಗಿದನು. ಸಮಾಜದ ರೂಪ ವಿಕೃತರೂಪವಾಯಿತು. ಸಮಾಜದಲ್ಲಿ ವರ್ಗಗಳೆದ್ದು ದೊಡ್ಡ ಬಿರುದುಗಳು ಉಂಟಾದವು. ಒಟ್ಟಿಗೆ ತಮ್ಮ ಆಳಿಕೆಯನ್ನು ಸ್ಥಿರವಾಗಿಡಲು ಎಷ್ಟರಮಟ್ಟಿಗೆ ಭಾರತದ ಭೂಮಿಯನ್ನು ಹದಗೊಳಿಸಬೇಕೋ ಅಷ್ಟರಮಟ್ಟಿಗೆ ಬ್ರಿಟಿಶರು ಹದಗೊಳಿಸಿದರು.

ಇದನ್ನು ಸೂಕ್ಷ್ಮವಾಗಿ ಹೊರ, ಒಳನೋಟಗಳಿಂದ ಕಂಡುಕೊಂಡು ಗಾಂಧೀಜಿ ಹೇಳಿದರು— ಸ್ವರಾಜ್ಯವು ನಮಗೆ ಬೇಕು. ಸ್ವರಾಜ್ಯವು ಬೇಕಾದರೆ ನಮ್ಮ ಜನತೆ ಜಾಗೃತವಾಗಬೇಕು. ಜನತೆ ಜಾಗೃತವಾಗಬೇಕಾದರೆ ಸಣ್ಣ ಮಕ್ಕಳಿರುವಾಗಲೇ ಭಾರತೀಯರಲ್ಲಿ ಜಾಗೃತಿಯನ್ನುಂಟು ಮಾಡಬೇಕು. ಈ ಜಾಗೃತಿಯೇ ಶಿಕ್ಷಣದ ಮೂಲಗುರಿಯಾಗಬೇಕು. ಅಂತೆಯೇ ಗಾಂಧೀಜಿಯವರು ನಮಗೆ ಒಂದು ದೊಡ್ಡ ಸಾಧನವನ್ನು ಕೊಟ್ಟರು; ಅದು ಮೂಲಶಿಕ್ಷಣ.

ಮೂಲಶಿಕ್ಷಣವು ಗಾಂಧೀಜಿಯವರ ವಿಚಾರಗಳನ್ನೇ ತನ್ನ ತತ್ವಪ್ರಣಾಲಿಯನ್ನಾಗಿಟ್ಟುಕೊಂಡಿದೆ. ಮಕ್ಕಳನ್ನು ವಿಷಯ ಪಂಡಿತರನ್ನಾಗಿ ಮಾಡುವದಕ್ಕಿಂತ ಅವರನ್ನು ಉತ್ತಮ ನಾಗರಿಕರನ್ನಾಗಿ ಪರಿವರ್ತಿಸುವದನ್ನೇ ತನ್ನ ಧ್ಯೇಯವನ್ನಾಗಿ ಇಟ್ಟುಕೊಂಡಿದೆ. ಕೇವಲ ಅಕ್ಷರಜ್ಞಾನವನ್ನಷ್ಟೇ ತನ್ನ ಗುರಿಯೆಂದು ತಿಳಿಯದೇ ಮಗುವಿನ ಮುಂದಿನ ಜೀವನಕ್ಕೆ ಅತ್ಯವಶ್ಯವಿದ್ದ ಎಲ್ಲ ಜ್ಞಾನವನ್ನು ಮಗುವಿಗೆ ಮಾಡಿಕೊಡುತ್ತದೆ. ಮೂಲಶಿಕ್ಷಣದಲ್ಲಿ ಚಟುವಟಿಕೆ ಅಥವಾ ಉದ್ಯೋಗದ ಮೂಲಕ ಎಲ್ಲ ಜ್ಞಾನವನ್ನು ಮಾಡಿಕೊಡುತ್ತದೆ. ಈ ಚಟುವಟಿಕೆಗಳಾದರೂ ಮಗುವಿನ ಪರಿಸ್ಥಿತಿಗೆ ಹೊಂದಿಕೊಂಡಿರುತ್ತವೆ. ಜೀವನ ಶಿಕ್ಷಣ ಶಾಲೆಗಳಲ್ಲಿ ಕೇವಲ ಚಟುವಟಿಕೆಗಳು ಮಗುವಿನ ಜೀವನದಲ್ಲಿಯ ಸನ್ನಿವೇಶಗನುಗುಣವಾಗಿದ್ದು ಅವು ಮಕ್ಕಳ ದೈಹಿಕ, ಬೌದ್ಧಿಕ, ನೈತಿಕ ಹಾಗೂ ಸಾಮಾಜಿಕ ವಿಕಾಸಗಳನ್ನು ಮಾಡುವದರಲ್ಲಿ ಬಹಳೇ ಸಹಾಯಕಾರಿಯಾಗುತ್ತವೆಂಬ ಮಾತನ್ನು ಮರೆಯುತ್ತಾರೆ. ಮೂಲಶಿಕ್ಷಣದಲ್ಲಿಯ ಚಟುವಟಿಕೆಗಳು ಕೇವಲ ಚಟುವಟಿಕೆಗಳಿಗಾಗಿ ಅಲ್ಲ. ಆದರೆ ಜೀವನದಲ್ಲಿ ಬಂದ ಸನ್ನಿವೇಶಗಳನ್ನು ಯಶಸ್ವಿಯಾಗಿ ಮಗುವು ಎದುರಿಸಬೇಕು ಎಂಬ ತತ್ವಕ್ಕಾಗಿ ಅವೆ. ಸನ್ನಿವೇಶಗಳನ್ನು ಸಾಮಾನ್ಯವಾಗಿ ಮೂರು ರೀತಿಯಲ್ಲಿ ವರ್ಗೀಕರಣ ಮಾಡಿರುತ್ತಾರೆ. (೧) ನೈಸರ್ಗಿಕ (೨) ಆರ್ಥಿಕ (೩) ಸಾಮಾಜಿಕ. ಆಯಾ ಸನ್ನಿವೇಶದಲ್ಲಿ ಬರುವ ಪ್ರಸಂಗಗಳನ್ನು ಮೊದಲೇ ಯೋಜಿಸಿಕೊಂಡು ಅವುಗಳ ಮೂಲಕ ಬರುವ ಜ್ಞಾನದ ದೃಢೀಕರಣ ಮಾಡುವದಕ್ಕೋಸ್ಕರ ಶಿಕ್ಷಕರು ಸನ್ನದ್ಧರಿರುತ್ತಾರೆ. ಈ ತರದ ಮುನ್ನೋಟವನ್ನೊಳಗೊಂಡಂತೆ ಶಿಕ್ಷಣ ಪದ್ಧತಿಯು ಬೇರೆ ಯಾವದೂ ಇಲ್ಲ ಎಂದರೆ ಅತಿಶಯೋಕ್ತಿಯಾಗಲಾರದು. ಈ ವಿಷಯದಲ್ಲಿ ಗಾಂಧೀಜಿಯವರು ಹೇಳಿದ ಮಾತುಗಳನ್ನು ಮೂಲಶಿಕ್ಷಣವು ಸಂಪೂರ್ಣ ಪರಿಪಾಲಿಸುತ್ತದೆ ಎಂದು ದೃಢವಾಗಿ ಹೇಳಬಹುದು. ಮನೋವಿಜ್ಞಾನವನ್ನು ಈ ಶಿಕ್ಷಣದ ಮೂಲ

(೪೮ನೆಯ ಪುಟಕ್ಕೆ)

ಸಮವಾಯ ಪಾಠ

ಚಟುವಟಿಕೆ: ಕುಂಬಾರನ ಮನೆಗೆ ಭೆಟ್ಟಿ **ವರ್ಗ: ೧.**

(ನೈಸರ್ಗಿಕ) **ವೇಳೆ: ೨ ತಾಸು.**

ಶಿಕ್ಷಕ: ಸೀ. ಗು. ನಾಡಗೀರ, ಅಸಿ. ಮಾ. ಪ್ರಾ. ಸ್ಕೂ. ಗನ್ಡ. ಟಿ. ಸಿ. ಎಸ್. ಧಾರವಾಡ.

ಮೆಟ್ಟಲು	ಆವಶ್ಯಕ ಜ್ಞಾನ	ಕಲಿಸುವ ಕ್ರಮ	ಕ. ಹ. ಉಪಯೋಗ
೧ ಯೋಜನೆ (ಅ) ಪ್ರೇರಣೆ	ಸಾಮಾನ್ಯವಾಗಿ ಅಡಿಗೆಯನ್ನು ತಾಮ್ರ, ಹಿತ್ತಾಳಿ, ಅಲ್ಯುಮಿನಿಯಮ್ ಇತ್ಯಾದಿ ಪಾತ್ರೆಗಳಲ್ಲಿ ಮಾಡುತ್ತಾರೆ. ಬಡವರು ಅಡಿಗೆಯನ್ನು ಮಣ್ಣಿನ ಪಾತ್ರೆಗಳಲ್ಲಿ ಮಾಡುವರು. ಮಣ್ಣಿನ ಪಾತ್ರೆಗಳನ್ನು ಕುಂಬಾರನು ತಯಾರಿಸುವನು. ಗಡಿಗೆ, ಹರವಿ, ಪಣತಿ, ತತ್ರಾಣಿ ಇತ್ಯಾದಿ ತಯಾರಿಸುತ್ತಾನೆ. ಗಡಿಗೆಯಲ್ಲಿ ಅಡಿಗೆ ಮಾಡುತ್ತಾರೆ. ಹರವಿಯಲ್ಲಿ ನೀರು ತುಂಬಿ ಇಡುತ್ತಾರೆ. ದೀಪೋತ್ಸವಕ್ಕಾಗಿ ಪಣತಿ ಉಪಯೋಗಿಸುತ್ತಾರೆ. ಹೊಲಗಳಿಗೆ ಕುಡಿಯುವ ನೀರನ್ನು ತತ್ರಾಣಿಯಲ್ಲಿ ಒಯ್ಯುತ್ತಾರೆ. ಕುಂಬಾರನು ತಯಾರಿಸುವ ಎಲ್ಲ ಸಾಮಾನುಗಳು ನಮಗೆ ಅತ್ಯಂತ ಉಪಯೋಗವಾಗುತ್ತವೆ. ಅವನಿಂದ ನಮಗೆ ಸಹಾಯ ಬಹಳ. ನಮಗಾಗಿ ಅವನು ಸತತ ದುಡಿಯುತ್ತಾನೆ. ಅವನು ಮಾಡತಕ್ಕ ಕೆಲಸವು ಅಗಾಧವಾಗಿದೆ. ಅವನ ಕೆಲಸವನ್ನು ಪ್ರತ್ಯಕ್ಷ ನೋಡಲು ಸಾಧ್ಯವಿದೆ.	ಅಡಿಗಗೆ ಎಂಥ ಪಾತ್ರೆಗಳನ್ನು ಉಪಯೋಗಿಸುವರು? ಬಡವರು ವಿಶೇಷವಾಗಿ ಎಂಥ ಪಾತ್ರೆಗಳನ್ನು ಉಪಯೋಗಿಸುವರು? ಮಣ್ಣಿನ ಪಾತ್ರೆಗಳನ್ನು ಯಾರು ತಯಾರಿಸುವರು? ನಾವು ಯಾವ ಯಾವ ಮಣ್ಣಿನ ಪಾತ್ರೆಗಳನ್ನು ಉಪಯೋಗಿಸುತ್ತೇವೆ? ಗಡಿಗೆಯ ಮುಖ್ಯ ಉಪಯೋಗವೇನು? ಹರವಿಯನ್ನು ಏತಕ್ಕೆ ಉಪಯೋಗಿಸುವರು? ಪಣತಿಯ ಉಪಯೋಗವೇನು? ತತ್ರಾಣಿಯನ್ನು ಏತಕ್ಕೆ ಉಪಯೋಗಿಸುತ್ತಾರೆ. ಇಷ್ಟೆಲ್ಲ ಉಪಯುಕ್ತ ಸಾಮಾನುಗಳನ್ನು ಯಾರು ಒದಗಿಸಿಕೊಡುವರು? ಅವುಗಳನ್ನು ಹೇಗೆ ತಯಾರಿಸುತ್ತಾನೆ? ಅವನು ದುಡಿಯುವ ಕ್ರಮ ಯಾವುದು? ಯಾವ ಸಾಧನಗಳನ್ನು ಉಪಯೋಗಿಸುತ್ತಾನೆ? ಇವೆಲ್ಲವುಗಳನ್ನು ಪ್ರತ್ಯಕ್ಷ ತಿಳಿದುಕೊಳ್ಳಬೇಕಾದರೆ ಏನು ಮಾಡಬೇಕು?	
(ಬ) ಕಾರ್ಯ ನಿರ್ಣಯ	ಹಾಗಾದರೆ ಇಂದು ನಮಗಾಗಿ ದುಡಿಯುತ್ತಿರುವ ಕುಂಬಾರನ ಪ್ರತ್ಯಕ್ಷ ಕೆಲಸವನ್ನು ನೋಡುವದಕ್ಕಾಗಿ ಅವನ ಮನೆಗೆ ಭೆಟ್ಟಿಕೊಡುವಾ.		ಕುಂಬಾರನ ಮನೆಗೆ ಭೆಟ್ಟಿ

ಮೆಟ್ಟಲು	ಆವಶ್ಯಕ ಜ್ಞಾನ	ಕಲಿಸುವ ಕ್ರಮ	ಕ. ಹ. ಉಪಯೋಗ
(ಕ) ಉಪಕ್ರಿಯೆಗಳು	(೧) ಸಮೀಪದ ಕುಂಬಾರನ ಮನೆಗೆ ಹೋಗುವದು.	ಯಾವ ಕುಂಬಾರನ ಮನೆಗೆ ಹೋಗೋಣ?	
	(೨) ಪ್ರತ್ಯಕ್ಷ ಅವನ ಕೆಲಸವನ್ನು ನಿರೀಕ್ಷಿಸುವದು.	ಅಲ್ಲಿಗೆ ಏಕೆ ಹೋಗೋಣ?	
	(ಅ) ಯಾವ ಸಾಧನದಿಂದ ತಯಾರಿಸುವನು ?	ಅಲ್ಲಿ ನೋಡಬೇಕಾದ ಸಂಗತಿಗಳು ಯಾವವು?	
	(ಬ) ಎಂಥ ಸಾಮಾನುಗಳನ್ನು ತಯಾರಿಸುವನು ?	ಅವನ ಜೀವನಕ್ರಮದ ಬಗೆಗೆ ತಿಳಿದುಕೊಳ್ಳಲು ಏನು ಮಾಡಬೇಕು.	
	(ಕ) ಎಷ್ಟು ವೇಗದಿಂದ ತಯಾರಿಸುವನು ?		
	(೩) ಅವಶ್ಯವೆನಿಸಿದಲ್ಲಿ ಅವನ ಸಂಗಡ ಮಾತನಾಡಿ ಅವನ ಜೀವನ ಕ್ರಮ ಅಭ್ಯಸಿಸುವದು.		
	(೪) ತಿರುಗಿ ಸಾಲೆಗೆ ಬರುವದು.		
೨ ಪೂರ್ವ ಸಿದ್ಧತೆ (ಅ) ಸಾಧನ ಸಂಗ್ರಹ (ಬ) ಕಾರ್ಯ ಸಂಘಟನೆ	(೧) ಸಾಲೆಯಿಂದ ಹೊರಗೆ ಹೋಗಬೇಕಾದರೆ ಗುರುಗಳ ಪರವಾನಿಗಿ ಅವಶ್ಯ.	ಸಾಲೆಯಿಂದ ಹೊರಗೆ ಹೋಗಬೇಕಾದರೆ ಯಾರ ಅಪ್ಪಣೆ ಅವಶ್ಯ.	
	(೨) ತಮ್ಮ ತಮ್ಮ ಪಾಟಿ-ಪುಸ್ತಕ ಜತನದಿಂದ ಇಡುವ ವ್ಯವಸ್ಥೆ ಮಾಡಬೇಕು. ಶಕ್ಯವಿದ್ದರೆ ಕೋಣೆಗೆ ಕೀಲಿ ಹಾಕಬೇಕು. ಇಲ್ಲವಾದರೆ ಮೇಲಿನ ವರ್ಗದ ವಿದ್ಯಾರ್ಥಿಗೆ ಕಾಯಲು ಹೇಳಿ ಹೋಗಬೇಕು.	ಪಾಟಿ-ಪುಸ್ತಕಗಳನ್ನು ಎಲ್ಲಿಡಬೇಕು? ಏನು ವ್ಯವಸ್ಥೆ ಮಾಡಬೇಕು?	
	(೩) ಇಬ್ಬರ ಸಾಲಿನಿಂದ ಹೋಗುವದು ಒಳ್ಳೆಯದು. ಶಿಸ್ತು ಕಾಯ್ದುಕೊಳ್ಳುವದಕ್ಕಾಗಿ ವರ್ಗ ಮಂತ್ರಿ ನೋಡಬೇಕು. ಯಾಕಂದರೆ ರಸ್ತೆಯಲ್ಲಿ ಸಾಲು ಹೆಚ್ಚು ಅಗಲ ಇಲ್ಲವೆ ಹೆಚ್ಚು ಉದ್ದ ಇದ್ದರೆ ಅನುಕೂಲವಾಗುವದಿಲ್ಲ.	ಎಷ್ಟು ಸಾಲಿನಿಂದ ಹೋಗೋಣ? ಅಷ್ಟೇ ಏಕೆ? ಶಿಸ್ತನ್ನು ದಾರಿಯಲ್ಲಿ ಯಾರು ಕಾಯ್ದುಕೊಳ್ಳುವಿರಿ? (ಬಹಳಷ್ಟು ವಿದ್ಯಾರ್ಥಿಗಳಿದ್ದಾಗ ೧೦ ಹುಡುಗರಿಗೆ ಒಬ್ಬನಂತೆ ಮುಖಂಡನನ್ನು ಆರಿಸಬೇಕು.)	
	(೪) ರಸ್ತೆಯ ಬಲದಿಂದ ಹೋಗುವದು ಒಳಿತು. ಯಾಕಂದರೆ ವಾಹ	ಹಾದಿಯ ಯಾವ ಬದಿಯಿಂದ ಹೋಗಬೇಕು? ಏಕೆ?	

ಮೆಟ್ಟಲು	ಆವಶ್ಯಕ ಜ್ಞಾನ	ಕಲಿಸುವ ಕ್ರಮ	ಕ. ಹ. ಉಪಯೋಗ
	ನಗಳು ಯಾವಾಗಲೂ ಎಡಗಡೆಯಿಂದ ಹೋಗಬೇಕೆಂಬ ನಿಯಮವಿದೆ. ಎದುರಿಗೆ ಬರುವ ವಾಹನಗಳು ನಮಗೆ ಬಲದಿಂದ ಹೋಗುವದರಿಂದ ಕಾಣುವವು.		
(ಕ) ವೇಳೆಯ ಕಲ್ಪನೆ	(೫) ವೇಳೆಯು ಅಪವ್ಯಯವಾಗಬಾರದೆಂದು ತೀರ ಸಮೀಪದ ಕುಂಬಾರನ ಮನೆಗೆ ಹೋಗಬೇಕು. ಈ ಕುಂಬಾರನ ಮನೆಯು........ ದಿಕ್ಕಿಗಿದೆ. .... ಅಂತರದ ಮೇಲಿದೆ. .... ವೇಳೆ ಹಿಡಿಯುವದು.	ಸಮೀಪದ ಕುಂಬಾರನ ಮನೆಗೆ ಏಕೆ ಹೋಗಬೇಕು ? ಅದು ಯಾವ ದಿಕ್ಕಿಗಿದೆ ? ಎಷ್ಟು ದೂರವಿದೆ ? ಅಲ್ಲಿಗೆ ಹೋಗಲು ಎಷ್ಟು ವೇಳೆ ಹಿಡಿಯಬಹುದು ?	
೩. ಕಾರ್ಯ ನಿರ್ವಹಣೆ (ಅ) ಶಿಕ್ಷಕರ ಮಾದರಿ ಕೃತಿ ಮತ್ತು ನೆನಪಿಡತಕ್ಕ ಸಂಗತಿಗಳು.	(೬) ಕುಂಬಾರನ ಮನೆಯಲ್ಲಿ ೫ ಹುಡುಗರ ಗುಂಪುಗಳ ಪ್ರಕಾರ ನಿರೀಕ್ಷಿಸಬೇಕು. ಇಲ್ಲಿ ನಿರೀಕ್ಷಣೆ ಚಟುವಟಿಕೆ ಇರುವದರಿಂದ ಶಿಕ್ಷಕರ ಮಾದರಿ ಕೃತಿ ಇರುವದಿಲ್ಲ. ಆದರೂ ಮಕ್ಕಳು ನಿರೀಕ್ಷಿಸುವಾಗ ಶಿಕ್ಷಕನು ಪ್ರಶ್ನೆಗಳನ್ನು ಕೇಳುತ್ತ ಶಿಕ್ಷಣಿಕ ಬೆಲೆ ಬಾಳುವ ಸಂಗತಿಗಳ ಕಡೆಗೆ ಮಕ್ಕಳ ಮನಸ್ಸನ್ನು ಎಳೆಯಬೇಕು. ಪ್ರತ್ಯಕ್ಷ ನಿರೀಕ್ಷಣೆಯಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡುವದು. (೭) ಮಣ್ಣಿನ ಸಾಮಾನುಗಳಿಗೆ ಕೈ ಹಚ್ಚಬಾರದು. (೮) ಅಲ್ಲಿದ್ದ ಎಲ್ಲ ಸಾಮಾನುಗಳ ಹೆಸರು ಮತ್ತು ಉಪಯೋಗ ಕೇಳಿ ಕೊಳ್ಳಬೇಕು.	ಎಷ್ಟರ ಗುಂಪಿನಿಂದ ನಿರೀಕ್ಷಿಸೋಣ ? ಅಷ್ಟೇ ಏಕೆ ? ಕುಂಬಾರನ ಮನೆಗೆ ಹೋದಾಗ ಯಾವ ಜಾಗ್ರತೆಯನ್ನು ವಹಿಸಬೇಕು ? ಸಾಮಾನುಗಳಿಗೆ ಏಕೆ ಕೈ ಹಚ್ಚಬಾರದು ?–? ನಿರೀಕ್ಷಣೆ ಕಾರ್ಯದಲ್ಲಿ ಯಾವ ಸಂಗತಿಗಳನ್ನು ಲಕ್ಷ್ಯದಲ್ಲಿಡಬೇಕು ?	

ಮೆಟ್ಟಿಲು	ಆವಶ್ಯಕ ಜ್ಞಾನ	ಕಲಿಸುವ ಕ್ರಮ	ಕ. ಹ. ಉಪಯೋಗ
	(೩) ಕುಂಬಾರನ ಕೆಲಸವನ್ನು ಕುರಿತು– ಆರಲಿನಿಂದ ಗಡಿಗ ತಯಾರಾಗುವ ವರೆಗಿನ ಎಲ್ಲ ಕ್ರಿಯೆಗಳನ್ನು ಕ್ರಮವಾಗಿ ನಿರೀಕ್ಷಿಸುವದು.		
(ಬ) ಬಾಲಕರ ಕೃತಿ	ಪ್ರತ್ಯಕ್ಷ ಬಾಲಕರ ಕೃತಿ ಏನಿಲ್ಲದಿದ್ದರೂ, ನಿರೀಕ್ಷಣೆ ಕಾಲಕ್ಕೆ ಅವರ ಚಟುವಟಿಕೆಯು ಕೆಳಗಿನ ಸಂಗತಿಗಳ ದೃಷ್ಟಿಯಿಂದ ಶೈಕ್ಷಣಿಕವಾಗಿದೆ. (೧) ಕುಂಬಾರನು ಉಪಯೋಗಿಸುವ ಮಣ್ಣಿನ ಪ್ರಕಾರಗಳು. (೨) ಮಣ್ಣನ್ನು ಹದಮಾಡಿಕೊಳ್ಳುವ ರೀತಿ. (೩) ವಿವಿಧ ಮಣ್ಣಿನ ಪಾತ್ರೆಗಳು. (೪) ತಿಗರಿಯ ಆಕಾರ ಹಾಗೂ ತಿರುಗಿಸುವ ರೀತಿ ಅದರ ಉಪಯೋಗ. (೫) ಕುಂಬಾರನು ಶ್ರಮಜೀವಿ. (೬) ಬೇರೆ ಬೇರೆ ಸಾಮಾನುಗಳ ಬೆಲೆಯ ಕಲ್ಪನೆ. (೭) ಮಣ್ಣಿನ ಸಾಮಾನುಗಳನ್ನು ಸುಟ್ಟರೆ ಗಟ್ಟಿಯಾಗುವವು. (೮) ೧ ತಾಸಿಗೆ ಎಷ್ಟು ಸಾಮಾನುಗಳು ಆಗುವವು. (೯) ಕುಂಬಾರನು ಹೊಟ್ಟೆ ತುಂಬಿಕೊಳ್ಳುವ ರೀತಿ.	ಮೇಲ್ಕಾಣಿಸಿದ ಯೋಜನೆ ಪ್ರಕಾರ ಕುಂಬಾರನ ಮನೆಯನ್ನು ನಿರೀಕ್ಷಿಸುವದು. ಆವಶ್ಯಕ ಜ್ಞಾನದಲ್ಲಿ ತೋರಿಸಿದ ವಿಷಯುಗಳನ್ನು ತಿಳಿದುಕೊಳ್ಳುವದಕ್ಕಾಗಿ ನಿರೀಕ್ಷಣೆ ಕಾಲಕ್ಕೆ ಶಿಕ್ಷಕರು ತಕ್ಕ ಸೂಚನೆಗಳನ್ನು ಕೊಡಬೇಕು. ಕೆಲವೊಂದು ಸಲ ಕುಂಬಾರನ ಸಂಗಡ ಈ ಕಾರ್ಯಕ್ಕಾಗಿ ಹೇಗೆ ಚರ್ಚೆ ಮಾಡಬೇಕೆಂಬುದನ್ನು ಶಿಕ್ಷಕರು ಪ್ರತ್ಯಕ್ಷವಾಗಿ ತೋರಿಸಬೇಕು. ಕೆಳಗೆ ಕಾಣಿಸಿದ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಬೇಕು. ಕುಂಬಾರನು ಪಾತ್ರೆಗಳನ್ನು ಏತರಿಂದ ಮಾಡುವನು ? ಉಪಯೋಗಿಸುವ **ಮಣ್ಣಿನ ಪ್ರಕಾರ** ಯಾವುದು ? ಮಣ್ಣನ್ನು ಹೇಗೆ ಹದಗೊಳಿಸುವನು ? **ತಿಗರಿಯ ಉಪಯೋಗವೇನು ?** ಅದು ಯಾವ ಆಕಾರದ್ದು ಇದೆ? **ಯಾವ ದಿಕ್ಕಿನಲ್ಲಿ ತಿರುಗಿಸುವನು ?** ಕುಂಬಾರನು ಎಷ್ಟು ತಾಸು ಕೆಲಸ ಮಾಡುವನು ?	

ಮೆಟ್ಟಲು	ಆವಶ್ಯಕ ಜ್ಞಾನ	ಕಲಿಸುವ ಕ್ರಮ	ಕ. ಹ. ಉಪಯೋಗ
		ಪಾತ್ರೆಗಳು ಚಂದ ಕಾಣುವ ದಕ್ಕಾಗಿ ಏನು ಮಾಡುವನು ? ಮಣ್ಣಿನ ಪಾತ್ರೆ ಒಡೆಯದಂತೆ ಯಾವ ಉಪಾಯ ಮಾಡುವನು ? ಬೇರೆ ಬೇರೆ ಪಾತ್ರೆ, ಪಣತಿ, ಹರಿವೆ, ತತ್ರಾಣಿ, ಗಡಿಗೆಗಳ ಬೆಲೆ ಏನು? ೧ ತಾಸಿಗೆ ತಿಗರಿಯ ಮೇಲೆ ಎಷ್ಟು ಪಣತಿಗಳನ್ನು ತೆಗೆಯುವನು? ಈ ಸಾಮಾನುಗಳನ್ನು ಯಾರಿಗೆ ಮಾರುವನು ? ಅವರು ಸಾಮಾನುಗಳ ಬದಲು ಏನು ಕೊಡುವರು ? ಈ ಸಾಮಾನುಗಳನ್ನು ತೆಗೆದುಕೊಂಡು ಒಕ್ಕಲಿಗನು ಏನು ಕೊಡುವನು ?	
೪ ಪರಿಶೀಲನೆ (ಅ) ಉತ್ತಮ ಕೆಲಸದ ಲಕ್ಷಣಗಳು		ಮೇಲಿನ ಮೆಟ್ಟಲದಲ್ಲಿ ಕಾಣಿಸಿದ ಎಲ್ಲ ವಿವರಗಳನ್ನು ನಿರೀಕ್ಷಿಸುವದೋ ಇಲ್ಲವೋ ಎಂಬುದನ್ನು ಪ್ರಶ್ನೋತ್ತರಗಳ ಸಹಾಯದಿಂದ ತಿಳಿದುಕೊಳ್ಳುವದು. ಅಂಥ ವಿದ್ಯಾರ್ಥಿಗಳಿಗೆ ಪ್ರೋತ್ಸಾಹನೆ ಕೊಡುವದು. ಕೊರತೆಗಳು ಕಂಡು ಬಂದಲ್ಲಿ ಎತ್ತಿ ತೋರಿಸಿ ತಿದ್ದಿಕೊಳ್ಳಲು ಹೇಳುವದು. ಇಂಥ ಕಾರ್ಯವನ್ನು ನಿರೀಕ್ಷಿಸುವಾಗ ಹೇಗೆ ಲಕ್ಷ್ಯಪೂರ್ವಕವಾಗಿ ಇರಬೇಕೆಂಬುದನ್ನು ಎತ್ತಿ ತೋರಿಸುವದು.	
(ಬ) ಕೆಲಸವನ್ನು ನಮೂದಿಸುವದು	(೧) ಮಣ್ಣಿನ ಪಾತ್ರೆಗಾಗಿ ಕೆರೆ ಮಣ್ಣು ಉಪಯೋಗಿಸುವರು.	ಶಿಕ್ಷಕನು ಕುಂಬಾರನು ಮಾಡುವ ಕಾರ್ಯದ ವಿವರವನ್ನು	

ಮೆಟ್ಟಿಲು	ಅವಶ್ಯಕ ಜ್ಞಾನ	ಕಲಿಸುವ ಕ್ರಮ	ಕ. ಹ. ಉಪಯೋಗ
		ಮಕ್ಕಳಿಂದ ಸಣ್ಣ ಸಣ್ಣ ವಾಕ್ಯಗಳಲ್ಲಿ ಹೇಳಿಸುವದು. ಈ ಪಾತ್ರೆಗಳನ್ನು ತಯಾರಿಸುದಕ್ಕಾಗಿ ಮಣ್ಣನ್ನು ಎಲ್ಲಿಂದ ತರುವನು ?	
	(೨) ಪಾತ್ರೆಗಳು ಬಿರಿಯಬಾರದೆಂದು ಮಣ್ಣನ್ನು ಹದಗೊಳಿಸುವನು.	ಪಾತ್ರೆಗಳು ಬಿರಿಯಬಾರದೆಂದು ಯಾವ ಉಪಾಯ ಕೈಕೊಂಡಿದ್ದಾನೆ ?	
	(೩) ಹದಗೊಳಿಸಿದ ಮಣ್ಣನ್ನು ತಿಗರಿಯ ಮೇಲೆ ಇಡುವನು.	ತರತರದ ಪಾತ್ರೆಗಳನ್ನು ತಯಾರಿಸುವದಕ್ಕಾಗಿ ಯಾವ ಸಾಧನ ಉಪಯೋಗಿಸಿದ್ದಾನೆ ?	
	(೪) ತಿಗರಿಯನ್ನು ಎಡದಿಂದ ಬಲಕ್ಕೆ ತಿರುಗಿಸುವನು.	ತಿಗರಿಯನ್ನು ಯಾವ ಬದಿಯಿಂದ ತಿರುಗಿಸುತ್ತಾನೆ.	
	(೫) ತಿಗರಿ ತಿರಗಿಸುತ್ತ ಬೇಕಾದ ಪಾತ್ರೆಯ ಆಕಾರ ಕೊಡುವನು.	ತಿಗರಿ ತಿರುಗಿಸುತ್ತ ಮತ್ತೇನು ಮಾಡುತ್ತಾನೆ ?	
	(೬) ಪಾತ್ರೆಯನ್ನು ತೀಡುವನು.	ಆ ಮೇಲೆ ಯಾವ ಕೆಲಸ ಮಾಡುತ್ತಾನೆ ?	
	(೭) ಪಾತ್ರೆಯನ್ನು ಒಣಗಿಸುವನು.		
	(೮) ಪಾತ್ರೆಯನ್ನು ಸುಡುವನು.	ಪಾತ್ರೆಗಳು ಗಟ್ಟಿಯಾಗಬೇಕೆಂದು ಏನು ಮಾಡುತ್ತಾನೆ ?	
	(೯) ಪಾತ್ರೆಯನ್ನು ಮಾರುವನು.	ಇಂಥ ಪಾತ್ರೆಗಳನ್ನು ಎಲ್ಲಿಗೆ ಒಯ್ಯುತ್ತಾನೆ ?	
	(೧೦) ಮಾರಿ ಬಂದ ಹಣದಿಂದ ಹೊಟ್ಟೆ ತುಂಬಿಕೊಳ್ಳುವನು,	ಪಾತ್ರೆಗಳನ್ನು ಮಾರಿಬಂದ ಹಣದಿಂದ ಏನು ಮಾಡುತ್ತಾನೆ ?	
೫ ದೃಢೀಕರಣ		ಕುಂಬಾರನು ತಿಗರಿಯ ಮೇಲೆ ಕೆಲಸ ಮಾಡುವ ಒಂದು ಚಿತ್ರವನ್ನು ಮಕ್ಕಳೆದುರಿಗೆ ತೂಗು ಹಾಕಿ ಕೆಳಗಿನ ಪ್ರಶ್ನೆಗಳನ್ನು ಕೇಳುವದು.	ಇವ ಕುಂಬಾರ ಇದು ಕುಂಬಾರನ ತಿಗರಿ. ತಿಗರಿ ಗರಗರ ತಿರುಗುವದು.

ಮೆಟ್ಟಲು	ಅವಶ್ಯಕ ಜ್ಞಾನ	ಕಲಿಸುವ ಕ್ರಮ	ಕ. ಹ. ಉಪಯೋಗ
	ಇವ ಕುಂಬಾರ. ಇದು ಕುಂಬಾರನ ತಿಗರಿ. ತಿಗರಿ ಗರಗರ ತಿರುಗುವದು. ಕುಂಬಾರ ಗಡಿಗೆ ಮಾಡುವನು. ಕುಂಬಾರ ಹರಿವೆ ಮಾಡುವನು. ಕುಂಬಾರ ಪಣತಿ ಮಾಡುವನು. ಕುಂಬಾರ ಜನರಿಗೆ ಬಲುಉಪಯೋಗ.	ಇವನು ಯಾರು ? ಇದು ಏನು (ತಿಗರಿ ತೋರಿಸಿ) ತಿಗರಿ ಹೇಗೆ ತಿರುಗುವದು ? ಗಡಿಗೆ, ಹರಿವೆ, ಪಣತಿ ಒಂದೊಂದಾಗಿ ತೋರಿಸಿ ಇದು ಏನು ? ಕುಂಬಾರನು ಯಾವ ಯಾವ ಸಾಮಾನು ಮಾಡುವನು ? ಕುಂಬಾರನಿಂದ ಯಾರಿಗೆ ಹೆಚ್ಚು ಉಪಯೋಗ ?	ಕುಂಬಾರ ಗಡಿಗೆ ಮಾಡುವನು. ಕುಂಬಾರ ಹರವೆ ಮಾಡುವನು. ಕುಂಬಾರ ಪಣತಿ ಮಾಡವನು. ಕುಂಬಾರನು ಬಡವರಿಗೆ ಆಧಾರ.
	(ಶಿಕ್ಷಕರು ಸಮಂಜಸ ವಿಷಯವನ್ನು ಕುರಿತು ಮೇಲ್ಕಾಣಿಸಿದ ನಮೂನೆಯ ಬೇರೆ ಬೇರೆ ವಾಚನ ಪಾಠಗಳನ್ನು ರಚಿಸಿಕೊಳ್ಳಬಹುದು.) ಅದಕ್ಕನುಗುಣವಾಗುವ ಚಿತ್ರವನ್ನು ಉಪಯೋಗಿಸಬೇಕು.	(ಶಿಕ್ಷಕನು ವಿಷಯದಲ್ಲಿ ತೋರಿಸಿದ ವಾಚನ ಪಾಠವನ್ನು ಮಕ್ಕಳೆದುರು ಇಟ್ಟು ಸ್ಪಷ್ಟವಾಗಿ ಓದುವದು. ಮಕ್ಕಳು ಸಾಮೂಹಿಕವಾಗಿ ಅನುಸರಿಸಲು ಹೇಳುವದು. ಪ್ರತಿಯೊಬ್ಬನನ್ನು ಪಟದ ಎದುರಿಗೆ ನಿಲ್ಲಿಸಿ ಅವನ ಮುಖಂಡತ್ವದಲ್ಲಿ ಸಾಮೂಹಿಕವಾಗಿ ಓದಿಸುವದು. ಮಧ್ಯದಲ್ಲಿ ಕೆಲವು ಶಬ್ದಗಳನ್ನು ತೋರಿಸಲು ಹೇಳುವದು.	
	ನೋಡಿ ಬರೆಹ:— ಗಡಿಗೆ, ಗರಗರ, ಗಣತಿ, ತಿಗರಿ, ಹರಿವೆ, ಕುಂಬಾರ	ಶಿಕ್ಷಕನು ಆವಶ್ಯಕ ಜ್ಞಾನದಲ್ಲಿ ಬರೆದ ಶಬ್ದಗಳ ಪಟವನ್ನು ಮಕ್ಕಳೆದುರು ಇಟ್ಟು, ನೋಡಿ ಬರೆಯಲು ಹೇಳುವದು. ತಪ್ಪುಗಳನ್ನು ತಿದ್ದಿ ಮಾರ್ಗದರ್ಶನ ಮಾಡುವದು.	ಗಡಿಗೆ ಗರಗರ ಪಣತಿ ಹರಿವೆ ತಿಗರಿ ಕುಂಬಾರ

ಇದೇ ಪ್ರಕಾರ ಈ ಪಾಠದಲ್ಲಿ ಬಂದ ಇತರ ವಿಷಯಗಳ ಸೂತ್ರಗಳನ್ನು ಉಪಯೋಗಿಸಿ ಕೆಳಗೆ ಕಾಣಿಸಿದಂತೆ **ಭಾಷೆ, ಗಣಿತ,** ಸಾಮಾನ್ಯ ವಿಜ್ಞಾನ, ಸಮಾಜಶಾಸ್ತ್ರ ವಿಷಯಗಳನ್ನು ಕಲಿಸಬಹುದು.

—: ಸಮನ್ವಿತ ವಿಷಯಗಳು :—

ಭಾಷೆ	ಗಣಿತ	ಸಾಮಾನ್ಯ ವಿಜ್ಞಾನ	ಸಮಾಜ ಶಾಸ್ತ್ರ
೧) ಕುಂಬಾರನ ಕೆಲಸವನ್ನು ಕುರಿತು ಚಿತ್ರ ವಾಚನ.	(೧) ಎಣಿಕೆ ೧ ರಿಂದ ೧೦೦	(೧) ಮಣ್ಣಿನ ಉಪಯೋಗ	(೧) ಜಿಗುಟು ಮಣ್ಣು ದೊರೆಯುವ ಸ್ಥಳ. ಕೆರೆಯ ಕಲ್ಪನೆ.
೨) ಹೊಸ ಶಬ್ದಗಳ ಪರಿಚಯ ಸ್ಪಷ್ಟ ಉಚ್ಚಾರ, ಪಣತಿ, ಹರಿವೆ, ಕುಂಬಾರ, ತತ್ರಾಣಿ, ಕೀ.ವಿ, ಗಡಿಗೆ, ವರ್ತುಲ.	(೨) ವರ್ತುಲದ ಕಲ್ಪನೆ.	(೨) ಮಣ್ಣನ್ನು ಹದಗೊಳಿಸುವ ಪ್ರಕಾರಗಳು.	(೨) ದಿಕ್ಕುಗಳು.
೩) ಕುಂಬಾರನು ಮಾಡುವ ಕಾರ್ಯವನ್ನು ಕ್ರಮವನ್ನು ಕ್ರಮವಾಗಿ ವರ್ಣಿಸುವದು.	(೩) ಗಡಿಗೆ, ಹರಿವೆ, ಪಣತಿಗಳ ಬೆಲೆ. ೧ ಪಣತಿಗೆ ೨ ದುಡ್ಡು ಆದರೆ ೩ ಪಣತಿಗೆಷ್ಟು ೫ ,, ,, ೯ ,, ,, ಇಂಥ ಬಾಯಿಲೆಕ್ಕಗಳು. (೨, ೫ ಮಗ್ಗಿಗಳನ್ನೊಳಗೊಂಡು)	(೩) ಮಣ್ಣನ್ನು ಸುಡುವದರ ಪರಿಣಾಮ.	(೩) ಪಾಟಿ — ಪುಸ್ತಕಗಳನ್ನು ರಕ್ಷಿಸುವ ವಿಧಾನ.
೪) ಗುಣಿತಾಕ್ಷರಗಳನ್ನೊಳಗೊಂಡ ಶಬ್ದಗಳನ್ನು ನೋಡಿ ಬರೆಯುವದು.		(೪) ಜಿಗುಟು ಮಣ್ಣಿನ ಲಕ್ಷಣಗಳು.	(೪) ಪರವಾನಿಗಿ ಪಡೆಯುವ ರೀತಿ.
೫) 'ಕುಂಬಾರ' (ಗದ್ಯಪಾಠ)			(೫) ಕುಂಬಾರನೊಡನೆ ವರ್ತಿಸುವ ರೀತಿ.
			(೬) ಕುಂಬಾರನಿಂದ ಸಮಾಜಕ್ಕಾಗುವ ಸಹಾಯ.
			(೭) ಕುಂಬಾರನ ಜೀವನಕ್ರಮ.
			(೮) ಮಾರ್ಗದಲ್ಲಿ ಪಾಲಿಸುವ ನಿಯಮಗಳು.

ವ್ಯಕ್ತಿತ್ವವನ್ನು ಅರಳಿಸುವದು ಸಾಧ್ಯವಿದೆ

ಪ್ರೌಢ ಶಿಕ್ಷಕರು ಇತ್ತ ಗಮನಿಸಬೇಕು.

ಲೇಖಾಂಕ ೩

ಬರೆದವರು : **ಶ್ರೀ ಅನ್ನದಾನೀಶ್ವರ ವಿರಕ್ತಮಠ,** ಹೆಡ್‌ಮಾಸ್ತರ, ಹಾಯಸ್ಕೂಲ ಮಹಿಳಾ ವಿದ್ಯಾಪೀಠ, ಹುಬ್ಬಳ್ಳಿ.

ಕನ್ನಡ ಸಾಹಿತ್ಯದಲ್ಲಿ ಅದ್ವಿತೀಯ ಪಂಡಿತರಾದ ಶ್ರೀ ನಿಜಗುಣ ಶಿವಯೋಗಿಗಳು ಆದರ್ಶ ಗುರುವಿನಲ್ಲಿ ಈ ಕೆಳಗಿನ ಲಕ್ಷಣಗಳನ್ನು ಕಾಣಬಹುದೆಂದು ಹೇಳಿರುವರು:—

" ಶ್ರೀಗುರುವು ತಾನು ಶಾಂತನಾಗಿದ್ದು ನೀತಿವಂತನಾಗಿರುವನು. ಅವನು ಕಾರುಣ್ಯವುಳ್ಳವನಾಗಿರುವನು. ಮನಸಿಗೆ ಬಂದಂತೆ ನಡೆಯುವುದಿಲ್ಲ. ಮನೋನಿಗ್ರಹವುಳ್ಳವನಿರುವನು. ಅವನು ತತ್ವಪ್ರಿಯನು. ಅವನು ಸಮಯನಿಷ್ಠೆಯುಳ್ಳವನು. ಅವನು ಆತ್ಮಜ್ಞಾನಿಯೂ ಗಂಭೀರನೂ ಇರುವನು."

ಶಾಂತಿಯಿಲ್ಲದ ಶಿಕ್ಷಕನ ವ್ಯಕ್ತಿತ್ವವು ಬೆಳೆಯಲಾರದು. ವಿದ್ಯಾರ್ಥಿಗಳ ಕೂಡ ಶಾಂತಸ್ವಭಾವದಿಂದ ನಡೆಯಬೇಕಾಗುವುದು. ನೀತಿವಂತನಿಲ್ಲದವನು ಬಾಲಕರಲ್ಲಿ ನೀತಿಯ ಮಟ್ಟವನ್ನು ಹೆಚ್ಚಿಸಲಾರನು. ವಿದ್ಯಾರ್ಥಿಗಳ ಮೇಲೆ ಕರುಣೆಯಿರಬೇಕಾಗುವುದು. ಸಹಾನುಭೂತಿಯಿಲ್ಲದವನು ಶಿಕ್ಷಕನಾಗಲಾರನೆಂದು ಮನೋವಿಜ್ಞಾನಿಯಾದ ಡಾ. ಮ್ಯಾಕ್‌ಡೂಗಲ್‌ನು ಹೇಳುವನು. ಶಾಲೆಯಲ್ಲಿ ಬೇರೆ ಬೇರೆ ಸ್ವಭಾವದ ಮಕ್ಕಳಿರುವರು. ಅವರ ಸಮಸ್ಯೆಗಳನ್ನು ಬಿಡಿಸಬೇಕಾಗುತ್ತದೆ. ಆತ್ಮನಿಗ್ರಹಬೇಕು. ಮನೋನಿಗ್ರಹವಿಲ್ಲದಿದ್ದರೆ ಮಕ್ಕಳು ಹೇಳುವ ತಪ್ಪು ಉತ್ತರಗಳನ್ನು ಕೇಳಿ ಶಿಕ್ಷಕನಿಗೆ ಸಿಟ್ಟುಬರುವ ಸಂಭವವಿದೆ. ಶಿಕ್ಷಕನು ತತ್ವಪ್ರಿಯನಿದ್ದರೆ ಅವನ ನೈತಿಕ ವ್ಯಕ್ತಿತ್ವವು ಅರಳಿ ಬಾಲಕರ ನೈತಿಕಮಟ್ಟವು ಹೆಚ್ಚುವುದು. ಯಾವ ಕಾಲಕ್ಕೆ ಏನುಮಾಡಬೇಕೆಂಬ ಸಮಯನಿಷ್ಠೆಯು ಶಿಕ್ಷಕನಲ್ಲಿರಬೇಕು. ಅಂದರೆ ಶಾಲೆಯ ಆಡಳಿತವು ಸುಗಮವಾಗಿ ಸಾಗುವುದೆಂದು ಡಾ. ರಾಯಬರ್ನ ಅವರು ಹೇಳಿದ್ದಾರೆ. ಶಿಕ್ಷಕನು ಅಧ್ಯಾತ್ಮಭಾವನೆಯುಳ್ಳವನಿರಬೇಕು. ಅಂದರೆ ಗಂಭೀರತನವು ಅವನಲ್ಲಿ ನೆಲೆಗೊಳ್ಳುವುದು. ಕೃತ್ರಿಮ ಉಪಾಯಗಳನ್ನು ಅವಲಂಬಿಸಿದರೆ ಗಂಭೀರತನವು ಬರಲಾರದು. ಗಂಭೀರತನವಿಲ್ಲದಿದ್ದರೆ ಶಾಲೆಯಲ್ಲಿ ಶಿಸ್ತು ಉಂಟಾಗಲಾರದು. ಶಿಸ್ತು ಇಲ್ಲದ ಶಾಲೆಯು ಶಿಕ್ಷಣರಂಗದಲ್ಲಿ ಪ್ರಗತಿಯನ್ನುಂಟುಮಾಡಲಾರದು. ಶ್ರೀ ನಿಜಗುಣ ಶಿವಯೋಗಿಗಳು ವ್ಯಕ್ತಿತ್ವವನ್ನು ಅರಳಿಸಿಕೊಳ್ಳುವ ಬಗೆಯನ್ನು ಮೇಲೆ ಮಾರ್ಮಿಕವಾಗಿ ಸೂಚಿಸಿರುವರು. ಪ್ರೌಢ ಶಿಕ್ಷಕರು ವ್ಯಕ್ತಿತ್ವವನ್ನು ಆ ದಾರಿಯಲ್ಲಿ ನಡೆದು ಅರಳಿಸಿಕೊಂಡರೆ ಮಕ್ಕಳ ವ್ಯಕ್ತಿತ್ವವು ಸುಮನೋಹರವಾಗಿ ಬೆಳೆಯಬಲ್ಲುದು. ವ್ಯಕ್ತಿತ್ವ ವಿಕಾಸವೇ ಶಿಕ್ಷಣದ ಗುರಿ ಎಂದು ಸರ್ ಪರ್ಸಿನನ್ ಅವರು ಸಿದ್ಧಮಾಡಿರುವರು.

ವ್ಯಕ್ತಿತ್ವವನ್ನು ಅರಳಿಸಿಕೊಳ್ಳುವ ಬಯಕೆ ಮೊದಲು ಶಿಕ್ಷಕನಲ್ಲಿ ಬೇಕು. ವ್ಯಕ್ತಿತ್ವವನ್ನು ಅರಳಿಸಿಕೊಳ್ಳುವದು ಸಾಧ್ಯವಿದೆಯೆಂಬ ಆತ್ಮವಿಶ್ವಾಸಬೇಕು. ಆಮೇಲೆ ನಿರ್ಧಾರದಿಂದ ಪ್ರಯತ್ನ ಮಾಡಬೇಕು. ಅಮೇರಿಕೆಯ ಮಹಾಪುರುಷ ಬೆಂಜಾಮಿನ್ ಫ್ರ್ಯಾಂಕಲಿನ್- ಅವರು ನಿತ್ಯ ದಿನಚರಿಯ ಸಹಾಯದಿಂದ ತಮ್ಮ ವ್ಯಕ್ತಿತ್ವವನ್ನು ಅರಳಿಸಿಕೊಂಡರು. ಶಿಕ್ಷಕನಿಗೆ ತನ್ನ ಸುಗುಣಗಳ ಪರಿಚಯ ಬೇಕು. ತನ್ನ ದುರ್ಗುಣಗಳ ಪರಿಚಯವೂ ಅವನಿಗಿರಬೇಕು. ತನ್ನ ವಿಶ್ವಾಸದ ಗೆಳೆಯನಿಗೆ ಹೇಳಿರಬೇಕು; ತನ್ನ ದುರ್ಗುಣಗಳನ್ನೂ ಆಗಾಗ ಸಂಭವಿಸುವ ತನ್ನ ತಪ್ಪುಗಳನ್ನೂ ತನಗೆ ತಿಳಿಸೆಂದು. ದಿನಾಲು ಆತ್ಮನಿರೀಕ್ಷಣೆ ಅವಶ್ಯವಾಗಿ ಬೇಕು. ಹೀಗೆ ಅರಿವಿನಿಂದ ವ್ಯಕ್ತಿತ್ವ ಬೆಳೆಸಿಕೊಂಡವನು ಚನ್ನಾಗಿ ಕಲಿಸಬಲ್ಲನು. ಶಿಕ್ಷಕನು ಅನ್ಯರನ್ನು ನಿಂದಿಸುವುದಕ್ಕಿಂತ ಮೊದಲು ತನ್ನ ನಿಂದೆಯನ್ನು ಮಾಡಿಕೊಳ್ಳಲಿಕ್ಕೆ ಕಲಿಯಬೇಕು. ಆತ್ಮಸ್ತುತಿ ಮತ್ತು ಪರನಿಂದೆ- ಇದು ಸಾಮಾನ್ಯ ಮನುಷ್ಯನ ಲಕ್ಷಣ. ಶಿಕ್ಷಕನು ಸಾಮಾನ್ಯ ಮನುಷ್ಯನಲ್ಲವೆಂಬ ಅರಿವು ಮೂಡಿ ಬರಬೇಕು.

ಸೋಮೇಶ್ವರ ಕವಿಯು ಹೇಳಿದಂತೆ ಶಿಕ್ಷಕನು "ಕೆಲವಂ ಬಲ್ಲವರಿಂದ ಕಲಿಯಬೇಕು. ಸುಜ್ಞಾನದಿಂದ ಕೆಲವಂ ನೋಡಬೇಕು. ಕೆಲವಂ ಸಜ್ಜನ ಸಂಗದಿಂದ ಅರಿಯಬೇಕು." ತಾನೇ ಸರ್ವಜ್ಞನೆಂಬ ಭಾವನೆ ತರವಲ್ಲ. ಸರ್ವಜ್ಞನಾದರೂ ಗರ್ವದಿಂದ ಆಗಲಿಲ್ಲ. ಎಲ್ಲರೊಳಗೊಂದೊಂದು ನುಡಿನಡೆಗಲಿತು ವಿದ್ಯೆಯ ಪರ್ವತವೇ ಆದ ಸರ್ವಜ್ಞನು. ಸುಧಾರಿಸಬೇಕೆಂಬ ಇಚ್ಛೆ ಮತ್ತು ನಿರ್ಧಾರಗಳಿದ್ದರೆ ವ್ಯಕ್ತಿತ್ವದ ವಿಕಾಸವು ಸುಲಭಸಾಧ್ಯ. ನುರಿತ, ಅನುಭವಿಕ ಶಿಕ್ಷಕರನ್ನು ನೋಡಬೇಕು. ಅವರು ಹೇಗೆ ಕಲಿಸುವುರೆಂಬುದನ್ನು ನಿರೀಕ್ಷಿಸಬೇಕು. ಅವಶ್ಯವಿದ್ದುದನ್ನು ಅನುಸರಿಸಬೇಕು. ಅನುಭವಿಕ ಶಿಕ್ಷಕನ ಕಲಿಸುವ ಪದ್ಧತಿಗಳು ಅನನುಭವಿಕ ಶಿಕ್ಷಕನ ತಪ್ಪುಗಳಿಗೆ ಕನ್ನಡಿಯಾಗಿ ಪರಿಣಮಿಸಬಹುದು.

ಶಿಕ್ಷಕನು ಹಲವು ಸಮಸ್ಯೆಗಳನ್ನು ಬಿಡಿಸಲೇಬೇಕಾಗುವದು. ಮಕ್ಕಳ ಸಮಸ್ಯೆಗಳು, ಕಲಿಸುವ ಪದ್ಧತಿಗಳ ಸಮಸ್ಯೆಗಳು, ಪಾಲಕರ ಸಮಸ್ಯೆಗಳು, ಹೆಡ್‌ಮಾಸ್ತರ ಮತ್ತು ಇನ್‌ಸ್ಪೆಕ್ಟರರ ಕೂಡ ನಡೆಯುವ ಸಮಸ್ಯೆ—ಹೀಗೆ ಕೆಲವು ಸಮಸ್ಯೆಗಳನ್ನು ಪರಿಹರಿಸಬೇಕಾಗುವದು. ಪೂರ್ವ ತಯಾರಿ ಇಲ್ಲದ ಶಿಕ್ಷಕನ ವ್ಯಕ್ತಿತ್ವವು ಕುಂದುವದು. ವಿಷಯ ಪ್ರಭುತ್ವಬೇಕು. ಜ್ಞಾನದ ದೀಪವು ಸದಾ ಬೆಳಸುತ್ತಿರಬೇಕು. ವಿದ್ಯಾವ್ಯಾಸಂಗವು ಶಿಕ್ಷಕನಿಗೆ ಅವಶ್ಯವಾಗಿ ಬೇಕು. ಬೇರೆ ಬೇರೆ ಸುಜ್ಞಾನಿಗಳ ಗ್ರಂಥಗಳನ್ನು ಮನೆಯಲ್ಲಿ ಓದುತ್ತಿರಬೇಕು.

ಶಿಕ್ಷಕನಲ್ಲಿ ಓದುವ ಅಭಿರುಚಿಯು ಇರಬೇಕು. ಬಿ.ಎ., ಎಂ. ಎ., ಬಿ.ಟಿ., ಆದಕೂಡಲೇ ಓದುವದನ್ನು ಬಿಡಕೂಡದು. ಮನೆಯಲ್ಲಿ ಓದುವದಲ್ಲದೇ ಲಾಯಬ್ರರಿಗಳಿಗೆ ಹೋಗಿ ಓದಬೇಕು.

ಶಿಕ್ಷಕನು ಮಕ್ಕಳ ಕೂಡ ಪ್ರೀತಿಯಿಂದ ನಡೆಯಬೇಕು. ಪ್ರೀತಿಯ ವಾತಾವರಣದಲ್ಲಿ ಮಕ್ಕಳು ಚನ್ನಾಗಿ ಕಲಿಯುವರು. ಸ್ವತಂತ್ರ ಮತ್ತು ಪ್ರೀತಿಯ ವಾತಾವರಣದಲ್ಲಿ ಶಿಕ್ಷಣ ಕಾರ್ಯವು ಯಶಸ್ವಿಯಾಗುವದೆಂದು ರೂಸೋ ಎಂಬ ಶಿಕ್ಷಣ ಸುಧಾರಕನು ಹೇಳಿರುವನು. ವರ್ಗದಲ್ಲಿ ಮಕ್ಕಳನ್ನು ನಿರೀಕ್ಷಿಸುತ್ತಿರಬೇಕು. ಅವರ ಸ್ವಭಾವವನ್ನು ಅರಿಯಬೇಕು. ಆಟದ ಬಯಲಿನಲ್ಲಿ ಮಕ್ಕಳ ಸ್ವಭಾವವು ಚನ್ನಾಗಿ ತಿಳಿಯುವದು. ಅಲ್ಲಿ ನಿರೀಕ್ಷಿಸಬೇಕು. ಮಕ್ಕಳ ಮನೋವಿಜ್ಞಾನವು ಶಿಕ್ಷಕರಿಗೆ ಅವಶ್ಯವಾಗಿರಬೇಕು. ಆಧುನಿಕ ಪದ್ಧತಿಗಳ ಜ್ಞಾನಬೇಕು. ಪ್ರಯೋಗ ಮಾಡಿ ನೋಡುವ ಬುದ್ಧಿ ಬೇಕು.

ಶಿಕ್ಷಕನಿಗೆ ಸಮಾಜವಿಜ್ಞಾನವಿರಬೇಕು. ಮಾನವ ಸ್ವಭಾವದ ಪರಿಚಯವಿರಬೇಕು. ನಾಗರಿಕತನದ ತಿಳುವಳಿಕೆ ಇರಬೇಕು. ಸಮಾಜ ಸೇವೆಯಲ್ಲಿ ಪ್ರಸಂಗೋಚಿತವಾಗಿ ಭಾಗವಹಿಸುವದರಿಂದ ಶಿಕ್ಷಕನ ವ್ಯಕ್ತಿತ್ವವು ವಿಕಸಿತವಾಗುವದು. ಶೀಲಬಲವುಳ್ಳ ಮತ್ತು ಜ್ಞಾನಬಲವುಳ್ಳ ಪುರುಷರನ್ನು ಸಮಾಜದಲ್ಲಿ ಆಗಾಗ ಭೆಟ್ಟಿಯಾಗುತ್ತಿರಬೇಕು. ಅವರ ಸ್ವಭಾವ ನಡೆನುಡಿಗಳನ್ನು ನಿರೀಕ್ಷಿಸುತ್ತಿರಬೇಕು. ಅವರ ಕೂಡ ಸುಮನೋಹರ ಸಂಬಂಧವನ್ನಿಟ್ಟುಕೊಳ್ಳಬೇಕು. ಅವರ ದೊಡ್ಡ ಮನಸ್ಸನ್ನೂ ಬುದ್ಧಿಯ ವಿಶಾಲತೆಯನ್ನೂ ನೋಡಿ ನಲಿಯಬೇಕು. ತನ್ನ ಜಂಭವನ್ನೂ ದುರಾಗ್ರಹವನ್ನೂ ಹರಟುವ ಚಟವನ್ನೂ ಬಿಡಬೇಕು. ಅನುಭವದ ಸೀಮೆ ವಿಶಾಲವಾಗಿ, ದುರಭಿಮಾನ ಹೋಗಿ ಸತ್ಯಸ್ವೀಕರಿಸುವ ದೃಷ್ಟಿ ಬೆಳೆದರೆ ವ್ಯಕ್ತಿತ್ವವು ಅರಳುವದರಲ್ಲಿ ಯಾವ ಸಂದೇಹವೂ ಇಲ್ಲ.

ಶೈಕ್ಷಣಿಕ ಪ್ರವಾಸಗಳನ್ನೂ ನೈಸರ್ಗಿಕ ಪ್ರವಾಸಗಳನ್ನೂ ಮಾಡುವದರಿಂದಲೂ ವ್ಯಕ್ತಿತ್ವದ ವಿಕಾಸವಾಗುವದು. ಶಿಕ್ಷಕರು ಆಗಾಗ ಪ್ರವಾಸ ಮಾಡುತ್ತಿರಬೇಕು. ಆದರೆ ಪ್ರವಾಸಗಳು ಶೈಕ್ಷಣಿಕವಿರಬೇಕು. ಇದನ್ನು ಮರೆಯಬಾರದು. ಪ್ರವಾಸಕ್ಕೆ ಹೋಗುವ ಸ್ಥಳಗಳ ಮತ್ತು ಜನರ ಪೂರ್ವಜ್ಞಾನ ಮಾಡಿಕೊಂಡು ಯೋಗ್ಯ ಶಿಕ್ಷಕರ ಮಾರ್ಗದರ್ಶನದಲ್ಲಿ ಪ್ರವಾಸ ನಡೆದರೆ ವ್ಯಕ್ತಿತ್ವ ವಿಕಾಸಕ್ಕೆ ಸಹಾಯವಾಗುವದು. "ಶಿಕ್ಷಕನಂತೆ ಮಗು. ಮಗುವಿನಂತೆ ಶಾಲೆ. ಶಾಲೆಯಂತೆ ರಾಜ್ಯದ ಆಡಳಿತೆ." ಎಂದು ಹೇಳುವ ಮ್ಯಾಕ್‌ನನ್ ಅವರ ಅನುಭವಿಕ ಮಾತುಗಳನ್ನು ಶಿಕ್ಷಕರು ಯಾವಾಗಲೂ ನೆನಪಿನಲ್ಲಿಟ್ಟು ನಡೆಯಬೇಕು.

— ಬಿನ್ನಹ —

ಪ್ರತಿ ತಿಂಗಳು ೧೫ನೆಯ ದಿನಾಂಕಕ್ಕೆ "ಜೀವನ ಶಿಕ್ಷಣ" ಪತ್ರಿಕೆಯ ಸಂಚಿಕೆಗಳನ್ನು ನಿಮ್ಮ ನಿಮ್ಮ ವಿಳಾಸಕ್ಕೆ ಕಳುಹಿಸಲಾಗುತ್ತಿದೆ. ಇದರಲ್ಲಿ ಏನೂ ವ್ಯತ್ಯಯ ಬರಲಾರದು. ಹೀಗಿದ್ದೂ ಪತ್ರಿಕೆಗಳು ನಿಮಗೆ ತಲುಪದಿದ್ದಲ್ಲಿ ಸ್ಥಳಿಕ ಅಂಚೆ ಅಧಿಕಾರಿಗಳಿಗೆ ತಪ್ಪದೇ ಬರೆದುಕೊಳ್ಳಬೇಕು.

—ಪ್ರಧಾನ ಸಂಪಾದಕರು

ಗುಡ್ಡಗಳಲ್ಲಿ ಕೊರೆದ ದೇವಾಲಯವಳು

ಲೇಖಕರು: **ಶ್ರೀ ಶಿಂತ್ರಿ ಬಸಪ್ಪನವರು**, ಬಿ. ಎ., ಬಿ. ಟಿ.

(ಲೇಖಾಂಕ ೨)

ಬಾದಾಮಿ

ಇದು ವಿಜಾಪುರ ಜಿಲ್ಹೆಯೊಳಗಿನದೊಂದು ತಾಲೂಕಿನ ಸ್ಥಳವಿದೆ. ಇದು ಒಂದಾನೊಂದು ಕಾಲದಲ್ಲಿ ಚಾಲುಕ್ಯರ ಹಾಗೂ ರಾಷ್ಟ್ರಕೂಟರ ರಾಜಧಾನಿಯಾಗಿತ್ತು. ವೀರಪುಲಿಕೇಶಿಯ ಕಾಲಕ್ಕೆ ಇದು ತನ್ನ ಕೀರ್ತಿಯ ಶಿಖರವನ್ನೇರಿತ್ತು. ರೇಲ್ವೆ ಸ್ಟೇಶನ್‌ದಿಂದ ಮೂರು ಮೈಲು ಪೂರ್ವಕ್ಕೆ ಬಾದಾಮಿಯು ಕಿಲ್ಲೆಯಿದೆ. ಅದರ ಪಕ್ಕದಲ್ಲಿಯದೊಂದು ಗುಡ್ಡದಲ್ಲಿ ನಾಲ್ಕು ಗವಿಗಳು ಕೊರೆಯಲ್ಪಟ್ಟಿವೆ. ಅವುಗಳಲ್ಲಿ ಒಂದು ಜೈನ ಧರ್ಮಕ್ಕೆ ಮೂರು ಹಿಂದೂ ಧರ್ಮಕ್ಕೆ ಸಂಬಂಧಿಸಿವೆ. ಹಿಂದೂ ದೇವಾಲಯಗಳು ಕ್ರಿಸ್ತೀಶಕ ೫೫೦ ರಿಂದ ೫೮೦ ರ ವರೆಗಿನ ಅವಧಿಯಲ್ಲಿ ಕೊರೆಯಲ್ಪಟ್ಟಿವೆ; ಜೈನ ಚೈತ್ಯಾಲಯವು ಕ್ರಿಸ್ತೀಶಕ ೬೫೦ ರ ಸುಮಾರಿಗೆ ಕೊರೆಯಲ್ಪಟ್ಟಿದೆ.

ಮೊದಲನೆಯ ಗವಿಯಲ್ಲಿ ಶಿವನ ದೇವಾಲಯವಿದೆ. ಮುಂಭಾಗದಲ್ಲಿ ಶಿವನ ಸೇವಕರಾದ ಗಣರ ಗಿಡ್ಡ ಮೂರ್ತಿಗಳಿವೆ. ಎಡಕ್ಕೆ ದ್ವಾರಪಾಲಕನ ಹಾಗೂ ನಂದಿಯ ಮೂರ್ತಿಗಳಿವೆ. ದ್ವಾರಪಾಲಕನ ಮೂರ್ತಿಯ ಎದುರಿಗೆ ೫ ಫೂಟು ಎತ್ತರವಾದ ಶಿವನ ಮೂರ್ತಿಯಿದೆ. ಆ ಮೂರ್ತಿಗೆ ೧೮ ಕೈಗಳಿವೆ. ಅದು ತಾಂಡವ ನೃತ್ಯವನ್ನಾಡುತ್ತಲಿದೆ. ಮುಂಭಾಗದಾಚೆಗೊಂದು ದೊಡ್ಡ ಕೋಣೆಯಿದೆ. ಅದರಲ್ಲಿ ಎಡಕ್ಕೆ ನಾಲ್ಕು ಕೈಗಳುಳ್ಳ ವಿಷ್ಣುವಿನ ಮೂರ್ತಿಯಿದೆ. ಬಲಕ್ಕೆ ಭೃಂಗಿ–ನಂದಿ ಸಮೇತನಾದ ಅರ್ಧನಾರೀಶ್ವರನ ವಿಗ್ರಹವು ಕಂಗೊಳಿಸುತ್ತಿದೆ. ಹಿಂದಿನ ಗೋಡೆಯಲ್ಲಿ ಮಹಿಷಾಸುರನನ್ನು ಸಂಹಾರ ಮಾಡುವ ದುರ್ಗಾ ದೇವತೆಯ ಭಯಾನಕವಾದ ವಿಗ್ರಹವಿದೆ. ಛತ್ತಿನ ಮಧ್ಯದಲ್ಲಿ ಆದಿಶೇಷನ ಹೆಡೆಯ ಚಿತ್ರವನ್ನು ಕೊರೆದಿದ್ದಾರೆ. ಆ ಕೋಣೆಯ ಹಿಂಬದಿಗೊಂದು ಗರ್ಭಗುಡಿಯಿದೆ. ಅದರಲ್ಲಿ ಈಶ್ವರ ಲಿಂಗವಿದೆ. ಎರಡನೆಯ ಗವಿಯು ವಿಷ್ಣುವಿನದು. ಅದರ ಎಡಕ್ಕೆ ವರಾಹಾವತಾರದ, ಬಲಕ್ಕೆ ವಾಮನಾವತಾರದ ವಿಗ್ರಹಗಳಿವೆ. ಛತ್ತಿನಲ್ಲಿ ಗರುಡನ ಮೇಲೆ ಸವಾರಿ ಮಾಡಿದ ವಿಷ್ಣುವಿನ ಚಿತ್ರವು ಕೊರೆಯಲ್ಪಟ್ಟಿದೆ. ಮೂರನೆಯ ಗವಿಯ ಹುರಿಗಟ್ಟೆಯು ಎತ್ತರವಿದ್ದು ಅದಕ್ಕೆ ೧೧ ಪಾವಟಿಗೆಗಳಿವೆ. ಹುರಿಗಟ್ಟೆಯ ಮೇಲೆ ಶಿವನ ಅನುಯಾಯಿಗಳಾದ ಗಣರ ಗಿಡ್ಡ ಮೂರ್ತಿಗಳಿವೆ. ಕಂಬಗಳ ಮೇಲೆಯೂ ಗೋಡೆಗಳ ಮೇಲೆಯೂ ಶಿವನ ಮತ್ತು ವಿಷ್ಣುವಿನ ಬೇರೆ ಬೇರೆ ರೂಪಗಳು ಕೊರೆಯಲ್ಪಟ್ಟಿವೆ. ನಾಲ್ಕನೆಯ ಗವಿಯಲ್ಲಿ ಜೈನ ಚೈತ್ಯಾಲಯವಿದೆ. ಅದರ ಎದುರಿಗೆ ಸಣ್ಣದೊಂದು ಸರೋವರವಿದೆ. ಮುಂಭಾಗದ ಎಡಕ್ಕೆ ಪಾರಸನಾಥನ, ಬಲಕ್ಕೆ ಗೌತಮನ ಮೂರ್ತಿಗಳಿವೆ. ಗರ್ಭ ಗುಡಿಯಲ್ಲಿ ಮಹಾವೀರನ ಮೂರ್ತಿಯು ಕಂಗೊಳಿಸುತ್ತಿದೆ. ಕೆತ್ತುಗೆಯ ಕೆಲಸವು ವೇರೂಳದಲ್ಲಿಯಂತೆ ಮನೋಹರವಾಗಿದೆ. ಶಿವನ ತಾಂಡವನೃತ್ಯ, ಅರ್ಧನಾರೀಶ್ವರನ ವಿಗ್ರಹ, ದುರ್ಗಾ ದೇವತೆಯು ಮಹಿಷಾಸುರನನ್ನು ಕೊಲ್ಲುವ ನೋಟ, ವಿಷ್ಣುವಿನ ಅವತಾರಗಳು, ಅಂದ ಚಂದವಾದ ಗಣಸಮೂಹದ ಗಿಡ್ಡ ಮೂರ್ತಿಗಳು ಮುಂತಾದವುಗಳ ಕೆತ್ತುಗೆಯ ಕೆಲಸವನ್ನು ಎಷ್ಟು ನೋಡಿದರೂ ಮನವು ತಣಿಯದೆ ಇನ್ನೂ ನೋಡಬೇಕೆಂದು ಬಯಸುವದುಂಟು.

ಎಲಿಫಂಟಾ (ಘಾರಪುರಿ)

ಅದು ಮುಂಬಯಿ ಬಂದರದಿಂದ ೬ ಮೈಲಿನ ಮೇಲಿದೆ. ಅದು ಒಂದು ಸುಂದರವಾದ ಚಿಕ್ಕ ನಡುಗಡ್ಡೆಯಿದ್ದು ಅದಕ್ಕೆ ಅಲ್ಲಿಯ ಜನರು 'ಘಾರಪುರಿ' ಎಂದು ಕರೆಯುವದುಂಟು. 'ಘಾರ' ಎಂಬ ಹೆಸರಿನ ಮೂಲ ನಿವಾಸಿಗಳು ಅಲ್ಲಿ ಪೂರ್ವದಲ್ಲಿ ವಾಸಿಸುತ್ತಿದ್ದರಾದುದರಿಂದ ಅದಕ್ಕೆ 'ಘಾರಪುರಿ' (ಘಾರರ ಪಟ್ಟಣ) ಎಂಬ ಹೆಸರು ಪ್ರಾಪ್ತವಾಗಿರಲು ಸಾಕು. ಘಾರಪುರಿಗೆ 'ಎಲೆಫಂಟಾ' ಎಂಬ ಹೆಸರು ಪೋರ್ತುಗೀಜರಿಂದ ಕೊಡಲ್ಪಟ್ಟಿದೆ. ಪೋರ್ತುಗೀಜರು ಎಲ್ಲಕ್ಕೂ ಮೊದಲು ಆ ನಡುಗಡ್ಡೆಯಲ್ಲಿಳಿದಾಗ ಆನೆ (Elephant) ಯ

ಕಲ್ಲಿನ ಮೂರ್ತಿಯನ್ನು ಕಂಡರಾದುದರಿಂದ ಆ ನಡುಗಡ್ಡೆಯನ್ನು ಎಲಿಫಂಟಾ ಎಂದು ಕರೆಯಹತ್ತಿದರು. ಆ ಹೆಸರೇ ಈಗ ಹೆಚ್ಚಾಗಿ ರೂಢಿಯಲ್ಲಿದೆ. ಆನೆಯ ಕಲ್ಲಿನ ಮೂರ್ತಿಯು ಈಗ ಅಲ್ಲಿ ಇಲ್ಲ. ಅದು ಮುಂಬಯಿಯಲ್ಲಿಯ 'ವಿಕ್ಟೋರಿಯಾ' ಉಪವನಕ್ಕೆ ಸ್ಥಳಾಂತರಿಸಲ್ಪಟ್ಟಿದೆ.

ಆ ನಡುಗಡ್ಡೆಯು ೧೩ನೆಯ ಶತಮಾನದಲ್ಲಿ ಮುಸಲ್ಮಾನರ ಕೈಸೇರಿತು. ಕೆಲವು ವರ್ಷಗಳ ನಂತರ ಮರಾಠರು ಮುಸಲ್ಮಾನರನ್ನು ಹೊಡೆದೋಡಿಸಿ ತಮ್ಮ ಸ್ವಾಧೀನದಲ್ಲಿಟ್ಟುಕೊಂಡರು. ೧೬ನೆಯ ಶತಮಾನದಲ್ಲಿ ಪೋರ್ತುಗೀಜರು ಮರಾಠರನ್ನು ಸೋಲಿಸಿ ಮುಂಬಯಿ ಮತ್ತು ಎಲಿಫಂಟಾ ನಡುಗಡ್ಡೆಗಳನ್ನು ಕೈವಶಮಾಡಿಕೊಂಡರು. ಪೋರ್ತುಗೀಜರ ವಶದಲ್ಲಿದ್ದಾಗ ಗುಹೆಗಳು ಬಹಳಷ್ಟು ನಾಶವನ್ನು ಹೊಂದಿದವು. ಅವರ ಸೈನಿಕರು ಗುಡಿಗುಂಡಾರಗಳನ್ನು ಕುದುರೆ ಕಟ್ಟುವ ಪಾಗಾಗಳಂತೆ ಉಪಯೋಗಿಸಿದರು. ಹಲವು ಗವಿಗಳು ಬಂದೂಕು-ತುಬಾಕಿ ಹಾರಿಸುವರೂಢಿಗಾಗಿ ಉಪಯೋಗಿಸಲ್ಪಟ್ಟವು. ಅವು ಬ್ರಿಟಿಶರ ಸ್ವಾಧೀನಕ್ಕೆ ಬಂದ ನಂತರ ಪುರಾಣವಸ್ತು ಪರಿಪಾಲನ ಶಾಖೆ (Archaeological Department) ಯು ಸ್ಥಾಪಿಸಲ್ಪಟ್ಟಿತು. ಆ ಶಾಖೆಯು ಎಲ್ಲ ಪ್ರಾಚೀನ ಕಟ್ಟಡಗಳ ಮೇಲ್ವಿಚಾರಣೆಯನ್ನು ಮಾಡುತ್ತಲಿದೆ.

ವಿಶ್ವಸನೀಯವಾದ ಮೂಲಾಧಾರಗಳ ಅಭಾವದ ಮೂಲಕ ಅವುಗಳನ್ನು ಕೊರೆದ ಕಾಲವು ಗೊತ್ತಾಗಿಲ್ಲ. ಅವು ಬಹುತರವಾಗಿ ಕ್ರಿಸ್ತೀ ಶತಕದ ೪ನೆಯ ಶತಮಾನದಿಂದ ೮ನೆಯ ಶತಮಾನದ ವರೆಗಿನ ಅವಧಿಯಲ್ಲಿ ಕೊರೆಯಲ್ಪಟ್ಟಿರಬೇಕೆಂದು ಪುರಾಣವಸ್ತು ಶಾಸ್ತ್ರಜ್ಞ (Archaeologist) ರ ಅಭಿಪ್ರಾಯವಿದೆ. ಆ ಅವಧಿಯಲ್ಲಿ ಬೌದ್ಧಧರ್ಮವು ಕಳೆಗುಂದಿ ಹಿಂದೂ ಧರ್ಮವು ಚೇತರಿಸಿಕೊಂಡು ಮೇಲಕ್ಕೆದ್ದು ತನ್ನ ಪ್ರಭಾವವನ್ನು ಬೀರಿತ್ತು. ಮೂರ್ತಿಗಳ ಮುಖದ ಮೇಲೆ ಅಲ್ಪ ಸ್ವಲ್ಪ ಬೌದ್ಧ ಲಕ್ಷಣಗಳು ಕಂಡುಬಂದರೂ ಗುಹೆಗಳಲ್ಲಿ ಹಿಂದೂ ಧರ್ಮದ ದೇವಾಲಯಗಳೇ ಇವೆ. ಅವೆಲ್ಲ ಎತ್ತರವಾದೊಂದು ಕಲ್ಲಿನ ಗುಡ್ಡದಲ್ಲಿ ಕೊರೆಯಲ್ಪಟ್ಟಿವೆ. ಮುಖ್ಯ ದೇವಾಲಯದ ಗರ್ಭಗುಡಿಯಲ್ಲಿ ಲಿಂಗವಿದೆ. ಲಿಂಗವು ಶಿವನ ಕುರುಹು. ಗರ್ಭಗುಡಿಯ ಸುತ್ತಲಿನ ಕಮಾನುಗಳಲ್ಲಿ ಶಿವನನ್ನು ಆತನ ಬೇರೆ ಬೇರೆ ರೂಪಗಳಲ್ಲಿ ರಸವತ್ತಾಗಿಯೂ, ಅಲಂಕಾರಕವಾಗಿಯೂ ಕೊರೆದಿದ್ದಾರೆ. ಹಲವು ಕಮಾನುಗಳಲ್ಲಿ ಶಿವನನ್ನೂ ಆತನ ಅರ್ಧಾಂಗಿ ಪಾರ್ವತಿಯನ್ನೂ ಚಿತ್ರಿಸಿದ್ದಾರೆ. ಬೇರೆ ಹಲವುಗಳಲ್ಲಿ ಶಿವ, ಬ್ರಹ್ಮ, ವಿಷ್ಣು, ಇಂದ್ರ ಮೊದಲಾದ ಸ್ವರ್ಗೀಯ ದೇವತೆಗಳೊಂದಿಗೆ ಇದ್ದುದನ್ನು ಅಂದಚಂದವಾಗಿ ಕೊರೆದಿದ್ದಾರೆ. ಕೆತ್ತುಗೆಯ ಕೆಲಸವು ಅಲ್ಲಲ್ಲಿ ತುಸುಮಟ್ಟಿಗೆ ನಾಶವಾಗಿದ್ದರೂ ಚನ್ನಾಗಿದ್ದ ಭಾಗವು ತನ್ನ ಪ್ರೌಢಿಮೆಯನ್ನು ಹೊರಹೊಮ್ಮಿಸುತ್ತದೆ. ಮಧ್ಯದಲ್ಲೊಂದು ಕಮಾನಿನಲ್ಲಿ ಶಿವನ ಮೂರೂ ಗುಣಗಳು ಬಹು ಚಿತ್ತಾಕರ್ಷಕವಾಗಿ ಪ್ರದರ್ಶಿಸಲ್ಪಟ್ಟಿವೆ. ಹುಟ್ಟಿಸುವದು, ಪಾಲನ ಮಾಡುವದು ಮತ್ತು ನಾಶಮಾಡುವದು ಆ ಕೆತ್ತುಗೆಯು ನೋಡುವವರ ಮನವನ್ನು ಸೆಳೆಯದೆ ಬಿಡುವದಿಲ್ಲ. ಎಷ್ಟು ನೋಡಿದರೂ ಇನ್ನೂ ನೋಡಬೇಕೆಂಬ ಹಂಬಲವು ಉಳಿದೇ ಉಳಿಯುವದು.

ಕನ್ಹೇರಿ

ಮುಂಬಯಿಯಿಂದ ಉತ್ತರಕ್ಕೆ ೨೫ ಮೈಲುಗಳ ಅಂತರದ ಮೇಲೆ ಪಶ್ಚಿಮ ರೇಲ್ವೆಯಲ್ಲಿ ಬೋರಿವ್ಲಿ ಎಂಬದೊಂದು ರೇಲ್ವೆ ನಿಲ್ದಾಣವಿದೆ. ಅದರ ಪಕ್ಕದಲ್ಲಿ ಕನ್ಹೇರಿ ಗುಹೆಗಳಿವೆ. ಅವು ಕಲ್ಲಿನದೊಂದು ದೊಡ್ಡ ಗುಡ್ಡದಲ್ಲಿ ಕೊರೆಯಲ್ಪಟ್ಟಿವೆ. ಅವು ಒಟ್ಟು ೧೦೯ ಗವಿಗಳಿವೆ. ಅವು ಕ್ರಿಸ್ತೀ ಶಕ ಪೂರ್ವ ೨ನೆಯ ಶತಮಾನದಿಂದ ಕ್ರಿಸ್ತೀ ಶಕದ ೮ನೆಯ ಶತಮಾನದ ವರೆಗಿನ ಬಹು ದೀರ್ಘವಾದ ಅವಧಿಯಲ್ಲಿ ಕೊರೆಯಲ್ಪಟ್ಟಿರಬೇಕೆಂಬ ಅಂದಾಜಿದೆ. ಮಧ್ಯದಲ್ಲಿ ಕ್ರಿಸ್ತೀ ಶಕದ ೨ನೆಯ ಶತಮಾನದಿಂದ ೫ನೆಯ ಶತಮಾನದವರೆಗಿನ ಅವಧಿಯಲ್ಲಿ ಆವ ಗುಹೆಯೂ ಕೊರೆಯಲ್ಪಟ್ಟಿಲ್ಲವಂತೆ. ಹೀನಯಾನ ಯುಗದಲ್ಲಿ ಕೊರೆಯಲ್ಪಟ್ಟ ಗವಿಗಳಲ್ಲಿ ವಿಹಾರಗಳಿವೆ. ಅವುಗಳಲ್ಲಿ ಕುಸುರಿನ ಕೆಲಸವು ಎಳ್ಳಷ್ಟೂ ಇಲ್ಲ. ಅವುಗಳಲ್ಲಿ ಬೌದ್ಧಯತಿಗಳು ವಾಸವಾಗಿದ್ದುಕೊಂಡು ವಿದ್ಯಾದಾನ ಮಾಡುತ್ತ ದೇವರ ಚಿಂತನೆಯಲ್ಲಿ ಕಾಲವನ್ನು ಕಳೆಯುತ್ತಿದ್ದರು. ಕನ್ಹೇರಿಯು ಆಗ ಬೌದ್ಧ ವಿಶ್ವವಿದ್ಯಾನಿಲಯದ ಪೀಠವಾಗಿತ್ತು. ಆ ಯುಗದಿಂದೀಚೆಗೆ ಕೊರೆಯಲ್ಪಟ್ಟ ಗುಹೆಗಳು ಚೈತ್ಯಾಲಯ (ಬೌದ್ಧರ ಗುಡಿ) ಗಳಿವೆ. ಅವು ಕೆತ್ತುಗೆಯ ಕೆಲಸಗಳಿಂದ ಅಲಂಕೃತವಾಗಿವೆ. ಅವುಗಳಲ್ಲಿ 'ದರಬಾರ' ಎಂಬ ಹೆಸರಿನ ಗುಹೆಯು ನೋಡುತಕ್ಕಂತಹದಿದೆ. ಶಿಲ್ಪಿಗರು ತಮ್ಮಲ್ಲಿ ಹುದುಗಿದ್ದ ಶಿಲ್ಪಕಲೆಯ ಚಾತುರ್ಯವನ್ನೆಲ್ಲ ತಮ್ಮ ಕೆತ್ತುಗೆಯಲ್ಲಿ ತೋರ್ಪಡಿಸಿದ್ದಾರೆ.

ಕಾರ್ಲೆ

ಮುಂಬಯಿಯಿಂದ ೮೫ ಮೈಲುಗಳ ದೂರದಲ್ಲಿ ಕಾರ್ಲೆಯು ಇದೆ. ಅದು ಸಹ್ಯಪರ್ವತದ ನೈಸರ್ಗಿಕ ಸೊಬಗಿನ ಮಧ್ಯದಲ್ಲಿದೆ. ಗುಹೆಯು ಅಲ್ಲಿನದೊಂದು ಗುಡ್ಡದ ಮಗ್ಗಲಲ್ಲಿ ಕೊರೆಯಲ್ಪಟ್ಟಿದೆ. ಅದು ಹೀನಯಾನ ಯುಗದಲ್ಲಿ ಕೊರೆಯಲ್ಪಟ್ಟಿದ್ದೊಂದು ಆದರ್ಶ ಚೈತ್ಯಾಲಯವಿದೆ. ಅದು ಕ್ರಿಸ್ತೀ ಶಕದ ಮುನ್ನ ೨ನೆಯ ಶತಮಾನದಲ್ಲಿ ಕೊರೆಯಲ್ಪಟ್ಟಿದೆ. ಅದರಷ್ಟು ದೊಡ್ಡ ಚೈತ್ಯಾಲಯವು ಬೇರೆಡೆ ಎಲ್ಲಿಯೂ ಇಲ್ಲ. ವರ್ತುಲಾಕಾರವ ಮಹಾದ್ವಾರವನ್ನು ಪ್ರವೇಶಿಸಿದ ಕೂಡಲೇ ಪ್ರಶಸ್ತವಾದೊಂದು ವಿಸ್ತಾರವಾದ ಕೋಣೆ (Hall)ಯಿದೆ. ಅದರ ಗೋಡೆಯಲ್ಲಿ ಸೂರ್ಯನ ಪ್ರಕಾಶವು ಒಳಗೆ ಬೀಳಲೊಂದು ದೊಡ್ಡ ಕಿಡಿಕಿಯಿದೆ. ಅಲ್ಲಿಂದ ಗರ್ಭಗುಡಿಯನ್ನು ಪ್ರವೇಶಿಸಲು ಮೂರು ದ್ವಾರಗಳಿವೆ. ಗರ್ಭಗುಡಿಯ ಒಂದು ತುದಿಯಲ್ಲಿ ನಿರಾಡಂಬರ ಸ್ತೂಪ (ಬುದ್ಧನ ಅವಶೇಷಗಳನ್ನೊಳಗೊಂಡ ಗದ್ದುಗೆ)ವಿದೆ.

ಅಬು ಶಿಖರ

ಅದು ಅರವಲಿ ಪರ್ವತದಲ್ಲಿಯದೊಂದು ಉನ್ನತ ಶಿಖರ. ಸಮುದ್ರ ಸಪಾಟಿಯಿಂದ ಅದರ ಎತ್ತರವು ಸುಮಾರು ೪೦೦೦ ಫೂಟು ಇದೆ. ವರ್ಷದಲ್ಲೆಲ್ಲ ಒಳ್ಳೇ ತಂಪಾದ ಹವೆಯುಳ್ಳ ಸ್ಥಳವು. ಬೇಸಿಗೆಯಲ್ಲಿ ಬೈಲು ಪ್ರದೇಶದ ಬಿಸಲಿನ ತಾಪವನ್ನು ತಪ್ಪಿಸಿಕೊಳ್ಳುವದಕ್ಕೋಸ್ಕರ ಅದರ ಸುತ್ತಲಿದ್ದ ಗುಜರಾಥ, ಸೌರಾಷ್ಟ್ರ ಹಾಗು ರಾಜಸ್ಥಾನ ರಾಜ್ಯಗಳಲ್ಲಿಯ ಶ್ರೀಮಂತರೂ, ಹುದ್ದೇದಾರರೂ, ಸಂಸ್ಥಾನಿಕರೂ ಅಲ್ಲಿಗೆ ಧಾವಿಸುವದುಂಟು. ಅದು ಐತಿಹಾಸಿಕ ಸ್ಥಳವಿರುವದರಿಂದ ವರ್ಷದಲ್ಲೆಲ್ಲ ಅಲ್ಪ ಪ್ರಮಾಣದಲ್ಲಿ ನಮ್ಮ ರಾಷ್ಟ್ರದ ಮತ್ತು ಪರದೇಶಗಳ ಸಂದರ್ಶಕರು ಅಲ್ಲಿಗೆ ಹೋಗುವದುಂಟು. ಮೇ ಮತ್ತು ಜೂನ ತಿಂಗಳುಗಳಲ್ಲಿ ಅಲ್ಲಿ ಜನರು ಹೆಚ್ಚಾಗಿ ಬರುವರು. ದೇಲವಾರಾ ದೇವಾಲಯಗಳು ಜಗತ್ಪ್ರಸಿದ್ಧವಿವೆ. ಅವು ಜೈನರ ದೇವಾಲಯಗಳು— ಒಂದು ಆದಿನಾಥನ ದೇವಾಲಯ, ಮತ್ತೊಂದು ನೇಮಿನಾಥನ ದೇವಾಲಯ. ಆದಿನಾಥನ ದೇವಾಲಯವು ೧೧ನೆಯ ಶತಮಾನದಲ್ಲಿಯೂ ನೇಮಿನಾಥನ ದೇವಾಲಯವು ೧೩ನೆಯ ಶತಮಾನದಲ್ಲಿ ರಚಿಸಲ್ಪಟ್ಟಿವೆ. ಆದಿನಾಥ ಮತ್ತು ನೇಮಿನಾಥ ಇವರಿಬ್ಬರು ಪ್ರಸಿದ್ಧ ಜೈನ ತೀರ್ಥಂಕರ (Prophet) ರು. ಇವಲ್ಲದೆ ನಾಖಿ ಎಂಬ ಹೆಸರಿನ ರಮಣೀಯವಾದ ಸರೋವರದ ದಂಡೆಯ ಮೇಲೆ ರಘುನಾಥನ ದೇವಾಲಯವಿದೆ. ಸರೋವರವು ಈಜುವವರಿಗೆ ಹಾಗೂ ದೋಣಿಯಲ್ಲಿ ಕುಳಿತು ವಿಹರಿಸುವವರಿಗೆ ಅನುಕೂಲವಿದೆ. ಅಚಲಗಡದಲ್ಲಿ ಅಚಲೇಶ್ವರ (ಶಿವ)ನ ಗುಡಿಯು ನೋಡತಕ್ಕಂತಹದಿದೆ. ಗುರುಶಿಖರವು ಅಲ್ಲಿ ಎಲ್ಲಕ್ಕೂ ಹೆಚ್ಚು ಎತ್ತರವಾದ ಶಿಖರವು. ಆ ಶಿಖರದ ಮೇಲೊಂದು ಶಿವನ ದೇವಾಲಯವಿದೆ.

— ಜಯ ಹಿಂದ —

ರಾಷ್ಟ್ರ ನಿರ್ಮಾಣಕಾರ್ಯ ಹಾಗೂ ಜೀವನ ಶಿಕ್ಷಣ

ಲೇಖಕರು: **ಶ್ರೀ ಎನ್. ಆರ್. ಕುಲಕರ್ಣಿ,** B.A. (Hons.), B.Ed.

ಅಧ್ಯಾಪಕರು ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಸ್ವಾತಂತ್ರ್ಯದ ನಂತರದಲ್ಲಿ ರಾಷ್ಟ್ರಾಭಿವೃದ್ಧಿಗಾಗಿ ವಿವಿಧ ಯೋಜನೆಗಳು ರೂಪಿಸಲ್ಪಟ್ಟು ಕಾರ್ಯಗತವಾಗುತ್ತಲಿವೆ. ಮೊದಲನೆಯ ಪಂಚವಾರ್ಷಿಕ ಯೋಜನೆಯು ಯಶಸ್ವಿಯಾಗಿ ಕೊನೆಗೊಂಡು, ದ್ವಿತೀಯ ಪಂಚವಾರ್ಷಿಕ ಯೋಜನೆಯು ಮುಗಿಯಲು ಬಂದಿದೆ. ತೃತೀಯ ಪಂಚವಾರ್ಷಿಕ ಯೋಜನೆಯ ರೂಪರೇಷೆಗಳು ಸಿದ್ಧವಾಗುತ್ತಲಿವೆ. ಭಾಕ್ರಾನಾಂಗಲ್ ಯೋಜನೆ, ದಾಮೋದರ ಕೊಳ್ಳದ ಯೋಜನೆ, ಹಿರಾಕುಡ್ ಯೋಜನೆ ಮುಂತಾದ ಬೃಹದ್ ಯೋಜನೆಗಳೂ ರಾಷ್ಟ್ರದ ಆರ್ಥಿಕ ವ್ಯವಸ್ಥೆಯನ್ನು ತ್ವರಿತಗತಿಯಿಂದ ಸುಧಾರಿಸಲು ರೂಪುಗೊಂಡಿವೆ. ಇದೂ ಅಲ್ಲದೆ ಗ್ರಾಮಜೀವನವನ್ನು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಮೃದ್ಧಗೊಳಿಸಲು ರಾಷ್ಟ್ರೀಯ ವಿಸ್ತರಣಾ ಸೇವೆ (ಕಾರ್ಯ) (National Extention Service) ಹಾಗೂ ಸಮಾಜಾಭಿವೃದ್ಧಿ ಯೋಜನೆಗಳು (Community development projects) ಪಂಚವಾರ್ಷಿಕ ಯೋಜನೆಯ

ಅಂಗಗಳಾಗಿ ರೂಪಿಸಲ್ಪಟ್ಟು, ರಾಷ್ಟ್ರನಿರ್ಮಾಣ ಕಾರ್ಯವನ್ನು ಸಾಧಿಸತೊಡಗಿವೆ. ಈ ಮುಂತಾದ ಯೋಜನೆಗಳು ಭಾರತದ ಸ್ವರೂಪವನ್ನೇ ಬದಲಾಯಿಸುತ್ತಲಿವೆ.

ಕೋಟ್ಯವಧಿ ರೂಪಾಯಿಗಳ ವ್ಯಯದಿಂದ ಕೂಡಿದ ಯೋಜನೆಗಳು ದೇಶದಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಕ್ರಾಂತಿಯನ್ನು ಉಂಟು ಮಾಡಲಿವೆ ಎಂದು ಬೇರೆ ಹೇಳಬೇಕಾಗಿಲ್ಲ. ಆದರೆ ಕ್ರಾಂತಿಯು ಮಹಾತ್ಮಾ ಗಾಂಧೀಜಿಯವರು ನಿರ್ದೇಶಿಸಿದ ತಳಹದಿಯ ಮೇಲೆ ಸಾಧಿಸಲ್ಪಡಬೇಕಾಗಿದೆ ಎಂಬ ಮಹತ್ವದ ಅಂಶವನ್ನು ಈ ಸಂದರ್ಭದಲ್ಲಿ ಗಮನದಲ್ಲಿಟ್ಟುಕೊಳ್ಳುವದು ಅತ್ಯಂತ ಮಹತ್ವದ್ದಾಗಿದೆ. ಆದುದರಿಂದಲೇ ಭಾರತ ಸರಕಾರವು ಹೃದಯ ಪರಿವರ್ತನೆಯ ಮುಖಾಂತರವಾಗಿ ರಾಷ್ಟ್ರಕಟ್ಟುವ ಕಾರ್ಯವನ್ನು ಅವಿಶ್ರಾಂತವಾಗಿ ಮಾಡುತ್ತಲಿದೆ. ಮನಸ್ಸಿನ ಪರಿವರ್ತನೆಯನ್ನು ಸಾಧಿಸಿ, ತನ್ಮೂಲಕ ಆರ್ಥಿಕ ಹಾಗೂ ಸಾಮಾಜಿಕ ಅಭ್ಯುದಯವನ್ನು ಸಾಧಿಸಲೆಳಸುವ ವಿಧಾನಗಳಲ್ಲಿ ಭಾರತದ ಏಕಮೇವ ರಾಷ್ಟ್ರೀಯ ಶಿಕ್ಷಣ ಪದ್ಧತಿ ಎಂದು ಒಪ್ಪಿಗೆ ಪಡೆದ ಜೀವನ ಶಿಕ್ಷಣವು ವಿಶೇಷ ಮಹತ್ವದ್ದಾಗಿದೆ ಎಂದು ನಿಃಸಂದೇಹವಾಗಿ ಹೇಳಬಹುದು. ಆದುದರಿಂದ ರಾಷ್ಟ್ರದ ಆರ್ಥಿಕ ಹಾಗೂ ಸಾಮಾಜಿಕ ಉನ್ನತಿಯನ್ನು ಸಾಧಿಸುವಲ್ಲಿ ಜೀವನ ಶಿಕ್ಷಣವು ಯಾವ ಪಾತ್ರವನ್ನು ವಹಿಸಬಲ್ಲದು ಎಂಬ ಬಗ್ಗೆ ಅರಿತುಕೊಳ್ಳುವದು ಅವಶ್ಯವಿದೆ.

ಜೀವನ ಶಿಕ್ಷಣದ ಬಗ್ಗೆ ಸರಿಯಾದ ಕಲ್ಪನೆಯು ಸಮಾಜದಲ್ಲಿ ಇನ್ನೂ ಹೆಚ್ಚು ಹೆಚ್ಚಾಗಿ ಮೂಡಿಬರಬೇಕಾಗಿದೆ. ಇದು ರಾಷ್ಟ್ರೀಯ ಶಿಕ್ಷಣಪದ್ಧತಿ ಎಂದು ಒಪ್ಪಿಗೆಯ ಮುದ್ರೆಯನ್ನು ಪಡೆದಿದ್ದರೂ, ಜನಸಾಮಾನ್ಯರಲ್ಲಿ ಅಷ್ಟೇಕೆ, ಹಲಕೆಲವು ಮಂಡಳರಲ್ಲಿಯೂ ಕೂಡ ಜೀವನ ಶಿಕ್ಷಣದ ಬಗ್ಗೆ ಅನೇಕ ತಪ್ಪುಕಲ್ಪನೆಗಳು ಬೇರೂರಿವೆ. ಈ ತಪ್ಪುಕಲ್ಪನೆಗಳನ್ನು ಹೋಗಲಾಡಿಸುವದು ಜೀವನ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವವರು ಅತ್ಯಂತ ಆದ್ಯತೆಯಿಂದ ಮಾಡಬೇಕಾದ ಕಾರ್ಯಗಳಲ್ಲಿ ಒಂದಾಗಿದೆ. ಪಾಠಪ್ರವಚನಗಳ ವಿಧಾನಗಳ ಬಗ್ಗೆ ಸ್ಪಷ್ಟಕಲ್ಪನೆಯು ಜನಸಾಮಾನ್ಯರಿಗೆ ಬೇಗನೆ ಆಗಲಿಕ್ಕಿಲ್ಲ. ಆದರೆ ಸ್ವಾವಲಂಬನ, ಶ್ರಮಗೌರವ, ಪರಸ್ಪರರೊಡನೆ ಭೇದಭಾವ ಮರೆತು ಕೂಡಿಬಾಳುವದು, ಸತತೋದ್ಯೋಗ, ಭಾರತದ ಉಜ್ವಲ ಪರಂಪರೆಯ ಚೌಕಟ್ಟಿನಲ್ಲಿಯೇ ದೇಶದ ವಿಕಾಸವನ್ನು ಸಾಧಿಸುವದು ಮುಂತಾದ ತತ್ವಗಳು ಜೀವನ ಶಿಕ್ಷಣದ ಉಸಿರಾಗಿವೆ ಎಂಬ ಬಗೆಗೆ ಜನಸಾಮಾನ್ಯರಿಗೆ ಮನವರಿಕೆಯಾಗುವದು ಅತ್ಯವಶ್ಯವಾಗಿದೆ.

ಈ ತತ್ವಗಳ ಸಹಾಯವಿಲ್ಲದೇ ಯಾವ ರಾಷ್ಟ್ರವೂ ಉನ್ನತಿಯನ್ನು ಪಡೆಯಲಾರದು. ದೇಶದ ಯೋಜನೆಗಳು ಹಾಗೂ ಉದ್ದೇಶಗಳು ಯಶಸ್ವಿಯಾಗಬೇಕಾದರೆ ಸಮಾಜದಲ್ಲಿ ಸ್ವಾವಲಂಬನೆ, ಶ್ರಮಗೌರವ, ಸಹಕಾರ, ಕಷ್ಟಪಟ್ಟು ಒಕ್ಕಟ್ಟಿನಿಂದ ದುಡಿಯಬೇಕೆಂಬ ಭಾವನೆ ಈ ಮುಂತಾದ ಸಾಮಾಜಿಕ ಸದ್ಗುಣಗಳು ತಲೆದೋರಿದರೆ ಮಾತ್ರ ಸಾಧ್ಯ ಎಂಬುದನ್ನು ಇತಿಹಾಸವು ಸಿದ್ಧಮಾಡಿ ತೋರಿಸಿದೆ. ಇಂಥ ಸಾಮಾಜಿಕ ಸದ್ಗುಣಗಳ ತರಬೇತಿಯನ್ನು ಸಮಾಜಕ್ಕೆ ನೀಡುವ ಉದ್ದೇಶವನ್ನು ಜೀವನ ಶಿಕ್ಷಣವು ಇಟ್ಟುಕೊಂಡಿದೆ.

ಜೀವನ ಶಿಕ್ಷಣ ಸಂಸ್ಥೆಯಲ್ಲಿಯ ಸಾಮೂಹಿಕ ದೈನಂದಿನ ಪ್ರಾರ್ಥನೆ, ವೈಯಕ್ತಿಕ ಹಾಗೂ ಸಾಮೂಹಿಕ ಸ್ವಚ್ಛತೆ, ಜಾತಿ, ಮತ, ಪಂಥಗಳ ಭೇದವನ್ನೆಣಿಸದೆ ಎಲ್ಲರೂ ಒಂದೇ ಕುಟುಂಬದವರಂತೆ ಕೂಡಿಬಾಳುವದು. ಯಾವದಾದರೊಂದು ವಿಧಾಯಕ ಹಾಗೂ ಉತ್ಪಾದಕವಾದ ಉದ್ಯೋಗವನ್ನು ಕೈಕೊಳ್ಳುವದು ಇತ್ಯಾದಿ ದೈನಂದಿನ ಚಟುವಟಿಕೆಗಳಿಂದ ಕೂಡಿದ ಕಾರ್ಯಕ್ರಮವು ಅನೇಕ ವಿಷಮತೆಗಳಿಂದ ಕೂಡಿದ ಭಾರತದ ಸಮಾಜವನ್ನು ಸಮಾನತೆಯ ತಳಹದಿಯ ಮೇಲೆ ಹೊಸ ಸಮಾಜವನ್ನಾಗಿ ಪರಿವರ್ತಿಸುವ ಗುರಿಯನ್ನಿಟ್ಟುಕೊಂಡಿದೆ. ಸಾಮೂಹಿಕ ಪ್ರಾರ್ಥನೆಯು ಭಿನ್ನಭಿನ್ನ ಮತ, ಪಂಥ ಧರ್ಮಗಳ ಜನರನ್ನು ಒಂದುಗೂಡಿಸಿ, ಅವರ ಮನಸ್ಸನ್ನು ನಿರ್ಮಲಗೊಳಿಸಿ, ಶುಭಕಾರ್ಯಕ್ಕೆ ಪ್ರೇರಣೆನೀಡುತ್ತದೆ. ಶೈಶವದಿಂದಲೇ ಈ ರೀತಿಯ ಪರಿಣಾಮ ಉಂಟಾಗಹತ್ತಿದರೆ ನಿಜವಾಗಿಯೂ ಮುಂದಿನ ಪೀಳಿಗೆಯಲ್ಲಿ ಜಾತಿ, ಮತ, ಪಂಥಗಳ ಹೆಸರಿನಲ್ಲಿ ಸಮಾಜದಲ್ಲಿ ಇಂದು ಕಂಡುಬರುವ ವಿಷವು ಕಡಿಮೆಯಾಗುವದು. ಪ್ರಾರ್ಥನೆಯು ಸಮಾಜದಲ್ಲಿ, ಕಾಲಾಂತರದಲ್ಲಿಯಾದರೂ ಒಂದು ರೀತಿಯ ಮಾನಸಿಕ ಒಕ್ಕಟ್ಟನ್ನು ಉಂಟುಮಾಡಬಲ್ಲದು. ದೇಶದ ಅಭಿವೃದ್ಧಿಗಾಗಿ ಕೈಕೊಂಡ ಹಾಗೂ ಕೈಕೊಳ್ಳಲಿರುವ ಯೋಜನೆಗಳ ಯಶಸ್ಸು ಸಮಾಜದಲ್ಲಿಯ ಮಾನಸಿಕ ಒಕ್ಕಟ್ಟನ್ನು ಅವಲಂಬಿಸಿದೆ ಎಂದು ಅರಿತುಕೊಳ್ಳುವದು ಅಗತ್ಯವಿದೆ.

ನಮ್ಮ ದೇಶದಲ್ಲಿ ಅಸ್ಪೃಶ್ಯತೆಯ ಸಮಸ್ಯೆಯು ಶತಮಾನಗಳಿಂದ ರಾಷ್ಟ್ರೀಯ ಪ್ರಗತಿಗೆ ಕಾಲ್ತೊಡಕಾಗಿ ನಿಂತಿದೆ. ಆದರೆ ಜೀವನ ಶಿಕ್ಷಣ ಸಂಸ್ಥೆಗಳಲ್ಲಿ ಹರಿಜನರೂ ಉಳಿದ ಎಲ್ಲ ಉಚ್ಚಕುಲದವರೊಂದಿಗೆ ಹೆಗಲಿಗೆ ಹೆಗಲು ಹಚ್ಚಿ ವಿವಿಧ ವಿಧಾಯಕ ಕಾರ್ಯಗಳನ್ನು ಮಾಡುತ್ತಲಿರುವ, ಎಲ್ಲರೊಡನೆ ಸರಿಸಮಾನತೆಯಿಂದ ಕೂಡಿಕೊಂಡು ಊಟ ಉಡಿಗೆ ಮುಂತಾದ ಎಲ್ಲ ಸಾಂಘಿಕ ಕೆಲಸವನ್ನು ಮಾಡುತ್ತಿರುವ, ಚಿತ್ರವನ್ನು ಪ್ರತ್ಯಕ್ಷವಾಗಿ ಕಾಣಬಹುದು. ಎಂಥ ಕಾನೂನಿಗೂ ಸಾಧ್ಯವಾಗದಂತಹ ಸಾಮಾಜಿಕ ಕ್ರಾಂತಿಯನ್ನು ಜೀವನ ಶಿಕ್ಷಣದ ಹೃದಯದಂತಿರುವ ಸಾಂಘಿಕ ಜೀವನವು ಸಾಧ್ಯಗೊಳಿಸುತ್ತಲಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮೇಲು-ಕೀಳು, ಸ್ಪೃಶ್ಯಾಸ್ಪೃಶ್ಯ ಇತ್ಯಾದಿ ರೀತಿಯ ವಿಷಮತೆಯನ್ನು ಕೆಲವು ಮಟ್ಟಿಗೆ ಕಡಿಮೆ ಮಾಡಿದ ಕೀರ್ತಿಯು ಜೀವನ ಶಿಕ್ಷಣಕ್ಕೆ ಸಲ್ಲುವದು. ಶಿಕ್ಷಣ ಸಂಸ್ಥೆಗಳಲ್ಲಿ ಸಾಂಘಿಕ ಜೀವನದ ಚಟುವಟಿಕೆಗಳನ್ನು ಸಂಘಟಿಸಿ, ತನ್ಮೂಲಕ ಜಾತ್ಯತೀತ ರಾಷ್ಟ್ರವನ್ನು ಕಟ್ಟುವ ಮಹಾಕಾರ್ಯಕ್ಕೆ ಭದ್ರವಾದ ತಳಹದಿಯನ್ನು ನಿರ್ಮಿಸುತ್ತಲಿದೆ.

ನಮ್ಮ ದೇಶದಲ್ಲಿ ಸ್ವಚ್ಛತೆಯ ಬಗೆಗೆ ಸಾಕಷ್ಟು ಎಚ್ಚರಿಕೆಯನ್ನು ತಿಳಿದವರೂ ವಹಿಸುವದಿಲ್ಲ. ಜನಸಾಮಾನ್ಯರಿಗೆ ಸ್ವಚ್ಛತೆಯ ಮಹತ್ವವು ಇನ್ನೂ ತಿಳಿಯಬೇಕಾಗಿದೆ. ಕೆಲವರಿಗೆ ವೈಯಕ್ತಿಕ ಸ್ವಚ್ಛತೆಯ ಕಲ್ಪನೆ ಇದ್ದರೂ ಸಾಮೂಹಿಕ, ಸಾರ್ವಜನಿಕ ಸ್ವಚ್ಛತೆಯ ಕಲ್ಪನೆ ಇಲ್ಲದಾಗಿದೆ. ಸ್ವಚ್ಛತೆಯ ಬಗೆಗೆ ಜನಜಾಗ್ರತಿಯನ್ನುಂಟು ಮಾಡಲು ನಿತ್ಯದ ಸ್ವಚ್ಛತೆಯ ಚಟುವಟಿಕೆಗಳ ಮುಖಾಂತರ ಜೀವನ ಶಿಕ್ಷಣವು ಪ್ರಯತ್ನ ಮಾಡುತ್ತಲಿದೆ. ಬಾಹ್ಯ ಸ್ವಚ್ಛತೆಯು ಅಂತರಿಕ ಸ್ವಚ್ಛತೆಗೆ ದಾರಿ ಮಾಡಿಕೊಡಬೇಕೆಂಬ ಉದ್ದೇಶವನ್ನು ಜೀವನ ಶಿಕ್ಷಣವು ಅಂಥ ಚಟುವಟಿಕೆಗಳ ಸಂಘಟನೆಯ ಮುಖಾಂತರ ಸ್ಪಷ್ಟಪಡಿಸುತ್ತಲಿದೆ. ಸಮಾಜದ ವಿಚಾರ, ಉಚ್ಚಾರ ಹಾಗೂ ಆಚಾರಗಳಲ್ಲಿ ಸಾನಿತ್ಯವು ಮೈದೋರುವಂತೆ ತರಬೇತು ಕೊಡುವದು, ಪ್ರಾರ್ಥನೆ ಹಾಗೂ ಸಫಾಯಿ (ಸ್ವಚ್ಛತೆ) ಕಾರ್ಯಕ್ರಮಗಳ ಉದ್ದೇಶವಾಗಿದೆ.

ಶ್ರಮಗೌರವಕ್ಕೆ ನಮ್ಮ ದೇಶದಲ್ಲಿ ಯೋಗ್ಯ ಸ್ಥಾನವು ಇತ್ತೀತ್ತಲಾಗಿ ದೊರಕಹತ್ತಿದೆ. ಜೀವನ ಶಿಕ್ಷಣವು ದೈಹಿಕ ಶ್ರಮಕ್ಕೆ ಹೆಚ್ಚಿನ ಸ್ಥಾನವನ್ನು ಕಲ್ಪಿಸಿ ಕೊಟ್ಟಿದೆ. ನಮ್ಮ ದೇಶದ ಪರಿಸ್ಥಿತಿಯು ಪಾಶ್ಚಾತ್ಯ ದೇಶಗಳ ಪರಿಸ್ಥಿತಿಗಿಂತ ಅನೇಕಾಂಶಗಳಲ್ಲಿ ಭಿನ್ನವಾಗಿದೆ. ಇಲ್ಲಿಯ ಅತ್ಯಧಿಕ ಜನಸಂಖ್ಯೆಗೆ ಯಾಂತ್ರೀಕರಣವು ಸಾಕಷ್ಟು ಉದ್ಯೋಗವನ್ನು ಕಲ್ಪಿಸಿಕೊಡಲಾರದು. ಚಿಕ್ಕಪುಟ್ಟ ಉದ್ಯೋಗಗಳ ಮುಖಾಂತರ ಬಹು ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಡುವದು—ನಮಗೆ ಸಾಧ್ಯವಾಗಬಹುದು. ಆದುದರಿಂದಲೇ ಮೂಲ ಉದ್ಯಮಗಳ ಹಾಗೂ ಚಿಕ್ಕಪುಟ್ಟ ಕೈಗಾರಿಕೆಗಳ ತರಬೇತಿಯನ್ನು ಜೀವನ ಶಿಕ್ಷಣವು ಕೊಡುತ್ತಲಿದೆ. ಚೀನ ಹಾಗೂ ರಶಿಯಾ ದೇಶಗಳು ಸಾಧಿಸಿದ ಪ್ರಗತಿಯು ನೆಪವನ್ನು ಮುಂದೆ ಮಾಡಿ, ನಮ್ಮ ದೇಶದಲ್ಲಿ ಅನೇಕರು ಅವುಗಳ ಉದಾಹರಣೆಯನ್ನು ತೆಗೆದುಕೊಳ್ಳುತ್ತಾರೆ. ನಮ್ಮ ದೇಶವು ಸರ್ವಾಧಿಕಾರಿಯದಾಗಿರದೆ, ಪ್ರಜೆಗಳದಾಗಿದೆ ಎಂಬ ಮೂಲಭೂತ ಅಂಶವನ್ನೇ ಇವರು ಮರೆತಂತೆ ಕಾಣುತ್ತದೆ. ಪ್ರಜಾಪ್ರಭುತ್ವ ಪದ್ಧತಿಯು ಮನಸ್ಸಿನ ಪರಿವರ್ತನೆಯನ್ನು ಸಾಧಿಸಿ, ತನ್ಮೂಲಕ ಸರ್ವರ ಹಿತವನ್ನು ಸಾಧಿಸುವ ಪದ್ಧತಿಯಾಗಿದೆ. ಜೀವನ ಶಿಕ್ಷಣದ ಹಾಗೂ ಪ್ರಜಾಪ್ರಭುತ್ವದ ಪದ್ಧತಿಯ ತಳಹದಿಯು ಒಂದೇ ಆಗಿದೆ. ಆದುದರಿಂದ ಭಾರತದ ಅಭ್ಯುದಯವನ್ನು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿಯೇ ಸಾಧಿಸಲು ಜೀವನ ಶಿಕ್ಷಣವು ಅತ್ಯಂತ ಸಹಾಯಕವಾಗಬಲ್ಲದು.

ಜೀವನ ಶಿಕ್ಷಣದ ಧ್ಯೇಯೋದ್ದೇಶಗಳು ನಿಜವಾಗಿಯೂ ಅತ್ಯಂತ ದೂರದೃಷ್ಟಿಯನ್ನು ಪಡೆದುಕೊಂಡಿವೆ. ಆದರೆ ಇವುಗಳನ್ನು ಕಾರ್ಯಗತಗೊಳಿಸುವ ಕಾರ್ಯಕರ್ತರ ಯೋಗ್ಯತೆಯು ಇನ್ನೂ ಎತ್ತರವಾಗಬೇಕಾಗಿದೆ. ಎಳೆಯ ಹೆಗಲಿನ ಮೇಲೆ ಹೆಚ್ಚು ಭಾರವನ್ನು ಹೇರಿದೆಯೋ ಏನೋ ಎಂಬಂತೆ ಆಗಾಗ್ಗೆ ಭಾಸವಾಗುತ್ತದೆ. ಕಾರಣವೆಂದರೆ ಜೀವನ ಶಿಕ್ಷಣ ಪಡೆದ ಶಿಕ್ಷಕರನೇಕರಲ್ಲಿ ಆ ಎತ್ತರಮಟ್ಟದ ಸಾಮರ್ಥ್ಯವು ಕಂಡುಬರುತ್ತಿಲ್ಲ. ಇಂಥ ಶಿಕ್ಷಕರು ತಾವು ವಾಸಿಸುವ ಸಮಾಜಕ್ಕೆ ಸ್ಫೂರ್ತಿನೆಲೆಯಾಗಿ ನಿಲ್ಲಲಾರರು. ನಿಜವಾಗಿ ಎತ್ತರಮಟ್ಟದ ಸಾಮರ್ಥ್ಯವುಳ್ಳ ಶಿಕ್ಷಕರು ಉದಯವಾಗಬೇಕಾಗಿದೆ. ಹಳ್ಳಿಹಳ್ಳಿಗೆ ಜೀವನ ಶಿಕ್ಷಣ ಪಡೆದ ಶಿಕ್ಷಕನು ಮೇಟಿಯಂತೆ ಇದ್ದು ಆ ಹಳ್ಳಿಯ ಸರ್ವತೋಮುಖ ಉನ್ನತಿಯನ್ನು ಸಾಧಿಸಬೇಕಾಗಿದೆ.

ಇಂದಿನ ಹಳ್ಳಿಗಳು ಅನೇಕ ಕಠಿಣ ಸಮಸ್ಯೆಗಳ ತವರಾಗಿವೆ. ಅನೇಕ ಹಳ್ಳಿಗಳಲ್ಲಿ ಕೊಲೆ, ಸುಲಿಗೆ, ಕಳವು

ಪಕ್ಷಸಂಗಡಗಳ ಶಿಕ್ಕಾಟ ಇತ್ಯಾದಿಗಳು ನಿತ್ಯದ ವ್ಯವಹಾರವಾಗಿವೆ. ಹೀಗಾಗಿ ರಾಷ್ಟ್ರದ ಅಭಿವೃದ್ಧಿ ಕುಂಠಿತವಾಗಿದೆ. ಇತ್ತೀತ್ತಲಾಗಿ ಭಾರತ ಸರಕಾರವು ಜನರಿಗೆ ಸ್ವಯಂ ಶಾಸನದ ತರಬೇತು ಕೊಡಲು ಆಡಳಿತದಲ್ಲಿ ವಿಕೇಂದ್ರೀಕರಣವನ್ನು ಸಾಧಿಸಿ, ಗ್ರಾಮ ಪಂಚಾಯತಿಗಳನ್ನು ಭರದಿಂದ ದೇಶದ ತುಂಬೆಲ್ಲ ಪುನರುಜ್ಜೀವಿಸುತ್ತಲಿದೆ. ಇವುಗಳಿಗೆ ಸಾಕಷ್ಟು ಆರ್ಥಿಕ ಸಹಾಯ ಹಾಗು ಅಧಿಕಾರ ಇವುಗಳನ್ನು ಕೊಡುತ್ತಲಿದೆ ಆದರೆ ಹಳ್ಳಿಗರ ಅಜ್ಞಾನದ ಮೂಲಕ ಈ ಎಲ್ಲ ಸವಲತ್ತುಗಳ ದುರುಪಯೋಗವು ನಡೆದಿದೆ. ಇಂಥ ಪರಿಸ್ಥಿತಿಯಲ್ಲಿ ಗಾಂಧೀಜಿಯವರು ಬಯಸಿದ ಗ್ರಾಮರಾಜ್ಯವನ್ನು ಕಟ್ಟುವುದೆಂತು? ಹಳ್ಳಿಗಳಲ್ಲಿ ಸ್ವಾವಲಂಬನೆ, ಶ್ರಮ ಗೌರವ, ಪರಸ್ಪರ ಪ್ರೇಮ, ಸಹಕಾರ, ತ್ಯಾಗ ಇತ್ಯಾದಿ ಸಾಮಾಜಿಕ ಸದ್ಗುಣಗಳು ತಲೆದೋರದೆ ಹೋದರೆ, ಗಾಂಧೀಜಿಯು ಆಶಿಸಿದ ಗ್ರಾಮರಾಜ್ಯದ ಕಲ್ಪನೆಯು ಕನಸಾಗಿಯೇ ಉಳಿದೀತು. ಜೀವನ ಶಿಕ್ಷಣವು ಈ ದಿಶೆಯಲ್ಲಿ ಯಶಸ್ವಿಯಾಗಬೇಕಾದರೆ, ಹಳ್ಳಿಯಲ್ಲಿ ವಾಸಿಸುವ ಶಿಕ್ಷಕನು ಅತ್ಯಂತ ಆದರ್ಶನಾಗಿರಬೇಕಾಗುವದು. ಇದಕ್ಕೆ ಕಾಲಾವಕಾಶವೂ ಬೇಕಾದೀತು. ಉಚ್ಚ ಮಟ್ಟದ ಸಾಮಾಜಿಕ ಪ್ರಜ್ಞೆಯು ತಲೆದೋರಿದಾಗ, ಹಳ್ಳಿಗಳ ಅರ್ಥಾತ್ ದೇಶದ ಉದ್ಧಾರವು ಸಾಧ್ಯವಾಗುವುದು.

(೩೨ನೆಯ ಪುಟದಿಂದ ಬಂದದ್ದು)

ತಳಹದಿಯನ್ನಾಗಿ ಮಾಡಿಕೊಂಡಿರುವದರಿಂದ ಮಕ್ಕಳ ವಯೋಮಾನಕ್ಕನುಸರಿಸಿ ಅವರಿಗೆ ಅವಶ್ಯವಿರುವ ಎಲ್ಲ ಸಂಗತಿಗಳನ್ನು ಪೂರೈಸುವ ಕಡೆಗೆ ಅತಿಹೆಚ್ಚು ಲಕ್ಷ ಕೊಡಲಾಗಿದೆ. ಅಂತೆಯೇ ಮಗು ಮಧ್ಯಗಾಮಿ ಶಿಕ್ಷಣವು ಇದಾಗಿದೆ. ಮಗುವಿನ ವ್ಯಕ್ತಿತ್ವಕ್ಕೆ ಎಳ್ಳಷ್ಟು ಧಕ್ಕೆ ತರಗೊಡದೆ ಶಿಕ್ಷಣವನ್ನು ಸಾಗಿಸುವ ಕ್ರಮವನ್ನು ಅನುಸರಿಸಿದ್ದಾಗಿದೆ. ಮೂಲಶಿಕ್ಷಣ ಶಾಲೆಯಲ್ಲಿಯ ಶಿಕ್ಷಕನಿಗೆ ಮನೋವಿಜ್ಞಾನದ ಜ್ಞಾನವು ಅತ್ಯವಶ್ಯವಿದೆ ಎಂಬುದನ್ನು ಮನಗಾಣಿಸಿ ಕೊಡಲಾಗಿದೆ. ಬಾಲ್ಯದಲ್ಲಿ ಮಕ್ಕಳ ಒಲವು ಕ್ರಿಯಾತ್ಮಕ ಚಟುವಟಿಕೆಗಳ ಕಡೆಗೆ ಹೆಚ್ಚು ಇರುತ್ತದೆ. ಎಂಬ ಮನೋವಿಜ್ಞಾನಿಕ ತತ್ವವನ್ನು ಒಪ್ಪಿಕೊಂಡು ಮೂಲಶಿಕ್ಷಣವನ್ನು ಕ್ರಿಯಾತ್ಮಕ ಶಿಕ್ಷಣವನ್ನಾಗಿ ಮಾಡಲಾಗಿದೆ. ಈ ವಿಷಯದಲ್ಲಿ ಟೀಕೆ ಮಾಡುವ ಆಸ್ಪದವು ಯಾರಿಗೂ ಸಿಗಬಾರದು. ಶಾಲೆಯನ್ನು ಸಮುದಾಯ ಕೇಂದ್ರವನ್ನಾಗಿ ಮಾಡಿ ಮಕ್ಕಳಲ್ಲಿ ಸಮಾಜದ ಬಗೆಗೆ ಹಾಗೂ ಸಮಾಜದಲ್ಲಿ ಮಕ್ಕಳ ಬಗೆಗೆ ಪ್ರೀತಿ ವಿಶ್ವಾಸಗಳು ಬೆಳೆಯಬೇಕೆಂದು ಪ್ರಯತ್ನ ಮಾಡುತ್ತಿದೆ. ಶಾಲೆಯನ್ನು ಸಮಾಜ ಕೇಂದ್ರವನ್ನಾಗಿ ಮಾಡುವದರಿಂದ ಮಕ್ಕಳಿಗೆ ಪ್ರತ್ಯಕ್ಷವಾಗಿ ಸಮಾಜದ ಕೂಡ ಯಾವರೀತಿ ಸಂಬಂಧವಿಟ್ಟುಕೊಳ್ಳಬೇಕು, ಸಮಾಜಕ್ಕೆ ಯಾವ ರೀತಿಯಿಂದ ಸೇವೆ ಸಲ್ಲಿಸಬೇಕು, ಎಂಬುದನ್ನು ಕಲಿಸಿಕೊಡಲಾಗುತ್ತಿದೆ. ಸಮಾಜದ ಜನರು ಶಾಲೆಗಳಲ್ಲಿ ಬಂದದ್ದಾದರೆ ಅದು ಜೀವನ ಶಿಕ್ಷಣದ ಪುಣ್ಯದಿಂದಲೇ ಎಂದು ನಾವು ಹೇಳಬಹುದು. ಏಕೆಂದರೆ ಮೊದಲಿನ ಶಿಕ್ಷಣದಲ್ಲಿ ಹೊರಗಿನ ಜನರು ಶಾಲೆಗೆ ಬರುವದು ತೀರ ವಿರಳವಾಗಿತ್ತಲ್ಲದೆ ಶಾಲೆಗೆ ಹೋಗುವದು ತಮ್ಮ ಕೆಲಸವಲ್ಲ–ಅದು ಮಕ್ಕಳ ಕೆಲಸ ಎಂದು ಜನರು ತಿಳಿದುಕೊಳ್ಳುವ ಪರಿಸ್ಥಿತಿ ಇತ್ತು. ಜೀವನ ಶಿಕ್ಷಣ ಶಾಲೆಗಳು ಸಮಾಜದ ಕೂಡ ಯಾವ ರೀತಿ ಸಂಸರ್ಕವಿಟ್ಟುಕೊಂಡಿರುತ್ತವೆ ಎಂಬುದನ್ನು ಪ್ರತ್ಯಕ್ಷ ಕಂಡೇ ಮನಗಾಣಬೇಕು. ಅದೇ ರೀತಿ ಪಾಲಕರ ಕೂಡ ನೇರವಾದ ಹಾಗೂ ಗೌರವಯುತವಾದ ಸಂಬಂಧಗಳನ್ನು ಜೀ. ಶಿ. ಶಾಲೆಗಳಲ್ಲಿಯ ಎಲ್ಲ ಶಿಕ್ಷಕರು ಇಟ್ಟುಕೊಂಡಿರುವದನ್ನು ನಾವು ಕಾಣಬಹುದು. ಪಾಲಕರ ದಿನಾಚರಣೆ ಮುಂತಾದ ತತ್ವಗಳಲ್ಲಿ ಪಾಲಕರು ಮೊದಲಿನಕಿಂತಲೂ ಹೆಚ್ಚು ಪ್ರಮಾಣದಲ್ಲಿ ಶಾಲಾ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವದನ್ನೇ ನಾವು ನೋಡುತ್ತಿದ್ದೇವೆ. ಈ ವಿಷಯದಲ್ಲಿ ಗಾಂಧೀಜಿಯವರು ಹಾಕಿಕೊಟ್ಟ ಮಾರ್ಗದಂತೆ ಜೀ. ಶಿ. ಅನುಸರಿಸುತ್ತಲಿದೆ. ಶಿಕ್ಷಿತ ಮನುಷ್ಯನು ಸ್ವಾವಲಂಬಿಯಾಗಿರಬೇಕು. ಎಂಬ ಗಾಂಧೀಜಿಯವರ ಮಾತನ್ನು ಕೃತಿಗಳಿಸಿದ್ದನ್ನು ಶಾಲೆಗಳಲ್ಲಿಯ ಮಕ್ಕಳು ಮಾಡುವ ಸಫಾಯಿ, ಸ್ವಚ್ಛತೆ, ವರ್ಗದ ಅಲಂಕಾರ, ಪ್ರದರ್ಶನಗಳ ಏರ್ಪಾಡು ಮಾಡುವದು ಇತ್ಯಾದಿ ನೋಡಿದರೆ ಪೂರ್ಣ ಮನವಟ್ಟಾಗುವದು. ಮಕ್ಕಳಿಗೆ ಅಕ್ಷರ ಜ್ಞಾನವನ್ನು ಮಾಡಿಕೊಡಲು "ಲೀಲಾ ಪದ್ಧತಿ" ಅಥವಾ ಕ್ರೀಡಾಪದ್ಧತಿಯ ಮೂಲಕ ಅಕ್ಷರಗಳನ್ನು ಮೊದಲು ಗುರುತು ಹಿಡಿಯುವದು. ಅನಂತರ ಓದುವದು ಹಾಗೂ ನಂತರ ಬರೆಯುವ ಕ್ರಮವನ್ನು ಶಾಲೆಯಲ್ಲಿ ಅನುಸರಿಸಲಾಗುತ್ತಿದೆ. ಈ ರೀತಿ ಶಿಕ್ಷಣವು ಮಕ್ಕಳಿಗೆ ಒಂದು ಹೊರೆಯಾಗಿದೆ. ಅದು ಒಂದು ಕೃತಿಯಾದಂತೆ ಮಾಡುವದರಲ್ಲಿ ಜೀ. ಶಿ. ಸಫಲತೆ ಪಡೆದಿದೆ. **ದೊಡ್ಡ ದೊಡ್ಡ**

ಇಮಾರತುಗಳೇ ಬೇಕು. ಬೇರೆ ಬೇರೆ ವಿಷಯಗಳಿಗೋಸ್ಕರ ಬೇರೆ ಬೇರೆ ಕಟ್ಟಡಗಳು ಬೇಕು ಎಂದು ಜೀ. ಶಿ. ಬಯಸುವದಿಲ್ಲ. ಅಷ್ಟೆ ಅಲ್ಲ ಸುಸಜ್ಜಿತ ಮಹಾಲುಗಳ ಅವಶ್ಯಕತೆ ಅದಕ್ಕೆ ಇಲ್ಲವೆ ಇಲ್ಲ. ಏಕೆಂದರೆ ಭಾರತದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಕ್ಕಳು ವಾಸಿಸುವದು ಸಣ್ಣ ಸಣ್ಣ ಮನೆಗಳಲ್ಲಿ ಹಾಗೂ ಗುಡಿಸಲುಗಳಲ್ಲಿ ಅಂದಮೇಲೆ ಪರಿಸ್ಥಿತಿಗೆ ಅನುಗುಣವಾದ ಶಿಕ್ಷಣವು ನಡೆಯಬೇಕಾದರೆ ಇಂಥ ಸಣ್ಣ ಮನೆಗಳೇ ಯೋಗ್ಯವಲ್ಲವೇ ? ಇಂಥ ಕಟ್ಟಡಗಳ ಸ್ವಚ್ಛತೆಯ ಕಡೆಗೆ ಸ್ವಾವಲಂಬಿ ಶಿಕ್ಷಕರು ಹಾಗೂ ಮಕ್ಕಳು ಸಂಪೂರ್ಣ ಗಮನಕೊಡುವದರಿಂದ ಆರೋಗ್ಯದ ಬಗ್ಗೆಯೂ ಯಾವ ಅಡ್ಡಿ ಆತಂಕಗಳು ಬರಲಾರವು.

ಮೇಲೆ ಹೇಳಿದ ಯಾವದೇ ವಿಷಯದಲ್ಲಿ ಟೀಕೆಗಳು ಇಲ್ಲದಿದ್ದರೂ ಮೂಲೋದ್ಯೋಗವನ್ನು ಶಿಕ್ಷಣದಲ್ಲಿ ಸೇರಿಸಿಕೊಂಡಿದ್ದರ ಬಗ್ಗೆ ಮಾತ್ರ ಹೆಚ್ಚಿನ ಪ್ರಮಾಣದಲ್ಲಿ ಟೀಕೆಗಳಿಗೆ ಜೀವನ ಶಿಕ್ಷಣವು ಗುರಿಯಾಗಬೇಕಾಗಿದೆ. ಅಭ್ಯಾಸಪತ್ರಿಕೆಯನ್ನು ಯಾವದೊಂದು ಮೂಲ ಉದ್ಯೋಗದ ಸುತ್ತಲೂ ಹೆಣೆಯಲಾಗಿದೆ. ಇದು ಕೆಲವು ಜನರಿಗೆ ಟೀಕೆ ಮಾಡುವ ಆಸ್ಪದಕೊಟ್ಟಿದೆ. ಇದಕ್ಕೆ ಕೆಲಮಟ್ಟಿಗೆ ಜೀ. ಶಿ. ಶಾಲೆಗಳಲ್ಲಿಯ ಶಿಕ್ಷಕರೇ ಹೊಣೆಗಾರರೆಂದು ಅನುಭವದ ಸಹಾಯದಿಂದ ನಾವು ಹೇಳಬಹುದು. ಯಾಕೆಂದರೆ ಉತ್ಪನ್ನವನ್ನು ಹೆಚ್ಚು ಮಾಡುವ ಏಕದೃಷ್ಟಿಯಿಂದ ಅವರು ಮಕ್ಕಳಕಡೆಯಿಂದ ಕೇವಲ ಉದ್ಯೋಗವನ್ನು ಮಾಡಿಸುತ್ತಾರೆಯೇ ಹೊರತು ಅವರ ಇನ್ನಿತರ ವಿಕಾಸಗಳ ಕಡೆಗೆ ಗಮನವನ್ನು ಕೊಡುವದಿಲ್ಲ. ಇದಕ್ಕೆ ಮೇಲಧಿಕಾರಿಗಳು ಉತ್ಪನ್ನದ ಬಗ್ಗೆ ತೆಗೆಯುವ ತಕರಾರು ಮುಖ್ಯ ಕಾರಣವೆಂದು ಕೆಲ ಶಿಕ್ಷಕರು ಹೇಳುವದನ್ನು ನಾವು ಪ್ರತ್ಯಕ್ಷ ನೋಡಿದ್ದೇವೆ. ಗಾಂಧೀಜಿಯವರ ವಿಚಾರಗಳನ್ನು ಸರಿಯಾಗಿ ಅರಿಯದೇ ಹೋದ ಒಬ್ಬಿಬ್ಬ ಶಿಕ್ಷಕರು ಶಾಲೆಯನ್ನು ಕಾರ್ಖಾನೆಯನ್ನಾಗಿ ಮಾಡಿದ್ದಾದರೆ ಅದು ಜೀವನ ಶಿಕ್ಷಣದ ತಪ್ಪು ಅಲ್ಲ; ಅದು ಕೇವಲ ವ್ಯಕ್ತಿದೋಷವೆನ್ನಬಹುದು. ಮೂಲೋದ್ಯೋಗಗಳ ಬಗ್ಗೆ ಗಾಂಧೀಜಿಯವರು ಹೇಳಿದ ವಿಚಾರಗಳನ್ನು ಓದಿದರೆ ಇದು ಮನವರಿಕೆಯಾಗದೇ ಇರಲಾರದು. ಅಂತೆಯೇ ಶಿಕ್ಷಕರು ಮೂಲೋದ್ಯೋಗಗಳ ಪಾತ್ರವನ್ನು ಸರಿಯಾಗಿ ತಿಳಿದುಕೊಳ್ಳುವ ಅವಶ್ಯಕತೆ ಬಹಳವಿದೆ. ಮೂಲೋದ್ಯೋಗಗಳ ಮುಖಾಂತರ ವಿಷಯಗಳನ್ನು ಕಲಿಸುವ ಶಿಕ್ಷಕ ಒಮ್ಮೊಮ್ಮೆ ವಿಚಿತ್ರವಾದ ರೀತಿಯಲ್ಲಿ ಆ ಚಟುವಟಿಕೆಗೂ ವಿಷಯಕ್ಕೂ ಗಂಟು ಹಾಕುವದನ್ನು ನಾವು ಪ್ರತ್ಯಕ್ಷ ನೋಡಿದ್ದೇವೆ. ಅದೂ ಸಹ ಆಯಾ ಶಿಕ್ಷಕರ ತಪ್ಪೇ ಹೊರತು ಜೀವನ ಶಿಕ್ಷಣ ತತ್ವಪ್ರಣಾಲಿಯ ತಪ್ಪು ಎಂದು ನಾವು ಸರ್ವಥಾ ತಿಳಿಯಕೂಡದು. ಯಾವ ವಿಷಯವನ್ನು ಸಮವಾಯಪದ್ಧತಿಯ ಮೂಲಕ ಕಲಿಸಲು ಸಾಧ್ಯವಾಗುವದಿಲ್ಲವೋ ಅದನ್ನು ಸಾದಾ ರೀತಿಯಿಂದ ಕಲಿಸಲು ಯಾವ ಅಡ್ಡಿಯೂ ಇಲ್ಲವೆಂದು ಸ್ವತಃ ಗಾಂಧೀಜಿಯವರೇ ಹೇಳಿದ್ದಾರೆ. ಮೂಲೋದ್ಯೋಗಗಳು ವ್ಯಕ್ತಿವಿಕಾಸದ ಸಾಧನಗಳಾಗಬೇಕೇ ಹೊರತು ಕೇವಲ ಉತ್ಪನ್ನದ ಸಾಧನವಾಗಬಾರದು. ಈ ವ್ಯಕ್ತಿಗತ ದೋಷಗಳನ್ನು ಇಲ್ಲದಂತೆ ಮಾಡಿದ್ದಾದರೆ ಉದ್ಯೋಗದ ಅಥವಾ ಚಟುವಟಿಕೆಯ ಮೂಲಕ ಶಿಕ್ಷಣವನ್ನು ಕೊಡುವ ಪದ್ಧತಿಯು ಸರ್ವಸಾಮಾನ್ಯವಾಗಿದ್ದೆಂದು ನಾವು ತಿಳಿಯಬೇಕು. ಈ ಉದ್ಯೋಗ ಮಾಡಿಸುವ ದಿಶೆಯಲ್ಲಿ ಶಿಕ್ಷಕರು ಸ್ವತಃ ಶ್ರಮ ಪಡಬೇಕಾದುದು ಅನಿವಾರ್ಯ. ಆ ಉದ್ಯೋಗದ ಸಂಪೂರ್ಣ ಜ್ಞಾನವು ಶಿಕ್ಷಕರಲ್ಲಿರಬೇಕು. ಉದ್ಯೋಗಗಳ ಬಗ್ಗೆ ಜನರಲ್ಲಿ ಅದರಲ್ಲೂ ಪಾಲಕರಲ್ಲಿ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ಅವರಿಗೆ ಅವುಗಳ ಬಗ್ಗೆ ಸರಿಯಾಗಿ ತಿಳುವಳಿಕೆ ಮಾಡಿಕೊಡುವ ಸಾಮರ್ಥ್ಯವು ಶಿಕ್ಷಕರಲ್ಲಿದ್ದರೆ ಜೀವನ ಶಿಕ್ಷಣಕ್ಕೆ ಈ ದಿಶೆಯಲ್ಲಿದ್ದ ಟೀಕೆಯು ತಾನಾಗಿಯೇ ಕಡಿಮೆಯಾಗುವದು.

ಪಠ್ಯ ಪುಸ್ತಕಗಳಿಗಾದರೂ ಜೀವನ ಶಿಕ್ಷಣದಲ್ಲಿ ಗಾಂಧೀಜಿಯವರ ಮನಸ್ಸಿನಲ್ಲಿದ್ದಷ್ಟೇ ಸ್ಥಾನವನ್ನು ಕೊಟ್ಟಿದ್ದಾಗಿದೆ. ಮಗುವಿನ ಜೀವನದಲ್ಲಿ ಬರುವ ನಾನಾ ಸನ್ನಿವೇಶಗಳೇ ನಿಜವಾದ ಪಠ್ಯವಸ್ತುಗಳು. ಈ ಸನ್ನಿವೇಶಗಳಿಗೆ ಹೊಂದಿಕೆಯಾಗುವ ಚಟುವಟಿಕೆಗಳನ್ನು ಮಕ್ಕಳಿಂದ ಮಾಡಿಸಿ ನಂತರ ಪಠ್ಯಪುಸ್ತಕದಲ್ಲಿಯ ವಿಷಯವನ್ನು ಮುಗಿಸುವ ಪರಿಪಾಠವಿಟ್ಟುಕೊಳ್ಳಲಾಗಿದೆ. ಅದೇ ಪ್ರಕಾರ ಸಾಂಘಿಕ ಜೀವನದ ಮೂಲಕ ಗಾಂಧೀಜಿಯವರ ಕನಸಿನ ಸಮಾಜವನ್ನು ನನಸನ್ನಾಗಿ ಮಾಡುವ ಪ್ರಯತ್ನ ಕೈಕೊಳ್ಳಲಾಗಿದೆ.

ಹೀಗೆ ಪ್ರತಿಯೊಂದು ವಿಷಯದಲ್ಲಿಯೂ ಗಾಂಧೀಜಿಯವರನ್ನೇ ಆದರ್ಶವಾಗಿಟ್ಟುಕೊಂಡು ಸಾಗಿದ ಜೀವನ ಶಿಕ್ಷಣದ ಪ್ರಗತಿ ಯೋಜಿಸಿದಷ್ಟು ಆಗಿಲ್ಲ ಎನ್ನಬಹುದು. ಇದಕ್ಕೆ ಕಾರಣಗಳೂ ಹಲವಾರು ಇದ್ದರೂ ಅದರ ಪೂರ್ಣ ಪ್ರಗತಿ ಶಿಕ್ಷಕರ ಕೈಯಲ್ಲಿದೆ. ಜೀವನ ಶಿಕ್ಷಣದ ದೀಕ್ಷೆ ತೆಗೆದುಕೊಂಡ ಶಿಕ್ಷಕರು ಟೀಕೆಗಳಿಗೆ ಹೆದರಬೇಕಾಗಿಲ್ಲ. ಅಥವಾ ಅವುಗಳನ್ನು ಬಗ್ಗು ಬಡೆಯಬೇಕಾಗಿಲ್ಲ. ಆ ಟೀಕೆಗಳ ಸರಿಯಾದ ಅರ್ಥಮಾಡಿಕೊಂಡು ಯೋಗ್ಯ ರೀತಿಯಲ್ಲಿ ಅವುಗಳ ನಿವಾರಣೆ ಮಾಡಬೇಕು. ಮಹಾತ್ಮಾ ಗಾಂಧೀಜಿಯವರ ಆಶೀರ್ವಾದ ಜೀವನ ಶಿಕ್ಷಣ ಕಾರ್ಯಕರ್ತರಿಗೆ ಇದೆ. ಅವರ ಪ್ರಯತ್ನಕ್ಕೆ ಫಲ ಕೊಡುವ ಕಾಲವು ಸನ್ನಿಹಿತವಾಗಿದೆ.

Regd. No. B. 5375

ಭಾಗ ೧ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ ೧

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೋ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡೆ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಸಹಿತ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧-೨ನೆಯ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.
- ಆಗಸ್ಟ ದಿಂದ ಆಗಸ್ಟಕ್ಕೆ ಒಂದು ವರುಷ ಬಿಡಿ ಕುಸುಮ ಚಂದಾದಾರರಿಗೆ ೩ ಬೆಲೆಯಲ್ಲಿ [ಅಂಚೆಬೆ
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪಹಣ ತಮ್ಮ ಶಿಕ್ಷಕ ಮಿ
ಏಳ್ಗೆಗೆ ಮೀಸಲು. ಗೆಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! **ಸಚಿತ್ರ ಗ್ರಂಥ !!** **ಸುಂದರ ಮುದ್ರಣ**

"ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮ ತಣಿಸುವಂಥ, **ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂ ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ‍್ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂ ಅಮೋಘ ಗ್ರಂಥ.**

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿ ಬಣ್ಣ ಬಣ್ಣಗಳಲ್ಲಿ ೪೧ ಫೋಟೋ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರ **ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಆಗಸ್ಟ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯ ಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಸಾದಾ ಪ್ರತಿ ೩ ರೂ.] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಶನ್. **[ಸುಂದರ ಪ್ರತಿ ೪ ರ**

ವಿಳಾಸ :– ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬೆ, ಜಿಲ್ಲಾ :— ವಿಜಾಪುರ.

Printed by Shri S. F. Kattimani, at Manohar Power Printing Press, Hubli. Edited
Published by Sjts. M. G. Katti, B. M. Shintri, S. R. Tatti & Smti. P. A. Bhaskar, at
Kannada Jeevan Shikshan Office, Govt. Training College for Men, Dharwar.

ಪ್ರಧಾನ ಸಂಪಾದಕರು : ಶ್ರೀ ಎಮ್. ಜಿ. ಕಟ್ಟಿ

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಎಮ್. ಜಿ. ಹಂದ್ರಾಳ, ಬಿ.ಎ.(ಆನರ್ಸ),ಎಮ್.ಈಡಿ.,ಡಿ.ಬಿ.ಈಡಿ ,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಎಮ್. ಜಿ. ಕಟ್ಟಿ, ಬಿ.ಎ.(ಆನರ್ಸ), ಬಿ.ಟಿ.,ಡಿ.ಬಿ.ಈ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೫ ಸಪ್ಟಂಬರ ೧೯೫೯ ಸಂಚಿಕೆ

— ಪರಿವಿಡಿ —

೧)	ಸಂಪಾದಕೀಯ	....	
೨)	ಗಾಂಧೀಜಿ ಹಾಗೂ ಶ್ರಮಗೌರವ	....	ಶ್ರೀ ಎಸ್. ವ್ಹಿ. ಘೊಬ್ಬಿ
೩)	ಸಾಲೆಗಳಲ್ಲಿ ನೈತಿಕ ತರಬೇತಿ	....	ಶ್ರೀ ಎನ್. ಎಸ್. ನಾಡಕರ್ಣಿ ಶ್ರೀ ಆರ್. ಎಸ್. ಸೂರ್ಯವಂಶಿ
೪)	ಇಂಗ್ಲೀಷ ಭಾಷೆಯ ಅಕ್ಷರಗಳ ಪರಿಚಯ	....	ಶ್ರೀ ಎಸ್. ಆರ್. ತಟ್ಟಿ
೫)	ಗುಡ್ಡಗಳಲ್ಲಿ ಕೊರೆದ ದೇವಾಲಯಗಳು	....	ಶ್ರೀ ಶಿಂತ್ರಿ ಬಸಪ್ಪನವರು
೬)	ಜೀವನ ಶಿಕ್ಷಣದಲ್ಲಿ ಮೂಲೋದ್ಯೋಗದ ಆರ್ಥಿಕ ಸ್ವಾಯತ್ತತೆಯು	....	ಶ್ರೀ ಎ. ಲಾ. ರಾವೂತ
೭)	ಜೀವನ ಶಿಕ್ಷಣದ ದೀಕ್ಷೆಯನ್ನು ಪಡೆಯುತ್ತಿರುವ ನಮ್ಮ ಪ್ರಾಥಮಿಕ ಶಾಲೆಗಳು	....	ಕುಮಾರಿ ಸುಶೀಲಾ ಹುಲಸೋಗಿ
೮)	ಹಳ್ಳಿಯ ವಾಚನಾಲಯಗಳ ಸಮಸ್ಯೆಗಳು ಹಾಗೂ ಅವುಗಳ ನಿವಾರಣೋಪಾಯಗಳು	....	ಶ್ರೀ ಪಾವಟೆ ಚೆನ್ನಪ್ಪನವರು
೯)	ರವೀಂದ್ರರು ಮತ್ತು ಶಿಕ್ಷಣ	....	ಕುಮಾರಿ ವೇಣುಬಾಯಿ ಅ. ಶೀಲಭದ್ರ
೧೦)	ರವೀಂದ್ರರು ಮತ್ತು ಸಾಹಿತ್ಯ	....	ಶ್ರೀ ದೊಡ್ಡಮನಿ ಬಿ. ಎ.
೧೧)	ವ್ಯಕ್ತಿತ್ವವನ್ನು ಅರಳಿಸಿಕೊಳ್ಳುವದು ಸಾಧ್ಯವಿದೆ ಪ್ರೌಢ ಶಿಕ್ಷಕರು ಇತ್ತ ಗಮನಕೊಡಬೇಕು	....	ಶ್ರೀ ಅನ್ನದಾನೇಶ್ವರ ವಿರಕ್ತಮಠ
೧೨)	ಸುದ್ದಿಗಳು	....	

ಸಂಪಾದಕೀಯ

[ಸಂದರ್ಭ— ಹಿಂದಿನ ಸಂಚಿಕೆಗಳಲ್ಲಿ "ಸಂಪಾದಕೀಯ" ವಿಭಾಗದಲ್ಲಿ ಬರೆದ ವಿಷಯಗಳು— ೧. ಅಂದಾಜು ಪತ್ರಿಕೆಗಳು, ೨. ಪ್ರಗತಿ ಪತ್ರಿಕೆಗಳು, ೩. ರಾಷ್ಟ್ರೀಯ ಚಟುವಟಿಕೆಗಳು— ರಾಷ್ಟ್ರೀಯ ದಿನಾಚರಣೆ ಮತ್ತು ಹಬ್ಬಗಳ ಆಚರಣೆ.]

ಸೂಚನೆ : ಸಂದರ್ಭದಲ್ಲಿ ಕೊಟ್ಟ ವಿಷಯಗಳ ಹಿನ್ನೆಲೆಯಲ್ಲಿ ಕೆಳಗೆ ಕಾಣಿಸಿದ ವಿಷಯಗಳನ್ನು ಬರೆಯಲಾಗಿದೆ.

೧. ಶಿಕ್ಷಣದಲ್ಲಿ ಪ್ರಗತಿಯನ್ನು ಅಳೆಯುವದು

(ಅ) ಶಾಲೆಗಳಲ್ಲಿ ಗುರೂಜಿಯವರು ಪ್ರಗತಿ ಪತ್ರಿಕೆಗಳಲ್ಲಿ ಬಾಲಕರು ಪ್ರತಿದಿನ ಮಾಡಿದ ಕಾರ್ಯಗಳನ್ನು ಕುರಿತು ಟಿಪ್ಪಣಿಗಳನ್ನು ಬರೆಯುತ್ತಾರೆ. ಕೆಲವು ಸಾರೆ ಬಾಲಕರೇ ತಾವು ಮಾಡಿದ ಕೆಲಸಗಳ ಬಗ್ಗೆ ಟಿಪ್ಪಣಿಗಳನ್ನು ಬರೆದಿಡುತ್ತಾರೆ. "ದಿನಚರಿ"ಗಳಲ್ಲಿ ಬಾಲಕರು ದಿನಾಲು ತಾವು ಮಾಡಿದ ಮೂಲೋದ್ಯೋಗದ ಕಾರ್ಯಗಳು ಯಾವವು, "ಸಫಾಯಿ"ಯಲ್ಲಿ ಯಾವ ಚಟುವಟಿಕೆಗಳನ್ನು ಮಾಡಿದರು, ನಿರೀಕ್ಷಣೆಗಾಗಿ ಎಲ್ಲಿ ಹೋಗಿದ್ದರು,- ಹೊಲ, ತೋಟ, ಅಂಗಡಿ, ಪ್ರಾಣಿ, ಸಂಸ್ಥೆ, ಮನೆ, ದವಾಖಾನೆ ಇತ್ಯಾದಿ– "ಅಭ್ಯಾಸ"ದಲ್ಲಿ ಬೇರೆ ಬೇರೆ ವಿಷಯಗಳಲ್ಲಿ ಸಂಪಾದಿಸಿದ ಜ್ಞಾನ, ದೃಢೀಕರಣಕ್ಕಾಗಿ ಮಾಡಿದ ರೂಢಿ, ಮತ್ತು ಉಜಳಣಿ, 'ಸ್ವಾಧ್ಯಾಯ'ದಲ್ಲಿ ಹೆಚ್ಚಿನ ಜ್ಞಾನಕ್ಕಾಗಿ ಇಲ್ಲವೆ ಮನರಂಜನೆಗಾಗಿ ತಾವು ಓದಿದ ಪುಸ್ತಕಗಳ ಬಗ್ಗೆ, "ಇತರ ಕಾರ್ಯ"ದಲ್ಲಿ ಶ್ರಮದಾನ, ಪರೋಪಕಾರ, ಬಂದ ವಿಪತ್ತುಗಳು, ಮತ್ತು ನಿವಾರಣೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಾವು ಭಾಗ ವಹಿಸಿದ್ದು– ಹೀಗೆ ಹಲವಾರು ಸಂಗತಿಗಳನ್ನು ಪಾಲಕರು ಮತ್ತು ಶಿಕ್ಷಕರು ದಿನಚರಿಗಳಲ್ಲಿ ಓದಬಹುದು. ನಿಜವಾಗಿಯೂ ದಿನಚರಿಯು ಬಾಲಕರ ಪ್ರಗತಿಯನ್ನು ತೋರಿಸುವ ಕೈದೀಪ.

ಬಾಲಕರು ಪ್ರತ್ಯಕ್ಷವಾಗಿ ಕೆಲಸದಲ್ಲಿ ತೊಡಗಿದಾಗ ಅವರನ್ನು ಸೂಕ್ಷ್ಮವಾಗಿ ನಿರೀಕ್ಷಿಸಿ, ಅವರ ಕಾರ್ಯಕ್ಷಮತೆ ಸಹಕಾರಬುದ್ಧಿ, ಒಲವುಗಳು ಮತ್ತು ಅವರು ಮಾಡಿದ ಕಾರ್ಯದ ಪ್ರಮಾಣ ಮತ್ತು ಗುಣ ಇತ್ಯಾದಿಗಳ ಬಗ್ಗೆ ಶಿಕ್ಷಕರು ಕೆಲವು ಸಲ ವೈಯಕ್ತಿಕವಾಗಿ, ಸಾಮಾನ್ಯವಾಗಿ, ಸಾಮೂಹಿಕವಾಗಿ ಬರೆದಿಡಬೇಕು. ಅವರು ಕೆಲಸದಲ್ಲಿ ತೊಡಗಿದಾಗ ತಪ್ಪುಗಳನ್ನು 'ಮಾರ್ಗದರ್ಶನ' ವಿಧಾನದಿಂದ ತಿದ್ದುವ ಬಗೆಗೆ ಶಿಕ್ಷಕರು ಜಾಗ್ರತೆವಹಿಸಬೇಕು. ಬಾಲಕರು ಮಾಡಿದ ಕಾರ್ಯದಲ್ಲಿ ಶಿಕ್ಷಕರು ನಿರೀಕ್ಷಿಸುತ್ತಿರುವಾಗ ತಮಗುಂಟಾದ ಸಮಾಧಾನವನ್ನು ವ್ಯಕ್ತ ಪಡಿಸಿ ಅವರನ್ನು ಪ್ರೋತ್ಸಾಹಿಸಬೇಕು. ದಿನಾಚರಣೆಗಳಲ್ಲಿ ಬಾಲಕರು ಭಾಗವಹಿಸಿದಾಗ ಅವರಿಗೆ ಸ್ವಾತಂತ್ರ್ಯ ಕೊಟ್ಟು ಅವಶ್ಯವೆನಿಸಿದಲ್ಲಿ ಮಾರ್ಗದರ್ಶನ ಮಾಡುತ್ತ ಅವರ ಪ್ರಗತಿಯನ್ನು ನಿರೀಕ್ಷಿಸಬೇಕು. ದಿನಚರಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಅವರು ಹೆಚ್ಚು ಹೆಚ್ಚು ಪ್ರಗತಿಯ ಕಡೆಗೆ ಸಾಗುವಂತೆ ಸೂಚನೆಗಳನ್ನು ಕೊಡಬೇಕು. 'ಜ್ಞಾನ-ಅಭ್ಯಾಸ' ವಿಭಾಗದಲ್ಲಿ ಬಾಲಕರು ಹಲವಾರು ಪುಸ್ತಕಗಳಲ್ಲಿ ವಿಷಯಗಳ ಬಗ್ಗೆ ಬರೆಯುತ್ತಾರೆ. ಅವುಗಳನ್ನು ಶಿಕ್ಷಕರು ತಿದ್ದುವರು.

(ಆ) ವಾರ ಪರೀಕ್ಷೆಗಳು ಮಾಸಿಕ ಪರೀಕ್ಷೆಗಳು ತ್ರೈಮಾಸಿಕ ಪರೀಕ್ಷೆಗಳು ಷಣ್ಮಾಸಿಕ ಪರೀಕ್ಷೆಗಳು	ಈ ಪರೀಕ್ಷೆಗಳಲ್ಲಿ ವಿವಿಧ ವಿಭಾಗಗಳಲ್ಲಿ ಬಾಲಕರು ಸಾಧಿಸಿದ ಪ್ರಗತಿಯನ್ನು ಅಳೆಯಲು ಶಿಕ್ಷಕರು ಪ್ರಯತ್ನಿಸುತ್ತಾರೆ.

ಬಾಲಕರು ಬಹಳ ತಯಾರಿ ಮಾಡಿ, ಉತ್ಸಾಹದಿಂದ ಪರೀಕ್ಷೆಗಳಲ್ಲಿ ತಮ್ಮ ಪ್ರಗತಿಯನ್ನು ಪ್ರಕಟ ಮಾಡಲು ಪ್ರಯತ್ನಿಸುತ್ತಾರೆ.

(ಇ) ವಾರ್ಷಿಕ ಪರೀಕ್ಷೆ— ಈ ಪರೀಕ್ಷೆಯಂತೂ ಎಲ್ಲರಿಗೂ ಗೊತ್ತಿದ್ದ ವಿಷಯ. ಈ ಪರೀಕ್ಷೆಯು ಒಂದು ವರ್ಷ ಸಾಗಿಸಲ್ಪಟ್ಟ ಶಿಕ್ಷಣದ ಕೊನೆಗೆ ಬರುತ್ತದೆ. ನಂತರ ಬಾಲಕರು ಪಾಸಾಗಿ ಮೇಲಿನ ಇಯತ್ತೆಗೆ ಹೋಗಬೇಕೋ, ನಪಾಸಾದರೆ ಅದೇ ಇಯತ್ತೆಯಲ್ಲಿ ಮತ್ತೆ ಕಲಿಯಬೇಕೋ, ಎಂಬ ನಿರ್ಣಯವನ್ನು ಕೊಡಲಾಗುವದು.

(ಈ) ಶೀಲಸಂವರ್ಧನೆ— ಬಾಲಕರು ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತ ಪ್ರಗತಿಯನ್ನು ಸಾಧಿಸುತ್ತಿರುವಾಗ ಅಪ್ರತ್ಯಕ್ಷವಾಗಿ ಅವರಲ್ಲಿ ಶೀಲಸಂವರ್ಧನೆಯ ಮಾರ್ಪಾಡು ನಡೆದಿರುತ್ತದೆ. ಬಾಲಕರಿಗೆ ಈ ಮಾರ್ಪಾಡಿನ ಬಗೆಗೆ ಸರಿಯಾಗಿ ಅರಿವು ಆಗುವದಿಲ್ಲ.

ಶಿಕ್ಷಕರು ಸೂಕ್ಷ್ಮವಾಗಿ ನಿರೀಕ್ಷಿಸುತ್ತಿರುವಾಗ ಬಾಲಕರಲ್ಲಿ ಸಾವಕಾಶವಾಗಿ ಬೆಳೆದು ಬರುತ್ತಿರುವ ಶೀಲಸಂವರ್ಧನೆಯ ಗುರುತು ಶಿಕ್ಷಕರಿಗೆ, ಪಾಲಕರಿಗೆ ಹತ್ತುತ್ತದೆ. ಆಗ ಅವರು ಮನಸ್ಸಿನಲ್ಲಿಯೇ ಆನಂದ ಪಡುತ್ತಾರೆ. ಈ ಬೆಳವಣಿಗೆಗೆ ಕುಗ್ಗು, ಹಿನ್ನಡೆ ಆಗದಂತೆ ಶಿಕ್ಷಕರು ಮತ್ತು ಪಾಲಕರು ಜಾಗ್ರತೆ ವಹಿಸಬೇಕು,

ಮೇಲೆ ಕಾಣಿಸಿದ ಪ್ರಕಾರ ಪ್ರಗತಿಯಲ್ಲಿ ನಾಲ್ಕು ಪ್ರಕಾರಗಳಿವೆ. ಈ ಪ್ರಗತಿಯನ್ನು ಹೇಗೆ ಅಳೆಯಬೇಕು, ನಾಲ್ಕು ಪ್ರಕಾರಗಳಿಗೆ ಯಾವ ಯಾವ ಪ್ರಮಾಣದಲ್ಲಿ ಗುಣಗಳನ್ನು ಇಡಬೇಕು, ಅವುಗಳಿಗೆ ಪ್ರತ್ಯೇಕವಾಗಿ, ಸಾಮೂಹಿಕವಾಗಿ ಎಷ್ಟು ಮಹತ್ವವಿದೆ ? ಈ ಪ್ರಗತಿಗಳನ್ನು ನೋಡಿದ ನಂತರ ಮೇಲಿನ ಇಯತ್ತೆಗೆ ಹಾಕುವ ಬಗೆಗೆ ಯಾವ ಯಾವ ನಿಯಮಗಳನ್ನು ಪಾಲಿಸಬೇಕು,-ಇತ್ಯಾದಿ. ಇವು ಸಮಸ್ಯಾತ್ಮಕ ವಿಷಯಗಳಾಗಿವೆ. ಪರೀಕ್ಷೆಗಳಲ್ಲಿ ಪ್ರಶ್ನೆ ಕಾಗದ ಹೇಗೆ ಇರಬೇಕು, ಉತ್ತರಗಳನ್ನು ತಪಾಸಿಸುವದು ಹೇಗೆ— ಇದೂ ಒಂದು ಸಮಸ್ಯೆ. ಈ ಸಂಗತಿಗಳನ್ನು ಶಿಕ್ಷಕರು ಕೂಲಂಕಷವಾಗಿ ಅರಿತುಕೊಂಡು ಅವುಗಳನ್ನು ಕಾರ್ಯಾಚರಣೆಯಲ್ಲಿ ತರಲಿಕ್ಕೆ ಹೆಚ್ಚು ಹೆಚ್ಚು ಪ್ರಯತ್ನಿಸಬೇಕು.

೨. ಹಬ್ಬಗಳು— ಈ ತಿಂಗಳದಲ್ಲಿ ಶಾಲೆಗಳಲ್ಲಿ ಶ್ರೀ ಗಜಾನನೋತ್ಸವನ್ನು ಬಾಲಕರು ಮತ್ತು ಶಿಕ್ಷಕರು ವಿಜೃಂಭಣೆಯಿಂದ ನೆರವೇರಿಸುತ್ತಾರೆ. ಈ ಪ್ರಸಂಗದಲ್ಲಿ ಬಾಲಕರ ವಿವಿಧ ಕಲೆಗಳಲ್ಲಿಯ ಅಡಗುತ್ತಿರುವ ಕೌಶಲ್ಯ ವನ್ನು ಪ್ರಕಟ ಮಾಡಲಿಕ್ಕೆ ಆಸ್ಪದ ದೊರೆಯುತ್ತದೆ. ವಾಕ್-ಸ್ಪರ್ಧೆ ಮತ್ತು ನಿಬಂಧ ಸ್ಪರ್ಧೆಗಳು ನಡೆಯುವವು; ಓಟ, ಜಿಗಿತ ಮತ್ತು ಆಟಗಳ ಸ್ಪರ್ಧೆಗಳೂ ನಡೆಯುವವು. ಮನರಂಜನೆ ಕಾರ್ಯಗಳನ್ನು ಸಾಗಿಸುವರು. ಹೀಗಾಗಿ ಶಾಲೆಗಳಲ್ಲಿ ಈ ಉತ್ಸವವು ಬಾಲಕರ ಸರ್ವತೋಮುಖ ಬೆಳವಣಿಗೆಗೆ ಸಹಾಯ ಮಾಡುತ್ತದೆ. ಈ ಉತ್ಸವದಲ್ಲಿ ಪಾಲಕರೂ ಶಾಲಾ ಬಾಲಕರಿಗೆ ವಿವಿಧ ರೀತಿಯಲ್ಲಿ ಸಹಾಯ ಮಾಡುವರು. ಗುರು ವರ್ಗವು ವಿವಿಧ ಕೆಲಸ ಗಳಲ್ಲಿ ಮಗ್ನರಾಗಿರುತ್ತಾರೆ; ಯೋಗ್ಯ ಅತಿಥಿಗಳನ್ನು ಕರೆ ಯಿಸಿಕೊಂಡು ವ್ಯಾಖ್ಯಾನಗಳನ್ನು ಏರ್ಪಡಿಸುವರು. ಕೆಲವು ಶಾಲೆಗಳಲ್ಲಿ ಶ್ರಾವಣಮಾಸದ ಅಸ್ತಿತ್ವವನ್ನು ತೋರಿಸಲು ತತ್ವ ಪದ, ಉಪದೇಶದ ಕಥೆಗಳು, ದಾಸರ ಪದ, ವಚನಗಳು ಮತ್ತು ನೀತಿಯ ಮಾತು ಗಳು ಇವುಗಳಿಂದೊಡಗೂಡಿದ ಕಾರ್ಯಕ್ರಮಗಳನ್ನು ಏರ್ಪಡಿಸುವರು.

ಗಾಂಧೀಜಿ ಹಾಗೂ ಶ್ರಮಗೌರವ

[ಬರೆದವರು : **ಶ್ರೀ ಎಸ್. ವ್ಹಿ. ಥೊಬ್ಬಿ,** B. Sc. (Hons.), M.Ed., D. P.Ed., D. B. E.]

ಪ್ರಾಧ್ಯಾಪಕರು ಜಿ. ಬಿ. ಟಿ. ಸಿ., ಧಾರವಾಡ.

ಮಹಾತ್ಮರು ಅಮರರಾಗಿದ್ದಾರೆ. ಹಾಗೆಂದರೆ ಗಾಂಧೀಜಿಯವರು ಇಂದು ನಮಗೆ ಕಾಣುವದಿಲ್ಲವಲ್ಲ ಎಂದು ಪ್ರಶ್ನಿಸಿದರೆ ಅದು ತಿಳಿಯದವರ ಪ್ರಶ್ನೆಯೇ ಸರಿ. ಗಾಂಧೀಜಿಯವರ ದೇಹ ನಮ್ಮ ಕಣ್ಮರೆಯಾಗಿದೆ ಹೊರತು ಅವರ ಆತ್ಮವು ಮಾತ್ರ ಜಗತ್ತಿನ ಪ್ರತಿಯೊಂದು ಅಣು-ರೇಣುವಿನಲ್ಲಿ ಜಾಗ್ರತವಾಗಿರುವದು. ಅದು ಮುಟ್ಟದ ತೊಪ್ಪಲವಿಲ್ಲವೆಂಬಂತೆ ಗಾಂಧೀಜಿಯವರು ಮಾನವ ಕೋಟಿಯ ಉದ್ಧಾರಕ್ಕಾಗಿ ಕೈಕೊಳ್ಳದ ಕಾರ್ಯವು ಒಂದೂ ಉಳಿದಿಲ್ಲ. ಅವರು ಕೈಕೊಂಡ ಕಾರ್ಯಕ್ಷೇತ್ರ ಗಳಲ್ಲಿ ಧರ್ಮ, ರಾಜಕಾರಣ, ಸಮಾಜಶಾಸ್ತ್ರ, ಕುಟುಂಬ, ಶಿಕ್ಷಣ ಮೊದಲಾದವು ಮುಖ್ಯ. ಈ ಎಲ್ಲ ಕ್ಷೇತ್ರಗಳು ಮಾನವನ ಜೀವನಕ್ಕೆ ಸಂಬಂಧಿಸಿದವು. ಗಾಂಧೀಜಿಯ ವರು ಅತ್ಯಂತ ಶ್ರೇಷ್ಠ ತತ್ವಜ್ಞಾನಿ ಎಂಬುದು ನಿರ್ವಿ ವಾದದ ಮಾತು. ಯಾಕೆಂದರೆ ತತ್ತ್ವ ಜ್ಞಾನವು ನಿಜ ಸ್ವರೂಪದ ಕೇವಲ ತಾತ್ವಿಕ ಜ್ಞಾನವಾಗಿದೆ, ಜೀವನದ ಎಲ್ಲ ಸಮಾವೇಶಗಳಿಗೆ ಆ ಜ್ಞಾನವನ್ನು ಅನ್ವಯಿಸುವ ವಿಷಯವನ್ನು ಅದು ಒಳಗೊಂಡಿದೆ. ಜೀವನದಲ್ಲಿ ಜ್ಞಾನ-ಕರ್ಮಗಳು ಸಮನ್ವಯವಾಗಿ ಸಾಗಬೇಕು. ಗಾಂಧೀಜಿಯ ವರನ್ನು ಶ್ರೇಷ್ಠ ತತ್ತ್ವಜ್ಞಾನಿಯೆಂದು ನೋಡುವಾಗ ಒಂದು ಮಾತು ಲಕ್ಷ್ಯಕ್ಕೆ ಬರುವದು. ಏನಂದರೆ ಗಾಂಧೀ

ಜಿಯವರು ನಿರ್ಲಿಪ್ತ ಜೀವನ ಸಾಗಿಸಲು ಹವಣಿಸಿದರು. ಅವರ ಮಾತುಗಳಲ್ಲಿ ಹಕ್ಕಲೇ ಹೇಳಬೇಕಾದರೆ "ನಿರ್ಲಿಪ್ತ ಮನುಷ್ಯನೇ ನಿಜವಾದ ಆದರ್ಶ ಮನುಷ್ಯನು. ದೈಹಿಕ ಸೌಂದರ್ಯ ಹಾಗು ಬೇಡಿಕೆಗಳಿಂದ ನಿರ್ಲಿಪ್ತನಾಗಿರಬೇಕು. ಅಧಿಕಾರ ಮತ್ತು ಆಸ್ತಿಗಳ ಲಾಲಸೆ ಇರಕೂಡದು. ಸಿಟ್ಟು ದ್ವೇಷಗಳಿಂದ ದೂರಾಗಿರಬೇಕು. ಧನಸಂಪತ್ತು, ಕೀರ್ತಿ, ಸಮಾಜದಲ್ಲಿ ಹೆಚ್ಚಿನ ಸ್ಥಾನಗಳಿಸುವ ಆಶೆ ಮೊದಲಾದವುಗಳಿಂದ ನಿರ್ಲಿಪ್ತನಾಗಿರಲು ಪ್ರಯತ್ನಿಸಬೇಕು."

ಪ್ರತಿಯೊಬ್ಬನು ತನ್ನ ಆಚರಣೆಯ ಮಟ್ಟವನ್ನು ಏರಿಸಬೇಕೆಂದು ಗಾಂಧೀಜಿಯವರು ತಮ್ಮ ಪ್ರತ್ಯಕ್ಷ ಆಚರಣೆಯಿಂದ ವ್ಯವಹಾರಿಕ ಬೋಧ ಮಾಡಿರುವರು. ಈ ವ್ಯವಹಾರಿಕ ಬೋಧೆಗೆ ಗಾಂಧೀಜಿಯವರಲ್ಲಿ ಇರುವ ಕಾರ್ಯಗೌರವವು ಬಲವಾದ ಕಾರಣಗಳಲ್ಲಿ ಒಂದಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಈ ದಿಶೆಯಲ್ಲಿ ಅವರು ತಾಳಿದ ಅಭಿಪ್ರಾಯವು ಗಮನಾರ್ಹವಾಗಿದೆ.

"ನನ್ನ ಬೋಧೆ ಕೇವಲ ಭಾವಪ್ರಧಾನವಾದುದಲ್ಲ; ಅವ್ಯವಹಾರ್ಯವಾದುದಲ್ಲ. ಯಾವದು ಹಿಂದಿನಿಂದ ಬಂದಿದೆಯೋ ಅದನ್ನೇ ಬೋಧಿಸುವದಲ್ಲದೆ ಸಾಧಿಸಲು ಬಯಸುತ್ತಿದ್ದೇನೆ. ನಾನು ಯಾವುದನ್ನು ಆಚರಿಸಿ ಸಾಧಿಸಬಲ್ಲೆನೆಂದು ತಿಳಿದಿರುವೆನೋ ಅದನ್ನು ಎಲ್ಲರೂ ಆಚರಿಸಿ ಸಾಧಿಸಲು ಸಾಧ್ಯವೆಂದು ನಂಬಿದ್ದೇನೆ."

ಮನುಷ್ಯನು ತಾನು ಮಾಡದಿದ್ದ ಕೆಲಸವನ್ನು ಪರರು ಮಾಡಬೇಕೆಂದು ಅಪೇಕ್ಷಿಸುವದು ತೀರ ತಪ್ಪಾಗುವದು. ಈ ರೀತಿ ಕಾರ್ಯಗೌರವದ ಅರ್ಥ ಮಾಡುವವರು ತೀರ ಕಡಿಮೆ. ಅರ್ಥ ಮಾಡಿ ಆಚರಣೆಯಲ್ಲಿ ತರುವವರು ಕೈಬೆರಳಿನಿಂದ ಎಣಿಸುವಷ್ಟು ಮಾತ್ರ ದೊರೆಯುವರು.

ಅದರಲ್ಲಿ ಭಂಗೀ ಕೆಲಸದಂಥ ಕೆಲಸಗಳಿಗೆ ನಿಜವಾದ ಗೌರವ ತೋರಿಸಿ ಕಾರ್ಯಕ್ಕೆಕೈಕೊಳ್ಳುವವರು ಮಹಾತ್ಮಾ ಗಾಂಧಿ ಅಂಥವರೇ. ಭಂಗೀ ಕೆಲಸವು ತೀರ ಕೀಳು ತರದ್ದು ಮತ್ತು ಹೇಸಿ ಕೆಲಸವು ಎಂದು ಎಲ್ಲರೂ ಭಾವಿಸುವರು. ಆದರೆ ಗಾಂಧೀಜಿಯವರು ಮಾತ್ರ ಭಂಗೀ ಕೆಲಸಕ್ಕೆ ಪ್ರಧಾನ ಗೌರವವನ್ನು ತೋರಿಸಿದ್ದರು. ಆ ಕೆಲಸಕ್ಕೆ ಗೌರವವಿದ್ದ ಮನುಷ್ಯನು ನಿಜವಾಗಿ ಕಾರ್ಯಗೌರವ ಬಲ್ಲವನೆಂದು ಅವರು ತಿಳಿದುಕೊಂಡಿದ್ದರು. ಇದು ಅತ್ಯಂತ ಅರ್ಥಗರ್ಭಿತವಾದ ಮಾತು. ಅಂತೆಯೇ ಗಾಂಧೀಜಿಯವರು ತಮ್ಮ ಯಾವದೇ ಶಿಷ್ಯನ ಪರೀಕ್ಷೆ ಮಾಡುವಾಗ ಅವನಿಗೆ ಮೊದಲು ಕಕ್ಕಸ ಬಳಿಯುವ ಕೆಲಸ ಕೊಡುತ್ತಿದ್ದರಂತೆ. ಹಾಗು ಆ ಕೆಲಸವನ್ನು ಮಾಡುವದರಲ್ಲಿ ಆ ಶಿಷ್ಯನು ತಾಳಿದ ಭಾವನೆಯನ್ನು ಪರೀಕ್ಷಿಸುತ್ತಿದ್ದರಂತೆ. ಅವನು ನಿಜವಾದ ಗೌರವದಿಂದ ಕೆಲಸ ಮಾಡುವನೋ ಹೇಗೆಂದು ತಿಳಿದುಕೊಳ್ಳುತ್ತಿದ್ದರಂತೆ. ಒಮ್ಮೆ ಒಬ್ಬ ರೋಗಿಯ ಮಲವನ್ನು ಬಳಿದು ಚಲ್ಲಲು ತಮ್ಮ ಹೆಂಡತಿಯಾದ ಕಸ್ತೂರಬಾ ಅವರಿಗೆ ಗಾಂಧೀಜಿಯವರು ತಿಳಿಸಿದರು. ಆಗ ಕಸ್ತೂರಬಾ ಅವರು ಕೆಲಸವನ್ನು ಕೊನೆಗಾಣಿಸಿದರೂ ಸ್ವಲ್ಪ ಹೇಸಿಕೊಂಡರಂತೆ. ಇದನ್ನು ಗಾಂಧೀಜಿ ಸಹಿಸದೆ, ಹಸನ್ಮುಖಿಯಾಗಿ ಇಂಥ ಕೆಲಸ ಕೈಕೊಳ್ಳಲು ಬೋಧಿಸಿದರು. ಗಾಂಧೀಜಿ ಭಂಗೀಗೆ ತೋರಿಸಿದ ಗೌರವ ಅಷ್ಟಿಷ್ಟಲ್ಲ.

"ಭಂಗಿಯಿಂದ ಸಮಾಜ ಉದ್ಧಾರವಾಗುತ್ತಿದೆ. ತಾಯಿ ಮಗುವಿಗೆ ಮಾಡುವ ಕಾರ್ಯವನ್ನು ಭಂಗಿಯು ಸಮಾಜಕ್ಕೆ ಮಾಡುತ್ತಾನೆ. ತಾಯಿ ಮಗುವಿನ ಕೊಳಕನ್ನು ತೆಗೆದು ಆರೋಗ್ಯವನ್ನು ಕಾಪಾಡುತ್ತಾಳೆ. ಹಾಗೆಯೇ ಭಂಗಿಯು ಸಮಾಜದ ಕಶ್ಮಲವನ್ನು ತೆಗೆದು ನೈರ್ಮಲ್ಯವನ್ನು ಕಾಪಾಡುತ್ತಾನೆ........."

"ನಮ್ಮ ಸಮಾಜದಲ್ಲಿ ಭಂಗಿಯನ್ನು ಬಹಿಷ್ಕೃತನನ್ನಾಗಿ ಮಾಡಿದ್ದೇವೆ. ನಮ್ಮ ಕೊಳಕನ್ನು ತೆಗೆದು, ಅವನು ಕೊಳಕಿನಲ್ಲಿ ವಾಸಮಾಡಬೇಕು; ಹೇಗೋ ಏನೋ, ಇದು ಬಹುಕಾಲದಿಂದ ನೆಲಸಿ ಹೋಗಿದೆ. ನಮಗೆ ಇದು ಶುದ್ಧ ಅಪಮಾನ. ಇಂದು ನಮ್ಮ ಹಳ್ಳಿಗಳು ಅನಾರೋಗ್ಯದ ಬೀಡಾಗಿವೆ. ಅನೇಕರು ರೋಗಗಳಿಗೆ ತುತ್ತಾಗಿ ಸಾಯುತ್ತಾರೆ. ಇವೆಲ್ಲವು ಭಂಗಿಗೆ ನಾವು ತೋರಿಸಿರುವ ಅನಾದರಣೆಯ ಪರಿಣಾಮ........."

"ಸಮಾಜದಲ್ಲಿ ಯಥಾ ಯೋಗ್ಯವಾದ ಸ್ಥಾನವನ್ನು ದೊರಕಿಸುವದು ವಿದ್ಯಾವಂತರ ಜವಾಬ್ದಾರಿಯಾಗಿದೆ."

ಇಂಥದೊಂದು ಜವಾಬ್ದಾರಿಯ ನಿಜವಾದ ಅರಿವು ಆಗಬೇಕಾದರೆ ಮನುಷ್ಯನಲ್ಲಿ ಕೆಲಸದ ಬಗ್ಗೆ ಮೇಲು ಕೀಳು ಭಾವನೆ ಇರಕೂಡದು. ಸಮಾಜ ಕಾರ್ಯಕ್ಕೆ ಪ್ರತಿಗೂಡಿಸುವ ಕೆಲಸವನ್ನು ಕೈಕೊಳ್ಳಲು ಅವರ ಯೋಗ್ಯತಾಯೋಗ್ಯತೆಗಳನ್ನು ಅಳೆಯಕೂಡದು; ಒಣ ದುರಭಿಮಾ

ಸಕ್ತಿ ಒಳಗಾಗಬಾರದು; ಪಂಥ ಪಂಗಡಗಳನ್ನು ಗಣಿಸಬಾರದು, ಇದೇ ಕಾರ್ಯಗೌರವದ ಇಂಗಿತ ಅರ್ಥವೆನ್ನಬಹುದು. ಈ ಶ್ರಮಗೌರವದಿಂದಲೇ ನಮ್ಮ ನೆರೆಹೊರೆಯವರನ್ನು ಸರಿಸಮಾನ ಭಾವದಿಂದ ಕಾಣಲು ಶಕ್ತರಾಗುವೆವು. ಅಂತೆಯೇ ಗಾಂಧೀಜಿಯವರು ಹೇಳಿದ್ದು.

"ನಾವೆಲ್ಲರೂ ಭಂಗಿಗಳಾಗಿರುವೆವೆಂದು ಬಾಲ್ಯದಿಂದಲೇ ಮನವರಿಕೆ ಮಾಡಿಕೊಂಡಿರಬೇಕು."

ಭಂಗಿ ಕೆಲಸಕ್ಕೆ ಗೌರವವನ್ನು ತಂದುಕೊಂಡ ಮನುಷ್ಯನಿಗೆ ಇತರ ಯಾವದೇ ಕೆಲಸಕ್ಕೆ ಗೌರವವನ್ನು ಸಲ್ಲಿಸಲು ಸುಲಭ ಸಾಧ್ಯವಾಗುವದು. ಭಂಗಿ ಕೆಲಸವು ಕಾರ್ಯಗೌರವದ ತಳಹದಿಯಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಗಾಂಧೀಜಿ ಈ ತತ್ವವನ್ನು ಶ್ರದ್ಧೆಯಿಂದ ಪಾಲಿಸಿದ್ದರಲ್ಲದೆ ಜನಸಾಮಾನ್ಯರಿಗೆ ನಿಲುಕುವಂತಿದೆ ಎಂದು ತಮ್ಮ ವ್ಯವಹಾರಿಕ ಆಚರಣೆಯಿಂದ ತೋರಿಸಿಕೊಟ್ಟಿರುವರು. ಇವರು ಭಂಗೀ ಕೆಲಸವನ್ನು ಮಾಡಲು ಎಳ್ಳಷ್ಟೂ ಹಿಂದು ಮುಂದು ನೋಡುತ್ತಿರಲಿಲ್ಲ. ಜೀವನ ಕ್ರಮಕ್ಕೆ ಸಂಬಂಧಿಸಿದ ಯಾವದೇ ಕೆಲಸವನ್ನು ವಿಚಾರಿಸಿದರೂ ಅದಕ್ಕೆ ತಕ್ಕ ಕಾರ್ಯಗೌರವವು ಗಾಂಧೀಜಿಯವರಲ್ಲಿ ಇತ್ತು-ಎಂಬುದಕ್ಕೆ ಅವರ ಜೀವನದ ಅನೇಕ ಉದಾಹರಣೆಗಳು ಸಾಕ್ಷಿಯಾಗಿವೆ.

ಗಾಂಧೀಜಿಯವರು ದಕ್ಷಿಣ ಆಫ್ರಿಕೆಯಲ್ಲಿರುವಾಗ ಶ್ರೀ ಗೋಖಲೆಯವರು ಅಲ್ಲಿಗೆ ಹೋಗಿದ್ದರು. ಶ್ರೀ ಗೋಖಲೆಯವರು ಒಂದು ದೊಡ್ಡ ಸಭೆಗೆ ಹೋಗಬೇಕಾಗಿತ್ತು. ಇಂಥ ಮಹತ್ವದ ಪ್ರಸಂಗದಲ್ಲಿ ಶ್ರೀ ಗೋಖಲೆಯವರು ಒಂದು ವಿಶಿಷ್ಟ ಸ್ಕಾರ್ಫನ್ನು ಉಪಯೋಗಿಸುತ್ತಿದ್ದರು. ಆದರೆ ಆ ಸ್ಕಾರ್ಫನ ಇಸ್ತ್ರಿಯು ಅಂದು ಹೋಗಿಬಿಟ್ಟಿತ್ತು. ಅದನ್ನು ಉಪಯೋಗಿಸಲು ಬಾರದಂತಾಗಿತ್ತು. ಅದನ್ನು ಅಂಗಡಿಯಲ್ಲಿ ಇಸ್ತ್ರಿಮಾಡಿಸಿಕೊಂಡು ಬರುವಷ್ಟು ವೇಳೆ ಕೂಡಾ ಇದ್ದಿದ್ದಿಲ್ಲ. ಇಂಥ ಪ್ರಸಂಗದಲ್ಲಿ ಶ್ರೀ ಗೋಖಲೆಯವರು ಮನಸ್ಸಿನ ಗೊಂದಲದಲ್ಲಿ ಬಿದ್ದರು. ಇದನ್ನು ಗಾಂಧೀಜಿಯವರು ಕಂಡು ತಾವೇ ಇಸ್ತ್ರಿ ಮಾಡುವ ಕಾರ್ಯವನ್ನು ಕೈಕೊಂಡರು. ವೇಳೆಗೆ ಸರಿಯಾಗಿ ಸ್ಕಾರ್ಫನ್ನು ಉತ್ತಮವಾಗಿ ಗೋಖಲೆಯವರು ತೃಪ್ತಿ ಪಡುವಂತೆ ಇಸ್ತ್ರೀ ಮಾಡಿಕೊಟ್ಟು, ಶ್ರೀ ಗೋಖಲೆಯವರಿಗೆ ಉಂಟಾದ ಮನಸ್ಸಿನ ಉದ್ವೇಗವನ್ನು ಹೋಗಲಾಡಿಸಿದರು. ಇಷ್ಟೊಂದು ಸರಿಯಾಗಿ ಕಾರ್ಯಮಾಡಿಕೊಡಬಹುದೆಂದು ಗಾಂಧೀಜಿಯವರಲ್ಲಿ ಧೈರ್ಯ ಎಲ್ಲಿಂದ ಬಂತು? ಆ ಕಾರ್ಯದಲ್ಲಿ ಅಡಗಿದ ಕಲೆಯನ್ನು ಗಾಂಧೀಜಿಯವರು ಕರಗತ ಮಾಡಿಕೊಂಡಿದ್ದಾವಾಗ? ಎಂದು ಅನೇಕ ಪ್ರಶ್ನೆಗಳನ್ನು ಕೇಳಬಹುದು. ಗಾಂಧೀಜಿಯವರಿಗೆ ಇಂಥ ಕೆಲಸದಲ್ಲಿ ಇರುವ ಗೌರವದಿಂದಲೇ ಈ ತರದ ಧೈರ್ಯ ಮತ್ತು ಕಲೆ ಅವರಲ್ಲಿ ನೆಲಗೊಂಡಿರುವವೆಂದು ಹೇಳಬಹುದು. ಇಂಗ್ಲಂಡಿನಲ್ಲಿರುವಾಗ ತಮ್ಮ ಶರ್ಟಿನ ಕಾಲರದ ಇಸ್ತ್ರೀಯನ್ನು ಗಾಂಧೀಜಿಯವರು ತಾವೇ ಮಾಡಿಕೊಳ್ಳುತ್ತಿದ್ದರು. ಮೊದ ಮೊದಲು ತಕ್ಕ ಕಲೆಯ ಅಭಾವದ ಮೂಲಕ ಇಸ್ತ್ರೀ ಕೆಡುತ್ತಿತ್ತು. ಅಂಥ ಕಾಲರುಗಳನ್ನು ಧರಿಸಿಕೊಂಡು ಕಚೇರಿಗೆ ಹೋದಾಗ ಜನರ ಬಲವಾದ ಗೇಲಿಗೆ ಈಡಾಗುತ್ತಿದ್ದರು. ಆದರೆ ಆ ಗೇಲಿಗೆ ಎದೆಗುಂದಿ ತಮ್ಮಲ್ಲಿರುವ ಕಾರ್ಯಗೌರವವನ್ನು ಕಡಿಮೆ ಮಾಡಿಕೊಳ್ಳಲಿಲ್ಲ. ಇದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವದಾದರೆ ಗಾಂಧೀಜಿಯವರು ಇಂಗ್ಲಂಡಿನಲ್ಲಿ ಮೊದಲು ಹೋದಾಗ ಇವರ ತಲೆಯ ಕ್ಷೌರವನ್ನು ಮಾಡಲು ಒಬ್ಬ ಆಂಗ್ಲ ನಾಪಿತ ನಿರಾಕರಿಸಿದನಂತೆ; ಆಗ್ಗೆ ಗಾಂಧೀಜಿಯವರು ತಮ್ಮ ಕ್ಷೌರವನ್ನು ತಾವೇ ಮಾಡಿಕೊಂಡರು. ಕ್ಷೌರವು ಬಹಳ ಕೆಟ್ಟು, ಜನರಲ್ಲಿ ಅಡ್ಡಾಡುವದು ನಾಚಿಕೆ ಬರುವಂತಿತ್ತು. ಆದರೂ ಗಾಂಧೀಜಿಯವರು ಇದಾವ ದುರಭಿಮಾನ, ಸುಳ್ಳು, ನಾಚಿಕೆ, ಪ್ರಸ್ತುತ ಕಾರ್ಯದ ಬಗ್ಗೆ ಕೀಳುಭಾವ ಮೊದಲಾದವುಗಳಿಗೆ ಒಳಗಾಗದೆ ಪ್ರತ್ಯಕ್ಷ ಆಚರಣೆಯಿಂದ ತಮ್ಮಲ್ಲಿರುವ ಕಾರ್ಯಗೌರವದ ಶ್ರೇಷ್ಠ ಗುಣವನ್ನು ತೋರಿಸಿಕೊಟ್ಟಿದ್ದಾರೆ.

ಗಾಂಧೀಜಿಯವರು ಅಡಿಗೆ ಮಾಡುವದು ಊಟಕ್ಕೆ ಬಡಿಸುವದು ಮೊದಲಾದ ಕೆಲಸಗಳನ್ನು ಕೂಡ ಮಾಡಿದ್ದಾರೆ. ಅವರು ಜಾಲ್ಸ್ ಟೌನನಲ್ಲಿರುವಾಗ ಸಾವಿರಾರು ಜನರ ಊಟದ ವ್ಯವಸ್ಥೆ ಮಾಡುವ ಹೊಣೆ ಹೊತ್ತಿದ್ದರು. ಆ ಸಮುದಾಯದಲ್ಲಿ, ಗಂಡಸರು ಹೆಂಗಸರು ಕೂಡಿಯೇ ಇದ್ದರು. ಭಿನ್ನ ಭಿನ್ನ ವಿಚಾರ, ಅಭಿರುಚಿಯಿರುವ ಜನಸಮುದಾಯವನ್ನು ಸಂತುಷ್ಟ ಪಡಿಸುವದು ಸಾಮಾನ್ಯ ಸಂಗತಿಯೇ? ಗಾಂಧೀಜಿಯವರು ತಾವೇ ವರ್ಣಿಸಿದ ಈ ಚಿತ್ರವನ್ನು ಅವಲಕ್ಷಿಸಿದರೆ ಈ ಸಂಗತಿಯು ವಿದಿತವಾಗದೆ ಇರದು.

(ಮುಂದರಿಯುವದು.)

(ಧಾರವಾಡ ಆಕಾಶವಾಣಿಯವರ ಕೃಪೆಯಿಂದ)

ಸಾಲೆಗಳಲ್ಲಿ ನೈತಿಕ ತರಬೇತಿ

ಲೇಖಕರು : **ಶ್ರೀ ಎಸ್. ಎಸ್. ಸಾಡಕರ್ಣಿ,** ಬಿ. ಎಸ್‌ಸಿ. (ಆನರ್ಸ) ಡಿ. ಇಡಿ.

ಶ್ರೀ ಆರ್. ಎಸ್. ಸೂರ್ಯವಂಶಿ, ಬಿ. ಎ. (ಆನರ್ಸ) ಡಿ. ಇಡಿ.

ಮಕ್ಕಳ ದೈಹಿಕ, ಬೌದ್ಧಿಕ, ನೈತಿಕ ಹಾಗೂ ಸಾಮಾಜಿಕ ವಿಕಾಸವೇ ಶಿಕ್ಷಣದ ಹೆಗ್ಗುರಿ. ಅದರಲ್ಲಿಯೂ ನೈತಿಕ ವಿಕಾಸ ಉನ್ನತ ಗುರಿ. ಪ್ರಾಥಮಿಕ ಶಿಕ್ಷಣವು ಕೇವಲ ವಿಷಯಜ್ಞಾನಕ್ಕಷ್ಟೇ ಮಹತ್ವ ಕೊಡದೆ ಮಕ್ಕಳನ್ನು ಉತ್ತಮ ನಾಗರಿಕರನ್ನಾಗಿ ತಯಾರಿಸುವದೇ ತನ್ನ ಪರಮ ಕರ್ತವ್ಯವೆಂದು ಬಗೆಯುತ್ತದೆ. ಉತ್ತಮ ನೀತಿಯೇ ಉತ್ತಮ ನಾಗರಿಕತೆಯ ಲಕ್ಷಣ. ಮಕ್ಕಳು ಚಿಕ್ಕವರಿರುವಾಗಲೇ ಅವರ ನೈತಿಕ ಉನ್ನತಿಯ ಕಡೆಗೆ ಲಕ್ಷ್ಯಪೂರೈಸಬೇಕಾಗುವದು. ಅವರ ವ್ಯಕ್ತಿತ್ವವನ್ನು ರೂಪಿಸುತ್ತಿರುವ ನಾವು " If wealth is lost nothing is lost. If health is lost something is lost. If morality is lost all is lost and personality goes to pieces " ಎಂಬ ಮಾತನ್ನು ಲಕ್ಷದಲ್ಲಿಟ್ಟುಕೊಳ್ಳಬೇಕು. ನೈತಿಕ ತರಬೇತಿಯನ್ನು ಕೊಡುವ ಯೋಗ್ಯ ಕಾಲವು ಬಾಲ್ಯವೆಂದೇ ಹೇಳಬಹುದು. " ಮೂರು ವರುಷದ ಬುದ್ಧಿ ನೂರು ವರುಷದ ವರೆಗೆ " ಎಂಬ ನಮ್ಮ ಪೂರ್ವಜರ ನುಡಿಯು ಇಂದಿಗೂ ನಮ್ಮೆಲ್ಲರ ಮುಂದೆ ಇದೆ. ಕೆಲ ಶಿಕ್ಷಣ ತಜ್ಞರು ಬಾಲ್ಯದಲ್ಲಿ ನಾವು ನೈತಿಕ ತರಬೇತಿಯನ್ನು ಕೊಡುವ ಗೋಜಿಗೆ ಹೋಗದೆ, ಕೇವಲ ಅನುಭವಗಳಿಂದ ಅವರಲ್ಲಿ ನೈತಿಕತೆಯನ್ನು ಸಾಧಿಸಬೇಕು ಎಂದು ಹೇಳಿದ್ದಾರೆ. ಕೆಲವರು ಮಕ್ಕಳಲ್ಲಿ ನಾವು ಉತ್ತಮ ನೈತಿಕತೆಯನ್ನು ಬಯಸಬಾರದು ಎಂತಲೂ ಹೇಳಿದ್ದಾರೆ. ಇದು ಅವರವರ ವಿಚಾರ. ಸಾಮಾನ್ಯವಾಗಿ ಹೇಳುವದಾದರೆ ಮಕ್ಕಳಲ್ಲಿ ನೈತಿಕತೆಯ ಬೀಜವನ್ನು ಬಿತ್ತಿದಾಗಲೇ ಅವರನ್ನು ನಾಗರಿಕರನ್ನಾಗಿ ಮಾಡುವ ಕಾರ್ಯವು ಯಶಸ್ವಿಯಾಗುತ್ತದೆಂದು ಹೇಳಬಹುದು. ಹಾಗಾದರೆ ನೈತಿಕತೆಯ ವ್ಯಾಖ್ಯೆಯನ್ನು ನಾವು ತಿಳಿಯಬೇಕು. ತನ್ನ ಸಮೂಹ ಅಥವಾ ಸಮಾಜದ ಹಿತದ ಸಲುವಾಗಿ ತಾನು ಮಾಡುವ ಜಾಣತನದ ಕಾರ್ಯಗಳ ಆಯ್ಕೆಯೇ ನೈತಿಕತೆಯ ಮುಖ್ಯ ಲಕ್ಷಣ. ಇದನ್ನು ಐದು ಘಟಕಗಳಿಂದೊಡಗೂಡಿದ ರೂಪವೆಂದು ಹೇಳಬಹುದು. ೧) ಬುದ್ಧಿಮತ್ತೆ. ೨) ವೈಯಕ್ತಿಕ ಆಯ್ಕೆ. ೩) ವೈಯಕ್ತಿಕ ಹೊಣೆಗಾರಿಕೆ. ೪) ರೂಢಿಗತ ಕಾರ್ಯಗಳು. ೫) ಸಮಾಜದಕೂಡ ಸಂಬಂಧವಿಟ್ಟುಕೊಳ್ಳುವದು.

೧) ಬುದ್ಧಿಮತ್ತೆ :

ಉತ್ತಮ ನೀತಿವಂತನಾಗಬೇಕಾದರೆ ಮೊದಲು ಯಾವದೇ ಸಂಗತಿಯ ಯೋಗ್ಯಾಯೋಗ್ಯತೆಯನ್ನು ಅರಿತುಕೊಳ್ಳಬೇಕು. ತಾನು ಮಾಡುವ ಕಾರ್ಯವು ಸರಿಯೋ ತಪ್ಪೋ ಎಂಬುದನ್ನು ಮೊದಲೇ ಅರಿಯುವಂಥ ಸಾಮರ್ಥ್ಯವುಳ್ಳವನಾಗಬೇಕು. ಅಂಥ ಸಾಮರ್ಥ್ಯವು ಮಕ್ಕಳಿಗೆ ಯೋಗ್ಯ ಮಾರ್ಗದರ್ಶನವಿಲ್ಲದೇ ಬರಲಾರದು. ಅಂತೆಯೇ ಸಾಲೆಗಳಲ್ಲಿ ಕನಿಷ್ಠ ವಾರಕ್ಕೊಮ್ಮೆಯಾದರೂ ಸಮಾಜ ಅನುಕರಣೀಯ ವ್ಯಕ್ತಿಗಳಿಂದ ಮಕ್ಕಳಿಗೆ ಉಪದೇಶವನ್ನು ಕೊಡಿಸಬೇಕು. ಅವರ ಉಪದೇಶಗಳ ಮೂಲಕ ದೇವರು, ತಾಯಿ-ತಂದೆಗಳು, ಗುರು-ಹಿರಿಯರು ಇವರ ಬಗ್ಗೆ ಪೂಜ್ಯ ಭಾವನೆಯನ್ನು ಮಕ್ಕಳಲ್ಲಿ ಉಂಟು ಮಾಡಬೇಕು. ಸಾಲೆ, ಮನೆ, ಸಮಾಜ, ರಾಷ್ಟ್ರಗಳ ಸಲುವಾಗಿ ತಾವು ಮಾಡಬೇಕಾದ ಉತ್ತಮ ಕಾರ್ಯಗಳ ಅರಿವನ್ನು ಮಕ್ಕಳಲ್ಲಿ ಮೂಡಿಸಬೇಕು. ಸಾಮಾನ್ಯವಾಗಿ ಈ ಉಪದೇಶಗಳು ಕಥಾರೂಪಕವಾಗಿರಬೇಕು. ಆ ಕಥೆಗಳಿಂದ ಉತ್ತಮ ಕಾರ್ಯಗಳ ಕಲ್ಪನೆಯನ್ನು ಮಕ್ಕಳೇ ಮಾಡಿಕೊಳ್ಳುವಂತೆ ಪ್ರಯತ್ನಿಸಬೇಕು. ಈ ದಿಶೆಯಲ್ಲಿಯ ಉಪದೇಶಗಳು, ಚರ್ಚೆಗಳು, ವ್ಯಾಖ್ಯಾನಗಳು ಮಕ್ಕಳಲ್ಲಿ ನೈತಿಕ ಒಳನೋಟವನ್ನು ಅಭಿವೃದ್ಧಿಸಲು ಸಹಾಯಕಾರಿಯಾಗುತ್ತವೆ. ಮೊಟ್ಟಮೊದಲಿಗೆ ಸಾಲೆಯಲ್ಲಿ ಪ್ರವೇಶಿಸಿದ ಮಕ್ಕಳಲ್ಲಿ ತಮ್ಮ ಕಾರ್ಯಗಳು ಒಳ್ಳೆಯವೋ, ಕೆಟ್ಟವೋ ಎಂಬುದನ್ನು ವಿಚಾರಿಸುವ ಪ್ರವೃತ್ತಿ ಕಡಿಮೆಯಿರುತ್ತದೆ. ಇದನ್ನು ಹುಟ್ಟಿಸಲು ಶಿಕ್ಷಕರು ಬಹಳೇ ಶಾಂತರೀತಿಯಿಂದ ಹಾಗೂ ತಾಳ್ಮೆಯಿಂದ ಪ್ರಯತ್ನಿಸಬೇಕಾಗುವದು. ಉದಾಹರಣೆಗಾಗಿ :— **ಹೊಸದಾಗಿ ಸಾಲೆಗೆ ಸೇರಿದ**

ಮಕ್ಕಳು ಸಾಮಾನ್ಯವಾಗಿ ಬೇರೆಯವರ ಪಾಟಿ, ಪುಸ್ತಕ ಕದಿಯುವದು, ತೋಟದಲ್ಲಿಯ ಹಣ್ಣು, ಹೂವುಗಳನ್ನು ಹರಿಯುವದು ಮುಂತಾದ ಕೃತಿಗಳನ್ನು ಮಾಡುತ್ತಾರೆ. ಆದರೆ ಮುಂದೆ ತಮಗೆ ಒಪ್ಪಿಸಿಕೊಟ್ಟ ಮಡಿಗಳಿಂದ ಯಾರಾದರೂ ಹೂವು, ಕಾಯಿಗಳನ್ನು ಹರಿದರೆ ಅವರ ಮನಸ್ಸಿಗೆ ನೋವಾಗುವದು. ಆಗ ಬೇರೆಯವರ ವಸ್ತುಗಳ ಬಗ್ಗೆ ಆದರವು ಅವರಲ್ಲಿ ಜಾಗೃತವಾಗುವದು. ಅದರಂತೆಯೇ ಹೊಸ ಮಕ್ಕಳಲ್ಲಿ ವಿಧೇಯತೆಯು ಕಂಡು ಬರುವದಿಲ್ಲ. ಅವರನ್ನೇ ನಾಯಕರನ್ನಾಗಿ ಮಾಡಿ ವಿಧೇಯತೆಯನ್ನು ಅವರಿಗೇ ಬಯಸಲಿಕ್ಕೆ ಹಚ್ಚಿದರೆ ಅದರ ಮಹತ್ವವು ತಾನೇ ಗೊತ್ತಾಗದಿರದು. ಎಂತಲಿ ಸಾಲೆಗಳಲ್ಲಿ ಕೆಲವುಸಾರೆ ಶ್ರಮದಾನ ಕಾರ್ಯಗಳನ್ನ ಏರ್ಪಡಿಸಿ ಆಯಾ ಗುಂಪಿನ ನಾಯಕರ ನೇತೃತ್ವದಲ್ಲಿ ಶಿಕ್ಷಕರಾದರೂ ಕೆಲಸಮಾಡಬೇಕಾಗುವದು. ಈ ರೀತಿ ಸಾಲೆಗಳಲ್ಲಿ ಸ್ವಾನುಭವದಿಂದಲೇ ನೈತಿಕತೆಯ ಕೆಲವು ಕಟ್ಟುನಿಟ್ಟುಗಳನ್ನು ಕಲಿಯಲು ಅವಕಾಶ ಸಿಗುತ್ತದೆ.

೨) ವೈಯಕ್ತಿಕ ಆಯ್ಕೆ :

ಮಕ್ಕಳು ತಮ್ಮ ಮುಂದಿರುವ ಅನೇಕ ಕಾರ್ಯಗಳನ್ನು ಯೋಗ್ಯ ಸಮೀಕ್ಷಣೆ ಮಾಡಿ ತಕ್ಕ ಕಾರ್ಯಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಕೇವಲ ಹೊರ ನೋಟಕ್ಕಾಗಿ ಉತ್ತಮ ಕಾರ್ಯಗಳನ್ನು ಮಕ್ಕಳು ಮಾಡಿದರೆ ಸಾಲದು. ಆ ಕಾರ್ಯಗಳನ್ನು ಮಾಡುವ ಪ್ರೇರಣೆಯು ಆಂತರಿಕವಾಗಿ ಬರಬೇಕು. ಒಂದು ಸಾಲೆಯಲ್ಲಿಯ ಮುಖ್ಯಾಧ್ಯಾಪಕರು ಒಂದು ನಿಧಿಗಾಗಿ ಹಣದ ಸಹಾಯ ಮಾಡಲು ಮಕ್ಕಳ ಮನಸ್ಸಿಗೆ ತಾಗುವಂತೆ ಕೇಳಿಕೊಂಡರು. ಆಶ್ಚರ್ಯವೆಂದರೆ ತತ್‌ಕ್ಷಣ ಎಷ್ಟೋ ಮಕ್ಕಳು ತಮ್ಮಲ್ಲಿಯ ಹಣವನ್ನು ಕೊಟ್ಟೇಬಿಟ್ಟರು. ಈ ಹಣವು ಅವರು ತಮ್ಮ ತಾಯಿ–ತಂದೆಯವರಿಂದ ತೆಗೆದುಕೊಂಡು ತಮ್ಮ ಖರ್ಚಿಗಾಗಿ ಇರಿಸಿಕೊಂಡಿದ್ದು ಎಂದು ನಂತರ ಕಂಡು ಬಂದಿತು. ಇಂಥ ಆಯ್ಕೆಯನ್ನೇ ನಾವು ಮಕ್ಕಳಿಂದ ಬಯಸುವದು. ಇನ್ನೊಂದು ಸಾಲೆಯಲ್ಲಿ ಒಂದು ನಿಧಿಸಂಗ್ರಹಕ್ಕಾಗಿ ಮಕ್ಕಳ ನಾಟಕವನ್ನು ಮಾಡಿದ್ದರು. ನಾಟಕಗಳಲ್ಲಿ ಭಾಗ ವಹಿಸಿದವನು ಟಿಕೇಟುಗಳನ್ನು ಕೊಳ್ಳುವ ಅವಶ್ಯವಿಲ್ಲವೆಂದು ಮುಂಚೆ ತಿಳಿಸಿದ್ದರು. ಆದರೆ ಎಲ್ಲ ಪಾತ್ರಧಾರಿ ವಿದ್ಯಾರ್ಥಿಗಳು ಟಿಕೇಟುಗಳನ್ನು ಕೊಂಡಿದ್ದರು. ಇದು ಉತ್ತಮ ಕಾರ್ಯಗಳ ಆಯ್ಕೆಯಲ್ಲವೇ ? ಈ ರೀತಿ ಮಕ್ಕಳು ತಮ್ಮ ಕಾರ್ಯಗಳನ್ನು ಆಯ್ಕೆ ಮಾಡಹತ್ತಿದರೆ ಯಾವಾಗಲೂ ಅವರು ಉತ್ತಮವಾದುದನ್ನೇ ಆರಿಸಿಕೊಳ್ಳುತ್ತಾರೆ. ಇಂಥ ಆಯ್ಕೆಯ ಪ್ರಸಂಗಗಳನ್ನು ಮಕ್ಕಳಿಗೆ ನಾವು ತಂದು ಕೊಡಬೇಕು.

೩) ವೈಯಕ್ತಿಕ ಹೊಣೆಗಾರಿಕೆ :

ನೈತಿಕತೆಯ ಮಹತ್ತರವಾದ ಒಂದು ಘಟಕವೆಂದರೆ ತಾನು ಮಾಡುವ ಒಳ್ಳೆಯ ಅಥವಾ ಕೆಟ್ಟ ಕಾರ್ಯಗಳ ಹೊಣೆಗಾರಿಕೆಯು ತನ್ನದೇ ಎಂದು ತಿಳಿದುಕೊಳ್ಳುವ ಭಾವನೆ. ಮಗುವು ದೊಡ್ಡದಾಗುತ್ತ ನಡೆದ ಹಾಗೆ ಸ್ವಯಂ ನಿರ್ಣಯ ಮಾಡಿಕೊಳ್ಳುವದನ್ನು ಕಲಿಯಬೇಕು. ತನ್ನೆದುರಿಗೆ ಇರುವ ಸಮಸ್ಯೆಗಳನ್ನು ಎದುರಿಸಲು ಶಿಕ್ಷಕನ ಅಥವಾ ತಾಯಿ–ತಂದೆಗಳ ಮೇಲೆ ಅವಲಂಬಿಸುವ ಮನೋಭಾವವು ಕಡಿಮೆಯಾಗುತ್ತ ಹೋಗಬೇಕು. ಇಂಥ ಹೊಣೆಗಾರಿಕೆಯ ದೃಷ್ಟಿಯನ್ನು ಮಕ್ಕಳಲ್ಲಿ ಉಂಟುಮಾಡಲು ಸಾಲೆಯಲ್ಲಿ ಸಾಕಷ್ಟು ಪ್ರಸಂಗಗಳನ್ನು ತಂದುಕೊಡಲು ಬರುತ್ತದೆ. ಉದಾಹರಣೆಗಾಗಿ :— ಶಾಲಾ ಕಾರ್ಯಕ್ರಮ, ಸಾಮಾಜಿಕ ಸಂಸ್ಥೆಗಳ ಕಾರ್ಯಕ್ರಮಗಳ ಯೋಜನೆಯನ್ನು ಹಾಕುವದು, ಸಾಲೆಯ ಕೈಬರೆಹದ ಪತ್ರಿಕೆಗಳ ಸಂಪಾದಕತ್ವ ಮಾಡುವದು ಮುಂತಾದವುಗಳಲ್ಲಿ ಶಿಕ್ಷಕರು ಮಕ್ಕಳಿಗೆ ಸಾಕಷ್ಟು ಜವಾಬ್ದಾರಿಯನ್ನು ಹೊರಿಸಬೇಕು. ಕ್ಷಣಕ್ಷಣಕ್ಕೂ ಉಪದೇಶ ಕೊಡುತ್ತ ಅವರನ್ನು ತಮ್ಮ ಹಿಡಿತದಲ್ಲಿಟ್ಟುಕೊಡಿರಬಾರದು. ಇಂಥ ಪ್ರಸಂಗಗಳಲ್ಲಿ ಸ್ವತಃ ಮಕ್ಕಳೇ ಕಾರ್ಯಕ್ರಮಗಳನ್ನು ಮಾಡಿಸಿಕೊಳ್ಳಬೇಕು. ಶಿಕ್ಷಕರು ಹಿನ್ನೆಲೆಯಲ್ಲಿದ್ದು ಕೇವಲ ಮಾರ್ಗದರ್ಶನ ಮಾಡಬೇಕು. ಮಂತ್ರಿ ಮಂಡಲದಲ್ಲಿ ಯಾವನೊಬ್ಬ ವಿದ್ಯಾರ್ಥಿಯು ತನ್ನ ಕೆಲಸವನ್ನು ಸರಿಯಾಗಿ ಮಾಡದಿದ್ದರೆ ಅವನ ವಿಚಾರಣೆಯು ಮಕ್ಕಳಿಂದಲೇ ಆಗಬೇಕು. ಈ ರೀತಿ ತಮ್ಮ ಕಾರ್ಯಗಳಿಗೆ ತಾವೇ ಹೊಣೆಗಾರರು ಎಂಬುದನ್ನು ಅವರಿಗೆ ಬಿಂಬಿಸಬೇಕು. ಕೇವಲ ಪಠ್ಯೇತರ ಚಟುವಟಿಕೆಗಳಲ್ಲಿ ಅಷ್ಟೇ ಅಲ್ಲ, ಬೌದ್ಧಿಕ ವಿಷಯಗಳನ್ನೂ ಸಹ ಮಕ್ಕಳ ಸ್ವಾತಂತ್ರ್ಯಕ್ಕೆ ಧಕ್ಕೆ ಬಾರದಂತೆ ಶಿಕ್ಷಕರು ಸಾಗಿಸಬೇಕು. ಈ ವಿಷಯಗಳಲ್ಲಿ "ಡಾಲ್ಟನ್" ಪದ್ಧತಿಯಲ್ಲಿಯ ತತ್ವಗಳನ್ನು ಅನುಸರಿಸಿದರೆ ಒಳ್ಳೆಯದು. ಮಕ್ಕಳನ್ನು ಗುಂಪಿನ ನಾಯಕರನ್ನಾಗಿ ಮಾಡಿದರೆ ಸಹಿತ, ಅವರಿಗೆ ನೈತಿಕ ಹೊಣೆಗಾರಿಕೆಯನ್ನು ತಿಳಿಸಿಕೊಟ್ಟಂತಾಗುವದು.

ಏಕೆಂದರೆ ನಾಯಕನ ಪಾತ್ರದಲ್ಲಿದ್ದ ಮಗುವಿಗೆ ತನ್ನ ಕಾರ್ಯಗಳ ಹೊಣೆ ತಿಳಿಯುವದಲ್ಲದೆ, ತನ್ನ ಸಲುವಾಗಿ ಬೇರೆಯವರು ಮಾಡುವ ಕಾರ್ಯಗಳ ಅರಿವು ಉಂಟಾಗುವದು. ಅಂತೆಯೇ ವರ್ಗನಾಯಕ, ಸ್ವಚ್ಛತಾಮಂತ್ರಿ ಮುಂತಾದ ಅನೇಕ ಸಂಗತಿಗಳನ್ನು ಕಲ್ಪಿಸಿ ಆದಷ್ಟು ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಮುಖ ಪಾತ್ರವಹಿಸಲು ಆಸ್ಪದ ಸಿಗುವಂತೆ ಮಾಡಬೇಕು. ಸರತಿಯ ಪ್ರಕಾರ ಈ ಮುಖ್ಯ ಸಂಗತಿಗಳನ್ನು ಮಕ್ಕಳಿಗೆ ದೊರಕಿಸಿ ಕೊಡುವದರಿಂದ ಅಂಥ ನಾಯಕತ್ವವನ್ನು ವಹಿಸಿಕೊಳ್ಳಲು ಅನುಕೂಲವಾಗುವದು.

ಬೇರೆಯಿಂದ ಬಳಲುತ್ತಿರುವ ವಿದ್ಯಾರ್ಥಿಗಳ ಸೇವಾ ಶುಶ್ರೂಷೆ, ಸಾಲೆಗೆ ಬಂದ ಅತಿಥಿಗಳಿಗೆ ಇಡೀ ಸಾಲೆಯ ಪರಿಚಯ ಮಾಡಿಕೊಡುವದು, ಅತಿಥಿಗಳ ಯೋಗಕ್ಷೇಮ ನೋಡಿಕೊಳ್ಳುವದು, ಸಾಲೆಗೆ ಬಾರದವರು ಅಲ್ಲಿ ಬೇರೆ ಯಾರಾದರೂ ಬಂದರೆ ಅವರಿಗೆ ಸಹಾಯಕರಾಗಿ ನಿಲ್ಲುವದು ಮುಂತಾದವುಗಳನ್ನು ಸಹ ಮಕ್ಕಳಿಂದಲೇ ಮಾಡಿಸುವದರಿಂದ ಸಮಾಜ ಸೇವೆ ಮಾಡುವ ಸುಸಂಧಿಯು ದೊರೆತಂತಾಗಿ ಮಗುವು ಆನಂದ ಪಡುವದರಲ್ಲಿ ಸಂಶಯವಿಲ್ಲ. ಈ ಎಲ್ಲ ಕಾರ್ಯಗಳು ಮಕ್ಕಳ ನೈತಿಕ ಮನೋಭಾವವನ್ನು ವಿಕಾಸಗೊಳಿಸುವವಲ್ಲದೇ ಅವರ ಸ್ವಪ್ರತಿಷ್ಠಾ ಪ್ರವೃತ್ತಿಯೂ ವೃದ್ಧಿಗೊಳಿಸಲ್ಪಡುತ್ತದೆ.

೪) ರೂಢಿಗತ ಕಾರ್ಯ :

ಪ್ರೊ. ಕಿಲ್‌ಪ್ಯಾಟ್ರಿಕ್ ಅವರು ಹೇಳಿದಂತೆ— ಸರಿಯಾಗಿ ರೂಢಿ ಮಾಡಿಸುವದರಿಂದಲೇ ಸದ್ಗುಣವು ಮಗುವಿನಲ್ಲಿ ನೆಲೆಯಾಗಿ ನಿಲ್ಲುತ್ತದೆ. ಸತ್ಕಾರ್ಯದಲ್ಲಿ ಎರಡು ಭಾಗಗಳಿವೆ. ೧) ವರ್ತನೆ, ೨) ಅಂತಃಪ್ರೇರಣೆ. ಕೇವಲ ಬಾಹ್ಯಾಚರಣೆಯನ್ನು ನೋಡಿ ಶಿಕ್ಷಕರು ತೃಪ್ತರಾಗಕೂಡದು. ಅದಕ್ಕೆ ಸರಿಯಾಗಿ ಅಂತಃಪ್ರೇರಣೆಯಾಗಿದೆಯೋ ಇಲ್ಲವೋ ಎಂಬುದನ್ನು ನೋಡಬೇಕು. ಇಂಥ ಪ್ರೇರಣೆಯನ್ನು ಮಕ್ಕಳಲ್ಲಿ ಹುಟ್ಟಿಸಲು ಪ್ರಯತ್ನಿಸಬೇಕು. ಉದಾಹರಣೆಗಾಗಿ :— "ಸಹಕಾರ" ವನ್ನು ತೆಗೆದುಕೊಳ್ಳೋಣ. ಉತ್ತಮ ಸಮಾಜದಲ್ಲಿ ಎಲ್ಲ ಸಮಾಜ ಜೀವಿಗಳು ಒಬ್ಬರಿಗೊಬ್ಬರು ಸಹಕರಿಸಿಕೊಂಡು ನಡೆಯಬೇಕಾಗುತ್ತದೆ. ಆದರೆ "ಸಹಕಾರ" ಗಳು ನಾನಾ ರೀತಿಯಲ್ಲಿ ಕಂಡುಬರುತ್ತವೆ. ಒಬ್ಬ ಹುಡುಗನನ್ನು ಹೊಡೆಯಲು ಅನೇಕ ಹುಡುಗರು ಸಹಕರಿಸಿಕೊಂಡು ಒಂದು ಗುಂಪು ಕಟ್ಟುವದನ್ನು ನಾವು ಅನೇಕ ಸಲ ನೋಡಿದ್ದೇವೆ. ಸಾಲೆ ತಪ್ಪಿಸಿದ ಹುಡುಗರು ಅಥವಾ ಒಬ್ಬರಿಗೊಬ್ಬರ ಸಹಕರಿಸಿ ಎಲ್ಲರೂ ಒಂದೇ ಕಾರಣ ಹೇಳುವದುಂಟು— ಒಂದು ಶಾಲೆಯಲ್ಲಿ ೧೦–೧೫ ವಿದ್ಯಾರ್ಥಿಗಳು ಒಂದು ಗುಂಪಿನಲ್ಲಿದ್ದು ತಮ್ಮಲ್ಲಿಯ ಒಬ್ಬ ನಾಯಕನನ್ನು ಅನುಸರಿಸುವದು ಕಂಡುಬಂದಿತು. ವಿಚಾರಿಸಲಾಗಿ ಅವರು ದಿನಾಲು ಪ್ರಾತಃಕಾಲದ ಪ್ರಾರ್ಥನೆಗೆ ತಡಮಾಡಿ ಬಂದ ಬಾಲಕರು. ಹಾಗಿದ್ದೂ ಮುಖ್ಯಾಧ್ಯಾಪಕರಿಂದ ಎಚ್ಚರಿಸಿಕೊಳ್ಳಲ್ಪಟ್ಟವರೆಂದು ತಿಳಿದುಬಂದಿತು. ಈ ರೀತಿಯ ಸಹಕಾರ ಉಪಯೋಗವಿಲ್ಲದ್ದು. ಸಂಸ್ಥೆಯ ಹಿತಕ್ಕೋಸ್ಕರ ಅಥವಾ ಸಮಾಜದ ಹಿತಕ್ಕೋಸ್ಕರ ಮಾಡುವ ಕಾರ್ಯಗಳಲ್ಲಿ ಸಹಕಾರವನ್ನು ನಾವು ಬಯಸಬೇಕು. ಸಾಮೂಹಿಕ ಹಿತದ ಪ್ರೇರಣೆ ಸಹಕಾರಕ್ಕೆ ಇದ್ದರೆ ಮಾತ್ರ ಉತ್ತಮ. ಉತ್ತಮ ಗುಣಗಳು ರೂಢಿಗತವಾಗಿ ಬಿಡುತ್ತವೆ. ಎಂದು ವೆಬ್ ಎಂಬವರು ಕಂಡುಹಿಡಿದಿದ್ದಾರೆ. ಇಚ್ಛಾಶಕ್ತಿಯ ಮೂಲಕ ತಿರುತಿರುಗಿ ಅದೇ ಕಾರ್ಯವನ್ನು ಮಾಡಿದರೆ ಅದು ಅವರಿಗೆ ರೂಢಿಯಾಗಿ ಬಿಡುತ್ತದೆ. ಈ ಉತ್ಕಟ ಇಚ್ಛಾಶಕ್ತಿಯೇ ಉತ್ತಮ ಸ್ವಭಾವದ ತಳಹದಿ. ಆದ್ದರಿಂದ ಸಾಲೆಗಳಲ್ಲಿ ಉತ್ತಮ ಯೋಜನೆಗಳನ್ನು ಹಾಕಿಕೊಳ್ಳಬೇಕು. ಉದಾಹರಣೆಗೆ:— ತೋಟವನ್ನು ಚೆಂದಗೊಳಿಸುವದು; ವರ್ಗದ ಕೋಣೆಯನ್ನು ಅಲಂಕರಿಸುವದು; ಸಾಲೆಯ ಆವಾರವನ್ನು ಸ್ವಚ್ಛ ಮಾಡುವದು; ರಸ್ತೆ ನಿರ್ಮಾಣ ಮುಂತಾದವು. ಇವುಗಳನ್ನು ಮೇಲಿಂದ ಮೇಲೆ ಮಾಡಿದರೆ ಉತ್ತಮವಾದ ಸಹಕಾರ ಮಕ್ಕಳಲ್ಲಿ ರೂಢಿಗತವಾಗುವದು.

೫) ಸಮಾಜದ ಕೂಡ ಸಂಬಂಧವಿಟ್ಟುಕೊಳ್ಳುವದು :

ಉತ್ತಮ ನೀತಿ ನೆಲೆಗೊಳ್ಳಬೇಕಾದರೆ ಸಮಾಜಗಳಲ್ಲಿ ಬೆರೆಯುಕೊಳ್ಳುವ ಸುಸಂಧಿಗಳನ್ನು ಮಕ್ಕಳಿಗೆ ಒದಗಿಸಿಕೊಡಬೇಕು. ಆ ರೀತಿ ಸಮಾಜದ ಅನೇಕ ವ್ಯಕ್ತಿಗಳೊಡನೆ ಸಂಬಂಧವಿಟ್ಟುಕೊಳ್ಳುವದನ್ನು ಮಕ್ಕಳಿಗೆ ಕಲಿಸಿಕೊಡಬೇಕು. ಸಾಲೆಗಳಲ್ಲಿ ಗುಂಪುಗಳನ್ನು ಮಾಡಿ ಆಯಾ ಗುಂಪಿನವರಿಗೆ ಸಮಾಜಕ್ಕೆ ಸಂಬಂಧಿಸಿದ ಅನೇಕ ಕಾರ್ಯಗಳನ್ನು ವಹಿಸಿಕೊಟ್ಟರೆ ಇದು ತಾನೇ ಸಾಧ್ಯವಾಗುವದು.

ಉದಾಹರಣೆಗಾಗಿ :— ಜಾತ್ರೆಯ ಸಮಯದಲ್ಲಿ ಒಂದು ಗುಂಪಿನವರು ನೀರಿನ ಪೂರೈಕೆ ಮಾಡುವದು. ಇನ್ನೊಂದು ಗುಂಪಿನವರು ಗುಡಿಯ ಒಳಗೆ ಹೋಗುವ ಜನರು ಒಂದು ಕಡೆಯಲ್ಲಿ ಇಟ್ಟ ಕಾಲ್ಮರಿಗಳನ್ನು ನೋಡಿಕೊಳ್ಳುವದು. ಈ ರೀತಿ ಅನೇಕ ಕಾರ್ಯಗಳನ್ನು ಮಕ್ಕಳಿಗೆ ಒಪ್ಪಿಸಿಕೊಟ್ಟರೆ, ಅವರು ಸಮಾಜದ ಕೂಡ ಸಂಬಂಧವಿಟ್ಟುಕೊಳ್ಳುವ ಸರಿಯಾದ ಮಾರ್ಗವನ್ನು ಅನುಸರಿಸಿದಂತಾಗುವದು.

ಇನ್ನು ಯಾವನೊಬ್ಬ ಹುಡುಗನು ಸಾಮಾಜಿಕ ಅಥವಾ ನೈತಿಕ ತಪ್ಪನ್ನು ಮಾಡಿದರೆ ಏನು ಮಾಡಬೇಕು? ಇಂಥ ತಪ್ಪುಗಳಾಗದಂತೆ ಮಾಡಲು ನಾವು ಶಿಕ್ಷೆಗಳ ಶರಣು ಹೋಗಬಾರದು. ಉದಯಪುರದಲ್ಲಿಯ ವಿದ್ಯಾಭವನ ಸಾಲೆಯಲ್ಲಿ ಯಾವನೊಬ್ಬ ಶಿಕ್ಷಕನು ಸಿಟ್ಟಿಗೆದ್ದು ಹುಡುಗನ ಕಿವಿ ಹಿಂಡಿದರೆ ಅಥವಾ ಹೊಡೆದರೆ ಆ ಶಿಕ್ಷಕನು ಎಲ್ಲ ಶಿಕ್ಷಕರೆದುರಿಗೆ ಮಾಫಿ ಬೇಡಬೇಕು ಎಂಬ ನಿಯಮವಿದೆ. ಬಯ್ಯುವದನ್ನು, ಹೊಡೆಯುವದನ್ನು ಬಿಡಬೇಕಾದರೆ ಶಿಕ್ಷಕರು ಬಹಳೇ ತಾಳ್ಮೆಯುಳ್ಳವರಾಗಬೇಕಾಗುವದು. ಕೆಲವರಿಗೆ ಇಷ್ಟು ತಾಳ್ಮೆ ಅಸಾಧ್ಯ. ಸಣ್ಣ ಪ್ರಮಾಣದ ದಂಡನೆಗಳನ್ನು ಸಾಲೆಯಲ್ಲಿ ಉಪಯೋಗಿಸಬಹುದು. ಉದಾಹರಣೆಗಾಗಿ :— ತಡ ಮಾಡಿ ಬಂದಂಥ ಹುಡುಗನು ಮುಖ್ಯಾಧ್ಯಾಪಕರಿಂದ ಚೀಟಿ ತೆಗೆದುಕೊಂಡು ಬರಬೇಕು. ಸಾಲೆಯಲ್ಲಿ ಹೇಳಿದ ಮನೆಗೆಲಸಗಳನ್ನು ಮೇಲಿಂದ ಮೇಲೆ ಅಲಕ್ಷಿಸುವ ಹುಡುಗನಿಗೆ ಬೇಸಿಗೆ ಬಿಡುವಿನಲ್ಲಿ ಸಹಿತ ಮನೆಗೆಲಸಗಳನ್ನು ಕೊಟ್ಟು ಅವುಗಳನ್ನು ಮಾಡಿದರೆ ಮಾತ್ರ ಮುಂದಿನ ಇಯತ್ತೆಗೆ ಕಳಿಸುವದು ಮುಂತಾದವು. ಇಂಥ ಸಣ್ಣ ಪ್ರಮಾಣದ ಶಿಕ್ಷೆಗಳಿಂದ ಮಕ್ಕಳು ತಮ್ಮ ತಪ್ಪುಗಳನ್ನು ಅರಿತುಕೊಳ್ಳುತ್ತಾರಲ್ಲದೇ ಅಂಥ ತಪ್ಪುಗಳು ಮುಂದೆ ಆಗದಂತೆ ನೋಡಿಕೊಳ್ಳುತ್ತಾರೆ. ಆದರೆ ಕಠಿಣ ಶಿಕ್ಷೆಗಳಿಂದ ವಿರೋಧ ಭಾವವು ಅವರಲ್ಲುಂಟಾಗುತ್ತದೆ.

ಅನೀತಿಗೆ ಸಂಬಂಧಿಸಿದ ಕಾರ್ಯಗಳನ್ನು ಮಾಡಿದರೆ ಆ ತಪ್ಪಿನ ಮೂಲ ಕಾರಣವನ್ನು ನಾವು ಕಂಡುಕೊಳ್ಳಬೇಕು. ಎಷ್ಟೋ ಸಾರೆ ಬೇರೆಯವರ ಉಪದೇಶದಿಂದಲೂ ಸಹ ಮಕ್ಕಳು ಕೆಟ್ಟ ಅನೈತಿಕ ಕಾರ್ಯಗಳನ್ನು ಮಾಡುತ್ತಾರೆ. ಆದ್ದರಿಂದ ನೇರವಾಗಿ ಅವರಿಗೆ ಶಿಕ್ಷೆಕೊಡುವದು ಯೋಗ್ಯವಲ್ಲ.

ವಿದ್ಯಾಭವನ ಶಾಲೆಯವರು ಕೊಟ್ಟ ಒಂದು ಉದಾಹರಣೆಯಿಂದ ಇದು ಇನ್ನಷ್ಟು ಸ್ಪಷ್ಟವಾಗುವದು. ೧) ಒಬ್ಬ ಹುಡುಗನ ವಯಸ್ಸು ೧೨ ವರುಷ. ಇಯತ್ತೆ ೪. ಅಭ್ಯಾಸದಲ್ಲಿಯ ಪ್ರಗತಿ ತೃಪ್ತಿಕರ. ಆರೋಗ್ಯ ಸಾಧಾರಣ. ತಾಯಿ ಇಲ್ಲ. ತಂದೆ ಕ್ರೂರ. ಒಮ್ಮೆ ಮನೆಯಲ್ಲಿ ಏನೋ ಕದ್ದಿದ್ದಕ್ಕೆ ಮಗುವನ್ನು ಬಹಳೇ ಹೊಡೆದರು. ಮೈಮೇಲೆ ಗಾಯಗಳನ್ನು ಸಹ ಮಾಡಿದ್ದರು. ಹುಡುಗ ಈಗ ಜಗಳಗಂಟನಾಗಿದ್ದಾನೆ. ವರ್ಗಕ್ಕೆ ನಿಯಮಿತವಾಗಿ ಬರುವದಿಲ್ಲ. ಆದರೆ ಶಿಕ್ಷಕರು ಅವನಲ್ಲಿ ತಪ್ಪುಗಳನ್ನು ಜೊಂಸಿದರೆ ಬಹಳೇ ಸಿಟ್ಟಿಗೇಳುತ್ತಾನೆ.

ತಂದೆಯಿಂದ ಅವನ ಆತ್ಮಗೌರವಕ್ಕೆ ಧಕ್ಕೆ ಬಂದದ್ದರಿಂದ ಆ ಗೌರವವನ್ನು ಇತರರಿಂದ ಬಯಸುವ ಹವಣಿಕೆಯಲ್ಲಿ ಜಗಳಗಂಟನಾಗಿದ್ದಾನೆ. ತಪ್ಪುಗಳನ್ನು ಹುಡುಕಿದರೆ ಸಿಟ್ಟಿಗೇಳುವ ಕಾರಣವೆಂದರೆ ಅವನು ಶಿಕ್ಷಕರ ಸಹಾನುಭೂತಿ ಬಯಸುತ್ತಾನೆ. ಅಂತಯೇ ತಂದೆಯಂತೆ ಶಿಕ್ಷಕರು ಕೂಡ ತಪ್ಪುಗಳನ್ನು ಎತ್ತಿತೋರಿಸಿದರೆ ಸಿಟ್ಟಿಗೇಳುತ್ತಾನೆ. ಅಂದಮೇಲೆ ಅವನ ಅನಿಯಮಿತ ವರ್ತನಕ್ಕೆ ಅವನ ತಂದೆಯ ಆಚರಣೆಯೇ ಮುಖ್ಯಕಾರಣ. ಇದಕ್ಕೆ ಉಪಾಯವೆಂದರೆ ಅವನನ್ನು ಬಹಳೇ ಸಹಾನುಭೂತಿಯಿಂದ ಕಾಣುವದು. ಶಿಕ್ಷಕನು ಅವನ ತಪ್ಪುಗಳನ್ನು ಅತೀವ ಎತ್ತಿಹಿಡಿಯಬಾರದು. ಅವನನ್ನು ಜವಾಬ್ದಾರಿ (ನಾಯಕನ) ಸ್ಥಾನದಲ್ಲಿ ಇಡುವದು. ಅವನಿಗೆ ಎಲ್ಲರಿಂದಲೂ ಗೌರವ ಕೊಡಿಸಬೇಕು. ಅವನ ತಂದೆಗೆ ಮಗನ ಮೇಲೆ ಪ್ರೀತಿ ಹೆಚ್ಚಿಸಲು ಹೇಳಿಕೊಳ್ಳಬೇಕು.

ಈ ರೀತಿ ಮಕ್ಕಳ ನಡತೆಗಳು ತಿದ್ದಲ್ಪಡುತ್ತವೆ. ಒಟ್ಟಾರೆ ಹೇಳಬೇಕಾದರೆ ಸಾಲೆಯಲ್ಲಿ ನಾವು ಬೇಕಾದಷ್ಟು ಉತ್ತಮ ನೈತಿಕತೆಯನ್ನು ಮಕ್ಕಳಲ್ಲಿ ಉಂಟುಮಾಡಲು ಬರುತ್ತದೆ. ಅದು ಶಿಕ್ಷಕರ ಕೈಯಲ್ಲಿದೆ.

— ಬಿನ್ನಹ —

ಪ್ರತಿ ತಿಂಗಳು ೧೫ನೆಯ ದಿನಾಂಕಕ್ಕೆ "ಜೀವನ ಶಿಕ್ಷಣ" ಪತ್ರಿಕೆಯ ಸಂಚಿಕೆಗಳನ್ನು ನಿಮ್ಮ ನಿಮ್ಮ ವಿಳಾಸಕ್ಕೆ ಕಳುಹಿಸಲಾಗುತ್ತಿದೆ. ಇದರಲ್ಲಿ ಏನೂ ವ್ಯತ್ಯಯ ಬರಲಾರದು. ಹೀಗಿದ್ದೂ ಪತ್ರಿಕೆಗಳು ನಿಮಗೆ ತಲುಪದಿದ್ದಲ್ಲಿ ಸ್ಥಳಿಕ ಅಂಚೆ ಅಧಿಕಾರಿಗಳಿಗೆ ತಪ್ಪದೇ ಬರೆದುಕೊಳ್ಳಬೇಕು.

—ಪ್ರಧಾನ ಸಂಪಾದಕರು

ಇಂಗ್ಲಿಷ್ ಭಾಷೆಯ ಅಕ್ಷರಗಳ ಪರಿಚಯ

ಲೇಖಕರು : **ಶ್ರೀ ಎಸ್. ಆರ್. ಶೆಟ್ಟಿ,** ಎಮ್.ಎ., ಎಸ್. ಟಿ. ಸಿ.ಡಿ.

ಇಂಗ್ಲೀಷ ಶಬ್ದಗಳ ಅಕ್ಷರಗಳ ಜೋಡಣೆಯನ್ನು (Spelling) ಪ್ರಾರಂಭಿಸಬಹುದಾದ ಸುಲಭವಾದ ಹೊಸದೊಂದು ಹಾದಿಯನ್ನು ಹುಡುಕೋಣ. ಪ್ರತಿಯೊಂದು ಭಾಷೆಯಲ್ಲಿ ಕೆಲವು ವಿಚಿತ್ರ ಧ್ವನಿಗಳು ಉಚ್ಚಾರಣೆಗಳು ಇರುವವು. ಉರ್ದು ಭಾಷೆಯಲ್ಲಿಯ 'ಕುರಾನ್' 'ಗಜನಿ' ಶಬ್ದಗಳೊಳಗಿನ ಕ ಮತ್ತು ಗ ದ ಉಚ್ಚಾರ ನಮಗೆ ವಿಲಕ್ಷಣವಾಗಿಯೇ ಇದೆ: ಹಾಗೆಯೇ 'ಫಕೀರ' 'ಜಮಾನ' ಶಬ್ದಗಳಲ್ಲಿಯ ಧ್ವನಿಗಳನ್ನು 'ಫ' ಮತ್ತು 'ಜ' ಈ ಕನ್ನಡ ಅಕ್ಷರಗಳಿಂದ ಸರಿಯಾಗಿ ತಿಳಿದುಕೊಳ್ಳಲಿಕ್ಕಾಗುವದಿಲ್ಲ. ಈ ಎರಡೂ ಧ್ವನಿಗಳು ಇಂಗ್ಲೀಷಿನಲ್ಲಿ 'ಫಾರ್ಮ್' ಝೆನಿಥ್ ಎಂಬ ಶಬ್ದಗಳಲ್ಲಿವೆ.

ಇಂಗ್ಲೀಷು ವರ್ಣಮಾಲೆಯ ಇನ್ನೊಂದು ವಿಶೇಷ ಎಂದರೆ ಅಕ್ಷರಗಳ ಹೆಸರುಗಳೂ ಅವುಗಳ ಉಚ್ಚಾರಗಳೂ ಬೇರೆ ಬೇರೆಯಾಗಿವೆ, ಉರ್ದುಭಾಷೆಯಲ್ಲಿಯೂ ಹೀಗೆ — ಉದಾ: 'ಅಲೀಫ' ಎಂಬುದು ಅಕ್ಷರದ ಹೆಸರು ಮಾತ್ರ; ಇದರ ಉಚ್ಚಾರ 'ಅ' 'ಬೇ' ಅಕ್ಷರದ ಹೆಸರು; ಇದರ ಉಚ್ಚಾರ 'ಬ'.

ಇಂಗ್ಲೀಷ್ ಭಾಷೆಯ ಅಕ್ಷರಗಳ ಅನುಕ್ರಮದಲ್ಲಿಯೂ ವ್ಯತ್ಯಾಸವಿದೆ. ಅವು ಭಾರತೀಯ ಭಾಷೆಗಳಲ್ಲಿ ಇರುವಂತೆ, ಸ್ವರಗಳು, ವ್ಯಂಜನಗಳು ಹೀಗೆ ಬೇರೆ ಬೇರೆಯಾಗಿ ವರ್ಗೀಕೃತವಾಗಿಲ್ಲ. ಸಾಮಾನ್ಯವಾಗಿ ಗ್ರೀಕ, ಅರಬಿ, ಉರ್ದು, ಭಾಷೆಗಳಲ್ಲಿ ವರ್ಣಗಳು ಒಂದೇ ರೀತಿಯಾಗಿ ಪ್ರಾರಂಭವಾಗುವವು— ಆಲ್ಫಾ, ಬೀಟಾ (ಗ್ರೀಕ) ಅಲೀಫ, ಬೇ (ಉರ್ದು)....ಇತ್ಯಾದಿ. ಉರ್ದು ಭಾಷೆಯಲ್ಲಿ ಕಾಫ್, ಲಾಮ್, ಮೀಮ, ನೂನ— ಎಂದರೆ ಕ್, ಲ್, ಮ್, ನ್ ಹೀಗೆ ಒಂದರ ಮುಂದೊಂದು ಬಂದಿದ್ದರೆ ಇಂಗ್ಲೀಷಿನಲ್ಲಿಯೂ ಕೆ, ಎಲ್, ಎಮ್, ಎನ್ ಎಂಬ ಅದೇ ಕ್ರಮವಿದೆ, ಇರಲಿ.

ಭಾರತೀಯ ಭಾಷೆಯ ಶಬ್ದಗಳನ್ನು [ಸಂಸ್ಕೃತ, ಹಿಂದೀ, ಕನ್ನಡ ಮುಂ.] ಬರೆಯುವಾಗ, ಊರ ಹೆಸರುಗಳನ್ನು ಮನುಷ್ಯರ ಹೆಸರುಗಳನ್ನು ಬರೆಯುವಾಗ ಅಕ್ಷರಗಳ ಉಚ್ಚಾರವು ಒಂದು ಸ್ಪಷ್ಟವಾದ ನಿಯಮಕ್ಕೆ ಒಳಪಟ್ಟಿರುತ್ತದೆ. ಆದರೆ ಇಂಗ್ಲೀಷ ಶಬ್ದಗಳಲ್ಲಿ ಮಾತ್ರ ಅಕ್ಷರಗಳ ಜೋಡಣೆಯು [Spelling] ಬಹಳ ಅನಿಯಮಿತವಾಗಿರುತ್ತವೆ. ಆದ್ದರಿಂದ ಹೊಸದಾಗಿ ಇಂಗ್ಲೀಷ ಕಲಿಯಬೇಕೆನ್ನುವ ಹುಡುಗರಿಗೆ ಮೊದಲು ನಮ್ಮ ದೇಶದ ಅಂಕಿತನಾಮಗಳನ್ನು ಬರೆಯಲು ಕಲಿಸಬೇಕು. ಇನ್ನೊಂದು ಮುಖ್ಯ ವ್ಯಾಕರಣದಲ್ಲಿ ಬರುವ ಮಾತನ್ನು ತಿಳಿಸಿ ಈ ವಿಷಯವನ್ನು ಮುಂದುವರಿಸುವೆವು — ಯಾವದೆಂದರೆ ಶಬ್ದವನ್ನು ಬರೆಯುವಾಗ ಅದರಲ್ಲಿನ ಸ್ವರ, ವ್ಯಂಜನಗಳನ್ನು ಒಡೆದು ಹೇಳಲಿಕ್ಕೆ ಬರಬೇಕು. ಉದಾ :— ಮರ = ಮ್ + ಅ + ರ್ + ಅ; ಗಿಡ = ಗ್ ಇ ಡ್ ಅ; ಖ್ರಿಸ್ತ = ಖ್ ರ್ ಇ ಸ್ ತ್ ಅ; ಅಶೋಕ = ಅ ಶ್ ಓ ಕ್ ಅ, ಹೀಗೆ ಶಬ್ದಗಳನ್ನು ಪೃಥಕ್ಕರಿಸುವ ರೂಢಿ ಮಾಡಿಕೊಳ್ಳಬೇಕು. ಇಂಗ್ಲೀಷಿನಲ್ಲಿ ಒತ್ತಕ್ಷರಗಳನ್ನು ಬೇರೆ ಬೇರೆಯಾಗಿಯೇ ತೋರಿಸಬೇಕು. ಉದಾ:— ಕ್ಟ = ಕ್ ಟ್; ಸ್ತ = ಸ್ ತ್ ಅ ಇಂಗ್ಲೀಷಿನಲ್ಲಿ ಖ್, ಫ್ ಇತ್ಯಾದಿ ಮಹಾಪ್ರಾಣಾಕ್ಷರಗಳಿಲ್ಲ, ಅವುಗಳನ್ನು 'ಹ್' ದ ಸಹಾಯದಿಂದ ಕ್ ಹ್, ತ್ ಹ್ ಹೀಗೆ ಬರೆಯಬೇಕು. ಮೂರು ಇಂಗ್ಲೀಷು ಅಕ್ಷರಗಳ ಗುರುತುಗಳಲ್ಲಿ ಪ್ರತಿಯೊಂದಕ್ಕೂ ಎರಡು ಬೇರೆ ಬೇರೆ ಉಚ್ಚಾರಗಳಿವೆ. 'C' ಎಂದರೆ 'ಸ್' ಅಥವಾ 'ಕ' [ಒಮ್ಮೊಮ್ಮೆ 'ಚ್' ನೂ ಹೌದು]; 'G' ಎಂದರೆ 'ಜ್' ಅಥವಾ 'ಗ್'. 'QU' ಎಂದರೆ 'ಕ್ವ' ಅಥವಾ 'ಕ್' ಉಪೋದ್ಘಾತದ ಈ ಎಲ್ಲ ಮಾತುಗಳನ್ನು ಚೆನ್ನಾಗಿ ತಿಳಿದುಕೊಂಡ ಮೇಲೆ ಕೆಳಗಿನ ಅಕ್ಷರಗಳ ಗುರುತುಗಳನ್ನು ಪರಿಚಯ ಮಾಡಿಕೊಳ್ಳಿರಿ :—

[ವ್ಯಂಜನಗಳು]

G (ಜ್), **G** (ಗ್), **C** (ಕ್), **C** (ಸ್), **CH** (ಚ್); **J** (ಜ್), **CH** (ಖ್), **K** (ಕ್), **H** (ಹ್), **D** (ಡ್), **T** (ತ್),

TH (ಥ್), B (ಬ್), P (ಪ್), F (ಫ್ ಉರ್ದುವಿ), L (ಲ್), R (ರ್), W (ವ್), Y (ಯ್), M (ಮ್), N (ನ್), S (ಸ್), Z (ಜ್ ಉರ್ದು 'ಜಮಾನಾ'ದಲ್ಲಿಯ ಜ ದಂತೆ), QU (ಕ್ವ, ಅಥವಾ ಕ್), X (ಕ್ಸ), SH (ಷ್), V (ವ್ಹ ಅಥವಾ ಒಂದಿಷ್ಟು ಬ್ ದಂತೆ).

[ಸ್ವರಗಳು]

A (ಅ ಹಾಗು ಆ), E (ಎ), I (ಇ), O (ಒ), U (ಉ), AI ('ಐ' ಅಥವಾ 'ಅಇ') AU ('ಔ' ಅಥವಾ 'ಅಉ').

ಇನ್ನು ಆಧುನಿಕ ಭಾರತದ ಇತಿಹಾಸದ ಒಂದು ವಿಹಂಗಮ ನೋಟವನ್ನು ಇಂಗ್ಲೀಷ ವರ್ಣಮಾಲೆಯ ಅನುಕ್ರಮದಲ್ಲಿರುವ ಈ ಕೆಳಗಿನ ೨೬ ಶಬ್ದಗಳಿಂದ ಅವಲೋಕನ ಮಾಡೋಣ :—

ĀTMA (Ā ಇದನ್ನು ಆ ದ ಗುರುತೆಂದು ತಿಳಿಯಿರಿ) BUDDHA, CHRIST (ಕ್ರಿಸ್ತ = CHRISTA) DIRECT ENGLAND (E ದ ನಿಯಮಿತ 'ಎ' ಉಚ್ಚಾರ ಬೇಕಾಗಿದ್ದರೆ ELIZABETH ಇಟ್ಟು ಕೊಳ್ಳಿರಿ.) FREE (ಎರಡು EE ಕೂಡಿ ಬಂದಾಗ 'ಈ' ಎಂದು ದೀರ್ಘ ಉಚ್ಚಾರ) GĀNDHI, HINDU, ಉ = U ISLĀMIC, INDIA, JANATA, KAKA, LALA, MAMA, NANA, ŌLD (Ō = ಓ), PANDITS, QUOTING. (ಇಲ್ಲಿ QU ದ ಉಚ್ಚಾರ 'ಕ್'). RAMAYANA (ಇಂಗ್ಲೀಷಿನಲ್ಲಿ ತ್, ಥ್, ದ್, ಧ್, ನ್ ಗಳು ಟ್, ಠ್, ಡ್, ಢ್, ಣ್ ಗಳಾಗಿ ಉಪಯೋಗಿಸಲ್ಪಡುವವು). SHĀSTRA (ಇಲ್ಲಿ SH=ಶ್) TEXTS, UPANISHAD WĒDA (VĒDA ಹೀಗೂ ತಪ್ಪಾಗಿ ಬರೆಯುವ ರೂಢಿ ಇದೆ; ವ ಕಾರಕ್ಕೆ W ವನ್ನೇ ಉಪಯೋಗಿಸಬೇಕು ನಿಜವಾಗಿ); WEST (E)XPERIMENTING ('X' ದಿಂದ ಪ್ರಾರಂಭವಾಗುವ ಶಬ್ದಗಳಿಲ್ಲವಾದ್ದರಿಂದ, 'EX'-ದಿಂದ ಶಬ್ದ ಆರಂಭ) YANTRA ZAMĀNĀ.

ಮೇಲಿನ ಮಾತಿನ ಅರ್ಥವು ಇದು : ಪರಮಾತ್ಮ ಬುದ್ಧ, ಕ್ರಿಸ್ತ (ಇವರು) ಇಂಗ್ಲೆಂಡಕ್ಕೆ ಪ್ರೇರ ಮಾಡಿದರು (ಏನೆಂದರೆ), ಗಾಂಧಿಯವರನ್ನು ಹಿಂದ ಇಸ್ಲಾಮಿಕ್ ಭಾರತದ ಜನತೆಯನ್ನು ಸ್ವತಂ ಮಾಡಿರಿ — ಎಂದು. ಕಾಕಾ, ಲಾಲಾ, ಮಾಮ ನಾನಾ, (ಎಂದು ಹೆಸರಿಡಬಹುದಾದ) ಹಳೆಂ ಪಂಡಿತರು ರಾಮಾಯಣ, ಶಾಸ್ತ್ರ, ಉಪನಿಷದ ವೇದ (ವಾಕ್ಯಗಳನ್ನು), ಉದಾಹರಿಸುತ್ತಿರುವ ಪಾಶ್ಚಾತ್ಯರು ಯಂತ್ರಪ್ರಪಂಚದಲ್ಲಿ ಪ್ರಯೊ ಮಾಡುತ್ತಿರುವರು.

ಶಿಕ್ಷಕ ಶಿಕ್ಷಿಕೆಯರು ಈ ಹೊಸ ಪದ್ಧತಿಯ ಪ್ರಯೋ ನೋಡಲಿ—ಮನಸ್ಸು ಬಂದರೆ ಮಾಡಿ ಇದರಿಂ ವಿದ್ಯಾರ್ಥಿಗಳನ್ನು ಇಂಗ್ಲೀಷ ಸ್ಪೆಲಿಂಗಿನ ಕ್ಲಿಷ್ಟಮಾರ್ಗದ ಮೊದಲಿನ ಪಾವಟಿಗೆಯನ್ನು ಹತ್ತಿಸಿದಂತಾಗುವದ ಮೇಲಿನ ಉದಾಹರಣೆಯಲ್ಲಿ ಕೆಲವು ಇಂಗ್ಲೀಷ ಶಬ್ದಗ ಬಂದಿವೆ : ಡಿರೆಕ್ಟ = ಹಾದಿ ತೋರಿಸು, ಪ್ರೇರಿಸು; ಫ್ರೀ = ವಿಮೋಚನೆ ಮಾಡು; ಕೋಟಿಂಗ = ಉದಾಹರಿಸು ತ್ತಿರುವ; ವೆಸ್ಟ = ಪಾಶ್ಚಾತ್ಯ ದೇಶ; ಎಕ್ಸಪೆರಿಮೆಂಟಿಂಗ್ = ಪ್ರಯೋಗಿಸುತ್ತಿರುವಂಥದು.

ಮೇಲಿನ ಉದಾಹರಣೆಯಲ್ಲಿ :

A, B, C, D, E, F, G, H, I, J, K, L, M, N, O, P, Q, R, S, T, U, V, W, X, Y, Z ಈ ಸಾಂಪ್ರದಾಯಿಕ ವರ್ಣಮಾಲೆಯ ಅನುಕ್ರಮವು ಬಂದಿದೆ.

ಅಕ್ಷರ ಜೋಡಣೆಯ ನಿಯಮಿತ ಪದ್ಧತಿಯಿಂ ಅನಿಯಮಿತ ಪದ್ಧತಿಗೆ ನಿಧಾನವಾಗಿ ವಿದ್ಯಾರ್ಥಿಗಳನ್ನು ಒಯ್ಯುವದೇ ಸಮಂಜಸವಾದುದೆಂದು ಅನುಭವದಿಂ ತಿಳಿದುಬಂದಿದೆ.

[ಲೇಖದಲ್ಲಿಯ ಸಂಜ್ಞಾಕ್ಷರಗಳನ್ನು ಶಕ್ಯವಿದ್ದಷ್ಟ ಸಾಧಿಸಲಾಗಿದೆ.]

ಗುಡ್ಡಗಳಲ್ಲಿ ಕೊರೆದ ದೇವಾಲಯಗಳು

ಲೇಖಕರು : **ಶ್ರೀ ಶಿಂತ್ರಿ ಬಸಪ್ಪನವರು,** ಬಿ.ಎ., ಬಿ.ಟಿ.

[ಲೇಖಾಂಕ ೧]

ಪ್ರಸ್ತಾವನೆ.

ನಮ್ಮ ರಾಜ್ಯದಲ್ಲಿ ಹಾಗೂ ಅದಕ್ಕೆ ತಾಗಿದ ಹಲವು ಪ್ರದೇಶಗಳಲ್ಲಿ ಗುಹೆಗಳು ನೋಡತಕ್ಕಂತಹವುಗಳಿವೆ. ಅವುಗಳನ್ನು ಕೂಲಂಕಷವಾಗಿ ಅವಲೋಕಿಸಿದರೆ, ನಮ್ಮ ಪೂರ್ವಜರು ಶಿಲ್ಪಕಲೆಯಲ್ಲಿ ಸಂಪಾದಿಸಿದ ಜಾಣ್ಮೆಯು ಗೊತ್ತಾಗದಿರದು. ಹಲವು ಗವಿಗಳಲ್ಲಿಯ ಕುಸುರಿನ ಕೆಲಸಗಳು ನಮ್ಮ ಪೂರ್ವಜರು ಆ ಕಲೆಯಲ್ಲಿ ಸಾಧಿಸಿದ ಅಗಾಧವಾದ ಕೌಶಲ್ಯವನ್ನು ಕೈಯೆತ್ತಿ ತೋರಿಸುತ್ತವೆ. ಹಲವು ದೇವಾಲಯಗಳೊಳಗಿನ ಬಂಣಗಾರಿಕೆ (Painting)ಯು ಬೆಡಗು ಅವರ ಕೈತಲೆಗಳ ಚಾತುರ್ಯವನ್ನು ಪ್ರದರ್ಶಿಸುತ್ತದೆ. ಅಲ್ಲಿ ಕೊರೆಯಲ್ಪಟ್ಟ ಮನುಷ್ಯ, ಪಶು, ಪಕ್ಷಿ ಮೊದಲಾದ ಎಲ್ಲ ಪ್ರಾಣಿಗಳ ನೈಜ ಸ್ವರೂಪವು ಕಂಡುಬರುತ್ತಿದೆ. ಒಟ್ಟಿನಲ್ಲಿ ನೋಡಲು ಬಂದವರನ್ನು ಆವ ದೇವಾಲಯವೂ ಮುಗ್ಧನನ್ನಾಗಿ ಮಾಡದೆ ಬಿಡುವದಿಲ್ಲ. ಅವುಗಳ ಬಗೆಗೆ ಸವಿಸ್ತರ ಮಾಹಿತಿಯು ನಮ್ಮ ಓದುಗರಿಗಿರುವದು ಲೇಸಲ್ಲವೇ ? ಹಲವು ಶಾಲೆಗಳು ದೂರಿನ ಶೈಕ್ಷಣಿಕ ಪ್ರವಾಸಗಳನ್ನಿಟ್ಟುಕೊಂಡಿದುದನ್ನು ನಾವು ಆಗಾಗ ನಮ್ಮ ಪತ್ರಿಕೆಯಲ್ಲಿ ಓದುತ್ತಿದ್ದೇವೆ. ಅಂತಹ ಶಾಲೆಗಳಿಗೆ ಮಾರ್ಗದರ್ಶನವಾಗಲೆಂಬ ಸದುದ್ದೇಶದಿಂದ ನಮಗೆ ಅಲ್ಲಲ್ಲಿ ದೊರೆತ ವಿವರಗಳನ್ನು ಸಂಗ್ರಹಿಸಿ ಸುಸಂಬದ್ಧವಾಗಿ ಹೊಂದಿಸಿ ಈ ಲೇಖಾಂಕಗಳನ್ನು ಬರೆಯಲಾಗಿದೆ. ಅಂತಹ ಶಾಲೆಗಳು ನಾವು ಮುಂದೆ ವಿವರಿಸುವ ಸ್ಥಳಗಳಿಗೆ ಸಂದರ್ಶನವೀಯಲು ಇಚ್ಛಿಸಿದರೆ, ಈ ಲೇಖಾಂಕಗಳು ಆ ಶಾಲೆಗಳಿಗೆ ಸಹಾಯಕವಾಗುವವು. ಆ ಸ್ಥಳಗಳನ್ನು ಇಲ್ಲಿ ಒಂದೊಂದನ್ನಾಗಿ ವಿವರಿಸಿದೆ.

ಅಜಂತೆ (Ajanta)

ಅದು ಜಳಗಾಂವದಿಂದ ೩೭ ಮೈಲು ಹಾಗೂ ಔರಂಗಾಬಾದದಿಂದ ೬೬ ಮೈಲು ದೂರದಲ್ಲಿದೆ. ಅವೆರಡೂ ಊರುಗಳಿಂದ ಅಲ್ಲಿಗೆ ಹೋಗಲು ಉತ್ತಮವಾದ ರಸ್ತೆಗಳಿವೆ. ಮೋಟರ-ಬಸ್ಸುಗಳು ಓಡಾಡುತ್ತಿವೆ. ಅದರ ಪಕ್ಕದಲ್ಲಿ ವಾಘೋರಾ ಎಂಬ ಹೆಸರಿನ ನದಿಯೊಂದಿದ್ದು ಅದಕ್ಕೊಂದು ತಡಸಲವಿದೆ. ಅದು ಸಹ ನೋಡತಕ್ಕಂತಹದಿದೆ. ಆ ಧಬಧಬೆಯ ನೀರು ಸುಮಾರು ೭೦ ಫೂಟುಗಳ ಎತ್ತರದಿಂದ ಕೆಳಗೆ ಧುಮುಕುತ್ತಿದೆ. ಅಜಂತೆಯೆಂದರೆ ಅಜ್ಞಾತ ಸ್ಥಳವೆಂದು ಅರ್ಥವಾಗುತ್ತಿದೆ. ರೇಲ-ರಹದಾರಿಗಳನ್ನು ಬಿಟ್ಟು ದೂರದಲ್ಲಿರುವದರಿಂದ ಅದಕ್ಕೆ ಆ ಹೆಸರು ಪ್ರಾಪ್ತವಾಗಿರಲು ಸಾಕು. ಅಥವಾ ಬೌದ್ಧ ಧರ್ಮದ ಅಳಿಗಾಲದ ನಂತರ ಎಷ್ಟೋ ಶತಮಾನಗಳವರೆಗೆ ಅದು ನೆಲದಲ್ಲಿ ಹೂಳಲ್ಪಟ್ಟು ಜನರಿಗೆ ಗೊತ್ತಾಗದೆ ಉಳಿದು ಬಿಟ್ಟಿತ್ತು. ಈ ಕಾರಣದಿಂದಲೂ ಅದಕ್ಕೆ ಆ ಹೆಸರು ಬಂದಿರಬೇಕು. ೧೮೧೯ನೆಯ ಇಸವಿಯಲ್ಲಿ ಅಕಸ್ಮಾತ್ತಾಗಿ ಇಂಗ್ಲಿಷ ಸೈನಿಕರು ಅದನ್ನು ಹುಡುಕಿ ತೆಗೆದರಂತೆ. ಆಗ ಅದನ್ನು ಅಗೆದು ನೋಡಲಾಗಿ ಅಲ್ಲಿ ಜಗತ್ತನ್ನೇ ಬೆರಗುಗೊಳಿಸುವ ದೇವಾಲಯಗಳೂ ಬೌದ್ಧ ವಿಹಾರಗಳೂ ಹೊರಟವು. ಅಂದಿನಿಂದ ಅದು ಸಂಶೋಧನಕಾರರಿಗೆ ನೆಲೆವೀಡಾಗಿ, ಸಂದರ್ಶಕರಿಗೆ ಅಚ್ಚು-ಮೆಚ್ಚಿನ ಸ್ಥಳವಾಗಿದೆ. ಬೌದ್ಧರ ಗುಡಿಗಳಿಗೆ ಚೈತ್ಯಾಲಯಗಳೆಂದು ಕರೆಯುವದುಂಟು. ಅಲ್ಲಿ ೪ ಚೈತ್ಯಾಲಯಗಳೂ, ೨೫ ವಿಹಾರಗಳೂ ಇವೆ. ಅವುಗಳಿಗೆಲ್ಲ ಮಹಾದ್ವಾರದ ಮೇಲೆ ನಂಬರುಗಳನ್ನು ಕೊಟ್ಟಿದ್ದಾರೆ. ಅವು ಒಟ್ಟು ೨೯ ಗುಹೆಗಳಿವೆ. ಅವು ಒಂದಕ್ಕೊಂದು ಹತ್ತಿಕೊಂಡಿರುವದರಿಂದ ಒಂದು ತುದಿಯಿಂದ ಮತ್ತೊಂದು ತುದಿಯವರೆಗೆ ೩ ಫರ್ಲಾಂಗುಗಳಷ್ಟು ಅಂತರವಿದೆ.

ಅವುಗಳಲ್ಲಿ ೮, ೯, ೧೦, ೧೨ ಹಾಗೂ ೧೩ ಈ ನಂಬರುಗಳ ೫ ಗವಿಗಳು ಹೀನಯಾನ ಯುಗಕ್ಕೆ ಸಂಬಂಧಿಸಿವವುಗಳಿವೆ. ಕ್ರಿಸ್ತೀ ಶಕದ ಮುಂಚೆ ೨ನೆಯ ಶತಮಾನದಿಂದ ಕ್ರಿಸ್ತೀ ಶಕದ ೨ನೆಯ ಶತಮಾನದ ವರೆಗಿನ ನಾಲ್ಕು ಶತಮಾನಗಳ ಅವಧಿಗೆ ಹೀನಯಾನ ಯುಗವೆಂಬ ಹೆಸರು. ಈ ಯುಗದ ಚೈತ್ಯಾಲಯಗಳು

ಮತ್ತು ವಿಹಾರಗಳು ನಿರಾಡಂಬರವಿದ್ದು ಅವುಗಳಲ್ಲಿ ಮೂರ್ತಿ ಪೂಜೆಯ ಕುರುಹುಗಳಿಲ್ಲ. ಆವತರಹದ ಅಲಂಕಾರಗಳ ಇಲ್ಲವೆ ಚಿತ್ರಗಳ ಸುಳುವಿಲ್ಲದೆ ಪರಿಶುದ್ಧತೆಯ ಗಾಂಭೀರ್ಯದಿಂದ ತುಂಬಿ ತುಳುಕುತ್ತಿವೆ. ಇನ್ನುಳಿದ ಗುಹೆಗಳು ಮಹಾಯಾನ ಯುಗದಲ್ಲಿ ರಚಿಸಲ್ಪಟ್ಟಿವೆ. ಕ್ರಿಸ್ತೀ ಶಕದ ೪ನೆಯ ಶತಮಾನದಿಂದ ೧೧ನೆಯ ಶತಮಾನದವರೆಗಿನ ದೀರ್ಘಾವಧಿಗೆ ಮಹಾಯಾನ ಯುಗವೆಂಬ ಹೆಸರಿದೆ. ಈ ಯುಗದಲ್ಲಿ ಕೊರೆದ ದೇವಾಲಯಗಳಲ್ಲಿ ಮತ್ತು ವಿಹಾರಗಳಲ್ಲಿ ನಾನಾ ತರಹದ ಚಿತ್ತಾಕರ್ಷಕ ಚಿತ್ರಗಳೂ ಕುಸುರಿನ ಕೆಲಸಗಳೂ ಮತ್ತು ಬಣ್ಣಗಾರಿಕೆಯೂ ಕಂಗೊಳಿಸುತ್ತವೆ. ಆ ಅವಧಿಯ ಮುನ್ನವೇ ಹಿಂದೂ ಸಂಸ್ಕೃತಿಯು ಪರಿಣಾಮವು ಬೌದ್ಧ ಸಂಸ್ಕೃತಿಯ ಮೇಲೆ ಬೀರಿ ಮೂರ್ತಿ ಪೂಜೆಯು ಪುನಃ ಬಳಿಕೆಯಲ್ಲಿ ಬಂದಿತ್ತೆಂಬಂತೆ ತೋರುತ್ತಿದೆ. ೧, ೨, ೩, ೧೬ ಮತ್ತು ೧೭ ಈ ನಂಬರುಗಳ ಗುಹೆಗಳಲ್ಲಿ ಮೂರು ತೆರನಾದ ಶಿಲ್ಪಕಲೆಯು ಕಂಡುಬರುತ್ತಿದೆ. ಮೊದಲನೆಯದು, ಕಲ್ಲಿನಲ್ಲಿ ಕೊರೆದ ವಸ್ತುಗಳನ್ನೂ, ಮನುಷ್ಯರನ್ನೂ ನೋಡಿದವನೆ, ಅವು ಅಚ್ಚಳಿಯದೆ ಸಾಕ್ಷಾತ್ತಾಗಿ ನಮ್ಮೆದುರಿಗೆ ನಿಂತಂತೆ ಭಾಸವಾಗುತ್ತಿದೆ. ತಲೆಯ ಮೇಲಿನ ಹೂವು, ಕೊರಳೊಳಗಿನ ಆಭರಣಗಳು ಅಚ್ಚಳಿಯದೆ ಹೂಬೇಹೂಬ ಇದ್ದಂತೆ ಅನಿಸುತ್ತಿವೆ. ಎರಡನೆಯದು, ಕಥಾವಿಭಾಗವನ್ನು ಚಿತ್ರಗಳ ರೂಪದಿಂದ ವರ್ಣಿಸಿದ್ದಾರೆ; ೧ನೆಯ ನಂಬರಿನ ಗವಿಯಲ್ಲಿ ಗೌತಮನ ಹಾಗೂ ಅವನ ಹೆಂಡತಿ-ಯಶೋಧರೆಯ ಕೆಲ ಪ್ರಸಂಗಗಳ ವರ್ಣನೆಯನ್ನು ಚಿತ್ರಗಳಿಂದಲೇ ತೋರಿಸಿದ್ದಾರೆ; ಆ ಪ್ರಸಂಗಗಳನ್ನು ವಿಚಾರ ಮಾಡಿ ಕೊರೆಯಲು ಆ ಶಿಲ್ಪಿಗಳಿಗೆ ಎಷ್ಟು ವರ್ಷಗಳು ಹಿಡಿದಿರಬೇಕು ? ಮೂರನೆಯದು, ಕುಸುರಿನ ಹಾಗೂ ಬಣ್ಣಗಾರಿಕೆಯ ಸೂಕ್ಷ್ಮ ಕೆಲಸಗಳಿಂದ ಗುಹೆಗಳ ಗೋಡೆಗಳು ಹಾಗೂ ಛತ್ತುಗಳು ಶೃಂಗರಿಸಲ್ಪಟ್ಟಿವೆ.

ಈ ಮೂರೂ ತರಹದ ಶಿಲ್ಪಕಲೆಗಳು ನೋಡಲು ಬಂದವರನ್ನು ಮರುಳು ಮಾಡಿಬಿಡುತ್ತವೆ. ವಿಶೇಷವಾಗಿ ಬುದ್ಧನ ಚರಿತ್ರವನ್ನು ಬಣ್ಣಿಸುವ ಚಿತ್ರಗಳನ್ನು ಎಷ್ಟು ಸಲ ನೋಡಿದರೂ ಮನಸಿನ ಇಚ್ಛೆಯು ಪೂರ್ಣವಾಗದೆ ಮತ್ತೊಮ್ಮೆ ನೋಡಬೇಕೆಂಬ ಹಂಬಲವು ಉದಯಿಸುತ್ತಿದೆ. ಅಲ್ಲಿಯ ಭವ್ಯವಾದ ವಿಹಾರಗಳಲ್ಲಿ ಬೌದ್ಧ ಯತಿಗಳು ವಾಸವಾಗಿದ್ದುಕೊಂಡು ವಿದ್ಯಾದಾ ಮಾಡುತ್ತ ದೇವರ ಚಿಂತನೆಯಲ್ಲಿ ಕಾಲವನ್ನು ಕ ಯುತ್ತಿದ್ದರು. ಬೌದ್ಧ ಯುಗದಲ್ಲಿ ಅದು ದೊಡ್ಡದೊಂ ವಿಶ್ವವಿದ್ಯಾನಿಲಯದ ಪೀಠವಾಗಿತ್ತೆಂದು ಪ್ರತೀತಿಯಿ ಅಲ್ಲಿಯ ದೊಡ್ಡ ದೊಡ್ಡ ವಿಹಾರಗಳು ವಿದ್ಯಾದಾ ಮಾಡಲು ಉಪನ್ಯಾಸದ ಮಹಾಮನೆ (Lectur Hall) ಗಳಂತೆ ಉಪಯೋಗಿಸಲ್ಪಡುತ್ತಿದ್ದವಂತೆ. ಆ ದೂರದೂರಿನ ಜಿಜ್ಞಾಸುಗಳು ಬಂದು ಅಲ್ಲಿ ಕೆಲ ವರ್ಷಗಳವರೆಗೆ ನೆಲೆಯೂರಿ ವಿದ್ಯಾಸಂಪನ್ನರಾ ಮರಳುತ್ತಿದ್ದರಂತೆ.

ವೇರೂಳ (Ellora)

ಅದು ಔರಂಗಾಬಾದದಿಂದ ೧೮ ಮೈಲು ದೂ ದಲ್ಲಿದೆ. ಅದಕ್ಕೂ ಅಜಂತೆಗೂ ೬೪ ಮೈಲು ಅಂತರವಿ ಅಲ್ಲಿ ಒಟ್ಟು ೩೪ ಗುಹೆಗಳಿವೆ. ಅವು ಅಜಂತೆಯಲ್ಲಿಂ ಗುಹೆಗಳಂತೆ ಒಂದಕ್ಕೊಂದು ತಾಗಿರದೆ ಬಿಡಿ ಬಿಡಿಯಾಗಿ ಅವು ಉತ್ತರದಿಂದ ದಕ್ಷಿಣಕ್ಕೆ ಸುಮಾರು ಒಂದು ಮೈ ಎರಡು ಫರ್ಲಾಂಗುಗಳವರೆಗೆ ಹಬ್ಬಿವೆ. ಅವು ಕ್ರಿಸ್ತೀ ಶಕ ೪ನೆಯ ಶತಮಾನದಿಂದ ೧೦ನೆಯ ಶತಮಾನದವರೆಗಿ ದೀರ್ಘಾವಧಿಯಲ್ಲಿ ಅಂದರೆ ಮಹಾಯಾನ ಯುಗದ ಕೊರೆಯಲ್ಪಟ್ಟಿವೆ. ಅವು ಅಜಂತೆಯಲ್ಲಿಯ ಗುಹೆ ಕಾಲದಗಿಂತ ಇತ್ತೀಚಿಗಿನ ಕಾಲದವೆಂಬ ಮಾ ಸುಸ್ಪಷ್ಟವಿದೆ. ಅವು ಬೌದ್ಧ ಹಿಂದೂ ಹಾಗೂ ಜೈ ಧರ್ಮಗಳಿಗೆ ಸಂಬಂಧಿಸಿವೆ. ದಕ್ಷಿಣದ ತುದಿಯಿಂ ಪ್ರಾರಂಭಿಸಿದರೆ, ಮೊದಲಿನ ೧೨ ಗವಿಗಳು ಬೌ ಧರ್ಮಕ್ಕೆ ಸಂಬಂಧಿಸಿದ್ದು ಅವು ಮಹಾಯಾನ ಯುಗದ ಅಂದರೆ, ೪ನೆಯ ಶತಮಾನದಿಂದ ೫ನೆಯ ಶತಮಾನ ವರೆಗಿನ ಅವಧಿಯಲ್ಲಿ ರಚಿಸಲ್ಪಟ್ಟಿವೆ. ಅವುಗಳ ಮುಖ್ಯವಾದವುಗಳೆಂದರೆ ೧೦ ಹಾಗೂ ೧೨ ನೆ ನಂಬರಿನ ಗುಹೆಗಳು. ೧೦ ನೆಯ ನಂಬರಿನ ಗವಿ ' ವಿಶ್ವಕರ್ಮ ಚೈತ್ಯಾಲಯ ' ಎಂಬ ಹೆಸರಿದೆ. ೧೨ ನೆ ನಂಬರಿನ ಗುಹೆಯು ವಿಹಾರವಿದೆ. ಅದು ಮೂ ಅಂತಸ್ತಿನದಿದೆ. ಇವೆರಡೂ ಗುಹೆಗಳ ಗೋಡೆಗಳು ಅ ಚೆಂದವಾದ ಕೆತ್ತುಗೆಯ ಹಾಗೂ ಕುಸುರಿನ ಕೆಲಸಗಳಿ ಅಲಂಕರಿಸಲ್ಪಟ್ಟಿವೆ. ಮುಂದಿನ ೧೬ ಗವಿಗಳು ಹಿಂದ ಧರ್ಮಕ್ಕೆ ಸಂಬಂಧಿಸಿದವುಗಳಿವೆ. ಅವುಗಳಲ್ಲಿ ಎಲ್ಲಕ್ ಹೆಚ್ಚು ಮಹತ್ವವುಳ್ಳ ಹಾಗೂ ಶ್ರೇಷ್ಠ ಗುಹೆಯೆಂ

೧೬ ನೆಯ ನಂಬರಿನದು. ಅದಕ್ಕೆ 'ಕೈಲಾಸ' ಎಂಬ ಹೆಸರಿದೆ. ಕೈಲಾಸದಲ್ಲಿ ಈಶ್ವರನ ಗುಡಿಯಿದೆ. ಅದರ ವೈಶಿಷ್ಟ್ಯವೆಂದರೆ ಆ ದೇವಾಲಯವೆಲ್ಲ ಒಂದೇ ಒಂದು ಕಪ್ಪುಬಂಡೆಗಲ್ಲಿನಲ್ಲಿ ಕೊರೆಯಲ್ಪಟ್ಟಿದೆ. ಇಲ್ಲಿಯ ಬಂಡಿಗಲ್ಲುಗಳೆಲ್ಲ ಕಪ್ಪು ಬಣ್ಣದವಿವೆ. ಆ ದೇವಾಲಯದ ಎತ್ತರವಾದ ಹುರಿಗಟ್ಟೆ(Plinth)ಯು ಕಲ್ಲಿನಲ್ಲಿ ಕೊರೆದ ಆನೆಗಳ ಹಾಗೂ ಸಿಂಹಗಳ ಮೇಲೆ ನಿಂತಿದೆ. ಗುಡಿಗೆ ಹೋಗಲು ಕಲ್ಲಿನದೊಂದು ಸೋಪಾನವಿದೆ. ಗುಡಿಯ ಸುತ್ತಲಿನ ಪೌಳಿಗಳಲ್ಲಿ ಹಿಂದೂ ದೇವ-ದೇವತೆಗಳೂ ನಾನಾ ತರಹದ ಪಶುಗಳೂ ಕೊರೆಯಲ್ಪಟ್ಟಿವೆ.

ಆಗಿನ ಕಾಲದಲ್ಲಿ ಶಿಲ್ಪಕಲೆಯು ಪ್ರಗತಿಯ ಶಿಖರವನ್ನೇ ಮುಟ್ಟಿತೆಂಬುದನ್ನು ಶಿಲ್ಪಿಗರು ಆ ಪೌಳಿಗಳಲ್ಲಿಯ ತಮ್ಮ ಸೂಕ್ಷ್ಮ ಕೆತ್ತುಗೆಯಿಂದಲೂ ಕುಸುರಿನ ಕೆಲಸಗಳಿಂದಲೂ ತೋರ್ಪಡಿಸಿದ್ದಾರೆ. ಇನ್ನೂ ವರೆಗೂ ಅವು ಅಚ್ಚರಿಯ ಕೃತಿಗಳಾಗಿಯೇ ಉಳಿದಿವೆ. ಶಿವಪಾರ್ವತಿಯರ ಮದುವೆ. ರಾವಣನು ಕೈಲಾಸವನ್ನು ಸಡುಗಿಸುವದು, ಇಂದ್ರನ ಸಭೆ, ಮೊದಲಾದ ಕೆತ್ತುಗೆಗಳು ನಿಜಕ್ಕೂ ನೋಡತಕ್ಕಂತವುಗಳು. ಶಿವ-ಪಾರ್ವತಿಯರು ಪಗಡಿ ಆಟವನ್ನಾಡುವ ದೃಶ್ಯವಂತೂ ಶಿಲ್ಪಕಲೆಯ ಅಚ್ಚರಿಯೇ ಸರಿ! ಪಾರ್ವತಿಯು ಕವಡಿಗಳನ್ನು ಒಗೆದಾಗ ತಿರುವಿದ ಕೈಯನ್ನೂ ಹಸನ್ಮುಖಿಯಾಗಿ ಶಿವನ ಮುಖದತ್ತ ನೋಡುವ ಆಟಗಾರಿಕೆಯ ಲಕ್ಷಣವನ್ನೂ ಬಣ್ಣಿಸುವದಕ್ಕಿಂತ ಸಾಕ್ಷಾತ್ತಾಗಿ ಮನ ತಣಿಯುವಂತೆ ನೋಡುವದು ಒಳಿತು. ಅವುಗಳಲ್ಲಿ ಕೊನೆಯ ೬ ಗವಿಗಳು ಜೈನ ಧರ್ಮಕ್ಕೆ ಸಂಬಂಧಿಸಿದವುಗಳಿವೆ. ಅವು ೯ ಹಾಗೂ ೧೦ ನೆಯ ಶತಮಾನಗಳಲ್ಲಿ ಕೊರೆಯಲ್ಪಟ್ಟಿವೆ. ಅವುಗಳಲ್ಲಿ ಇಂದ್ರನ ಸಭೆ ಹಾಗೂ ಜಗನ್ನಾಥನ ಸಭೆ ಇವು ಮುಖ್ಯವಾದವುಗಳು. ಆ ಸಭೆಗಳಲ್ಲಿ ಜೈನ ಮತದ ಬಹಳ ಇದ್ದ ಎಲ್ಲ ತೀರ್ಥಂಕರ (Prophet) ರ ಮೂರ್ತಿಗಳಿವೆ. ಆ ಮೂರ್ತಿಗಳನ್ನು ನೋಡಿದರೆ, ತೀರ್ಥಂಕರರು ನೋಡುವವರ ಎದುರಿಗೆ ಸಾಕ್ಷಾತ್ತಾಗಿ ನಿಂತಿರುವರೋ ಏನೋ ಎನ್ನುವಂತೆ ಭಾಸವಾಗುತ್ತಿದೆ.

[ಮುಂದುವರಿಯುವದು]

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ
ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ
ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]

೪ ರಿಂದ ೭ ನೇಯ ವರ್ಗದ ವರೆಗಿನ ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ: ೧ರೂ. ೪ಆಣೆ ಮಾತ್ರ

ದೊರೆಯುವ ಸ್ಥಳ:—
ಸಾಯಿ ಪಬ್ಲಿಶಿಂಗ್ ಹಾವುಸ್,
ವಿಜಯ ರೋಡ, ಧಾರವಾಡ.

ಪ್ರಾಥಮಿ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರಿಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು
ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. ಬೆಲೆ ೧—೧೨—೦ ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.
ಇದು ಕನ್ನಡದಲ್ಲಿಯೂ ಸಿಗುತ್ತದೆ,

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.

ಜೀವನ ಶಿಕ್ಷಣದಲ್ಲಿ ಮೂಲೋದ್ಯೋಗದ ಆರ್ಥಿಕ ಸ್ವಾಯತ್ತತೆಯು

ಲೇಖಕರು : **ಶ್ರೀ ಎ. ರಾ. ರಾವೂತ,** ಬಿ.ಎ.,ಎಮ್.ಈಡಿ.,ಡಿ.ಬಿ.ಈ.,ಡಿ.ಪಿ.ಎಡ್.

ಮುಂಬಯಿ ಕರ್ನಾಟಕದ ಹೊಂದಿಕೆಯ ಕ್ಷೇತ್ರಗಳಲ್ಲಿಯ ಸಾಲೆಗಳಲ್ಲಿ ಜೀವನ ಶಿಕ್ಷಣವು ಅಪುಲಿನಲ್ಲಿ ಬಂದು ಇಪ್ಪತ್ತು ವರುಷಗಳು ಗತಿಸಿದವು. ಹೊಂದಿಕೆಯ ಕ್ಷೇತ್ರದ ಸಾಲೆಗಳಲ್ಲಿ ಪ್ರಯೋಗಾವಸ್ಥೆಯಲ್ಲಿದ್ದ ಜೀವನ ಶಿಕ್ಷಣದ ಸೆಲೆಯು ಪ್ರಯೋಗಾವಸ್ಥೆಯನ್ನು ದಾಟಿ ಹೊಂದಿಕೆಯ ಕ್ಷೇತ್ರಗಳಿಂದ ಹೊರಚಿಮ್ಮಿ ಸುತ್ತು-ಮುತ್ತಲಿನ ಸಾಲೆಗಳನ್ನು ಸುತ್ತುಗಟ್ಟಿ ದೂರದೂರದ ಸಾರ್ವಜನಿಕ ಸಾಲೆಗಳನ್ನು ಸೇರಿದೆ. ಕಟ್ಟಡದ ಅನುಕೂಲತೆಗಳಿದ್ದ ಬಹುತರ ಎಲ್ಲ ದೊಡ್ಡ ದೊಡ್ಡ ಊರುಗಳಲ್ಲಿಯ ಪೂರ್ಣ ಪ್ರಾಥಮಿಕ ಸಾರ್ವಜನಿಕ ಸಾಲೆಗಳಲ್ಲಿಯೂ ಒಬ್ಬ ಶಿಕ್ಷಕರ ಕೆಲ ಸಾಲೆಗಳಲ್ಲಿಯೂ ಇಂದು ಜೀವನ ಶಿಕ್ಷಣವು ಬಳಕೆಯಲ್ಲಿ ಇದೆ. ಯಾವ ಸಾಲೆಗಳಲ್ಲಿ ಈ ಬಗೆಯ ಶಿಕ್ಷಣವನ್ನು ಕೂಡಲೇ ಪ್ರಾರಂಭಿಸುವ ಅನುಕೂಲತೆಗಳಿಲ್ಲವೋ ಅಂಥ ಸಾರ್ವಜನಿಕ ಸಾಲೆಗಳು ಮಾತ್ರ ಈ ಬಗೆಯ ಶಿಕ್ಷಣಕ್ಕೆ ಹೊರತಾಗಿವೆ.

ಹೀಗಿದ್ದರೂ ಜೀವನ ಶಿಕ್ಷಣದ ಪ್ರಭಾವವು ಅಂಥ ಸಾಲೆಗಳ ಮೇಲೆ ಬಿದ್ದಿಲ್ಲವೆಂದಲ್ಲ. ಮೂಲೋದ್ಯೋಗವೊಂದನ್ನು ಬಿಟ್ಟು ಜೀವನ ಶಿಕ್ಷಣ ಸಾಲೆಗಳಲ್ಲಿ ನಡೆಯುವ ನೈಸರ್ಗಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಉದಾ :— ಪ್ರಾರ್ಥನೆ, ಪಂಚಾಂಗ ಪಠಣ, ಸುದ್ದಿ ಬಿತ್ತರಣೆ, ಅಮರವಾಣಿ, ಸಾಂಘಿಕ ಜೀವನ, ಸಫಾಯಿ ದಿನಾಚರಣೆ, ಮಂತ್ರಿಮಂಡಲಗಳ ರಚನೆ, ಪ್ರವಾಸ ನಿರೀಕ್ಷಣೆ ಮುಂತಾದವುಗಳನ್ನು ನಡೆಸಬೇಕೆಂದು ವಿಧಿಸಲಾಗಿವೆ. ಇದಲ್ಲದೆ ಮೂಲೋದ್ಯೋಗದ ಪೂರ್ವ ಪೀಠಿಕೆಯಾಗಿ ಸುಲಭ ಸಾಧ್ಯವಾದ ಉಪ ಮೂಲೋದ್ಯೋಗಗಳನ್ನು ಉದಾ :— ಕೈತೋಟ, ಕಾಗದದ ಕೆಲಸ, ಮಣ್ಣಿನ ಕೆಲಸ, ಕಸಬರಿಗೆ, ನೆಲವು, ಕಣ್ಣಿ, ಹಗ್ಗ, ಪತ್ರಾವಳಿ, ಬುಟ್ಟಿ ಮುಂತಾದವುಗಳಲ್ಲಿ ಶಕ್ಯವಿದ್ದವುಗಳನ್ನು ಖರ್ಚಿಲ್ಲದೆ ಪ್ರಾರಂಭಿಸಬೇಕಾಗಿ ಗುರುಗಳಿಗೆ ತಿಳಿಸಲಾಗಿದೆ. ಗಾಂಧೀಜಿಯವರು ಇಪ್ಪತ್ತು ವರುಷಗಳ ಹಿಂದೆ ಕಂಡ ಕನಸು ಶೀಘ್ರದಲ್ಲಿಯೇ ನನಸಾಗಲಿದೆ.

ಜೀವನ ಶಿಕ್ಷಣ ಸಾಲೆಗಳಲ್ಲಿ ನಡೆಯುವ ಚಟುವಟಿಕೆಗಳು ಜ್ಞಾನದ ಉಗಮಸ್ಥಾನಗಳಾಗಿ ಪರಿಣಮಿಸಬೇಕಾಗಿದೆ. ಆ ಚಟುವಟಿಕೆಗಳು ಮಗುವಿನ ಬೌದ್ಧಿಕ, ನೈತಿಕ, ಹಾರ್ದಿಕ ಹಾಗೂ ಆರ್ಥಿಕ ವಿಕಾಸಗಳಿಗೆ ಮೂಲಾಧಾರವಾಗಿರಬೇಕು. ಜೀವನ ಶಿಕ್ಷಣ ಸಾಲೆಗಳಲ್ಲಿ ನಡೆಸಲ್ಪಡುವ ಚಟುವಟಿಕೆಗಳು ಯಾಂತ್ರಿಕವಾಗಿರದೆ ಯೋಜನಾಬದ್ಧವಾಗಿರಬೇಕೆಂಬುದು ಮಹತ್ವದ ಮಾತಾಗಿದೆ. ಚಟುವಟಿಕೆಗಳನ್ನು ಯೋಜಿಸುವಲ್ಲಿ ಅವುಗಳನ್ನು ನಿರ್ವಹಿಸುವದರಲ್ಲಿ ಮಗುವಿಗೆ ಪ್ರಾಮುಖ್ಯತೆಯನ್ನು ಕೊಡಬೇಕಾದುದು ಅವಶ್ಯವಾಗಿದೆ. ಆರಿಸಿದ ಚಟುವಟಿಕೆಗಳು ಮಗುವನ್ನು ನಿಜವಾದ ಜೀವನ ಸನ್ನಿವೇಶಗಳಲ್ಲಿ ಧುಮುಕಬೇಕು. ಆ ಜೀವನ ಸನ್ನಿವೇಶಗಳಲ್ಲಿ ಮಗುವು ಈಸಬೇಕು, ಈಸಿ ಜೀವಿಸಬೇಕು, ಕಟು—ಮಧುರ ಅನುಭವಗಳನ್ನು ಪಡೆಯಬೇಕು. ಸುಖಮಯ ಜೀವನದತ್ತ ಸಾಗುವದರಲ್ಲಿ ಬರುವ ಎಡರು-ತೊಡರುಗಳನ್ನು ಎದುರಿಸಿ ಜಯಿಸಲು ಸಮರ್ಥವಾಗಬೇಕು.

ಜೀವನ ಶಿಕ್ಷಣ ಸಾಲೆಗಳಲ್ಲಿ ನಡೆಯುವ ನೈಸರ್ಗಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಮಗುವಿನ ಬೌದ್ಧಿಕ, ನೈತಿಕ, ಹಾರ್ದಿಕ ವಿಕಾಸಗಳನ್ನಷ್ಟೇ ಮಾಡಿದರೆ ಮೂಲೋದ್ಯೋಗವು ಇವುಗಳ ಜೊತೆಗೆ ಮಗುವಿನ ಶಾರೀರಿಕ ಉನ್ನತಿಯನ್ನು ಹಾಗೂ ಆರ್ಥಿಕ ಉನ್ನತಿಯನ್ನು ಸಹ ಮಾಡುತ್ತದೆ. ಆದ್ದರಿಂದ ಮಹಾತ್ಮಾಜಿಯವರು ಜೀವನ ಶಿಕ್ಷಣ ಸಾಲೆಗಳಲ್ಲಿ ಮೂಲೋದ್ಯೋಗಕ್ಕೆ ಬಹು ಉನ್ನತವಾದ ಸ್ಥಾನವನ್ನು ಕಲ್ಪಿಸಿಕೊಟ್ಟಿರುವರು.

ಜೀವನ ಶಿಕ್ಷಣ ಸಾಲೆಗಳಲ್ಲಿ ಪ್ರಾರಂಭಿಸಲಾದ ಮೂಲೋದ್ಯೋಗಗಳು ಮಾನವನ ಮೂಲಭೂತ ಬೇಡಿಕೆಗಳಾದ ಆಹಾರ, ಆಶ್ರಯ, ಆಚ್ಛಾದನಗಳನ್ನು ಪೂರೈಸುವದರಿಂದ ಅವು ಮೂಲ ಉದ್ಯೋಗಗಳೆಂದು ಕರೆಯಲ್ಪಡುತ್ತವೆ. ಈ ಮೂಲ ಉದ್ಯೋಗಗಳಾದ ಒಕ್ಕಲುತನ ಬಡಿಗತನ ಮತ್ತು ನೇಕಾರಿಕೆಗಳು ಸಾಲೆಗಳಲ್ಲಿ ಮಗುವಿಗೆ

ಕೊಡಬೇಕಾದ ಜ್ಞಾನದ ಸೆಲೆಗಳಿಗಾಗಿ ಮಗುವಿನ ತನು, ಮನ, ಕೈಗಳ ವಿಕಾಸಕ್ಕೆ ಸಾಧನಗಳಾಗಿವೆ. ವಿದ್ಯಾರ್ಥಿಗಳಲ್ಲಿ ಉದ್ಯೋಗತತ್ಪರತೆ, ಶ್ರಮಗೌರವಗಳನ್ನು ನೆಲೆಗೊಳಿಸಲು ಮೂಲೋದ್ಯೋಗವು ಉತ್ತಮವಾದ ಸಾಧನವಾಗಿದೆ. ವಿದ್ಯಾರ್ಥಿಗಳ ಸತತೋದ್ಯೋಗ ಹಾಗೂ ಪರಿಶ್ರಮದ ಪರಿಣಾಮವಾಗಿ ಉತ್ಪಾದನೆಯು ಆಗುವದು ಸ್ವಾಭಾವಿಕವಾಗಿದೆ. ಉತ್ಪಾದನೆಯು ಆರ್ಥಿಕ ಸ್ವಾಯತ್ತತೆಯ ತಾಯಿಯಾಗಿದೆ.

ಜೀವನ ಶಿಕ್ಷಣ ಸಾಲೆಗಳಲ್ಲಿ ನಡೆಯುವ ಮೂಲೋದ್ಯೋಗಗಳನ್ನು ಯೋಜನಾ-ಬದ್ಧವಾಗಿಯೂ ನಿಯಮಿತವಾಗಿಯೂ ಸಾಗಿಸಿದಲ್ಲಿ ಅವುಗಳ ಉತ್ಪಾದನೆಯು ಮಗುವಿನ ಶಿಕ್ಷಣಕ್ಕೆ ತಗಲುವ ಖರ್ಚಿನ ಬಹುಭಾಗವನ್ನು ಹೊರಲು ಸಮರ್ಥವಾಗುವದರಲ್ಲಿ ಸಂದೇಹವಿಲ್ಲವೆಂದು ಮಹಾತ್ಮಾಜಿಯವರು ಹೇಳಿರುವರು. ಶಿಕ್ಷಣದ ವೆಚ್ಚವನ್ನು ಜೀವನ ಶಿಕ್ಷಣ ಸಾಲೆಗಳಲ್ಲಿ ನಡೆಯುವ ಮೂಲೋದ್ಯೋಗಗಳು ಹೊರಲು ಸಮರ್ಥವಾದಾಗಲೇ ಮಹಾತ್ಮಾಜಿಯವರು ಬಯಸಿದ ಆರ್ಥಿಕ ಸ್ವಾಯತ್ತತೆಯನ್ನು ಸಾಧಿಸಿದಂತಾಗುವದು. ಈ ಆರ್ಥಿಕ ಸ್ವಾಯತ್ತತೆಯನ್ನು ಸಾಧಿಸಿದ ದಿನವೇ ಜೀವನ ಶಿಕ್ಷಣದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದ ದಿನವಾಗಿದೆ.

ಈ ಆರ್ಥಿಕ ಸ್ವಾಯತ್ತತೆಯನ್ನು ಸಾಧಿಸಲು ಜೀವನ ಶಿಕ್ಷಣ ಸಾಲೆಗಳು ಹೆಣಗುತ್ತಲಿವೆ. ಆದರೆ ಅದು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ ಎಂಬುದನ್ನು ಅಂಕಿಸಂಖ್ಯೆಗಳಿಂದ ನೋಡಬೇಕಾಗಿದೆ. ಪ್ರತಿ ಜೀವನ ಶಿಕ್ಷಣ ಸಾಲೆಯಿಂದ ಮೂಲೋದ್ಯೋಗದ ಮಾಸಿಕ ಪ್ರಗತಿ ಪತ್ರಿಕೆಗಳನ್ನು ತರಿಸಿ ಈ ಆರ್ಥಿಕ ಸ್ವಾಯತ್ತತೆಯನ್ನು ಶಿಕ್ಷಣಾಧಿಕಾರಿಗಳು ಪರಿಶೀಲಿಸುವ ಪರಿಪಾಠವುಂಟು. ಈ ಅಂಕಿಸಂಖ್ಯೆಗಳನ್ನೇ ಸರಕಾರದವರು ಮೂರು ತಿಂಗಳಿಗೊಮ್ಮೆ ತರಿಸಿಕೊಂಡು ಜೀವನ ಶಿಕ್ಷಣ ಸಾಲೆಗಳಲ್ಲಿಯ ಮೂಲೋದ್ಯೋಗದ ಆರ್ಥಿಕ ಸ್ವಾಯತ್ತತೆಯನ್ನು ನಿರೀಕ್ಷಿಸುತ್ತಾರೆ.

ಬೆಳಗಾಂವಿ ಜಿಲ್ಹೆಯೊಳಗಿನ ಜೀವನ ಶಿಕ್ಷಣ ಸಾಲೆಗಳ ೧೯೫೮–೧೯೫೯ನೆಯ ಇಸ್ವಿಯ ಆಯವ್ಯಯ ಪತ್ರಿಕೆಗಳನ್ನು ಪರಿಶೀಲಿಸಿ ನೋಡಿದಾಗ ಬೇರೆ ಬೇರೆ ಮೂಲೋದ್ಯೋಗಗಳು ಆಯವ್ಯಯಗಳು ಕೆಳಗಿನಂತಿದ್ದುದು ಕಂಡುಬರುತ್ತದೆ,

ಮೂಲೋದ್ಯೋಗ	ಆಯ	ವ್ಯಯ	ಲಾಭಹಾನಿ
ನೂಲು–ನೇಯ್ಗೆ	೩೯೩೫೯.೭೯	೨೫೬೭೬.೦೧	೧೩೬೮೩.೭೮ ಲಾಭ
ಒಕ್ಕಲುತನ	೧೮೦೬.೭೬	೨೦೬೭.೧೦	೨೬೦.೩೪ ಹಾನಿ
ಬಡಿಗತನ	೬೭೦.೪೪	೬೪೦.೦೭	೩೦.೩೭ ಲಾಭ
ಅಂತೂ	೪೧೮೩೬.೯೯	೨೮೩೮೩.೧೮	೧೩೪೫೩.೮೧ ಲಾಭ

ಮೂಲೋದ್ಯೋಗ ನಡೆಯುವ ಸಾಲೆಗಳ ಸಂಖ್ಯೆ, ಮೂಲೋದ್ಯೋಗ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಗುರುಗಳ ಸಂಖ್ಯೆಯು ಕೆಳಗಿನಂತಿದೆ.

ಮೂಲೋದ್ಯೋಗ	ಸಾಲೆಗಳು	ವಿದ್ಯಾರ್ಥಿಗಳು	ಅವರ ಹಾಜರಿ ಸರಾಸರಿ	ಗುರುಗಳು
ನೂಲು–ನೇಯ್ಗೆ	೨೨೭	೪೮೧೦೬	೩೪೫೧೭.೬	
ಒಕ್ಕಲುತನ	೩೧	೪೮೯	೩೭೪೧.೭	೧೬೫೩
ಬಡಿತನ	೧೭	೧೦೬೨	೭೨೬.೭	
ಅಂತೂ	೨೭೫	೫೪೦೬೭	೩೮೯೮೬.೦	

ಬೆಳಗಾವಿ ಜಿಲ್ಹೆಯಲ್ಲಿ ಸದ್ಯ ೨೭೫ ಸಾಲೆಗಳಲ್ಲಿ ಜೀವನ ಶಿಕ್ಷಣವು ನಡೆದಿದ್ದು ೫೪೦೬೭ ವಿದ್ಯಾರ್ಥಿಗಳು ಮೂಲೋದ್ಯೋಗವನ್ನು ಮಾಡುತ್ತಿದ್ದರೂ ೨೮೩೮೩.೧೮ ವೆಚ್ಚ ಕಳೆದು ೧೩೪೫೩.೮೧ ರೂ. ಉಳಿತಾಯ ವಾಗಿದ್ದನ್ನು ನೋಡಿದರೆ ನಮ್ಮ ಜೀವನ ಶಿಕ್ಷಣ ಸಾಲೆಗಳು ಮೂಲೋದ್ಯೋಗಗಳಲ್ಲಿ ಸಾಧಿಸಬೇಕಾದ ಆರ್ಥಿಕ ಸ್ವಾಯತ್ತತೆಯು ಮಹಾತ್ಮಾಜಿಯವರು ಅಪೇಕ್ಷಿಸಿದಷ್ಟು ಸಮಾಧಾನಕರವಾಗಿಲ್ಲವೆಂದೇ ಹೇಳವಹೊರತು ಗತ್ಯಂತರವಿಲ್ಲ. ಹೀಗಿದ್ದರೂ ಈ ಕ್ಷೇತ್ರದಲ್ಲಿ ದುಡಿಯು ವವರು ಅಧೈರ್ಯವಾಗಬೇಕಾದ ಕಾರಣವೇನೂ ಇಲ್ಲ. ಅಲ್ಲದೆ ಉತ್ಪಾದನೆಯನ್ನು ಇನ್ನೂ ಹೆಚ್ಚಿಸುವ ಭರದಲ್ಲಿ ಮಗುಗಳನ್ನು ಕಾರಖಾನೆಯಲ್ಲಿ ದುಡಿಸಿದಂತೆ ದುಡಿಸಿ ಅವರ ಶ್ರಮದ ಸುಲಿಗೆಯನ್ನು ಪ್ರಾರಂಭಿಸುವ ಅಗತ್ಯವೂ ಇಲ್ಲ.

ಜೀವನ ಶಿಕ್ಷಣ ಸಾಲೆಗಳಲ್ಲಿ ನಡೆದ ಮೂಲೋದ್ಯೋಗಗಳು ಆರ್ಥಿಕ ಸ್ವಾಯತ್ತತೆಯನ್ನು ಪಡೆದಿರಲು ಕೆಳಗಿನ ಕಾರಣಗಳು ಪ್ರಾಮುಖ್ಯವಾಗಿವೆಯೆಂದು ಹೇಳಬಹುದು.

ನೂಲು ನೇಯ್ಗೆ :

೧) ಯೋಗ್ಯ ಕಟ್ಟಡಗಳ ಹಾಗೂ ಸ್ಥಳದ ಕೊರತೆ.

೨) ಸಾಕಷ್ಟು ಉಪಕರಣಗಳ ಆವಶ್ಯಕತೆ.

೩) ನಾದುರುಸ್ತು ಆದ ಉಪಕರಣಗಳನ್ನು ಯೋಗ್ಯ ಕಾಲಕ್ಕೆ ದುರುಸ್ತಗೊಳಿಸದೆ ಇರುವದು.

೪) ಪೂರೈಸಲಾದ ಎಲ್ಲ ಉಪಕರಣಗಳನ್ನು ಉಪ ಯೋಗಿಸದೆ ಇರುವದು.

೫) ಸಕಾಲಕ್ಕೆ ಮೂಲೋದ್ಯೋಗವನ್ನು ಪ್ರಾರಂಭಿಸದೆ ಇರುವದು.

೬) ಮೂಲೋದ್ಯೋಗ ನಡೆದಾಗ ಯೋಗ್ಯ ಮೇಲ್ವಿಚಾರಣೆಯನ್ನು ಹಾಗೂ ಮಾರ್ಗದರ್ಶನವನ್ನು ಮಾಡದೇ ಇರುವದು.

೭) ವಿದ್ಯಾರ್ಥಿ–ವಾರ ಮೂಲೋದ್ಯೋಗದ ದೈನಂದಿನ ಪ್ರಗತಿ ಪತ್ರಿಕೆಗಳನ್ನು ಇಡದೇ ಇರುವದು.

೮) ಮೂಲೋದ್ಯೋಗದಲ್ಲಿ ಗುರುಗಳಿಗೆ ಸಾಕಷ್ಟು ಜ್ಞಾನ ಇರದೆ ಇರುವದು.

ಒಕ್ಕಲುತನ :

೧) ಸಾಕಷ್ಟು ಹಾಗೂ ಯೋಗ್ಯ ಭೂಮಿ ಇರದೆ ಇರುವದು.

೨) ಸ್ವಂತ ಭೂಮಿ ಇಲ್ಲದಲ್ಲಿ ಲಾವಣಿ ಹಣ ಕೊಡ ಬೇಕಾದುದು.

೩) ನೀರಿನ ಅನುಕೂಲತೆಗಳು ಇರದೇ ಇರುವದು.

೪) ಬೇಲಿಯು ಇಲ್ಲದೆ ಇರುವದು.

೫) ಬೇಸಾಯದ ಕೆಲಸಗಳನ್ನು ಹಂಗಾಮಕ್ಕೆ ಸರಿಯಾಗಿ ಸಕಾಲಕ್ಕೆ ಕೈಕೊಳ್ಳಲು ಗಳೆಗಳು ದೊರೆಯದೆ ಇರುವದು.

೬) ಗಳೆಗಳಿಗೆ ಅವಾಸ್ತವ ಬಾಡಿಗೆ ಕೊಡಬೇಕಾದುದು.

೭) ಬೆಳೆಯನ್ನು ಕಾಯುವ ಹೊಣೆಗಾರಿಕೆಯನ್ನು ಹೊರಲು ಯಾರೂ ಜವಾಬ್ದಾರರಾಗಿರದಿರುವದು.

೮) ಸೂಟಿಯ ಕಾಲದಲ್ಲಿ ಹಂಗಾಮು ಇದ್ದರೆ ಆ ಕೆಲಸ ಮಾಡಲು ಯಾರೂ ಇರದೆ ಇರುವದು.

ಬಡಿಗತನ :

೧) ಉಪಕರಣಗಳನ್ನು ಹದನವಾಗಿರಿಸುವದರ ಸರಿಯಾದ ಜ್ಞಾನ ಇರದೆ ಇರುವದು.

೨) ಪ್ರಾಥಮಿಕ ಸಾಲೆಗಳಲ್ಲಿಯ ಮಕ್ಕಳ ತೀರ ಚಿಕ್ಕವರಿದ್ದು ಉಪಕರಣಗಳು ಅವರ ಮಾನದಿಂದ ದೊಡ್ಡವಾಗಿದ್ದ ಮೂಲಕ.

೩) ಕಡಿಮೆ ಬೆಲೆಯಲ್ಲಿ ಒಳ್ಳೇ ಕಟ್ಟಿಗೆ ದೊರಕಿಸುವ ಜ್ಞಾನವಿಲ್ಲದ ಮೂಲಕ.

೪) ಅಪೂರ್ಣ ಜ್ಞಾನದ ಮೂಲಕ ಬಹಳಷ್ಟು ಕಟ್ಟಿಗೆಯು ಹಾಳಾಗಿ ಹೋಗುತ್ತಿರುವದು.

೫) ತಯಾರಾದ ವಸ್ತುಗಳಿಗೆ ಯೋಗ್ಯ ಬೆಲೆಯು ದೊರೆಯದಿರುವದು.

ಮೂಲೋದ್ಯೋಗವನ್ನು ಕೈಕೊಳ್ಳುವದರಲ್ಲಿ ಮೇಲ್ಕಾಣಿಸಿದ ಅಡಚಣೆಗಳಲ್ಲದೆ ಅವೆಷ್ಟೋ ಇನ್ನಿತರ ಅಡಚಣೆಗಳು ಬಂದು ಆಯಾ ಮೂಲೋದ್ಯೋಗಗಳ ಆರ್ಥಿಕ ಸ್ವಾಯತ್ತತೆಯನ್ನು ಸಾಧಿಸುವದು ಸಾಧ್ಯವಾಗುತ್ತಿರಲಿಕ್ಕಿಲ್ಲ. ಆಯಾ ಸಾಲೆಗಳ ಗುರುಗಳು ತಮ್ಮ ತಮ್ಮ ಅಡಚಣೆಗಳನ್ನು ಸ್ಥಾನಿಕವಾದ ರೀತಿಯಲ್ಲಿ ಎದುರಿಸಿ, ತಮ್ಮಿಂದ ಅಸಾಧ್ಯವಾದ ಅಡಚಣೆಗಳನ್ನು ಊರವರ ಹಾಗೂ ಅಧಿಕಾರಿಗಳ ನೆರವಿನಿಂದ ದೂರಿಕರಿಸಿ ಮಹಾತ್ಮಾಜಿಯವರು ಅಪೇಕ್ಷಿಸಿದ ಆರ್ಥಿಕ ಸ್ವಾಯತ್ತತೆಯನ್ನು ಪಡೆಯಲು ಎದೆಗುಂದದೆ ಹೆಣಗಬೇಕು. ಹಾಗೆ ಮಾಡಿದಾಗ ಮಾತ್ರ ಮಹಾತ್ಮಾಜಿಯವರು ಕಂಡ ಕನಸು ನನಸಾದೀತು. ಗರುಗಳೆಲ್ಲ ಆ ದಿಶೆಯಲ್ಲಿ ಹೆಣಗಬಹುದೆಂದು ಆಶಿಸಲಾಗಿದೆ.

ಜೀವನ ಶಿಕ್ಷಣದ ದೀಕ್ಷೆಯನ್ನು ಪಡೆಯುತ್ತಿರುವ ನಮ್ಮ ಪ್ರಾಥಮಿಕ ಶಾಲೆಗಳು

ಕುಮಾರಿ: **ಸುಶೀಲಾ ಹುಲಸೋಗಿ, ಅ. ಡಿ. ಎ. ಇ., ಬೆಳಗಾಂವ,**

ಬಾಲಕನ ವ್ಯಕ್ತಿತ್ವದ ವಿಕಾಸವೇ ಶಿಕ್ಷಣವೆಂಬ ಮಾತು ನಿರ್ವಿವಾದವಾಗಿದೆ. ಆದರ್ಶವಾದ ಶಿಕ್ಷಣ ಪದ್ಧತಿಯಲ್ಲಿ ಬಾಲಕನ ಬುದ್ಧಿ ವಿಕಾಸಕ್ಕೆ ಸಾಕಷ್ಟು ಅವಕಾಶವಿರಬೇಕು. ಅವನ ಹೃದಯವನ್ನು ಅರಳಿಸು ವಂಥ ಸಂದರ್ಭ ಸನ್ನಿವೇಶಗಳು ವಿಪುಲವಾಗಿರಬೇಕು. ನಿರೋಗಿಯಾದ ಸದೃಢ ದೇಹ-ಸೌಷ್ಟವವನ್ನು ಸಂಪಾದಿಸಲು ಅನುವು ಬೇಕು. ಇಂಥ ಆದರ್ಶ ಶಿಕ್ಷಣ ಪದ್ಧತಿಗಳು ಪ್ರಚಲಿತವಿರುವ ದೇಶಗಳು ಮಾತ್ರ ಮಾನವೀಯತೆಯ ಬೀಡಾಗಬಲ್ಲವು. ಹೀಗೆ ಬಾಲಕನ ವ್ಯಕ್ತಿತ್ವದ ವಿಕಾಸವನ್ನೇ ತಳಹದಿಯಾಗಿ ಇಟ್ಟುಕೊಂಡು ಸಾರ್ವತ್ರಿಕವಾಗಿ ಪ್ರಸಾರವಾಗುತ್ತಿರುವ ಜೀವನ ಶಿಕ್ಷಣವು ಬಾಪೂಜಿಯವರು ನಮ್ಮ ದೇಶಕ್ಕೆ ನೀಡಿದ ಅಪೂರ್ವವಾದ ಕೊಡುಗೆಯಾಗಿದೆ. ಇಂಥ ಆದರ್ಶ ಶಿಕ್ಷಣ ಪದ್ಧತಿಯು ಇಂದು ನಮ್ಮ ರಾಷ್ಟ್ರೀಯ ಶಿಕ್ಷಣವೆಂದು ಮನ್ನಣೆಯನ್ನು ಪಡೆದುದರಲ್ಲಿ ಆಶ್ಚರ್ಯವಿಲ್ಲ. ಪ್ರಾಥಮಿಕ ಶಿಕ್ಷಣವಂತೂ ಈ ಪ್ರಣಾಲಿಯಲ್ಲಿಯೇ ಸಾಗಬೇಕೆಂದು ರಾಜ್ಯಸರಕಾರಗಳು ನಿರ್ಧರಿಸಿವೆ. ಕೇಂದ್ರ ಸರಕಾರವು ರಾಜ್ಯಸರಕಾರಗಳ ಈ ಧೋರಣೆಗೆ ಸಕ್ರಿಯ ಸಹಾನು- ಭೂತಿಯನ್ನು ತೋರಿಸುತ್ತಿದೆ. ಇದಲ್ಲದೆ ಶಿಕ್ಷಣ ತಜ್ಞರ ಕೃಪಾದೃಷ್ಟಿಗೂ ಜೀವನ ಶಿಕ್ಷಣವು ಪಾತ್ರವಾಗಿದೆ. ಹೀಗೆ ಜೀವನ ಶಿಕ್ಷಣದ ತತ್ವಗಳು ಕಳೆದ ಇಪ್ಪತ್ತು ವರ್ಷ ಗಳಿಂದ ನಮ್ಮ ದೇಶದಲ್ಲಿ ಪ್ರಚಲಿತವಿದ್ದರೂ ಅವು ಸರ್ವ ಸಮ್ಮತವಾಗಿದ್ದರೂ ಅವುಗಳ ಸಾರ್ವತ್ರಿಕ ಪ್ರಚಾರವು ಮಾತ್ರ ಮಂದ ಗತಿಯಿಂದ ಸಾಗಿದೆ. ಎಂದು ಹೇಳಬಹುದು. ಇಂದು ಕೇವಲ ನಿಯಮಿತ ಕ್ಷೇತ್ರಗಳಲ್ಲಿ ಮಾತ್ರ ಮೂಲ ಶಿಕ್ಷಣದ ಶಾಲೆಗಳು ಕಂಡು ಬರುತ್ತವೆ. ಈ ಸಾವಧಾನದ ಪ್ರಗತಿಗೆ ಅನೇಕ ಕಾರಣಗಳುಂಟು. ಆರ್ಥಿಕ ಅನಾನುಕೂಲತೆಯು ಒಂದು ಸಮಸ್ಯೆಯಾಗಿದ್ದರೆ ತರಬೇತಿ ಹೊಂದಿದ ಶಿಕ್ಷಕರ ಅಭಾವವು ಮತ್ತೊಂದು ಹಿರಿಯ ಕಾರಣವಾಗಿದೆ. ಆದರೆ ಇವೆರಡೂ ಸಮಸ್ಯೆ ಗಳನ್ನು ಪರಿಹರಿಸಿ ಮೂಲ ಶಿಕ್ಷಣವನ್ನು ಸಾರ್ವತ್ರಿಕ ವಾಗಿ ಮಾಡಬೇಕೆಂಬ ವಾದ ಸಯುಕ್ತವಾಗಲಾರದು. ಇವೆರಡೂ ಆತಂಕಗಳನ್ನು ದೂರೀಕರಿಸಲು ದೀರ್ಘಾವಧಿ ಬೇಕು. ಆದ್ದರಿಂದ ಸನ್ ೧೯೫೫ ನೆಯ ಇಸ್ವಿಯಲ್ಲಿ ಶ್ರೀ ಜಿ. ರಾಮಚಂದ್ರನ್ ಇವರ ಅಧ್ಯಕ್ಷತೆ ಯಲ್ಲಿ ನಿಯೋಜಿತವಾದ ಸಮಿತಿಯ ಸಲಹೆ -ಸೂಚನೆಯ ಮೇರೆಗೆ ಎಲ್ಲ ಪ್ರಾಥಮಿಕ ಶಾಲೆಗಳಿಗೆ ಮೂಲ ಶಿಕ್ಷಣದ ದೀಕ್ಷೆಯನ್ನು ಕೊಡುವ ನಿರ್ಧಾರವನ್ನು ನಮ್ಮ ರಾಜ್ಯ ಸರಕಾರವು ಮಾಡಿದೆ. ಪರಿಪೂರ್ಣವಾದ ಜೀವನ ಶಿಕ್ಷಣ ಶಾಲೆಗಳಲ್ಲಿ ಈ ಕೆಳಗಿನ ಮಹತ್ವದ ಅಂಶಗಳು ಕಂಡು ಬರುತ್ತವೆ.

(೧) ಮೂಲೋದ್ಯೋಗ
(೨) ಸಮವಾಯ ತಂತ್ರ
(೩) ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(೪) ನೈಸರ್ಗಿಕ ಸನ್ನಿವೇಶದ ಚಟುವಟಿಕೆಗಳು

ಮೂಲ ಶಿಕ್ಷಣದಲ್ಲಿ ತರಬೇತಿಯನ್ನು ಪಡೆಯದೇ ಇದ್ದ ಶಿಕ್ಷಕರಿಂದ ಮೊದಲಿನ ಎರಡು ಅಂಶಗಳನ್ನು ಶಾಲೆಯಲ್ಲಿ ಕೂಡಲೇ ರೂಢಿಯಲ್ಲಿ ತರುವದು ಅಸಾಧ್ಯ. ಆದರೆ ನಮ್ಮ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ಸಾಮಾಜಿಕ ಚಟುವಟಿಕೆಗಳನ್ನು ಮತ್ತು ನೈಸರ್ಗಿಕ ಸನ್ನಿವೇಶದಲ್ಲಿಯ ಚಟುವಟಿಕೆಗಳನ್ನು ಕೂಡಲೇ ರೂಢಿಯಲ್ಲಿ ತರಲು ಯಾವ ದೊಡ್ಡ ಅಡೆತಡೆಗಳು ಬರಲಾರವು. ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕೆಳಗಿನ ಸಂಗತಿಗಳು ಸಮಾವೇಶವಾಗುವವು.

(೧) ಪ್ರಾರ್ಥನೆ
(೨) ಸಫಾಯಿ
(೩) ವೈಯಕ್ತಿಕ ಸ್ವಚ್ಛತೆ
(೪) ಮಂತ್ರಿ ಮಂಡಲ
(೫) ವಸ್ತು ಸಂಗ್ರಹಾಲಯ
(೬) ರಾಷ್ಟ್ರೀಯ ಹಬ್ಬಗಳು

(೭) ಮನರಂಜನೆಯ ಕಾರ್ಯಕ್ರಮ
(೮) ಪಂದ್ಯಾಟಗಳು ಇತ್ಯಾದಿ

ನೈಸರ್ಗಿಕ ಸನ್ನಿವೇಶದಲ್ಲಿ ಕೆಳಗೆ ಕಾಣಿಸಿದ ಚಟುವಟಿಕೆಗಳು ಬರುವವು.

(೧) ಹೊಳೆ, ಆಕಾಶ, ಮೋಡ, ಸೂರ್ಯ, ಚಂದ್ರ, ಗಿಡ-ಬಳ್ಳಿ, ಪ್ರಾಣಿ ಇತ್ಯಾದಿಗಳ ನಿರೀಕ್ಷಣೆ.
(೨) ಕಮ್ಮಾರ ಸಾಲೆ, ಬಡಿಗ ಸಾಲೆ, ಕುಂಬಾರ ಮನೆ ಇತ್ಯಾದಿಗಳ ನಿರೀಕ್ಷಣೆ.
(೩) ಕುರಿಗಳ ದಡ್ಡಿ, ಕೋಳಿಗಳ ಗೂಡು, ಪಾರಿವಾಳಗಳ ಗೂಡು, ಇತ್ಯಾದಿಗಳ ನಿರೀಕ್ಷಣೆ.
(೪) ರೇಲ್ವೆ ಸ್ಟೇಶನ್, ಛಾಪಖಾನೆ, ನೇಕಾರರ ಮನೆ ದವಾಖಾನೆ ಇತ್ಯಾದಿಗಳ ನಿರೀಕ್ಷಣೆ.

ಇದಲ್ಲದೆ ಜೀವನ ಶಿಕ್ಷಣದ ದೀಕ್ಷೆಯನ್ನು ಪಡೆದ ಸಾಲೆಗಳು ಕೆಲವೊಂದು ರಚನಾತ್ಮಕ ಚಟುವಟಿಕೆಗಳನ್ನೂ ಕೈಕೊಳ್ಳಬಹುದು. ಉದಾ :—

(೧) ಪತಂಗ ತಯಾರಿಸುವದು
(೨) ಊಟದ ಎಲೆ ಹಚ್ಚುವದು
(೩) ಪಣತಿ ಮಾಡುವದು
(೪) ರದ್ದಿ ಕಾಗದಗಳಿಂದ ಬುಟ್ಟಿ ತಯಾರಿಸುವದು
(೫) ಕೈ ತೋಟ
(೬) ಹೂದೋಟ
(೭) ಕಾಗದ ಕೆಲಸ
(೮) ಮಣ್ಣಿನ ಕೆಲಸ

ಜೀವನ ಶಿಕ್ಷಣದ ದೀಕ್ಷೆಯನ್ನು ಪಡೆದ ಸಾಲೆಗಳು ಸಮಾಜ ಶಿಕ್ಷಣದ ಕೇಂದ್ರಗಳಾಗಿ ಹಳ್ಳಿಗಳಲ್ಲಿ ಶೋಷಣ ರಹಿತವಾದ ಸಮಾಜ ನಿರ್ಮಾಣಕ್ಕೆ ನೆರವು ನೀಡಬಲ್ಲವು. ಸಾಲೆಗಳು ಹಳ್ಳಿಗಳ ಪರಿಶೀಲನೆ, ವಿಧಾಯಕ ಕಾರ್ಯಕ್ರಮ ಇತ್ಯಾದಿಗಳನ್ನು ಕೈಕೊಳ್ಳಬಹುದು.

ಆದರೆ ಈ ಎಲ್ಲ ಚಟುವಟಿಕೆಗಳನ್ನು ಕಾರ್ಯರೂಪದಲ್ಲಿ ತರುವಾಗ ಸಮರ್ಪಕವಾದ ಯೋಜನೆಗಳನ್ನು ಶಿಕ್ಷಕರು ಮಾಡುವದು ಅವಶ್ಯ. ಈ ಎಲ್ಲ ಕೃತಿಗಳನ್ನು ಬಾಲಕನ ಸಮನ್ವಯ ವಿಕಾಸಕ್ಕೆ ಪೋಷಕವಾಗುವಂತೆ ಸಂಘಟಿಸುವ ಚಾತುರ್ಯ ಶಿಕ್ಷಕನಲ್ಲಿ ಬೇಕು. ಬಾಲಕರು ಈ ಚಟುವಟಿಕೆಗಳನ್ನು ಸಾಗಿಸುವಾಗ್ಗೆ ಅವರಲ್ಲಿ ಉತ್ಸಾಹ, ಶಿಸ್ತು ಮತ್ತು ಅಚ್ಚು-ಕಟ್ಟುತನವು ಕಂಡು ಬರಬೇಕು. ಚಟುವಟಿಕೆಗಳು ಯಾಂತ್ರಿಕವಾಗದಂತೆ ಎಚ್ಚರವಹಿಸಬೇಕು. ಒಟ್ಟಿನಲ್ಲಿ ಈ ಚಟುವಟಿಕೆಗಳು ಶೈಕ್ಷಣಿಕವಾಗಬೇಕು.

ಬೆಳಗಾಂವ ಜಿಲ್ಹೆಯಲ್ಲಿ ಎಲ್ಲ ಪ್ರಾಥಮಿಕ ಸಾಲೆಗಳಿಗೆ ಜೀವನ ಶಿಕ್ಷಣದ ದೀಕ್ಷೆಯನ್ನು ಕೊಡುವ ಕೆಲಸ ಭರದಿಂದ ಸಾಗಿದೆಯೆಂದು ಹೇಳಬಹುದು. ಜಿಲ್ಹೆಯ ಬಹು ಸಂಖ್ಯಾಕ ಸಾಲೆಗಳಲ್ಲಿ ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳು ಈಗಾಗಲೇ ರೂಢಿಯಲ್ಲಿವೆ. ಇದಲ್ಲದೆ ಕೆಳಗೆ ನಮೂದಿಸಿದ ಸಾಲೆಗಳಲ್ಲಿ ಕೆಲವೊಂದು ಸುಲಭ ಉದ್ಯಮಗಳು ಪ್ರಾರಂಭಿಸಲ್ಪಟ್ಟಿವೆ:—

ಅ. ನಂ.	ಸಾಲೆಯ ಹೆಸರು		ಪ್ರಾರಂಭಿಸಿದ ಸುಲಭ ಉದ್ಯಮಗಳು
೧)	ಕಲಭಾವಿ	ಕನ್ನಡ ಗಂಡು ಮಕ್ಕಳ ಸಾಲೆ—	ಕೈತೋಟ
೨)	ಕೋಚರಿ	,,	ಕಾಗದ ಕೆಲಸ, ಮಣ್ಣಿನ ಕೆಲಸ, ಕೈತೋಟ.
೩)	ಹತ್ತರಗಿ	,,	ಕಾಗದ ಕೆಲಸ, ಮಣ್ಣಿನ ಕೆಲಸ, ಕೈತೋಟ.
೪)	ನೀಲಗಿ	,,	ಮದಿಯಿಂದ ಹಿಡಿ ತಯಾರಿಸುವದು.
೫)	ಧುಲಗನವಾಡಿ	,,	ಕಾಗದ ಕೆಲಸ, ಮಣ್ಣಿನ ಕೆಲಸ.
೬)	ಮುಗಳಿ	,,	ಗಿರಿಗಿಟ್ಟಿ ತಯಾರಿಸುವದು.
೭)	ಪಟ್ಟಣಕುಡಿ	,,	ಕ್ಯಾಲೆಂಡರ ತಯಾರಿಸುವದು.
೮)	ಕಬ್ಬೂರ	,,	ಎಲಿ ಬುಟ್ಟಿಗಳನ್ನು ತಯಾರಿಸುವದು.
೯)	ಮಾದನಗೇರಿ	,,	ಚಾಪಿ ಹೆಣಿಕೆ.

ಹೀಗೆ ಜೀವನ ಶಿಕ್ಷಣದ ಲಕ್ಷಣಗಳನ್ನು ಪಡೆಯುತ್ತಿರುವ ನಮ್ಮ ಸಾಲೆಗಳು ಸಜೀವ ಬಾಲಕರನ್ನು ಅವರ ಮುಖಾಂತರ ಸಜೀವ ರಾಷ್ಟ್ರವನ್ನು ನಿರ್ಮಿಸುವ ಹಿರಿಯ ಹೊಣೆಯನ್ನು ಹೊತ್ತಿವೆ ಎಂದು ಹೇಳಿದರೆ ಅತಿಶಯೋಕ್ತಿಯಾಗಬಹುದೇ ?

ಹಳ್ಳಿಯ ವಾಚನಾಲಯಗಳ ಸಮಸ್ಯೆಗಳು ಹಾಗೂ ಅವುಗಳ ನಿವಾರಣೋಪಾಯಗಳು

ಬರೆದವರು:— **ಶ್ರೀ ಪಾವಟೆ ಚೆನ್ನಪ್ಪನವರು,** ಸಹಾಯಕ ಉಪ ಶಿಕ್ಷಣಾಧಿಕಾರಿ, ಬೆಳಗಾಂವ.

ಪಶು-ಪಕ್ಷಿಗಳಂತೆ ಆಹಾರ, ವಿಹಾರ, ನಿದ್ರೆ ಇತ್ಯಾದಿ ಇವಿಷ್ಟೇ ಮಾನವನ ಮುಂದಿರುವ ಸಮಸ್ಯೆಗಳಲ್ಲ. ಎಲ್ಲ ಪ್ರಾಣಿಗಳಲ್ಲಿ ಮನುಷ್ಯನು ಸರ್ವಶ್ರೇಷ್ಠನೆನಿಸಿಕೊಂಡಿದ್ದಾನೆ. ಪ್ರಾಣಿಗಳಿಗೆ ಬುದ್ಧಿ ಕಡಿಮೆ; ಮಾನವನಿಗೆ ಬುದ್ಧಿ ಹೆಚ್ಚು. ಈ ಬುದ್ಧಿಯಿಂದಲೇ ಮಾನವನು ಉಚ್ಚಸ್ಥಾನ ಗಳಿಸಿಕೊಂಡಿದ್ದಾನೆ. ಈ ಬುದ್ಧಿಯನ್ನು ಬೆಳೆಸಿಕೊಳ್ಳು ವದು ಅವಶ್ಯ; ಅತ್ಯಗತ್ಯ. ಜ್ಞಾನಸಂಗ್ರಹವಾದಂತೆ ಅನುಭವವು ಹೆಚ್ಚಾದಂತೆ ಬುದ್ಧಿಶಕ್ತಿ ಬೆಳೆಯುತ್ತದೆ. ಜ್ಞಾನಸಂಗ್ರಹಿಸಲು ಹಲವು ಮಾರ್ಗಗಳಿವೆ. ಅವುಗಳಲ್ಲಿ ವಾಚನಾಲಯವೂ ಒಂದು ಶ್ರೇಷ್ಠ ಸಾಧನವಾಗಿದೆ.

ಜ್ಞಾನಾರ್ಥಿಗಳಿಗೆ ವಾಚನಾಲಯಗಳು ಕಾಮಧೇನು ಕಲ್ಪವೃಕ್ಷಗಳಿದ್ದಂತೆ; ಅವರಿಗೆ ಪುಸ್ತಕಗಳೇ ಸರ್ವಸಂಪತ್ತು. ಪುಸ್ತಕಗಳೊಂದಿದ್ದರೆ ಸಾಕು, ಅವರಿಗೆ ಬೇರಿನ್ನಾವ ಸಂಪತ್ತು ಬೇಕಾಗಿಲ್ಲ. "ದೇಶ ತಿರುಗಿ ನೋಡು, ಕೋಶ ಓದಿ ನೋಡು" ಎನ್ನುವ ಅನುಭವಿಕರ ಹಿತವಚನವೇ ಇದಕ್ಕೆ ಸಾಕ್ಷಿ. ಹೀಗಿದ್ದರೂ ನಾವು ಎಷ್ಟೇ ಶ್ರೀಮಂತ ರಿದ್ದರೂ ನಮಗೆ ಬೇಕಾಗುವ ಎಲ್ಲ ಪುಸ್ತಕಗಳನ್ನು ಕೊಂಡುಕೊಳ್ಳಲಾರೆವು. ಅತಿ ಕಡಿಮೆ ವೆಚ್ಚದಲ್ಲಿ ವಾಚ ನಾಲಯದಲ್ಲಿ ಬೇಕಾದ ಪುಸ್ತಕಗಳನ್ನು ದೊರಕಿಸ ಬಹುದು. ಅಲ್ಲಿ ವೃತ್ತಪತ್ರಿಕೆಗಳನ್ನು ತರಿಸುವದರಿಂದ ದೇಶದಲ್ಲಿ ಇಷ್ಟೇ ಏಕೆ ಜಗತ್ತಿನಲ್ಲಿ ನಡೆದ ಹೊಸ ಹೊಸ ಸಂಗತಿಗಳ ಜ್ಞಾನವಾಗುತ್ತಿದೆ. ವಾಚನಾಲಯಗಳಿಂದ ಜ್ಞಾನಾಭಿವೃದ್ಧಿಯಾಗುವದಲ್ಲದೆ ಮನರಂಜನೆಯೂ ಆಗು ತ್ತಿದೆ. ಓದುವ ಮನಸ್ಸಿಲ್ಲದಿದ್ದರೂ ವಾಚನಾಲಯಗಳಿಗೆ ಪ್ರವೇಶಿಸಿದರೆ ಸಾಕು, ಅಲ್ಲಿಯ ವಾತಾವರಣವು ಓದಲು ತೊಡಗಿಸುತ್ತಿದೆ. ಆದ್ದರಿಂದ ಜನತೆಯನ್ನು ವಾಚನಾ ಲಯದ ವಾತಾವರಣದಲ್ಲಿ ತರುವದವಶ್ಯವಿದೆ. ಇಂಥ ವಾಚನಾಲಯಗಳು ಹಳ್ಳಿ-ಪಳ್ಳಿಗಳಲ್ಲಿಯೂ ಸ್ಥಾಪನೆ ಯಾಗುವದವಶ್ಯವಶ್ಯ. ಇದ್ದ ವಾಚನಾಲಯಗಳು ತೀರ ಚಿಕ್ಕವುಗಳಾಗಿವೆ. ಅವು ಬೆಳೆದುಬರುವಂತೆ ಮಾಡಲು ಸುಹೃದಯಿಗಳಾದ ನಮ್ಮೆಲ್ಲರ ಆದ್ಯಕರ್ತವ್ಯ. ಇದಕ್ಕೆ ಕೆಲವು ತೊಂದರೆಗಳೂ ಅಡ್ಡಿ ಆತಂಕಗಳೂ ಬರುತ್ತಿವೆ. ಅವುಗಳ ನಿವಾರಣೆಯನ್ನು ನನಗೆ ಹೊಳೆದ, ತಿಳಿದ, ತೋಚಿದ, ಮಿಂಚಿದ ಜ್ಞಾನದಿಂದ ಕೆಳಗೆ ತೋರಿಸುವೆನು. ಹಂಸಕ್ಷೀರ ನ್ಯಾಯದಂತೆ ವರ್ತಿಸುವಿರೆಂದು ನೆರೆ ನಂಬಿದ್ದೇನೆ.

೧) ಹಣದ ಅಭಾವ:—

ವಾಚನಾಲಯಗಳಿಗೆ ಪುಸ್ತಕ, ವರ್ತಮಾನಪತ್ರ ಸಾದಿಲವಾರಕ್ಕೆಂದು ಹಣ ಬೇಕು.

ನಿವಾರಣೆ:— ವಾಚನಾಲಯದ ಮಹತ್ವವನ್ನು ತಿಳಿಸಿ, ಊರ ಅಥವಾ ಹಳ್ಳಿಯ ಜನತೆಯ ಮನವೊಲಿಸಿ ವರ್ಗಣಿದಾರ-ದೇಣಿಗೆದಾರ ಸಂಖ್ಯೆ ಹೆಚ್ಚಿಸಬೇಕು. ಮತ್ತು ಓದುಗರ ಮೇಲೆ ಚಿಕ್ಕಪ್ರಮಾಣದ ವರ್ಗಣಿ ಅಂದರೆ ತಿಂಗಳಿಗೆ ಒಂದಾಣೆ ಇಲ್ಲವೆ ಎರಡಾಣೆ ವರ್ಗಣಿ ವಸೂಲಮಾಡಬೇಕು, ಇಲ್ಲವೆ ಕಾಳಿನ ರೂಪದಿಂದಾ ದರೂ ವರ್ಗಣಿ ವಸೂಲಮಾಡಿದರೂ ಅಡ್ಡಿ ಇಲ್ಲ. ಇದು ಓದುಗರಿಗೆ ಭಾರವೆನಿಸಲಾರದು. ಚಿಕ್ಕಪ್ರಮಾಣದ ಹಣ ಸಂಗ್ರಹವಾಗುತ್ತ ನಡೆಯುವದರಲ್ಲಿ ಸಂದೇಹವಿಲ್ಲ. "ಹನಿ ಹನಿ ಕೂಡಿದರೆ ಹಳ್ಳ, ತೆನಿ ತೆನಿ ಕೂಡಿದರೆ ರಾಶಿ" ಯಾದಂತಾಗುವದಿಲ್ಲವೇ?

೨) ಓದುಗರ ಅಭಾವ:—

ಜನತೆಯಲ್ಲಿ ಓದುವ ಅಭಿರುಚಿಯಿಲ್ಲ; ವಾಚನಾಲ ಯದಲ್ಲಿ ಪುಸ್ತಕ ಪತ್ರಿಕೆಗಳಿದ್ದರೂ ಓದಲು ಬರುವವರು ಒಬ್ಬಿಬ್ಬರು ಮಾತ್ರ.

ನಿವಾರಣೆ:— ಓದುವ ಅಭಿರುಚಿ ಹುಟ್ಟಿಸಲು ಸಣ್ಣ ಸಣ್ಣ ಕತೆ, ಪತ್ರಿಕೆ ಮೊದಲಾದವುಗಳನ್ನು ನಾವು ಓದಿ ಹೇಳಬೇಕು. ಇಲ್ಲವೇ ಅವರಿಗೆ ಒಂದು ವಾರದ ಮುಟ್ಟಿಗೆ ಹೊತ್ತಿಗೆಗಳನ್ನು ಕೊಟ್ಟು, ಮನೆಯಲ್ಲಿ ಓದು ವರೋ ಹೇಗೆ ವಿಚಾರ ಮಾಡುತ್ತ ಇರಬೇಕು. ಅಂದರೆ ಓದುವ ಚಟವು ತನ್ನಿಂದತಾನೇ ಬೇರೂರುತ್ತಿದೆ.

೩) ಪುಸ್ತಕಗಳ ಅಭಾವ:—

ಕೆಲವು ಹಳ್ಳಿಗಳಲ್ಲಿ ಓದುಗರ ಸಂಖ್ಯೆ ಇದ್ದರೂ ಪುಸ್ತಕ-ವೃತ್ತಪತ್ರಗಳ ಕೊರತೆ ಇದೆ. ಓದುಗರು ದಿನಕ್ಕೊಂದು ಹೊಸ ಪುಸ್ತಕಗಳ ಅಪೇಕ್ಷೆ ಮಾಡುವರು.

ನಿವಾರಣೆ:— ತಾಲೂಕಿಗೆ ೩-೪ ಸಂಚಾರಿ ವಾಚನಾಲಯಗಳಿರಬೇಕು. ಅವುಗಳಿಂದ ಹಳ್ಳಿಯ ವಾಚನಾಲಯಗಳಿಗೆ ಕಳಕೊಡುವ ಯೋಜನೆಯಾಗಬೇಕು. ಇದರಿಂದ ಓದುಗರ ಸಂಕಟಗಳನ್ನು ನಿವಾರಿಸಿದಂತಾಗುವದು.

೪) ಕಟ್ಟಡದ ಕೊರತೆ

ವಾಚನಾಲಯಗಳಿಗೆ ಪ್ರಶಸ್ತ ಹಾಗೂ ಆರೋಗ್ಯಕರವಾದ ಪ್ರತ್ಯೇಕ ಕಟ್ಟಡಗಳಿರುವದವಶ್ಯ.

ನಿವಾರಣೆ:— ಊರವರು ಶ್ರಮದಾನದಿಂದ ಹೊಸ ಕಟ್ಟಡಗಳನ್ನು ನಿರ್ಮಿಸಿಕೊಳ್ಳುವದವಶ್ಯ. ಅದಷ್ಟು ಗ್ರಾಮಪಂಚಾಯತಿಗಳಿಗೆ ಇದರ ವ್ಯವಸ್ಥೆಯನ್ನೊಪ್ಪಿಸಿದರೆ ಒಳಿತು. ಅವು ಆಸ್ಥೆಯಿಂದ ವಾಚನಾಲಯಗಳನ್ನು ಒಳ್ಳೇ ಉತ್ತಮರೀತಿಯಿಂದ ನಡೆಯಿಸಿಕೊಂಡುಹೋಗಲು ಕಂಕಣಬದ್ಧವಾಗಿವೆ.

೫) ಡೆಡ್‌ಸ್ಟಾಕ ಸಾಮಾನುಗಳ ಕೊರತೆ:—

ವಾಚನಾಲಯಗಳನ್ನು ಒಳ್ಳೇ ಆಕರ್ಷಕ ಹಾಗೂ ಓರಣವಾಗಿಡಲು ಕಪಾಟು, ಪತ್ರಿಕೆಗಳ ಸ್ಟ್ಯಾಂಡ, ಓದುಗರಿಗೆ ಕೂಡ್ರಲು ಆಸನ ಇತ್ಯಾದಿ ಸಾಮಾನುಗಳಿರುವದವಶ್ಯ.

ನಿವಾರಣೆ:— ಊರವರಿಂದ ಉದಾರ ದೇಣಿಗೆಯಾಗಿ ಉಪಯುಕ್ತ ಸಾಮಾನುಗಳನ್ನು ಪಡೆದುಕೊಳ್ಳಲು ಸಂಚಾಲಕರು ತುಂಬಾ ಯತ್ನಿಸಬೇಕು.

೬) ಪುಸ್ತಕಗಳ ನಾಶ:—

ಓದಲು ಒಯ್ದು ಪುಸ್ತಕಗಳನ್ನು ಹರಿದು ತರುವರು; ಇಲ್ಲವೇ ಕೊಡುವದೇ ಇಲ್ಲ.

ನಿವಾರಣೆ:— ನಾಶವಾಗದಂತೆ ಎಚ್ಚರಿಕೆ ವಹಿಸಲು ತಿಳಿಯಾದ ತಿಳುವಳಿಕೆ ಕೊಡಬೇಕು. ಹಾಗೂ ಪುಸ್ತಕಗಳನ್ನು ಎಂಟು ದಿನಗಳೊಳಗಾಗಿ ತಿರುಗಿ ಕೊಡಬೇಕೆಂಬ ನಿರ್ಧಾರದ ನಿರ್ಬಂಧವನ್ನು ವಿನಯಪೂರ್ವಕವಾಗಿ ಹಾಕಬೇಕು. ಇಲ್ಲದಿದ್ದರೆ ಹಣ ಕೊಡಬೇಕಾಗುವದೆಂಬ ವಿಚಾರ ಅರುಹಬೇಕು.

೭) ಸಂಚಾಲಕರಿಗೆ ತರಬೇತಿ:—

ಅಭ್ಯಾಸಿಗಳು ಕೇಳುವ ವಿಷಯವು ಯಾವ ಪುಸ್ತಕಗಳಲ್ಲಿ ಸವಿಸ್ತಾರವಾಗಿ ದೊರೆಯುವದೆಂಬುದನ್ನು ಹೇಳಲು ಹಾಗೂ ವಾಚನಾಲಯಕ್ಕೆ ಯೋಗ್ಯ ಪುಸ್ತಕಗಳ ಆಯ್ಕೆ ಮಾಡಲು ವ್ಯವಹಾರ ಹೇಗೆ ನಡೆಯಿಸಬೇಕು, ಎಂಬುವ ತಿಳಿವಳಿಕೆ ತಿಳಿಯಲು ಸಂಚಾಲಕರಿಗೆ ತರಬೇತಿ ಕೊಡುವದುತ್ತಮ.

ನಿವಾರಣೆ:— ಸರಕಾರವು ತರಬೇತಿ ಕೇಂದ್ರಗಳನ್ನು ತೆರೆಯಬೇಕು. ಎಲ್ಲ ಸಂಚಾಲಕರಿಗೆ ತರಬೇತಿ ಸಿಗುವಂತೆ ನೋಡಿಕೊಳ್ಳಬೇಕು.

೮) ಗ್ರ್ಯಾಂಟನಲ್ಲಿ ಹೆಚ್ಚಳಬೇಕು:—

ಉತ್ತಮ ಸ್ಥಿತಿಯಲ್ಲಿದ್ದ ವಾಚನಾಲಯಗಳಿಗೆ ಈಗಿದ್ದದ್ದಕ್ಕಿಂತ ಹೆಚ್ಚಿಗೆ ಗ್ರ್ಯಾಂಟು ದೊರೆಯಬೇಕು. ಅವುಗಳಿಗೆ ಪ್ರೋತ್ಸಾಹ ಸಿಗಬೇಕು.

ನಿವಾರಣೆ:— ಸರಕಾರವು ಇಂಥ ವಾಚನಾಲಯಗಳಿಗೆ ಇನ್ನೂ ಹೆಚ್ಚು ಸಹಾಯಧನ ಕೊಡಬೇಕಲ್ಲದೆ, ಉತ್ತಮೋತ್ತಮವಾದವುಗಳಿಗೆ ಪುಸ್ತಕರೂಪದಿಂದ ಇನಾಮು ಕೊಡಬೇಕು.

೯) ಗ್ರ್ಯಾಂಟು ಬಟವಡೆ:—

ಹಳ್ಳಿಯ ವಾಚನಾಲಯಗಳ ಗ್ರ್ಯಾಂಟ ಹಣವು ಸಬ್‌ಟ್ರೇಝುರಿಯಿಂದ ವಿತರಣ ಆಗುವದು. ಬರಹೋಗುವ ಖರ್ಚು ವಿನಾಕಾರಣ ಮಾಡಬೇಕಾಗುತ್ತಿದೆ.

ನಿವಾರಣೆ:— ಮೊದಲಿದ್ದಂತೆ ತಾಲೂಕ ಮಾಸ್ತರರಿಂದ ಗ್ರ್ಯಾಂಟು ವಿತರಣೆ ಆಗಬೇಕು. ಇಲ್ಲವೇ ಸಂಬಂಧಿಸಿದ ಸಮೀಪದ ಅಧಿಕಾರಿಗಳಿಂದ ಅಲ್ಲೇ ಹೋಗಿ ಹಣ ಕೊಡುವ ಏರ್ಪಾಡು ಆಗಬೇಕು.

೧೦) ಸಂಚಾಲಕರಿಗೆ ಸಂಭಾವನೆ:—

ವಾಚನಾಲಯದ ಸಂಚಾಲಕರೆಂದು ಕೆಲಸ ಮಾಡುವವರಿಗೆ ಸಂಭಾವನೆಯ ರೂಪವಾಗಿ ಅಲ್ಪ ಹಣವನ್ನು ಕೊಡಬೇಕು. ಅಂದರೆ ಕಾರ್ಯ ಫಲಿಸುವದು.

ನಿವಾರಣೆ:— ಊರ್ಜಿತ ಸ್ಥಿತಿಯಲ್ಲಿದ್ದ ವಾಚನಾಲಯಗಳ ಕಾರ್ಯದರ್ಶಿಗಳಿಗೆ ಸಂಭಾವನೆ ಕೊಡಲು ಶಕ್ಯವಿದೆ. ಇಂತಿಷ್ಟು ಕೆಲಸ ಮಾಡಿದ ಕಾರ್ಯದರ್ಶಿಗಳಿಗೆ ಇಂತಿಷ್ಟು ಹಣ ಸಂಬಳವೆಂದು ಗೊತ್ತುಮಾಡಲು ಬರುತ್ತಿದೆ. ಇದನ್ನು ವಾಚಕರಿಗೆ ಬಿಟ್ಟುಕೊಡಲಾಗಿದೆ. ಆರ್ಥಿಕ ಅಡಚಣೆ ಇರುವಲ್ಲಿ ಸಮಾಜಸೇವೆ ಅಂತಾ ಕಾರ್ಯಸಾಗಿಸಬೇಕು. ಉತ್ತಮ ರೀತಿಯಿಂದ ಸಾಗಿಸಿದ ವಾಚನಾಲಯಗಳ ಸೆಕ್ರೆಟರಿಯವರಿಗೆ ಅಧಿಕಾರಿಗಳಿಂದ ಶಿಫಾರಸಿನ ಪತ್ರ ಸಿಗುವಂತಾಗಬೇಕು.

೧೧) **ನಾಶವಾದ ಪುಸ್ತಕಗಳು:—**

ವಾಚನಾಲಯಗಳಲ್ಲಿ ಬಹಳ ದಿನಗಳಿಂದ ಇದ್ದ ಪುಸ್ತಕ ಬಹಳ ಉಪಯೋಗ ಮಾಡಿ, ನಾಶವಾದಂಥವುಗಳನ್ನು ಕಡಿಮೆಮಾಡಬೇಕು.

ನಿವಾರಣೆ:— ಯೋಗ್ಯಕಂಡಲ್ಲಿ ಅಧಿಕಾರಿಗಳಿಂದ ಕಡಿಮೆ ಮಾಡಿಸಬಹುದು.

ರವೀಂದ್ರರು ಮತ್ತು ಶಿಕ್ಷಣ

ಕುಮಾರಿ: **ವೇಣುಬಾಯಿ ಅ. ಶೀಲಭದ್ರ,** ಶಿ. ವಿ. ೨ನೆಯ ವರ್ಷ "ಬ"
ಕ. ಹೆ. ಮ. ಸ. ಟ್ರೇ. ಕಾಲೇಜ, ಧಾರವಾಡ.

ರವೀಂದ್ರರು ಭಾರತೀಯರಾದ ನಮಗೆಲ್ಲ ಚಿರಪರಿಚಿತರು. ಇಂಥ ಮಹಾ ವ್ಯಕ್ತಿಯ ಪುಣ್ಯತಿಥಿಯ ದಿನಾಚರಣೆಯ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ನಾಲ್ಕು ಮಾತುಗಳನ್ನಾಡುವ ಸುಯೋಗ ದೊರೆತದ್ದು ನನ್ನ ಪುಣ್ಯವೇ ಸರಿ.

ನಾನು ಈ ದಿವಸ ಆಯ್ದುಕೊಂಡ ವಿಷಯ "ರವೀಂದ್ರರು ಮತ್ತು ಶಿಕ್ಷಣ" ಈ ವಿಷಯವು ಸಾಕಷ್ಟು ವಿಶಾಲವಾಗಿದೆ. ಅದರಲ್ಲಿ ಒಬ್ಬೊಬ್ಬರ ವಿಚಾರ ಒಂದೊಂದು ತೆರನಾಗಿರಬಹುದು. ಆದರೆ ನನಗೆ ತಿಳಿದ ಮಟ್ಟಿಗೆ ತಿಳಿಸಬಯಸುವೆನು.

ರವೀಂದ್ರರು ಚಿಕ್ಕವರಿದ್ದಾಗ ಅವರ ಒಡನಾಡಿಗಳು ಇಬ್ಬರಿದ್ದರು. ರವೀಂದ್ರರಿಗಿಂತ ದೊಡ್ಡವನಾದವ ಅವರ ಅಣ್ಣ ಸೋಮೇಂದ್ರ. ಇನ್ನೊಬ್ಬನ ಅಕ್ಕನ ಮಗನಾದ ಸತ್ಯ. ಈ ಮೂವರೂ ಕೂಡಿಯೇ ಆಡುವದು, ಕುಣಿಯುವದು, ಜಿಗಿಯುವದು ಮಾಡುತ್ತಿದ್ದರು. ಇವರಿಗೆ ತಂದೆ-ತಾಯಿಗಳು ಆಟದ ಪೆಚ್ಚಿನ ಒಡವೆಗಳನ್ನು ಕೊಡುತ್ತಿರಲಿಲ್ಲ. ಯಾಕೆಂದರೆ ದೇವೇಂದ್ರರ ವಿಚಾರ ಮಕ್ಕಳು ತಮ್ಮ ತಮ್ಮ ಆಟಿಗೆಗಳನ್ನು ತಾವೇ ಮಾಡಿಕೊಳ್ಳಬೇಕು. ಅದರಿಂದ ಮಕ್ಕಳ ವಿಚಾರ ಶಕ್ತಿ ಬೆಳೆಯುವದು. ನಾವಾಗಿಯೇ ಅವರ ಮುಂದೆ ನಾನಾ ತರದ ಒಡವೆಗಳನ್ನು ಒಟ್ಟಿದರೆ ಅವರ ಬುದ್ಧಿ ಬೆಳೆಯದು. ಬುದ್ಧಿ ಬೆಳೆಯಲು ಅವಕಾಶಕೊಡದಿದ್ದರೆ ಅವರಿಗೆ ನಿಜವಾದ ಆನಂದವೆಂಬುದು ಗೊತ್ತಾಗದು. ಆಟದ ಆನಂದವೆಂದರೆ ಮಗು ತನ್ನ ಕೈಯಿಂದ ತಾನೇ ಯಾವದೊಂದು ಆಟದ ಒಡವೆಯನ್ನು ಮಾಡುವದು ಅದರಲ್ಲಿಯೇ ನಿಜವಾದ ಆನಂದವಿದೆಯೆಂದು ಕಂಡುಕೊಳ್ಳುವದೇ ಆನಂದ ಎಂದು ಅವರು ಆಗಾಗ ಹೇಳುತ್ತಿದ್ದರು. ಇದೇ ಮುಂದೆ ರವೀಂದ್ರರ ವಿಚಾರ ಶಕ್ತಿಗೆ ಮೂಲಾಧಾರವಾಯಿತೆನ್ನಬಹುದು- ಅದರಂತೆಯೇ ಈಗಲಾದರೂ ನಮ್ಮ ಶಾಲೆಗಳಲ್ಲಿ ಹೊಸ ಶಿಕ್ಷಣ ಯೋಜನೆಯಂತೆ ಮಕ್ಕಳು ವಸ್ತುಗಳನ್ನು ತಾವೇ ತಯಾರಿಸಬೇಕು. ಅದರಲ್ಲಿಯೇ ನಿಜವಾದ ಆನಂದ ದೊರೆಯುವದೆಂದು ಮನಗಂಡು ಈ ದಿನ ಪ್ರತಿಯೊಂದು ಶಾಲೆಯಲ್ಲಿಯೂ ಚಟುವಟಿಕೆಯ ಮುಖಾಂತರವೇ ಪಾಠವನ್ನು ಪ್ರಾರಂಭಿಸುವರು. ಇದರಿಂದ ಮಕ್ಕಳು ತಮ್ಮ ಕೃತಿಯಲ್ಲಿಯೇ ನಿಜವಾದ ಆನಂದವನ್ನು ಪಡೆದು ಮುಂದಿನ ವಿಷಯಕ್ಕೆ ಆತುರರಾಗುವರೆಂಬ ವಿಚಾರವನ್ನೇ ನಮ್ಮ ಶಿಕ್ಷಣ ಯೋಜನೆಯು ಅಡಿಗಲ್ಲನ್ನಾಗಿ ಮಾಡಿಕೊಂಡಂತೆ ತೋರುವದು.

ರವೀಂದ್ರರೂ ಚಿಕ್ಕವರಿದ್ದಾಗ ತಮ್ಮ ಸಂಗಡಿಗರಾದ ಸೋಮೇಂದ್ರ, ಸತ್ಯ ಇವರನ್ನೊಳಗೊಂಡು ಅಜ್ಜನ ಒಂದು ಹಳೆಯ ಪೇಟಿಯಲ್ಲಿ ಕುಳಿತು ಬಾಗಿಲನ್ನು

ಹಾಕಿಕೊಂಡು ಬೇರೆ ಪ್ರದೇಶಕ್ಕೆ ಹೋದಂತೆ ಭಾಸಮಾಡಿಕೊಳ್ಳುತ್ತಿದ್ದರು. ಅಲ್ಲಿ ಕುಳಿತಾಗ ಈಗ ನದಿ ಬಂದಿತು, ಈಗ ಕಾಡು ಬಂದಿತು, ಕಾಡಿನಲ್ಲಿ ಹುಲಿ ಬಂದಿತೆಂದು ಹೆದರಿದಂತೆ ಮಾಡುವದು, ಇತ್ಯಾಗಿ ಕಲ್ಪನೆಗಳನ್ನು ಮಾಡಿಕೊಂಡು ತಮ್ಮ ವಿಚಾರಗಳನ್ನು ದೂರದೂರದ ವರೆಗೆ ಹರಿಬಿಡುತ್ತಿದ್ದರು. ಮತ್ತೊಮ್ಮೆ ಅಂಗದಳಲ್ಲಿಯ ಮಣ್ಣನ್ನೆಲ್ಲ ಒಟ್ಟುಗೂಡಿಸಿ ತೋಟವನ್ನು ಮಾಡುವೆನೆಂದುಕೊಂಡು ನೆಲವನ್ನು ಅಗಿದು ಹದಗೊಳಿಸಿ ಬೀಜ ಬಿತ್ತುತ್ತಿದ್ದರು. ಅದಕ್ಕೆ ಪ್ರತಿ ದಿನ ತಪ್ಪದೆ ನೀರನ್ನು ಹಾಕುವರು. ಬೀಜಗಳು ಮೊಳೆತು ಚಿಗುರಿದ ಹಾಗೆಲ್ಲ ರವೀಂದ್ರರಿಗೆ ಬಹಳ ಆನಂದ. ಅದೇ ಪ್ರಕಾರ ಈ ದಿನವಾದರೂ ನಾವು ಸಾಲೆಗಳಲ್ಲಿ ಕೈತೋಟಗಳನ್ನು ಮಾಡಿ ಅವರ ಸವಿಯನ್ನು ಸವಿಯಲು ಅನುಕೂಲವಾಗುವದೆಂದು ರವೀಂದ್ರರ ವಿಚಾರವನ್ನೇ ತರಲು ಪ್ರಯತ್ನಿಸುತ್ತಿರುವರೇನೋ ಎಂದು ನನ್ನ ಮನದಲ್ಲಿ ಮೂಡಿ ಆನಂದಪಡಿಸುತ್ತಿದೆ.

ಅವರೇ ಒಂದೆಡೆ ತಮ್ಮ ಬಾಲ್ಯದ ನೆನೆಹುಗಳ ಬರೆದಿಟ್ಟ ಸಂಗ್ರಹವನ್ನು ಓದುವಾಗ ತಮ್ಮ ಅನುಭವವನ್ನೇ ಅಲ್ಲಿ ಸ್ಪಷ್ಟವಾಗಿ ಮೂಡಿಸಿರುವೆನೆಂದು ಹೇಳಿರುವರು. ಅಂದರೆ ಅವರ ಮನೆಯಲ್ಲಿ ಹೊರಗೆ ಹೋಗಲು ಸ್ವಾತಂತ್ರ್ಯವಿದ್ದಿಲ್ಲ. ರವೀಂದ್ರರು ಮಧ್ಯಾಹ್ನದ ವೇಳೆಯಲ್ಲಿ ಎಲ್ಲರೂ ವಿಶ್ರಮಿಸಿಕೊಂಡಾಗ ಎಲ್ಲರ ಕಣ್ಣು ತಪ್ಪಿಸಿ ಕೊನೆಯ ಅಂತಸ್ತನ್ನು ಏರುವರು. ಅಲ್ಲಿ ನಿಂತುಕೊಂಡು ನಿಸರ್ಗದ ತುಂಬೆಲ್ಲ ತಮ್ಮ ದೃಷ್ಟಿಯನ್ನು ಹರಿಬಿಡುವರು. ಆಗ ಈ ಜಗವೆಂಬುದು ಒಂದು ಭರಣಿ, ಮುಗಿಲು ಇದಕ್ಕೆ ಮುಚ್ಚಳದಂತಿದೆ. ಇನ್ನೂ ಮೇಲೆ ಹೋದರೆ ಮುಗಿಲು ನಮ್ಮ ತಲೆಗೆ ಬಡೆಯ ಬಹುದು. ಎನ್ನುತ್ತಿದ್ದರಂತೆ. ಆಗಲೇ ತಮ್ಮ ಮನೆಯ ಸುತ್ತೆಲ್ಲಬೆಳೆದ ಮುಗಿಲು ಮುಟ್ಟುವಂತಹ ಗಿಡದಲ್ಲಿ ಕುಳಿತು ಕಾವ ಕಾವ ಕಾವ ಎಂದು ಹಾಡುವ ಕಾಗೆಯ ಧ್ವನಿ ಕೂಡ ಆಶ್ಚರ್ಯವನ್ನು ಮಾಡುತ್ತಿತ್ತಂತೆ. ಅದು ಹೇಗೆ ಎಂದು ಪರೀಕ್ಷಿಸಿ ತಿಳಿದುಕೊಳ್ಳಬೇಕೆಂದರೆ ಮನೆಯಿಂದ ಹೊರಗೆ ಹೋಗಲು ನಿರ್ಬಂಧ. ಇದರಿಂದ ಅವರ ಅನುಭವಕ್ಕೆ ಬಂದ ಮಾತೆಂದರೆ ಮಕ್ಕಳಿಗೆ ಸ್ವಾತಂತ್ರ್ಯತೆ ಬೇಕು. ಎಂದು ಬಯಸುವದೇ ನನ್ನ ಧ್ಯೇಯವೆನ್ನುತ್ತಿದ್ದರು.

ಈ ರೀತಿಯಾದ ಮನೆಯ ವಾತಾವರಣವನ್ನು ಬಿಟ್ಟು ಸಾಲೆಗೆ ಸೇರಿದಾಗ ಅಲ್ಲಿಯ ವಾತಾವರಣವಾದರೂ ಇವರಿಗೆ ಬಹಳೇ ಜಿಗುಪ್ಸೆಯನ್ನು ಉಂಟುಮಾಡಿತು ಯಾಕೆಂದರೆ ಸಾಲೆಯಲ್ಲಿ ಶಿಕ್ಷಕರು ಹೇಳಿದಂತೆಯೇ ಕೇ ಬೇಕು. ಇಲ್ಲವಾದರೆ ಬಂದದ್ದು ಬೆತ್ತದ ಏಟು. ಇದನ್ನೆ ಕಂಡು ರವೀಂದ್ರರು ಇದು ಸಾಕ್ಷಾತ್ ಜೈಲುವಾಸವೇ ಸರಿ ಎಂದರು. ಈ ತರದ ಜೀವನಕ್ಕಿಂತಲೂ ಬೇಗನೆ ಬೇಸ ತ್ತರು. ಅದಕ್ಕಾಗಿಯೇ ರವೀಂದ್ರರು ಮಕ್ಕಳಿಗೂ ಶಿಕ್ಷಣ ದಲ್ಲಿ ಭಾಗವಹಿಸಿ ವಿಚಾರಿಸಲು ಪ್ರೋತ್ಸಾಹ ಕೊಟ್ಟರೆ ಅವರು ನಮಗಿಂತಲೂ ಒಂದು ಹೆಜ್ಜೆ ಮುಂದೆಯೇ ಇರುವರೆಂಬುದನ್ನು ತಿಳಿದುಕೊಂಡಿದ್ದರು. ಯಾಕೆಂದರೆ ತಮಗೆ ಮನೆಯಿಂದ ಹೊರಗೆ ಹೋಗಲು ಸ್ವತಂತ್ರತೆ ಇಲ್ಲದೆ ಎಷ್ಟೋ ಸುಸಂಧಿಗಳನ್ನು ಕಳೆದುಕೊಂಡೆನೆಂದು ಹೇಳುತ್ತಿದ್ದರು. ಕಾರಣ ಅಂಥ ವಿಚಾರಗಳಲ್ಲಿ ಮಕ್ಕಳಿಗೆ ಪ್ರೋತ್ಸಾಹ ಕೊಟ್ಟು ಇನ್ನೂ ಹೆಚ್ಚಿನ ನೀರು ಗೊಬ್ಬರಗಳೆಂಬ ಅನುಕೂಲತೆಗಳನ್ನು ಮಾಡಿಕೊಟ್ಟರೆ ಮಕ್ಕಳು ಮುಂದಾದ ಮುಂದಾಳುಗಳಾಗಬಲ್ಲರು ಎಂಬುವದಕ್ಕೆ ಅವರು ಸ್ಥಾಪಿಸಿದ "ಶಾಂತಿ ನಿಕೇತನ" ವೇ ನಿದರ್ಶನವೆನ್ನಬಹುದು.

ಚಿಕ್ಕಂದಿನಲ್ಲಿ ತಾವು ಪ್ರಾಥಮಿಕ ಸಾಲೆಗಳಲ್ಲಿ ಪಟ್ಟ ಕಷ್ಟವನ್ನು ಅವರು ಮರೆತಿರಲಿಲ್ಲ, "ನಮ್ಮಲ್ಲಿ ಹುದುಗಿರುವ ಕ್ರಿಯಾಶಕ್ತಿ" ನಾವು ಪಡೆಯುವ ಜ್ಞಾನ, ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿಯ ಐಕ್ಯತೆ, ಸಮರಸತೆಗಳನ್ನು ತೋರಿಸುವದೇ ಶಿಕ್ಷಣದ ಸಂದೇಶವಾಗಿದೆ. ಎಂದು ತಿಳಿದ ರವೀಂದ್ರರು ಮಕ್ಕಳಿಗೆ ಸಾಲೆಯೇ ಮನೆಯಾಗಬೇಕು. ಅಲ್ಲಿ ಅವರು ಆನಂದದಿಂದ ಕಲಿಯಬೇಕು; ಕಲಿಯುತ್ತ ಆನಂದಪಡಬೇಕು. ಕೇವಲ ವಿಚಾರಗಳನ್ನು ಕಲಿಯಬಾರದು, ಹೊಸತನ್ನು ಕಂಡು ಬೆಳೆಸಬೇಕು. ಎಂದು ಅನ್ನುವಂತೆ ಶಾಂತಿನಿಕೇತನದಲ್ಲಿ ಮಕ್ಕಳಿಗಾಗಿ ಒಂದು ಸಾಲೆಯನ್ನು ತೆರೆದರು. ಈ ಸಾಲೆಯು ಋಷಿಗಳ ತಪೋವನವಾಗಬೇಕೆಂದು ಅವರ ಹಿರಿಯಾಸೆಯಾಗಿತ್ತು. ಅಂದರೆ ನಮ್ಮ ಪ್ರಾಚೀನ ತಪೋವನಗಳು ಸ್ವಾಭಾವಿಕ ವಿದ್ಯಾನಿಲಯಗಳಾಗಿದ್ದವು. ಜನರ ದೈನಂದಿನ ಜೀವನಕ್ಕೆ ಹೊರತಾಗಿದ್ದಿಲ್ಲ. ಅವರು ಸ್ವಂತ ಶ್ರಮದಿಂದಲೇ ಜೀವಿಸುತ್ತಿದ್ದರು. ಅದರಲ್ಲಿಯೇ ನಿಜಾನಂದವನ್ನು ಕಂಡುಕೊಳ್ಳುತ್ತಿದ್ದರು. ಆಧ್ಯಾತ್ಮಿಕ ಶಿಕ್ಷಣ

ವೆಂದರೆ ಆಧ್ಯಾತ್ಮಿಕ ಜೀವನದ ಒಂದು ಅಂಗವಾಗಿತ್ತು. ನಿಸರ್ಗದೊಂದಿಗೆ ಒಂದಾಗಿ ಗಿಡಮರಗಳನ್ನು ಬೆಳೆಸಿ, ಪಶು ಪ್ರಾಣಿಗಳನ್ನು ಸಾಕಿ ಅವುಗಳೊಡನೆ ಸ್ವಾಭಾವಿಕ ಸಂಬಂಧ ಇಟ್ಟುಕೊಂಡರೇ ಆ ಆಧ್ಯಾತ್ಮಿಕ ಆನಂದವನ್ನು ಪಡೆಯಬಹುದು. ಇದೂ ಒಂದು ಬಗೆಯ ಧಾರ್ಮಿಕ ಶಿಕ್ಷಣವೆಂದು ಅವರು ಮೊದಲೇ ತಿಳಿದಿದ್ದರು. ಅದಕ್ಕಾಗಿಯೇ ಶಾಂತಿನಿಕೇತನದಲ್ಲಿ ಮಕ್ಕಳಿಗೆ ಸಂಪೂರ್ಣ ಸ್ವಾತಂತ್ರ್ಯತೆಯನ್ನು ಕೊಟ್ಟು ಸ್ವಾವಲಂಬನದ ಮಹತ್ವವನ್ನು ತಿಳಿಸಿ ಪ್ರತಿಯೊಬ್ಬರೂ ಸ್ವಾವಲಂಬಿಗಳಾಗುವಂತೆ ಕೆಲವೊಂದು ಅನುಕೂಲತೆಗಳನ್ನು ಮಾಡಿಕೊಟ್ಟಿದ್ದರು. ಕಾರಣ ಅಲ್ಲಿ ಮಕ್ಕಳು ಹಿರಿಯರೊಡನೆ ಆಡುವರು. ನಸುವರು. ನಲಿಯುವರು. ಅಲ್ಲದೆ ಕಾವ್ಯ ಸಂಗೀತಗಳ ಮಧುರ ಮನೋಹರ ಧ್ವನಿಯು ಅಲ್ಲಿ ಯಾವಾಗಲೂ ಗುಂಗೀಹುಳದಂತೆ ಝೇಂಕರಿಸುತ್ತಲಿರುವದು. ಕಾಲಕ್ಕನುಸರಿಸಿ ಬೇರೆ ಬೇರೆ ಉತ್ಸವಗಳು ಅಲ್ಲಿ ನಡೆಯುವವು. ಶಿಕ್ಷಣ ಅಥವಾ ಕಲಿಸುವದೆಂದರೆ ಮಕ್ಕಳ ಒಲವು ನೋಡಿ ಅವರಿಗೆ ತಕ್ಕ ದಾರಿ ಮಾಡಿಕೊಡುವದು. ಶಾಂತಿನಿಕೇತನದಲ್ಲಿ ಗಿಡದ ನೆರಳಿನಲ್ಲಿಯೇ ವರ್ಗದ ಅಭ್ಯಾಸ ಸಾಗುವದು. ಬೆದರಿಕೆ ಬೆತ್ತಗಳ ಸುಳಿವಿಲ್ಲ. ಇಂಥದನ್ನು ಮಾಡಬೇಡ ಅನ್ನುವ ಮಾತೇ ಕೇಳಿಸುವದಿಲ್ಲ. ಇಲ್ಲಿ ಮಕ್ಕಳೇ ತಮ್ಮ ವಿಷಯವನ್ನು ಮಾಡಿಕೊಳ್ಳುವರು. ಯಾರಾದರೊಬ್ಬರು ಆ ನಿಯಮವನ್ನು ಮುರಿದು ನಡೆದರೆ ಹುಡುಗರೇ ಅವರ ವಿಚಾರ ಮಾಡುವರು. ಈ ಪ್ರಕಾರ ಮಕ್ಕಳು ಚಿಕ್ಕಂದಿನಿಂದ ತಮ್ಮ ಜೀವನವನ್ನು ತಾವೇ ರೂಪಿಸಿಕೊಂಡು ಆನಂದಪಡಬೇಕು. ಅದರಂತೆಯೇ ವಿದ್ಯಾಸಂಸ್ಥೆಗಳಾದರೂ ಕೇವಲ ಮಾಹಿತಿಯನ್ನು ಕೂಡಹಾಕುವ ಯಂತ್ರಗಳಾಗಬಾರದು. ವಿಚಾರಗಳ ಮುಖಾಂತರ ಮಕ್ಕಳು ತಮ್ಮ ಬೌದ್ಧಿಕ ಬೆಳವಣಿಗೆಯ ಪರಿಪಕ್ವ ವಿಚಾರಗಳನ್ನು ಇತರರಿಗೆ ನೀಡುವಂತಾಗಬೇಕು. ಇದರಂತೆ ಇತರರ ಬೌದ್ಧಿಕ ಸಂಪತ್ತನ್ನು ತಾವು ಸೂರೆಗೊಳ್ಳಬೇಕು. ಈ ರೀತಿ ಪರಸ್ಪರ ವಿಚಾರವಿನಿಮಯಕ್ಕೆ ಶಿಕ್ಷಣದಲ್ಲಿ ಪ್ರಮುಖ ಸ್ಥಾನವಿರಬೇಕು. ಅನ್ನುವ ರವೀಂದ್ರರ ಉದಾತ್ತ ವಿಚಾರಗಳೇ ಇಂದಿನ ನಮ್ಮ ಶಿಕ್ಷಣ ಯೋಜನೆಗಳಲ್ಲಿ ಕಾಣುತ್ತಲಿವೆ. ಯಾಕೆಂದರೆ ಸರಕಾರದವರು ನಾಡ ಸಾಲೆಗಳು ಶಾಂತಿನಿಕೇತನಗಳಂತಿರಬೇಕು. ಅಲ್ಲಿ ಶಿಕ್ಷಣ ಪಡೆಯುವ ಮಕ್ಕಳು ತಮಗೆ ಅಚ್ಚುಮೆಚ್ಚಿನ ವಿಷಯವನ್ನೇ ಮೆಚ್ಚನ್ನಾಗಿ ಮಾಡಿಕೊಂಡು ಅದರ ಮುಖಾಂತರವೇ ಶಿಕ್ಷಣ ದೊರೆಯಬೇಕೆಂದೂ, ರವೀಂದ್ರರ ಅನುಭವದಂತೆ ಸರ್ವರಿಗೂ ಸ್ವಾತಂತ್ರ್ಯವಿರಬೇಕೆಂದೂ ಮಕ್ಕಳಿಗೆ ಮೊದಲನೆಯ ಸ್ಥಾನವನ್ನು ಕೊಟ್ಟು ಬೆತ್ತದ ಬೆದರಿಕೆಯನ್ನು ದೂರ ಮಾಡಿದರಲ್ಲದೆ ಸಾಲೆಯ ಆಡಳಿತೆ, ವರ್ಗದ ಆಡಳಿತೆ, ಎಲ್ಲವೂ ಮಂತ್ರಿಮಂಡಲದ ಮುಖಾಂತರವೇ ಸಾಗಬೇಕೆಂದು ಪ್ರತಿಯೊಂದು ವರ್ಗದಲ್ಲಿಯೂ ಮಕ್ಕಳ ಇಚ್ಛೆಯಂತೆ ಮಂತ್ರಿಗಳನ್ನು ಮಾಡಿ ಹೊಣೆ ಹೊರಿಸಿ ಅವರು ತಪ್ಪಿದಲ್ಲಿ ಮಾತ್ರ ಶಿಕ್ಷಕನು ಮಾರ್ಗದರ್ಶನಮಾಡಬೇಕೆಂದು ಶಿಕ್ಷಕನಿಗೆ ಕೊನೆಯ ಸ್ಥಾನವನ್ನು ಕೊಟ್ಟಿರುವರು. ಇದೆಲ್ಲವನ್ನು ನೋಡುವಾಗ ಈ ಬಗೆಯಾದ ಶಿಕ್ಷಣ ಧೋರಣೆ ಇಂದು ಹೊಸದಲ್ಲ. ರವೀಂದ್ರರ ಕಾಲದಿಂದಲೂ ನಡೆದುಬಂದಿದೆ. ಅನುಭವಿಗಳಾದ ರವೀಂದ್ರರು ಸಾಲೆಯನ್ನು ತಪೋವನವನ್ನಾಗಿ ಮಾಡಬೇಕೆಂದು ಏಕೆ ಅಪೇಕ್ಷಿಸಿದರು? ಅನ್ನುವದನ್ನು ನೋಡುವಾಗ ಮಕ್ಕಳು ಮನೆಯ ವೇಳೆಗಿಂತಲೂ ದಿನವೆಲ್ಲ ಸಾಲೆಯಲ್ಲಿಯೇ ಹೆಚ್ಚು ವೇಳೆ ಕಳೆಯುವರು. ಕಾರಣ ಸಾಲೆಗಳಲ್ಲಿ ಮಗುವಿನ ಬುದ್ಧಿ ವಿಕಾಸದ ಕೆಲವು ಸಂಗತಿಗಳಿಗೆ ನಿಸರ್ಗವು ಎಷ್ಟೋ ಆಧಾರವಾಗಿದೆ. ಎನ್ನುವದನ್ನು ಅವರು ಅರಿತಿದ್ದರು. ಅದರಂತೆಯೇ ಈಗ ನಮ್ಮ ಸಾಲೆಗಳು ಮಾರ್ಪಡಬೇಕು. ಅಂದರೆ ಭಾವೀ ಬೆಳಕು ಕಾಣುವದರಲ್ಲಿ ಸಂದೇಹವಿಲ್ಲವೆಂದು ನನ್ನ ಪೂರ್ಣ ನಂಬಿಕೆ ಇದೆ.

ಶಿಕ್ಷಣವೆಂದರೆ ಕೇವಲ ಕಲಿಸುವಿಕೆ ಮಾತ್ರವಲ್ಲ. ಜನಸೇವೆಯಲ್ಲಿಯೂ ಅದು ಕಾಣಬೇಕೆಂದು ಅವರ ಮತವಾಗಿತ್ತು. ಅಂದರೆ ಹಳ್ಳಿಯ ಜನರ ಬಗೆಗೆ ರವೀಂದ್ರರಿಗೆ ಯಾವಾಗಲೂ ಕನಿಕರ. ಎಲ್ಲರೂ ತಮ್ಮ ಸ್ವಾಭಿಮಾನವನ್ನು ಬೆಳೆಯಿಸಿಕೊಂಡು ಅವರಾದರೂ ಸ್ವಾವಲಂಬಿಗಳಾಗಿರಬೇಕು. ಹಳ್ಳಿಗಳಿಂದೊಡಗೂಡಿದ ನಮ್ಮ ದೇಶಕ್ಕೆ ಶಿಕ್ಷಣದ ಅವಶ್ಯಕತೆ ಬಹಳ ಇದೆ. ಹೊಸ ಪೀಳಿಗೆಗಾದರೂ ಇದೇ ತೆರನಾದ ಸ್ವಾವಲಂಬನ ಶಿಕ್ಷಣ ದೊರೆಯಬೇಕೆಂದು ಅವರ ಮತ. ಅದಕ್ಕಾಗಿ ಅವರು ಓರಿಸಾ ಪ್ರಾಂತದಲ್ಲಿ ತಮ್ಮ ಹೊಲ ಮನೆಗಳಿದ್ದ ಶೀಲಾಯ್ದಾ ಎಂಬ ಹಳ್ಳಿಗೆ ಹೋದಾಗ ಮನೆ ಮನೆಗಳಿಗೆ ಹೋಗಿ ಅಜ್ಞಾನ ಅಂಧಃಕಾರನೆಂಬ ಕತ್ತಲೆಯನ್ನು ಕಳೆದೊಗೆಯಲು ತಿಳಿಸಿ ಹೇಳುತ್ತಿದ್ದರು. ಅದರಂತೆಯೇ ಅದು ಇನ್ನೂ ಬೆಳೆಯಲೆಂದು ಇಂದಿನ ನಮ್ಮ ಸರಕಾರದವರು ಸಮಾಜ ಶಿಕ್ಷಣ ಕೇಂದ್ರಗಳನ್ನು, ಸಮಾಜ ವಿಕಾಸ ಯೋಜನೆಗಳನ್ನು

ಕೈಕೊಂಡಿದ್ದಲ್ಲದೆ ಶಿಶುವಿಹಾರ, ಬಾಲವಾಡಿ ಮುಂತಾದವನ್ನು ಸ್ಥಾಪಿಸಿ ಮಕ್ಕಳು ಚಿಕ್ಕಂದಿನಿಂದಲೂ ಒಳ್ಳೆಯ ವಾತಾವರಣದಲ್ಲಿ ಬೆಳೆದು ಹೆಚ್ಚಿನ ಶಿಕ್ಷಣ ಪಡೆಯಲೆಂದು ಅನುವು ಮಾಡಿರುವರು. ಇದಕ್ಕಾಗಿ ಅನೇಕ ಜನ ಸ್ವಯಂಸೇವಕ ಸೇವಿಕೆಯರು ಮುಂದೆ ಬಂದು ಊರು, ಕೇರಿ, ಕೆರೆ-ಭಾವಿ, ಬೀದಿ-ರಸ್ತೆ ಮುಂತಾದವುಗಳ ಸ್ವಚ್ಛತೆಯ ಬಗೆಗೂ, ಉದ್ಯೋಗಗಳ ಏಳ್ಗೆಯ ಉಪಾಯಗಳ ಬಗೆಗೂ ತಿಳಿಸಿ ಹೇಳುತ್ತಲಿರುವರು. ಏನಾದರೂ ಕಷ್ಟಗಳು ಬಂದಾಗ ನನ್ನ ಕರ್ಮವೆಂದು ಕೈಕಟ್ಟಿಕೊಂಡು ಕೂತು ದೇವರ ಮೇಲೆ ಭಾರವನ್ನು ಹಾಕಿಬಿಡಬಾರದು. ಅದಕ್ಕಾಗಿ ಮಾನವನ ಪ್ರಯತ್ನವೂ ಅಗತ್ಯವಿದೆ ಎಂಬುದನ್ನು ತಿಳಿಸಿ ಹೇಳುತ್ತಲಿರುವರು.

ಇನ್ನೂ ರವೀಂದ್ರರತ್ತ ಕಣ್ಣರಳಿಸಿ ನೋಡುವಾಗ ಇವರು ಕೇವಲ ಪ್ರಾಥಮಿಕ ಶಿಕ್ಷಣಕ್ಕಷ್ಟೇ ಮಹತ್ವವನ್ನು ಕೊಡಲಿಲ್ಲ. ಮುಂದೆ ದೊಡ್ಡವರಾದ ನಂತರ ವಿಶ್ವವಿದ್ಯಾಲಯಗಳಲ್ಲಿ ಇಂಗ್ಲೀಷರು ನಮಗೊದಗಿಸುತ್ತಿದ್ದ ಶಿಕ್ಷಣ ಪೂರ್ವ-ಪಶ್ಚಿಮ ಸಂಸ್ಕೃತಿಗಳ ಸುಂದರ ಸಂಗಮಕ್ಕೆ ಅವಕಾಶ ಕೊಡಲಿಲ್ಲ. ಪರಸ್ಪರ ತಿಳುವಳಿಕೆಗೂ ಆಸ್ಪದ ಮಾಡಲಿಲ್ಲ. ಕೇವಲ ತಮ್ಮ ಹೊರೆಯನ್ನು ಕಡಿಮೆ ಮಾಡಲು ಒಂದು ಕೃತ್ರಿಮ ಯೋಜನೆಯ ರೂಪದಲ್ಲಿ ಮೈತಾಳಿ ಇಂದಿನ ವಿದ್ಯಾರ್ಥಿಗಳಿಗೆ ಬುದ್ಧಿಯ ಚಾಕಚಕ್ಯತೆಯಿಲ್ಲದೆ ಹೆಚ್ಚಿನ ಗುಣಗಳನ್ನು ಪಡೆಯುವದೇ ಗುರಿಯಾಗಿ ಬಿಟ್ಟಿದೆ. ಪರೀಕ್ಷೆ ಪಾಸಾಗಿ ವಿದ್ಯಾರ್ಥಿಗಳು ಗುಮಾಸ್ತರು, ವಕೀಲರು, ಪೋಲಿಸ ಅಧಿಕಾರಿಗಳು ಮುಂತಾದ ನಿರ್ಜೀವ ಮಣ್ಣಿನ ಗೊಂಬೆಗಳಾಗಿ ಹೊರಬೀಳುತ್ತಲಿರುವರು. ಶಿಕ್ಷಣ ಸಂಸ್ಥೆಗಳೆಂದರೆ ಜ್ಞಾನದ ಭಿಕ್ಷಾಪಾತ್ರೆಗಳಾಗಿವೆ. ಕಾರಣ ಇಂದಿನ ನಮ್ಮ ಶಿಕ್ಷಣ ಪದ್ಧತಿಯು "ಕಣ್ಣನ್ನು ಕೊಟ್ಟು ಕನ್ನಡಕವನ್ನು ಕೊಂಡಂತಾಯಿತಲ್ಲ" ಇದು ನಮಗೆ ಬೇಡ. ಒಂದಾನೊಂದು ಕಾಲದಲ್ಲಿ ಸರ್ವದೃಷ್ಟಿಯಿಂದಲೂ ಊರ್ಜಿತಾವಸ್ಥೆ ಪಡೆದ ಜಗದ್ವಿಖ್ಯಾತವಾದ ನಾಲಂದಾ, ತಕ್ಷಶಿಲಾ ವಿಶ್ವವಿದ್ಯಾಲಯಗಳ ಶಿಕ್ಷಣ ಸಂಸ್ಕೃತಿಯು ಎಲ್ಲಿ ಮಾಯವಾಯಿತು. ನಮಗೀಗ ಅದೇ ಸಂಸ್ಕೃತಿಯು ಪುನಃ ತಲೆ ಎತ್ತಬೇಕೆನ್ನುವ ಉದ್ದೇಶವು ಅವರಲ್ಲಿತ್ತೆಂದೇ ನಮ್ಮ ತಾಯಿ ನುಡಿಗೆ ಹೆಚ್ಚು ಬೆಲೆಯನ್ನು ನೀಡಿದರು. ಅಲ್ಲದೆ ವಿಶ್ವವನ್ನು ಅದರಲ್ಲಿಯ ಅನೇಕ ಪ್ರಮುಖ ರಾಷ್ಟ್ರಗಳ ಸಂಸ್ಕೃತಿಗಳನ್ನು ನಿರೀಕ್ಷಿಸಿ ತಿಳಿದುಕೊಂಡರು. ಇ[illegible] ಯಾವವೂ ಅವರಿಗೆ ಹಿಡಿಸಲಿಲ್ಲ. ಸಾಕ್ಷಾತ್ ಸರ[illegible]ತಿಯು ನಮ್ಮ ಭಾರತವಲ್ಲಿಯೇ ಇದ್ದಾಳೆ. ಇದೇ ಜ[illegible]ತ್ತಿನ ಜ್ಞಾನ ಸಂಸ್ಥೆ ಕಾರಣ ವಿಶ್ವವೆಂದರೆ ಜಗತ್ತು ಭಾರತಿ ಎಂದರೆ ಜ್ಞಾನ-ದೇವತೆ ಎಂದೂ ಜಗತ್ತಿನ ಎ[illegible] ಜನರೂ ವಿದ್ಯಾರ್ಜನೆಯನ್ನು ಮಾಡಲು ನಮ್ಮಲ್ಲಿಯೆ[illegible] ಬರಬೇಕು. ಭಾರತವು ತನ್ನ ಗುರುತ್ವವನ್ನು ಮರೆಯ[illegible] ಬಾರದು. ಎಂಬ ವಿಚಾರದಿಂದ "ವಿಶ್ವಭಾರತಿ" ಎಂ[illegible] ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು. ಇದಕ್ಕಾಗಿ ಜಗ[illegible] ಮೂಲೆ ಮೂಲೆಗಳಿಂದ ವಿದ್ವಾಂಸರನ್ನು ಕರೆಯಿ[illegible] ತಮ್ಮಲ್ಲಿಟ್ಟುಕೊಂಡರು.

ಲಾರ್ಡ ಕರ್ಝನ್ನನ ಕಾಲಕ್ಕೆ ಇಬ್ಭಾಗವಾ[illegible] ಬಂಗಾಲವು ಒಂದೇ ಎಂಬ ಭಾವನೆಯನ್ನು ಹುಟ್ಟಿಸಲ ಜನರನ್ನು ಜಾಗೃತಗೊಳಿಸಲು ತರಬೇತಿಯನ್ನು ಕೊಟ್ಟರು. ಆಗಲೇ ಬಂಗಾಲದ ರಾಜಕೀಯ ಪರಿಷತ್ತಿ[illegible] ಅಧ್ಯಕ್ಷರನ್ನಾಗಿ ಜನರು ಅವರನ್ನೇ ಆರಿಸಿದರು. ಆ[illegible] ಯುವಕರನ್ನು ಕುರಿತು ಭಾರತಾಂಬೆಯ ಸೇವೆಯನ್ನು ಮಾಡಲು ಹಂಬಲವುಳ್ಳವರು ಗುಂಪಾಗಿ ಹಳ್ಳಿಗೆ ಹೋಗಿರಿ ಜನಸೇವೆಯ ಕಾರ್ಯದಲ್ಲಿ ತೊಡಗಿರಿ, ಹಿಂದುಮು[illegible]ಲ್ಮಾನರು ಬಂಧುಗಳಂತಿರಬೇಕೆಂದು ತಿರುಗಿ ತಿರುಗಿ ಸಾ[illegible]ದರು. ಜನತೆಯು ಕಷ್ಟನಷ್ಟಗಳನ್ನು ಸುಮ್ಮ[illegible] ನೋಡುತ್ತ ಕುಳಿತುಕೊಳ್ಳದೆ ತಮ್ಮ ಕೈಯಿಂದಾದ ಸಹಾ[illegible]ಯವನ್ನು ಮಾಡಿದರು. ಇದೇ ಭಾವನೆಯು ಬೆಳೆದು ಬರಬೇಕು. ಅಂದರೆ ಹಿಂದು ಮುಸ್ಲೀಮರೆಂಬ ಶಾ[illegible] ತಮ್ಮಲ್ಲಿ ಬೇಡ. ನಾವೆಲ್ಲರೂ ಬಾಂಧವರು; ಜೊತೆಯಾ[illegible]ಗಿರೋಣ ಎಂಬ ವಿಚಾರವು ಆಗಿನಿಂದಲೂ ನಡೆದು ಬಂದಂತೆ ತೋರುವದು. ಅದು ಇನ್ನೂ ಗಾಢವಾ[illegible] ರಾಷ್ಟ್ರದ ಉಜ್ವಲೀಕರಣಕ್ಕೆ ಸಹಾಯವಾಗಲೆಂದು ಶಿಕ್ಷಣ ಸಂಸ್ಥೆಗಳಲ್ಲಿ ಸಾಂಘಿಕ ಜೀವನವನ್ನು ಪ್ರಾರಂಭಿಸಿ ವೈಷಮ್ಯತೆಯನ್ನು ದೂರಮಾಡಲು ಪ್ರಯತ್ನಿಸುತ್ತಿರುವರು ಕಾರಣ ನಾವೆಲ್ಲ ಬಾಂಧವರು ಒಂದೇ ಎಂದು ಸಹಕರಿ[illegible] ಇಂದಿನ ನಮ್ಮ ಶಿಕ್ಷಣವು ರವೀಂದ್ರರ ಮಾರ್ಗದಲ್ಲಿಯೇ ನಡೆದದೆ. ಇದು ಇನ್ನೂ ಊರ್ಜಿತಾವಸ್ಥೆ ಹೊಂದಿ ಜಗದ ಜನಕ್ಕೆ ಮಾದರಿಯ ರಾಷ್ಟ್ರವಾಗಲೆಂದು ಈಶನನ್ನೆ ಪ್ರಾರ್ಥಿಸುವೆನು.

ರವೀಂದ್ರರು ಹಾಗೂ ಸಾಹಿತ್ಯ

ಲೇಖಕರು : **ಶ್ರೀ ದೊಡ್ಡಮುನಿ ಬಿ. ಎ.,** ಶಿ. ವಿ. ಟ್ರೇನಿಂಗ ಕಾಲೇಜ, ಧಾರವಾಡ

ಜೀವನಕ್ಕೂ ಸಾಹಿತ್ಯಕ್ಕೂ ನಿಕಟವಾದ ಸಂಬಂಧ ವಿರುತ್ತದೆ. ಕೇವಲ ಜನ ಮನರಂಜನೆಯೊಂದರಿಂದ ಸಾಹಿತ್ಯದ ಗುರಿಯು ಸಾಧಿಸಿದಂತಾಗುವದಿಲ್ಲ. ಅದರ ಉಚ್ಚ ಧ್ಯೇಯವು ಉತ್ಕೃಷ್ಟ ಭಾವನಾವಿಕಾಸದಿಂದ ಉದ್ಧಾರ ಕಾರ್ಯವನ್ನು ನೇರವೇರಿಸುವದರಲ್ಲಿದೆ. ಚಿತ್ತವೃತ್ತಿ ಪವಿತ್ರೀಕರಣವೇ ಶ್ರೇಷ್ಠ ಸಾಹಿತ್ಯದ ಉಚ್ಚತಮವಾದ ಗುರಿ. ಬಸವಣ್ಣ ಚನ್ನಬಸವಣ್ಣ ಮೊದಲಾದ ಶಿವಶರಣರ ವಚನಗಳಲ್ಲಿ, ಹರಿಹರ ದೇವನ ರಗಳೆಯಲ್ಲಿ, ರವೀಂದ್ರರ ಗೀತಾಂಜಲಿಯಲ್ಲಿ, ಸಾಹಿತ್ಯದ ಲಕ್ಷಣಗಳ ಜೊತೆಗೆ ಉತ್ಕೃಷ್ಟ ಭಾವನಾ ವಿಕಾಸಕ್ಕೆ ಅವಕಾಶ ವಿರುವದನ್ನು ಮನಗಾಣುವೆವು. ರವೀಂದ್ರರು ನಮಗೆ ನೀಡಿದ ಸಾಹಿತ್ಯ ಸೇವೆಯು ಅಪಾರವಾದುದು.

ಬಾಲ್ಯದಲ್ಲಿಯೇ ರವೀಂದ್ರರು ತಮ್ಮ ತಾಯ್ನುಡಿಯಾದ ಬಂಗಾಲಿಯಲ್ಲಿ, ಸಾಹಿತ್ಯ ಸೇವೆಯನ್ನು ಮಾಡತೊಡಗಿದರು. ಶೇಕ್ಸಪಿಯರನ ಮ್ಯಾಕಬೆತ್ ನಾಟಕವನ್ನು ಬಂಗಾಲಿಗೆ ಪರಿವರ್ತಿಸಿದಾಗ ಇವರು ತೀರ ಚಿಕ್ಕವರಿದ್ದರು. ರವೀಂದ್ರರ ಕುಶಾಗ್ರ ಬುದ್ಧಿಯ ಮೂಲಕವಾಗಿ ಬಂಗಾಲಿ, ಸಂಸ್ಕೃತ, ಪಾಲಿ, ಇಂಗ್ಲೀಷ ಈ ಭಾಷೆಗಳಲ್ಲಿ ಅಗಾಧವಾದ ಪಾಂಡಿತ್ಯವನ್ನೂ ಪ್ರಭುತ್ವವನ್ನೂ ಪಡೆದಿದ್ದರು. ಇವರ ವಿಮರ್ಶಕ ಬುದ್ಧಿಯು ತೀಕ್ಷ್ಣವಾಗಿದ್ದುದರಿಂದ ರವೀಂದ್ರರು ಆಯಾ ಭಾಷೆಗಳಲ್ಲಿಯ ಸಾಹಿತ್ಯದ ಆಳವಾದ ಪರಿಚಯವನ್ನು ಗಳಿಸಿಕೊಂಡಿದ್ದರು. ಗ್ರಂಥಗಳನ್ನು ಓದುವ ಕುತೂಹಲವು ಅವರಲ್ಲಿ ಪ್ರಬಲವಾಗಿದ್ದುದರಿಂದ ಇವರ ಜ್ಞಾನ ಕ್ಷೇತ್ರವು ವಿಶಾಲವಾಗಿತ್ತು. ಟಾಗೋರರ ಸಂಗ್ರಹದಲ್ಲಿಯ ಪುಸ್ತಕಗಳ ಪಟ್ಟಿಯನ್ನು ನೋಡಿದರೆ ಇವರ ಜ್ಞಾನ ತೃಷೆ ಅಪಾರವಾಗಿತ್ತೆಂಬುದು ಕಂಡು ಬರುವದು. ಇತಿಹಾಸ, ಭೂಗೋಲ, ಕೃಷಿ ಶಾಸ್ತ್ರ, ಮುದ್ರಣ ಕಲೆ, ಚಿತ್ರಕಲೆ, ವೈದ್ಯ ಶಾಸ್ತ್ರ, ಸಹಕಾರ, ಪಾಕ ಶಾಸ್ತ್ರ, ಹಳ್ಳಿಗಳ ಪುನರುಜ್ಜೀವನ, ಸಂಗೀತ ಹೀಗೆ ಜ್ಞಾನದ **ಯಾವ ಭಾಗವೂ ಇವರಿಗೆ ಅರಿಯದಾಗಿರಲಿಲ್ಲ. ರವೀಂದ್ರರದು ಬರಿಯ ಓದಲ್ಲ; ಓದಿದುದನ್ನು** ಜೀರ್ಣಿಸಿ ತಮ್ಮದನ್ನಾಗಿ ಮಾಡಿಕೊಂಡು ಪರರಿಗೆ ನೀಡುವಾಗ ಆತ್ಮ ಪ್ರತಿಭೆಯ ಮೂಲಕ ಅದನ್ನೆಲ್ಲ ಹೊಸದನ್ನಾಗಿ ಮಾಡುವ ಸಾಮರ್ಥ್ಯ ಇವರಲ್ಲಿತ್ತು. ಹೀಗೆ ಗಳಿಸಿ ಪರಿಪಕ್ವವಾಗಿ ಮಾಡಿಕೊಂಡ ಜ್ಞಾನದ ಫಲವಾಗಿ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ, ಐತಿಹಾಸಿಕ ಮುಂತಾದ ವಿಷಯಗಳ ಮೇಲೆ ಶ್ರೇಷ್ಠ ಲೇಖನಗಳನ್ನೂ, ಗ್ರಂಥಗಳನ್ನೂ ಬಂಗಾಲಿ ಭಾಷೆಯಲ್ಲಿ, ಇಂಗ್ಲೀಷ ಭಾಷೆಯಲ್ಲಿ ಬರೆದಿದ್ದಾರೆ. ತಮ್ಮ ಪ್ರತ್ಯಕ್ಷ ಸೇವೆಯಿಂದ ಮಾತ್ರ ಸಾಹಿತ್ಯ ಸೇವೆ ಸಲ್ಲಿಸಿ, ಹಲವು ಸಾಹಿತ್ಯ ಪೋಷಕ ಪತ್ರಿಕೆಗಳಿಗೆ ಸಂಪಾದಕರಾಗಿಯೂ ತಮ್ಮ ಕರ್ತವ್ಯದಿಂದ ಮುಕ್ತರಾದರು.

ಕವಿ ರವೀಂದ್ರರು ಬರೆದ ಗೀತಾಂಜಲಿಗೆ ೧೯೧೩ ರಲ್ಲಿ "ನೋಬೆಲ್ ಪ್ರೈಜ" ಎಂಬ ಅಂತರ ರಾಷ್ಟ್ರೀಯ ಬಹುಮಾನ ದೊರಕಿತು. ದ್ವಿಭಾಷೆಗಳಲ್ಲಿ ಸಾಹಿತ್ಯವನ್ನು ರಚಿಸಿದವರಲ್ಲಿ ರವೀಂದ್ರರು ಒಬ್ಬರು. ಇವರು ಅದ್ವಿತೀಯ (ಬರಹಗಾರರು) ಲೇಖಕರು ಎಂದು ಲಂಡನ್ನಿನ ಟೈಮ್ಸ ಪತ್ರಿಕಾಕರ್ತನು ಹೇಳಿರುವನು. ಇವರು ಅನೇಕಾನೇಕ ಕಥೆಗಳನ್ನೂ ಬರೆದಿರುವರು. ದಿ ವಿಕೆಡ್-ಪೋಸ್ಟಮನ್, ಮಾಯರ್ ಲಾರ್ಡ-ದಿ ಬೇಬಿ, ಕಾಬೂಲಿವಾಲಾ, ಪರಸನ್ಯಾಲಿಟಿ, ರೆಕ್, ಸಾಧನಾ ಮುಂತಾದ ಹಲವು ಮೂಲ ಗ್ರಂಥಗಳನ್ನು ಇಂಗ್ಲೀಷಿನಲ್ಲಿ ರಚಿಸಿದ್ದಾರೆ.

ಗೀತಾಂಜಲಿಯು ಸುಕಾವ್ಯಗಳ ಸೆಲೆಯು. ಜೀವನದ ಸರ್ವ ಸಂಗತಿಗಳನ್ನು ತಮ್ಮ ಕಾವ್ಯಗಳಲ್ಲಿ ವಿಶದೀಕರಿಸಿದ್ದಾರೆ.

ಎನ್ನ ಜೀವ ಜ್ಯೋತಿಯೇ, ನನ್ನ ದೇಹವೇ ದೇಗುಲವೆಂದು ನಿತ್ಯವೂ ನಿರ್ಮಲವಾಗಿರಿಸಲು ಸಾಧಿಸುವೆ. ಎನ್ನ ಸರ್ವಾಂಗಗಳ ಮೇಲೆ ನಿನ್ನ ಸಜೀತನ ಸ್ಪರ್ಶದ ಪರಾಮರಿಕೆ ಇದೆ ಎಂದು ಅರಿತಿರುವೆ."

" ಹುಸಿಯನೆಲ್ಲವ ಯನ್ನ ಭಾವನೆಗಳಿಂದ ಬೇರ್ಪಡಿಸಿ ದೂರಿರಿಸಲು ಹವಣಿಸುವೆ. ಎನ್ನ ಮಾನಸಿಕ ವಿವೇಕ ಜ್ಯೋತಿಯನು ಜಾಗ್ರತಗೊಳಿಸುವ ಆ ಸತ್ವ ರೂಪವು ನೀನೆಂಬುದು ನನಗೆ ಗೊತ್ತು. "

" ನನ್ನ ಹೃದಯದ ದುರಿತವನ್ನೆಲ್ಲ ಹೊರದೂಡಿ ತಳ್ಳಲೆತ್ನಿಸುವೆ. ಎನ್ನ ನಲ್ಮೆಯ ಕುಸುಮಗಳನ್ನು ಅರಳಿಸುವೆ. ಎನ್ನ ಅಂತರಾತ್ಮನ ಪೀಠದೊಳು ನಿನ್ನ ಪೀಠವೆಂಬುದು ನನ್ನ ಮನವರಿಕೆ. "

ಇಲ್ಲಿ ರವೀಂದ್ರರು ಜೀವ ಜ್ಯೋತಿಯ ವರ್ಣನೆ ಮಾಡಿದ್ದಾರೆ. " ಅನಂತ ಪ್ರಪಂಚಗಳ ಸಮುದ್ರ ತೀರದಲ್ಲಿ ನೆರೆವುದು ಶಿಶುವಿಹಾರ, ಸೀಮಾತೀತ ಆಗಸ ನಿಶ್ಚಲವಾಗಿದೆ. ಮೇಲೆ ಪ್ರಚಂಡವಾಗಿದೆ. ಆ ಶಾಂತ ಮುನ್ನೀರು ಅನಂತ ಪ್ರಪಂಚಗಳ ಸಮುದ್ರ ತೀರದಲ್ಲಿ ಚೀರಾಡುವದು. ಶಿಶು ವೃಂದ ನೆರೆದು ನೆಗೆದು. "

ಮಳಲಿನಿಂ ಬೊಂಬೆಯ ಮನೆಗಳ ಕಟ್ಟಿ ಶೂನ್ಯ ಸಿಂಪುಗಳ ಸಂಗ್ರಹಿಸಿ, ತೀರದಲಿ ಆಡುವರು. ಅವರು ಶೀರ್ಣ ಪರ್ಣಗಳಿಂದ ನೌಕೆಗಳನ್ನೆಯ್ದು ಅಪಾರ ಅಗಾಧತೆ ಮೇಲೆ ನಗು ನಗುತ ತೇಲಿಸುವರವರು ಪ್ರಪಂಚ ತೀರದಲಿ ಮಕ್ಕಳ ಮುದ್ದಾಟ. "

ಈ ರೀತಿಯಾಗಿ ಶಿಶುವಿಹಾರದ ವರ್ಣನೆಯನ್ನು ಮಾಡಿದ್ದಾರೆ.

ಠಾಕೂರರಿಗೆ ಪರವಸ್ತು ವಿಜ್ಞಾನವು ಒಂ ಅದರ ಫಲವಾಗಿ, ಜೀವನವು ಸಾರ್ಥಕವಾದುದರಿಂ ಇದಕ್ಕೆ ಸಾಧಕವಾದ ತಮ್ಮ ಗೀತೆಗಳನ್ನು ಕುರಿತು ಹೀ ಹೇಳುತ್ತಾರೆ.

" ನನ್ನ ಜೀವನದಲ್ಲೆಲ್ಲಾ ನನ್ನ ಗೀತೆ ಮೂಲಕ ನಿನ್ನನ್ನು ಅನ್ವೇಷಿಸಿದ್ದೇನೆ. ಬಾಗಿಲಿಂ ಬಾಗಿಲಿಗೆ ನನ್ನನ್ನು ಕರೆದು ಕೊಂಡು ಹೋದವು ಅ ಅವುಗಳಿಂದ ನಾನು ನನ್ನ ಪ್ರಪಂಚವನ್ನು ತಡವುತ್ತ ಎಡವುತ್ತ, ಮುಟ್ಟುತ್ತ ಸುತ್ತಣ ಸ್ಥಿತಿಗಳನ್ನು ತಿಳಿದೆನ ನಾನು ಕಲಿತ ಪಾಠಗಳನ್ನೆಲ್ಲ ನನ್ನ ಗೀತೆಗ ಕಲಿಸಿ ಕೊಟ್ಟವು. "

ಸೃಷ್ಟಿಯ ಬಗೆಗೆ ರವೀಂದ್ರರು ಸಮ್ಯ ದೃಷ್ಟಿಯನ್ನು ಪಡೆದಿದ್ದರು. ರವೀಂದ್ರರು " ಏಸಿಯಾ ಕವಿ ಸಾಮ್ರಾಟ " ಎಂದು ಹೆಸರು ಪಡೆದರು. ಇವ ಸಾಹಿತ್ಯ ಸೇವೆಗೆ ಏಸಿಯಾ ಖಂಡವೇ ಋಣಿಯಾಗಿ ಇವರಲ್ಲಿದ್ದ ಅಪಾರ ಸಾಹಿತ್ಯದ ರಸದೂಟವನ್ನು ಸಕ ಓದುಗರಿಗೆ ಒದಗಿಸಿ ಕೊಟ್ಟಿದ್ದಾರೆ. ಇವರು ಭಾರತ ಸರ್ವಾಂಗೀಣ ಉನ್ನತಿಗೂ ಸಹಾಯ ಮಾಡಿದರ

ವ್ಯಕ್ತಿತ್ವವನ್ನು ಅರಳಿಸಿಕೊಳ್ಳುವದು ಸಾಧ್ಯವಿದೆ ಪ್ರೌಢ ಶಿಕ್ಷಕರು ಇತ್ತ ಗಮನಕೊಡಬೇಕು

ಬರೆದವರು: ಶ್ರೀ ಅನ್ನದಾನೀಶ್ವರ ವಿರಕ್ತಮಠ,
ಹೆಡ್‌ಮಾಸ್ತರ, ಮಹಿಳಾ ವಿದ್ಯಾಪೀಠ ಹಾಯಸ್ಕೂಲ, ಹುಬ್ಬಳ್ಳಿ.

ಎಂಥ ಶಿಕ್ಷಕನೋ ಅಂಥ ಸಾಲೆಯು. ಇಷ್ಟೇ ಅಲ್ಲ. ಶಾಕಾ ಕಾಲೇಲಕರರ ಅಭಿಪ್ರಾಯದ ಪ್ರಕಾರ ಶಿಕ್ಷಕನು ಸಾಲೆಯ ಹೃದಯ, ಹುತ್ತು ಮಕ್ಕಳು ವಿದ್ಯೆಯ ಕೇಂದ್ರ. ಗಡಿಯಾರದಲ್ಲಿ ಮೇನ್‌ಸ್ಪ್ರಿಂಗು ಹೇಗೋ ಹಾಗೆಯೇ ಸಾಲೆಯಲ್ಲಿ ಶಿಕ್ಷಕನು.

ವ್ಯಕ್ತಿತ್ವವಿಲ್ಲದವನು ಶಿಕ್ಷಕನಲ್ಲ. ವ್ಯಕ್ತಿತ್ವವಿಲ್ಲದ ಶಿಕ್ಷಕನು ಸಾಲೆಯ ಆಡಳಿತೆಯನ್ನು ಯಶಸ್ವಿಯಾಗಿ ಸಾಗಿಸಲಾರನು. ಚನ್ನಾಗಿ ಪರಿಣಾಮಕಾರಿಯಾಗಿ ಕ ಸಲಾರನು. ಶಿಸ್ತನ್ನು ಉಂಟುಮಾಡಲಾರನು. ಶಿಸ ಕಾಪಾಡಿಕೊಂಡು ಹೋಗಲಾರನು. ಮಕ್ಕಳ ಶಾರೀರಿ ಸ್ಥಿತಿಕ, ಬೌದ್ಧಿಕ ವಿಕಾಸವನ್ನು ಮಾಡಲಾರನು. ಶಿ ಣವು ಯಶಸ್ವಿಯಾಗಲಾರದು. ಸರ್ ಜಾನ್ ಆಡ್ಯಾವ ಎಂಬ ಶಿಕ್ಷಣ ತಜ್ಞರು ಹೇಳುವದೇನಂದರೆ:—

"ಶಿಕ್ಷಕನು ಎಷ್ಟೇ ಯತ್ನಿಸಿದರೂ ವ್ಯಕ್ತಿತ್ವವಿಲ್ಲದೇ ಶಿಕ್ಷಣ ಕಾರ್ಯವು ಯಶಸ್ವಿಯಾಗಿ ಆಗಲಾರದು. ಶಿಕ್ಷಕನ ವ್ಯಕ್ತಿತ್ವವು ಸೂಕ್ಷ್ಮವಾಗಿ ಮಕ್ಕಳ ಮೇಲೆ ಪರಿಣಾಮ ಮಾಡಿಯೇ ತೀರುವದು. ವ್ಯಕ್ತಿತ್ವವು ಶಿಸ್ತಿಗೆ ಮೂಲಾಧಾರ. ಶಿಸ್ತು ಶೀಲ ಸಂವರ್ಧನೆಗೆ ಸಹಾಯಕ."

ಡಾಕ್ಟರ ಕ್ಲ್ಯಾಪ್ ಎಂಬ ಮತ್ತೊಬ್ಬ ಶಿಕ್ಷಣ ತಜ್ಞರು ಶಿಕ್ಷಣ ಕ್ಷೇತ್ರದಲ್ಲಿ ಪ್ರಯೋಗ ಮಾಡಿ ವ್ಯಕ್ತಿತ್ವ ವೆಂದರೇನೆಂಬುದನ್ನು ಕಂಡುಹಿಡಿದಿರುವರು. ವ್ಯಕ್ತಿತ್ವವು ಈ ಕೆಳಗಿನ ಹತ್ತು ಗುಣಗಳಿಂದ ಕೂಡಿದೆಯೆಂದು ಅವರು ಹೇಳಿದ್ದಾರೆ—

(೧) ಶಿಕ್ಷಕನು ತನ್ನ ವರ್ಗವನ್ನು ಹೇಗೆ ಪ್ರವೇಶಿಸಿ ಎದುರಿಸುವನೋ ಆ ರೀತಿಯಲ್ಲಿ, ಆ ಠೀವಿಯಲ್ಲಿ ವ್ಯಕ್ತಿತ್ವವಿದೆ. ಸಮಾಜದಲ್ಲಿ ಶಿಕ್ಷಕನು ಜನತೆಯ ಕೂಡ ಹೇಗೆ ಸಮರಸವಾಗಿ ಬೆರೆಯುವನೋ ಆ ರೀತಿನೀತಿಗಳನ್ನು ವ್ಯಕ್ತಿತ್ವವು ನಿರ್ಧರಿಸುವದು.

(೨) ಶಾರೀರಿಕ ಆರೋಗ್ಯ, ನೀಟಾದ ಸ್ವಚ್ಛವಾದ ಉಡಿಗೆ ತೊಡಿಗೆ, ಶಿಸ್ತಿನ ನಡಿಗೆ,— ಇತ್ಯಾದಿ ಸಂಗತಿಗಳು ಶಿಕ್ಷಕನ ವ್ಯಕ್ತಿತ್ವವನ್ನು ಹೆಚ್ಚಿಸುತ್ತವೆ.

(೩) ಶಿಕ್ಷಕನು ಆನಂದ ಸ್ವಭಾವದವನೂ, ಶಾಂತನೂ ಇದ್ದರೆ ಅವನ ವ್ಯಕ್ತಿತ್ವಕ್ಕೆ ಕಳೆಯೇರುವದು.

(೪) ಶಿಕ್ಷಕನು ಗಂಭೀರನಾಗಿರಬೇಕು. ಆದರೆ ಗರ್ವಿಯಾಗಿರಬಾರದು.

(೫) ಶಿಕ್ಷಕನು ಉತ್ಸಾಹ, ಸ್ಫೂರ್ತಿ, ಹುರುಪು ಹುಮ್ಮಸಗಳುಳ್ಳವನು ಆಗಿರಬೇಕು.

(೬) ಸರಳತನ, ಪ್ರಾಮಾಣಿಕತನ, ನಿರ್ಡಾಂಭಿಕತ್ವ— ಇವು ವ್ಯಕ್ತಿತ್ವದ ಲಕ್ಷಣಗಳು. ಶಿಕ್ಷಕನು ಪ್ರಾಮಾಣಿಕನೂ, ಸರಳನೂ, ನಿರ್ಡಾಂಭಿಕನೂ ಇರಬೇಕು.

(೭) ಸಹಾನುಭೂತಿಯು ವ್ಯಕ್ತಿತ್ವದ ಲಕ್ಷಣವು. ಸಹಾನುಭೂತಿಯಿಲ್ಲದವನು ಶಿಕ್ಷಕನಲ್ಲ.

(೮) ವಿದ್ಯಾವ್ಯಾಸಂಗ, ಪಾಂಡಿತ್ಯ,— ಇವು ವ್ಯಕ್ತಿತ್ವದ ವರ್ಧಕಗಳು. ಶಿಕ್ಷಕನು ಯಾವಾಗಲೂ ವಿದ್ಯಾವ್ಯಾಸಂಗಿಯಾಗಿರಬೇಕು. ವಿಷಯದ ಮೇಲೆ ಪ್ರಭುತ್ವವಿರಬೇಕು. ಜ್ಞಾನವಿಲ್ಲದವನು ಹೇಗೆ ಜ್ಞಾನವನ್ನು ಕೊಡಬಲ್ಲನು ?

(೯) ಕಳಕಳಿಯ ಪ್ರೀತಿಯು ವ್ಯಕ್ತಿತ್ವದ ಲಕ್ಷಣವು. ಶಿಕ್ಷಕನು ಮಕ್ಕಳಿಗೆ ಕಳಕಳಿಯಿಂದ ಕಲಿಸಬೇಕು. ಪ್ರೀತಿಯಿಂದ ಕಲಿಸಬೇಕು.

(೧೦) ಸತ್ವ, ಶಕ್ತಿ, ಪೌಷ್ಟಿಕತೆ ಇವು ವ್ಯಕ್ತಿತ್ವದ ಲಕ್ಷಣಗಳು. ಶಿಕ್ಷಕನು ಸತ್ವವುಳ್ಳವನಾಗಿರಬೇಕು. ನಿಶ್ಶಕ್ತಿಯುತನು, ನಿರ್ಜೀವಿಯು ಆದರ್ಶ ಶಿಕ್ಷಕನಲ್ಲ. ಸಾತ್ವಿಕ, ಪೌಷ್ಟಿಕ, ಆಹಾರವನ್ನೇ ಶಿಕ್ಷಕನು ತಕ್ಕೊಳ್ಳಬೇಕು. ಸತ್ವಗುಣದಿಂದ ಶಿಕ್ಷಣ ಕಾರ್ಯವು ಯಶಸ್ವಿಯಾಗುವದು.

ಪ್ರೌಢ ಶಿಕ್ಷಕರು ತಮ್ಮ ವ್ಯಕ್ತಿತ್ವವು ಬೆಳೆಯಲಾರದೆಂದು ತಿಳಿಯಬಾರದು. ಸರಿಯಾದ ಶಿಸ್ತಿನ ಜೀವನದಿಂದ, ದೈನಂದಿನ ಉತ್ತಮ ಜೀವನದಿಂದ, ಅನುಭವದಿಂದ, ಸ್ವಶಿಕ್ಷಣದ ತರಬೇತಿಯಿಂದ ವ್ಯಕ್ತಿತ್ವವು ಹೂವಿನಂತೆ ಅರಳಬಲ್ಲದೆಂದು ಪೆಸ್ಟಲಾಜಿ ಎಂಬ ಶಿಕ್ಷಣ ಸುಧಾರಕನು ಹೇಳಿರುತ್ತಾನೆ.

ಚಾರ್ಲನ್ ಮಾಕ್ಸಿ ಅವರ "ಶಿಕ್ಷಕನ ವ್ಯಕ್ತಿತ್ವ" ಎಂಬ ಪುಸ್ತಕವನ್ನು ಓದಿದಾಗ ಪ್ರೌಢ ಶಿಕ್ಷಕರು ತಮ್ಮ ವ್ಯಕ್ತಿತ್ವವನ್ನು ಅರಳಿಸಿಕೊಳ್ಳಬಲ್ಲರೆಂಬುದು ಸಿದ್ಧವಾಗುತ್ತದೆ.

ಆತ್ಮನಿರೀಕ್ಷಣೆಯಿಂದ ವ್ಯಕ್ತಿತ್ವವನ್ನು ವರ್ಧಿಸಿಕೊಳ್ಳಬಹುದೆಂದು ಮಹಾತ್ಮಾ ಗಾಂಧಿಯವರು ಸ್ಪಷ್ಟವಾಗಿ ಹೇಳಿರುವರು. ಪ್ರೌಢ ಶಿಕ್ಷಕನು ದಿನಾಲು ಸ್ವಸುಧಾರಣೆಯಲ್ಲಿ ಕಾಲಕಳೆಯುತ್ತಿರಬೇಕು. ತಾನು ಪರಿಪೂರ್ಣನೆಂದು ಯಾವ ಶಿಕ್ಷಕನೂ ತಿಳಿಯದಿರಲಿ. ತನ್ನಲ್ಲಿಯ ಲೋಪದೋಷಗಳು ತಿಳಿಯದಿದ್ದರೆ ಸುಧಾರಣೆಯು ಸಾಧ್ಯವೇ ಇಲ್ಲ. ಮಹಾತ್ಮರಂತೆ ದೈನಿಕ ದಿನಚರಿಯನ್ನು ಮಾಡಿಕೊಂಡು ನಡೆದರೆ ಶಿಕ್ಷಕರು ಆದರ್ಶರಾಗಬಲ್ಲರು. ಶ್ರೀ ನಿಜಗುಣಶಿವಯೋಗಿಗಳು ಆದರ್ಶ ಗುರುವಿನ ಲಕ್ಷಣಗಳನ್ನು ತಮ್ಮ ತತ್ವ ಗ್ರಂಥದಲ್ಲಿ ಕೊಟ್ಟಿರುವರು. ಅವುಗಳನ್ನು ಮುಂದಿನ ಲೇಖನದಲ್ಲಿ ವಿಚಾರಿಸೋಣ.

ಸುದ್ದಿಗಳು

ಪ್ರಾಥಮಿಕ ಶಾಲೆಗಳ ಮುಖ್ಯಾಧ್ಯಾಪಕರಿಂದ ಬಂದ ಪತ್ರಗಳ ಸಾರಾಂಶ

೧. ಗಿರಿಸಾಗರ ಪೇಠಾ ಬೀಳಗಿ :

೨೩-೮-೫೯, ಶ್ರೀ ವೇದಮೂರ್ತಿ ಗುರುಪಟ್ಟಾಧ್ಯಕ್ಷ ಮುಕ್ತಿನಾಥ ಶಿವಾಚಾರ್ಯ ಕಲ್ಯಾಣಮಠ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಶಾಲೆಯ ಪ್ರಗತಿಗಾಗಿ ಬೇರೆ ಬೇರೆ ವಸ್ತುಗಳನ್ನು ಕೊಡಲು ಊರ ಪ್ರಮುಖರು ವಾಗ್ದಾನ ಮಾಡಿದರು. ಒಟ್ಟು ಹಣ ೪೪೦ ರೂ.

೨. ಶೇಡಬಾಳ :

೧೫-೮-೫೯ ಶಾಲಾ ಬಾಲಕರು ಊರಲ್ಲಿ ಕಿತ್ತೂರ ಚೆನ್ನಮ್ಮ, ಭಕ್ತಧ್ರುವ ನಾಟಕಗಳನ್ನು ಆಡಿದರು. ೧೫ ರೂ. ಬಹುಮಾನವನ್ನು ಊರವರು ಕೊಟ್ಟರು.

೩. ಕಲಾದಗಿ :

೧೫-೮-೫೯ ಸ್ವಾತಂತ್ರ್ಯೋತ್ಸವವು ಶ್ರೀ ವ್ಹಿ.ಎಂ. ಚಾವುಡಾರವರ ಹಿರಿತನದಲ್ಲಿ ಜರುಗಿತು. ಅವರು ೨೦ ರೂ. ಬೆಲೆ ಬಾಳುವ ರಾಷ್ಟ್ರೀಯ ಮಹಾಪುರುಷರ ಚಿತ್ರಗಳನ್ನು ಸಾಲೆಗೆ ಕೊಟ್ಟರು. ಶ್ರೀ ತಿರಕಪ್ಪ ಗಾಣಿಗೇರ ಇವರು ಶಾ. ಶಿ. ಸಾಮಾನುಗಳಿಗಾಗಿ ೫೧ ರೂ. ಕೊಡಲು ವಾಗ್ದಾನವಿತ್ತರು.

೪. ಮಿಶ್ರೀಕೋಟಿ :

೧೫-೮-೫೯ ಈ ದಿನ ಶ್ರೀ ಜಿ. ಖ. ಅಂಗಡಿ ಸರಪಂಚರು ಇವರ ಅಮೃತಹಸ್ತದಿಂದ ಧ್ವಜಾರೋಹಣವಾಯಿತು. ನಂತರ ಶ್ರೀ ಎಸ್. ಎಸ್. ಪಾಟೀಲ ಕುಲಕರ್ಣಿ ಇವರ ಅಧ್ಯಕ್ಷತೆಯಲ್ಲಿ ಶ್ರೀ ಶಿಂತ್ರಿ ಬಸಪ್ಪನವರ ಪಾರಿತೋಷಿಕ ವಿತರಣ ಸಮಾರಂಭವು ಜರುಗಿತು.

ಪ್ರಥಮ ಬಹುಮಾನ : ಕುಮಾರ **ನಾರಾಯಣ ಗುರಾಚಾರ್ಯ ಪಾಂಡುರಂಗಿ**

ದ್ವಿತೀಯ ,, **ಮಹಮ್ಮದಹುಸೇನಸಾಹೇಬ ಗೌಸುಮೊದೀನಸಾಹೇಬ ಸೋಮನಕೊಪ್ಪ**

ನಂತರ ಶ್ರೀ ಎಸ್. ಆರ್. ಕರಡೆಣ್ಣವರ ಇವ[ರ] ಅಮೃತಹಸ್ತದಿಂದ ದಿವಂಗತ ಶ್ರೀ ದ. ವೆಂ. ಜೋಶಿ ನಿವೃತ್ತ ಶಿಕ್ಷಕರ ಭಾವಚಿತ್ರದ ಅನಾವರಣ ಸಮಾರಂಭವು ಜರುಗಿತು.

ಶಾಲಾ ಶಿಕ್ಷಕರು ಸಾಲೆಗಾಗಿ ೩೫ ರೂ. ಬೆಲೆಯ ಕನ್ನಡಿ ಕೊಟ್ಟರು. ಗ್ರಾಮಪಂಚಾಯತಿಯವರು ೧೫೦ ರೂ. ಗಡಿಯಾರವನ್ನು ಕೊಟ್ಟರು. ನಂತರ ಶ್ರೀ ಶಿಂತ್ರಿ ಬಸಪ್ಪನವರ ಪಾರಿತೋಷಿಕ ಸಮಾರಂಭದ ಅಂಗವಾ[ಗಿ] ಮಕ್ಕಳಿಗೆ ಮಿಠಾಯಿ ಹಂಚಲಾಯಿತು.

೫. ಮಾಸೂರ :

೧೫-೮-೫೯ ಶ್ರೀ ಲಕ್ಷ್ಮಣ ದೀಕ್ಷಿತ ಮಾಸೂ[ರ] ಇವರ ಅಮೃತಹಸ್ತದಿಂದ ಧ್ವಜಾರೋಹಣವಾಯಿತು ನಂತರ ವನಮಹೋತ್ಸವ, ವಾಕ್‌ಸ್ಪರ್ಧೆ ನಡೆದವು. ಈ ಪ್ರಸಂಗದಲ್ಲಿ ಇಪ್ಪತ್ತು ಊರ ಪ್ರಮುಖರು ವಸ್ತುಗ[ಳ] ರೂಪದಲ್ಲಿ, ಹಣದ ರೂಪದಲ್ಲಿ ಶಾಲೋಪಯೋಗಿ ವಸ್ತುಗಳನ್ನು ಕೊಟ್ಟು ಸಹಾಯ ನೀಡಿದ್ದಾರೆ.

೬. ನಾಲತವಾಡ :

೧೫-೮-೫೯ ೧೨ ಕೋಣೆಗಳುಳ್ಳ ಶಾಲಾ ಕಟ್ಟ[ಡ]ವನ್ನು ಕಟ್ಟಿಸಲಾಗಿದೆ. ೧೫೦ ರೂ. ಬೆಲೆ ಬಾಳು[ವ] ಧ್ವಜಸ್ತಂಭವನ್ನು ನಿಲ್ಲಿಸಲಾಗಿದೆ. ಶ್ರೀ ನಿ. ಪ್ರ. ಮಹಾಂತಸ್ವಾಮಿಗಳು ಪಟ್ಟದ್ದೇವರು, ಯಾಳವಾರ ಇವ[ರ] ಅಮೃತಹಸ್ತದಿಂದ ಧ್ವಜಾರೋಹಣವಾಯಿತು. ಶಾ[ಲೆ]ಯಲ್ಲಿ ಪ್ರಾ. ವಾ. ಪ್ರ. ಪ. ಪರೀಕ್ಷೆಯಲ್ಲಿ ೩೦ ರಲ್ಲಿ ೨[೦] ಬಾಲಕರು ಪಾಸಾಗಿದ್ದಾರೆ. ಒಬ್ಬನಿಗೆ ಹಾಯಸ್ಕೂ[ಲ] ಸ್ಕಾಲರಸಿಪ್ ದೊರೆತಿದೆ.

೭. ೧೫-೮-೫೯ ವ್ಹಿ. ಪಿ. ಸಿ. ಸರಪಂಚರಾ[ದ] ಶ್ರೀ ಶಿವಪ್ಪ ಸುರಳೇಶ್ವರ ಇವರು ಸ್ವಂತ ಖರ್ಚಿನಿಂ[ದ] ೫೦ ರೂ. ಖರ್ಚು ಮಾಡಿ ಧ್ವಜಸ್ತಂಭವನ್ನು ಕಟ್ಟಿ[ಸಿ] ಕೊಟ್ಟಿದ್ದಾರೆ. ಸಮಾರಂಭವು ಶ್ರೀ ಬಿ. ಎಸ್. ಕುಲಕರ್ಣಿ ಡಾಕ್ಟರರ ಅಧ್ಯಕ್ಷತೆಯಲ್ಲಿ ಜರುಗಿತು.

೮. ಯರಗುಪ್ಪಿ ಮಹಾಲ ಕುಂದಗೋಳ :

೧೫-೮-೫೯ ಶ್ರೀ ಬಿ. ಸಿ. ಬಡದಾಳಶೆಟ್ರು ತಮ್ಮ ತಂದೆಯವರ ಸ್ಮರಣಾರ್ಥವಾಗಿ ೨೫ ರೂ. ಗಳ ಸಾಮಾನು ಗಳನ್ನು ಸಾಲೆಗೆ ಕೊಟ್ಟಿದ್ದಾರೆ. ಇದಲ್ಲದೆ ಇನ್ನೂ ಐವರು ಊರ ಪ್ರಮುಖರು ಶಾಲೆಗೆ ಹಣ ಮತ್ತು ವಸ್ತುಗಳನ್ನು ಕೊಟ್ಟು ಸಹಾಯ ಮಾಡಿದ್ದಾರೆ.

೯. ಬುರಡೀಕಟ್ಟಿ ತಾ. ಹಿರೇಕೆರೂರ:

೧೫-೮-೫೯ ಈ ದಿನ ಊರವರು ಶಾಲೆಗೆ ೩೫ರೂ. ಬೆಲೆ ಬಾಳುವ ಗಂಟೆಯನ್ನು, ಲಾಯಬ್ರರಿಗೆ ೨೫ ರೂ. ಕೊಟ್ಟಿದ್ದಾರೆ. ಶ್ರಮದಾನದಿಂದ ಹರಿಜನಕೇರಿಯಲ್ಲಿ ೧|| ಫರ್ಲಾಂಗ ರಸ್ತೆಯನ್ನು ಮಾಡಲಾಯಿತು.

೧೦. ಕಬ್ಬೂರ :

೧೫-೮-೫೯ ಈ ದಿನ ಸಮಾರಂಭದಲ್ಲಿ ಶಾಲೆಯ ಸಾಮಾನುಗಳಿಗಾಗಿ ಗ್ರಾಮಪಂಚಾಯತಿಯವರು ೫೦ರೂ. ಒಕ್ಕಲತನ ಸೊಸಾಯಿಟಿಯವರು ೩೦ ರೂ. ಕೊಟ್ಟರು. ಕೆಲವರು ಪದಕ, ಕಪ್ಪುಗಳನ್ನು ಕೊಟ್ಟರು.

೧೧. ಹಾವಿನಾಳ :

೧೫-೮-೫೯ ಶ್ರೀ ವಿಠ್ಠಲ ರಾಯಪ್ಪ ಬಗಲಿ ಇವರು ತಮ್ಮ ತಂದೆಯವರ ಸ್ಮರಣಾರ್ಥವಾಗಿ ಶಾಲೆಗೆ ೮೧ ರೂ. ಬೆಲೆಯ ಒಂದು ಗಡಿಯಾರವನ್ನು ಕೊಟ್ಟಿದ್ದಾರೆ.

೧೨. ರೋಣಿಹಾಳ :

೨೫-೮-೫೯ ಗ್ರಾಮದ ನಾಗರಿಕರು ಕ. ೧೦. ಸಾಲೆಗೆ ೩೪ ರೂ. ಬೆಲೆಯ ನೀರಿನ ಟಾಕಿಯನ್ನು ಕೊಟ್ಟಿದ್ದಾರೆ.

ಸೂಚನೆ:— ಈ ತಿಂಗಳದಲ್ಲಿ ಬಹಳ ಪತ್ರಗಳು ಬಂದಿವೆ. ಸ್ಥಳಾಭಾವದ ಮೂಲಕ ಎಲ್ಲ ಪತ್ರಗಳಲ್ಲಿಯ ಸುದ್ದಿಗಳನ್ನು ಮುದ್ರಿಸಲು ಸಾಧ್ಯವಾಗಿಲ್ಲ.

ಅತಿ ಮಹತ್ವದ ಸುದ್ದಿಗಳ ಬಗ್ಗೆ ಮಾತ್ರ ಪತ್ರಗಳನ್ನು ಬರೆಯಬೇಕಾಗಿ ವಿನಂತಿ.

ಎಮ್. ಜಿ. ಕಟ್ಟಿ
ಪ್ರಧಾನ ಸಂಪಾದಕರು

ಪ್ರಕಟನೆ

ಕಳೆದ ಸಂಚಿಕೆಯಲ್ಲಿ ೫ನೆಯ ವರ್ಗಕ್ಕೆ ಪಾಠ ಒಂದನ್ನು ಬರೆದು ಕಳಿಸಲು ತಿಳಿಸಲಾಗಿತ್ತು. ಆದರೆ ಅದರಲ್ಲಿ ವಿಷಯವನ್ನೇ ಕಾಣಿಸಿರಲಿಲ್ಲ. ವಿಷಯ : "**ಆಕಳು**" ಈ ವಿಷಯದ ಮೇಲೆಯೇ ಪಾಠವನ್ನು ಬರೆದು ಸಂ. ಜೀ. ಶಿ. ಇವರ ಕಡೆಗೆ ಕಳುಹಿಸತಕ್ಕದ್ದು. ಸ್ವೀಕರಿಸುವ ಅವಧಿಯನ್ನು ೧೯೫೯ ನವ್ಹಂಬರ ೧ನೆಯ ತಾರೀಖಿನವರೆಗೆ ಬೆಳೆಸಲಾಗಿದೆ. ಈಗಾಗಲೇ ಕಳುಹಿಸಿದವರು ಕೂಡಾ ಈ ವಿಷಯವನ್ನೇ ಕುರಿತು ಬರೆದು ಕಳುಹಿಸಬೇಕು. ಪರೀಕ್ಷಕರಿಂದ ಉತ್ತಮವೆಂದು ತೀರ್ಮಾನಿಸಲ್ಪಟ್ಟದ್ದಕ್ಕೆ ಬಹುಮಾನವನ್ನು ಕೊಡಲಾಗುವದು. ಉಳಿದ ವಿವರಕ್ಕೆ ಅಗಸ್ಟ ತಿಂಗಳ ಸಂಚಿಕೆ ನೋಡಿಕೊಳ್ಳಬೇಕು.

ಟೀಪು : ಈಗಾಗಲೇ ಕೆಲವರು ಪಾಠದ ಟಿಪ್ಪಣೆಯನ್ನು ಕಳುಹಿದ್ದಾರೆ. ಕೇಳಿದ್ದು ಪಾಠದ ಟಿಪ್ಪಣೆಯಲ್ಲ; ಒಂದು ಉತ್ತಮ ಗದ್ಯಪಾಠವು.

Regd. No. B. 5375

ಭಾಗ ೧ ಕವಿತಾ ಸಂಕಲನ ೧೫೦ | **ನಾವು ನಮ್ಮವರು** | **ಭಾಗ ೨ ಕಥಾ ಸಂಕಲನ ೧೫೦**

ನಾವು ನಮ್ಮವರು

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ **ಮುನ್ನುಡಿ.**

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡೆ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧-೨ನೆಯ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.
- ಅಗಸ್ಟ ದಿಂದ ಅಗಸ್ಟಕ್ಕೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ೩ ಬೆಲೆಯಲ್ಲಿ [ಅಂಚೆಬೇರೆ
- ವರ್ಷದ ಮಧ್ಯದಲ್ಲಿ ಚಂದಾದಾರಾರದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪಹಣ ತಮ್ಮ ಶಿಕ್ಷಕ ಮಿತ್ರ ಏಳ್ಗೆಗೆ ಮೀಸಲು. ಗೆಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

ಕಲ್ಯಾಣ ಕನ್ನಡ ಗುಡಿಯ-ಕಾಣಿಕೆ

ಸುವರ್ಣ ಸಂಧಿ! | **ಸಚಿತ್ರ ಗ್ರಂಥ !!** | **ಸುಂದರ ಮುದ್ರಣ !!**

"ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮ **ತಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್‍ಯಾಂಗ್ಲರ್ ಶ್ರೀ ಡಿ. ಸಿ ಪಾವಟೆಯವರು ಮುನ್ನುಡಿ ಬರೆದಂಥ ಅಮೋಘ ಗ್ರಂಥ.**

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯ ಬಣ್ಣ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರಂಥ **ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಅಗಸ್ಟ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯಕ್ಷತೆಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಸಾದಾ ಪ್ರತಿ ೩ ರೂ.] | **ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್.** | **[ಸುಂದರ ಪ್ರತಿ ೪ ರೂ**

ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬೆ, ಜಿಲ್ಲಾ:— ವಿಜಾಪುರ.

Printed by Shri S. F. Kattimani, at Manohar Power Printing Press, Hubli. Edited an Published by Sjts. M. G. Katti, B. M. Shintri, S. R. Tatti & Smti. P. A. Bhaskar, at th Kannada Jeevan Shikshan Office, Govt. Training College for Men, Dharwar.